ಜನಪದ ಮತ್ತು ಆಧುನಿಕ ಬುಡಕಟ್ಟು ಸಮುದಾಯಗಳಲ್ಲಿ ವೇಶ್ಯಾವಾಟಿಕೆ ಪರಂಪರೆ ಮತ್ತು ಸಮಸ್ಯೆಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧಕಿ

ಲೀಲಾಸಂಪಿಗೆ

ಮಾರ್ಗದರ್ಶಕರು

ಡಾ. ಹಿ.ಚಿ.ಬೋರಲಿಂಗಯ್ಯ

ಪ್ರಾಧ್ಯಾಪಕರು


ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೪


ಜನಪದ ಮತ್ತು ಆಧುನಿಕ ಬುಡಕಟ್ಟು ಸಮುದಾಯಗಳಲ್ಲಿ
ವೇಶ್ಯಾವಾಟಿಕೆ ಪರಂಪರೆ
ಮತ್ತು
ಸಮಸ್ಯೆಗಳು

ಜನಪದ ಮತ್ತು ಆಧುನಿಕ ಬುಡಕಟ್ಟು ಸಮುದಾಯಗಳಲ್ಲಿ ವೇಶ್ಯಾವಾಟಿಕೆ ಪರಂಪರೆ ಮತ್ತು ಸಮಸ್ಯೆಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧಕಿ

ಲೀಲಾಸಂಪಿಗೆ

ಮಾರ್ಗದರ್ಶಕರು

ಡಾ. ಹಿ.ಚಿ.ಬೋರಲಿಂಗಯ್ಯ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೪

ದೃಢೀಕರಣ ಪತ್ರ

ಶ್ರೀಮತಿ ಲೀಲಾಸಂಪಿಗೆಯವರು "**ಜನಪದ ಮತ್ತು ಆಧುನಿಕ ಬುಡಕಟ್ಟು ಸಮುದಾಯಗಳಲ್ಲಿ ದೇಶ್ಯಾವಾಟಿಕೆ : ಪರಂಪರೆ ಮತ್ತು ಸಮಸ್ಯೆಗಳು**" ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಈ ಪ್ರಬಂಧವನ್ನು ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಡೀಕರಿಸುತ್ತೇನೆ.

ದಿನಾಂಕ : 23 – 08 – 2004
ಸ್ಥಳ : ವಿದ್ಯಾರಣ್ಯ

(ಡಾ.ಹಿ.ಚಿ. ಬೋರಲಿಂಗಯ್ಯ)
ಮಾರ್ಗದರ್ಶಕರು
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583 276

ಪ್ರಮಾಣ ಪತ್ರ

"ಜನಪದ ಮತ್ತು ಆಧುನಿಕ ಬುಡಕಟ್ಟು ಸಮುದಾಯಗಳಲ್ಲಿ ವೇಶ್ಯಾವಾಟಿಕೆ: ಪರಂಪರೆ ಮತ್ತು ಸಮಸ್ಯೆಗಳು" ಎಂಬ ಶೀರ್ಷಿಕೆಯ ಈ ಮಹಾ ಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವ ವಿದ್ಯಾಲಯಕ್ಕೆ ಒಪ್ಪಿಸಲು ಡಾ.ಹಿ.ಚಿ. ಬೋರಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಪ್ರಬಂಧ ಅಥವಾ ಆದರ ಯಾವುದೇ ಭಾಗವನ್ನು ಹಿಂದೆ ಯಾವುದೇ ಪದವಿಗಾಗಲೀ ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ : 23 - 08 - 2004

ಸ್ಥಳ : ವಿದ್ಯಾರಣ್ಯ

(ಲೀಲಾಸಂಪಿಗೆ)

ಪಿಎಚ್. ಡಿ ವಿದ್ಯಾರ್ಥಿನಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನನ್ನದೊಂದು ನಿವೇದನೆ

ಸುಮಾರು ಹತ್ತು ವರ್ಷಗಳು ಸಂದಿವೆ. ಲೈಂಗಿಕ ವೃತ್ತಿ ಮಹಿಳೆಯರ ಮಧ್ಯೆ ನನಗಾದ ಅನುಭವಗಳು ಬೇರೆ ಬೇರೆ ಸ್ತರದವುಗಳಾಗಿದ್ದವು. ಎಡಪಂಥೀಯ ಚಳವಳಿಗಳ ಮೂಲಕ ಬದುಕನ್ನು ರೂಪಿಸಿಕೊಂಡ ನಾನು ಎಲ್ಲವನ್ನು 'ಆರ್ಥಿಕ' ಚೌಕಟ್ಟಿನಲ್ಲಿಯೇ ನೋಡುತ್ತಿದ್ದುದೇ ಹೆಚ್ಚು. ಹಾಗೆಂದ ಮಾತ್ರಕ್ಕೆ ಆರ್ಥಿಕ ಕಾರಣ ಪ್ರಧಾನವಾದುದ್ದಲ್ಲಾ ಎಂದೇನೂ ಅಲ್ಲ. ಆದರ ಆ ಸಮುದಾಯದೊಂದಿಗೆ ಹೆಚ್ಚು ತೊಡಗಿಸಿಕೊಳ್ಳುತ್ತಾ ಹೋದ ಮೇಲ ಆರ್ಥಿಕ ಕಾರಣಗಳಷ್ಟೇ ಅಲ್ಲದೆ ಅದರ ಜೊತೆಗೆ ಮೂಲಭೂತವಾದ ಅದೆಷ್ಟೋ ಪ್ರಶ್ನೆಗಳು ನನ್ನನ್ನು ಕಾಡದಿದ್ದರೆ ನಾನು ಈ ಅಧ್ಯಯನಕ್ಕೆ ಕೈ ಹಾಕುತ್ತಿರಲೇ ಇಲ್ಲವೇನೋ.

ವಿದ್ಯಾರ್ಥಿದೆಸೆಯಿಂದಲೇ ವೇಶ್ಯಾವಾಟಿಕೆಯಂತಹ ಸಮಸ್ಯೆಗಳ ಬಗ್ಗೆ ಮೈಮೇಲೆ ಬಂದವಳಂತೆ ಭಾಷಣ ಮಾಡುತ್ತಿದ್ದೆ, ಭಾವುಕಳಾಗುತ್ತಿದ್ದೆ. ನಮ್ಮ ದೇಶದಲ್ಲಿ ಹೆಣ್ಣು ತನ್ನ ದೇಹ ಮಾರಿಕೊಂಡು ಜೀವನ ಸಾಗಿಸುತ್ತಿರುವುದರ ಬಗ್ಗೆ ರೋಷಭರಿತಳಾಗಿ ಮಾತನಾಡುತ್ತಿದ್ದೆ. ಆದರೆ ಅಂದೆಂದೂ ಒಬ್ಬಳೇ ಒಬ್ಬ ವೇಶ್ಯಾವೃತ್ತಿ ಮಹಿಳೆಯನ್ನು ನಾನು ನೋಡಿರಲಿಲ್ಲ.

ನಂತರದಲ್ಲಿ ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಕಾರ್ಯಯೋಜನೆಯ ರಾಜ್ಯ ಸಂಯೋಜಕಳಾಗಿ ವೇಶ್ಯಾವೃತ್ತಿ ಮಹಿಳೆಯರೊಂದಿಗೆ ಜವಾಬ್ದಾರಿ ನಿರ್ವಹಿಸಿದೆ. ಹೀಗೆ ಆ ಸಮುದಾಯದ ಒಳಹೊಕ್ಕ ನಂತರವೇ ಅವರ ಬದುಕಿನ ಮಜಲುಗಳು, ಸಾವಿರ ಪ್ರಶ್ನೆಗಳು ತೆರೆದುಕೊಂಡವು. ಮೊಟ್ಟಮೊದಲು ಪ್ರಶ್ನಾರ್ಥಕವಾದ ಈ ಪ್ರಶ್ನೆಗಳನ್ನು ತೆರೆದಿಡಲು ದಟ್ಟವಾದ ಅನುಭವಗಳನ್ನು ನೀಡಿದ ವೇಶ್ಯಾವೃತ್ತಿ ಮಹಿಳಾ ಸಮುದಾಯಕ್ಕೆ ನಾನು ಕೃತಜ್ಞಳಾಗಿದ್ದೇನೆ.

ಸಮಾಜದೊಂದಿಗೆ ತೊಡರುಹಾಕಿಕೊಂಡೇ ಇರುವ 'ವೇಶ್ಯಾವಾಟಿಕೆ'ಯಂತಹ ಪ್ರಶ್ನೆ ಸಂಕೀರ್ಣವಾದುದು, ಜಟಿಲವಾದುದು. ಅದಷ್ಟೆ ಅಲ್ಲದೆ 'ಕಳಂಕಿತ'ವಾದ ಹಣೆಪಟ್ಟಿ ಹೊತ್ತುಕೊಂಡೇ ಉಸಿರಾಡುತ್ತಾ ಬದುಕಿರುವ ಈ ವಿಚಾರದ ಬಗ್ಗೆ ಅಧ್ಯಯನಗಳೂ ಕೂಡ ಹುಬ್ಬೇರಿಸುವಂತಹುವೇ. ಇಂತಹ ಒಂದು ಗಂಭೀರವಾದ ವಸ್ತುವಿನ ಅಧ್ಯಯನಕ್ಕೆ ಮಾರ್ಗದರ್ಶನ ಮಾಡಲು ಒಪ್ಪಿದ ಡಾ.ಹಿ.ಚಿ.ಬೋರಲಿಂಗಯ್ಯರವರ ಮಾರ್ಗದರ್ಶನಕ್ಕಾಗಿ ನಾನು ಅಭಾರಿಯಾಗಿದ್ದೇನೆ.

ಸಂಶೋಧನೆ ನಡೆಸಲು ಅನುಮತಿ ಕೊಟ್ಟು, ವಿಷಯವನ್ನು ನೋಂದಾಯಿಸಿಕೊಟ್ಟ ಕನ್ನಡ ವಿ.ವಿ.ಯ ಅಂದಿನ ಮಾನ್ಯ ಕುಲಪತಿಗಳಾಗಿದ್ದ ಡಾ.ಹೆಚ್.ಜೆ. ಲಕ್ಕಪ್ಪಗೌಡರವರಿಗೆ ಹಾಗೂ ಇಂದಿನ ಮಾನ್ಯ ಕುಲಪತಿಗಳಾಗಿರುವ ಡಾ.ಕೆ.ವಿ.ನಾರಾಯಣರವರಿಗೆ ನನ್ನ ಕೃತಜ್ಞತೆಗಳು. ಹಾಗೂ ಅಧ್ಯಯನಾಂಗದ ನಿರ್ದೇಶಕರೂ ಆಗಿರುವ ಡಾ.ಕರೀಗೌಡ ಬೀಚನಹಳ್ಳಿ, ಬುಡಕಟ್ಟು ಅಧ್ಯಯನ ವಿಭಾಗದ ಮುಖ್ಯಸ್ಥರಾಗಿರುವ ಡಾ. ಕೆ.ಎಂ.ಮೈತ್ರಿಯವರ ಸಲಹೆ, ಮಾರ್ಗದರ್ಶನಗಳಿಗೆ ನಾನು ಕೃತಜ್ಞಳಾಗಿದ್ದೇನೆ.

ಇನ್ನು ಸಂಶೋಧನಾ ಸಂದರ್ಭದಲ್ಲಿ, ಅಧ್ಯಯನದ ಸಂದರ್ಭದಲ್ಲಿ ನನ್ನನ್ನು ಪ್ರೋತ್ಸಾಹಿಸಿದ ಅನೇಕಾನೇಕ ನನ್ನ

ಆತ್ಮೀಯರಿಗೆಲ್ಲಾ ನಾನು ಕೃತಜ್ಞಳಾಗಿದ್ದೇನೆ.

ಈ ಅಧ್ಯಯನಕ್ಕೆ ಪೂರಕವಾಗಿ ಸಂದರ್ಶನಗಳನ್ನು ನೀಡಿ ತಮ್ಮ ಅಭಿವ್ಯಕ್ತಿಯನ್ನು ನನ್ನೊಂದಿಗೆ ಹಂಚಿಕೊಂಡ ಎಲ್ಲರಿಗೂ ನನ್ನ ಕೃತಜ್ಞತೆಗಳು. ತಮ್ಮ ಬದುಕುಗಳ ಹಾದಿಯನ್ನು ನನ್ನೊಂದಿಗೆ ಬಿಡಿಸಿಟ್ಟು ತಮ್ಮ ಬದುಕನ್ನು ತೋಡಿಕೊಂಡ ಎಲ್ಲ ಗೆಳತಿಯರಿಗೆ ನನ್ನ ಕೃತಜ್ಞತೆಗಳು.

ಮಹಾಪ್ರಬಂಧಕ್ಕೆ ಚಿತ್ರ ಬಿಡಿಸಿ ಪ್ರಬಂಧಕ್ಕೊಂದು ಚೆಂದದ ಫ್ರೇಂಗಳನ್ನು ಕಟ್ಟಿಕೊಟ್ಟ ಕಲಾವಿದರಾದ ಆತ್ಮೀಯ ಶ್ರೀಪಾದ್ ಮತ್ತು ಬಿ.ಎನ್.ಪ್ರದೀಪ್‌ಗೆ ನನ್ನ ಕೃತಜ್ಞತೆಗಳು. ಕಲಾಲೋಕಕ್ಕೆ ಈಗಷ್ಟೇ ಕಾಲಿಟ್ಟು ಕುತೂಹಲದ ಕಣ್ಣರಳಿಸುತ್ತಿರುವ ನನ್ನ ಮಗಳು ಎಂ.ಜೆ.ದೀಪಿಕಾ ಈ ವಿಷಯ ವಸ್ತುವನ್ನು ತನ್ನ ಭಾವಕ್ಕೆ ಬಂದಷ್ಟು ಅರ್ಥಮಾಡಿಕೊಂಡು ತನ್ನದೇ ಅಭಿವ್ಯಕ್ತಿಯನ್ನು ಚಿತ್ರಿಸಿ ಕೊಟ್ಟಿದ್ದಾಳೆ. ಅವಳಿಗೂ ನನ್ನ ಪ್ರೀತಿಯ ಹರಕೆಗಳು.

ನನ್ನೊಂದಿಗಿದ್ದು ಈ ಮಹಾಪ್ರಬಂಧಕ್ಕೇ ಒಂದು ಚೌಕಟ್ಟು ಜೋಡಿಸಿ, ಚರ್ಚಿಸಿ, ಮಂಥಿಸಿ, ಅನುವಾದಿಸಿ, ಭಿನ್ನಾಭಿಪ್ರಾಯಗಳ ತುತ್ತತುದಿಗೇರಿ ಮತ್ತೆ ಸಹಮತಕ್ಕೆ ಬಂದು, ಸಹಭಾಗಿತ್ವ ನೀಡಿದ ಸಂಗಾತಿಗೆ,

ಎಲ್ಲಾ ಜವಾಬ್ದಾರಿ, ಜಂಜಾಟಗಳ ನಡುವೆ ಪ್ರಬಂಧ ಸಿದ್ಧಪಡಿಸಲು ಅಡ್ಡಿಯಾಗುತ್ತಲೇ ಇತ್ತು. ಆಗೆಲ್ಲಾ ನನಗೆ ಆತ್ಮೀಯವಾದ ಆತಿಥ್ಯ ನೀಡಿ ಹಗಲು-ರಾತ್ರಿಗಳ ವ್ಯತ್ಯಾಸವಿಲ್ಲದೆ ನನ್ನ ಬರವಣಿಗೆಗೆ ಪ್ರೋತ್ಸಾಹ ನೀಡಿದ ಡಾನ್‌ಬೋಸ್ಕೋ-ತುಮಕೂರು ಸಂಸ್ಥೆಯ ಪೂಜ್ಯ ಫಾದರ್ ಪಯಾಸ್ ಹಾಗೂ ಇತರೆ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.


ನನ್ನ ಸಮಯಕ್ಕೆ ಸರಿಯಾಗಿ ಅಂದವಾಗಿ ಮುದ್ರಿಸಿ ಸಹಕರಿಸಿದ ಪಾಟೀಲ್ ಗ್ರಾಫಿಕ್ಸ್‌ನ ಪಾಟೀಲ್ ಸಹೋದರರಿಗೂ ಇತರೆ ಗೆಳೆಯರಿಗೂ ನನ್ನ ವಂದನೆಗಳು.


ನಾವು ನಡೆಸಿದ ''ವೇಶ್ಯಾವೃತ್ತಿ ಮತ್ತು ಮಾನವ ಹಕ್ಕುಗಳು'' ಮತ್ತು ''ವೇಶ್ಯಾವೃತ್ತಿ ಮತ್ತು ಮೂಲಭೂತ ಸಮಸ್ಯೆಗಳು'' ರಾಜ್ಯಮಟ್ಟದ ಸಮಾವೇಶಗಳನ್ನು ನಡೆಸಿದ ಸಂದರ್ಭಗಳಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯ ಮಂಡಿಸಿದ ಎಲ್ಲ ಗಣ್ಯರಿಗೂ ನಾನು ಅಭಾರಿಯಾಗಿದ್ದೇನೆ. ಪತ್ರಕರ್ತರೊಂದಿಗೆ ನಡೆಸಿದ ಸಂವಾದದಲ್ಲಿ ಭಾಗವಹಿಸಿದ್ದ ಎಲ್ಲ ನನ್ನ ಪತ್ರಕರ್ತಸ್ನೇಹಿತರಿಗೂ ನನ್ನ ಕೃತಜ್ಞತೆಗಳು.

'ಲೈಂಗಿಕವೃತ್ತಿ ಮಹಿಳೆಯರು ಮತ್ತು ಮಾನವ ಹಕ್ಕುಗಳು' ವಿಚಾರದ ಸುತ್ತ ಆ ಮಹಿಳೆಯರ ಆರೋಗ್ಯ, ಮೂಲಭೂತ ಸಮಸ್ಯೆಗಳು, ಮಾನವಹಕ್ಕುಗಳ ಸಂರಕ್ಷಣೆಯ ಪರಿಧಿಯಲ್ಲಿ ಲೈಂಗಿಕವೃತ್ತಿ ಮಹಿಳೆಯರನ್ನು ಸಂಘಟಿಸುತ್ತಾ ಅವರ ಒಗ್ಗೂಡಿಸುವಿಕೆಯ ಕಷ್ಟಸಾಧ್ಯವಾದ ಒಂದು ಪ್ರಯತ್ನವನ್ನೂ ನಡೆಸುತ್ತಾ ಅದರ ಸುತ್ತ ಒಂದು ದಟ್ಟವಾದ ಅನುಭವಗಳನ್ನು ನಾನು ಪಡೆಯಲು ಕಾರಣವಾದ 'ನೆಲೆ' ಸಂಸ್ಥೆಯ ಸಹಕಾರಕ್ಕೆ ನಾನು ಕೃತಜ್ಞಳಾಗಿದ್ದೇನೆ.

ಜನಪದ ಮತ್ತು ಆಧುನಿಕ ಬುಡಕಟ್ಟು ಸಮುದಾಯಗಳಲ್ಲಿ ವೇಶ್ಯಾವಾಟಿಕೆ ಪರಂಪರೆ ಮತ್ತು ಸಮಸ್ಯೆಗಳು


ಪರಿವಿಡಿ



ಬಿ.ಎನ್.ಪ್ರದೀಪ್
20/07/04



ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ





ವೇಶ್ಯಾವಾಟಿಕೆಯನ್ನು 'ಅತ್ಯಂತ ಪ್ರಾಚೀನ ವೃತ್ತಿ' ಎಂದು ಹೇಳುವಾಗಲೇ ಈ ವ್ಯವಸ್ಥೆಯ ದ್ವಿಮುಖ ಧೋರಣೆ ಬಯಲಾಗುತ್ತದೆ. ವೇಶ್ಯಾವಾಟಿಕೆ 'ಪ್ರಾಚೀನದಿಂದಲೂ ಮೆರೆದಿರುವ ದೌರ್ಜನ್ಯದ ಪ್ರತೀಕ'. ವೇಶ್ಯಾವಾಟಿಕೆ ಎನ್ನುವಾಗಲೇ ಮಡಿವಂತಿಕೆಯ ಈ ಸಮಾಜಕ್ಕೆ 'ಪ್ರಾಚೀನ ವೃತ್ತಿ' ಎಂಬ ಗರಿಮೆಯನ್ನೋ ಹಿರಿಮೆಯನ್ನೋ ಕೊಟ್ಟು ತನ್ನ ತೃಷೆಯನ್ನು ಅನಾಯಾಸವಾಗಿ ಹಿಂಗಿಸಿಕೊಳ್ಳುತ್ತಿರುವ ಪ್ರಾಧಾನ್ಯತೆ ಕಣ್ಣಿಗೆ ರಾಚುತ್ತದೆ. ಇನ್ನು ಕೆಲವು ಪ್ರಶ್ನೆಗಳಾದ ಪುನರ್ವಸತಿ, ಪ್ರೋತ್ಸಾಹ, ಮಾನ್ಯತೆ ಇವುಗಳನ್ನು ಅಷ್ಟೊಂದು ಸಲೀಸಾಗಿ ಅಥವಾ ಅಪ್ರಬುದ್ಧವಾಗಿ ಮಂಡಿಸಲು ಹೊರಟರೆ ಪ್ರತಿಫಲ ಶೂನ್ಯವೇ ಆಗಿರುತ್ತದೆ.

ಈ ಸಮಸ್ಯೆಯನ್ನು ಒಂದು ಸಮಾಜದ ಬುನಾದಿಯಾದ ಹಲವು ವಿಚಾರಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಅಭ್ಯಸಿಸಬೇಕಾಗುತ್ತದೆ. ಪ್ರಮುಖವಾಗಿ ಧರ್ಮ, ಪರಂಪರೆಯ, ಪ್ರಾಚೀನತೆಯ, ಐತಿಹಾಸಿಕ ಮಜಲುಗಳ, ಸಿದ್ಧಾಂತಗಳ ಬೇರುಗಳಲ್ಲಿಯ ಅಗತ್ಯ-ಅನಿವಾರ್ಯತೆಗಳ ನೆಲೆಗಟ್ಟಿನಲ್ಲಿ ನೋಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು 'ಸಾಮಾಜಿಕ ಅನಿಷ್ಟ'ವಾಗಿ ಎಲ್ಲರ ರಕ್ತ ಸಂಚಲನವನ್ನು ತ್ವರಿತಗೊಳಿಸುವ ಈ ಪ್ರಶ್ನೆಯನ್ನು ಅರ್ಥೈಸಿಕೊಳ್ಳಬೇಕಿದೆ. ಸಮಾಜಕ್ಕೆ ಲೈಂಗಿಕವೃತ್ತಿ ನಿರತರ ಸಮುದಾಯವನ್ನು ಅರ್ಥೈಸುವ ನಿಟ್ಟಿನಲ್ಲಿ ಹಲವು ಪ್ರಶ್ನೆಗಳ ಪರಿಹಾರದ ಹುಡುಕಾಟದ ಪ್ರಯತ್ನ ಇದಾಗಿದೆ.

ಮೊದಲನೆಯದಾಗಿ ಮಹಿಳೆ ಅದರಲ್ಲೂ ಲೈಂಗಿಕ ವೃತ್ತಿ ಮಹಿಳೆ ಜಗತ್ತಿನಾದ್ಯಂತ ಅತ್ಯಂತ ಹೆಚ್ಚಿನ ಶೋಷಣೆ ಅನುಭವಿಸುತ್ತಿದ್ದಾಳೆ ಎನ್ನುವುದು ಅತಿಶಯೋಕ್ತಿಯೂ ಅಲ್ಲ ಅಥವಾ ಸವಕಲು ನಾಣ್ಯವೂ ಅಲ್ಲ. ಇದು ಆಧಾರ ರಹಿತವಾದುದು ಅಲ್ಲ, ಹಾಗೆಯೇ ಈ ಬಗ್ಗೆ ಭಿನ್ನಾಭಿಪ್ರಾಯ ಮೂಡಲೂ ಸಾಧ್ಯವಿಲ್ಲ. ಆದರೆ ಈ ಸಮಸ್ಯೆಯು ಅತ್ಯಂತ ಶ್ರೀಮಂತ ರಾಷ್ಟ್ರಗಳೂ ಸೇರಿದಂತೆ ಜಗತ್ತಿನಾದ್ಯಂತ ಇದೊಂದು ನಿರ್ಲಕ್ಷ್ಯ ಹಾಗು ಔದಾಸೀನ್ಯಕ್ಕೆ ಏಕೆ ತುತ್ತಾಗಿದೆ?

ಅತ್ಯಂತ ಶೋಷಿತೆ 'ಮಹಿಳೆ'ಯ ಹಿನ್ನೋಟವನ್ನಿಟ್ಟುಕೊಂಡು ನಾನು ವೇಶ್ಯಾವೃತ್ತಿಯನ್ನು ನೋಡಲು ಪ್ರಯತ್ನಿಸುತ್ತೇನೆ. ಹಾಗೆಂದು ಇದ್ಯಾವುದೂ ರಾತ್ರೋರಾತ್ರಿ ಘಟಿಸಿದ್ದಲ್ಲ. ಮಹಿಳೆಯ ಈ ದುಃಸ್ಥಿತಿಗೆ ಸಾವಿರಾರು ವರ್ಷಗಳ ದೀರ್ಘಕಾಲದ ಪ್ರಾಚೀನತೆ, ಧಾರ್ಮಿಕ ಸ್ವಾರ್ಥಗಳು, ಲಾಲಸೆಗಳು, ಐತಿಹಾಸಿಕ ಘಟ್ಟಗಳು ನಮ್ಮೊಂದಿಗಿವೆ.

ಈ ಅಧ್ಯಯನದ ಬಗ್ಗೆ ಯೋಚಿಸುವ ಮೊದಲು ಸುಮಾರು ಹತ್ತು ವರ್ಷಗಳ ಕಾಲ ಕರ್ನಾಟಕದ ರಾಜ್ಯ ಸಂಯೋಜಕಳಾಗಿ ಲೈಂಗಿಕವೃತ್ತಿ ಮಹಿಳೆಯರ ನಡುವೆ ಎಚ್.ಐ.ವಿ/ಏಡ್ಸ್ ನಿಯಂತ್ರಣದ ಜವಾಬ್ದಾರಿ ಹೊತ್ತು ಕಾರ್ಯನಿರ್ವಹಿಸಿದೆ. ಆ ಸಂದರ್ಭದಲ್ಲಿ ಆಂಧ್ರ, ತಮಿಳುನಾಡು, ಪಶ್ಚಿಮ ಬಂಗಾಳ, ದೆಹಲಿ, ಮಹಾರಾಷ್ಟ್ರ, ಕೇರಳ ಮುಂತಾದ ಭಾರತದಲ್ಲಿನ ಬಹುತೇಕ ರಾಜ್ಯಗಳಲ್ಲಿಯ ಲೈಂಗಿಕವೃತ್ತಿ ಮಹಿಳೆಯರೊಂದಿಗೆ ಒಡನಾಟ ಸಾಧ್ಯವಾಯಿತು. ಕರ್ನಾಟಕದಲ್ಲಂತೂ ಕ್ಷೇತ್ರಕಾರ್ಯದ ಅನುಭವಗಳು ದಟ್ಟವಾದವು. ಹೆಚ್.ಐ.ವಿ/ಏಡ್ಸ್ ನಿಯಂತ್ರಣದಿಂದಾಗಿ ಪ್ರವೇಶಿಸಿದರೂ ನಂತರ ಅವರ ಬದುಕುಗಳ ಮಜಲುಗಳು, ಆಂತರಿಕ, ಬಾಹ್ಯ ಸಂಘರ್ಷಗಳು, ಅವರ ಅಂತರಂಗಳನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಆ ಸಮುದಾಯದ ಆಚರಣೆಗಳು, ನಂಬಿಕೆಗಳು, ಉಡುಗೆತೊಡುಗೆಗಳು, ಆಭರಣಗಳನ್ನು ಪರಿಚಯ ಮಾಡಿಕೊಳ್ಳಲು ಸಾಧ್ಯವಾಯಿತು. ಅವರ ಮೇಲಿನ ದೌರ್ಜನ್ಯಗಳು, ಅವರನ್ನು ಕಬಳಿಸುವವರು, ಕಾರ್ಯತಂತ್ರಗಳು ಅವರ ಹಿತಶತೃಗಳು, ಆ ದಂಧೆಯ ಹರಿಕಾರರನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಯಿತು. ಅವರ ಅವಲಂಬಿತರು, ಅವರೊಂದಿಗಿನ ಸಮಾಜ, ಸಮಾಜದೊಂದಿಗೆ ಅವರು, ಆ ಸಂಬಂಧಗಳ ವಿವಿಧ ಮುಖಗಳನ್ನು ಸಮೀಪದಿಂದ ನೋಡಲು ಸಾಧ್ಯವಾಯಿತು. ಅವರೊಂದಿಗಿನ ಅಪಾಯಗಳು, ಸವಾಲುಗಳು ದುರಂತಗಳು ಹೆಚ್.ಐ.ವಿ/ಏಡ್ಸ್‌ನಂಥ ಮಾರಿಗಳು ಅವರ ಮೇಲೆ ಎಸೆದ ಸವಾಲುಗಳು, ಅವರ ಸಾಹಸಗಳು ಮುಂತಾದ ಅಂಶಗಳು ಅವರ ಗಿರಾಕಿಗಳನ್ನು, ಅವರ ಬದುಕಿನ ಸುತ್ತಲಿನ ಸಂಕೀರ್ಣಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ಸಹಕಾರಿಯಾಯಿತು.

ರಾಜ್ಯವಾರು ಹಾಗೂ ಇನ್ನೂ ಸೂಕ್ಷ್ಮವಾಗಿ ನೋಡಿದಾಗ ಜಿಲ್ಲಾವಾರು ಇರುವ ಸೂಕ್ಷ್ಮವಾದ ಭಿನ್ನತೆಗಳು-ಸಾಮ್ಯತೆಗಳು, ಹೇಗೆ ಲೈಂಗಿಕವೃತ್ತಿಗೆ ಆ ಸಮುದಾಯದ ಹಿನ್ನೆಲೆಯಾಗಿದೆ ಎಂಬುದನ್ನು ಅವರ ಒಡನಾಟದಿಂದ ಅರ್ಥೈಸಿಕೊಳ್ಳಬಹುದು. ಹಾಗೆಯೇ ಲೈಂಗಿಕವೃತ್ತಿ ಸಮುದಾಯ ತನ್ನ ವೃತ್ತಿಗೆ ತಕ್ಕಂತೆ ಪ್ರಕೃತಿಯನ್ನು ಹೇಗೆ ಬಳಸಿಕೊಂಡಿದೆ ಎಂಬುದಂತೂ ನಿಚ್ಚಳವಾಗಿ ತೆರೆದಿಟ್ಟಿದೆ. ಉದಾ: ನದಿ ದಂಡೆಗಳು, ದಟ್ಟ ಅರಣ್ಯಗಳು, ಸಮುದ್ರತೀರಗಳು, ಬೆಟ್ಟಗುಡ್ಡಗಳ ತಪ್ಪಲುಗಳು, ಕುರುಚಲು ಪೊದೆಗಳು, ರಾಷ್ಟ್ರೀಯ ಹೆದ್ದಾರಿಗಳು, ಧಾರ್ಮಿಕ ಕೇಂದ್ರಗಳು, ಪ್ರವಾಸಿ ತಾಣಗಳು ಹೀಗೆ ನನ್ನ ಕಾರ್ಯ ಕ್ಷೇತ್ರದಲ್ಲಿ ಅವರೊಂದಿಗಿನ ಹತ್ತು ವರ್ಷಗಳ ಒಡನಾಟಗಳು ಮೇಲಿನ ಎಲ್ಲವನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ತೆರೆದುಕೊಳ್ಳಲು ಅನುವು ಮಾಡಿಕೊಟ್ಟವು.

ಲೈಂಗಿಕ ವೃತ್ತಿ ಸಮುದಾಯದೊಂದಿಗೆ ನಡೆಸಿದ ಅಧ್ಯಯನ ಮತ್ತು ಅವರನ್ನು ಒಗ್ಗೂಡಿಸುವಿಕೆಯ ಪ್ರಯತ್ನದ ಅನುಭವದ ಹಾದಿಯುದ್ದಕ್ಕೂ ನನ್ನನ್ನು ಬಹಳ ಮುಖ್ಯವಾದ ಕೆಲವು ಪ್ರಶ್ನೆಗಳು ಕಾಡುತ್ತಿದ್ದವು.

೧. ವೇಶ್ಯಾವೃತ್ತಿಯು ಅನೂಚಾನವಾಗಿ ಈ ಸಮಾಜದೊಂದಿಗೆ ಜೀವಂತವಾಗಿ, ಸಕ್ರಿಯವಾಗಿ ನಡೆದು ಬರುತ್ತಿರುವುದಾದರೂ ಏಕೆ?

೨. ವೇಶ್ಯಾವೃತ್ತಿಯೊಂದು ಸಾಮಾಜಿಕ ಅನಿಷ್ಟವಾಗಿದ್ದಲ್ಲಿ ಯಾವ ಕಾರಣಕ್ಕಾಗಿ ಇದನ್ನು ನಿರ್ಮೂಲನ ಮಾಡಲು ಸಾಧ್ಯವೇ ಆಗಿಲ್ಲ?

೩. ಮನುಷ್ಯನ ಯಾವ ಮಾನಸಿಕ ಒತ್ತಾಸೆ, ಉತ್ಕಟತೆಗಳು ಈ ವೃತ್ತಿಯನ್ನು ನಿರಂತರವಾಗಿ ಶತಶತಮಾನಗಳಿಂದಲೂ ಕಾಯ್ದುಕೊಂಡು ಬಂದಿದೆ? ಇದಕ್ಕೆ ವೈಜ್ಞಾನಿಕ ಕಾರಣವಾದರೂ ಏನು?

೪. ಸಮಾಜದಲ್ಲಿದ್ದ ಅನಿಷ್ಟಗಳಾದ 'ಸತಿಪದ್ಧತಿ', 'ಬಾಲ್ಯವಿವಾಹ', 'ಅಸ್ಪೃಶ್ಯತೆ'ಯಂತಹವುಗಳನ್ನು ತೊಡೆದುಹಾಕಲು ತಮ್ಮ ಬದುಕುಗಳನ್ನೇ ಪಣವಾಗಿಟ್ಟು ಹೋರಾಡಿದ ಅನೇಕ ಸಮಾಜಸುಧಾರಕರುಗಳಿಗೆ ಏಕೆ ವೇಶ್ಯಾವಾಟಿಕೆ ಒಂದು ಪ್ರಶ್ನೆಯಾಗಲಿಲ್ಲ?

೫. ವೇಶ್ಯಾವಾಟಿಕೆ ಮಡುವಿನಲ್ಲಿ ಲಕ್ಷಾಂತರ ಹಸುಗೂಸುಗಳು, ಅಮಾಯಕ ಯುವತಿಯರು ನಿರಂತರವಾಗಿ ತಮ್ಮ ಬದುಕನ್ನು ಕನಸುಗಳನ್ನು ಬಲಿಕೊಡುತ್ತಲೇ ಬರುತ್ತಿದ್ದರೂ ಇಂದಿಗೂ ಅಂತಹ ಒಂದು ದಂಧೆಯ ವಿರುದ್ಧ ಒಂದು ಯಶಸ್ವಿ ಪ್ರಯೋಗ ನಡೆದಿಲ್ಲವಾದರೂ ಏಕೆ?

೬. ಲೈಂಗಿಕವೃತ್ತಿ ಮಹಿಳಾ ಸಮುದಾಯದೊಂದಿಗೆ ಬಹಳ ಆಳವಾಗಿ, ಬದ್ಧತೆಯೊಂದಿಗೆ, ಪೂರ್ಣವಾದ ಒಂದು ಸಾಮುದಾಯಿಕ ಹೋರಾಟವನ್ನಾಗಲೀ, ಒಗ್ಗೂಡಿಸುವಿಕೆಯ ಪ್ರಯತ್ನವನ್ನಾಗಲೀ ಏಕೆ ಯಾರೂ ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ?

೭. ವೇಶ್ಯಾವೃತ್ತಿ ಮಹಿಳೆಯು ಸ್ವತಃ ತನ್ನನ್ನೇ ಬಹಳ ಪ್ರಮುಖಳು ಎಂದು ಪರಿಗಣಿಸದಿರುವ ಪರಿಸ್ಥಿತಿಯಲ್ಲಿ ಅವಳ ಆರೋಗ್ಯ ಮತ್ತು ಜೀವನಗಳನ್ನು ಕಾಪಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಬಲ್ಲಳು ಎಂದು ಆಲೋಚಿಸುವುದಾದರೂ ಹೇಗೆ?

೮. ಭಾರತದಾದ್ಯಂತ ಪ್ರಗತಿಪರ, ಎಡಪಂಥೀಯ ಚಳುವಳಿಗಳೂ ಕೂಡ ವೇಶ್ಯಾವಾಟಿಕೆಯಂತಹ ಒಂದು ಜಟಿಲವಾದ, ಸಂಕೀರ್ಣವಾದ ವಿಚಾರವನ್ನು ಗಂಭೀರವಾಗಿ ಪರಿಗಣಿಸದಿರುವುದಾದರೂ ಏಕೆ?

೯. ಬಹುತೇಕ ದಲಿತ ಹಾಗೂ ಬುಡಕಟ್ಟು ಹೆಣ್ಣುಮಕ್ಕಳೇ ಬಲಿಯಾಗಿರುವ ವೇಶ್ಯಾವಾಟಿಕೆಯ ಬಗ್ಗೆ ದಲಿತ ಚಳುವಳಿಗಳೂ ಕೂಡ ಒಂದು ಸ್ಪಷ್ಟ ಧ್ವನಿಯೆತ್ತಿಲ್ಲವಾದರೂ ಏಕೆ ?

'ವೇಶ್ಯಾವಾಟಿಕೆ' ಎನ್ನುವಾಗಲೇ ಈ ಸಮಾಜದ ಬಿಳಿಲು-ಬೇರುಗಳಲ್ಲಿ ರೂಪಿತವಾದ ಮಡಿವಂತಿಕೆಯ ಮನಸ್ಸುಗಳು ಒಂದಷ್ಟು ಪ್ರಶ್ನೆಗಳನ್ನು ಧುತ್ತಂತ ಮುಂದಿಟ್ಟುಕೊಳ್ಳುತ್ತವೆ.

- ಅದರಿಂದ ಹೊರಗೆ ಬರಲು ಸಾಧ್ಯವಿಲ್ಲವೇ?
- ಬದುಕಲು ಬೇರೆ ದಾರಿಗಳಿಲ್ಲವೇ? ಎಲ್ಲರೂ ವೇಶ್ಯಾವೃತ್ತಿಯನ್ನೇ ಮಾಡಿ ಬದುಕುತ್ತಾರಾ?
- ಅಲ್ಲಿ ಶೋಷಣೆಯೆಂಬುದೇ ಇಲ್ಲ. ಬದುಕಲು ಕಂಡುಕೊಂಡಿರುವ ಅತ್ಯಂತ ಸುಲಭಮಾರ್ಗ ಮಾಡ್ಕೊಂಡಿದ್ದಾರೆ ಅಷ್ಟೆ.
- ಅವರ ಬಗ್ಗೆ ಮಾತನಾಡಿ ಮಾತನಾಡಿ ಆ ವೃತ್ತಿಯನ್ನು ಪ್ರೋತ್ಸಾಹಿಸುತ್ತಿದ್ದೀರಿ?

ಹೀಗೆ ಈ ಮೇಲಿನ ಎಲ್ಲ ಪ್ರಶ್ನೆಗಳ ಹಿಂದಿರುವ ಆ ವೃತ್ತಿಯವರ ಬಗ್ಗೆ ಈ ಸಮಾಜಕ್ಕಿರುವ ಕೀಳರಿಮೆಯನ್ನು, ಅಪರಾಧವಾಗಿ ಅಥವಾ ಕಳಂಕವಾಗಿ ನೋಡುವ ಪರಿಯನ್ನು ಈ ಪ್ರಶ್ನೆಗಳು ಮುಂದಿಡುತ್ತವೆ.

ಲೈಂಗಿಕ ವೃತ್ತಿ ಸಮುದಾಯದೊಂದಿಗೆ ನಡೆಸಿದ ಅಧ್ಯಯನ ಮತ್ತು ಅವರನ್ನು ಒಗ್ಗೂಡಿಸುವ ಪ್ರಯತ್ನದ ಅನುಭವದ ಹಾದಿಯುದಕ್ಕೂ ನನ್ನನ್ನು ಬಹಳ ಮುಖ್ಯವಾದ ಕೆಲವು ಪ್ರಶ್ನೆಗಳು ಕಾಡುತ್ತಿವೆ.

ಲೈಂಗಿಕ ವೃತ್ತಿ ಮಹಿಳಾ ಸಮುದಾಯದೊಂದಿಗೆ ಬಹಳ ಆಳವಾಗಿ, ಬದ್ಧತೆಯೊಂದಿಗೆ, ಪೂರ್ಣವಾದ ಒಂದು ಸಾಮುದಾಯಿಕ ಹೋರಾಟವನ್ನಾಗಲೀ, ಒಗ್ಗೂಡಿಸುವಿಕೆಯ ಪ್ರಯತ್ನವನ್ನಾಗಲೀ ಏಕೆ ಯಾರೂ ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ? ಸಮಾಜದಲ್ಲಿದ್ದ ಅನೇಕ ಸಾಮಾಜಿಕ ಅನಿಷ್ಟಗಳಾದ 'ಸತಿಪದ್ಧತಿ' 'ಬಾಲ್ಯವಿವಾಹ' 'ಅಸ್ಪೃಶ್ಯತೆ'ಯಂತಹವುಗಳನ್ನು ತೊಡೆದು ಹಾಕಲು ಜೀವನಗಳನ್ನೇ ಮುಡುಪಾಗಿಟ್ಟು ಆ ಹೋರಾಟಕ್ಕೊಂದು ಸಾಮೂಹಿಕ ಆಂದೋಲನದ ರೂಪ ಕೊಟ್ಟು ಅವುಗಳನ್ನು ತೊಡೆದು ಹಾಕುವ ಪ್ರಯತ್ನಗಳನ್ನು ಅನೇಕರು ನಡೆಸಿದ್ದಾರೆ. ಅವುಗಳಿಗೆಲ್ಲಾ ಹಲವು ನಿಟ್ಟುಗಳಿಂದ ಸಾಮಾಜಿಕ ಭಾಗವಹಿಸುವಿಕೆ, ಬೆಂಬಲಗಳು ದೊರೆತಿವೆ. ಇಂತಹ ಸಾಮಾಜಿಕ ಕಳಂಕಗಳ ಪರ್ಯಾಯಕ್ಕಾಗಿ, ವಿಮೋಚನೆಗಾಗಿ, ಪರಿಣಾಮಕಾರಿಯಾದ ಸಂಘಟಿತ ಶಕ್ತಿಯನ್ನು, ಹೋರಾಟಗಳನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾಗಿರುವ ಅನೇಕ ಸಮಾಜ ಸುಧಾರಕರುಗಳಿಗೆ ಏಕೆ 'ವೇಶ್ಯಾವಾಟಿಕೆ'ಯಂತಹ ಪ್ರಶ್ನೆ ಸವಾಲಾಗಲಿಲ್ಲ? ಸಾಮಾಜಿಕ ಅನಿಷ್ಟ, ಸಾಮಾಜಿಕ ಪಿಡುಗು ಎಂದೇ ಜೀವಂತವಾಗಿರುವ ಈ ಸಮಸ್ಯೆಯ ಮಡುವಿನಲ್ಲಿ ಲಕ್ಷಾಂತರ ಹಸುಗೂಸುಗಳು, ಲಕ್ಷಾಂತರ ಅಮಾಯಕ ಯುವತಿಯರು ನಿರಂತರವಾಗಿ ತಮ್ಮ ಬದುಕನ್ನು ಕನಸುಗಳನ್ನು ಬಲಿಕೊಡುತ್ತಲೇ ಬರುತ್ತಿದ್ದರೂ ಇಂದಿಗೂ ಅಂತಹುದರ ವಿರುದ್ಧ ಒಂದು ಯಶಸ್ವೀ ಪ್ರಯೋಗ ನಡೆದಿಲ್ಲವಾದರೂ ಏಕೆ?

ಇಂತಹ ಅನೇಕ ಸಂಕೀರ್ಣವಾದ ಪ್ರಶ್ನೆಗಳು ನನ್ನನ್ನು ಕಾಡುತ್ತಲೇ ಇವೆ. ಈ ನಿಟ್ಟಿನಲ್ಲಿಯೇ ಕಳೆದ ಹತ್ತುವರ್ಷಗಳಲ್ಲಿ ಲೈಂಗಿಕ ವೃತ್ತಿ ಮಹಿಳಾ ಸಮುದಾಯದೊಂದಿಗೆ ನಡೆಸಿದ ಒಗ್ಗೂಡಿಸುವಿಕೆಯ ಪ್ರಯತ್ನಗಳನ್ನು ಮಾಡಿ ಅಂಥ ಅಧ್ಯಯನದ ಫಲಿತಗಳನ್ನು ಇಲ್ಲಿ ವಿಶ್ಲೇಷಿಸಲು ಬಯಸುತ್ತೇನೆ.

ಸುಮಾರು 1990ರಿಂದೀಚೆಗೆ ದೇಶದಾದ್ಯಂತ ಲೈಂಗಿಕ ರೋಗಗಳ ನಿಯಂತ್ರಣ, ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಕಾರ್ಯಯೋಜನೆಗಳು ತ್ವರಿತವಾಗ ತೊಡಗಿದವು. ಲೈಂಗಿಕ ವೃತ್ತಿ ಮಹಿಳೆಯರನ್ನು ಈ ನಿಯಂತ್ರಣ ಯೋಜನೆಯು ಮುಖ್ಯ ಅಪಾಯಕಾರಿ ಗುರಿಯಾಗಿಸಿದ ಸಮುದಾಯವಾಗಿ ಗುರುತಿಸಲ್ಪಟ್ಟಿತ್ತು. ಇದರ ಎಲ್ಲ ಆಯಾಮಗಳನ್ನು ಹೆಚ್.ಐ.ವಿ/ಏಡ್ಸ್ ಅಧ್ಯಾಯದಲ್ಲಿ ವಿಶ್ಲೇಷಿಸಿದ್ದೇನೆ.

ಈ ಸಮುದಾಯದ ಬದುಕಿನೊಳಗಿನ ಒಳಸುಳಿಗಳ ಬಗ್ಗೆ ಗಂಭೀರವಾದ ಕಾಳಜಿಯನ್ನು ಎಂದೂ ತೋರಿಸದ ಸರ್ಕಾರ, ಫಂಡಿಂಗ್ ಏಜೆನ್ಸಿಗಳು ಈ ಸಂದರ್ಭದಲ್ಲಿ ಜಾಗತೀಕವಾಗಿ ಅತ್ಯಂತ ಕಳಕಳಿಯನ್ನು ವ್ಯಕ್ತಪಡಿಸಿದ್ದವು. ಸ್ವಯಂಸೇವಾ ಸಂಸ್ಥೆಗಳ ನೆರವಿನೊಂದಿಗೆ ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಕಾರ್ಯಕ್ರಮಗಳು ಲೈಂಗಿಕ ವೃತ್ತಿ ಮಹಿಳೆಯರೊಟ್ಟಿಗೆ ಆರಂಭಗೊಂಡವು. ಈ ಕಾಳಜಿಯ ಹಿಂದಿನ ಆತಂಕ ಲೈಂಗಿಕ ವೃತ್ತಿ ಮಹಿಳೆಯರು ಹೆಚ್.ಐ.ವಿ.ಯನ್ನು ಹರಡುವವರು ಎನ್ನುವ ಪೂರ್ವಾಗ್ರಹದಿಂದ ಕೂಡಿದುದಾಗಿತ್ತು.

ಈ ನಿಟ್ಟಿನಲ್ಲಿ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಲೈಂಗಿಕ ವೃತ್ತಿ ಮಹಿಳಾ ಸಮುದಾಯದತ್ತ ಕಾರ್ಯಕ್ರಮಗಳನ್ನು ಯೋಜಿಸಿದವು. ಇಂತಹುದೇ ಒಂದು ಪ್ರಯತ್ನದ ಭಾಗವಾಗಿ ಲೈಂಗಿಕ ವೃತ್ತಿ ಸಮುದಾಯದ ನಡುವೆ ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಯೋಜನೆಯ ರಾಜ್ಯ ಸಂಯೋಜಕಳಾಗಿ ತೊಡಗಿಸಿಕೊಂಡು ನಡೆಸಿದ ಅಧ್ಯಯನದ ಮತ್ತು ಅನುಭವಗಳು ಈ ವಿಚಾರಗಳನ್ನು ಆಳಕ್ಕಿಳಿದು ವಿಶ್ಲೇಷಿಸಲು ನನಗೆ ನೆರವಾಗಿವೆ.

ಮುಖ್ಯವಾಗಿ ಈ ಯೋಜನೆಯ ಗುರಿ ಹೆಚ್.ಐ.ವಿ ಮತ್ತು ಲೈಂಗಿಕ ರೋಗಗಳ ಹರಡುವಿಕೆ ನಿಯಂತ್ರಣವಾದರೂ ಕೂಡ ಈ ಲೈಂಗಿಕ ವೃತ್ತಿ ಮಹಿಳೆಯನ್ನು ಪರಿಪೂರ್ಣವಾಗಿ ನೋಡಬೇಕು ಎನ್ನುವ ಆಶಯದಿಂದ ಕೂಡಿತ್ತು. ಲೈಂಗಿಕ ವೃತ್ತಿ ಮಹಿಳೆಯರಿಗೆ ಅವರದ್ದೇ ಆದ ಭಾವನಾತ್ಮಕ ಭೌತಿಕ ಅಗತ್ಯಗಳಿವೆ. ಅವರು ಒಂದು ನಿರ್ದಿಷ್ಟವಾದ ಸಾಮಾಜಿಕ, ರಾಜಕೀಯ ಮತ್ತು ತಾತ್ವಿಕ ಸಂದರ್ಭದಲ್ಲಿ ವಾಸ ಮಾಡುತ್ತಿದ್ದಾರೆ. ಇವುಗಳೇ ಅವರ ಜೀವನವನ್ನು, ಅವರ ಆರೋಗ್ಯವನ್ನು ನಿರ್ಧಾರ ಮಾಡುತ್ತಿರುತ್ತವೆ. ಇದನ್ನು ಕೇವಲ ಒಂದುವೃತ್ತಿಯಾಗಿಯಷ್ಟೇ ನೋಡಬಾರದು ಎಂಬುದು ನನ್ನ ಅಭಿಪ್ರಾಯ.

ಈ ಸಮಸ್ಯೆಯ ಪರಿಹಾರಕ್ಕೆ ಲೈಂಗಿಕವೃತ್ತಿ ಮಹಿಳೆಯರಲ್ಲಿ ಸುರಕ್ಷಿತ ಲೈಂಗಿಕಕ್ರಿಯೆ ಬಗ್ಗೆ ಜಾಗೃತಿ ಮೂಡಿಸಿ ಅವರ ಸಂಹವನ ಮತ್ತು ವ್ಯವಹಾರ ಕುದಿರಿಸುವ ಕೌಶಲ್ಯಗಳನ್ನು ಮಾತ್ರ ಉತ್ತಮ ಪಡಿಸಿದರೆ ಸಾಲದು, ಅದಕ್ಕಿಂತ ಮುಖ್ಯವಾಗಿ ಅವಳು ಅವಳನ್ನೇ ಬಹಳ ಪ್ರಮುಖಳು ಎಂದು ಪರಿಗಣಿಸದಿರುವ ಪರಿಸ್ಥಿತಿಯಲ್ಲಿ ಅವಳ ಆರೋಗ್ಯ ಮತ್ತು ಜೀವನಗಳನ್ನು ಕಾಪಾಡಿಕೊಳ್ಳಲು ಕ್ರಮ ತೆಗೆದುಕೊಳ್ಳ ಬಲ್ಲಳು ಎಂದು ಆಯೋಚಿಸುವುದಾದರೂ ಹೇಗೆ?

ಲೈಂಗಿಕ ಮತ್ತು ಲೈಂಗಿಕವೃತ್ತಿ ಮಹಿಳೆಯರ ಜೀವನ ಒಂದು ಸಂಕೀರ್ಣ ಸಾಮಾಜಿಕ ಸಂರಚನೆಯೊಂದಿಗೆ ಅತ್ಯಂತ ಅವಿನಾಭಾವವಾಗಿ ಹೆಣೆಯಲ್ಪಟ್ಟವೆ. ಪ್ರಭಲವಾದಿ ಹಿಡಿತ ಹೊಂದಿರುವ ನಮ್ಮ ಸಾಮಾಜಿಕ ತತ್ವಗಳು ಹಾಗೂ ನಮ್ಮ ನೈತಿಕ ಮೌಲ್ಯಗಳನ್ನು ನಿರ್ಧರಿಸುವ ಸಾಮಾಜಿಕ ಸಂರಚನೆಯಲ್ಲಿ ಲೈಂಗಿಕ ವೃತ್ತಿ ಮಹಿಳೆಯರು ತೊಳಲಾಡುತ್ತಿದ್ದಾರೆ. ಅವರ ಹೀನಾಯ ಬದುಕಿನ ಪರಿಸ್ಥಿತಿಬಗ್ಗೆ ಸಾಮಾಜಿಕ ಕಳಂಕದಿಂದ ನರಳುತ್ತಿರುವ ಬಗ್ಗೆ ಅವರಲ್ಲಿ ಸ್ವಯಂ ಜಾಗೃತಿಯನ್ನು ಉಂಟುಮಾಡಿ ಸಾಮಾಜಿಕ ವಲಯದಲ್ಲಿ ಲೈಂಗಿಕವೃತ್ತಿ ಮಹಿಳೆಯರಿಗೆ ಒಂದು ಅಸ್ತಿತ್ವವನ್ನು ತಂದು ಕೊಡುವ ಪ್ರಯತ್ನಗಳೂ ನಡೆದಿವೆ. ಬೇರಾವುದೇ ವೃತ್ತಿಯಂತೆ ಲೈಂಗಿಕ ವೃತ್ತಿಯೂ ಒಂದು ಕಸುಬು ಮತ್ತು ಇದು ಒಂದು ನೈತಿಕ ಸ್ಥಿತಿಯಲ್ಲ. ಇದು ಈ ಜಗತ್ತಿನ ಅತ್ಯಂತ ಪ್ರಾಚೀನ ವೃತ್ತಿ. ಆಧುನಿಕ ಯುಗದಲ್ಲಿ ಇದು ಅಸ್ತಿತ್ವದಲ್ಲಿದೆ ಎಂದರೆ ಯಾವುದೋ ಒಂದು ಸಾಮಾಜಿಕ ಬೇಡಿಕೆಯನ್ನು ಅದು ನಿರಂತರವಾಗಿ ತಪ್ಪದೆ ಪೂರೈಸುತ್ತಿರುವುದೇ ಅದರ ಮುಂದುವರಿಕೆಗೆ ಒಂದು ಪ್ರಬಲ ಕಾರಣ. ಆದರೆ ವೇಶ್ಯೆಯರನ್ನು ವೃತ್ತಿ ನಿರತ ಮಹಿಳೆಯರ ಒಂದು ಗುಂಪೆಂದು, ಲೈಂಗಿಕ ಸೇವೆಯನ್ನು ಒದಗಿಸುವ ಮೂಲಕ ಅವರ ಜೀವನ ಹೊರೆಯುತ್ತಾರೆಂಬುದನ್ನು ಈ ಸಮಾಜ ಮಾನ್ಯ ಮಾಡುವುದಿಲ್ಲ. ಆದರೆ ಅವರನ್ನು ಸಮಾಜಿಕ ಆರೋಗ್ಯಕ್ಕೆ, ಲೈಂಗಿಕ ನೈತಿಕತೆಗೆ, ಸಾಮಾಜಿಕ ಸ್ಥಿರತೆಗೆ ಮತ್ತು ನಾಗರೀಕರ ವ್ಯವಸ್ಥೆಗೆ ಅಪಾಯವನ್ನೊಡ್ಡುವ ಮಹಿಳಾ ಗುಂಪೆಂದು ಈ ಸಮಾಜ ಪರಿಭಾವಿಸುತ್ತದೆ. ಇಂತಹ ಅವಹೇಳನಕಾರಿ ಚೌಕಟ್ಟಿನೊಳಗೆ ಅವರನ್ನು ಗುರಿಯಾಗಿಸಿಕೊಂಡು ಮೇಲುಗೈ ಹಿಡಿತ ಸಾಧಿಸಿರುವ ಸಾಮಾಜಿಕ ಗುಂಪುಗಳು ಈ ಸಮಾಜದಿಂದ ಇವರನ್ನು ತೊಡೆದುಹಾಕಿ, ಸಮಾಜವನ್ನು ಶುದ್ಧಗೊಳಿಸಿ ಅದನ್ನು ಪವಿತ್ರಗೊಳಿಸುವ ಪರಿಕಲ್ಪನೆಯನ್ನು ಪ್ರಚಲಿತವಾಗಿಟ್ಟಿವೆ. ಅದಕ್ಕಾಗಿಯೇ ಈ ಸಮಾಜ ಈ ಮಹಿಳೆಯರ ಪುನರ್ ವಸತಿ ಬಗ್ಗೆ, ಅವರ ಜೀವನವನ್ನು ಸುಧಾರಿಸುವ ಬಗ್ಗೆ, ಅವರ ಮೇಲೆ ಶಿಸ್ತನ್ನು ಹೇರುವ ಮತ್ತು ನಿಯಂತ್ರಿಸುವ ಪೊಲೀಸ್ ವಿಚಕ್ಷಣೆಗೆ ಗುರಿಪಡಿಸುವ ಬಗ್ಗೆ ಮಾತನಾಡುತ್ತಿದೆ. ಧಾರ್ಮಿಕ ಸಂಸ್ಥೆಗಳೂ ಸಹ ಲೈಂಗಿಕ ವೃತ್ತಿ ಮಹಿಳೆಯರನ್ನು ಸುರಕ್ಷಾ ಗೃಹಗಳಲ್ಲಿಡಿಸುವ ಪ್ರಯತ್ನ ಮಾಡುತ್ತಾರೆ. ಅಭಿವೃದ್ಧಿಯ ಸಂಘಟನೆಗಳು ಲೈಂಗಿಕ ವೃತ್ತಿ ಮಹಿಳೆಯರನ್ನು ಸ್ವಲ್ಪ ಆದಾಯ ಉತ್ಪಾದಿಸುವ ಚಟುವಟಿಕೆಗಳ ಮೂಲಕ ಪುನರ್ ವಸತಿ ಕಲ್ಪಿಸುವ ಪ್ರಯತ್ನಗಳಲ್ಲಿ ತೊಡಗುತ್ತಾರೆ. ಅನೀತಿಯುತ ವ್ಯವಹಾರ ನಿಯಂತ್ರಿಸುವ ನೆಪದಲ್ಲಿ ಪೊಲೀಸರು ಲೈಂಗಿಕವೃತ್ತಿ ಮಹಿಳೆಯರ ಮೇಲೆ ದಾಳಿಗಳನ್ನು ಆಗಾಗ್ಗೆ ನಡೆಸಿ ತಮ್ಮ ವೀರವೇಶವನ್ನು, ಪ್ರತಾಪವನ್ನು ಸಮಾಜದ ಮುಂದೆ ಪ್ರದರ್ಶಿಸುತ್ತಾರೆ. ಆದರೆ ಈ ಯಾವುದೇ ಪ್ರಯತ್ನಗಳೂ ಸಹ ಅವರು 'ಮಾಜಿ ವೇಶ್ಯೆಯರು' ಎಂಬ ಕಳಂಕವನ್ನು ಅಳಿಸುವ ಪ್ರಯತ್ನಗಳಲ್ಲಿ ಯಶಸ್ಸನ್ನು ಕಂಡಿಲ್ಲ. ಇವರನ್ನು ಅತ್ಯಂತ ಕರುಣೆಯಿಂದ, ಅಸಹಾಯಕತೆಯ ಸಂಪನ್ಮೂಲಗಳೇ ಇಲ್ಲದ ದೌರ್ಜನ್ಯಕ್ಕೆ ಗುರಿಯಾದ, ಸಾಮಾಜಿಕವಾಗಿ ಪ್ರತ್ಯೇಕವಾದ ಹೆಣ್ಣು ಮಕ್ಕಳ ಗುಂಪೆಂದು ನಮ್ಮ ಜನಪ್ರಿಯ ಸಾಹಿತ್ಯ, ಮಾಧ್ಯಮ, ಸಿನೇಮಾಗಳು ನಿರಂತರವಾಗಿ ಬಿಂಬಿಸಲು ಪ್ರಯತ್ನಿಸುತ್ತವೆ.

ಲೈಂಗಿಕ ವೃತ್ತಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಬೇರಾವುದೇ ವೃತ್ತಿ ಮಾಡುವ ಕಾರ್ಮಿಕರ ಮೇಲೆ ಖಂಡಿತವಾಗಿಯೂ ನಡೆಯಲಾರದು. ಇದಕ್ಕೆ ಈ ಸಮಾಜ ನೀಡುವ ಕಾರಣ, ಲೈಂಗಿಕ ಸೇವೆಯನ್ನು

ಒದಗಿಸುವ ಕೆಲಸ ನಿಜವಾದ ಕೆಲಸವೇ ಅಲ್ಲ. ಅದು ನೈತಿಕವಾಗಿ ಪಾಪ ಪೂರಿತವಾದದ್ದು. ಲೈಂಗಿಕ ಉದ್ದಿಮೆಯ ಇಡೀ ಸಂರಚನೆ ಮತ್ತು ನಿರ್ವಹಣೆಯನ್ನು ಸಾಮಾಜಿಕ ವ್ಯವಸ್ಥೆ ಮತ್ತು ಲೈಂಗಿಕ ನೀತಿಗಳ ಮುಖವಾಡದಡಿಯಲ್ಲಿ ಅಡಗಿಸಿಡಲಾಗುತ್ತದೆ. ಈ ವೃತ್ತಿಗೆ ಪಾರದರ್ಶಕತೆ/ ಅಧಿಕೃತತೆ ಇಲ್ಲ. ಈ ಲೈಂಗಿಕ ಉದ್ದಿಮೆಯ ಚರ್ಚೆಗೆ ಈ ಸಮಾಜ ಕುರುಡಾಗಿದೆ.

ಮನುಷ್ಯ ಇತರೆ ಆಕಾಂಕ್ಷೆ ಮತ್ತು ಬಯಕೆಗಳಂತೆ ಲೈಂಗಿಕತೆ ಮತ್ತು ಲೈಂಗಿಕ ಅಗತ್ಯಗಳು ಮೂಲಭೂತವಾದ ಮತ್ತು ಅತ್ಯಗತ್ಯವಾದ ಮಾನವೀಯ ಸ್ಥಿತಿಗಳು. ಲೈಂಗಿಕ ವೃತ್ತಿ ಬಗೆಗಿನ ನೈತಿಕ ಮತ್ತು ರಾಜಕೀಯ ಆಲೋಚನೆಗಳು ನಿರ್ದಿಷ್ಟ ಐತಿಹಾಸಿಕ ಸಂದರ್ಭದಲ್ಲಿ ನಿರ್ಮಾಣಗೊಳ್ಳುವ ಸಾಮಾಜಿಕ ಸಂರಚನೆಗಳು. ಲೈಂಗಿಕತೆಯ ತತ್ವಗಳು ಪಿತೃಪ್ರಾಧಾನ್ಯತೆಯ ಸಾಮಾಜಿಕ ಸಂರಚನೆಯಲ್ಲಿ ಬೇರು ಬಿಟ್ಟಿವೆ, ಇಲ್ಲಿ ಬರುವ ಖುಷಿ, ಸಂತೋಷ ಸೌಲಭ್ಯ, ಆತ್ಮೀಯತೆ, ಇವೆಲ್ಲವೂ ವಿಶೇಷ ಅಧಿಕಾರವುಳ್ಳ ಪುರುಷರ ಮರ್ಜಿಯಲ್ಲಿವೆ.

''ಏಕಪತ್ನಿ ಪದ್ಧತಿಯ ಉಗಮದೊಂದಿಗೆ ಸೂಳೆಗಾರಿಕೆ, ಮಹಿಳೆಯ ದ್ರೋಹ(!) ಅನಿವಾರ್ಯವಾಗಿ ಬೆಳೆದು ಬಂದವು. ಸೂಳೆಗಾರಿಕೆ ಗೌರವಾರ್ಹವಾಯಿತು. ಅಥವಾ ಹೆಚ್ಚೆಂದರೆ ಯಾರೂ ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳಬೇಕಾದ ಒಂದು ನಗಣ್ಯ, ನೈತಿಕ ಅನಿಷ್ಟವಾಗಿತ್ತು. ಆದರೆ ಮಹಿಳೆ ಸ್ವೇಚ್ಛಾಚಾರದಿಂದ ಪತಿಗೆ ಬಗೆಯುವ ದ್ರೋಹ ಅಥವಾ ವಿಶ್ವಾಸ ಘಾತವನ್ನು ಒಂದು ಭಯಂಕರ ಅಪರಾಧವೆಂದು ಪರಿಗಣಿಸಲಾಗುತ್ತಿತ್ತು.'' ಎಂದು ಏಂಗೆಲ್ಸ್ ಹೇಳಿದ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಇವತ್ತಿಗೂ ವೇಶ್ಯಾವಾಟಿಕೆ ಸಾಮಾಜಿಕ ಅನಿಷ್ಟವೇ ಆಗಿದೆ. ಹಾಗೆಯೇ ತನ್ನ ಪತ್ನಿಗೆ ದ್ರೋಹಮಾಡಿದನೆಂದು ಯಾವ ವಿಟನಿಗೂ ಹೀಗಳೆಯದ ಈ ಸಮಾಜ ಅವಳಿಗೆ ಮಾತ್ರ 'ಪತಿತೆ' ಪಟ್ಟ ಕಟ್ಟಿಬಿಟ್ಟಿದೆ. ಹಾಗೆಯೇ ಶೀಲವೆಂಬ ಮೌಲ್ಯವನ್ನು ಕೂಡ ಅವಳ ಮೇಲೆ ಹೇರುವುದರ ಮೂಲಕ ಖಾಸಗಿ ಆಸ್ತಿಯ ಭದ್ರತೆ ಹಾಗೂ ಬಯಕೆಯ ಪರಿಕಲ್ಪನೆಯ ಭಾಗವಾಗಿಯೇ ಹೆಣ್ಣನ್ನು ನೋಡಲಾಗುತ್ತಿದೆ. [1]

ಮಹಿಳಾವಾದಿ ಎನ್.ಗಾಯತ್ರಿಯವರ ಅಭಿಪ್ರಾಯದಂತೆ, ''ಊರಿಗೊಂದು ಹೊಲಗೇರಿ ಇರಬೇಕಾದಂತೆ ಸಾಮಾಜಿಕವಾಗಿ ವೇಶ್ಯಾವಾಟಿಕೆಗಳೂ ಅನಿವಾರ್ಯ ಎಂದು ನಂಬಿರುವ ಸಮಾಜದ ಪ್ರತಿಷ್ಠಿತರೂ,ಬುದ್ಧಿಜೀವಿಗಳಿಗೇನೂ ನಮ್ಮಲ್ಲಿ ಕೊರತೆಯಿಲ್ಲ. ತಮ್ಮ ಅಗತ್ಯಕ್ಕಾಗಿ ಸಮಾಜದ ನಿರ್ಧಿಷ್ಟಗುಂಪಿನ ಜನಗಳನ್ನು ಅವರದೇ ಕೆಳಮಟ್ಟದ ಜೀವನದಲ್ಲಿ ಉಳಿಯುವಂತೆ ಮಾಡುವ ಪ್ರತಿಷ್ಠಿತ ಶಕ್ತಿಗಳ ಬೆಂಬಲ ಪಡೆದ ಈ ವೇಶ್ಯಾ ಸಂಸ್ಥೆ ಯಾವುದೇ ಸಮಾಜಕ್ಕೆ ಹುಣ್ಣಿದ್ದಂತೆ, ಈ ಹುಣ್ಣಿನ ಚಿಕಿತ್ಸೆ, ರೋಗಗ್ರಸ್ಥ ಸಮಾಜದ ಚಿಕಿತ್ಸೆ ಒಟ್ಟಾಗಿಯೇ ನಡೆಯಬೇಕು.''[2]

ಎನ್. ಗಾಯತ್ರಿಯವರ ಅಭಿಪ್ರಾಯವನ್ನು ಒಪ್ಪಬೇಕಾದ್ದೆ. ಈ ವೃತ್ತಿಯಿಂದಾಗಿ ನಮ್ಮ ಹೆಣ್ಣು ಮಕ್ಕಳು ಕ್ಷೇಮವಾಗಿದ್ದಾರೆ ಎಂದು ಊರುಗಳಲ್ಲಿನ ಹಂದಿಗಳಿಗೆ ಲೈಂಗಿಕವೃತ್ತಿ ಮಹಿಳೆಯರನ್ನು ಹೋಲಿಸಿದ್ದು ಇದೆ. ಹಾಗೆಂದ ಮಾತ್ರಕ್ಕೆ ಈ ಹುಣ್ಣನ್ನು ಅನುಭವಿಸುತ್ತಿರುವ ಜೀವಿಗಳು ಅದೆಷ್ಟು ನೋವು, ಯಾತನೆ ಬರ್ಭರತೆಯನ್ನು ಅನುಭವಿಸುತ್ತಿವೆ. ಆ ಕೀವು, ಗಾಯಗಳಿಗೆ, ರಕ್ತಸೋರುವಿಕೆಗೆ ದೇಹಗಳು, ಮನಸ್ಸುಗಳು ಕೊಳೆತು ಹೋಗದಂತೆ ಅವರಿಗೊಂದು ತಾತ್ಕಾಲಿಕ ಚಿಕಿತ್ಸೆಯ ಅಗತ್ಯ ಇದೆ ಎಂಬುದು ನನ್ನ ಅಭಿಪ್ರಾಯ. ರೋಗಗ್ರಸ್ಥ ಸಮಾಜದ ಚಿಕಿತ್ಸೆಗೆ ಅಣಿನೆರೆಸುವ ದೀರ್ಘಕಾಲಿಕ ಪ್ರಕ್ರಿಯೆಗಳಲ್ಲಿ ಈ ದೌರ್ಜನ್ಯಕ್ಕೊಳಗಾದ ಅತಿ ಶೋಷಿತರನ್ನು ಗಮನಿಸಬೇಕಾದ ಅಗತ್ಯವಿದೆ.

ಹಾಗೆಂದ ಮಾತ್ರಕ್ಕೆ ಗಾಂಧೀಜಿಯವರಂತಹ ಅಥವಾ ವಿವೇಕಾನಂದರಂತಹ ಧಾರ್ಮಿಕತೆಯ ಒಳಸುಳಿಗಳ ಮೂಲಕವೇ ಉಸಿರಾಡುವಂತಹ ಸುಧಾರಕರುಗಳಿಂದ ಈ ಪ್ರಕ್ರಿಯೆ ಖಂಡಿತಾ ಸಾಧ್ಯವಿಲ್ಲ.

ಒಮ್ಮೆ ಗಾಂಧೀಜಿಯವರನ್ನು ಮಹಿಳೆಯೊಬ್ಬಳು ಅತ್ಯಾಚಾರದ ಸಮಸ್ಯೆಗೆ ಪರಿಹಾರವೇನೆಂದು ಕೇಳಿದಾಗ, ಗಾಂಧೀಜಿ 'ಹರಿಜನ್' ಪತ್ರಿಕೆಯಲ್ಲಿ ನೀಡಿದ ಉತ್ತರ ಕುತೂಹಲಕಾರಿಯಾದುದು.

"ಮಹಿಳೆಯರು ಪಟ್ಟಣಗಳನ್ನು ಬಿಟ್ಟು ಹಳ್ಳಿಗೆ ಹೋಗಲಿ. ಅಲ್ಲಿ ಅವರು ಸೇವೆ ಮಾಡಲು ಬೇಕಾದಷ್ಟು ಕಾರ್ಯಕ್ಷೇತ್ರಗಳಿವೆ. ಪಟ್ಟಣಗಳಿಗೆ ಹೋಲಿಸಿದರೆ ಹಳ್ಳಿಗಳಲ್ಲಿ ಅತ್ಯಾಚಾರಕ್ಕೊಳಗಾಗುವ ಭೀತಿಯಿಲ್ಲ... ಮಹಿಳೆಯರು ಧೈರ್ಯಶಾಲಿಗಳಾಗಿರಬೇಕು. ತಮ್ಮ ಪಾವಿತ್ರ್ಯವೇ ತಮ್ಮನ್ನು ಕಾಪಾಡಬಲ್ಲುದೆಂದು ಕೊಳ್ಳುವ ಮಹಿಳೆಯರೆಂದಿಗೂ ಗೌರವಿಸಲ್ಪಡುತ್ತಾರೆ. ಈ ಆಧುನಿಕ ಕಾಲದಲ್ಲಿಯೂ ಮಹಿಳೆಯರು ತಮ್ಮನ್ನು ಪಾವಿತ್ರ್ಯದಿಂದ ರಕ್ಷಿಸಿಕೊಂಡಿರುವ ನಿದರ್ಶನಗಳು ಹಲವಾರಿವೆ."[3]

ಹಳ್ಳಿಗಳೇ ಭಾರತದ ಉಸಿರು ಎಂದು ನಂಬಿದ್ದ ಗಾಂಧೀಜಿಯವರ ಈ ಮಾತುಗಳು ಹಳ್ಳಿಗಳನ್ನು ಮಹಿಳೆಯರ ದೃಷ್ಟಿಯಲ್ಲಿ ಅರ್ಥ ಮಾಡಿಕೊಂಡಿದ್ದರ ಪರಿಪೂರ್ಣತೆಯ ಬಗ್ಗೆಯೇ ನನಗೆ ಗುಮಾನಿಯಾಗುತ್ತದೆ ಅಥವಾ ಮನುವಿನ, 'ಬೀಜ ಕ್ಷೇತ್ರ' ನ್ಯಾಯವೋ, 'ಬ್ರಹ್ಮ-ಮಾಯಾ' ಮಾದರಿಯೋ, 'ಪುರುಷ-ಪ್ರಕೃತಿ' ನಿಯಮವೋ ಗಾಂಧೀಜಿಯವರನ್ನು ಆಳುತ್ತಿದ್ದುದರಿಂದಲೇ ಅವರೂ ಕೂಡ ಅದನ್ನು ಮೀರಿ ವೈಶಾಲ್ಯತೆ ಮೆರೆಯುವಲ್ಲಿ ಸೋತಿದ್ದಾರೆ. ಏಕೆಂದರೆ ಆ ಅತ್ಯಾಚಾರದ ಪ್ರಶ್ನೆಯ ಕೇಂದ್ರ ವ್ಯಕ್ತಿ ಅತ್ಯಾಚಾರಕ್ಕೊಳಗಾಗಿದ್ದ 'ಅನುಸೂಯಮ್ಮ' ಕುಗ್ರಾಮದವಳು. ನೂರಾರು ಭೂಮಾಲೀಕರ, ಶ್ರೀಮಂತರ, ಧರ್ಮಾಂಧಗುರುಗಳ ಕಪಿಮುಷ್ಟಿಗಳಿಗೆ ಬಲಿಯಾಗಿ ಅದೆಷ್ಟು ಮಹಿಳೆಯರು ಗ್ರಾಮಾಂತರ ಪ್ರದೇಶಗಳಲ್ಲಿ ದಿನನಿತ್ಯ ಅತ್ಯಾಚಾರಕ್ಕೊಳಗಾಗುತ್ತಿದ್ದರು ಹಾಗೂ ಅವೆಲ್ಲವೂ ಅತ್ಯಾಚಾರಕ್ಕೊಳಗಾದವರ ಎದೆಯೊಳಗೇ ಉಸಿರುಗಟ್ಟಿದ್ದವು ಎಂಬ ಸೂಕ್ಷ್ಮತೆಯನ್ನು ಗಾಂಧೀಜಿಯವರು ಅರಿಯದವರಾಗಿದ್ದಾರೆ.

ಏಕೆ ನಾನು ಈ ಪ್ರಶ್ನೆಯೆತ್ತಿದ್ದೇನೆಂದರೆ ಅಂದಿನ ಕಾಲಘಟ್ಟದಲ್ಲಿಯೇ 'ಇಂಡಿಯನ್ ಹೌಸ್ ವೈಫ್ ಫೆಡರೇಷನ್'ರವರು ಮಾಡಿದ ಸಮೀಕ್ಷೆಯ ಪ್ರಕಾರ ಸುಮಾರು ಶೇಕಡ 80 ರಷ್ಟು ವೇಶ್ಯಾವೃತ್ತಿಗೆ ಇಳಿದವರು ಮೊದಲು ಅತ್ಯಾಚಾರದ ಬಲಿಪಶುಗಳಾದವರೇ ಆಗಿರುತ್ತಿದ್ದರು.

'ಪಾವಿತ್ರ್ಯತೆ'ಯನ್ನು ಮಹಿಳೆಯೆಂಬ ವ್ಯಕ್ತಿತ್ವಕ್ಕೆ ಭದ್ರಕೋಟೆಯಂತೆ ಪರಿಭಾವಿಸುವ ಯಾರೂ ಕೂಡ ಆ ವಿಚಾರವನ್ನು ಪ್ರಾಮಾಣಿಕವಾಗಿ ವಿಶ್ಲೇಷಿಸಲಾರರು.

ಹಾಗೇ ಇನ್ನೊಂದು ಅತಿರೇಕದ ಉದಾಹರಣೆ ಎಂದರೆ ವಿವೇಕಾನಂದರ 'ಮಾತೃತ್ವ' ಕಲ್ಪನೆ. ಜನವರಿ.೧೮.೧೯೦೦ ರಂದು ಕ್ಯಾಲಿಫೋರ್ನಿಯಾದಲ್ಲಿ ತಾವು ನೀಡಿದ ಉಪನ್ಯಾಸದಲ್ಲಿ ವಿದೇಶೀ ಮಹಿಳೆಯರನ್ನು ತರಾಟೆಗೆ ತೆಗೆದುಕೊಳ್ಳುತ್ತಾ ಭರತ ಖಂಡದಲ್ಲಿ ಆದರ್ಶ ಮಹಿಳೆ ತಾಯಿ. ಮಹಿಳೆ ಮೊದಲು ತಾಯಿ, ಅನಂತರವೂ ತಾಯಿಯೇ, ಹಿಂದೂ ಮನಸ್ಸಿನಲ್ಲಿ ಮಹಿಳೆ ಎಂಬ ಶಬ್ದ 'ತಾಯಿತನವನ್ನು' ನೆನಪಿಗೆ ತರುವುದು. ದೇವರನ್ನು 'ತಾಯಿ' ಎಂದು ಕರೆಯುವರು...'' ಹೀಗೆ ಮುಂದುವರಿಯುತ್ತದೆ ಅವರ ಪ್ರವಚನ; ವಿದೇಶದಲ್ಲಿ ಪ್ರವಚನ ಕೊಟ್ಟಿದ್ದರಿಂದ ಸರಿಯಾಯಿತು. ಆದರೆ ಅದೇ ಪ್ರವಚನ ಭಾರತದಲ್ಲಾಗಿದ್ದರೆ ಅದೆಷ್ಟು ಧರ್ಮಾಧಿಕಾರಿಗಳೂ, ಹಿಂದೂ ಪ್ರವರ್ತಕರುಗಳು ಹೆಣ್ಣುಮಕ್ಕಳನ್ನು ಕಾಮಕೇಳಿಗೆ ಒತ್ತಾಯಿಸಿ, ಕತ್ತಲಲ್ಲಿಯೇ ಅತ್ಯಾಚಾರಗಳನ್ನು ಮಾಡಿ ಧನಿ ಅಡಗಿಸಿದ್ದವರ ಉದಾಹರಣೆಗಳನ್ನು ಹೇಳಬಹುದಿತ್ತು. ಅಥವಾ ಬದುಕಿದ್ದಾಗ ತನ್ನ ಪತಿಗೆ ಗುಲಾಮಳಾಗಿದ್ದು ಸಾಲದೆಂಬಂತೆ ಸತ್ತನಂತರವೂ ಪತಿಯ ಸೇವೆಗೆ 'ಜೀವಂತ'ವಾಗಿ ಕೈಕಾಲು ಕಟ್ಟಿ ಸುಡುತ್ತಿದ್ದ ಧರ್ಮಾಂಧರ ಬಗ್ಗೆ ಕೇಳಬಹುದಾಗಿತ್ತು. ಇದೇ ಭರತಖಂಡದ ಪುಣ್ಯ ಭೂಮಿಯಲ್ಲಿ ಲಕ್ಷಾಂತರ ಹೆಣ್ಣು ಭ್ರೂಣ ಹತ್ಯೆಯು ಬದುಕನ್ನು ಕಟ್ಟುವ ನಿಟ್ಟಿನಲ್ಲಿ ಸಮಪಾಲುದಾರಳಾದ ಒಂದು ಸಮುದಾಯವನ್ನೇ ನಿರ್ನಾಮ ಮಾಡುವಂತಹ ಅಂಧಕಾರದ ಬಗ್ಗೆ ಪ್ರಶ್ನಿಸಬಹುದಿತ್ತು.

''ವೇಶ್ಯಾವೃತ್ತಿಯ ಬಗೆಗೆ ಎಷ್ಟೇ ಪ್ರಮಾಣದ 'ನೈತಿಕ ರೋಷಾವೇಶಗಳೂ' (ನೂರಕ್ಕೆ ತೊಬಂತ್ತೊಂಭತ್ತು ಪ್ರಸಂಗಗಳು ಸೋಗಿನವು) ಈ ಸ್ತ್ರೀ ದೇಹವಿಕ್ರಯದ ವಿರುದ್ಧ ಏನೂ ಮಾಡಲಾರವು; ಕೂಲಿ ಗುಲಾಮಗಿರಿ ಇರುವವರೆಗೂ ವೇಶ್ಯಾವೃತ್ತಿಯೂ ಅನಿವಾರ್ಯವಾಗಿ ಇರುವುದು. ಈ ವಿಷಯಕ್ಕೆ ಸಂಬಂಧಿಸಿ ಗುಲಾಮಿ ಪದ್ಧತಿಯೂ, ಸಾಮಂತ ಶಾಹಿ ವ್ಯವಸ್ಥೆಯೂ, ಬಂಡವಾಳವಾದವೂ ಒಂದೇ ರೀತಿಯಾದವು. ಬದಲಾಗುವುದು ಶೋಷಣೆಯ ರೂಪವಷ್ಟೇ. ಶೋಷಣೆಯಂತೂ ಉಳಿದೇ ಇರುತ್ತದೆ.'' ಎಂಬ ಲೆನಿನ್‌ರವರ ಅಭಿಪ್ರಾಯ ನೂರಕ್ಕೆ ನೂರರಷ್ಟು ಸತ್ಯವೆನಿಸುತ್ತದೆ.

ಈ 'ಲೈಂಗಿಕ ವೃತ್ತಿ ನಿರತ' ಸಮುದಾಯವು ತನ್ನನ್ನು ಒಗ್ಗೂಡಿಸಿಕೊಳ್ಳುವಿಕೆಯ ಮಹತ್ವ, ಪಾತ್ರ, ಮತ್ತು ಮೌಲ್ಯಗಳ ಎಳೆಗಳನ್ನು ಗುರುತಿಸುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಿರುತ್ತೇನೆ. ಹಾಗೂ ಬಹಳ ಮುಖ್ಯವಾಗಿ ಪ್ರಾಚೀನ ಬುಡಕಟ್ಟುಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಕಾಲಘಟ್ಟಗಳಲ್ಲಿಯೂ ಈ ವೃತ್ತಿ ಜೀವಂತವಾಗಿದೆ. ಹಾಗಿದ್ದರೆ 'ವೇಶ್ಯಾವಾಟಿಕೆ'ಯ ಪರಿಕಲ್ಪನೆಯೇ ಇಲ್ಲದಿದ್ದ ಆ ಒಂದು ವ್ಯವಸ್ಥೆಯೊಳಗಿನ

ಯಾವ ಎಳೆ ಈ ವಿಚಾರಕ್ಕೆ ಮಾನವೀಯತೆಯ ಮುಖವನ್ನು ತಂದುಕೊಡಬಹುದು ಎಂಬ ಹುಡುಕಾಟದ ಪ್ರಯತ್ನವೂ ನನ್ನದಾಗಿದೆ.

ಹಳೇ ಬುಡಕಟ್ಟುಗಳ ಬೇರುಗಳು ಅಥವಾ ಆಧುನಿಕ ಬುಡಕಟ್ಟುಗಳ ಪುನರುಜ್ಜೀವನದ ಹಾದಿಯಲ್ಲಿ ಮತ್ತು ಬುಡಕಟ್ಟು ಸಂಸ್ಕೃತಿಯ ಸುಳಿಯಲ್ಲಿ ಇದನ್ನು ಹೇಗೆ ಕಂಡುಕೊಳ್ಳಬಹುದು ಎಂಬ ಪ್ರಾಮಾಣಿಕ ಹುಡುಕಾಟವೂ ಇದಾಗಿದೆ. ಡೆಸ್ಮಂಡ್ ಮಾರಿಸ್‌ನ 'ಆಧುನಿಕ ಬುಡಕಟ್ಟುಗಳ' ಪರಿಕಲ್ಪನೆಯೊಂದಿಗೆ, ಈ ಸಮುದಾಯದೊಳಗಿರುವ Tribe Element ಗಳೊಂದಿಗೆ ಆಧುನಿಕ ಬುಡಕಟ್ಟಾಗಿ ಈ ವೇಶ್ಯಾವೃತ್ತಿ ಸಮುದಾಯವನ್ನು ಪರಿಗಣಿಸಬಾರದೇಕೆ? ಎಂಬ ಹುಡುಕಾಟವನ್ನು ಈ ಅಧ್ಯಯನದಲ್ಲಿ ಮಾಡಲು ಪ್ರಯತ್ನಿಸುತ್ತಿದ್ದೇನೆ.

ಈ ಆಧಾರದಲ್ಲಿ ನಾನಿಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯ ಬಗ್ಗೆ ಪ್ರವೇಶಿಸುವ ಮೊದಲು ನಾನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಲೈಂಗಿಕವೃತ್ತಿ ಸಮುದಾಯದ ಬಗ್ಗೆ ಸ್ಪಷ್ಟಪಡಿಸಲು ಬಯಸುತ್ತೇನೆ. ವೇಶ್ಯಾವೃತ್ತಿಯಲ್ಲಿ ಅನೇಕ ಬಗೆಗಳಿದ್ದು, ಅವುಗಳಲ್ಲಿ ಮುಖ್ಯವಾದವೆಂದರೆ;

೧. **ಧಾರ್ಮಿಕ ವೇಶ್ಯಾವೃತ್ತಿ**

೨. **ಸಾಮಾಜಿಕ ವೇಶ್ಯಾವೃತ್ತಿ**

೩. **ಆಧುನಿಕ ವೇಶ್ಯಾವೃತ್ತಿ**

೪. **ವಿಲಾಸಿ ವೇಶ್ಯಾವೃತ್ತಿ**

ಈ ಅಧ್ಯಯನದಲ್ಲಿ ಸಾಮಾಜಿಕ ವೇಶ್ಯಾವೃತ್ತಿ ಹಾಗೂ ಅದರ ಪರಿಧಿಯಲ್ಲಿಯೇ ಬರುವ 'ಆಧುನಿಕ 'ವೇಶ್ಯಾವೃತ್ತಿ'ಯ ಬಗ್ಗೆ ಹೆಚ್ಚು ಮಹತ್ವ ಕೊಟ್ಟಿದ್ದೇನೆ. ಮೊದಲನೆಯದಾಗಿ ಸಾಮಾಜಿಕ ವೇಶ್ಯಾವಾಟಿಕೆಯ ಬಗೆಗೆ ಕರ್ನಾಟಕದಲ್ಲಿ ನಡೆದ ಅಧ್ಯಯನಗಳು ಬಹಳ ಗೌಣ. ಅಷ್ಟೇಕೆ ಇಲ್ಲವೆಂದೇ ಹೇಳಬಹುದು. ಈ ನಿಟ್ಟಿನಲ್ಲಿ ಕೆಲವು ಪತ್ರಕರ್ತರು ಬರಹಗಾರರು ಸ್ವಲ್ಪ ಪ್ರಯತ್ನ ನಡೆಸಿರುವುದನ್ನು ಹೊರತುಪಡಿಸಿದರೆ ಆಳವಾದ ಅಧ್ಯಯನ ಸಾಮಾಜಿಕ ವೇಶ್ಯಾವಾಟಿಕೆಯ ಮೇಲೆ ನಡೆದಿಲ್ಲ. ಅದಕ್ಕಿಂತಲೂ ಮುಖ್ಯವಾಗಿ ನನ್ನ ಕಾರ್ಯಕ್ಷೇತ್ರದ ಈ ಹಿಂದಿನ ಅನುಭವಗಳು ದಟ್ಟೈಸಿರುವುದೇ ಸಾಮಾಜಿಕ ವೇಶ್ಯಾವಾಟಿಕೆಯ ಬಗ್ಗೆ.

ಇನ್ನು 'ಧಾರ್ಮಿಕ ವೇಶ್ಯಾವೃತ್ತಿ' ಯ ಬಗ್ಗೆ ಸಾಕಷ್ಟು ಅಧ್ಯಯನಗಳು ಈಗಾಗಲೇ ನಡೆದಿವೆ. ಅದರಲ್ಲೂ ಕನ್ನಡ ವಿ.ವಿ.ಯಿಂದಲೇ ನಡೆದಿರುವ ಅಧ್ಯಯನಗಳು ಗಮನಾರ್ಹವಾಗಿವೆ. ನನ್ನ ಅಧ್ಯಯನದಲ್ಲಿ 'ಧಾರ್ಮಿಕ ವೇಶ್ಯಾವೃತ್ತಿ' ಯನ್ನು ಉಲ್ಲೇಖಿಸಿ ವಿಶ್ಲೇಷಿಸಲಿದ್ದೇನಾದರೂ ಇತ್ತೀಚೆಗೆ ಈ ವೃತ್ತಿ ಆಧುನಿಕತೆಗೆ ಹೇಗೆ ತನ್ನನ್ನು ತೆರೆದುಕೊಳ್ಳುತ್ತಿದೆ, ಆದರ ಚೌಕಟ್ಟುಗಳನ್ನು ಮೀರಿ ಹೇಗೆ ಹೊರ ಚೆಲ್ಲಿದೆ ಎಂಬುದನ್ನು ಪ್ರಮುಖವಾಗಿ ವಿಶ್ಲೇಷಿಸಿದ್ದೇನೆ.

ಇನ್ನು 'ವಿಲಾಸೀ ವೇಶ್ಯಾವೃತ್ತಿ' ಈಗಿನ ವಿಲಾಸೀ ವೇಶ್ಯಾವೃತ್ತಿಯು ಆಧುನಿಕ ವೇಶ್ಯಾವೃತ್ತಿಗೆ ನಿಲುಕುವುದರಿಂದ ಅಲ್ಲಿಯೇ ಅದನ್ನು ತೆರೆದಿಡಲು ಪ್ರಯತ್ನಿಸಿದ್ದೇನೆ. ಆದರೂ ಗೌಪ್ಯವಾಗಿ ನಡೆಯುವ ವೇಶ್ಯಾವೃತ್ತಿಯನ್ನು ಅಧ್ಯಯನ ನಡೆಸಲು ಪರಿಮಿತಿಗಳು ಅಡ್ಡಿಯಾಗುತ್ತವೆಯಾದ್ದರಿಂದ ಆ ಬಗ್ಗೆ ನಾನಿಲ್ಲಿ ಹೆಚ್ಚೇನನ್ನೂ ವಿಶ್ಲೇಷಿಸಲು ಪ್ರಯತ್ನಿಸಿಲ್ಲ.

ಅಧ್ಯಯನದ ಭೌಗೋಳಿಕ ವ್ಯಾಪ್ತಿ:

ಅಧ್ಯಯನಕ್ಕೆ ಕರ್ನಾಟಕವನ್ನು ಪರಿಧಿಯನ್ನಾಗಿ ಇಟ್ಟುಕೊಳ್ಳಲಾಗಿದೆ. ಆದರೆ ಅಧ್ಯಯನದ ವಿಷಯ ವ್ಯಾಪ್ತಿಯು ಬಹಳ ವ್ಯಾಪಕವಾಗಿರುವುದರಿಂದ ಭಾರತದ ಹಾಗೂ ಜಾಗತಿಕವಾಗಿಯೂ ಕಣ್ಣೋಟ ಹರಿಸಲಾಗಿದೆ. ಭಾರತದ ಅನೇಕ ರಾಜ್ಯಗಳು, ಮಹಾನಗರಗಳಲ್ಲಿಯ ವೇಶ್ಯವಾಟಿಕೆಯ ಒಳಸುಳಿಗಳನ್ನು ಕೂಡ ಅಧ್ಯಯನದಲ್ಲಿ ಪರಿಗಣಿಸಲಾಗಿದೆ.

ಅಧ್ಯಯನದ ವಿಧಾನ:

ಒಂದು ಚಿಕ್ಕ ಗ್ರಾಮದ ಅತಿ ಸಂಪ್ರದಾಯಸ್ಥ ಕುಟುಂಬದ ಹಿನ್ನಲೆಯಿಂದ ವಿದ್ಯಾಭ್ಯಾಸಕ್ಕೆಂದು ಬಂದ ನಾನು ಬೆಂಗಳೂರಿನಂತಹ ಮಾಯಾನಗರಿಯ ತೆಕ್ಕೆಗೆ ಬಿದ್ದು ಒಂದು ಉದ್ಯೋಗದ ಹುಡುಕಾಟ ಆರಂಭಸಿದಾಗ ಆಕಸ್ಮಿಕವಾಗಿ ಹೆಚ್.ಐ.ವಿ./ಏಡ್ಸ್ ನಿಯಂತ್ರಣದ ರಾಜ್ಯ ಸಂಯೋಜಕಳಾಗಿ ಲೈಂಗಿಕವೃತ್ತಿ ಸಮುದಾಯದ ನಿಕಟ ಸಂಪರ್ಕ ಬೆಳೆಸಿದೆ. ಅದನ್ನು ಹತ್ತಿರದಿಂದ ಕಂಡ ನಂತರವೇ ಆ ಬದುಕುಗಳ ವಿರಾಟ್‌ಸ್ವರೂಪ ತೆರೆದುಕೊಂಡಿತು. ಅದರೊಂದಿಗೇ ಶತಶತಮಾನಗಳಿಂದ ಅನೂಚಾನವಾಗಿ ಈ ಸಮಾಜದೊಂದಿಗೇ ನಡೆದು ಬರುತ್ತಿರುವ 'ವೇಶ್ಯಾವೃತ್ತಿ'ಯ ಬಗ್ಗೆ ಸಾವಿರ ಪ್ರಶ್ನೆಗಳು ನನ್ನನ್ನು ಕಟಕಿಯಾಡತೊಡಗಿದವು. ಸುಮಾರು ಹತ್ತು ವರ್ಷಗಳ ಕಾಲ ಲೈಂಗಿಕವೃತ್ತಿ ಮಹಿಳಾ ಸಮುದಾಯ ಮತ್ತು ವೇಶ್ಯಾವಾಟಿಕೆಯಂತಹ ಒಂದು ಸಾಂಸ್ಥಿಕ ಸ್ವರೂಪದ ಸುತ್ತಲಿನ ವ್ಯವಸ್ಥೆಯ ಒಡನಾಟ ನನಗೆ ಅಪಾರ ಅನುಭವ ತಂದುಕೊಟ್ಟಿತು. ತುಂಬಾ ಹತ್ತಿರದಿಂದ ಆ ಬದುಕುಗಳ ವಿವಿಧ ಮಜಲುಗಳನ್ನು ಬಹಳ ಸೂಕ್ಷ್ಮವಾಗಿ ನೋಡಲು ಸಾಧ್ಯವಾಯಿತು. ಹಾಗಾಗಿ ಮಹಾಪ್ರಬಂಧ ಬರೆಯುವುದಕ್ಕಾಗಿ ಮಾತ್ರ ನಾನು ಸಮುದಾಯದ ಪರಿಚಯ ಮಾಡಿಕೊಂಡಿಲ್ಲ. ದೀರ್ಘಕಾಲದ ಒಡನಾಟದ ದಟ್ಟ ಅನುಭವದೊಂದಿಗೆ ಅಧ್ಯಯನ ಕೈಗೊಂಡಿದ್ದೇನೆ. ಆದ್ದರಿಂದಲೇ ನನ್ನ ಬರವಣಿಗೆ ಶೈಲಿಯನ್ನು ಅಕಾಡೆಮಿಕ್ ಶೈಲಿಯಲ್ಲಿ ನಿರೂಪಿಸಲು ನನಗೆ ಬಹಳ ಕಡೆ ಸಾಧ್ಯವಾಗಿಲ್ಲದಿರಬಹುದು. ಕೆಲವು ಕಡೆ ಸೃಜನಶೀಲ ಹಾಗೂ ಕೆಲವು ಕಡೆ ವರದಿ ರೂಪದ ಬರವಣಿಗೆ ವಿಧಾನವನ್ನು ನಾನಿಲ್ಲಿ ಬಳಸಿಕೊಂಡಿದ್ದೇನೆ. ಆ ಸಮುದಾಯದೊಂದಿಗೆ ಮಾತಾಡಿದ್ದೇನೆ. ಅವರ ದುಃಖ-ದುಮ್ಮಾನಗಳಲ್ಲಿ ಭಾಗಿಯಾಗಿದ್ದೇನೆ. ಅವರ ಸಂತಸದ ಕ್ಷಣಗಳಲ್ಲಿ ಒಡನಾಡಿಯಾಗಿದ್ದೇನೆ. ಅವರೊಂದಿಗೆ ದೇಶದಾದ್ಯಂತ ಪ್ರವಾಸ ಮಾಡಿದ್ದೇನೆ. ಅನೇಕ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಮಾವೇಶಗಳಲ್ಲಿ ಅವರೊಂದಿಗೆ ಭಾಗವಹಿಸಿದ್ದೇನೆ. ಹಾಗೆಯೇ ಅವರ ಸಮಾವೇಶಗಳನ್ನು ಸಂಘಟಿಸಿದ್ದೇನೆ.

ರಾಜ್ಯದಾದ್ಯಂತ ಲೈಂಗಿಕವೃತ್ತಿ ಮಹಿಳಾ ಸಮುದಾಯವನ್ನು ಒಗ್ಗೂಡಿಸುವ ಪ್ರಯತ್ನವಲ್ಲದೆ ಅವರ ಮಕ್ಕಳ ಪುನರ್ವಸತಿ ಪ್ರಯತ್ನವನ್ನು ಅವರೊಂದಿಗೆ ಮಾಡಿದ್ದೇನೆ. ಹಾಗಾಗಿಯೇ ಈ ಅಧ್ಯಯನದಲ್ಲಿ ಸೃಜನಶೀಲ ಬರವಣಿಗೆ ಅಗತ್ಯವಾಗಿದೆ. ಇಲ್ಲಿ ಮುಖ್ಯವಾಗಿ ಅವರೊಡನೆ ಮಾತನಾಡಿ, ಸಂದರ್ಶಿಸಿ, ಅಂಕಿಅಂಶಗಳನ್ನು ಬಳಸಿ, ಅನುಭವಗಳನ್ನು ನಿರೂಪಿಸಿ, ಅವರ ಜೀವನ ಕಥೆಗಳನ್ನು ಇಲ್ಲಿ ಪ್ರಸ್ತಾಪಿಸಿರುತ್ತೇನೆ. ಈ ವ್ಯವಸ್ಥೆಯಲ್ಲಿನ ಧರ್ಮಗಳು, ಪ್ರಾಚೀನತೆಗಳು, ಸಂಸ್ಕೃತಿ, ಶಾಸನಗಳು, ವಾಸ್ತವತೆಯ ಕಟುಸತ್ಯಗಳು, ಬದುಕಿನ ಶೈಲಿ, ನಡವಳಿಕೆಗಳನ್ನು ಅಭ್ಯಸಿಸಿ ವಿಶ್ಲೇಷಿಸಿರುತ್ತೇನೆ.

ಭಾರತದಂತಹ ವ್ಯವಸ್ಥೆಯಲ್ಲಿನ ಹೆಣ್ಣಿನ ಸ್ಥಾನಮಾನಗಳು, ಅವಳ ಪಾತ್ರಗಳನ್ನು ವಿಶ್ಲೇಷಿಸಲು ಈ ವ್ಯವಸ್ಥೆಯಲ್ಲಿನ ಬೇರುಗಳನ್ನು ಅರ್ಥೈಸಿಕೊಳ್ಳಲು ಭಾರತದಲ್ಲಿನ ಕೆಲವು ಪ್ರಮುಖರ ಅಭಿವ್ಯಕ್ತಿಗಳನ್ನು, ನಿಲುವುಗಳನ್ನು ಅಲ್ಲಲ್ಲಿ ಆಯ್ಕೆ ಮಾಡಿಕೊಂಡಿದ್ದೇನೆ. ಇದರಲ್ಲಿ ಕೆಲವುಗಳು ಸಕಾರಾತ್ಮಕವಾಗಿಯೂ, ಕೆಲವು ಈ ವ್ಯವಸ್ಥೆಯ ಪ್ರತಿಪಾದಕರಾಗಿಯೂ, ನಕಾರಾತ್ಮಕವಾಗಿಯೂ ಹಾಗೂ ಕೆಲವು ಕ್ರಾಂತಿಕಾರಿ ಆಶಯಗಳಾಗಿ ಹೆಣ್ಣನ್ನು ರೂಪಿಸುವಲ್ಲಿ ಪಾತ್ರವಹಿಸಿವೆ. ಅವರಲ್ಲಿ ಬಹಳ ಮುಖ್ಯವಾಗಿ ಮಹಾತ್ಮ ಗಾಂಧೀಜಿ, ವಿವೇಕಾನಂದ, ಬುದ್ಧ, ಮಹಾವೀರ, ಪೆರಿಯಾರ್, ಮುಂತಾದವರುಗಳ ಅಭಿಪ್ರಾಯಗಳನ್ನು ಮತ್ತು ಈ ಸಮಾಜದ ಮೇಲೆ ಪ್ರಭಾವ ಬೀರಿರುವ ಕೆಲವು ಪ್ರಮುಖ ಧರ್ಮಗಳನ್ನು ತಾತ್ವಿಕವಾಗಿ, ಜಾಗತಿಕವಾಗಿ ಲೆನಿನ್, ಏಂಗೆಲ್ಸ್ ನಿಲುವುಗಳ ಮೂಲಕವೂ ಮಹಿಳೆಯ ಅದರಲ್ಲೂ ಲೈಂಗಿಕವೃತ್ತಿ ಮಹಿಳೆಯನ್ನು ಸ್ಪಷ್ಟಪಡಿಸುವ ಪ್ರಯತ್ನ ಮಾಡಿರುತ್ತೇನೆ. ಹಾಗೆ ನೋಡಿದರೆ ಇದೊಂದು ಪ್ರಥಮ ಪ್ರಯತ್ನವಾಗಿದ್ದು ಈ ನಿಟ್ಟಿನಲ್ಲಿ ಕನ್ನಡದಲ್ಲಿ ಅಥವಾ ಇನ್ನಾವುದೇ ಭಾರತೀಯ ಭಾಷೆಯಲ್ಲಿ ಇಂಥ ಅಧ್ಯಯನಗಳು ನಡೆದಿಲ್ಲ. ಹಾಗಾಗಿ ನನಗೆ ಯಾವುದೇ ಮಾದರಿಗಳು ಸಿಕ್ಕಿಲ್ಲ. ಈ ದೃಷ್ಟಿಯಿಂದ ನನ್ನ ಅಧ್ಯಯನಕ್ಕೆ ಪೂರಕವಾದ ಅಧ್ಯಯನಗಳಿಲ್ಲದಿರುವುದರಿಂದ ನನ್ನದೇ ಆದ ಪರಿಚಯಾತ್ಮಕ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನ ವಿಧಾನವನ್ನು ಬಳಸುವ ಪ್ರಯತ್ನ ಮಾಡಿದ್ದೇನೆ. ವಿಷಯ ಕೂಡ ಅತ್ಯಂತ ಜಟಿಲವಾಗಿರುವುದರಿಂದ ಸಂದರ್ಭ ಸಿಕ್ಕಿದಾಗ ಪತ್ರಿಕಾ ವರದಿಯ ಹಾಗೂ ಸೃಜನಶೀಲ ಕಥನದ ಹಾದಿಯನ್ನು ತುಳಿಯುವುದು ಅನಿವಾರ್ಯವಾಗಿದೆ ಎಂಬುದನ್ನು ಮೊದಲೇ ಸ್ಪಷ್ಟಪಡಿಸಬಯಸುತ್ತೇನೆ.

ಅಧ್ಯಯನದ ಆಶಯ:

ಈಗಾಗಲೇ ನಾನು ವಿವರಿಸಿರುವಂತೆ ಹಲವಾರು ಪ್ರಶ್ನೆಗಳು 'ವೇಶ್ಯಾವಾಟಿಕೆ' 'ವೇಶ್ಯಾವೃತ್ತಿ'ಯ ಬಗ್ಗೆ ಜೀವಂತವಾಗಿ ಇದ್ದೇ ಇವೆ. ಈ ಅಧ್ಯಯನದ ಫಲಿತಗಳು, ವಾಸ್ತವತೆಗಳು, ಕಟುಸತ್ಯಗಳು ನಮ್ಮ ಸಮಾಜಕ್ಕೆ ಅರ್ಥವಾಗಲು ಸಹಕಾರಿಯಾಗಬೇಕೆಂಬ ಆಶಯ ಈ ಅಧ್ಯಯನದ ಹಿಂದೆ ಇದೆ. ಹಾಗೆ ಅರ್ಥವಾದ ಅಥವಾ ಅರ್ಥೈಸಿಕೊಳ್ಳಬೇಕಾದ ಅನಿವಾರ್ಯತೆಯು ಈ ಸಮಾಜದ ಕಣ್ತೆರೆಯಬಹುದೆಂಬ ಆಶಯವಿದೆ. ಲೈಂಗಿಕ ವೃತ್ತಿ ಸಮುದಾಯವೂ ಈ ಅಧ್ಯಯನದ ಸೂತ್ರದಾರರಾಗಿದ್ದು ಅವರು ಈ ವ್ಯವಸ್ಥೆಯ ಆಳಕ್ಕಿಳಿದು

ಅರ್ಥಮಾಡಿಕೊಳ್ಳಲು ಸಹಕಾರಿಯಾಗಬೇಕಿದೆ. ಈ ದಂಧೆಯ ಅಥವಾ ವೃತ್ತಿಯ ಸಮಪಾಲುದಾರರು ಈ ಸಮಾಜದ ಬಹುದೊಡ್ಡ ಭಾಗವಾಗಿದ್ದಾರೆ ಎನ್ನುವುದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಬೇಕಿದೆ. ಹಾಗೂ ತಮ್ಮ ಸಮುದಾಯದ ಒಗ್ಗೂಡಿಸುವಿಕೆಯ ಪ್ರಕ್ರಿಯೆಗಳು ಮತ್ತು ಸೂತ್ರಗಳನ್ನು ಕಂಡುಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಇಂದಿನ ಸರ್ಕಾರ ಮತ್ತು ಶಾಸನಗಳು ಲೈಂಗಿಕವೃತ್ತಿ ಸಮುದಾಯದ ಬಗ್ಗೆ ಆರೋಗ್ಯಕರವಾದ ನಿಲುವುಗಳನ್ನು ರೂಪಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಈ ಅಧ್ಯಯನ ಕಿಂಚಿತ್ತಾದರೂ ಸಹಕಾರಿಯಾಗಬೇಕೆಂಬುದೇ ಈ ಅಧ್ಯಯನದ ಆಶಯವಾಗಿದೆ.

ಹತ್ತು ವರ್ಷಗಳ ಕ್ಷೇತ್ರಕಾರ್ಯದಲ್ಲಿ ವೇಶ್ಯಾವಾಟಿಕೆ ಅಥವಾ ಹೆಚ್.ಐ.ವಿ/ಏಡ್ಸ್ ನಿಯಂತ್ರಣದೊಂದಿಗೆ ವೇಶ್ಯಾವೃತ್ತಿ ಮಹಿಳೆಗೆ ಸಂಬಂಧಿಸಿದ ಅನೇಕ ಸಮಾವೇಶಗಳು, ವಿಚಾರಸಂಕಿರಣಗಳು, ಕಾರ್ಯಾಗಾರಗಳಲ್ಲಿ ನಾನು ಭಾಗವಹಿಸಿದ್ದೇನೆ. ಪಂಚತಾರಾ ಹೋಟೆಲ್‌ಗಳಲ್ಲಿ ಅಥವಾ ಸುಖಾಸೀನದಲ್ಲಿ ಕುಳಿತು ವೇಶ್ಯಾವೃತ್ತಿ ಮಹಿಳಾ ಸಮುದಾಯದ ಬಗ್ಗೆ ಬಹಳ ದೀರ್ಘವಾದ ಚಿಂತನೆಗಳು ನಡೆಯುತ್ತಿವೆ. ಅಲ್ಲಿ ಆಶಿಸುತ್ತಿದ್ದ ಅಭಿವೃದ್ಧಿ ಕಾರ್ಯಯೋಜನೆಗಳಾಗಲೀ, ಆ ಸಮುದಾಯದ ಬದುಕಿನ ಆರೋಗ್ಯದ ಚಿಂತನೆಗಳಾಗಲೀ, ಶಾಸನ ರೂಪಿಸುವ ಯೋಜನೆಗಳಾಗಲಿ ಅನೇಕ ಮಿತಿಗಳನ್ನು, ಕೊರತೆಗಳನ್ನು ಹೊಂದಿರುತ್ತಿದ್ದವು. ಏಕೆಂದರೆ ಅವರ ಬೌದ್ಧಿಕ ಚೌಕಟ್ಟಿನ ಆಶಯಗಳು ಬಹಳಷ್ಟು ಲೈಂಗಿಕ ವೃತ್ತಿ ಮಹಿಳಾ ಸಮುದಾಯದ ಬದುಕಿನ ವಾಸ್ತವತೆಯಿಂದ ಬಹಳ ಅಂತರದಲ್ಲಿರುತ್ತಿದ್ದುದು ಕಂಡು ಬರುತ್ತಿತ್ತು.

ಇಂತಹ ಬೌದ್ಧಿಕ ವಲಯಕ್ಕೆ, ಶಾಸನ ರೂಪಿಸುವವರಿಗೆ, ಅಭಿವೃದ್ಧಿ ಯೋಜನಾ ವಲಯಕ್ಕೆ, ಸರ್ಕಾರದ ವಕ್ತಾರರಿಗೆ, ತಲುಪಿಸುವ ಒಂದು ಸಂವಹನದ ಪ್ರಯತ್ನವನ್ನು ಈ ಅಧ್ಯಯನ ಮಾಡಬಹುದೆಂಬ ಆಶಯವೂ ಇದೆ. ಲೈಂಗಿಕ ವೃತ್ತಿ ಮಹಿಳಾ ಸಮುದಾಯದ ಬದುಕಿನ ವಿವಿಧ ಮಜಲುಗಳ ತಳಸ್ಪರ್ಶದ ಅನುಭವಗಳ ಹಂಚಿಕೆಯೊಂದಿಗೆ ಈ ವ್ಯವಸ್ಥೆಗೆ ಸಂವಹನವಾಗಿ ಈ ಅಧ್ಯಯನ ಸಹಕಾರಿಯಾಗಲೆಂಬ ಆಶಯವೂ, ಕಾಳಜಿಯೂ ಇದೆ.

ಈ ಆಶಯಗಳನ್ನು ಇಟ್ಟುಕೊಂಡು ಮುಖ್ಯವಾಗಿ ಹದಿಮೂರು ಅಧ್ಯಾಯಗಳಲ್ಲಿ ವೇಶ್ಯಾವಾಟಿಕೆ, ಪರಂಪರೆ, ಸಮಸ್ಯೆಗಳು ಇವುಗಳನ್ನು ಅಧ್ಯಯನ ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಿರುತ್ತೇನೆ. ಆ ಒಂದೊಂದು ಅಧ್ಯಾಯದ ಸಂಕ್ಷಿಪ್ತ ವಿವರವನ್ನು ಇಲ್ಲಿ ನೀಡಲಾಗಿದೆ.

೧. ಬುಡಕಟ್ಟು ಅರ್ಥ, ವ್ಯಾಪ್ತಿ

ಈ ಅಧ್ಯಾಯದಲ್ಲಿ ಬುಡಕಟ್ಟು ಪದದ ಅರ್ಥ, ಅದನ್ನು ಅನ್ವಯಿಸುವ ರೀತಿ, ಆಧುನಿಕ ಸಂದರ್ಭದಲ್ಲಿ ಅರ್ಥೈಸಬೇಕಾದ ರೀತಿ ಹಾಗೂ ಬುಡಕಟ್ಟು ಪದವನ್ನು ಮಾನವ ಶಾಸ್ತ್ರಜ್ಞರು ಆಧುನಿಕ ಸಮಾಜಗಳಿಗೂ ಅನ್ವಯಿಸುವ ರೀತಿಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

''ಮೂಲತಃ ಮಾನವರು ಬುಡಕಟ್ಟಿನ ಸ್ವಭಾವಗಳನ್ನು ತನ್ನ ಹುಟ್ಟಿನಿಂದಲೇ ಪಡೆದು ಬಂದಿರುತ್ತಾರೆ'' ಎಂದು ಅಭಿಪ್ರಾಯ ಪಡುವ ಡೆಸ್ಮಂಡ್ ಪರಿಕಲ್ಪನೆಯ ಆಧುನಿಕ ಬುಡಕಟ್ಟಿನ ಎಳೆಗಳನ್ನು ಹುಡುಕುವ ಪ್ರಯತ್ನ ನನ್ನದಾಗಿದೆ.

ಸಾಂಪ್ರದಾಯಿಕ ಬುಡಕಟ್ಟುಗಳು ಆಧುನಿಕತೆಯ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿರುವ ಇಂದಿನ ಸಂದರ್ಭದಲ್ಲಿ ಹತ್ತು ವರ್ಷಗಳ ನನ್ನ ಕಾರ್ಯಕ್ಷೇತ್ರದ ಅನುಭವದಲ್ಲಿ ಈ ಸಮುದಾಯವನ್ನು ಒಂದು ಆಧುನಿಕ ಬುಡಕಟ್ಟಾಗಿ ನೋಡಬಾರದೇಕೆ? ಎಂಬ ಹುಡುಕಾಟವನ್ನು ಈ ಅಧ್ಯಯನದಲ್ಲಿ ಮಾಡಲು ಬಯಸುತ್ತೇನೆ.

ಬುಡಕಟ್ಟು ಆಧುನಿಕ ಪರಿಕಲ್ಪನೆ:

ವೃತ್ತಿಗೆ ಸಂಬಂಧಪಟ್ಟ ನಿಷೇದಗಳನ್ನು ಪರಿಪಾಲಿಸುವ ಮತ್ತು ಪರಸ್ಪರ ಸಂಬಂಧ ಹಾಗೂ ಅವಶ್ಯ ಕರ್ತವ್ಯಗಳ ವ್ಯವಸ್ಥೆಗಳನ್ನು ಹೊಂದಿರುವ ಸದಸ್ಯರನ್ನು ಒಳಗೊಂಡಿರುವ ಮತ್ತು ಒಂದೇ ಹೆಸರನ್ನು ಪಡೆದಿರುವ ಕುಟುಂಬಗಳ ಸಮೂಹ, ಒಂದುಗೊತ್ತಾದ ಸರಹದ್ದುಳ್ಳ ಭೌಗೋಳಿಕ ಪ್ರದೇಶ. ಒಂದೇ ಬಗೆಯ ಜೀವನ ಕ್ರಮವನ್ನು ಅನುಸರಿಸುವ, ತಾವು ಇತರರಿಗಿಂತ ಭಿನ್ನ ಎನ್ನುವ ಭಾವನೆ ಬೆಳೆಸಿಕೊಂಡಿರುವ ಜನರಿಂದ ಕೂಡಿರುವ ಸಾಮಾಜಿಕ ಸಮೂಹ. ಮಿತವಾದ ಜನಸಂಖ್ಯೆ, ಆ ಜನತೆ ಜೀವನೋಪಾಯಕ್ಕೆ ಆಹಾರ ಸಂಚಯ ಮತ್ತು ಬೇಟೆಗಾರಿಕೆಯನ್ನು ಅವಲಂಬಿಸುವುದು, ವಲಸೆ ಸಂಸ್ಕೃತಿ ಹೊಂದಿದ್ದು ಕುಡಿತ ಮತ್ತು ಕುಣಿತಗಳಲ್ಲಿ ವಿಶೇಷ ಆಸಕ್ತಿ ಹೊಂದಿರುವುದು. ಈ ಅಂಶಗಳು ಬುಡಕಟ್ಟುಗಳ ಎಳೆಗಳಾಗಿದ್ದು ಅವುಗಳಲ್ಲಿ ಲೈಂಗಿಕ ವೃತ್ತಿ ಸಮುದಾಯ ಒಂದು ಬುಡಕಟ್ಟಿನ ಯಾವ ಯಾವ ಒಳಸುಳಿಗಳನ್ನು ತನ್ನೊಂದಿಗೆ ಕೊಂಡೊಯ್ಯುತ್ತಿದೆ ಎಂಬುದನ್ನು ವಿಶ್ಲೇಷಿಸುವ ಹಾಗೂ ಆ ದಿಕ್ಕಿನಲ್ಲಿ ಒಂದು ಆಧುನಿಕ ಬುಡಕಟ್ಟುಗಳ ಸ್ವರೂಪವನ್ನು ಗುರುತಿಸುವ ಒಂದು ಪ್ರಯತ್ನವನ್ನು ನಾನಿಲ್ಲಿ ಮಾಡುತ್ತಿದ್ದೇನೆ. ಅವರು ಯಾವುದೇ ಜನವರ್ಗ, ಜಾತಿಗಳಿಂದ ಬಂದಿರಲಿ, ಕಾಡುಹಳ್ಳಿ ಅಥವಾ ನಗರ ಪ್ರದೇಶಗಳಿಂದಲೇ ಬಂದಿರಲಿ, ಆ ವೃತ್ತಿಯನ್ನು ಕೈಗೊಂಡ ಮೇಲೆ ಅವರದ್ದೇ ಆದ ಒಂದು ಬದುಕಿನ ಚೌಕಟ್ಟಿಗೆ ಹಾಗೂ ಹಲವು ವಿಧಿನಿಷೇಧಗಳಿಗೆ ಅವರು ಒಳಪಡುತ್ತಾರೆ. ಅಂಥ ವಿಶಿಷ್ಟ ಬದುಕಿನ ವೇಶ್ಯಾ ಸಮುದಾಯಗಳನ್ನು ಕೂಡ ಆಧುನಿಕ ಅರ್ಥದಲ್ಲಿ ''ಬುಡಕಟ್ಟು'' ಎಂದು ಕರೆಯಬಹುದು ಎಂಬ ನಂಬಿಕೆಯ ಮೇಲೆ ನಾನು ನನ್ನ ಈ ಬರಹವನ್ನು ಮುಂದುವರಿಸಿದ್ದೇನೆ.

ಈಗಾಗಲೆ, ಪ್ರಸ್ತಾಪಿಸಿರುವಂತೆ 'ಬುಡಕಟ್ಟು ಲಕ್ಷಣಗಳು ಎಲ್ಲ ಸಂಸ್ಕೃತಿ, ಸಮುದಾಯಗಳಲ್ಲೂ ಇರುತ್ತದೆ' ಎನ್ನುವ ಅಭಿಪ್ರಾಯವನ್ನು ಗಂಭೀರವಾಗಿ ಯೋಚಿಸುವಾಗ ಮಾನವಶಾಸ್ತ್ರಜ್ಞ, ಬುಡಕಟ್ಟು ತಜ್ಞ 'ಡೆಸ್ಮಂಡ್ ಮಾರಿಸ್' ಅಭಿಪ್ರಾಯಗಳು ಇಲ್ಲಿ ಪ್ರಸ್ತುತವಾಗುತ್ತವೆ. 'ಪ್ರತಿಯೊಬ್ಬ ಮನುಷ್ಯನೂ ಬುಡಕಟ್ಟು ಲಕ್ಷಣಗಳನ್ನು ಹೊಂದಿರುತ್ತಾನೆ' ಎನ್ನುವ ಡೆಸ್ಮಂಡ್ ವಿಶ್ಲೇಷಣೆಯಿಂದ ನೆಹರೂರವರ ಅಭಿವ್ಯಕ್ತಿಯನ್ನು ತಾಳೆ ಹಾಕುತ್ತಾ ಪ್ರೊ. ಹಿ.ಚಿ. ಬೋರಲಿಂಗಯ್ಯನವರು ವಿಶ್ಲೇಷಿಸಿರುವಂತೆ 'ಪ್ರಾಚೀನತೆ-ವಿಶಿಷ್ಟತೆ-ಪ್ರತ್ಯೇಕತೆ' ಈ ಮೂರು

ಅಂಶಗಳು ಎಲ್ಲ ಬುಡಕಟ್ಟುಗಳ ಪ್ರಧಾನ ಅಂಶಗಳು ಎಂಬ ಅಭಿಪ್ರಾಯದ ನಿಟ್ಟಿನಲ್ಲಿ ನಾನಿಲ್ಲಿ ಲೈಂಗಿಕ ವೃತ್ತಿ ಸಮುದಾಯದ ಪ್ರಾಚೀನ-ವಿಶಿಷ್ಟತೆ-ಪ್ರತ್ಯೇಕತೆಯ ಕೆಲವು ಅಂಶಗಳನ್ನು ವಿಶ್ಲೇಷಿಸಬಯಸುತ್ತೇನೆ. ಹಾಗೂ ಡೆಸ್ಮಂಡ್ ಮಾರಿಸ್ ಬುಡಕಟ್ಟುಗಳನ್ನು ಆಧುನಿಕ ವ್ಯಾಪ್ತಿಯಲ್ಲಿ ವಿಶ್ಲೇಷಿಸಿರುವ ಪ್ರಮುಖ ಅಂಶಗಳನ್ನು ನಾನಿಲ್ಲಿ ಮುಖ್ಯವಾಗಿ ಲೈಂಗಿಕ ವೃತ್ತಿ ಸಮುದಾಯದ ಪ್ರಮುಖ ಗುಣಲಕ್ಷಣಗಳ ಒಳ ಸುಳಿಗಳೊಂದಿಗೆ ವಿಶ್ಲೇಷಿಸುವ ಪ್ರಯತ್ನ ಮಾಡುತ್ತಿದ್ದೇನೆ.

೧. ವೇಶ್ಯೆ ಅರ್ಥ ಮತ್ತು ಶಬ್ದ ವ್ಯುತ್ಪತ್ತಿ :

ಈ ಅಧ್ಯಾಯದಲ್ಲಿ ಪುರಾಣ, ಇತಿಹಾಸ, ಪ್ರಾಚೀನತೆ, ಹಾಗೂ 21ನೇ ಶತಮಾನದ ಆಧುನಿಕ ಆಲೋಚನೆಗಳು ಪರಂಪರಾನುಗತವಾಗಿ ಹೆಣೆದುಕೊಂಡು ಬಂದು ಈ ವೃತ್ತಿಯ ಬಗ್ಗೆ ಆಯಾ ಕಾಲಘಟ್ಟಕ್ಕೆ ತಕ್ಕಂತೆ ಶಬ್ದ ಮತ್ತು ಅರ್ಥವ್ಯಾಖ್ಯಾನಗಳನ್ನು ಸಮಾಜ ಸ್ಫುರಿಸುತ್ತಾ ಬಂದಿದೆ. ಅವುಗಳ ಒಂದು ಪಕ್ಷಿನೋಟವನ್ನು ಇಲ್ಲಿ ತೆರೆದಿಡಲು ಪ್ರಯತ್ನಿಸಿದ್ದೇನೆ. ಹಾಗೂ ಆ ಅರ್ಥಗಳು, ವ್ಯಾಖ್ಯಾನಗಳು ಸ್ಫುರಿಸುವ ಹಿಂದಿರುವ ಮನಸ್ಸುಗಳು, ಆಲೋಚನೆಗಳು, ಹುನ್ನಾರಗಳನ್ನು ವಿಶ್ಲೇಷಿಸುವ ಸಣ್ಣ ಪ್ರಯತ್ನವೂ ಆಗಿದೆ.

೨. ಮಹಿಳೆ ಮತ್ತು ಭಾರತೀಯ ಸಮಾಜ :

೨.೧. ಪ್ರಾಚೀನ ಯುಗದಿಂದ ಆಧುನಿಕದವರೆಗೆ

ಮಹಿಳೆ ಅನಾದಿಯಿಂದ ಇಂದಿನವರೆಗೂ ನಡೆದು ಬಂದ ದಾರಿ ಹಾಗೂ ಅವಳನ್ನು ತನ್ನೊಂದಿಗೆ ಕರೆತಂದಿರುವ ಈ ಸಮಾಜದ ವ್ಯವಸ್ಥೆಯ ಆಳಕ್ಕಿಳಿದು ಅಧ್ಯಯನ ಮಾಡಿದಾಗ ಮಾತ್ರ 'ಮಹಿಳೆ'ಯ ಸ್ಥಿತಿಗತಿಯನ್ನು ಅರ್ಥೈಸಿಕೊಳ್ಳಬಹುದಾಗಿದೆ. ಆ ಆಧಾರದಲ್ಲಿ 'ವೇಶ್ಯಾವಾಟಿಕೆಗೆ' 'ಪ್ರಾಚೀನ ವೃತ್ತಿ' ಎಂಬ ಗರಿಮೆಯನ್ನೋ, ಹಿರಿಮೆಯನ್ನೋ ಕೊಟ್ಟು ತನ್ನ ತೃಷೆಯನ್ನು ಅನಾಯಾಸವಾಗಿ ಹಿಂಗಿಸಿಕೊಂಡು ಬರುತ್ತಿರುವುದು ಕಣ್ಣಿಗೆ ರಾಚುತ್ತದೆ.

ಮಹಿಳೆಯ ಸ್ಥಾನಮಾನಗಳು ಯಾವ ರೀತಿ ನಿರ್ಧರಿತವಾಗಿ ರೂಪಿತವಾಗಿದ್ದವು ಎನ್ನುವ ವಿಶ್ಲೇಷಣೆ ಜೊತೆಗೆ ಆ ಮಹಿಳೆಯರಲ್ಲೇ ಅತ್ಯಂತ ಕಳಂಕಿತರೆಂದು ಪರಿಭಾವಿಸಲ್ಪಟ್ಟ ಮಹಿಳೆಯರ ದುಃಸ್ಥಿತಿಗೆ ಕಾರಣವಾದ ಸಮಾಜದ ಸಂರಚನೆಯ ನೀತಿ ನಿಯಮಗಳ ವಿಶ್ಲೇಷಣೆಯನ್ನು ವಿವಿಧ ಕಾಲಘಟ್ಟಗಳಿಗನುಸಾರವಾಗಿ, ಅತ್ಯಂತ ಸಂಕ್ಷಿಪ್ತವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ.

ಈ ನಿಟ್ಟಿನಲ್ಲಿ 'ಮಹಿಳೆ'ಯನ್ನು ಪ್ರಾಚೀನದಿಂದ ಆಧುನಿಕದವರೆಗೆ ಅಧ್ಯಯನ ಮಾಡುವ ಹಾಗೂ ಆ ಮೂಲಕ ಈ ಒಟ್ಟು ಅಧ್ಯಯನಕ್ಕೆ ಒಂದು ತಳಪಾಯವನ್ನು ಹಾಕುವ ಪ್ರಯತ್ನ ಇದಾಗಿದೆ.

೩.೨. ಪ್ರಮುಖ ಧಾರ್ಮಿಕ ಹಿನ್ನೆಲೆಯಲ್ಲಿ ಮಹಿಳೆ :

"ಹೆಣ್ಣನ್ನು ನರಕಕ್ಕೆ ದಾರಿ" ಎಂದ ಭಗವಾನ್ ಶಂಕರರಾಗಲಿ, 'ಅವಳು ಸೈತಾನದ ಬಾಗಿಲು, ದೈವೀನಿಯಮ ಅಥವಾ ಧರ್ಮವನ್ನು ಪರಿತ್ಯಜಿಸುವ ಮೊಟ್ಟ ಮೊದಲ ವ್ಯಕ್ತಿ' ಎಂದ ಯೂರೋಪಿನ ಪ್ರಸಿದ್ಧ ಧರ್ಮಬೋಧಕ ಟ್ಯಾರ್‌ಟುಲಿಯನ್ ಆಗಲೀ, "ನಾಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದು ಘರ್ಜಿಸಿದ ಮನುವಾಗಲೀ, ಎಷ್ಟು ಹೆಣ್ಣುಗಳಿಗಾದರೂ 'ತಲಾಖ್'ಕೊಡಬಹುದೆನ್ನುವ ಉದಾರತೆಯನ್ನು ಪುರುಷನ ಮೇಲೆ ತೋರಿ 'ತಲಾಖ್' ಪಡೆದು ಜೀವವನ್ನು ಬೀದಿ ಪಾಲು ಮಾಡುವ ನೀತಿ ನಿಯಮಗಳನ್ನು ಪ್ರತಿಪಾದಿಸುವ ಇಸ್ಲಾಂ ಧರ್ಮವಾಗಲೀ... ಇವ್ಯಾವೂ ಕೂಡ ಮಹಿಳೆಯನ್ನು ಒಬ್ಬ ವ್ಯಕ್ತಿ ಎಂದು ಸಮಾನತೆಯ ಆಧಾರದಲ್ಲಿ ಪರಿಗಣಿಸಿಯೇ ಇಲ್ಲ. ಉದ್ದಕ್ಕೂ ಒಂದು ಭೋಗದ ವಸ್ತುವಾಗಿ, ಸೇವೆಗಾಗಿಯೇ ಇರುವ ಗುಲಾಮಳನ್ನಾಗಿಯೇ ಕೆಲವು ಪ್ರಮುಖ ಧರ್ಮಗಳು ನಡೆಸಿಕೊಂಡಿವೆ. ಆದರೆ ಮಹಿಳೆಯನ್ನು ವ್ಯಕ್ತಿಯನ್ನಾಗಿ, ಅವಳ ಶಕ್ತಿ, ಸಾಮರ್ಥ್ಯವೂ ಬದುಕನ್ನು ಮತ್ತು ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಬಹಳ ಅಮೂಲ್ಯವಾದದ್ದು ಎಂದು ನಿರೂಪಿಸಿರುವ ಬೌದ್ಧ ಧರ್ಮದಂತಹ ಧರ್ಮಗಳು ಕೂಡ ನಮ್ಮೊಂದಿಗಿವೆ.

ಈ ಅಧ್ಯಾಯದಲ್ಲಿ ಒಟ್ಟಾರೆಯಾಗಿ ಧರ್ಮಗಳು 'ಮಹಿಳೆ'ಯನ್ನು ಹೇಗೆ ನೋಡಿವೆ ಎಂಬುದರ ಆಳಕ್ಕೆ ಇಳಿದಾಗ ಮಾತ್ರ ಅತ್ಯಂತ ದಯನೀಯ ಸ್ಥಾನ ಹೊಂದಿರುವ ವೇಶ್ಯೆಯ ಬಗ್ಗೆ ಇನ್ನೆಷ್ಟು ಕೀಳಾಗಿ ನೋಡಲಾಗಿದೆ ಎಂಬುದನ್ನು ಮನನ ಮಾಡಿಕೊಳ್ಳುವ ಪ್ರಯತ್ನವೇ ಇದಾಗಿದೆ.

೪. ಜನಪದ ಮತ್ತು ಬುಡಕಟ್ಟು ಸಮುದಾಯಗಳ ಧಾರ್ಮಿಕ ಮತ್ತು ಆಚರಣಾತ್ಮಕ ಲೈಂಗಿಕ ಸಂಪ್ರದಾಯಗಳು:

ಜನಪದ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಆರಾಧನೆ ಮತ್ತು ಆಚರಣೆಗಳ ಅಂಗವಾಗಿ ಹುಟ್ಟಿಕೊಂಡ ಕೆಲವು ಸಂಪ್ರದಾಯಗಳು ಮುಂದೆ ಲೈಂಗಿಕ ಚಟುವಟಿಕೆಯ ಕೇಂದ್ರಗಳಾಗಿ ಪರಿವರ್ತನೆ ಹೊಂದಿದ ವಿವರಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ. ಇಂತಹ ಧಾರ್ಮಿಕ ಆವರಣದ ಮನೋಭಾವವನ್ನು ಪಟ್ಟಭದ್ರರು ಮತ್ತು ಪ್ರತಿಷ್ಠಿತರು ಕ್ರಮೇಣ ಶೋಷಣೆಯ ಭಾಗವನ್ನಾಗಿ ಮಾಡಿಕೊಂಡ ಬಗೆಯನ್ನು ಕೂಡ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ದೇವದಾಸಿಯರು, ಬಸವಿಯರು, ಜೋಗತಿಯರು, ಪಾತರದವರು ಮುಂತಾಗಿ ಅನೇಕ ಸಮುದಾಯಗಳಲ್ಲಿ ಇಂದಿಗೂ ಲೈಂಗಿಕವೃತ್ತಿಗೆ ಅಂಟಿಕೊಂಡು ಬಂದ ಜಾಡ್ಯವಾಗಿಯೇ ಉಳಿದಿರುವ ಪರಿಸ್ಥಿತಿಯನ್ನು ಪರಿಚಯಿಸುವ ಪ್ರಯತ್ನವೂ ಇಲ್ಲಿ ನಡೆದಿದೆ.

೫. ವೇಶ್ಯಾವಾಟಿಕಾ ಕೇಂದ್ರಗಳು, ರೂಪ ವೈವಿಧ್ಯ ಮತ್ತು ಸಾಮಾಜಿಕ ಸ್ವರೂಪ:

ಧಾರ್ಮಿಕ ವೇಶ್ಯಾವೃತ್ತಿ, ಸಾಮಾಜಿಕ ವೇಶ್ಯಾವೃತ್ತಿ, ಆಧುನಿಕ ವೇಶ್ಯಾವೃತ್ತಿ, ವಿಲಾಸೀ ವೇಶ್ಯಾವೃತ್ತಿ ಮುಂತಾಗಿ ಈ ಪರಿಧಿಯೊಳಗಿನ ವೇಶ್ಯಾವೃತ್ತಿಯ ವಿವರಣೆ ಇಲ್ಲಿ ಬರುತ್ತದೆ. ನನ್ನ ಕಾರ್ಯಕ್ಷೇತ್ರದ

ಅನುಭವಗಳೂ ಕೂಡ ಈ ಅಧ್ಯಾಯನಕ್ಕೆ ಹೆಚ್ಚು ಪೂರಕವಾಗಿವೆ.

ಲೈಂಗಿಕ ವೃತ್ತಿ ನಿರತರ ವಿಭಿನ್ನ ವ್ಯಕ್ತಿತ್ವಗಳು, ಬದುಕುಗಳು, ಸಂಕೀರ್ಣತೆಗಳ ಎಳೆ ಎಳೆಗಳು ಈ ಅಧ್ಯಯನದಲ್ಲಿ ತೆರೆದುಕೊಳ್ಳುತ್ತವೆ. 'ಮಹಿಳೆ'ಯಷ್ಟೇ ಅಲ್ಲದೆ 'ಲೈಂಗಿಕ ವೃತ್ತಿ' ನಡೆಸುತ್ತಿರುವ ಇತರರ ವಿವರಗಳೂ ಇಲ್ಲಿ ಬಂದಿವೆ.

ನಾನಿಲ್ಲಿ ಸಾಮಾಜಿಕ ವೇಶ್ಯಾವಾಟಿಕೆಯ ಪರಿಧಿಯಲ್ಲಿ ಬರುವ ವೇಶ್ಯಾಗೃಹಗಳು, ಲಾಡ್ಜ್‌ಗಳು, ಗಂಟೆಬಾಡಿಗೆಯ ಮನೆಗಳು, ಹಮಾಮ್‌ಗಳು, ಪಾರ್ಲರ್‌ಗಳು, ಬೀದಿಬದಿಯಲ್ಲಿ ಸಂಪರ್ಕ ಹೊಂದುವವರು, ಗಿರಾಕಿಗಳು, ಈ ಚೌಕಟ್ಟಿನೊಳಗಿನ ಸೂಕ್ಷ್ಮವಾದ ಭಿನ್ನತೆ ಸಾಮ್ಯತೆಗಳು ಹೀಗೆ ಅಧ್ಯಾಯದಲ್ಲಿ ನನ್ನ ಕಾರ್ಯಕ್ಷೇತ್ರದ ಅನುಭವದ ಹಾಗೂ ಅಧ್ಯಯನದ ಆಧಾರದಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದೇನೆ.

೬. ವೇಶ್ಯಾವಾಟಿಕೆ ಮತ್ತು ರಾಜಕಾರಣ:

ಪ್ರಾಚೀನದಿಂದಲೂ ಇಂದಿನವರೆಗೂ ಹರಿದು ಬರುತ್ತಿರುವ ವೇಶ್ಯಾವಾಟಿಕೆ ಮತ್ತು ರಾಜಕಾರಣಕ್ಕೊಂದು ಅವ್ಯಹತವಾದ ಸಂಬಂಧ, ಪರಂಪರೆ ಇದ್ದೇ ಇದೆ. ಅಂದು ಬ್ರಿಟೀಷರಿಗೆ ದೇಶೀಯರು ಇಲ್ಲಿಯ ಹೆಣ್ಣುಗಳನ್ನು ತಲೆ ಹಿಡಿಯುತ್ತಿದ್ದುದು ಭಾರತೀಯರ ಮನಸ್ಸುಗಳಿಗೆ ಕಸಿವಿಸಿ-ಕ್ರೋಧಗಳನ್ನುಂಟು ಮಾಡಿದ್ದರೆ, ಈಗ ಇಲ್ಲಿಯ ಸಾವಿರಾರು ವೇಶ್ಯಾಗೃಹಗಳ ಮಾಲೀಕರು, ಬ್ರೋಕರ್‌ಗಳು, ಇಂದಿನ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ, ಶ್ರೀಮಂತರಿಗೆ, ವ್ಯಾಪಾರಸ್ಥರಿಗೆ, ಕಾರ್ಪೊರೇಟ್ ವಲಯಗಳಿಗೆ ಹೆಣ್ಣುಗಳನ್ನು ಸರಬರಾಜು ಮಾಡುತ್ತಿದ್ದಾರೆ. ಇದಕ್ಕೆ ಕಾನೂನು ಚೌಕಟ್ಟೇ ಇಲ್ಲವೆನ್ನಬಹುದು. ಏಕೆಂದರೆ ಕಾನೂನು ಪಾಲಕರನೇಕರುಗಳು ಇವುಗಳ ಪಹರೆಯಲ್ಲಿರುತ್ತಾರೆ. ಆಧುನಿಕ ಯುಗದ ಬೀಜ ಮಂತ್ರಗಳಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳು ವಿಶಾಲ ಜನಸಮೂಹಗಳ ಬದುಕನ್ನು ಅಸ್ಥಿರಗೊಳಿಸುತ್ತಿವೆ. ಈ ಪ್ರಕ್ರಿಯೆ ವೇಶ್ಯಾವೃತ್ತಿಗಿಳಿಯುವ ಮಹಿಳೆಯರ ಸಂಖ್ಯೆಯನ್ನು ಅಗಾಧವಾಗಿ ಹೆಚ್ಚಿಸುತ್ತಿದೆ.

ಈ ಅಧ್ಯಾಯದಲ್ಲಿ ರಾಜಕಾರಣದೊಂದಿಗೆ ವೇಶ್ಯಾವಾಟಿಕೆ ಹೇಗೆ ತಳಕು ಹಾಕಿಕೊಂಡಿದೆ ಎಂಬುದರ ವಿಶ್ಲೇಷಣೆಯನ್ನು ಮಾಡಲಾಗಿದೆ.

೭. ವೇಶ್ಯಾವಾಟಿಕೆ ಮತ್ತು ಆರ್ಥಿಕ ಸಂಬಂಧಗಳು:

ಇಂದು ಮೌಲ್ಯಗಳ ದೃಷ್ಟಿಯಿಂದ ಅತ್ಯಂತ ನಿಕೃಷ್ಟವಾಗಿ ಅವರ ಬದುಕಿನುದ್ದಕ್ಕೂ ಪಾಪ ಪ್ರಜ್ಞೆಯೊಂದಿಗೆ ನರಳುವುದರೊಂದಿಗೆ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಬೀದಿ ಪಾಲಾಗುವ ಸ್ಥಿತಿಯೇ ಹೆಚ್ಚು. ಪ್ರಾಚೀನ ಭಾರತದಲ್ಲಿ ಅದರಲ್ಲೂ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ದೊರೆಯುವ ಆಧಾರದಲ್ಲಿ ಈ ವೃತ್ತಿಯನ್ನು ನೋಡುತ್ತಿದ್ದ ದೃಷ್ಟಿಕೋನ, ವೃತ್ತಿ ಮಾನ್ಯತೆ, ಬದುಕಿನ ಅಗತ್ಯಗಳ ಪೂರೈಕೆಯ ನಿಟ್ಟಿನಲ್ಲಿ ಹಕ್ಕು ಬಾದ್ಯತೆಗಳನ್ನು

ಹೊಂದಿದ್ದ ಆ ಸಮಾಜದ ಬಗ್ಗೆಯೂ ಇಲ್ಲಿ ವಿಶ್ಲೇಷಿಸಲಾಗುತ್ತದೆ.

ಆಧುನಿಕ ಭಾರತದಲ್ಲಿ ಹಾಗೂ ಆ ಮಹಿಳೆಯರ ಬದುಕಿನ ಸುತ್ತ ಈ ವೃತ್ತಿ ದಿಕ್ಕು ದೆಸೆಯಿಲ್ಲದೆ ತನ್ನನ್ನು ವಿಸ್ತರಿಸಿಕೊಳ್ಳುವುದರ ಮೂಲಕ 'ವೇಶ್ಯಾವಾಟಿಕೆ'ಯನ್ನು ಅತ್ಯಂತ ಲಾಭದಾಯಕ ದಂಧೆಯನ್ನಾಗಿಸಿಕೊಂಡಿರುವ, ಈ ಮೂಲಕ ಹೆಣ್ಣುಗಳನ್ನು ಸರಕಾಗಿಸಿಕೊಂಡು ವಹಿವಾಟು ನಡೆಸುತ್ತಿರುವ ಛಿದ್ರಗೊಂಡ ಸಮಾಜದ ವಿಶ್ಲೇಷಣೆ-ವಿವರಗಳೂ ಇಲ್ಲಿ ತೆರೆದುಕೊಳ್ಳುತ್ತವೆ.

ಈ ಪರಿಧಿಯಲ್ಲಿ 21ನೇ ಶತಮಾನದ ಆಧುನಿಕವಾದ ಈ ಸಮಾಜದಲ್ಲಿ ವೇಶ್ಯಾವಾಟಿಕೆಯೂ ಕೂಡ ಹೇಗೆ ತನ್ನನ್ನು ರೂಪಿಸಿಕೊಳ್ಳುತ್ತಿದೆ, ಅವಕಾಶದ ಹೊಂಚು ಹಾಕುತ್ತಿದೆ ಎಂಬುದು ಇಲ್ಲಿ ಬಹಳ ಮುಖ್ಯವಾಗುತ್ತದೆ. ಬೀದಿ ಬದಿಯ ಅಥವಾ ವೇಶ್ಯಾಗೃಹಗಳ ಪರಿಧಿಯಲ್ಲಿ ಬರುವ ವೇಶ್ಯಾವಾಟಿಕೆ ಮತ್ತು ಅಲ್ಲಿ ತೊಡಗಿಸಿಕೊಂಡಿರುವವರ ಬದುಕು, ಬದುಕಿನ ಕ್ರಮಗಳು, ಸ್ಥಿತಿಗತಿಗಳು, ಅನಿವಾರ್ಯ ಅಸಹನೀಯಗಳು, ಮುಂತಾದ ಚಿತ್ರಣವು ಇಲ್ಲಿ ತೆರೆದುಕೊಂಡಿದೆ.

ಹಾಗೆಯೇ ಅತಿ ಉತ್ತುಂಗಕ್ಕೇರಿ ವೇಶ್ಯಾವಾಟಿಕೆ ಮತ್ತು ವೃತ್ತಿ ನಡೆಸುವ 'ಸೇವೆಯೇ' ಸರಕಾಗಿರುವ ಆಧುನಿಕತೆಯ ವಿಶ್ಲೇಷಣೆಯೂ ಕೂಡ ಈ ಅಧ್ಯಾಯದಲ್ಲಿ ಇದೆ.

ಇಡೀ ಸಮಾಜದ ವಾಹಿನಿಗೆ ವೇಶ್ಯಾವಾಟಿಕೆಯ ಸುತ್ತಲಿನ 'ಹಣ' ವಹಿವಾಟು, ಖರ್ಚು, ವೆಚ್ಚಗಳು, ಆಧಾಯಗಳು ಲೆಕ್ಕಾಚಾರದ ಆಧಾರದಲ್ಲಿ ವಿವರಿಸಲ್ಪಟ್ಟಿದೆ.

ವೇಶ್ಯಾವಾಟಿಕೆ ಮತ್ತು ಆರ್ಥಿಕ ಸಂಬಂಧಗಳು ಈ ಸಮಾಜದ ಅಗಲದಷ್ಟು ಹರಡಿಕೊಂಡಿವೆ. ಈ ವೃತ್ತಿಯನ್ನು ಕೀಳಾಗಿ ನೋಡುವ ಈ ಸಮಾಜ ಆ ದಂಧೆಯಲ್ಲಿನ ವಹಿವಾಟನ್ನು ಹೇಗೆ ಅರಗಿಸಿಕೊಳ್ಳುತ್ತಿದೆ ಎನ್ನುವುದರ ವಿಶ್ಲೇಷಣೆ ಈ ಅಧ್ಯಾಯನದಲ್ಲಿ ಬಿಚ್ಚಿಕೊಂಡಿದೆ.

೮. ವೇಶ್ಯಾವಾಟಿಕೆ ಮತ್ತು ಕಾನೂನು : ಪ್ರೋತ್ಸಾಹ ಮತ್ತು ನಿಯಂತ್ರಣ ಚಟುವಟಿಕೆಗಳು:

'ವೇಶ್ಯಾವಾಟಿಕೆ' ಮತ್ತು 'ವೇಶ್ಯಾವೃತ್ತಿ' ಇವುಗಳ ಸುತ್ತ ಕೆಲವೇ ಕೆಲವು ಕಾನೂನುಗಳು ಜಾರಿಯಲ್ಲಿವೆ. ಹಿಂದಿನ ರಾಜಪ್ರಭುತ್ವದ ಆಳ್ವಿಕೆಯಲ್ಲಿಯೂ ಕೂಡ ಈ ಸಮುದಾಯಕ್ಕೆ, ಈ ವೃತ್ತಿಗೆ ಸಂಬಂಧಿಸಿದಂತೆ ಹಲವಾರು ಶಾಸನಗಳು, ನೀತಿ ನಿಬಂಧನೆಗಳೂ ಇದ್ದವು.

ಇಲ್ಲಿ ಪರಂಪರಾನುಗತವಾಗಿ ಈ ಸಮುದಾಯದ ಬಗ್ಗೆ ಸಮಾಜ ರೂಪಿಸಿಕೊಂಡು ಬಂದಿರುವ ಕಾನೂನುಗಳ ಹಾಗೂ ಸ್ವಾತಂತ್ರ್ಯನಂತರದ ಭಾರತದಲ್ಲಿ 'ವೇಶ್ಯಾವಾಟಿಕೆ' ಸುತ್ತ ಹಾಗೂ 'ವೇಶ್ಯಾವೃತ್ತಿ'ಯ ಸುತ್ತ ಎಂತಹ ಕಾನೂನುಗಳನ್ನು ಜಾರಿಗೊಳಿಸಿವೆ ಹಾಗೂ ಅವುಗಳ ಬದಲಾದ ಪ್ರಕ್ರಿಯೆಗಳಾವುವು. ಈ ಕಾನೂನುಗಳು ಆ ಬದುಕುಗಳನ್ನು ಸುಧಾರಿಸುವಲ್ಲಿ ಹಾಗೂ ಈ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಎಷ್ಟರಮಟ್ಟಿಗೆ ಸಹಕಾರಿಯಾಗಿವೆ ಹಾಗೂ ಪರಿಣಾಮಕಾರಿಯಾಗಿವೆ ಎಂಬ ಅಧ್ಯಯನ ಇದಾಗಿದೆ.

೯. ಆಧುನಿಕ ಸಂದರ್ಭ, ಜಾಗತೀಕರಣ ಪ್ರಭಾವ ಮತ್ತು ವೇಶ್ಯಾವಾಟಿಕೆ:

ಆಧುನಿಕವಾದ ಮಾಹಿತಿ ತಂತ್ರಜ್ಞಾನಗಳು, ಮಾಧ್ಯಮಗಳ ನಂಟು, ಪೀತ ಪತ್ರಿಕೋದ್ಯಮಗಳು 'ತಲೆ ಹಿಡುಕ' ಕಸುಬನ್ನು ಮಾಡಿಕೊಳ್ಳುತ್ತಿವೆ. ಆಧುನಿಕ ಮಾಹಿತಿ ಸಂಪರ್ಕ ಜಾಲದೊಂದಿಗೆ ಈ ದಂಧೆ ನಿರಾಯಾಸವಾಗಿ ನಡೆಯುತ್ತಿದೆ.

ಬುಡಕಟ್ಟುಗಳ ಬದುಕುಗಳ ಮೇಲೆ ಹರಿಹಾಯ್ದ ಆಧುನಿಕತೆ ಅವುಗಳ ಸ್ವರೂಪವನ್ನು ಬೀದಿಪಾಲು ಮಾಡುತ್ತಿವೆ. ಈ ಹೆಣ್ಣು ಮಕ್ಕಳು ವೇಶ್ಯಾವೃತ್ತಿಯನ್ನು ಬದುಕಿನ ದಾರಿಗಳಲ್ಲಿ ಒಂದಾಗಿ ಆಯ್ಕೆ ಮಾಡಿಕೊಳ್ಳುತ್ತಿರುವುದು ಕಂಡು ಬರುತ್ತಿದೆ.

ಸಾಂಪ್ರದಾಯಿಕ ವೇಶ್ಯಾವಾಟಿಕೆಯಂತಲೇ ಇದ್ದ ಧಾರ್ಮಿಕ ವೇಶ್ಯಾವೃತ್ತಿಯ ಪರಿಧಿಯಲ್ಲಿನ ಹೆಣ್ಣುಗಳು ಈ ದಿನ ಆ ಚೌಕಟ್ಟನ್ನು ಮೀರಿ ನಗರಗಳ ವೇಶ್ಯಾವಾಟಿಕಾ ಕೇಂದ್ರಗಳಿಗೆ ಸರಬರಾಜಾಗುತ್ತಿದ್ದಾರೆ. ಈ ಸರಬರಾಜು ಭಾರತಕ್ಕಷ್ಟೇ ಸೀಮಿತವಾಗದೆ ಜಾಗತಿಕವಾಗಿಯೂ ಹರಡುತ್ತಿದೆ. ಇಲ್ಲಿ 'ಹೆಣ್ಣು' ಸರಕಾಗುತ್ತಿದ್ದಾಳೆ. ಲಂಚ, ರುಷುವತ್ತುಗಳ ಭಾಗವಾಗುತ್ತಿದ್ದಾಳೆ. ಇದರೊಂದಿಗೆ ಹೆಚ್.ಐ.ವಿ./ಏಡ್ಸ್ ನಂತಹ ಮಾರಕ ಸೋಂಕಿಗೆ ಬಲಿಯಾಗುತ್ತಿದ್ದಾಳೆ.

ಈ ನಿಟ್ಟಿನಲ್ಲಿ ಈ ಅಧ್ಯಾಯದಲ್ಲಿನ ಅಧ್ಯಯನ ಇಂದಿನ ಪ್ರಸ್ತುತತೆಯನ್ನು ಪರಿಚಯಿಸುತ್ತದೆ.

೧೦. ಹೆಚ್.ಐ.ವಿ./ಏಡ್ಸ್ ಒಂದು ಅಧ್ಯಯನ :

2010ನೆಯ ಇಸವಿಯ ಹೊತ್ತಿಗೆ ಭಾರತದಲ್ಲಿ 20 ಮಿಲಿಯನ್‌ನಿಂದ 25 ಮಿಲಿಯನ್ ಜನರು ಏಡ್ಸ್‌ಗೆ ತುತ್ತಾಗಲಿದ್ದಾರೆ. ಇಂಥದೊಂದು ಜೀವಗಳನ್ನೇ ಹಿಡಿಹಿಡಿಯಾಗಿ ಬಲಿ ತೆಗೆದುಕೊಳ್ಳುತ್ತಿರುವ ಈ ಅಪಾಯಕಾರಿ ಸೋಂಕು 'ವೇಶ್ಯಾವಾಟಿಕೆ' ಸುತ್ತಲಿನ ಈ ಅಧ್ಯಯನಕ್ಕೆ ಬಹಳ ಮಹತ್ವದ್ದಾಗಿದೆ. ಈ ವಿಶ್ಲೇಷಣೆಗಳು ಈ ಅಧ್ಯಯದಲ್ಲಿ ತೆರೆದುಕೊಳ್ಳಲಿವೆ.

ಸಾಮಾಜಿಕ 'ಅನಿಷ್ಟ'ತೆಯಲ್ಲಿ ಬರ್ಬರವಾಗಿದ್ದ ಲೈಂಗಿಕವೃತ್ತಿ ನಿರತರ ಬದುಕಿಗೊಂದು ಹೊಸ ಆಯಾಮದ ಬಹುದೊಡ್ಡ ಆಪಾದನೆ ಇವರ ಮೇಲೆ ಬಿತ್ತು. ಇಂತಹ ಸವಾಲನ್ನು ಆ ಸಮುದಾಯ ಹೇಗೆ ಎದುರಿಸುತ್ತಿದೆ, ಅದರ ಪರಿಧಿಯ ಅಧ್ಯಯನ ಕೂಡ ಇದಾಗಿದೆ.

ನನ್ನ ಕಾರ್ಯಕ್ಷೇತ್ರದ ದಟ್ಟವಾದ ಅನುಭವ ಕೂಡ ನಾನಿಲ್ಲಿ ಹಂಚಿಕೊಳ್ಳಲು ಹಾಗೂ ಆ ನಿಟ್ಟಿನಲ್ಲಿ ಆ ಸಂಕೀರ್ಣತೆಗಳನ್ನು ಈ ಸಮಾಜದ ಮುಂದೆ ತೆರೆದಿಡಲು ಪ್ರಯತ್ನಿಸುತ್ತಿದ್ದೇನೆ. 'ವೇಶ್ಯಾವಾಟಿಕೆ' ಜಾಗತಿಕವಾಗಿಯೂ ಕೂಡ ತನ್ನನ್ನು ಸಂಪೂರ್ಣವಾಗಿ ತೆರೆದುಕೊಂಡಿದ್ದೇ ಹೆಚ್.ಐ.ವಿ./ಏಡ್ಸ್ ನಿಯಂತ್ರಣ ಕಾರಣಕ್ಕಾಗಿ ಆ ವಿವರಗಳೂ ಕೂಡ ಇಲ್ಲಿ ಪ್ರಸ್ತುತವಾಗಲಿವೆ.

ಅತಿ ವೈಯುಕ್ತಿಕವಾದ, ಖಾಸಗಿ ಬದುಕಿನ ಸುರುಳಿಯೊಳಗೆ ಈ ಸೋಂಕು ಹೊಕ್ಕಿರುವುದೇ ಭಾರತದಂತಹ

ದೇಶಗಳಿಗೆ ದೊಡ್ಡ ಸವಾಲಾಗಿದೆ. ಈ ನಿಟ್ಟಿನಲ್ಲಿ ಈ ಅಧ್ಯಾಯ ಅಧ್ಯಯನಕ್ಕೆ ಬಹಳ ಮಹತ್ವದ್ದಾಗಿದೆ, ಹಾಗೂ ಈ ಪಿಡುಗನ್ನು ಎದುರಿಸಲು ಅಗತ್ಯವಿರುವ ಕಾರ್ಯತಂತ್ರಗಳನ್ನು ಕೂಡ ಇಲ್ಲಿ ವಿಶ್ಲೇಷಿಸಲಾಗಿದೆ.

೧೧. ವೇಶ್ಯಾವಾಟಿಕೆ ಬಗೆಗಿನ ಅಭಿಪ್ರಾಯ ಭೇದಗಳು :

'ವೇಶ್ಯಾವಾಟಿಕೆ ಮತ್ತು ಸಮಾಜ' ಒಂದನ್ನೊಂದು ಬಿಟ್ಟೇ ಇಲ್ಲ. ಈ ಅವಿನಾಭಾವ ಸಂಬಂಧದಲ್ಲಿ ಸಮಾಜ ಮೇಲ್‌ಸ್ತರದಲ್ಲಿದ್ದು, ವೇಶ್ಯಾವಾಟಿಕೆ ಅದರ ಕಾಲಡಿಯಲ್ಲಿ ಉಸಿರುಗಟ್ಟಿ, ಪಾಪಪ್ರಜ್ಞೆಯಿಂದ, ಅಮಾನವೀಯವಾಗಿ, ನಿಕೃಷ್ಟವಾಗಿ, ಅನಿಷ್ಟವಾಗಿ ಬದುಕುತ್ತಲೇ ಇದೆ. ಇಷ್ಟೆಲ್ಲಾ ಆದರೂ ಅದೆಂದೂ ಸಾಯಲಿಲ್ಲ. ಅಥವಾ ಅಂತ್ಯ ಕಾಣಲಿಲ್ಲ.

ಈ ನಿಟ್ಟಿನಲ್ಲಿ ಈ ದ್ವಂದ್ವ ಮತ್ತು ಸಂಕೀರ್ಣತೆಯ ಬಗೆಗೆ ಈ ಸಮಾಜದ ವಿವಿಧ ಸ್ತರಗಳಲ್ಲಿರುವ ಅನೇಕರು ಹೇಗೆ ಈ ವೃತ್ತಿಯನ್ನು ಪರಿಭಾವಿಸುತ್ತಾರೆ ಎಂಬುದನ್ನು ಸಂದರ್ಶನಗಳ ಮೂಲಕ ಕಲೆ ಹಾಕುವ ಪ್ರಯತ್ನ ಮಾಡಿದ್ದೇನೆ. ಇದರಿಂದಾಗಿ ಈ ಅಧ್ಯಯನಕ್ಕೊಂದು ವಾಸ್ತವತೆಯ ಪಕ್ವತೆ ಬರುವುದೆಂಬ ಆಶಯ ನನ್ನದಾಗಿದೆ.



ಬಿ.ಎನ್.ಪ್ರದೀಪ್

ಅಧ್ಯಾಯ : ೨

ಬುಡಕಟ್ಟು ಅರ್ಥ, ವ್ಯಾಪ್ತಿ
ಮತ್ತು ಆಧುನಿಕ ಪರಿಕಲ್ಪನೆ:

ಬುಡಕಟ್ಟು ಅರ್ಥ ಮತ್ತು ವ್ಯಾಪ್ತಿ

ಬುಡಕಟ್ಟು ಎನ್ನುವ ಪದದ ನಿರೂಪಣೆಯೇ ವಿವಾದಾತ್ಮಕವಾದುದು. ಹಲವಾರು ತಜ್ಞರುಗಳು ಬುಡಕಟ್ಟು ಬಗ್ಗೆ ಅವರದ್ದೇ ರೀತಿಯಲ್ಲಿ ಸಾಕಷ್ಟು ವಿಶ್ಲೇಷಿಸಿದ್ದಾರೆ. ವ್ಯಾಖ್ಯಾನ ಮಾಡಿದ್ದಾರೆ. ಬುಡಕಟ್ಟಿನ ಅರ್ಥ, ಸ್ವರೂಪ ಮತ್ತು ಮುಂದುವರಿಕೆ ಬಗ್ಗೆ ಬಹಳ ವಿದ್ವಾಂಸರುಗಳಲ್ಲಿ ವಿಭಿನ್ನವಾದ ಅಭಿಪ್ರಾಯಗಳಿವೆ. 'ಬುಡಕಟ್ಟು' ಎಂಬುದು ಒಂದು ಸಂಕೀರ್ಣವಾದ ಪದ. ಈ ಬುಡಕಟ್ಟು ಪರಿಕಲ್ಪನೆಯ ಬಗ್ಗೆಯೆ ವಿಸ್ತೃತವಾದಂತಹ ವ್ಯಾಖ್ಯಾನಗಳು ಕಾಲದಿಂದ ಕಾಲಕ್ಕೆ, ಮಂಡಿಸಲ್ಪಟ್ಟಿವೆ. ಈ ಬುಡಕಟ್ಟು ಪದದ ಅರ್ಥ ಮತ್ತು ವ್ಯಾಪ್ತಿಯನ್ನು ವಿಸ್ಲೇಷಿಸಿರುವ ಕೆಲವು ಆಯ್ದ ಮಾನವಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳ ನಿರೂಪಣೆಗಳ ನೆರವಿನಿಂದ ಬುಡಕಟ್ಟು ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡುತ್ತೇನೆ.

ಡಬ್ಲ್ಯು. ಹೆಚ್. ಆರ್. ರಿವರ್ಸ್ ಅಭಿಪ್ರಾಯ ಪಡುವಂತೆ ''ಒಂದು ಸರಳ ಜನಾಂಗದ ಸದಸ್ಯರಾಗಿರುವ, ಒಂದೇ ಸಾಮಾನ್ಯ ಭಾಷೆಯನ್ನಾಡುವ ಒಂದೇ ಬಗೆಯ ಸರ್ಕಾರವನ್ನು ರಚಿಸಿಕೊಂಡಿರುವ ಮತ್ತು ಕಾದಾಡಬೇಕಾದ ಸಂದರ್ಭ ಬಂದಾಗ ಒಟ್ಟಾಗಿ ಕೂಡಿ ಹೋರಾಡುವ ಜನರೇ ಆದಿವಾಸಿಗಳು.''[1]

ಜೆ.ಎಲ್. ಗಿಲಿನ್ ಮತ್ತು ಜೆ.ಪಿ.ಗಿಲ್ಲರ್‌ರವರು ಬುಡಕಟ್ಟನ್ನು ಹೀಗೆ ವ್ಯಾಖ್ಯಾನಿಸುತ್ತಾರೆ, ''ಒಂದೇ ನೆಲೆಯಲ್ಲಿ ವಾಸಿಸುವ, ಒಂದೇ ಭಾಷೆಯನ್ನು ಬಳಸುವ, ಒಂದೇ ವಿಧವಾದ ಸಂಸ್ಕೃತಿಯನ್ನು ಅನುಸರಿಸುವ ಸ್ಥಳೀಯ ಸಮುದಾಯಗಳ ಸಂಘಟಿತ ಸಮೂಹಕ್ಕೆ ಸೇರಿರುವವರೇ ಆದಿವಾಸಿಗಳು.''[2]

''ಸಾಮಾನ್ಯವಾಗಿ ಹಲವು ರಕ್ತ ಸಂಬಂಧಿಗಳನ್ನು, ತಂಡಗಳನ್ನು, ಉಪಸಮೂಹಗಳನ್ನು, ನಿರ್ದಿಷ್ಟ ಭೂ ಪ್ರದೇಶವನ್ನು, ತನ್ನದೇ ಆಗಿರುವ ಪ್ರತ್ಯೇಕ ಭಾಷೆಯನ್ನು, ವಿಶಿಷ್ಟವಾದ ಒಂದೇ ತೆರನಾದ ಸಂಸ್ಕೃತಿಯನ್ನು ಮತ್ತು ಏಕರೂಪವಾದ ರಾಜಕೀಯ ವ್ಯವಸ್ಥೆಯನ್ನು ಹೊಂದಿ ತಾವು ಇತರರಿಗಿಂತ ಭಿನ್ನವಾಗಿರುವವರು ಎಂಬ ಭಾವನೆ ಬೆಳೆಸಿಕೊಂಡಿರುವ ಜನರಿಂದ ಕೂಡಿರುವ ಸಾಮಾಜಿಕ ಸಮೂಹ ಬುಡಕಟ್ಟು ಸಮಾಜ ಎಂದೆನಿಸಿಕೊಳ್ಳುತ್ತದೆ '' ಎಂದು ಫೇರ್ ಚೈಲ್ಡ್ ಅಭಿಪ್ರಾಯ ಪಡುತ್ತಾರೆ.[3]

ಡಿ.ಎಸ್. ಮಜುಂದಾರ್‌ರವರು ಬುಡಕಟ್ಟು ಸ್ವರೂಪವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ, ''ಒಂದು ನಿಶ್ಚಿತ ಭೂಪ್ರದೇಶದಲ್ಲಿ ಜೀವನವನ್ನು ನಡೆಸುತ್ತಿರುವ, ಒಂದೇ ಬಗೆಯ ಭಾಷೆಯನ್ನಾಡುವ, ವಿವಾಹ ಹಾಗೂ ವೃತ್ತಿಗೆ ಸಂಬಂಧಪಟ್ಟ ನಿಷೇಧಗಳನ್ನು ಪರಿಪಾಲಿಸುವ ಮತ್ತು ಪರಸ್ಪರ ಸಂಬಂಧ ಹಾಗೂ ಅವಶ್ಯ ಕರ್ತವ್ಯಗಳ ವ್ಯವಸ್ಥೆಗಳನ್ನು ಹೊಂದಿರುವ ಸದಸ್ಯರನ್ನು ಒಳಗೊಂಡಿರುವ ಮತ್ತು ಒಂದೇ ಹೆಸರನ್ನು ಪಡೆದಿರುವ

ಕುಟುಂಬಗಳ ಸಮೂಹವೇ ಬುಡಕಟ್ಟು ಸಮಾಜ.'' ಹಾಗೆಯೇ ಮುಂದುವರೆದು ಮಜುಂದಾರ್‌ರವರು ಆದಿವಾಸಿ-ಬುಡಕಟ್ಟುಗಳನ್ನು ಇನ್ನೂ ಸವಿವರವಾಗಿ ವಿಶ್ಲೇಷಿಸಿದ್ದಾರೆ.

''ಸಾಮಾನ್ಯವಾಗಿ ಒಂದು ಗೊತ್ತಾದ ಸರಹದ್ದುಗಳುಳ್ಳ ಭೌಗೋಳಿಕ ಪ್ರದೇಶದಲ್ಲಿ ಒಂದು ನಿರ್ದಿಷ್ಟ ಇರುನೆಲೆ, ಆಡುಭಾಷೆ, ಸಾಂಸ್ಕೃತಿಕ ರಚನೆಗಳನ್ನು ಹೊಂದಿರುವ ಒಂದೇ ಬಗೆಯಜೀವನ ಕ್ರಮವನ್ನು ಅನುಸರಿಸುವ ಏಕಪ್ರಕಾರದ ಸಾಮಾಜಿಕ ನಿಯಮಗಳನ್ನು ಪರಿಪಾಲಿಸುವ, ವ್ಯಾಪಾರ ಅಥವಾ ಕೃಷಿ, ಹೋರಾಟ ಮುಂತಾದ ಸಾಮಾನ್ಯ ಉದ್ದೇಶಗಳಿಗಾಗಿ ಒಟ್ಟಿಗೆ ಸೇರಿ ಕೆಲಸ ಮಾಡುವ ಒಂದೇ ತಲೆಮಾರಿನ ಸಂಪ್ರದಾಯವನ್ನು ಪಡೆದುಕೊಂಡಿರುವ ಮತ್ತು ಉಪಸಮೂಹಗಳನ್ನು ಒಳಗೊಂಡಿರಬಹುದಾದ ಒಂದು ಸಾಮಾಜಿಕ ಸಮೂಹವನ್ನು ಆದಿವಾಸಿ ಬುಡಕಟ್ಟು ಎಂದು ಹೇಳಲಾಗುತ್ತದೆ.'' 4

ಆಂದ್ರೆ ಬಟೇಲಿಯವರ ಪ್ರಕಾರ ಅತ್ಯಂತ ವ್ಯಾಪಕವಾದ ದೃಷ್ಟಿಯಲ್ಲಿ ಬುಡಕಟ್ಟು ಎಂಬ ಪದವನ್ನು ವ್ಯಾಖ್ಯಾನಿಸಿದ್ದಾರೆ. ''ಬುಡಕಟ್ಟು ಎಂಬ ಶಬ್ದವು ಒಂದು ವಿಶಿಷ್ಟ ಸಮಾಜದ ಸದಸ್ಯನಾಗಿ ಒಬ್ಬ ವ್ಯಕ್ತಿಯು ಪಡೆದುಕೊಳ್ಳುವ ಸಾಂಪ್ರದಾಯಿಕ ನಂಬಿಕೆ, ಕಲೆ ಹಾಗೂ ಆಚರಣೆಗಳನ್ನು ಸೂಚಿಸುತ್ತದೆ; ಬುಡಕಟ್ಟು ಎಂಬುದು ತನಗೆ ಸಾಮಾನ್ಯ ಭಾಷೆ ಹಾಗೂ ಸಂಸ್ಕೃತಿಯ ಮೇಲೆ ಆಧಾರಿತವಾಗಿರುವ ಒಂದು ನಿರ್ಧಿಷ್ಟ ಗುರುತು ಮತ್ತು ವ್ಯಕ್ತಿತ್ವವಿದೆ ಎಂಬ ಭಾವನೆಯನ್ನು ಹೊಂದಿರುವ ಸಮೈಕ್ಯವಾದ ಜನಾಂಗೀಯ ಸಮೂಹವಾಗಿರುತ್ತದೆ ಮತ್ತು ಅದು ನಿಷ್ಪಕ್ಷವಾಗಿರುವ ವಾತಾವರಣ ಇತ್ಯಾದಿಗಳಲ್ಲಿ ಜೀವಿಸುವುದಕ್ಕೆ ಬೇಕಾಗುವಷ್ಟರ ಮಟ್ಟಿಗೆ ದೊಡ್ಡದಾಗಿರುತ್ತದೆ ಹಾಗೂ ಸಮಸ್ಯೆ ಕಾರ್ಯಾಚರಣೆಯಲ್ಲಿ ಎಲ್ಲರೂ ತೊಡಗುವುದಕ್ಕೆ ಅಗತ್ಯವಾಗಿರುವಷ್ಟರ ಮಟ್ಟಿಗೆ ಚಿಕ್ಕದಾಗಿರುತ್ತದೆ.'' ೫

ಡಾ. ನಂ. ತಪಸ್ವೀಕುಮಾರ್‌ರವರು 'ಬುಡಕಟ್ಟು' ಸ್ವರೂಪವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ, ''ಬುಡಕಟ್ಟು ಸಮಾಜದ ಮುಖ್ಯ ಸ್ವರೂಪವೆಂದರೆ ಅದರ ಜನಸಂಖ್ಯೆ ಮಿತವಾಗಿರುವುದು, ಮತ್ತು ಆ ಜನತೆ ಜೀವನೋಪಾಯಕ್ಕೆ ಆಹಾರ ಸಂಚಯ ಮತ್ತು ಬೇಟೆಗಾರಿಕೆಯನ್ನು ಅವಲಂಬಿಸುವುದು, ಹಾಗೂ ತಮ್ಮ ಪಾರಂಪರಿಕ ಜೀವನ ಪದ್ಧತಿಗಳನ್ನು ಮೆಚ್ಚಿ ಅವನ್ನು ಅನುಸರಿಸುತ್ತ ಬದುಕುವುದು.'' ೬

ಡಾ॥ ತೀ. ನಂ. ಶಂಕರನಾರಾಯಣರವರು ಬುಡಕಟ್ಟಿನ ಪರಿಕಲ್ಪನೆಯನ್ನು ಹೀಗೆ ವಿಶ್ಲೇಷಿಸುತ್ತಾರೆ. ''ಜಗತ್ತಿನಾದ್ಯಂತ ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ ಜನಗಳು ವಾಸ ಮಾಡುತ್ತಾರೆ. ಇವರ ಸಂಸ್ಕೃತಿಯನ್ನು ಕ್ರಮವಾಗಿ ನಗರಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಎಂದು ಕರೆಯಬಹುದು. ಇವರೆಡನ್ನೂ ಬಿಟ್ಟರೆ ಇನ್ನೊಂದು ಸಾಂಸ್ಕೃತಿಕ ವರ್ಗದ ಸಂಸ್ಕೃತಿಯನ್ನು ಗುರುತಿಸಬಹುದು. ಅದೇ ಬುಡಕಟ್ಟುಗಳ ಸಂಸ್ಕೃತಿ. ಅನೇಕ ಶತಮಾನಗಳಿಂದಲೂ ಬೆಟ್ಟಗುಡ್ಡಗಳ ಪ್ರದೇಶದಲ್ಲಿ, ಮರಳುಕಾಡುಗಳಲ್ಲಿ, ಹಿಮಪ್ರದೇಶಗಳಲ್ಲಿ, ದ್ವೀಪಗಳಲ್ಲಿ ವಾಸವಾಗಿರುವ ಸಾಮಾಜಿಕ ವರ್ಗಗಳು ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳ ಪ್ರಭಾವಕ್ಕೆ ಸಿಕ್ಕದೆ ತಮ್ಮ ಸಂಸ್ಕೃತಿಯನ್ನು

ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದಿರುವುದುಂಟು. ಈ ವರ್ಗಗಳಲ್ಲಿ ರಕ್ತಸಂಬಂಧ ಬಹು ಮುಖ್ಯವಾದ ಅಂಶ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಾಮಾಜಿಕ ವರ್ಗದ ಪ್ರತಿಯೊಬ್ಬನನ್ನು ತಿಳಿದು ಕೊಂಡಿರುತ್ತಾನೆ. ಇವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕು ರಕ್ತ ಸಂಬಂಧದ ಮೇಲೆ ಅವಲಂಬಿತವಾಗಿರುತ್ತದೆ. ಇಂತಹ ಸಾಮಾಜಿಕ ವರ್ಗಗಳು ತುಂಬಾ ಬಿಗಿಕಟ್ಟಾದ ನಿಯಮಗಳನ್ನು ಹೊಂದಿದ್ದು ಹೊರಗಿನ ಯಾರನ್ನೂ ಅನುಮಾನದಿಂದಲೇ ನೋಡುವ ಪದ್ಧತಿಯಿರುತ್ತದೆ. ಈ ಸಾಮಾಜಿಕ ವರ್ಗಗಳ ಸಂಸ್ಕೃತಿ ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳಿಗಿಂತ ತೀರಾ ಭಿನ್ನವಾಗಿದ್ದು ಅನಾಗರೀಕ ಎಂಬಂತೆ ಕಂಡುಬರುತ್ತದೆ. ಈ ಜನ ತಮ್ಮದೇ ಪ್ರತ್ಯೇಕವಾದ ಭಾಷೆ, ಆಚಾರ, ವ್ಯವಹಾರ, ಸಾಹಿತ್ಯ ಮೊದಲಾದವುಗಳನ್ನು ಹೊಂದಿರುತ್ತಾರೆ. ಇಂತಹ ಸಾಮಾಜಿಕ ವರ್ಗಗಳನ್ನು ಸಾಂಸ್ಕೃತಿಕ ಮಾನವ ವಿಜ್ಞಾನದಲ್ಲಿ ಬುಡಕಟ್ಟುಗಳು ಎಂದು ಕರೆಯಲಾಗಿದೆ.'' ೭

ಕರ್ನಾಟಕದ ಬಹಳ ಪ್ರಮುಖವಾದ ಕೆಲವು ಬುಡಕಟ್ಟುಗಳಾದ ಹಾಲಕ್ಕಿ ಒಕ್ಕಲಿಗರು, ಕೆರೆ ಒಕ್ಕಲಿಗರು, ಹಸಲರು, ಗೌಳಿಗರು, ಸಿದ್ದಿ ಬುಡಕಟ್ಟುಗಳ ಅಧ್ಯಯನ ಮಾಡುತ್ತಿರುವ ಜನಪದ ಹಾಗೂ ಬುಡಕಟ್ಟು ತಜ್ಞರುಗಳು, ವಿದ್ವಾಂಸರುಗಳು ಪ್ರಸ್ತುತ ಸ್ಥಿತಿಗಳನ್ನು ಬಹಳ ನಿಚ್ಚಳವಾಗಿ ವಿಶ್ಲೇಷಿಸಿದ್ದಾರೆ. ಅಂತಹ ಕೆಲವು ಅಭಿಪ್ರಾಯಗಳು ಈ ಕೆಳಕಂಡಂತಿವೆ.

ಕೆರೆ ಒಕ್ಕಲಿಗ ಬುಡಕಟ್ಟು ಮತ್ತು ಆಧುನಿಕತೆಯ ಪ್ರಭಾವದ ಬಗ್ಗೆ ಡಾ. ಆರ್.ಪಿ. ಹೆಗಡೆಯವರು ಹೀಗೆ ಅಭಿಪ್ರಾಯ ಪಡುತ್ತಾರೆ. ''ಶಿಷ್ಟ ಸಮಾಜದ ಅನೇಕ ಧಾರ್ಮಿಕ, ಸಾಮಾಜಿಕ ಆಚರಣೆಗಳು ಇವರ ಮೇಲೆ ಪ್ರಭಾವ ಬೀರುತ್ತಿರುವುದು. ಇದರಿಂದಾಗಿ ಇವರದೇ ಆದ ಬುಡಕಟ್ಟು ದೇವತೆಗಳ ಬದಲಿಗೆ ಹೊಸ ದೇವತೆಗಳು, ಪೂಜಾರಿಗಳು, ಪೂಜಾ ವಿಧಾನಗಳು ಪ್ರವೇಶ ಪಡೆಯುತ್ತಿವೆ. ದೇವಾಲಯಗಳೇ ಇಲ್ಲದ ಇವರ ಊರುಗಳಲ್ಲಿ ಮಂದಿರಗಳು ತಲೆ ಎತ್ತುತ್ತಿವೆ. ಇದೂ ಕೂಡ ಒಂದು ರೀತಿಯಲ್ಲಿ ಸಾಮಾಜಿಕವಾಗಿ ಮೇಲ್‌ಸ್ತರಕ್ಕೆ ಏರುವ ಪ್ರಯತ್ನವಾಗಿಯೇ ಉಂಟಾಗುತ್ತಿರುವ ಬದಲಾವಣೆ. ಇದರಿಂದಾಗಿ ಅನೇಕ ತಲೆಮಾರುಗಳಿಂದ ಸ್ಥಾನಿಕವಾಗಿ ಅಸ್ತಿತ್ವ ಪಡೆದಿರುವ ವಿಶಿಷ್ಟ ಸಾಂಸ್ಕೃತಿಕ ಘಟಕವೊಂದು ಪ್ರಬಲ ಪ್ರವಾಹದ ಜೊತೆ ಸೇರಿ ತನ್ನ ಪ್ರತ್ಯೇಕ ನೆಲೆಯನ್ನು ಕಳೆದುಕೊಳ್ಳುತ್ತಿದೆ. ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಪರಿವರ್ತನೆ ಹಾಗೂ ಆಧುನಿಕ ಸೌಲಭ್ಯಗಳ ಬಳಕೆಯ ಅವಕಾಶಗಳನ್ನು ಪಡೆದುಕೊಳ್ಳುತ್ತಿದ್ದಂತೆ ಸಾಂಸ್ಕೃತಿಕವಾಗಿಯೂ ಬದಲಾಗುತ್ತಿರುವ ಈ ಬುಡಕಟ್ಟು ಪರಿಸರ ತನ್ನ ಸರಳತೆ, ಮುಗ್ಧತೆ, ನಿರಾಡಂಬರತೆ, ಒಗ್ಗಟ್ಟು ಹಾಗೂ ಬಂಧು ಪ್ರೀತಿಯ ಆತ್ಮೀಯತೆಯಿಂದ ದೂರವಾಗುತ್ತಿರುವು,ದು, ಆಧುನಿಕ ಜಗತ್ತಿನ ತಳಕು, ಬೂಟಾಟಿಕೆ, ನಯವಂಚಕತನ, ಹಾಗೂ ಸಂಕುಚಿತ ಸ್ವಾರ್ಥಗಳಿಗೆ ಶಿಕಾರಿಯಾಗುತ್ತಿರುವುದು ಖೇದದ ಸಂಗತಿಯಾದರೂ ಅನಿವಾರ್ಯವಾದಂತಿದೆ.''

ಹಾಲಕ್ಕಿ ಒಕ್ಕಲಿಗ ಮಹಿಳೆಯರ ಬಗ್ಗೆ ಪ್ರಸ್ತಾಪಿಸುತ್ತಾ ಪ್ರೊ. ಹಿ.ಚಿ. ಬೋರಲಿಂಗಯ್ಯನವರು ಹೀಗೆ

ಅಭಿಪ್ರಾಯ ಪಡುತ್ತಾರೆ. ''ಹೆಣ್ಣು ಕೃಷಿಯನ್ನು ಕಂಡು ಹಿಡಿದ ಮೊದಲಿಗಳು ಮತ್ತು ಆಹಾರೋತ್ಪಾದನೆಯ ಅನ್ವೇಷಕಿ ಎಂಬ ವಾದವಿದೆ. ಹಾಲಕ್ಕಿ ಹೆಣ್ಣು ಮಕ್ಕಳು ಕೂಡ ಇದಕ್ಕೆ ಹೊರತಲ್ಲ. ಕೃಷಿಯ ಎಲ್ಲ ಅವಸ್ಥೆಗಳಲ್ಲಿಯೂ ಇವರ ಪಾತ್ರ ಗಮನಾರ್ಹವಾದುದು. ಆದರೆ ಬದಲಾಗುತ್ತಿರುವ ಈ ಸಮಾಜದಲ್ಲಿ ಇವರ ಸ್ಥಾನಮಾನಗಳೇನು ಎಂಬುದೇ ಈಗ ಬಹು ಮುಖ್ಯ ವಿಚಾರ.''

'ಹಸಲರು' ಬುಡಕಟ್ಟಿನ ಬಗ್ಗೆ ಎನ್. ಹುಚ್ಚಪ್ಪ ಮಾಸ್ತರರು ಈ ಕೆಳಗಿನಂತೆ ವ್ಯಾಖ್ಯಾನಿಸುತ್ತಾರೆ. ''ಹಸಲರು ಬುಡಕಟ್ಟು ಲಕ್ಷಣಗಳನ್ನು ಕಳೆದುಕೊಂಡಿದ್ದಾರೆ. ಅವರದೇ ಆದ ಆಚಾರ, ಸಂಪ್ರದಾಯ, ನಂಬಿಕೆಗಳನ್ನು ಮರೆತಿದ್ದಾರೆ. ಪ್ರಾದೇಶಿಕ ಜನಾಂಗಗಳ ಪ್ರಭಾವಕ್ಕೆ ಒಳಗಾಗಿ ಇತರೆ ತಮ್ಮ ಪರಿಸರದಲ್ಲಿರುವ ಜನಾಂಗಗಳ ಸಂಪ್ರದಾಯ ಆಚಾರ, ನಂಬಿಕೆಗಳನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ.'' [8]

ಡಾ. ಎಚ್.ಎಂ. ಮಹೇಶ್ವರಯ್ಯ ಗೌಳಿಗರ ಬಗ್ಗೆ ಉಲ್ಲೇಖಿಸುತ್ತಾ ಹೀಗೆ ಅಭಿಪ್ರಾಯ ಪಡುತ್ತಾರೆ. ''ಕಾಡನ್ನೇ ನಂಬಿ ಬದುಕುತ್ತಿರುವ ಆರ್ಥಿಕ ಸ್ಥಿತಿಗತಿಗಳಲ್ಲಿ ದೊಡ್ಡ ಬಿರುಗಾಳಿ ಎದ್ದಿದೆ. ಇದು ಕೇವಲ ಒಬ್ಬ ಗೌಳಿಗರ ಸಮಸ್ಯೆಯಲ್ಲ, ಕಾಡನ್ನು ನಂಬಿದ ಎಲ್ಲರ ಸಮಸ್ಯೆಯೂ ಆಗಿದೆ. ಗೌಳಿಗರು ತಮ್ಮ ಅಸ್ತಿತ್ವಕ್ಕಾಗಿಯೇ ಹೋರಾಡಬೇಕಾದ ಸ್ಥಿತಿಗೆ ತಲುಪಿದ್ದಾರೆ. ತಮ್ಮದೆ ಆದ ಭೌಗೋಳಿಕ ನೆಲೆ ಹಾಗೂ ಪ್ರತ್ಯೇಕ ಜೀವನ ವಿಧಾನ ಹೊಂದಿರುವ ಗೌಳಿಗರು ಅದನ್ನು ಉಳಿಸಿ ಕೊಳ್ಳಲು ಏಗಬೇಕಾಗಿದೆ.''[9]

''ಬುಡಕಟ್ಟು ಸಮೂಹಗಳಿಗೆ ನಿಸರ್ಗವೇ ಸರ್ವಶಕ್ತಿ ದೇವತೆ. ಸಿದ್ದಿಗಳೂ ಇದಕ್ಕೆ ಅಪವಾದವಲ್ಲ. ನಿಸರ್ಗ ನಿಯಮಗಳನ್ನೇ ಅನುಸರಿಸಿ ಬದುಕಿದ ಬದುಕು ಇವರದು. ತಮ್ಮ ಸುತ್ತಲಿನ ಭೌತಿಕ, ಸಾಂಸ್ಕೃತಿಕ ಮತ್ತು ಜೀವಪರಿಸರದೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿರುವ ಸಿದ್ದಿಗಳ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ನಾವು ನಮ್ಮ ನಗರ ಕೇಂದ್ರಿತ 'ನಾಗರಿಕ' ಸಮಾಜವು ಹೇರಿದ ಸಾಮಾನ್ಯ ಮೌಲ್ಯಗಳ ಪರಿಧಿಯಿಂದ ಹೊರಗೆ ಬಂದು ಬುಡಕಟ್ಟಿನ ಜೀವನ ಕ್ರಮವನ್ನು ನೋಡುವುದರ ಅಗತ್ಯವಿದೆ. ಐತಿಹಾಸಿಕ ಕಾರಣಗಳಿಂದಾಗಿ ಸಿದ್ದಿಗಳನ್ನು ಹಾಗೂ ಸಿದ್ದಿಗಳಂತಹ ಬುಡಕಟ್ಟಿನವರನ್ನು ನಾವು 'ಹಿಂದುಳಿದವರು', 'ಅನಾಗರಿಕರು' ಎಂದು ಭಾವಿಸಿ ಪರಿಗಣಿಸುವುದು ಅಜ್ಞಾನ ಪ್ರದರ್ಶನವಷ್ಟೇ ಅಲ್ಲ ಸಾಮಾಜಿಕ ಅಪಚಾರವೂ ಆದೀತು'' ಎಂದು ಡಾ. ವಿಘ್ನೇಶ್ವರ ಎನ್. ಭಟ್‌ರವರು ವಿಶ್ಲೇಷಿಸುತ್ತಾರೆ. [10]

ಈ ಮೇಲಿನ ವಿಶ್ಲೇಷಣೆಯ ಪ್ರಕಾರ ಮೇಲೆ ಪ್ರಸ್ತಾಪಿಸಲ್ಪಟ್ಟ ಬುಡಕಟ್ಟುಗಳು, ವಿದ್ವಾಂಸರುಗಳ ಬುಡಕಟ್ಟು ಪರಿಕಲ್ಪನೆಯ ವ್ಯಾಖ್ಯಾನಗಳ ಚೌಕಟ್ಟುಗಳಿಂದ ಹೊರ ಬಂದಿರುವುದು ಅತ್ಯಂತ ಸುಸ್ಪಷ್ಟ. ಈ ಸಾಂಪ್ರದಾಯಿಕ ಬುಡಕಟ್ಟು ವ್ಯಾಖ್ಯಾನಗಳನ್ನು ಇಂದಿನ ಈ ಬುಡಕಟ್ಟುಗಳಿಗೆ ಯಾಥಾವತ್ತಾಗಿ ಅನ್ವಯ ಮಾಡಲು ಹೊರಟರೆ ಅವುಗಳನ್ನು ನಾವು ಬುಡಕಟ್ಟುಗಳೆಂದು ಪರಿಗಣಿಸಲಾಗದ ಪರಿಸ್ಥಿತಿ ಉಂಟಾಗುತ್ತದೆ.

1952ರ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಆಯೋಗವು ಬುಡಕಟ್ಟುಗಳ ಎಂಟು ಲಕ್ಷಣಗಳನ್ನು ಈ ರೀತಿ

ಪಟ್ಟಿಮಾಡಿದೆ.

೧. ನಾಗರೀಕ ಸಮುದಾಯದಿಂದ ದೂರವಿದ್ದು, ಕಾಡು ಮತ್ತು ಬೆಟ್ಟಗಳಲ್ಲಿ ಬದುಕುವವರು.

೨. ನೀಗ್ರೋೕಯಿಡ್, ಆಸ್ಟ್ರೋಲಾಯಿಡ್ ಮತ್ತು ಮಂಗೋಲಾಯಿಡ್ ಈ ಮೂರು ಜನಾಂಗಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿರಬೇಕು.

೩. ಪ್ರತ್ಯೇಕವಾದ ಬುಡಕಟ್ಟು ಭಾಷೆಯನ್ನು ಒಳಗೊಂಡಿರಬೇಕು.

೪. ಪಿತೃಪೂಜೆ, ದೆವ್ವಗಳ ಆರಾಧನೆಯನ್ನು ಮಾಡುವ ಪ್ರಾಚೀನ ಧಾರ್ಮಿಕ ಆಚರಣೆಯನ್ನು ಹೊಂದಿರಬೇಕು.

೫. ಪ್ರಾಚೀನ ವೃತ್ತಿಗಳಾದ ಬೇಟೆ, ಬೇಸಾಯ ಮತ್ತು ಕಾಡುತ್ಪತ್ತಿಯನ್ನು ಸಂಗ್ರಹಿಸುವ ವೃತ್ತಿಗಳನ್ನು ಅನುಸರಿಸಬೇಕು.

೬. ಬುಡಕಟ್ಟುಗಳು ಮಾಂಸ ಮತ್ತು ನರ ಮಾಂಸ ಭಕ್ಷಣೆಯನ್ನು ಮಾಡುತ್ತಾರೆ.

೭. ಬುಡಕಟ್ಟುಗಳು ಸಾಮಾನ್ಯವಾಗಿ ಬೆತ್ತಲೆ ಅಥವಾ ಅರೆಬೆತ್ತಲೆಗಳಾಗಿದ್ದು ಮರದ ತೊಗಟೆ, ಎಲೆಗಳನ್ನು ಬಟ್ಟೆಯಾಗಿ (ಬಳಸುವವರು) ಬಳಸುತ್ತಾರೆ.

೮. ವಲಸೆ ಸಂಸ್ಕೃತಿಯನ್ನು ಹೊಂದಿದ್ದು ಕುಡಿತ ಮತ್ತು ಕುಣಿತಗಳಲ್ಲಿ ವಿಶೇಷ ಆಸಕ್ತಿಯನ್ನು ತಳೆಯುತ್ತಾರೆ.

ಈ ಮೇಲ್ಕಂಡ ಆಯೋಗದ ನಿರೂಪಣೆಯ ಅಳತೆಪಟ್ಟಿಯನ್ನು ಮಾನದಂಡವಾಗಿಟ್ಟುಕೊಂಡು ಬುಡಕಟ್ಟುಗಳನ್ನು ಪಟ್ಟಿಮಾಡ ಹೊರಟರೆ ಇಂದಿನ ಬಹುಪಾಲು ಬುಡಕಟ್ಟುಗಳನ್ನು ಹಾಗೆ ಪರಿಗಣಿಸಲು ಸಾಧ್ಯವಾಗುವುದಿಲ್ಲ. ಸ್ಥಾಯಿ ಸ್ವರೂಪ ಇಟ್ಟುಕೊಂಡಿರುವ ವಿಶ್ಲೇಷಣೆ ಇದು. ಈ ರೀತಿಯ ಬುಡಕಟ್ಟುಗಳು ಇಲ್ಲವೇ ಇಲ್ಲ ಎಂದೇ ಹೇಳಬಹುದು. ಇದ್ದರೂ ಅತ್ಯಂತ ವಿರಳ. ಆದಿವಾಸಿ ಬುಡಕಟ್ಟುಗಳ ಬಗ್ಗೆ ಅಪಾರ ಕಾಳಜಿ ಕಳಕಳಿಯನ್ನು ಹೊಂದಿದ್ದ ಭಾರತದ ಪ್ರಥಮ ಪ್ರಧಾನಿ ಪಂಡಿತ್‌ಜವಹರ್‌ಲಾಲ್ ನೆಹರೂರವರು ಬುಡಕಟ್ಟುಗಳ ಸಂಸ್ಕೃತಿ ಮತ್ತು ಅಭಿವೃದ್ಧಿ ಕುರಿತು ಒಬ್ಬ ಮಾನವಶಾಸ್ತ್ರಜ್ಞನಂತೆ ಚಿಂತಿಸಿರುವುದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಹೆಚ್ಚು ಅರ್ಥ ಪೂರ್ಣವಾಗುತ್ತದೆ.

''ನಾವು ಆದಿವಾಸಿಗಳ ಕುರಿತು ಮಾತನಾಡುವಾಗ, ನನಗೆ ಆಶ್ಚರ್ಯವಾಗುವ ಸಂಗತಿಯೆಂದರೆ, ನಾವೆಲ್ಲ ಒಂದೇ ಬಗೆಯ ಪೂರ್ವಗ್ರಹಗಳಿಂದ ಯೋಚಿಸುತ್ತಿರುತ್ತೇವೆ. ನನಗೆ ಅನ್ನಿಸುವ ಮಟ್ಟಿಗೆ, ನಾವೆಲ್ಲಾ ಬುಡಕಟ್ಟು ಜನರೇ ಆಗಿದ್ದೇವೆ. ನಾವು ದೆಹಲಿಯಲ್ಲಿಯೇ ವಾಸವಾಗಿರಲಿ, ಮದ್ರಾಸ್‌ನಲ್ಲಿರಲಿ, ಬಾಂಬೆ ಅಥವಾ ಕಲ್ಕತ್ತಾ

ಇಲ್ಲವೆ ಗುಡ್ಡಗಾಡಿನಲ್ಲಿರಲಿ, ಬಯಲು ಸೀಮೆಯಲ್ಲಿರಲಿ ನಾವೆಲ್ಲಾ ಬುಡಕಟ್ಟುಗಳೇ ಆಗಿದ್ದೇವೆ. ಗುಡ್ಡಗಾಡು ಜನರನ್ನು ಆದಿಮ ಜನಾಂಗಗಳೆಂದು, ನಮ್ಮನ್ನು ನಮ್ಮಷ್ಟಕ್ಕೆ ಅತ್ಯಂತ ಮುಂದುವರಿದ ನಾಗರೀಕ ಪ್ರಜೆಗಳೆಂದು ಕರೆದುಕೊಳ್ಳುವುದು ನನ್ನ ಪ್ರಕಾರ ಸರಿಯಾದ ಕ್ರಮವಲ್ಲ. ಅವರ ಮತ್ತು ನಮ್ಮ ನಡುವೆ ಗುರುತಿಸ ಬಹುದಾದ ಕೆಲವು ವ್ಯತ್ಯಾಸಗಳಿರಬಹುದು. ಉದಾಹರಣೆಗೆ ಪಂಜಾಬ್ ಜನತೆಗೂ ಮದ್ರಾಸಿನ ಜನತೆಗೂ ಭಿನ್ನತೆಗಳಿವೆ ನಿಜ. ಗುಡ್ಡಗಾಡುಗಳಲ್ಲಿ ಬದುಕುವ ಸಮುದಾಯಗಳಿಗೂ ಮತ್ತು ಬಯಲುಸೀಮೆಯಲ್ಲಿ ಬದುಕುವ ಸಮುದಾಯಗಳಿಗೂ ಬದುಕುವ ರೀತಿಯಲ್ಲಿ ಅನೇಕ ವ್ಯತ್ಯಾಸಗಳಿವೆ. ವಾಸಿಸುವ ಪ್ರದೇಶ ಮತ್ತು ಅಲ್ಲಿಯ ಹವಾಮಾನಗಳಿಗೆ ತಕ್ಕಂತೆ ಅಲ್ಲಿನ ಜನಸಮುದಾಯಗಳ ಆಹಾರ ವ್ಯವಸ್ಥೆ ಮತ್ತು ಉಡುಗೆ ತೊಡುಗೆ ಮತ್ತು ಜೀವನ ವಿಧಾನಗಳಲ್ಲಿ ಅನೇಕ ವ್ಯತ್ಯಾಸಗಳು ಉಂಟಾಗುತ್ತವೆ. ಇದು ಅನಿವಾರ್ಯ ಸಹ.'' ಅವರು ಇನ್ನೂ ಮುಂದುವರಿದು, ''ಬುಡಕಟ್ಟು ಜನರಿಗೂ, ಬುಡಕಟ್ಟೇತರ ಜನರಿಗೂ ಭಿನ್ನತೆಗಳನ್ನು ಗುರುತಿಸುವ ಕ್ರಮವೇ ತಪ್ಪಿನದು''[11] ಎಂದು ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ ಬುಡಕಟ್ಟು ಸಮುದಾಯ ಮತ್ತಿತರೆ ಜನಸಮುದಾಯದ ಮಧ್ಯೆ ತೀವ್ರವಾಗಿ ಮತ್ತು ಗಟ್ಟಿಯಾಗಿ ಒಂದು ಗೆರೆ ಎಳೆಯುವುದು ಅಷ್ಟು ಸುಲಭವಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಅವರ ಪ್ರತಿಪಾದನೆ ಈ ಬಗೆಯ ವರ್ಗೀಕರಣಗಳನ್ನು ನಿರಾಕರಿಸುವವರೆವಿಗೂ ಹಿಗ್ಗಿಸಲ್ಪಟ್ಟಿರುವುದನ್ನು ನಾವು ಕಾಣಬಹುದಾಗಿದೆ.

ನೆಹರೂರವರ ವಿಶ್ಲೇಷಣೆಯ ಪ್ರಕಾರ, ಆದಿವಾಸಿ ಬುಡಕಟ್ಟುಗಳನ್ನು ನಾವು ಎರಡು ಅತಿರೇಕಗಳ ಮೂಲಕ ತಲುಪಲು ಪ್ರಯತ್ನಿಸುತ್ತಿದ್ದೇವೆ ಎಂದು ಹೇಳಬಹುದು.

ಮೊದಲನೆಯದಾಗಿ, ಮಾನವ ಶಾಸ್ತ್ರಜ್ಞರುಗಳು ಚರ್ಚೆಗಾಗಿ, ಆಸಕ್ತಿ ಹುಟ್ಟಿಸುವ ಅಧ್ಯಯನಕ್ಕಾಗಿ ಈ ಬುಡಕಟ್ಟುಗಳನ್ನು ಮ್ಯೂಸಿಯಂ ಮಾದರಿಯ ತರಹ ಅವುಗಳನ್ನು ಸಂರಕ್ಷಿಸುವ ಮ್ಯೂಸಿಯಂ ಕ್ರಮಗಳನ್ನು ಪ್ರತಿಪಾದಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಅಷ್ಟೇ ಅಪಾಯಕಾರಿಯಾದ ಮುಕ್ತದ್ವಾರ ನೀತಿಯನ್ನು ಮತ್ತೆ ಕೆಲವು ವಿದ್ವಾಂಸರು ಪ್ರತಿಪಾದಿಸುತ್ತಾರೆ. ಇಂತಹ ಪ್ರತಿಪಾದನೆಗಳು ಬುಡಕಟ್ಟುಗಳನ್ನು ವರ್ತಮಾನದಲ್ಲಾಗುತ್ತಿರುವ ಆಧುನಿಕ ಜಗತ್ತಿನ ಬದಲಾವಣೆಗಳಿಗೆ ವಾಸ್ತವವಾಗಿ ತೆರೆದಿಡಬೇಕೆಂದು ಅಭಿಪ್ರಾಯವನ್ನು ಬಿಂಬಿಸುತ್ತವೆ. ಈ ಮುಕ್ತದ್ವಾರ ನೀತಿ ಆದಿವಾಸಿಗಳನ್ನು ಆರ್ಥಿಕವಾಗಿ ಭೀಕರ ಶೋಷಣೆಗೆ ಈಡು ಮಾಡುತ್ತವೆ. ಇದರಿಂದಾಗಿ ಹೊರಗಿನ ಎಲ್ಲ ಬಗೆಯ ಶೋಷಣೆಯ ಆಯಾಮಗಳು ಆದಿವಾಸಿ ಪ್ರದೇಶಗಳಿಗೆ ಪ್ರವೇಶ ಪಡೆಯುವುದೇ ಅಲ್ಲದೆ ಆದಿವಾಸಿಗಳನ್ನು ಅವರ ನೆಲೆಗಳಿಂದಲೇ ಒಕ್ಕಲೆಬ್ಬಿಸುವ ಅಪಾಯ ಸಹಜವಾಗಿಯೇ ಇದರಿಂದ ಸಂಭವಿಸಿ ಬಿಡುತ್ತದೆ ಎಂಬುದು ನೆಹರೂರವರ ಖಂಡಿತವಾದ ಅಭಿಪ್ರಾಯವಾಗಿದೆ.

ನೆಹರೂರವರು, ''ಆದಿವಾಸಿಗಳೆಂಬ ಪ್ರತ್ಯೇಕ ಗುಂಪೊಂದನ್ನು ಮಾಡಿದವರು ಯಾರು?'' ಎಂಬ

ಗಂಭೀರ ಪ್ರಶ್ನೆಯೊಂದನ್ನು ಎತ್ತಿ ಎಲ್ಲ ಬಗೆಯ ವಿಂಗಡಣೆಗಳನ್ನು ನಿರಾಕರಿಸಿ 'ಎಲ್ಲ ಜನರೂ ಆದಿವಾಸಿಗಳೇ' ಎಂದು ಅಭಿಪ್ರಾಯ ಪಡುತ್ತಾರೆ.

ಈ ಎಲ್ಲ ವಿಶ್ಲೇಷಣೆಗಳನ್ನು ಗಮನಿಸಿದರೆ ಬುಡಕಟ್ಟು ಸಾಂಪ್ರದಾಯಿಕ ಪರಿಕಲ್ಪನೆಯ ವಿವಿಧ ಅಂಶಗಳು, ಆಯಾಮಗಳು, ಆಚರಣೆಗಳು, ಅವರ ಸಂಸ್ಕೃತಿ, ಭಾಷೆ ಅವರ ಸಾಂಘಿಕ ರೂಪ, ಅವರ ಆಡಳಿತಾತ್ಮಕ ಸ್ವರೂಪ ಇನ್ನೂ ಮುಂತಾದ ಅಂಶಗಳು ಪ್ರಧಾನವಾಗಿ ಪ್ರಸ್ತಾಪಿಸಲ್ಪಟ್ಟಿವೆ. ಆದರೆ ನಾವಿಲ್ಲಿ ಈ ಎಲ್ಲ ವಿಶ್ಲೇಷಣೆಗಳಲ್ಲೂ ಬಹಳ ಪ್ರಧಾನವಾಗಿ ಕಂಡುಕೊಳ್ಳುವ ಅಂಶವೆಂದರೆ ಬುಡಕಟ್ಟುಗಳ 'ಚಲನಶೀಲತೆ'. ಈ ಬುಡಕಟ್ಟುಗಳು ತಮ್ಮ ಆಂತರಿಕ ಸ್ವರೂಪದಲ್ಲಿ, ಬಾಹ್ಯ ಸ್ವರೂಪದಲ್ಲಿ, ಸಂಘಟನಾ ಸ್ವರೂಪದಲ್ಲಿ, ಆಚಾರ-ವಿಚಾರಗಳಲ್ಲಿ, ಸಾಂಸ್ಕೃತಿಕ ಸ್ವರೂಪದಲ್ಲಿ, ಭಾಷಾ ಸ್ವರೂಪದಲ್ಲಿ, ನಂಬಿಕೆಗಳಲ್ಲಿ ಅತ್ಯಂತ ಚಲನಶೀಲವಾದ ಒಂದು ಜನಪದ ಸಮುದಾಯ. ಈ ಸಮುದಾಯ ನಿಂತ ನೀರಲ್ಲ. ಸದಾ ಹರಿಯುವ, ಕಾಲದ ಪ್ರವಾಹಕ್ಕೆ ತನ್ನನ್ನು ತೆರೆದುಕೊಂಡಿರುವ ಒಂದು ಮುಗ್ಧ ಮುಕ್ತ ಸಮುದಾಯ. ಅದು ಪ್ರತಿ ಕ್ಷಣದಲ್ಲೂ ತನ್ನೆಲ್ಲಾ ಪರಂಪರೆಯೊಟ್ಟಿಗೆ ಸದಾ ವಿಕಸನಶೀಲವಾದ ಸಮಾಜದೊಟ್ಟಿಗೆ ಹೊಂದಿಕೊಳ್ಳಲು ನಿರಂತರವಾದ ಸಂಘರ್ಷದಲ್ಲಿ ತೊಡಗಿರುತ್ತದೆ. ಅತ್ಯಂತ ಸೂಕ್ಷ್ಮವಾಗಿ ತನ್ನ ಪಾರಂಪರಿಕ ಮತ್ತು ಸಾಂಪ್ರದಾಯಿಕ ಸ್ವರೂಪಗಳನ್ನು ಸಂರಕ್ಷಿಸಿಕೊಳ್ಳಲು ಹೆಣಗಾಡುತ್ತಲೇ ವಿಕಾಸಶೀಲವಾದ ಆಧುನಿಕ ನಾಗರೀಕತೆಯ ಜೊತೆಗೆ ಹೆಜ್ಜೆ ಹಾಕಲು ನಿರಂತರವಾದ ಮಾರ್ಪಾಟುಗಳನ್ನು ಮಾಡಿಕೊಳ್ಳುತ್ತಾ ಹೋಗುತ್ತದೆ. ಕಾಲದ ಚಕ್ರದೊಂದಿಗೆ ಬುಡಕಟ್ಟುಗಳ ತಮ್ಮ ರೂಪ ವೈವಿಧ್ಯತೆಯನ್ನು ವಿಕಾಸಗೊಳಿಸಿ ಕೊಳ್ಳುತ್ತಲೇ ತಮ್ಮ ಅಂತರಂಗದಲ್ಲಿ ತಮ್ಮ ಸಾಂಪ್ರದಾಯಿಕ ಗುಪ್ತ ಎಳೆಗಳನ್ನು ಅನೂಚಾನವಾಗಿ ಮುಂದುವರಿಸುತ್ತವೆ. ಬದಲಾಗುತ್ತಿರುವ ಸಮಾಜ ಮತ್ತು ಆಧುನಿಕತೆಗೆ ಮುಖಾಮುಖಿಯಾದ ಈ ಬುಡಕಟ್ಟು ಸಮುದಾಯಗಳು ನಿರಂತರವಾಗಿ ಹೇಗೆ ಆ ಆಧುನಿಕತೆಯ ಸವಾಲುಗಳನ್ನೇ ಸ್ವೀಕರಿಸುತ್ತಾ, ಮುಖಾಮುಖಿಯಾಗಿ ಎದುರಿಸುತ್ತಾ, ಮೆಟ್ಟಿ ನಿಲ್ಲುತ್ತಾ ತಮ್ಮತನವನ್ನು ಕಾಪಾಡಿಕೊಳ್ಳುವ ನಿರಂತರ ಪ್ರಯತ್ನಗಳನ್ನು ಮಾಡುತ್ತಿವೆ ಎಂದು ಈ ಮೇಲಿನ ನಿರೂಪಣೆಯು ಪ್ರಸ್ತಾಪಿಸುತ್ತವೆ.

ಈ ನಿಟ್ಟಿನಲ್ಲಿ ಪ್ರೊ.ಹಿ.ಚಿ. ಬೋರಲಿಂಗಯ್ಯನವರು ಬುಡಕಟ್ಟುಗಳ ಆಧುನಿಕ ಸ್ವರೂಪ ಮತ್ತು ಪರಿಕಲ್ಪನೆಯ ಬಗ್ಗೆ ಈ ಕೆಳಗಿನಂತೆ ವಿಶ್ಲೇಷಿಸಿದ್ದಾರೆ.

"ನಿಜವಾದ ಬುಡಕಟ್ಟು ಯಾವುದು? ಯಾವುದೇ ಒಂದು ಪ್ರದೇಶದಲ್ಲಿ ತಮ್ಮದೇ ಆದ ವಿಶಿಷ್ಟ ಜೀವನ ಪದ್ಧತಿ ರೂಪಿಸಿಕೊಂಡು, ತಮ್ಮದೇ ಆದ ಪರಂಪರೆಯಲ್ಲಿ ನಿರ್ಧಿಷ್ಟ ಜ್ಞಾನಶಾಖೆಗಳನ್ನು ಬೆಳಿಸಿಕೊಂಡು, ಸಾಮಾಜಿಕ ಪದ್ಧತಿಗಳನ್ನು ವಿಶಿಷ್ಟವಾಗಿ ಮತ್ತು ಅನನ್ಯವಾಗಿ ಅನುಸರಿಸುತ್ತಾ ಬರುತ್ತಿರುವ ಜನ ಸಮುದಾಯಕ್ಕೆ ಬುಡಕಟ್ಟು ಅನ್ನಬಹುದು. ಇವರು ಅರಣ್ಯದಲ್ಲೇ ಬದುಕಬೇಕು ಎಂದೇನಿಲ್ಲ. ಬಹುಶಃ ಗಿರಿಜನರು ಎಂಬ ಪದ

ಗಿರಿಕಂದರ ನಿವಾಸಿಗಳು ಎಂಬ ಅರ್ಥದಲ್ಲಿಯೇ ನಿರೂಪಿತವಾಗಿರುವಂತಿದೆ. ಈ ಗಿರಿಜನರು ಎಂಬ ಪದ ಸಹ್ಯಾದ್ರಿಯ ಘಟ್ಟಗಳು ಮತ್ತು ಕರಾವಳಿಯ ಅರಣ್ಯಗಳಲ್ಲಿ ವಾಸಿಸುವ ಜನರಿಗೆ ಸರಿಯಾಗಿ ಒಪ್ಪುವ ಮಾತು. ಆದರೆ ಬಯಲು ಸೀಮೆಯಲ್ಲೂ ಅನೇಕ ರೀತಿಯ ಬುಡಕಟ್ಟು ಜನರಿದ್ದಾರೆ. ಒಂದೇ ಪ್ರದೇಶಕ್ಕೆ ಸೀಮಿತವಾದವರೂ ಇದ್ದಾರೆ. ಅಲೆಮಾರಿ ಬುಡಕಟ್ಟುಗಳೂ ಇವೆ. ಆದ್ದರಿಂದ ಬುಡಕಟ್ಟು ಎಂದರೆ ಒಂದು ಸಮಾನವಾದ ವಿಶಿಷ್ಟಾಂಶಗಳನ್ನು ಪಡೆದ ಒಂದು ಸಮುದಾಯ ಎಂದು ನಾವು ಅರ್ಥಮಾಡಿಕೊಳ್ಳಬೇಕು. ಉಡುಗೆ, ತೊಡುಗೆ, ಊಟ ಉಪಚಾರ, ಆರಾಧನ, ಸಂಪ್ರದಾಯ, ಭಾಷೆ, ಸಾಹಿತ್ಯ, ನ್ಯಾಯ ಪದ್ಧತಿ, ನಿಷೇದ ರೂಪಗಳು, ರೂಪಿಸಿಕೊಂಡ ಪರಂಪರೆ ಹಾಗೂ ನಂಬಿಕೆ ಇತ್ಯಾದಿಯಾಗಿ ಎಲ್ಲವೂ ಯಾವುದೇ ಮತ್ತೊಂದು ಸಮಾಜ ಅಥವಾ ಸಮುದಾಯಕ್ಕಿಂತ ಭಿನ್ನವಾಗಿ ಒಂದು ಬುಡಕಟ್ಟಿನಲ್ಲಿ ಕಾಣಿಸಿಕೊಳ್ಳುತ್ತವೆ. ಭಿನ್ನತೆ ಅಷ್ಟೇ ಅಲ್ಲ, ಅವರ ಆಚಾರ ವಿಚಾರ ಸಂಪ್ರದಾಯಗಳು ಮತ್ತು ಪ್ರಾಚೀನದಿಂದ ಪರಂಪರಾಗತ ಪದ್ಧತಿಗಳನ್ನು ಇನ್ನೂ ಅನುಸರಿಸುವ ಪ್ರಯತ್ನದಲ್ಲಿರುತ್ತವೆ. ಒಟ್ಟಾರೆ, 'ಪ್ರಾಚೀನತೆ-ವಿಶಿಷ್ಟತೆ-ಪ್ರತ್ಯೇಕತೆ' ಈ ಮೂರು ಒಂದು ಬುಡಕಟ್ಟಿನ ಮುಖ್ಯ ಲಕ್ಷಣಗಳು. ಇಂದಿನ ದಿನದಲ್ಲಿ ಪ್ರಾಚೀನತೆ ಇರಲೇಬೇಕಾದ ಅಂಶ ಎಂದು ತಿಳಿಯಬೇಕಾಗಿಲ್ಲ. ಯಾಕೆಂದರೆ ಹೊಸಕಾಲದ ಬದಲಾವಣೆಯ ವೇಗ ಅಷ್ಟು ತೀವ್ರವಾಗಿದೆ.'' [12]

ಪಂಡಿತ್ ಜವಹಾರ್‌ಲಾಲ್‌ನೆಹರುವರು ಬುಡಕಟ್ಟನ್ನು ಪರಿಕಲ್ಪಿಸಿರುವ ಪರಿ ಮತ್ತು ಪ್ರೊ. ಹಿ.ಚಿ.ಬೋರಲಿಂಗಯ್ಯನವರು ಒಂದು ಬುಡಕಟ್ಟು ಪರಿಕಲ್ಪನೆಗೆ ವಿಶಾಲವಾದ ಹಾಗು ಆಧುನಿಕವಾದ ಹೊಸರೂಪ ಪಡೆದ ವ್ಯವಸ್ಥೆಯನ್ನು ವಿಶ್ಲೇಷಿಸಿರುವುದನ್ನು ನಾನಿಲ್ಲಿ ಗಮನದಲ್ಲಿಟ್ಟುಕೊಂಡು ಹಾಗೂ ಇತರೆ ವ್ಯಾಖ್ಯಾನಕಾರರ ವಿಚಾರಗಳನ್ನು ಪ್ರಧಾನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಲೈಂಗಿಕ ವೃತ್ತಿ ಸಮುದಾಯದಲ್ಲಿರುವ ಬುಡಕಟ್ಟು ಲಕ್ಷಣಗಳ ಆಧುನಿಕ ಚೌಕಟ್ಟನ್ನು ವಿಶ್ಲೇಷಿಸಲು ಇಚ್ಛಿಸುತ್ತೇನೆ.

ಅನೇಕ ಮಾನವಶಾಸ್ತ್ರಜ್ಞರುಗಳು, ಬುಡಕಟ್ಟು ತಜ್ಞರುಗಳು'ಬುಡಕಟ್ಟು'ಗಳ ಬಗ್ಗೆ ಅಭಿವ್ಯಕ್ತಗೊಳಿಸಿರುವ ಪ್ರಧಾನ ಅಂಶಗಳನ್ನು ನಾನಿಲ್ಲಿ ಹೆಕ್ಕಿ ತೆಗೆದುಕೊಳ್ಳುತ್ತಿದ್ದೇನೆ.

ಬುಡಕಟ್ಟು; ಆಧುನಿಕ ಪರಿಕಲ್ಪನೆ:

ವೃತ್ತಿಗೆ ಸಂಬಂಧಪಟ್ಟ ನಿಷೇದಗಳನ್ನು ಪರಿಪಾಲಿಸುವ ಮತ್ತು ಪರಸ್ಪರ ಸಂಬಂಧ ಹಾಗೂ ಅವಶ್ಯ ಕರ್ತವ್ಯಗಳ ವ್ಯವಸ್ಥೆಗಳನ್ನು ಹೊಂದಿರುವ ಸದಸ್ಯರನ್ನು ಒಳಗೊಂಡಿರುವ ಮತ್ತು ಒಂದೇ ಹೆಸರನ್ನು ಪಡೆದಿರುವ ಕುಟುಂಬಗಳ ಸಮೂಹ, ಒಂದುಗೊತ್ತಾದ ಸರಹದ್ದುಳ್ಳ ಭೌಗೋಳಿಕ ಪ್ರದೇಶ. ಒಂದೇ ಬಗೆಯ ಜೀವನ ಕ್ರಮವನ್ನು ಅನುಸರಿಸುವ, ತಾವು ಇತರರಿಗಿಂತ ಭಿನ್ನ ಎನ್ನುವ ಭಾವನೆ ಬೆಳೆಸಿಕೊಂಡಿರುವ ಜನರಿಂದ ಕೂಡಿರುವ ಸಾಮಾಜಿಕ ಸಮೂಹ. ಮಿತವಾದ ಜನಸಂಖ್ಯೆ, ಆ ಜನತೆ ಜೀವನೋಪಾಯಕ್ಕೆ ಆಹಾರ ಸಂಚಯ ಮತ್ತು ಬೇಟೆಗಾರಿಕೆಯನ್ನು ಅವಲಂಬಿಸುವುದು, ವಲಸೆ ಸಂಸ್ಕೃತಿ ಹೊಂದಿದ್ದು ಕುಡಿತ ಮತ್ತು ಕುಣಿತಗಳಲ್ಲಿ ವಿಶೇಷ ಆಸಕ್ತಿ ಹೊಂದಿರುವುದು.

ಈ ಅಂಶಗಳು ಬುಡಕಟ್ಟುಗಳ ಎಳೆಗಳಾಗಿದ್ದು ಅವುಗಳಲ್ಲಿ ಲೈಂಗಿಕ ವೃತ್ತಿ ಸಮುದಾಯ ಕೂಡ ಒಂದು ಬುಡಕಟ್ಟಿನ ಯಾವ ಯಾವ ಒಳಸುಳಿಗಳನ್ನು ತನ್ನೊಂದಿಗೆ ಕೊಂಡೊಯ್ಯುತ್ತಿದೆ ಎಂಬುದನ್ನು ವಿಶ್ಲೇಷಿಸುವ ಹಾಗೂ ಆ ದಿಕ್ಕಿನಲ್ಲಿ ಒಂದು ಆಧುನಿಕ ಬುಡಕಟ್ಟುಗಳ ಸ್ವರೂಪವನ್ನು ಗುರುತಿಸುವ ಒಂದು ಪ್ರಯತ್ನವನ್ನು ನಾನಿಲ್ಲಿ ಮಾಡುತ್ತಿದ್ದೇನೆ.

ಅವರು ಯಾವುದೇ ಜನವರ್ಗ, ಜಾತಿಗಳಿಂದ ಬಂದಿರಲಿ, ಕಾಡು, ಹಳ್ಳಿ ಅಥವಾ ನಗರ ಪ್ರದೇಶಗಳಿಂದಲೇ ಬಂದಿರಲಿ, ಆ ವೃತ್ತಿಯನ್ನು ಕೈಗೊಂಡ ಮೇಲೆ ಅವರದೇ ಆದ ಒಂದು ಬದುಕಿನ ಚೌಕಟ್ಟಿಗೆ ಹಾಗೂ ಹಲವು ವಿಧಿ ನಿಷೇಧಗಳಿಗೆ ಅವರು ಒಳಪಡುತ್ತಾರೆ. ಅಂಥ ವಿಶಿಷ್ಟ ಬದುಕಿನ ವೇಶ್ಯಾ ಸಮುದಾಯಗಳನ್ನು ಕೂಡ ಆಧುನಿಕ ಅರ್ಥದಲ್ಲಿ "ಬುಡಕಟ್ಟು" ಎಂದು ಕರೆಯಬಹುದು ಎಂಬ ನಂಬಿಕೆಯ ಮೇಲೆ ನಾನು ನನ್ನ ಈ ಬರಹವನ್ನು ಮುಂದುವರಿಸಿದ್ದೇನೆ.

ಈಗಾಗಲೆ, ಪ್ರಸ್ತಾಪಿಸಿರುವಂತೆ 'ಬುಡಕಟ್ಟು ಲಕ್ಷಣಗಳು ಎಲ್ಲ ಸಂಸ್ಕೃತಿ, ಸಮುದಾಯಗಳಲ್ಲೂ ಇರುತ್ತದೆ' ಎನ್ನುವ ಅಭಿಪ್ರಾಯವನ್ನು ಗಂಭೀರವಾಗಿ ಯೋಚಿಸುವಾಗ ಮಾನವಶಾಸ್ತ್ರಜ್ಞ, ಬುಡಕಟ್ಟು ತಜ್ಞ 'ಡೆಸ್ಮಂಡ್ ಮಾರಿಸ್' ಅಭಿಪ್ರಾಯಗಳು ಇಲ್ಲಿ ಪ್ರಸ್ತುತವಾಗುತ್ತವೆ. 'ಪ್ರತಿಯೊಬ್ಬ ಮನುಷ್ಯನೂ ಬುಡಕಟ್ಟು ಲಕ್ಷಣಗಳನ್ನು ಹೊಂದಿರುತ್ತಾನೆ' ಎನ್ನುವ ಡೆಸ್ಮಂಡ್ ವಿಶ್ಲೇಷಣೆಯಿಂದ ನೆಹರೂರವರ ಅಭಿವ್ಯಕ್ತಿಯನ್ನು ತಾಳೆ ಹಾಕುತ್ತಾ ಪ್ರೊ. ಹಿ.ಚಿ. ಬೋರಲಿಂಗಯ್ಯನವರು ವಿಶ್ಲೇಷಿಸಿರುವಂತೆ 'ಪ್ರಾಚೀನತೆ-ವಿಶಿಷ್ಟತೆ-ಪ್ರತ್ಯೇಕತೆ' ಈ ಮೂರು ಅಂಶಗಳು ಎಲ್ಲ ಬುಡಕಟ್ಟುಗಳ ಪ್ರಧಾನ ಅಂಶಗಳು ಎಂಬ ಅಭಿಪ್ರಾಯದ ನಿಟ್ಟಿನಲ್ಲಿ ನಾನಿಲ್ಲಿ ಲೈಂಗಿಕ ವೃತ್ತಿ ಸಮುದಾಯದ ಪ್ರಾಚೀನ-ವಿಶಿಷ್ಟತೆ-ಪ್ರತ್ಯೇಕತೆಯ ಕೆಲವು ಅಂಶಗಳನ್ನು ವಿಶ್ಲೇಷಿಸಬಯಸುತ್ತೇನೆ. ಹಾಗೂ ಡೆಸ್ಮಂಡ್ ಮಾರಿಸ್ ಬುಡಕಟ್ಟುಗಳನ್ನು ಆಧುನಿಕ ವ್ಯಾಪ್ತಿಯಲ್ಲಿ ವಿಶ್ಲೇಷಿಸಿರುವ ಪ್ರಮುಖ ಅಂಶಗಳನ್ನು ನಾನಿಲ್ಲಿ ಮುಖ್ಯವಾಗಿ ಲೈಂಗಿಕ ವೃತ್ತಿ ಸಮುದಾಯದ ಪ್ರಮುಖ ಗುಣಲಕ್ಷಣಗಳ ಒಳ ಸುಳಿಗಳೊಂದಿಗೆ ವಿಶ್ಲೇಷಿಸುವ ಪ್ರಯತ್ನ ಮಾಡುತ್ತಿದ್ದೇನೆ.

A Tribe as a collection of groups of people who share Patterns of speech, basic adtural charactersties and in the traditional sense a common terriotory. The most feature, however, is that member of a tribe feel that they have more, in common with each other than with neighbouring groups. This sense of communality both binds the members of a tribe together and distancs them from non members of the tribe.[13]

ಡೆಸ್ಮಂಡ್ ಮಾರೀಸ್ ಬುಡಕಟ್ಟು ಅರ್ಥ ಮತ್ತು ವ್ಯಾಪ್ತಿಯ ಬಗ್ಗೆ, ಅದರ ಗುಣ ಸ್ವಭಾವಗಳ ಬಗ್ಗೆ ಬಹಳ ಸ್ಪಷ್ಟವಾಗಿ ವಿವರಿಸಿದ್ದಾನೆ.

ವೇಶ್ಯಾವಾಟಿಕೆಯಲ್ಲಿ ತೊಡಗಿರುವ ಸಮುದಾಯವನ್ನು ಬುಡಕಟ್ಟಾಗಿ ನೋಡಬಹುದಾದ ಸಮರ್ಥನೆ ಮತ್ತು ಆಧುನಿಕ ವ್ಯಾಪ್ತಿಯಲ್ಲಿ ಆ ಪರಿಕಲ್ಪನೆ ಬಹಳ ಸ್ಪಷ್ಟವಾಗುತ್ತಾ ಹೋಗುತ್ತದೆ. ''ಮೂಲತಃ ಮನುಷ್ಯ ಬುಡಕಟ್ಟಿನ ಪ್ರಾಣಿ, ಬುಡಕಟ್ಟು ಸ್ವಭಾವಗಳು ಅವನ ಅವಿಭಾಜ್ಯ ಅಂಗವಾಗಿ ಹುಟ್ಟಿನಿಂದಲೇ ಬಂದಿರುವ ಅಂಶ.'' ಈ ಮೇಲಿನ ಪರಿಕಲ್ಪನೆಗೆ ಪುಷ್ಟಿ ನೀಡುತ್ತದೆ. ಆದ್ದರಿಂದ ಇಲ್ಲಿ ವೇಶ್ಯಾವಾಟಿಕೆ ಸಮುದಾಯ ಒಂದು ಬುಡಕಟ್ಟೆ ಅಲ್ಲವೇ ಎಂಬುದರ ಸಮರ್ಥನೆ ಅಗತ್ಯವೇ ಇಲ್ಲ. ಆದರೆ ಈ ಸಮುದಾಯದ ಬದುಕಿನ ಯಾವ ಯಾವ ಅಂಶಗಳು ಬುಡಕಟ್ಟಿನ ಯಾವ ಸ್ವಭಾವಗಳ ಚೌಕಟ್ಟಿನೊಳಗೆ ನುಸುಳುತ್ತವೆ ಹಾಗೂ ಆಧುನಿಕವಾಗಿ ಹೇಗೆ ಪರಿವರ್ತನೆಗೊಂಡಿವೆ ಎಂಬ ಬಗ್ಗೆ ಮಾತ್ರ ನಾವಿಲ್ಲಿ ವಿಶ್ಲೇಶಿಸಿ ಒಂದು ಪಕ್ಷಿನೋಟದ ರೂಪದಲ್ಲಿ ನೋಡಬಹುದಾಗಿದೆ. ಮಿಲಿಯಾಂತರ ವರ್ಷಗಳಿಂದಲೇ ಬುಡಕಟ್ಟು ಸ್ವಭಾವವನ್ನು ಮನುಷ್ಯ ಹೊಂದಿದ್ದ ಎಂಬುದನ್ನು ಕೂಡ ಡೆಸ್ಮಂಡ್ ಅಭಿಪ್ರಾಯ ಪಡುವಾಗಲೇ, ಅವರ ಸ್ವಭಾವಗಳನ್ನು, ಲಕ್ಷಣಗಳನ್ನು ಇಲ್ಲಿ ಅವಲೋಕಿಸಬಹುದಾಗಿದೆ.

''ಅರೆ ಅಲೆಮಾರಿ ಗುಂಪುಗಳಲ್ಲಿ ಸಂಚಾರ''

ಇಲ್ಲಿ ವೇಶ್ಯಾವೃತ್ತಿ ಸಮುದಾಯದ ಗುಂಪುಗಳು ಅನೇಕ ದಟ್ಟವಾದ ಅರಣ್ಯ ಪ್ರದೇಶಗಳಲ್ಲಿ ವಲಸೆ ಹೋಗುತ್ತಿರುತ್ತಾರೆ.

ಕಾಡಿನಿಂದ ಕಾಡಿಗೆ ವಲಸೆ ಹೋಗುತ್ತಾರೆ. ಕಾಡಿನೊಳಗೇ ಪ್ರದೇಶದಿಂದ, ಪ್ರದೇಶಗಳಿಗೆ ಸಂಚಲಿಸುತ್ತಾರೆ. ಕೆಲವೊಮ್ಮೆ ವೃತ್ತಿ ಪ್ರದೇಶಗಳನ್ನೇ ಬದಲಿಸಿ ಸಮುದ್ರತೀರಕ್ಕೋ, ನದಿದಂಡೆಗೋ, ಗುಡ್ಡಗಾಡು ಪ್ರದೇಶಕ್ಕೋ ವಲಸೆ ಹೋಗುವುದೂ ಉಂಟು. ಇನ್ನು ನಗರ ವ್ಯಾಪ್ತಿಯಲ್ಲಿನ ಸಣ್ಣ ಪುಟ್ಟ ಗುಂಪುಗಳು ಜಿಲ್ಲಾ ಕೇಂದ್ರಗಳಿಂದ ರಾಜಧಾನಿಗೆ, ರಾಜ್ಯದಿಂದ ರಾಜ್ಯಕ್ಕೆ, ಬೀದಿ ಬದಿಯಿಂದ ವೇಶ್ಯಾ ಗೃಹಗಳಿಗೆ, ವೇಶ್ಯಾ ಗೃಹಗಳಿಂದ ವೇಶ್ಯಾಗೃಹಗಳಿಗೆ.... ಹೀಗೆ ಅವರ ಬದುಕು ಸದಾ ಸಂಚಲಿಸುತ್ತಲೇ ಇರುತ್ತದೆ. ಈ ದೃಷ್ಟಿಯಲ್ಲಿ ಇವರು ಅಲೆಮಾರಿಗಳು.

ಇನ್ನೊಂದು ಬಹಳ ಮುಖ್ಯವಾದ ಸ್ವಭಾವ - ಭೇಟೆಯ ದಾಹ!

ಇದು ಅವರ ವೃತ್ತಿಯ ಬಹಳ ಮುಖ್ಯವಾದ ಲಕ್ಷಣವೂ ಹೌದು.

ವಿಟರ ಭೇಟೆಯೇ ಆ ವೃತ್ತಿಯ ಜೀವಾಳ. ಇದು ಎಲ್ಲ ಸ್ತರದ ವೇಶ್ಯಾವಾಟಿಕೆಯ ಸ್ವರೂಪ, ಮಾದರಿಗಳಿಗೂ ಅನ್ವಯಿಸುತ್ತದೆ. ಆಧುನಿಕತೆಯ ತುದಿಗೇರಿ ಜಾಗತೀಕರಣದ ಭೇಟೆಯ ದಾಹದಲ್ಲಿಯೂ,

ಸ್ಪರ್ಧಾತ್ಮಕ ವ್ಯಾಪಾರ, ವಹಿವಾಟು, ಆಡಳಿತಾತ್ಮಕ ಬೇಟೆಗಳು ಎಲ್ಲದರಲ್ಲಿಯೂ ಹೆಣ್ಣು ಮಧ್ಯವರ್ತಿಯಾಗಿ, ಸರಕಾಗಿ, ಲಂಚ ಋಷುವತ್ತುಗಳ ಒಂದು ಭಾಗವಾಗಿ ಪಾತ್ರ ವಹಿಸುತ್ತಿದ್ದಾಳೆ.

ಕಾಡಿನಲ್ಲಿ ವೇಶ್ಯಾವೃತ್ತಿ ನಡೆಸುವ ಆ ಸಮುದಾಯ ಲಾರಿ ಡ್ರೈವರುಗಳು, ಪ್ರಯಾಣಿಕರು, ಗಿರಾಕಿಗಳಿಗಾಗಿ ಸದಾ ಭೇಟಿ ನಡೆಸುತ್ತಲೇ ಇರುತ್ತಾರೆ. ಅದಕ್ಕೆ ಸೂಕ್ತ ಸಮಯ, ಗುರಿ, ಸಂಧಿಸುವ ಪ್ರದೇಶ, ಗಿರಾಕಿಗಳು ಹೆಚ್ಚು ದೊರೆಯುವ ಸ್ಥಳಗಳು. ಅವರ ಬಿಡುವಿನ ಅವಕಾಶ, ಹಣದ ಲಭ್ಯತೆ ಹೀಗೆ ಎಲ್ಲವೂ ಲೆಕ್ಕಾಚಾರ! ಒಬ್ಬ ಬೇಟೆಗಾರ ತನ್ನ ಭೇಟಿಯ ಗುರಿಗಾಗಿ ಏನೆಲ್ಲಾ ಸಂಚು ಹೂಡುತ್ತಾನೋ ಈ ಸಮುದಾಯವೂ ಕೂಡ ಆಯಾ ಭೌಗೋಳಿಕ ಅಂಶಗಳಿಗನುಗುಣವಾಗಿ, ಸಂದರ್ಭಕ್ಕೆ ಅನುಗುಣವಾಗಿ, ಋತುಗಳಿಗನುಗುಣವಾಗಿ ತಮ್ಮ ಕಾರ್ಯತಂತ್ರಗಳನ್ನು ಯೋಜಿಸಿರುತ್ತಾರೆ. ಉದಾ: ಅಯ್ಯಪ್ಪ ಸ್ವಾಮಿಯ ದರ್ಶನದ ಕಾಲದಲ್ಲಿ ಹೆಚ್ಚಿನ ಗಿರಾಕಿಗಳು ವ್ರತದಲ್ಲಿರುತ್ತಾರೆ. ಸ್ವಾಮಿ ದರ್ಶನದ ನಂತರ ಅವರು ಹಿಂತಿರುಗುವ ಸ್ಥಳಗಳಲ್ಲಿ ಈ ಸಮುದಾಯ ವಲಸೆಯೂ ಬಂದಿರುತ್ತದೆ. ಹಾಗೆಯೇ ಗಿರಾಕಿಯ ಭೇಟಿಗೆ ಹೊಂಚೂ ಹಾಕಿರುತ್ತದೆ. ಸಾಕಷ್ಟು ಗಿರಾಕಿಗಳು, ತಿಂಗಳು ಗಟ್ಟಲೆ ಭೇಟಿಯಿಲ್ಲದ ಸಂದರ್ಭದಲ್ಲಿ ಎದುರಿಸಿದ್ದ ಎಲ್ಲ ತಾಪತ್ರಯಗಳೂ ಇಲ್ಲಿ ಬಗೆಹರಿಯುತ್ತವೆ.

ಬೇಟೆಯ ದಾಹ ಎನ್ನುವಾಗಲೇ ಈ ಸಮಾಜದ ವಿವಿಧ ಮಜಲುಗಳಲ್ಲಿನ ಮನುಷ್ಯ ತಂಡ ತನ್ನ ಬೇಟೆ ನಡೆಸುತ್ತಲೇ ಇರುತ್ತದೆ. ವ್ಯಾಪಾರಸ್ಥರು ತಮಗೆ ದೊರೆಯಬಹುದಾದ ವ್ಯವಹಾರ, ಲಾಭ, ಸಂಪರ್ಕಗಳ ಬಗ್ಗೆ ಭೇಟಿಯಾಡುತ್ತಲೇ ಇರುತ್ತಾರೆ. ಬುದ್ದಿ ಜೀವಿಗಳ ತಂಡ, ಹೊಸ ಸಿದ್ಧಾಂತದ ಬೇಟೆಯಲ್ಲಿರುವಂತೆಯೇ, ಸಾಹಿತಿಗಳು ಸಾಹಿತ್ಯ ಕೃತಿಯಲ್ಲಿಯೂ ಸದಾ ಬೇಟೆಯಾಡುತ್ತಲೇ ಇರುತ್ತಾರೆ. ಹೀಗೆಯೇ ವೇಶ್ಯಾವಾಟಿಕೆ ಸಮುದಾಯವೂ ತನ್ನ ಗಿರಾಕಿಗಾಗಿ ತಹತಹಿಸುತ್ತಲೇ ಇರುತ್ತದೆ. ಸಮಾಜದ ಎಲ್ಲ ಪ್ರದೇಶಗಳಲ್ಲಿಯೂ, ಎಲ್ಲ ಸ್ತರಗಳಲ್ಲಿಯೂ, ಎಲ್ಲಾ ಜನ ಸಮುದಾಯದ ನಡುವೆಯೂ ಅನೂಚಾನವಾಗಿ ತನ್ನನ್ನು ನಡೆಸಿಕೊಂಡು ಬಂದಿರುವ ಈ ವೃತ್ತಿಯ ಬೇಟೆ ಬಹಳ ವ್ಯವಸ್ಥಿತವಾದದ್ದು.

ಹಳ್ಳಿಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ನಡೆಯುವ ಕೆಲವು ಜಾತ್ರೆಗಳು ಈ ಬೇಟೆಗೆ ಗ್ರಾಸವಾಗಿರುತ್ತವೆ. ಉದಾ: ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿ ನಡೆಯುವ ಕೆಲವು ಜಾತ್ರೆಗಳ ವಿಶೇಷವೇ ಲೈಂಗಿಕ ವೃತ್ತಿ. ವರ್ಷಾನುಗಟ್ಟಲೆ ಹೊಂಚುಹಾಕಿ ವ್ಯವಸ್ಥೆ ಮಾಡಿಕೊಳ್ಳುವ ಗಿರಾಕಿಗಳು, ವೇಶ್ಯಾವೃತ್ತಿಯ ಮಹಿಳೆಯರು ಇವರ ಯೋಜನೆ ಈ ಬೇಟೆಯ ಒಂದು ಕಾರ್ಯತಂತ್ರವೇ ಸರಿ. ಹಾಗೆಯೇ ಒಳ್ಳೆಯ ಬೆಳೆ ಬಂದ ಸಂದರ್ಭದಲ್ಲಿ ನಗರ ಪ್ರದೇಶಗಳಿಗೆ ಆ ಬೆಳೆಗಳನ್ನು ತಂದು ಮಾರಿ ಹಣ ಕೂಡಿಸಿ ಹೊರಡುವಾಗ ಈ ಸಮುದಾಯ ಅಲ್ಲಿ ಲಭ್ಯ. ಮನರಂಜನೆಗಾಗಿ ನಗರ ಹಾಗೂ ರಾಜಧಾನಿ ಕೇಂದ್ರಗಳಿಗೆ ಬಂದ ಗಿರಾಕಿಗಳನ್ನು ತನ್ನ ಬಲೆಯೊಳಗೆ ಸಿಕ್ಕಿಸಿಕೊಳ್ಳುವ ತಂತ್ರವೂ ಈ ಬೇಟೆಯ ಸ್ವಭಾವದ್ದೇ. ಹಾಗೆಯೇ ಬೆಂಗಳೂರು ಕರಗ, ಸಮಾವೇಶ, ಅಧಿವೇಶನಗಳು, ಈ ಸಂದರ್ಭಗಳೂ ಕೂಡ ಆ ಸಮುದಾಯಕ್ಕೆ ಪ್ರಶಸ್ತವಾದುವೇ.

ಹೆಚ್ಚೇಕೆ.... ವಿಧಾನಸಭೆಯ ಅಧಿವೇಶನಗಳು ನಡೆಯುವಾಗ ಬೆಂಗಳೂರಿನ ಬಹುತೇಕ ಪ್ರತಿಷ್ಠಿತ ಹಾಗೂ ಸಾಧಾರಣ ವೇಶ್ಯಾಗೃಹಗಳು ಬಿಡುವಿಲ್ಲದಂತಾಗಿ ಬಿಡುತ್ತವೆ. ಪ್ರತಿಷ್ಠಿತ ಗಿರಾಕಿಗಳಿಂದ ಹಿಡಿದು ಕಾಂಜಿಪೀಂಜಿ ಗಿರಾಕಿಗಳವರೆಗೂ ಈ ಬೇಟೆಗಾರರು ಗಾಳ ಹಾಕಿಯೇ ಬಿಡುತ್ತಾರೆ. ಇದೂ ಕೂಡ ಎಲ್ಲ ಪೂರ್ವ ಯೋಜನೆ ಹಾಗೂ ಕಾರ್ಯತಂತ್ರ ರೂಪಿಸುವ ಒಂದು ಬೇಟೆಯೇ ಸರಿ.

ಸಾಹಸ ಪ್ರವೃತ್ತಿ ಮತ್ತು ಅಪಾಯಗಳ (ಸವಾಲುಗಳು) ಪಣಗಳು

ಲತಾಳತ್ತ ಕಾರೊಂದು ಬಂದು ನಿಂತಿತ್ತು. ಸಭ್ಯ ಶ್ರೀಮಂತನಂತೆ ಕಂಡ, ಧೈರ್ಯವಾಗಿ ಹತ್ತಿದಳು. ಸಾವಿರ ರೂಪಾಯಿಗೆ, ಊರ ಹೊರ ವಲಯದ ಅಂತರಗಂಗೆ ಬೆಟ್ಟಕ್ಕೆ ಕಾರು ಚಲಿಸಿತ್ತು. ಸ್ವಲ್ಪ ದೂರ ಪಯಣಿಸುವುದರೊಳಗೆ ಗಿರಾಕಿಯ ಸ್ನೇಹಿತನೊಬ್ಬ ಕಾರು ಹತ್ತಿದ. ವೇಗವಾಗಿ ಚಲಿಸುತ್ತಿದ್ದ ಕಾರು ಇನ್ನೊಮ್ಮೆ ಬ್ರೇಕು ಒತ್ತಿದಾಗ ಮತ್ತಿಬ್ಬರು ಜೊತೆಯಾದರು. ಹೀಗೆಯೇ ಅಂತರಗಂಗೆಯ ಕೊರಕಲಾದ ಪ್ರಶಸ್ತ ಸ್ಥಳಕ್ಕೆ ತಲುಪುವಷ್ಟರಲ್ಲಿ ಒಬ್ಬನು ಆರಾಗಿದ್ದರು. ಒಳಗೆ ಆತಂಕ, ದುಗುಡ. ಆದರೂ ಎಂತದೋ ಭಂಡ ಧೈರ್ಯ. ಇನ್ನೇನಾದೀತು ಅಬ್ಬಬ್ಬಾ ಎಂದರೆ ನನ್ನದೊಂದು ಪ್ರಾಣ. ಆ ಭಂಡತನದಿಂದಲೇ ಅವರೊಂದಿಗೆ ಕುಡಿಯಲು ಶುರುವಿಟ್ಟಳು. ಹಾಗಾದರೂ ಧೈರ್ಯ ಬರಬಹುದೆಂಬ ಆಶಯ. ಕಂಠಪೂರ್ತಿ ಕುಡಿದದ್ದೇ ಗೊತ್ತು. ಎಚ್ಚರವಾದಾಗ ಬೆಳಗಾಗಿತ್ತು. ಬಟ್ಟೆಯೆಲ್ಲಾ ರಕ್ತ ಸಿಕ್ತ. ಸಹಿಸಲಾಗದ ದಾಹ. ಕಿರುಚಲೂ ಸಾಧ್ಯವಾಗದಷ್ಟು ಗಂಟಲು ಬಿಗಿದಿತ್ತು. ಸಾಹಸ ಪ್ರವೃತ್ತಿ ಮತ್ತು ಅಪಾಯಗಳ ಸವಾಲುಗಳನ್ನು ಈ ಸಮುದಾಯ ಮೀರಿದ್ದು ಏಕೆಂದರೆ ಈ ವೃತ್ತಿಯೇ ಜೀವದೊಡನೆ ಜೂಜಾಡುವ ಪ್ರವೃತ್ತಿ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಅರ್ಧರಾತ್ರಿಯಲ್ಲಿ ಲಾರಿ ಹತ್ತುವವರು, ದಾರಿಯಲ್ಲಿ ಅಪಘಾತಕ್ಕೀಡಾಗಬಹುದು, ದಟ್ಟವಾದ ಕಾಡಿನ ಮಧ್ಯೆ ಲೈಂಗಿಕ ವೃತ್ತಿ ನಡೆಸುವವರು ಆನೆಗಳ ದಾಳಿಗೆ ತುತ್ತಾಗಿ ಬಿಡಬಹುದು, ಹಾವು ಕಚ್ಚಿ ಬಿಡಬಹುದು, ಅಲ್ಲದೆ ಹೆಜ್ಜೆ ತಪ್ಪಿ ಪ್ರಪಾತಕ್ಕೆ ಬಿದ್ದು ಬಿಡಬಹುದು. ಗುಡ್ಡ ಬೆಟ್ಟಗಳ ಪ್ರದೇಶಗಳಲ್ಲಿ ಈ ವೃತ್ತಿ ನಡೆಸುವವರು ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಬಹುದು. ಡಾಬಾಗಳಲ್ಲಿನವರಿಗೆ ಬರುವ ಗಿರಾಕಿಗಳು ಮಾರಣಾಂತಿಕ ರೋಗ ಹರಡಿ ಹೋಗಬಹುದು, ಮೆಜೆಸ್ಟಿಕ್, ಮಾರ್ಕೆಟ್ ಪ್ರದೇಶಗಳಲ್ಲಿ ಬೀದಿ ಬದಿಯ ವೃತ್ತಿಯ ಮಹಿಳೆಯರಿಗೆ ಪರ್ಕಿಗಳು, ರೌಡಿಗಳು, ಬ್ರೋಕರ್‌ಗಳು ಆಸಿಡ್ ಎರಚಿ ಬಿಡಬಹುದು. ಬ್ಲೇಡ್ ಹಾಕಬಹುದು, ವೇಶ್ಯಾ ಗೃಹಗಳಲ್ಲಿನವರಿಗೆ ಕುಡಿಯುವುದರಲ್ಲಿ, ತಿನ್ನುವುದರಲ್ಲಿ ಏನಾದರೂ ಬೆರೆಸಿಕೊಟ್ಟು ಬಿಡಬಹುದು.... ಹೀಗೆ ಸದಾ ತೂಗು ಕತ್ತಿಯ ಮೇಲೆಯೇ ನಡೆಯುವ ಈ ಸಮುದಾಯ ಬುಡಕಟ್ಟಿನ ಮುಖ್ಯ ಸ್ವಭಾವವಾದ ಸಾಹಸ ಪ್ರವೃತ್ತಿ, ಅಪಾಯದ ಕರೆಗಂಟೆಯನ್ನು ಪ್ರತಿ ಕ್ಷಣವೂ ಎದುರಿಸುತ್ತಲೇ ಇರುತ್ತದೆ.

ಸಾಮಾನ್ಯ ರೂಪದ ಭಾಷೆ

ಕೆ.ಜಿ.ರೋಡ್‌ನ ಕಾರ್ನರ್‌ವೊಂದರಲ್ಲಿ ನಿಂತಿದ್ದ ಸರಳಾ 3 ಬೆರಳುಗಳ ಬಿಡಿಸಿದಳು. ಇನ್ನೊಂದು ಬದಿಯಲ್ಲಿ ನಿಂತಿದ್ದ ಗಿರಾಕಿ 2 ಬೆರಳುಗಳ ಬಿಡಿಸಿದ. ವ್ಯಾಪಾರ ಕುದುರಲಿಲ್ಲ. ಸರಳಾ ಕೈಯಾಡಿಸಿ ಅತ್ತ ಸರಸರನೆ ನಡೆದಳು. ಕಣ್ಣುಗಳಲ್ಲಿ ವ್ಯಂಗ್ಯ, ಅಸಮಾಧಾನ ಕುಣೀತಿತ್ತು. ಸ್ವಲ್ಪ ಜಂಭವೂ ಇತ್ತು. ಬೀದಿಯನ್ನು ಅವಲಂಬಿಸಿ ವೃತ್ತಿ ನಡೆಸುವವರ ಭಾಷೆ ಸಾಮಾನ್ಯವಾಗಿ ಸನ್ನೆಗಳಿಂದ ಕೂಡಿರುತ್ತವೆ. ಕೈ, ಬಾಯಿ, ಕಣ್ಣುಗಳನ್ನು ಬಳಸಿಕೊಂಡು ಮಾತನಾಡುತ್ತಾರೆ. ಮಾರುದ್ದ ದೂರದಲ್ಲಿ ನಿಂತಿರುವ ವಿಟನೊಂದಿಗೆ ಮೌನವಾಗಿಯೇ ಕ್ಷಣಾರ್ಧದಲ್ಲಿ ಸಂವಹನ ನಡೆಸುತ್ತಾರೆ. ವ್ಯವಹಾರ ಕುದುರಿದರೆ ಮಾತ್ರ ಅವನೊಂದಿಗೆ, ಇವರು ನಿರೀಕ್ಷಿಸಿ ಸೂಚಿಸಿದ ಬೆರಳುಗಳ ಸಂಖ್ಯೆ ಏರು ಪೇರಾದಲ್ಲಿ ಇನ್ನೊಬ್ಬರನ್ನು ಅರಸುತ್ತಾರೆ. ಸದಾ ಕುಡಿದೇ ಇರುವ ಇವರು ಬಾಯಿ ಬಿಟ್ಟರೆ ಮಾತ್ರ ಒರಟೇ. ಮಾತಾಡುವಾಗ ಹೆಂಡದ ವಾಸನೆ ಅದರೊಂದಿಗೆ ಅಡಿಕೆಲೆಯ ತುಂತುರೇ ಮಾತಿಗಿಂತ ಮಿಗಿಲು.

ಬೇಟೆಯ ಸ್ವಭಾವದ ಲಕ್ಷಣಗಳಲ್ಲೊಂದಾದ ಸಂಜ್ಞೆಗಳ ಮೂಲಕ ಗಿರಾಕಿಗಳನ್ನು ಬಲೆಗೆ ಹಾಕಿಕೊಳ್ಳುವ, ಅಪಾಯದ ಕರೆ ಗಂಟೆ ಬಾರಿಸಿದಾಗ, ಸಾಮಾನ್ಯವಾಗಿ ಪೊಲೀಸರು ಓಡಿಸಿಕೊಂಡು ಬಂದಾಗ ಅನೇಕ ವಿಚಿತ್ರ ಸಂಜ್ಞೆಗಳನ್ನು ಹೊರಡಿಸುತ್ತಾರೆ. ಉದಾ: ತ್ರೀಸ್ಟಾರ್ ಬಂದ, ಡುಮ್ಮಿ ಬಂದ್ಲು, ಮಾಮ ವೀಳ್ಯ ಕೊಡ್ತಾ ಅವ್ನೆ.... ಹೀಗೆ.

ಎಲ್ಲ ಸ್ತರಗಳಲ್ಲಿ ಈ ವೃತ್ತಿ ನಡೆಸುವ ಈ ಸಮುದಾಯದ್ದು ಮಾತ್ರ ಮಿಶ್ರ ಭಾಷೆ. ಮಾತೃ ಭಾಷೆಯೊಂದಿಗೆ ಬೇರೆ ಬೇರೆ ಭಾಷೆಗಳ ಶಬ್ದಗಳನ್ನು ಮಧ್ಯೆ ಮಧ್ಯೆ ಸೇರಿಸಿಕೊಳ್ಳುತ್ತಾ ಉಸುರುವ ಈ ಭಾಷೆಯದೇ ಒಂದು ಪ್ರತ್ಯೇಕ ವೈಶಿಷ್ಟ್ಯ. ಈ ಭಾಷೆಯನ್ನು ಬಹಳ ಚಾಲಾಕಿನಿಂದ ಕಲಿತು ಬಿಡುತ್ತಾರೆ. ಆ ವೃತ್ತಿಗೆ ಈ ರೀತಿಯ ಭಾಷಾ ಕೌಶಲ್ಯ ಅಗತ್ಯ ಕೂಡ. ಗಿರಾಕಿಗಳಿಂದ, ಸಹೋದ್ಯೋಗಿ ಸ್ನೇಹಿತೆಯರಿಂದ, ಆ ವಾತಾವರಣದಿಂದ ಕಲಿಯಲು ಸಾಧ್ಯವಾಗುವ ಈ ಕಲಬೆರಕೆಯ ಚೌಚೌ ಭಾಷೆಗೆ ಮಾತೃಭಾಷೆಯ ಸೊಗಡಿನ ಛಾಪು ಮಾತ್ರ ಇದ್ದೇ ಇರುತ್ತದೆ.

ಇನ್ನು ಕೋಪ ಬಂದಾಗ, ಜಗಳವಾಡುವಾಗ ಬಳಸುವ ಭಾಷೆ ಬಹುತೇಕ ಒಂದೇ ಆಗಿರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ದ್ವಂದ್ವಾರ್ಥದ ಶಬ್ದಗಳನ್ನೇ ಬಳಸುತ್ತಾರೆ. ಬಳಸುವ ಶಬ್ದಗಳನ್ನು ಉಚ್ಚರಿಸುವಾಗಲೂ ದ್ವಂದ್ವಾರ್ಥದ ಮಿಂಚನ್ನು ಕೊಡುತ್ತಾರೆ. ಚಿನಾಲಿ, ಗಯ್ಯಾಳಿ, ಬೇತೂರಿ, ಬೇವರ್ಸಿ, ಇವುಗಳು ಜಗಳಗಳಲ್ಲಿ ಪರಸ್ಪರ ಬಳಸುವ ಸಾಮಾನ್ಯ ಬೈಗುಳಗಳು.

ಇನ್ನು ಜೋಕು ಮಾಡುವುದು, ನಕ್ಕು ಹೊಟ್ಟೆ ಹುಣ್ಣಾಗಿಸಿಕೊಳ್ಳುವುದು ಸರ್ವೇ ಸಾಮಾನ್ಯ. ಎಲ್ಲ ನೋವುಗಳು, ಸಂಘರ್ಷಗಳು, ತುಡಿತಗಳನ್ನು ಮರೆತು ಹಗುರಾಗಲು ಇದೊಂದು ಸಿದ್ಧೌಷಧ. ಜೋಕು ಮಾಡಲು ಕೇಂದ್ರ ವಸ್ತು ಅವರಿಗೆ ಬರುವ ಗಿರಾಕಿಗಳು! ಅವರ ನಡತೆ, ಲೈಂಗಿಕ ಕ್ರಿಯೆ ಸಂದರ್ಭದಲ್ಲಿ ಅವರು ಆಡಿದ ಮಾತುಗಳು, ಅವರ ವೇಷ, ಭೂಷಣ. ಅವರ ಶುಚಿತ್ವ, ಅವರ ತಾಕತ್ತು, ಕುಡಿತ, ವಾಸನೆ.... ಹೀಗೆ ಅವರ ಎಲ್ಲವನ್ನೂ ವರ್ಣಿಸಿಕೊಂಡು ಪರಸ್ಪರ ಹೇಳಿಕೊಳ್ಳುವಾಗಲಂತೂ ಅವರು ಬಳಸುವ ಭಾಷೆ, ಇನ್ನೊಬ್ಬ ಗಂಡಸನ್ನು ಮನಃ ಪೂರ್ತಿ ಲೇವಡಿ ಮಾಡುವ ಕ್ರಿಯೆ. ತನ್ನನ್ನು ಭೋಗಿಸಿ ಹೋಗಿದ್ದರೂ ಅವನ ಬಗ್ಗೆ ಇರುವ ನಿರ್ಭಾವುಕತೆ ಎಲ್ಲವೂ ವ್ಯಕ್ತವಾಗುತ್ತಾ ಇರುತ್ತವೆ.

ಸಾಮಾನ್ಯವಾಗಿ ಬರುವ ವಿಟನನ್ನು ಮಾಮ, ಗಿರಾಕಿ, ಪಾರ್ಟಿ, ಕ್ಲೈಂಟ್, ಗಂಡಸು ಮುಂತಾಗಿ ಬಳಸುತ್ತಾರೆ. ಯಾರೇ ಗಂಡಸಾಗಲಿ ಅಣ್ಣಾ ಎಂದು ಸಂಭೋಧಿಸುವುದು ವಾಡಿಕೆ. ಹಾಗೆಯೇ ಪೊಲೀಸ್ ಕಾನ್‌ಸ್ಟೇಬಲ್‌ಗಳಾದರೆ ಅವರ ಹೆಸರಿನ ಮುಂದೆ ಅಣ್ಣಾ ಸೇರಿಸಿಕೊಳ್ಳುತ್ತಾರೆ. ಅಧಿಕಾರಿಗಳಾದರೆ ಸ್ವಾಮಿ, ಬುದ್ಧಿ, ಸಾಹೇಬ್ರೆ ಮುಂತಾಗಿ ಸಂಭೋದಿಸುತ್ತಾರೆ.

ಏನೇ ಆದರೂ ಇವರೊಂದಿಗೆ ಆಳಕ್ಕೆ ಇಳಿದಾಗಲೆಲ್ಲಾ ಮೇಲ್ನೋಟಕ್ಕೆ ಇವರು ಬಳಸುವ ಭಾಷೆಗೆ ಶ್ರೀಗಂಧದ ಲೇಪನ, ನಯ, ನಾಜೂಕು, ವಿಧೇಯತೆ, ವಿನಯ ತಾಂಡವವಾಡುತ್ತದೆ. ಸ್ವಲ್ಪ ಒಳ ಹೊಕ್ಕರೆ ಅಮಾನವೀಯ ನಡವಳಿಕೆಯ ಇನ್ನೊಂದು ಮುಖವಾಗಿ ಭಾಷೆ ಹೊರ ಹೊಮ್ಮುತ್ತದೆ. ಇನ್ನೂ ಆಳಕ್ಕೆ ಇಳಿದಾಗ ಮಾತ್ರ ಅವಳು ಸ್ಫೋಟಿಸುತ್ತಾಳೆ. ದುಃಖ ಒಡೆಯುತ್ತದೆ. ಭಾಷೆ ತನ್ನ ನೈಜರೂಪ ಪಡೆಯುತ್ತದೆ. ಅವಳು ಈ ಬದುಕಿಗೆ ಒಡ್ಡಿಕೊಂಡ ಸಂದರ್ಭ ಮತ್ತು ಅಲ್ಲಿಂದ ಹರಿದು ಬಂದು ಅವಳ ಬದುಕಿನ ಹಾದಿಯನ್ನು ನೆನೆಯುವಾಗ ಗದ್ಗದಿತಳಾಗುತ್ತಾಳೆ. ಉಮ್ಮಳಿಸಿ ಬಂದ ದುಃಖ ತಡೆದು ಕಣ್ಣಂಚಿನ ಹನಿಯನ್ನು ಸೆರಗಿನಿಂದ ತಳ್ಳಿ ಮತ್ತೆ ಮುಗುಳ್ನಗುತ್ತಾಳೆ ಮುಖವಾಡ ಧರಿಸಿ. ಇದು ಅವಳ, ಆ ಸಮುದಾಯದ ಆಂತರ್ಯದ ಭಾಷೆ.

ವೇಷ ಭೂಷಣ ಮತ್ತು ಅಲಂಕಾರಗಳು

ಷಡಕ್ಷರ ಕವಿಯ ಬಸವರಾಜ ವಿಜಯದಲ್ಲಿ ಅಂದಿನ ಕಾಲಘಟ್ಟದ ವೇಶ್ಯೆಯರು ಧರಿಸುತ್ತಿದ್ದ ಬಗೆಬಗೆಯ ಸೀರೆಗಳ ಬಗ್ಗೆ ಉಲ್ಲೇಖಗಳಿವೆ. ಇಂದಿನ ಆ ಸಮುದಾಯ ಸಿಂಥೆಟಿಕ್ ಹಾಗೂ ರಂಗು ರಂಗಿನ ಸೀರೆಗಳನ್ನು ಧರಿಸುತ್ತಾರೆ. ವೇಶ್ಯಾಗೃಹಗಳಲ್ಲಿನ ಮಹಿಳೆಯರು ಬಗೆ ಬಗೆಯ ಬಣ್ಣದ, ಸುಕ್ಕುಗಟ್ಟದ ಸೀರೆಯಲ್ಲಿ ಸದಾ ಇರುತ್ತಾರೆ. ಬೀದಿ ಬದಿಯವರು ಅದೆಷ್ಟೇ ಜಾಗ್ರತೆ ವಹಿಸಿದರೂ ಅಷ್ಟು ನಾಜೂಕನ್ನು ಕಾಪಾಡಿಕೊಂಡು ಬರುವುದು ಕಷ್ಟ. ಪ್ರತಿ ಗಿರಾಕಿಯೊಂದಿಗೆ ಹೋಗಿ ಬಂದಾಗಲೂ ನೆರಿಗೆಗಳನ್ನು ನೇವರಿಸಿ ಮತ್ತೆ ನವಿರಾಗಿಸಿಕೊಳ್ಳಲು ಅವರಿಗೆ ಅವಕಾಶ, ಸಮಯ ಎರಡೂ ಇರೋಲ್ಲ.

ಇತ್ತೀಚೆಗಿನ ನಗರದ, ಹೆದ್ದಾರಿಗಳ ವೇಶ್ಯೆಯರು ಚೂಡಿದಾರ್, ಪ್ಯಾಂಟ್ ಶರ್ಟ್‌ಗಳನ್ನು ಧರಿಸುತ್ತಾರೆ. ಮ್ಯಾಚಿಂಗ್ ಬ್ಲೌಸ್, ಅದೇ ಬಣ್ಣದ ಪೆಟ್ಟಿಕೋಟು ಧರಿಸಲು ಸದಾ ಹೆಣಗಾಡುತ್ತಲೇ ಇರುತ್ತಾರೆ.

ಆಭರಣ

ಕಾಲಂದುಗೆ, ಕೆಂಬರದೋಲೆ, ವಜ್ರದಾಳಿ, ಜಡೆಬಿಲ್ಲೆ, ನೂಪುರ, ಕರ್ಣಾಭರಣ, ಹಾರಗಳು, ಮುಂಗೈ ಬಳೆಗಳು.... ಹೀಗೆ ಹಿಂದಿನ ರಾಜರ ಆಸ್ಥಾನದ ವೇಶ್ಯೆಯರು ಮುತ್ತು ರತ್ನ ಚಿನ್ನದ ಆಭರಣಗಳನ್ನು ಅಂದಿನ ವೇಶ್ಯೆಯರು ಧರಿಸುತ್ತಿದ್ದರು. ಇದಕ್ಕೆ ಪಂಪ ಭಾರತದಲ್ಲಿ ಉಲ್ಲೇಖಗಳಿವೆ.

ಇಂದಿನ ವೇಶ್ಯೆಯರು ಚಿನ್ನಾಭರಣಗಳಿಗೆ ಹಲುಬಿದರೂ ಬಹುತೇಕ ಅವಳ ಕೈಗೆಟುಕದ ಕನಸು ಅದು. ವೇಶ್ಯಾಗೃಹ ಮಾಲೀಕೆಯ ಅತಿ ಹೆಚ್ಚು ಸಂಪಾದಿಸುವ ಸುಂದರಿಯರು.... ಹೀಗೆ ಕೆಲವರಲ್ಲಿ ಮಾತ್ರ ಚಿನ್ನಾಭರಣಗಳಿರುತ್ತವೆ. ಹೆಚ್ಚಿನ ವೇಶ್ಯೆಯರು ಗಿಲೀಟಿನ, ಗೋಲ್ಡ್ ಕವರಿಂಗ್ ಆಭರಣಗಳು, ಮೆಟಲ್ ಆಭರಣಗಳನ್ನು ಧರಿಸಿರುತ್ತಾರೆ. ಮೂಗುತಿ, ಹೆಚ್ಚೆಂದರೆ ಓಲೆ ಚಿನ್ನದವಾಗಿರುತ್ತವೆ. ಉಳಿದಂತೆ ಎಲ್ಲವೂ ಗಿಲೀಟು ಒಡವೆಗಳೇ! ಹೀಗೆ ರೋಲ್ಡ್‌ಗೋಲ್ಡ್ ರಾಣಿಯರು ಧರಿಸುವ ಸರ್ವೇ ಸಾಮಾನ್ಯ ಒಡವೆಗಳು ಕರಿಮಣಿಸರ, ತಾಳಿಸರಗಳು, ಬೆಳ್ಳಿ ಕಾಲುಂಗರಗಳು. ಈ ಸಮಾಜದ ಕಣ್ಣುಚ್ಚಿಸಲು, ಮೆಚ್ಚಿಸಲು, ತಾನು ವಿವಾಹಿತೆ ಎಂಬ ರಕ್ಷಾ ಕವಚ ಧರಿಸಲು ಈ ಒಡವೆಗಳನ್ನು ಧರಿಸುತ್ತಾ ಕಾಲಿಗೆ ಚೈನು, ಕಾಲಂದುಗೆಯೂ ಕೂಡ ಸರ್ವೇ ಸಾಮಾನ್ಯ.

ಎಲ್ಲಕ್ಕಿಂತಲೂ ಹೆಚ್ಚು ಸಹಾಯಕ್ಕೆ ಬರುವ ಆಭರಣಗಳೆಂದರೆ ಕಿವಿಯೋಲೆ ಮತ್ತು ಮೂಗುತಿ, ಹೆಚ್ಚಿನ ಸಂದರ್ಭಗಳಲ್ಲಿ ಕೋರ್ಟಿಗೆ ದಂಡ ಶುಲ್ಕ ಕಟ್ಟಲು, ಮಕ್ಕಳಿಗೆ ಆರೋಗ್ಯ ತಪ್ಪಿದರೆ, ಎಲ್ಲಿಯಾದರೂ ಪ್ರಯಾಣ ಮಾಡುವುದಿದ್ದರೆ ಅವುಗಳನ್ನು ಅಡವಿಡುತ್ತಾರೆ. ಉಳಿದಂತೆ ಗಿಲೀಟು ಆಭರಣಗಳಿಂದ, ರಂಗು ರಂಗಿನ ಸೀರೆಗಳಿಂದ, ಹೊಳೆಯುವ ಹೀಲ್ಡ್ ಪ್ಲಾಸ್ಟಿಕ್ ಚಪ್ಪಲಿಗಳಿಂದ ತಮ್ಮನ್ನು ಆಕರ್ಷಣೀಯವಾಗಿಸಿಕೊಳ್ಳಲು ಹೆಣಗಾಡುತ್ತಲೇ ಇರುತ್ತಾರೆ.

ಪ್ರಕೃತಿಯೊಂದಿಗೆ ವೇಶ್ಯಾವೃತ್ತಿ ಬದುಕು:

ಈ ಪ್ರಕೃತಿ ಎಲ್ಲಿ ತನ್ನ ಛಾಪನ್ನು ಸುಂದರವಾಗಿ ಮೂಡಿಸಿರುತ್ತದೋ ಅಲ್ಲೆಲ್ಲಾ ಮಾನವನ ಪಾತಕತನಗಳೂ ಇದ್ದೇ ಇರುತ್ತವೆ. ಸಾಮಾನ್ಯವಾಗಿ ಎಲ್ಲೆಲ್ಲಾ ಮಾನವನ ಭೂಗತ ಚಟುವಟಿಕೆಗಳು, ಪಾತಕಲೋಕದ ತಾಣಗಳು ಇರುತ್ತವೋ ಅಲ್ಲೆಲ್ಲಾ ವೇಶ್ಯಾವಾಟಿಕೆ ಇರುತ್ತದೆ. ಇಲ್ಲಿ ವೇಶ್ಯಾವಾಟಿಕೆಗೆ ಪೂರಕವಾಗಿಯಷ್ಟೇ ಪ್ರಸ್ತಾಪಿಸುತ್ತಿದ್ದೇನೆ.

ಇದು ಇಂತಹವುಗಳಿಗೆ ಹೇಳಿ ಮಾಡಿಸಿದಂತಿರುವ ಪ್ರದೇಶ. ವೇಶ್ಯಾವಾಟಿಕೆಗೂ ಕೂಡ. ಗಿರಾಕಿಗಳು ಅತಿ ಹೆಚ್ಚು ದೊರೆಯುವ ಪ್ರದೇಶ. ಹಾಗೆಯೇ ನಿರ್ಭಯವಾಗಿ ಲೈಂಗಿಕಕ್ರಿಯೆಗೆ ತೊಡಗ ಬಹುದಾದ ಏಕಾಂತ.

ದಿನನಿತ್ಯ ನಿರಂತರವಾಗಿ ಓಡಾಡುವ ಸಾವಿರಾರು ಲಾರಿಗಳು ಹಾಗೂ ವಾಹನಗಳು ವಿಶ್ರಾಂತಿಗಾಗಿ, ಸ್ನಾನಕ್ಕಾಗಿ, ಊಟಕ್ಕಾಗಿ ಅಲ್ಲಲ್ಲಿ ವಿರಮಿಸುತ್ತವೆ. ವಿರಮಿಸುವ ಅಗತ್ಯಗಳಿಗೆ ಪೂರಕವಾಗಿ ಸೌಲಭ್ಯಗಳೂ ಕೂಡ ಅಲ್ಲಿ ಲಭ್ಯ. ಪ್ರಕೃತಿದತ್ತವಾಗಿ ಈ ಘಟ್ಟ ಪ್ರದೇಶದೊಂದಿಗೆ ಹರಿಯುತ್ತಿರುವ ನದಿಗಳ ತಪ್ಪಲಲ್ಲಿ ನೆರಳಿದ್ದು ವಾಹನಗಳನ್ನು ನಿಲ್ಲಿಸಲು ಸ್ಥಳಾವಕಾಶವಿದ್ದ ಪ್ರದೇಶಗಳು ಮತ್ತು ಊಟ, ತಿಂಡಿಗಾಗಿ, ಕುಡಿಯಲು ಅನುಕೂಲ ವಿರುವ ಹೋಟೆಲ್‌ಗಳೂ ಕೂಡ ಈ ವಾಹನಗಳ ತಂಗುದಾಣಗಳಾಗಿರುತ್ತವೆ.

ಹೀಗೆ ವಿಶ್ರಾಂತಿಗೆಂದು ನಿಂತ ವಾಹನಗಳ ಸಿಬ್ಬಂದಿ (ಬಹಳ ಮುಖ್ಯವಾಗಿ ಲಾರಿ ಡ್ರೈವರ್‌ಗಳು ಮತ್ತು ಕ್ಲೀನರ್‌ಗಳು) ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಾರೆ. ಈ ಸ್ಥಳಗಳಲ್ಲಿ ಲೈಂಗಿಕವೃತ್ತಿ ಮಹಿಳೆಯರೂ ಲಭ್ಯವಿರುತ್ತಾರೆ. ಲೈಂಗಿಕಕ್ರಿಯೆಗೆ ತೊಡಗಬಹುದಾದ ಸ್ಥಳಗಳೂ ಕೂಡ ಈ ಮಹಿಳೆಯರಿಗೆ ಚಿರಪರಿಚಿತ. ಹೀಗೆ ದರ ನಿರ್ಧಾರವಾಗಿ ಒಪ್ಪಂದವಾದ ಮೇಲೆ ಅವರುಗಳು ಆ ಸ್ಥಳಗಳಿಗೆ ಹೋಗುತ್ತಾರೆ.

ಒಮ್ಮೆ ಆ ಅಡವಿಯೊಳಗೆ ಹೊಕ್ಕರೆ ಸಾಕು. ಎಲ್ಲವೂ ಪ್ರವೇಸಿಯೇ! ಆ ದಟ್ಟತೆ ಎಲ್ಲವನ್ನು ತನ್ನ ಒಡಲೊಳಗೆ ಮುಚ್ಚಿಕೊಂಡು ಬಿಡುತ್ತದೆ. ಅಲ್ಲಲ್ಲಿಯೇ ಮರಗಳ ಬುಡಗಳಲ್ಲಿ, ಸಮತಟ್ಟಾದ ಜಾಗಗಳಲ್ಲಿ ತಮಗೆ ಅಗತ್ಯವಿರುವಷ್ಟು ಜಾಗ ಸಿದ್ದಗೊಳಿಸಿಕೊಂಡಿರುತ್ತಾರೆ ಮಹಿಳೆಯರು. ಎಲೆಗಳ ರಾಶಿಯನ್ನೇ ಹಾಸಿಗೆಯನ್ನಾಗಿಸಿ ಕೊಳ್ಳುವುದು, ತೆಳುವಾದ ಬೆಡ್‌ಶೀಟುಗಳನ್ನು ಹಾಸಿಕೊಳ್ಳುವುದೂ ಸಾಮಾನ್ಯ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಏನೂ ಇಲ್ಲದೆಯೂ ಒದ್ದಾಡಿದ ಗುರುತುಗಳು ಅಲ್ಲಿ ಕಾಣ ಸಿಗುತ್ತವೆ.

ನೂರಾರು ಅಡಿ ಎತ್ತರದಲ್ಲಿ ಹೆದ್ದಾರಿ. ಇಕ್ಕೆಲಗಳ ಅಡವಿಯು ಇಳಿಜಾರಿನಲ್ಲಿರುತ್ತದೆ. ಅದರೊಳಗೆ ಇಳಿದಿಳಿದು ಹೋದಂತೆ ಆಳದಲ್ಲಿ ತಣ್ಣಗೆ ಹರಿಯುತ್ತಿರುತ್ತದೆ. ಈ ಲೈಂಗಿಕವೃತ್ತಿ ಮಹಿಳೆಯರ ಬದುಕಿನೊಂದಿ ಗೇ ಬೇರೆಬೇರೆ ಆಯಾಮಗಳಲ್ಲಿ ತನ್ನ ಪಾತ್ರ ನಿರ್ವಹಿಸುತ್ತದೆ.

ದಣಿದ ದೇಹ, ಮನಸ್ಸುಗಳಿಗೆ ತನ್ನ ತಣ್ಣನೆಯ ಸ್ಪರ್ಶದೊಂದಿಗೆ ಮೈದಡವುತ್ತದೆ. ಅನೇಕ ಬಾರಿ ಪೋಲೀಸ ರಿಂದಲೋ, ಗಿರಾಕಿಗಳಿಂದಲೋ ಪಾತಕಿಗಳಿಂದಲೋ, ರಕ್ತಸಿಕ್ತವಾಗುವುದು, ಘಾಸಿಗೊಳ್ಳುವುದು ಅತಿ ಸಾಮಾನ್ಯ. ಆಗೆಲ್ಲಾ ಅನಾಥ ಪ್ರಜ್ಞೆಯಿಂದ, ಏಕಾಂಗಿಯಾಗಿ ಓಡಿ ಬಂದು ಈ ಪಾಪನಾಶಿನಿಯ ತೆಕ್ಕೆಗೆ ಬಂದು ಬಿದ್ದು ಬಿಡುತ್ತಾಳೆ. ಸಮಾಧಾನವಾಗುವವರೆಗೂ ಅಥವಾ ದುಗುಡಗಳೆಲ್ಲಾ ಇಳಿಯುವವರೆವಿಗೂ ಅಲ್ಲೇ ಅವಳ ಮಡಿಲಲ್ಲೇ ಇದ್ದು ಬಿಡುತ್ತಾಳೆ. ಕೆಲವೊಮ್ಮೆ ಮನಸ್ಸು ಉಲ್ಲಸಿತವಾದಾಗಲೂ (ಬಹಳ ಅಪರೂಪವಾಗಿ) ಕಾಲುಗಳನ್ನು ಇಳಿಬಿಟ್ಟು ಅವಳ ಸ್ಪರ್ಶದೊಂದಿಗೆ ಉಲ್ಲಸಿತಳಾಗ್ತಾಳೆ. ಬಹುಶಃ ಇದೊಂದೇ ಏನೋ ಅವಳು ಮಾನಸಿಕವಾಗಿ ರಿಫ್ರೆಷ್ ಆಗಲು ತೊಡಗಿಸಿಕೊಳ್ಳುವ ದಾರಿ.

ಹೀಗೆ ಇಲ್ಲಿ ಲೈಂಗಿಕವೃತ್ತಿಯಲ್ಲಿ ತೊಡಗಿಸಿಕೊಳ್ಳುವ ಶೇ.೧೦೦ ರಷ್ಟು ಮಹಿಳೆಯರೂ ವಲಸೆ ಬಂದವರೇ. ಅದೇ ಜಿಲ್ಲಾ ಕೇಂದ್ರದಿಂದ, ನೆರೆ ಜಿಲ್ಲೆಗಳಿಂದ, ನೆರೆರಾಜ್ಯಗಳಿಂದಲೂ ಇಲ್ಲಿಗೆ ವಲಸೆ ಬರುತ್ತಾರೆ. ಕೆಲವೊಮ್ಮೆ ಅದೆಲ್ಲೋ ಲಾರಿ ಹತ್ತಿರುತ್ತಾರೆ. ಇಲ್ಲಿ ಬಂದಿಳಿದಿರುತ್ತಾರೆ. ಇಲ್ಲೇ ಉಳಿದೂ ಬಿಡುತ್ತಾರೆ. ಕೆಲವೊಮ್ಮೆ ಇಲ್ಲಿಂದ ಲಾರಿ ಹತ್ತಿ ಹೋದ ಮಹಿಳೆ ಇನ್ನೆಲ್ಲೋ ಇಳಿದಿರುತ್ತಾಳೆ. ಅವಳೂ ಕೂಡ ಕೆಲವರನ್ನು ಕರೆದುಕೊಂಡು ಬಂದು ಈ ಪ್ರದೇಶವನ್ನು ಪರಿಚಯಿಸುತ್ತಾಳೆ. ಇನ್ನು ಕೆಲವು ಬಾರಿ ನಗರಗಳಲ್ಲಿ ರೇಡ್ ಹೆಚ್ಚಾದರೋ, ಗಲಭೆಗಳಾದರೋ, ಗಂಭೀರ ಪರಿಸ್ಥಿತಿ ಉಂಟಾದಾಗಲೋ, ಸ್ಟ್ರೈಕ್‌ಗಳಾದಾಗಲೋ, ಅಯ್ಯಪ್ಪನ ಭಕ್ತರೆಲ್ಲಾ ಯಾತ್ರೆ ಹೋದಾಗಲೋ, ತನ್ನನ್ನು ರೌಡಿಗಳೋ, ಪುಡಿಪೋಕರಿಗಳಿಂದಲೋ ತಪ್ಪಿಸಿಕೊಳ್ಳಲು.... ಹೀಗೆ ನೂರಾರು ಕಾರಣಗಳಿಂದಾಗಿ ಇಲ್ಲಿಗೆ ಲೈಂಗಿಕವೃತ್ತಿ ಮಹಿಳೆಯರು ವಲಸೆ ಬರುತ್ತಲೇ ಇರುತ್ತಾರೆ. ಆಗೆಲ್ಲಾ ಗಿರಾಕಿಗಳಿಗೆ ಸುಗ್ಗಿ, ಹೊಸಹೊಸ ಮಾಲುಗಳ ರುಚಿ ನೋಡಲು ತವಕಿಸುತ್ತಾರೆ. ನಿರ್ಲಿಪ್ತವಾಗಿ ಹೋಗಿಬಿಡಬೇಕೂಂತ ನಿರ್ಧಾರ ಮಾಡಿ ಬಂದಿದ್ದ ವಿಟರೂ ಕೂಡ ಮನಸ್ಸು ಬದಲಿಸಿ ಬಿಡುತ್ತಾರೆ. ಆದರೆ ಬುಡಕಟ್ಟುಗಳ ಲಕ್ಷಣಗಳಾದ ವಲಸೆ ಇಲ್ಲಿ ಬಹುಮುಖ್ಯವಾಗುತ್ತದೆ. ಹಾಗೆಯೇ ಅವರ ಜೀವನಕ್ರಮ, ಬೇಟೆಯ ದಾಹ, ಒಂದು ಗುಂಪಿಗೆ ಇನ್ನೊಂದು ಗುಂಪಿನೊಂದಿಗಿರುವ ವೈಷಮ್ಯಗಳು, ಸದಾ ಅಪಾಯದ ಆತಂಕ, ಅಂತಹ ದಟ್ಟವಾದ ಕಾಡುಗಳಲ್ಲಿನ ಬದುಕೂ ಕೂಡ ಬುಡಕಟ್ಟಿನ ಲಕ್ಷಣಗಳನ್ನು ಹೊಂದಿದ್ದು ಮುಂದೆ ವಿವರಿಸುವ ಅನೇಕ ವಿಚಾರಗಳು ಅದನ್ನು ಸ್ಪಷ್ಟಪಡಿಸುತ್ತವೆ.

ಕೆಲವೊಮ್ಮೆ ಎಲ್ಲೆಲ್ಲಿಂದಲೋ ಗುಂಪುಗುಂಪಾಗಿಯೇ ಲೈಂಗಿಕವೃತ್ತಿ ಮಹಿಳೆಯರು ಇಲ್ಲಿಗೆ ವಲಸೆ ಬಂದುಬಿಡುತ್ತಾರೆ. ಅವರ ಭಾಷೆಯೂ ಕೂಡ ಕೆಲವು ಬಾರಿ ಬೇರೆಯದೇ ಆಗಿರುತ್ತದೆ. ಮೇಲ್ನೋಟಕ್ಕೆ ಅವರ ನಡವಳಿಕೆಗಳು, ವೇಷಭೂಷಣಗಳೂ ಭಿನ್ನವಾಗಿರುತ್ತವೆ. ಈಗಾಗಲೇ ಈ ಪ್ರದೇಶವನ್ನು ವ್ಯಾಪಿಸಿ ಠಿಕಾಣಿ ಹೂಡಿರುವ ಮಹಿಳೆಯರು ಮೊದಮೊದಲು ಪ್ರತಿರೋಧ ವ್ಯಕ್ತಪಡಿಸುತ್ತಾರೆ. ಎಷ್ಟೇ ಬಾರಿ ಹೊಸದಾಗಿ ಬಂದ ಗುಂಪು ಸ್ವಲ್ಪ ದುರ್ಬಲವಾಗಿದ್ದರೂ ಈ ಮಹಿಳೆಯರು ಅವರನ್ನು ಓಡಿಸಿಯೂ ಬಿಡುತ್ತಾರೆ. ಆ ಗುಂಪು ಪ್ರಬಲವಾಗಿದ್ದರೆ ಈ ಜಾಗ ನಿಮ್ಮಪ್ಪನದಾ? ಎನ್ನುವ ಮನೋಭಾವ ಅವರಲ್ಲಿದ್ದರೆ ಹೊಸದರಲ್ಲಿ ದೊಡ್ಡ ಜಗಳಗಳೇ ನಡೆದುಬಿಡುತ್ತವೆ. ವೃತ್ತಿಯಲ್ಲಿನ ಸ್ಪರ್ಧೆ, ಮಾತ್ಸರ್ಯ, ತಮ್ಮ ಆದಾಯಕ್ಕೆ ಕುತ್ತು ಎನ್ನುವ ಆತಂಕ ಹಳೇ ಗುಂಪುಗಳಿಗೆ ಸಹಜವಾಗಿಯೇ ಕಾಡಿಬಿಡುತ್ತೆ. ಇನ್ನೊಂದು ಮುಖ್ಯ ಅಂಶ-ಬಂದವರಲ್ಲಿ ಸೌಂದರ್ಯವತಿಯರಿದ್ದರೆ-ನವ್ಯನವೀನ ಉಡುಗೆ ತೊಡುಗೆಗಳಿದ್ದರೆ, ಅಲಂಕಾರಗಳು, ರೀತಿನೀತಿಗಳು ನಾಜೂಕಾಗಿದ್ದರೆ, ದಷ್ಟಪುಷ್ಟವಾಗಿದ್ದರೆ ಹಳೇಗುಂಪುಗಳಿಗೆ ಅತಂತ್ರ ಕಾಡಿಬಿಡುತ್ತೆ.

ಬಂದಗುಂಪು ಈ ಮೇಲಿನ ಎಲ್ಲವುಗಳೊಂದಿಗೆ ಮಾನಸಿಕವಾಗಿ ಗಟ್ಟಿಯಾಗಿ ಇದ್ದಲ್ಲಿ ಹಳೆಯಗುಂಪು ಹೇಗೋ ಸಮಜಾಯಿಸಿಕೊಂಡು ಒಂದಾಗಿಬಿಡುತ್ತಾರೆ. ಕೆಲವೊಮ್ಮೆ ತಮ್ಮ ಮಾಮೂಲಿ ವಿಟರಿಗೆ ಈ ಹೊಸ ಹುಡುಗಿಯರನ್ನು ಕುದುರಿಸಿಕೊಟ್ಟು ಅವರಿಂದ ಕಮೀಷನ್ ಪಡೆಯುತ್ತಾರೆ.

ಇಷ್ಟೆಲ್ಲಾ ವೈರುಧ್ಯತೆಗಳು, ದ್ವೇಷಾಸೂಯೆಗಳು, ವೃತ್ತಿ ಸ್ಪರ್ಧೆಗಳು ಇದ್ದರೂ ಇಡೀ ಸಮುದಾಯಕ್ಕೆ ಏನಾದರೂ ಅಪಾಯ ಒದಗುವ ಸೂಚನೆ ಬಂದರೆ ಒಟ್ಟಾಗಿಬಿಡುತ್ತಾರೆ. ಇವರಲ್ಲಿಯೂ ಎಲ್ಲಾ ಪಾಲಿಟಿಕ್ಸ್ ಇದ್ದೇಇದೆ. ಕೆಲವೊಮ್ಮೆ ಇಂತಹ ಅಪಾಯಗಳ ಹುನ್ನಾರದಲ್ಲಿ ಈ ಸಮುದಾಯದವರೇ ಕೆಲವರು ಒಳಗೊಂಡಿರುತ್ತಾರೆ. ಉದಾಹರಣೆಗೆ: ಪೋಲೀಸರಿಗೆ ಮಾಹಿತಿ ನೀಡುವುದು, ಕಾಡಿಗೆ ಬೆಂಕಿ ಹೊತ್ತಿಸುವುದು, ಕಾಡಾನೆ ಬಂತೆಂಬ ಸುಳ್ಳುವದಂತಿ ಹಬ್ಬಿಸುವುದು...)

ಹೆದ್ದಾರಿಗಳಲ್ಲಿ ಅಲ್ಲಲ್ಲೇ ಇರುವ ಹೋಟೆಲ್‌ಗಳಲ್ಲಿ ಹೋಟೆಲ್ ಶಾಂಭವಿ, ಹೋಟೆಲ್ ಫ್ರೆಂಡ್ಸ್ ಹೋಟೆಲ್ ತ್ರೀಸ್ಟಾರ್, ಹೋಟೆಲ್ ರಂಗೀಲಾ, ಹೋಟೆಲ್ ಶಾನುಭೋಗ್, ಅಹಮದ್ ಹೋಟೆಲ್...ಹೀಗೆಯೇ ತಮಗೆ ಹತ್ತಿರವಿರುವ, ಇಷ್ಟವಾಗುವ 'ಸಹಕರಿಸುವ' ಹೋಟೆಲ್‌ಗಳಲ್ಲಿ ಇವರು ಊಟ-ತಿಂಡಿ-ಕುಡಿಯುವುದು ಮಾಡುತ್ತಾರೆ. ಇವುಗಳಲ್ಲಿ ಕೆಲವು ಪಕ್ಕಾ ಸಸ್ಯಾಹಾರಿಗಳಂತೆ ನಡೆದುಕೊಳ್ಳುತ್ತವೆ. ನಮಗೇಕೆ ರಿಸ್ಕ್, ಪೋಲೀಸರ ಬೀಟ್, ರೌಡಿಗಳ, ಪರ್ಕಿಗಳ ಹಾವಳಿ, ಅರಣ್ಯ ರಕ್ಷಕರ ಕಾಟ... ಎಂದೆಲ್ಲಾ ಇವರು ಲೈಂಗಿಕವೃತ್ತಿ ಮಹಿಳೆಯರನ್ನು ಸೋಂಕಿಸಿಕೊಳ್ಳುವುದೇ ಇಲ್ಲ. ಇನ್ನು ಕೆಲವರು ಇವೆಲ್ಲವನ್ನು ಮೀರಿ ಮಾಮೂಲಿಗಳೊಂದಿಗೆ ರಾಜಿ ಮಾಡಿಕೊಂಡು ಲೈಂಗಿಕವೃತ್ತಿ ಮಹಿಳೆಯರನ್ನು ಕೂಡ ತಮ್ಮ ಉತ್ಪಾದನೆಯ ಒಂದು ಮುಖವಾಗಿ ನೋಡುತ್ತಾರೆ. ಅವರಿಗೆ ತಿನ್ನಲು, ಕುಡಿಯಲು ಒದಗಿಸುತ್ತಾರೆ. ಅವರ ಲಗ್ಗೇಜುಗಳನ್ನು ಇಡಲು ವ್ಯವಸ್ಥೆ ಮಾಡುತ್ತಾರೆ. ನಿರೋಧ್ ಒದಗಿಸುತ್ತಾರೆ. ಕೆಲವೊಮ್ಮೆ ಸ್ನಾನ ಮಾಡಿಕೊಳ್ಳಲು ವಿಶ್ರಾಂತಿ ತೆಗೆದುಕೊಳ್ಳಲು ಅವಕಾಶ ಕೊಡುತ್ತಾರೆ. ಮತ್ತೆ ವಿರಳವಾಗಿ ಲೈಂಗಿಕಕ್ರಿಯೆಗೂ ಜಾಗ ಕೊಡುತ್ತಾರೆ. ಇವೆಲ್ಲದಕ್ಕೂ ಪ್ರತಿಫಲವನ್ನು ಸೌಜನ್ಯಪೂರಕವಾಗಿ ಪಡೆದುಕೊಂಡುಬಿಡುತ್ತಾರೆ. ಅವರು ಕಳೆದುಕೊಳ್ಳುವುದಾದರೂ ಏನನ್ನು? ಅವರು ಅವಕಾಶ ಮಾಡಿಕೊಡುವ ಜಾಗಗಳಾದರೂ ಹೋಟೆಲಿನ ಹಿಂಭಾಗದಲ್ಲಿಯ ಕಸ, ಕಡ್ಡಿ ತುಂಬಬಹುದಾದ, ಕಿರಿದಾದ, ವಾಸನೆ ಹಬ್ಬಿಸುವ ಒಂದಿಷ್ಟು ಕೊರಕಲು ಜಾಗ ತಾನೆ? ಆದರೆ ಕೆಲವೊಮ್ಮೆ ಅಷ್ಟು ಆಶ್ರಯ ಮನೋಭಾವವೂ ಕೂಡ ಈ ಲೈಂಗಿಕವೃತ್ತಿ ಮಹಿಳೆಯರಿಗೆ ಅತ್ಯಂತ ಅಗತ್ಯವಾಗಿರುತ್ತದೆ. ಅದಕ್ಕಾಗಿಯೇ ಸಾಮಾನ್ಯವಾಗಿ ಈ ಮಹಿಳೆಯರು ಹೋಟೆಲ್ ಸಿಬ್ಬಂದಿಯೊಂದಿಗೆ ಸೌಜನ್ಯದಿಂದಲೇ ಇರುತ್ತಾರೆ. ಆದರೆ ಕೆಲವೊಮ್ಮೆ ಅತೀ ಅಪಾಯದ ಸುಳಿವು ಸಿಕ್ಕಿದರೆ ಹೋಟೆಲ್ ಸಿಬ್ಬಂದಿ ಈ ಮಹಿಳೆಯರನ್ನು ಓಡಿಸಿಬಿಡುತ್ತಾರೆ. ಅವರು ಎಲ್ಲಿಗೆ ಹೋಗ್ತಾರೆ ಎನ್ನುವುದು ಅವರಿಗೆ ಆ ಸಂದರ್ಭದಲ್ಲಿ ಅನಗತ್ಯ. ಉದಾ: ಬಹಳ ಅಪರೂಕ್ಕೊಮ್ಮೆ ಇದ್ದಕ್ಕಿದ್ದಂತೆ ಪೋಲೀಸ್ ಅಧಿಕಾರಿಗಳು ಆ ಮಾರ್ಗ ಬಂದು

ಬಿಡುತ್ತಾರೆ. ಅವರೆಷ್ಟೇ ಅಚಾನಕ್ಕಾಗಿ ಬಂದರೂ ಅವರ ಇಲಾಖೆಯವರೇ ಈ ಸೂಚನೆಯನ್ನು ಹೋಟೆಲ್ ಮಿತ್ರರಿಗೆ ಕೊಟ್ಟು ಬಿಡುತ್ತಾರೆ.

ಸಾಮಾನ್ಯವಾಗಿ ಈ ಪ್ರದೇಶದ ಮಹಿಳೆಯರು ಎರಡು ರೀತಿಯ ಪೋಲೀಸರನ್ನು ಸಂಭಾಳಿಸಬೇಕಾಗುತ್ತದೆ. ಒಂದು ಸಿವಿಲ್ ಪೋಲೀಸರು ಇನ್ನೊಂದು-ಅರಣ್ಯ ರಕ್ಷಕ ಪಡೆಯವರು. ಇಬ್ಬರಿಗೂ ಮಾಮೂಲಿ ಕೊಡಬೇಕು. ಇಬ್ಬರಿಗೂ ಅವರು ಬಯಸಿದಾಗ ದೇಹವನ್ನು ಕೊಡಬೇಕಾಗುತ್ತದೆ. ಇಷ್ಟೆಲ್ಲಾ ಆದರೂ ಕ್ಷಣಂಚಿತ್ತಂ ಎಂಬಂತೆ ಲಾಟಿ ಹಿಡಿದು ಮುಖ ಗಂಟಿಕ್ಕಿ ನಡೆಯುತ್ತಲೇ ಇರುತ್ತಾರೆ!

ಆದರೂ ಎಲ್ಲಾ ಪೋಲೀಸರೂ ಹಿಂಬಾಲಿಸಲು ಸಾಧ್ಯವಾಗದಂತೆ ಈ ಸಮುದಾಯ ಅಲ್ಲಿ ತನ್ನದೇ ಆದ ಕಾರ್ಯತಂತ್ರ ರೂಪಿಸಿಕೊಂಡಿದೆ. ಈ ಮಹಿಳೆಯರು ರೂಪಿಸಿರುವ ಕಿರುದಾರಿಗಳಲ್ಲಿ, ಮೆಟ್ಟಲುಗಳಲ್ಲಿ ಇನ್ನಾರೂ ಇಳಿಯಲು ಸಾಧ್ಯವೇ ಇಲ್ಲ. ಹಾಗೇನಾದರೂ ನುಗ್ಗಿದರೆ ಬೂಟುಕಾಲಿನ ಸಮೇತ ಆಸ್ಪತ್ರೆ ಸೇರಬೇಕಾಗುತ್ತದೆ. ಸುಮಾರು 40-50 ಅಡಿಯವರೆಗೂ ಮೇಲಿಂದ ಕೆಳಗೆ ಇಂತಹ ವ್ಯೂಹಗಳನ್ನು ಈ ಮಹಿಳೆಯರು ಮಾಡಿಕೊಂಡಿರುತ್ತಾರೆ.

ಇದಕ್ಕಿಂತಲೂ ಅವರು ಎದುರಿಸಬೇಕಾದ ಅಪಾಯಗಳೆಂದರೆ, ಲೈಂಗಿಕ ಕ್ರಿಯೆ ನಡೆಸಲೋ ಅಥವಾ ತಮ್ಮನ್ನು ತಾವು ಬಚ್ಚಿಟ್ಟುಕೊಳ್ಳಲೋ, ವಿಶ್ರಮಿಸಲೋ ಅವರು ದಟ್ಟಡವಿಯೊಳಗೇ ಹೋಗಲೇ ಬೇಕಾಗುತ್ತದೆ. ಅವರೇ ನಿರ್ಮಿಸಿಕೊಂಡಿರುವ ತಂಗುದಾಣಗಳು ಅಲ್ಲಲ್ಲೇ ಇರುತ್ತವೆ. ಅವೇನು ಕಲ್ಲು ಮಣ್ಣುಗಳ ಗೂಡುಗಳಲ್ಲ. ಗೂಡುಗಳಂತೆ ಬೆಳೆದಿರುವ ಪೊದೆಗಳನ್ನು ಗುಡಿಸಿ ಚೊಕ್ಕ ಮಾಡಿ ಮೃದುವಾದ ಮಣ್ಣನ್ನು ಹಾಸಿ ಗೂಡು ಕಟ್ಟಿಕೊಳ್ಳುತ್ತಾರೆ. ಒಂದು ಪೊದರಿನ ಗಿಡವನ್ನು ಬಾಗಿಲಾಗಿ ಬಳಸಿಕೊಳ್ಳುತ್ತಾರೆ. ಹೀಗೆ ಇರುವಾಗ ಇದ್ದಕ್ಕಿದ್ದಂತೆ ಆನೆಗಳ ಹಿಂಡುಹಿಂಡೇ ಬಂದು ಬಿಡುತ್ತವೆ. ಅದು ಸರ್ವೇಸಾಮಾನ್ಯ ಅವರಿಗೆ. ಇನ್ನು ಸರ್ಪಗಳು ಹರಿದಾಡುವ ಹಾದಿಗಳು, ಕತ್ತಲು-ಬೆಳಕು-ಬೆತ್ತಲುಗಳ ಗುಂಗಿನಲ್ಲೇ ಇರುವ ಇವರಿಗೆ ಅಪಾಯದ ಕರೆಗಂಟೆಗಳು ಸದಾ ಎಚ್ಚರಿಕೆ ನೀಡುತ್ತಲೇ ಇರುತ್ತವೆ. ಹೀಗೇ ಆನೆ ತುಳಿತಕ್ಕೆ ಸಿಕ್ಕಿ, ಸರ್ಪದ ವಿಷಕ್ಕೆ ಬಲಿಯಾಗಿ ಹೆಣವಾದ ಅದೆಷ್ಟೋ ನೆನಪುಗಳು ಬಹಳ ವರ್ಷಗಳಿಂದಲೂ ಅಲ್ಲಿರುವ ಕೆಲವೇ ಮಹಿಳೆಯರ ನೆನಪಿನ ಬುತ್ತಿಯಲ್ಲಿವೆ.

ಮಾತೃಪ್ರಾಧಾನ್ಯತೆ ಲಕ್ಷಣ:

ಬುಡಕಟ್ಟುಗಳಲ್ಲಿ ಮೂಲಭೂತವಾಗಿ ಮಾತೃಪ್ರಧಾನ್ಯತೆಯು ಮುಖ್ಯ ಅಂಶವಾಗಿದ್ದು 'ತಾಯಿಯೇ' ಮುಖ್ಯ ಪಾತ್ರಧಾರಿಣಿಯಾಗಿರುತ್ತಿದ್ದಳು. ಇಂದಿನ ಆಧುನಿಕ ವೇಶ್ಯಾವೃತ್ತಿ ಬದುಕಿನಲ್ಲಿಯೂ ಮಾತೃಪ್ರಧಾನ ಅಂಶಗಳು ಜೀವಂತವಾಗಿರುವುದನ್ನು ಕಾಣಬಹುದಾಗಿದೆ. ತಂದೆ ಯಾರೆಂದೇ ತಿಳಿಯದ ಮಕ್ಕಳಿಗೆ ತಾಯಿಯೇ ಬದುಕಿನ ಸರ್ವಸ್ವವಾಗುತ್ತಾಳೆ. ಇಡೀ ಕುಟುಂಬ ನಿರ್ವಹಣೆಯ ಹೊಣೆಯನ್ನು ಇಲ್ಲಿ ಹೆಣ್ಣೇ ನಿರ್ವಹಿಸಬೇಕಾಗುತ್ತದೆ. ಜೀವನ ನಿರ್ವಹಣೆಯ ಆರ್ಥಿಕವಾದ ಹೊಣೆಯನ್ನು ಹೆಣ್ಣೇ ಹೊರಬೇಕಾಗುತ್ತದೆ.

ಇಲ್ಲಿ ಆ ಹೆಣ್ಣಿನ ಸುತ್ತ ಅವಲಂಬಿತರು ಸದಾ ಇವಳನ್ನು ದುಡಿಯಲೇಬೇಕಾದ ಅನಿವಾರ್ಯತೆಗೆ ಒಡ್ಡುತ್ತಲೇ ಇರುತ್ತಾರೆ.

ಡಾ.ಹಿ.ಚಿ.ಬೋರಲಿಂಗಯ್ಯರವರು ಅಭಿಪ್ರಾಯ ಪಡುವಂತೆ, ''ಒಂದು ಬುಡಕಟ್ಟು ಸಮಾದಲ್ಲಿನ ಸ್ತ್ರೀಯರು ದುರ್ಬಲರಲ್ಲ. ಏಕೆಂದರೆ ಅಲ್ಲಿನ್ನು ಮಾತ್ರ ಪ್ರಾಧಾನ್ಯತೆಯ ಅಸ್ತಿತ್ವವಿದೆ. ಪಾತಿವ್ರತ್ಯ ಅಥವಾ ಶೀಲವೊಂದೇ ಎಲ್ಲವನ್ನು ನಿರ್ಧರಿಸುವ ಮೌಲ್ಯವಲ್ಲ. ಜನಪದ ಸಮಾಜ ಮತ್ತು ಬುಡಕಟ್ಟು ಸಮಾಜಗಳ ನಡುವಿನ ಈ ಅಂತರ ಅವರುಗಳಲ್ಲಿನ ಲೋಕ ದೃಷ್ಟಿಯಲ್ಲಿಯೂ ಭಿನ್ನತೆಯನ್ನು ತಂದುಕೊಟ್ಟಿದೆ.'' (ವಿಸ್ಮೃತಿ ಮತ್ತು ಸಂಸ್ಕೃತಿ ಪುಟ.63)

ಇಲ್ಲೆಲ್ಲಾ ನಾನು ಬುಡಕಟ್ಟುಗಳ ಲಕ್ಷಣಗಳನ್ನು ಬಹಳ ಸ್ಪಷ್ಟವಾಗಿ ಗುರುತಿಸಿದ್ದೇನೆ. ಹಿಂದಿನ ನೂರಾರು ತಜ್ಞರುಗಳು ವ್ಯಾಖ್ಯಾನಿಸಿರುವ ಹಾಗೆ ಅವರು ಎಲೆ, ತೊಗಟೆಗಳನ್ನು ತೊಟ್ಟು ಕೊಂಡ, ವಿಚಿತ್ರವಾದ, ಭಿನ್ನವಾದ ಬದುಕನ್ನು ರೂಢಿಸಿ ಕೊಂಡಿರುವುದರ ಕಲ್ಪನೆ ಕೂಡ ಇಲ್ಲಿ ಇಲ್ಲ. ಅಂದ ಮಾತ್ರಕ್ಕೆ ಇಂದಿನ ಆಧುನಿಕ ಪರಿಸ್ಥಿತಿಯಲ್ಲಿ ಯಾವುದೇ ಬುಡಕಟ್ಟುಗಳನ್ನು ಹಾಗೆ ನೋಡಲು ಸಾಧ್ಯವಿಲ್ಲ.

ಲೈಂಗಿಕ ವೃತ್ತಿ ಮಹಿಳೆಯರ ಜೀವನದ ಬಗ್ಗೆ ಚರ್ಚಿಸಲಾದ ಮೇಲ್ಕಂಡ ಎಲ್ಲ ಅಂಶಗಳ ಆಧಾರದಲ್ಲಿ ಈ ವೃತ್ತಿ ಮಹಿಳೆಯರನ್ನು ಒಂದು ಬುಡಕಟ್ಟು ಜನಪದ ಸಮುದಾಯ ಎಂದು ಸ್ಪಷ್ಟವಾಗಿ ಗುರುತಿಸಲು ಅಗತ್ಯವಾದ ಸಾಕಷ್ಟು ಅಂಶಗಳು ಲಭ್ಯವಿದೆ. ಖ್ಯಾತನಾಮರಾದ ಜನಪದ ತಜ್ಞರು ಹಾಗೂ ಸಮಾಜ ವಿಜ್ಞಾನಿಗಳು ನಿರೂಪಿಸಿರುವ ಮಾನದಂಡಗಳ ಆಧಾರದಲ್ಲಿಯೇ ಇವರನ್ನು ಆಧುನಿಕ ಬುಡಕಟ್ಟು, ವಿಶಿಷ್ಟ ಸಮೂದಾಯಗಳೆಂದು ಅತ್ಯಂತ ನಿಖರವಾಗಿ ಗುರುತಿಸಬಹುದಾಗಿದೆ.


ಈ ರೀತಿಯ ವಿಶ್ಲೇಷಣೆ ಈ ಮಹಿಳೆಯರ ಅಭಿವೃದ್ಧಿ, ಪುನರ್ ವಸತಿ, ಜೀವನ ಸುಧಾರಣೆ, ಹಾಗೂ ಸಮಾಜದಲ್ಲಿ ನಿರ್ವಹಿಸುತ್ತಿರುವ ಪಾತ್ರ, ಸಮಾಜ ಅವರನ್ನು ನೋಡಬೇಕಾದ ರೀತಿಗಳ ಬಗ್ಗೆ ತುಂಬಾ ಸಹಕಾರಿಯಾಗಬಹುದಾಗಿದೆ. ಈ ನಿಟ್ಟಿನಲ್ಲಿ ಈ ಸ್ವರೂಪದ ಚರ್ಚೆಯನ್ನು ಬೇರೆ ಬೇರೆ ಅಧ್ಯಾಯಗಳಲ್ಲಿ ಮುಂದುವರೆಸುವ ಪ್ರಯತ್ನವನ್ನು ಮಾಡಿದ್ದೇನೆ.


ಅಡಿ ಟಿಪ್ಪಣಿಗಳು:

1. ಪ್ರ.ಸಂ: ಪ್ರೊ.ಎಚ್.ಜೆ.ಲಕ್ಕಪ್ಪಗೌಡ: ಕರ್ನಾಟಕ ಬುಡಕಟ್ಟುಗಳು ಸಂ.1 ಪುಟ.737
2. ಅದೇ ಪುಟ 738
3. ಅದೇ ಪುಟ 738
4. ಅದೇ ಪುಟ 738
5. ಅದೇ ಪುಟ 738
6. ಸಂ: ಪ್ರೊ. ಕಾಳೇಗೌಡ ನಾಗವಾರ, ಎನ್. ಹುಚ್ಚಪ್ಪಮಾಸ್ತರ್: ಗಿರಿಜನ ಸಂಸ್ಕೃತಿ ಪುಟ:3
7. ಕರ್ನಾಟಕ ಬುಡಕಟ್ಟುಗಳು. ಸಂಪುಟ.1 ಪುಟ: 468
8. ಅದೇ ಪುಟ 47
9. ಅದೇ ಪುಟ 150
10. ಅದೇ ಪುಟ 99
11. ಬುಡಕಟ್ಟು ಅಧ್ಯಯನ, ಸಂಪುಟ.1, ಸಂಚಿಕೆ.1 ಪುಟ 168
12. ಡಾ. ಹಿ.ಚಿ. ಬೋರಲಿಂಗಯ್ಯ, ಬುಡಕಟ್ಟು ಆರಾಧನೆ: ಪುಟ.19.20.
13. Desmand morris: TRIBES. page 10



ಬಿ.ಎನ್.ಪ್ರದೀಪ್





ಅಧ್ಯಾಯ -೨

ವೇಶ್ಯೆ ಅರ್ಥ ಮತ್ತು ಶಬ್ದ ವ್ಯುತ್ಪತ್ತಿ

ವೇಶ್ಯೆ ಪದದ ಅರ್ಥ ಮತ್ತು ಶಬ್ದ ವ್ಯುತ್ಪತ್ತಿಯನ್ನು ಸಂಕುಚಿತವಾಗಿ ಅಥವಾ ಕರಾರುವಾಕ್ಕಾಗಿ ನಿಘಂಟುಗಳಿಂದ ಹೆಕ್ಕಿ ತೆಗೆಯಲು ಸಾಧ್ಯವಿಲ್ಲ. ವೇಶ್ಯೆ ಪದದ ಅರ್ಥ ಮತ್ತು ವ್ಯುತ್ಪತ್ತಿ ತುಂಬಾ ಗಂಭೀರವಾದ ವಿಶ್ಲೇಷಣೆಯನ್ನು ಬಯಸುತ್ತದೆ. ವೇಶ್ಯೆ ಶಬ್ದ ಮನುಷ್ಯ ಕುಲದ ವಿಕಾಸವನ್ನು, ಆಧುನಿಕತೆಯ ಚೌಕಟ್ಟಿನಲ್ಲಿ ಹೇಳಬೇಕೆಂದರೆ ತೀರಾ ವೈಯಕ್ತಿಕವಾದ ತೃಷೆಯನ್ನು ಆಧರಿಸಿದೆ. ಹಾಗಾಗಿಯೇ ಅದರ ವಿಶ್ಲೇಷಣೆಗೂ ಆಳಕ್ಕೆ ಇಳಿಯಬೇಕಾಗುತ್ತದೆ. ತಲಸ್ಪರ್ಶಿಯಾಗಿ ಹುಡುಕಾಟ ನಡೆಸಲು ಪರಿಪೂರ್ಣವಾಗಿ ಸಾಧ್ಯವಾಗಿಲ್ಲದಿದ್ದರೂ ಮಾನವ ಶಾಸ್ತ್ರಜ್ಞರು, ಮನೋ ವಿಜ್ಞಾನಿಗಳು, ನಡೆಸಿರುವ ಪ್ರಯತ್ನಗಳ ಆಧಾರದಲ್ಲಿ ಹಾಗೂ ಸುಮಾರು ಹತ್ತು ವರ್ಷಗಳಿಂದ ವೇಶ್ಯೆಯರೊಂದಿಗೆ, ಅವರ ಬದುಕಿನ ಸಂಕೀರ್ಣತೆಗಳೊಂದಿಗೆ ಪಡೆದ ನನ್ನ ಕ್ಷೇತ್ರಕಾರ್ಯದ ಅನುಭವದ ಆಧಾರದಲ್ಲಿಯೂ ಅರ್ಥ ಮತ್ತು ಶಬ್ದ ವ್ಯುತ್ಪತ್ತಿಯ ಹುಡುಕಾಟದ ಪ್ರಯತ್ನವನ್ನು ಮಾಡಬಹುದಾಗಿದೆ.

ವೈಜ್ಞಾನಿಕವಾಗಿ ಲೈಂಗಿಕ ಸಂಗಾತಿ ಹುಡುಕಾಟ ಮತ್ತು ಸಂತಾನೋತ್ಪತ್ತಿ ಎರಡೂ ಕೂಡ ಪ್ರಾಣಿಜನ್ಯವಾದವು. ಪ್ರಾಣಿಗಳು ಅದರಲ್ಲೂ ಹೆಣ್ಣು ಪ್ರಾಣಿಗಳು ಲೈಂಗಿಕವಾಗಿ ಕ್ರಿಯಾಶೀಲವಾದಾಗ ಗಂಡು ಪ್ರಾಣಿಗಳಿಗೆ ಸಂಜ್ಞೆ ಕೊಡುತ್ತವೆ ಹಾಗೂ ಅದಕ್ಕೆ ಬೇಕಾದಂತಹ ನಡವಳಿಕೆಗಳನ್ನು ಪ್ರಚೋದಿಸುತ್ತವೆ. ಆದರೆ ಮಾವನ ವಿಕಾಸದೊಳಗೆ ದ್ವಿಪಾದಿ ಪ್ರಕ್ರಿಯೆಯು ಬೆಳವಣಿಗೆಯಾದಾಗ ಎರಡು ಕಾಲುಗಳಲ್ಲಿ ಇಡೀ ದೇಹ ನಿಲ್ಲಬೇಕೆಂದರೆ ದೇಹದಲ್ಲಿ ಹಾರ್ಮೋನುಗಳು ಹೆಚ್ಚು ಉತ್ಪಾದನೆಯಾಗುತ್ತವೆ. ಇದೇ ಹಾರ್ಮೋನುಗಳು ಲೈಂಗಿಕತೆ ಮತ್ತು ಸಂತಾನೋತ್ಪತ್ತಿಗೂ ಸಂಬಂಧಿಸಿವೆ. ಹೀಗೆ ದ್ವಿಪಾದಿಯಾದ ಮನುಷ್ಯ ಲೈಂಗಿಕ ಕ್ರಿಯೆಗೆ ಸದಾ ಸಿದ್ಧವಾದಂತಹ ಒಂದು ಪ್ರಾಣಿ ಪ್ರಭೇದವಾಗಿ ವಿಕಾಸ ಹೊಂದಿರುವುದು ಕಂಡು ಬರುತ್ತದೆ.

ವೇಶ್ಯೆ, ವೇಶ್ಯಾವೃತ್ತಿಯ ಮೂಲ ಅಥವಾ ಕಾಲಘಟ್ಟದ ಬಗ್ಗೆ ಯಾವುದೇ ನಿಖರವಾದ ಕುರುಹುಗಳಿಲ್ಲ. ಸದಾ ಜಾಗೃತರಾಗಿರುವ ಲೈಂಗಿಕ ತೃಷೆಯನ್ನು ಮನುಕುಲ ತನ್ನ ಬದುಕಿನ ಇತರೆ ಚಟುವಟಿಕೆಗಳಂತೆಯೇ ಅಂದರೆ ಹಸಿವಾದಾಗ ಗೆಡ್ಡೆ, ಗೆಣಸು, ಹಣ್ಣು, ಹಂಪಲು, ಮಾಂಸಗಳನ್ನು ತಿಂದುಕೊಂಡು ಲೈಂಗಿಕ ತೃಷೆಯಾದಾಗ ಹೆಣ್ಣು ಗಂಡುಗಳು ಕೂಡಿಕೊಂಡು ಬದುಕಿದ್ದಿರಬೇಕು ಎಂದು ಮಾನವ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.

ನಿರಂತರವಾಗಿ ಮತ್ತು ಸುಸ್ಥಿರವಾಗಿದ್ದ ಹೆಣ್ಣುಗಳ ಲೈಂಗಿಕ ಸ್ವೀಕಾರಾರ್ಹವಾದ ಲಭ್ಯತೆ, ಪುರುಷರಲ್ಲಿ ಒಂದು ರೀತಿಯ ಸ್ಪರ್ಧೆಯನ್ನುಂಟು ಮಾಡುತ್ತದೆ. ಈ ಸ್ಪರ್ಧೆ ಅತ್ಯಗತ್ಯವಾದ ಮತ್ತು ಅದಕ್ಕೆ ಹೊಂದಿಕೊಳ್ಳುವ ಪ್ರತಿಕ್ರಿಯೆಯಾಗಿತ್ತು. ಹಾಗೂ ಕ್ರಮೇಣ ಹೆಣ್ಣು ಗಂಡುಗಳನ್ನು ನಿಕಟವಾಗಿ ಅವರ ಸಾಮಾಜಿಕ ಗುಂಪುಗಳಿಗೆ ಬೆಸೆಯಲು ಸಹಾಯ ಮಾಡಿತು. ನಂತರ ಮಾನವನಲ್ಲಾದ ಬದುಕಿನ ಬದಲಾವಣೆಗಳಲ್ಲಿ ಈ ಲೈಂಗಿಕ ಚಟುವಟಿಕೆಯನ್ನು ಆಳುವ ನಿಯಮಗಳು ಮತ್ತು ನಂಬಿಕೆಗಳಿಂದ ಬಲಪಡಿಸುತ್ತಾ ಬರಲಾಯಿತು. ಮಾನವ ತನ್ನ ಪ್ರಾಥಮಿಕ ಅಗತ್ಯ, ಲೈಂಗಿಕ ಚಟುವಟಿಕೆ ಮತ್ತು ಅದರ ಸಂಬಂಧಗಳ ನಿಯಂತ್ರಣಕ್ಕಾಗಿ ಮಾಡಿಕೊಂಡ ಒಪ್ಪಂದಗಳು, ಮಾನ್ಯತೆಗಳು, ಕಾಯ್ದೆ ಕಾನೂನುಗಳ ರೂಪವೇ ವಿವಾಹ.

ಮಾನವ ಸಹಜವಾಗಿ ಒಬ್ಬ ಪುರುಷ ಮತ್ತು ಒಂದು ಅಥವಾ ಹೆಚ್ಚು ಮಹಿಳೆಯರ ಮಧ್ಯೆಯ ಒಪ್ಪಂದ ವಿವಾಹ ಸಂಬಂಧವಾಗಿ ರೂಪಿತವಾಯ್ತು. ಲೈಂಗಿಕ ತೃಪ್ತಿ ಮತ್ತು ಸಂತಾನೋತ್ಪತ್ತಿಯ ಸಾಧನವಾಗಿಯಷ್ಟೇ ನಾವು ಇದನ್ನು ನೋಡಬೇಕಿಲ್ಲ. ಅದಕ್ಕಿಂತ ಮುಖ್ಯವಾಗಿ ಹೆಣ್ಣು ಪುರುಷನ ಆಸ್ತಿಯಾದಾಗ ಇದು ಒಂದು ರೀತಿಯ ಪುರುಷ ಪ್ರಾಧಾನ್ಯತೆಯನ್ನು ಎತ್ತಿ ಹಿಡಿಯುವಂತಹ ಸಾಧನ ಕೂಡ ಆಯಿತು.

ಮಾತೃ ಪ್ರಧಾನ ಬುಡಕಟ್ಟುಗಳನ್ನು ಹೊರತುಪಡಿಸಿ ಮುಕ್ತ ಸ್ವಾತಂತ್ರ ಕಳೆದುಕೊಂಡ ಜೊತೆಯಲ್ಲಿಯೇ ಹುಟ್ಟಿಕೊಂಡ ಆಸ್ತಿಯ ಪರಿಕಲ್ಪನೆ, ಪಾಳೇಗಾರಿಕೆ ಮೌಲ್ಯಗಳು ಅವುಗಳ ಸಮರ್ಥನೆಗಳು ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯಾಗಿಸುವ ಹುನ್ನಾರವಾದವು.

ನಿಯಮ ನಿಬಂಧನೆಗಳೊಂದಿಗೆ ನಿಷೇದಗಳು ಹುಟ್ಟಿಕೊಂಡವು. ಪಡೆದುಕೊಳ್ಳುವವರು, ಪೂರೈಸುವವರು ಹುಟ್ಟಿಕೊಂಡಾಗಲೇ ವೇಶ್ಯಾ ವೃತ್ತಿಯೂ ಹುಟ್ಟಿರಬಹುದು.

ಹೆಣ್ಣಿಗೆ ಪಾತಿವ್ರತ್ಯದ ಕೋಟೆ ನಿರ್ಮಿಸುತ್ತಲೇ ಗಂಡು ಸ್ವೇಚ್ಛಾಚಾರಿಯಾಗಿಯೂ, ಲೋಲುಪನಾಗಿಯೂ ಬದುಕನ್ನು ತನ್ನ ಬಯಕೆಗಳಿಗನುಸಾರವಾಗಿ ರೂಪಿಸಿಕೊಳ್ಳುತ್ತಾ ಹೋಗಿದ್ದರ ಪ್ರತಿಫಲವೇ ವೇಶ್ಯಾವಾಟಿಕೆ ಉಗಮಕ್ಕೆ ಕಾರಣವಾಗಿರುವುದು.

ತನಗೆ ಬೇಕಾದ್ದನ್ನೆಲ್ಲಾ ಪಡೆಯವ ಯಜಮಾನ್ಯ ಪ್ರವೃತ್ತಿಯೂ ಲೈಂಗಿಕ ತೃಷೆಯನ್ನು ಪೂರೈಸಿಕೊಳ್ಳಲು ಬೇಕಾದ ವ್ಯವಸ್ಥೆಯನ್ನು ಸೃಷ್ಟಿಸಿಕೊಂಡಿತು. ಪುರುಷ ಪ್ರಾಧಾನ್ಯತೆಯ, ಪಾಳೇಗಾರಿಕೆ ವ್ಯವಸ್ಥೆಯ, ಗುಲಾಮಿ ಪದ್ಧತಿಯ, ಮನುಕುಲದ ಮನಸ್ಸುಗಳು ಈ ಸಮಾಜದ ಅನಕ್ಷರತೆ, ಬಡತನ, ನಿರುದ್ಯೋಗ, ಮೂಢನಂಬಿಕೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಲೇ ಲೈಂಗಿಕ ವೃತ್ತಿ ಮಹಿಳೆಯರನ್ನು ಧಾರ್ಮಿಕ ಚೌಕಟ್ಟಿನಲ್ಲಿ, ಕಲೆಯ ಚೌಕಟ್ಟಿನಲ್ಲಿ ಕಟ್ಟಿ ಹಾಕಿದವು. ಲೈಂಗಿಕ ಕ್ರಿಯೆಯ ಸಮಪಾಲಿನ ಸರದಾರ ಪುರುಷನಾದರೂ ತಾನು ಮಾತ್ರ ಮರ್ಯಾದಾ ಪುರುಷನಾಗಿ ಲೈಂಗಿಕ ವೃತ್ತಿ ಮಹಿಳೆಯರನ್ನು ತುಚ್ಛವಾಗಿ, ಅನೈತಿಕವಾಗಿ ಚಿತ್ರಿಸುತ್ತಾ ಬಂದರು.

ಪ್ರಾಚೀನದಿಂದ ಇಂದಿನವರೆಗೂ ಅಂದರೆ ಆಧುನಿಕ ಜಾಗತೀಕರಣದ ಚೌಕಟ್ಟಿನ ಸಮಾಜದವರೆಗಿಗೂ ವೇಶ್ಯಾವೃತ್ತಿ ಆಯಾ ಕಾಲಘಟ್ಟಕ್ಕೆ ಅನುಸಾರವಾಗಿ ಸಾಗುತ್ತಾ ಬಂದಿದೆ.

ವೇಶ್ಯೆ ಅಥವಾ ವೇಶ್ಯಾವಾಟಿಕೆಯ ಶಬ್ದ ವ್ಯುತ್ಪತ್ತಿ:

ವೇಶ್ಯೆ, ಸಂಸ್ಕೃತ ಮೂಲದ 'ವೇಶ್ಯಾ' ಪದದಿಂದ ಬಂದಿದೆ. ''ವೇಶಂ ಅರ್ಹತಿ ವೇಶೇನ ದಿವ್ಯತಿ ಆಚರತಿ ವೇಶ್ಯೇನ ಪಣ್ಯ ಯೋಗೇನ ಜೀವತಿ ವಾವೇಶ್ಯಾ''[1] ಎಂಬ ನಿಷ್ಪತ್ತಿ ಶಬ್ದಕಲ್ಪದ್ರುಮದಲ್ಲಿ ಬಂದಿದೆ.

ಹಿಂದೆ ಸ್ತ್ರೀ ಪಾತ್ರಗಳನ್ನು ಪುರುಷರೇ ಅಭಿನಯಿಸುತ್ತಿದ್ದರು. ನಂತರ ಸ್ತ್ರೀ ಪಾತ್ರಗಳನ್ನು ಸ್ತ್ರೀಯರೇ ಹಾಕುವ ಪರಿಪಾಠ ಬೆಳೆಯತೊಡಗಿತು. ಹಾಗೆ ವೇಷ ಹಾಕಲು ಮುಂದಾದವಳನ್ನು ವೇಶ್ಯಾ ಎಂದು ಕರೆಯಲ್ಪಟ್ಟಳು.[2]

ಪಾತರದವಳು= ಪಾತ್ರದವಳು, A Dancing Girl, A horlet (ಗಣಿಕೆ, ವಾರಸ್ತ್ರೀ, ವೇಶ್ಯೆ, ಪುಣ್ಯಸ್ತ್ರೀ) ಪಾತ್ರ= An actor, dramatis persona (ನರ್ತಕಿ, ಲಾಸಿಕೆ)[3]

Prostitute ಎಂಬುದಕ್ಕೆ ವೇಶ್ಯೆ ಅಥವಾ ಸೂಳೆ ಎಂದು ಬಳಸುತ್ತೇವೆ. ಸಂಸ್ಕೃತದಲ್ಲಿ ವೇಶ್ಯಾ ಪದ ಹೆಚ್ಚು ಬಳಕೆಯಲ್ಲಿದೆ. ಇದಕ್ಕೆ ಪರ್ಯಾಯವಾಗಿ ಅಜ್ಜುಕಾ, ಖಥರಾ, ಗಣಿಕಾ, ಗ್ರಾಮಣೀ, ಝರ್ಝರಾ, ದಾಸೀ, ಪಣ್ಯಂಗನಾ, ಲಂಜಿಕಾ, ವಾರನಾರಿ, ವಿಲಾಸಿನಿ, ಶುಂಡಾ, ಶೂಲಾ, ಹನು, ಕ್ಷುದ್ರಾ, ಮುಕ್ತಾ ಮುಂಜಿಕಾ ಮೊದಲಾದ ಪದಗಳಿವೆ.[4]

ಸೂಳೆ - ಸೂಶ, ಶೂಲೆ, ಗಣ್ಯಾಂಗನೆ, A Horlot, a prostitute, ರೂಪಾಜೀವೆ, ವೇಶ್ಯೆ, ಗಣಿಕೆ, ಕ್ಷುದ್ರೆ, ಕಾಮುಕಿ, ಚೂಳೆ, ಚೂಳ್ಳೆ,

ಪಡೆವುಗಾರ್ತಿ 'ಪಡೆವು' ಪಡೆದುದು(ಗಳಿಕೆ) ಸಂಪಾದನೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಅರ್ಥೈಸಲಾಗಿದೆ.[5]

ಸೂಳೆ - ಸಂಸ್ಕೃತದ 'ಶೂಲಾ' ಪದದ ತದ್ಭವ. ಇದನ್ನು 'ಬೊಡ್ಡಿ'ಎಂಬ ಪದದಿಂದಲೂ ಕರೆಯುತ್ತಾರೆ.[6]

ಬರ್ದೆ -' ಸೂಳೆ '[7]

ಸೂಳೆ - ತುಳು - ಸೂಳೆಗಾರಿಕೆ

ಪರತ್ತೈ-ವಿಲೈಮಗಳ್ - ತಮಿಳು - ಪರತ್ತಮ್ಮೈ

ತೆಲುಗು- ಲಂಜ- ಲಂಜತನಂ

ವೇಶ್ಯ-ಮಲಯಾಳಂ-ಪಡುಪುವೃತ್ತಿ-ವೇಶ್ಯಾವೃತ್ತಿ

ದೇವದಾಸಿ - ದೇವರ ಸೇವೆಗಾಗಿ ತನ್ನ ಜೀವಮಾನವನ್ನು ಮುಡುಪಾಗಿಟ್ಟು ಸೇವೆ ಸಲ್ಲಿಸುವ ಅವಿವಾಹಿತ ಮಹಿಳೆ.

ದೇವಸ್ಥಾನದ ನರ್ತಕಿ, ನರ್ತನ ಮಾಡುವ ವೃತ್ತಿಯ ವೇಶ್ಯೆ ಎಂದು ಕನ್ನಡ ನಿಘಂಟನಲ್ಲಿ ಅರ್ಥೈಸಿದ್ದಾರೆ.[8]

"A prostitute as a women who temporarily sells her sexual favours to various persons" [9]

"A woman who is devoted or (usually) offer her body to indiscriminate sexual intercourse especial for hire" [10]

"Indulegence in promiscuous sexual relations for payment, usually in a money, with the absence of the emotional element that is a part of most other sexual relationships. [11]

ಈ ಮೇಲಿನ ಹೆಚ್ಚಿನ ಶಬ್ದಾರ್ಥಗಳು ವೇಶ್ಯೆಯ ಬದುಕಿನ ಗುಣ, ಲಕ್ಷಣಗಳನ್ನು ಕೆಲವೊಮ್ಮೆ ಅವಳ ಬದುಕಿನ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುತ್ತವೆ.

ವೇಶ್ಯೆ ಅರ್ಥ:

ಬಾಂಗರ್ ಎಂಬ ವಿದ್ವಾಂಸನ ಪ್ರಕಾರ, ವೇಶ್ಯೆ ಎಂದರೆ, "Those women are prostitutes who sell their bodies for the exercise sexual acts and make of this a profession."[12]

ನಗರ ಸಮಾಜ ಶಾಸ್ತ್ರದಲ್ಲಿ ರಾಜಗೋಪಾಲನ್ ಸಿ. ಮತ್ತು ಎಚ್.ಚನ್ನಬಸವಯ್ಯರವರು ಹೇಳುವಂತೆ, ಭಾವೋದ್ರೇಕದ ಔದಾಸೀನ್ಯವಿದ್ದರೂ ಹಣಕ್ಕೋಸ್ಕರ ತಾರತಮ್ಯವಿಲ್ಲದೆ 'ಅನೈತಿಕ' ಸಂಭೋಗದಲ್ಲಿ [13]

ವೇಶ್ಯೆ, ವೇಶ್ಯಾವಾಟಿಕೆ, ವೇಶ್ಯಾ ವೃತ್ತಿ, ಲೈಂಗಿಕ ವೃತ್ತಿ ಹೀಗೆ ಆಯಾ ಕಾಲಘಟ್ಟದ ಎಲ್ಲ ಸ್ತರದೊಂದಿಗೆ ವೇಶ್ಯಾವೃತ್ತಿ/ವೇಶ್ಯಾವಾಟಿಕೆಯ ಸ್ವರೂಪಗಳು, ಗುಣ ಲಕ್ಷಣಗಳೂ ಕೂಡ ಬೆಳೆದು ಬರುತ್ತಿವೆ. ನನ್ನ ಅನುಭವದ ಮತ್ತು ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ವೇಶ್ಯಾವೃತ್ತಿಯನ್ನು ಪ್ರಧಾನವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ,

೧. ಧಾರ್ಮಿಕ ವೇಶ್ಯಾವೃತ್ತಿ

೨. ಸಾಮಾಜಿಕ ವೇಶ್ಯಾವೃತ್ತಿ

೩. ವಿಲಾಸಿ ವೇಶ್ಯಾವೃತ್ತಿ.

೪. ಆಧುನಿಕ ವೇಶ್ಯಾವೃತ್ತಿ ಎಂಬುದಾಗಿ ನಾನಿಲ್ಲಿ ನಾಲ್ಕು ಪ್ರಭೇದಗಳಾಗಿ ವಿಂಗಡಿಸಿಕೊಳ್ಳುತ್ತೇನೆ.

ಧಾರ್ಮಿಕ ವೇಶ್ಯಾವೃತ್ತಿ:

ಮಾತೃ ಪ್ರಧಾನ ಬುಡಕಟ್ಟುಗಳು ಮತ್ತು ಅವುಗಳ ಮೌಲ್ಯಗಳು ಅವನತಿಯತ್ತ ಸಾಗಿದ ಬೆನ್ನಲ್ಲೇ ಸಾಮಾಜಿಕ ಮೌಲ್ಯಗಳು, ಆಸ್ತಿಯ ಪರಿಕಲ್ಪನೆ, ಪಾಳೇಗಾರಿ ವ್ಯವಸ್ಥೆಯ ಮೌಲ್ಯಗಳನ್ನು, ಅವುಗಳ ಸಮರ್ಥನೆಯನ್ನು ಹೇರಿದವು. ಧಾರ್ಮಿಕ ಕಟ್ಟುಪಾಡುಗಳು, ಮೂಢನಂಬಿಕೆ, ದೈವಭಕ್ತಿ, ಪರಂಪರೆ.... ಹೀಗೆ ನಂಬಿಸಿ ಪುರುಷ ಪ್ರಧಾನ್ಯ ಮೌಲ್ಯಗಳು ತನ್ನ ತೃಷೆಯನ್ನು ಹಿಂಗಿಸಿಕೊಳ್ಳಲು ಹುನ್ನಾರ ಹೂಡಿದವು.

ಗಮನಿಸಬೇಕಾದ ಅಂಶವೆಂದರೆ ಆ ಮೇಲೆ ಹೇಳಿದ ಎಲ್ಲಾ ನಂಬಿಕೆಗಳನ್ನು ಮೌಲ್ಯವಾಗಿ ಹೇರಿದ್ದು ಬಡತನ ಮತ್ತು ಹಸಿವಿನಿಂದ ಗುಲಾಮರಾಗಿದ್ದ ಕೆಳ ಜಾತಿಯ ಹೆಣ್ಣು ಮಕ್ಕಳ ಮೇಲೆ. ಪಾತರದವರು, ದೇವದಾಸಿಯರು, ಬಸವಿಯರು, ನಾಯಕಸಾನಿ, ಜೋಗತಿಯರು ಒಂದಕ್ಕೊಂದು ಸೂಕ್ಷ್ಮವಾದ ಭಿನ್ನತೆ ಮತ್ತು ಗುಣಲಕ್ಷಣ, ಚೌಕಟ್ಟುಗಳನ್ನು ಹೊಂದಿದ್ದರೂ ಇವರೆಲ್ಲ ಬಡ ಮಧ್ಯಮ ಮತ್ತು ಕೆಳಜಾತಿಗೆ ಸೇರಿದ ಹೆಣ್ಣುಗಳಾಗಿದ್ದಾರೆ.

ಸ್ಮೃತಿಗಳ, ಪುರಾಣಗಳ ಕಾಲಘಟ್ಟದಲ್ಲಿ ವೇಶ್ಯೆಯರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯಗಳು, ಆಚರಣೆಗಳು ರೂಢಿಯಲ್ಲಿದ್ದವು.

''ವೇಶ್ಯೆ ನೀಡುವ ಅನ್ನವನ್ನು ಬ್ರಾಹ್ಮಣರು ಪಡೆಯಬಾರದು. ಅದು ಪುಣ್ಯಗಳನ್ನು ಕೆಡಿಸುತ್ತದೆ.''

"ವೇಶ್ಯಾ ಧನವು ಸ್ವೀಕಾರಾರ್ಹವಲ್ಲ" "ವೇಶ್ಯಾಗಮನ ಮಾಡುವವರಿಗೆ ಧನಾಧಿಕಾರವಿಲ್ಲ" ಗೃಹಿಣಿಯಾದವಳು ವೇಶ್ಯಾ, ದೂರ್ತಾ, ವ್ಯಭಿಚಾರಿಣಿ, ವೈರಾಗಿಣಿ, ಸನ್ಯಾಸಿನಿ, ಶಕುನ ಹೇಳುವವಳು, ಕಪಟಿ... ಮೊದಲಾದ ಸ್ತ್ರೀಯರ ಸಹವಾಸ ಮಾಡಬಾರದು.'' [14]

ಧಾರ್ಮಿಕ ವೇಶ್ಯಾವೃತ್ತಿಗೆ ಮತ್ಸ್ಯ ಪುರಾಣದಲ್ಲಿ ಕಥೆಯೊಂದಿದೆ. ದೇವದಾನವರ ಯುದ್ಧದ ಸಂದರ್ಭದಲ್ಲಿ ದಾನವರು ದಿಗ್ದೇಶಗಳನ್ನೆಲ್ಲಾ ಕೊಳ್ಳೆ ಹೊಡೆದು ಕೈಗೆ ಸಿಕ್ಕ ಕನ್ಯೆಯರನ್ನೆಲ್ಲಾ ಹಿಡಿದು ತಂದು ಮದುವೆಯಾಗಿ ಉಪಭೋಗಿಸಿದ್ದರು. ಸುರಾಸುರರ ಯುದ್ಧದಲ್ಲಿ ದೈತ್ಯರೆಲ್ಲರೂ ಮಡಿದ ಬಳಿಕ ಅವರ ಬಲಾತ್ಕಾರಕ್ಕೆ ಬಲಿಯಾದ ಸಹಸ್ರಾರು ಲಲನೆಯರು ಅನಾಥರಾಗಿ, ಆಗಂತುಕರಾಗಿ ಅಲೆದಾಡತೊಡಗಿದರು. ಆಗ

ದೇವೇಂದ್ರ ಅವರಿಗೆ ಒಂದು ಹಿತೋಪದೇಶವನ್ನು ನೀಡಿ 'ಚೆಲುವೆಯರೇ, ನೀವು ಇನ್ನು ಮುಂದೆ ಭೂಲೋಕದ ರಾಜಮಂದಿರಗಳಲ್ಲಿಯೂ, ದೇವಸ್ಥಾನಗಳಲ್ಲಿಯೂ ವೇಶ್ಯಾ ಧರ್ಮವನ್ನನುಸರಿಸಿ ಭಕ್ತಿಯಿಂದ ವರ್ತಿಸಿರಿ. ರಾಜರೂ ರಾಜರ ಮಕ್ಕಳೂ ನಿಮ್ಮ ಪತಿ ಸಮಾನರೆಂದು ಭಾವಿಸಿರಿ. ಅವರನ್ನು ಭಕ್ತಿಯಿಂದ ಸೇವಿಸುವುದರಿಂದ ನಿಮಗೆ ಸೌಲಭ್ಯ ಉಂಟಾಗುತ್ತದೆ. ಹಾಗೆಯೇ ನಿಮ್ಮ ಮನೆಗೆ ಕೈಯಲ್ಲಿ ದುಡ್ಡನ್ನು ಹಿಡಿದುಕೊಂಡು ಯಾವನೇ ಬರಲಿ ನೀವು ಪ್ರೀತಿಯಿಂದ ಅವನನ್ನು ಉಪಚರಿಸಿರಿ'.[15]

ಇದೇ ರೀತಿ 'ಬೃಹತ್ಕಥಾ ಶ್ಲೋಕ ಸಂಗ್ರಹದ' ಭರತ ಚಕ್ರವರ್ತಿಯ ಕತೆಯಲ್ಲಿ, 'ವಸುದೇವ ಹಿಂಡಿ', ಕೃತಿಗಳಲ್ಲಿಯೂ ಧಾರ್ಮಿಕ ವೇಶ್ಯೆಯರ ಉಗಮದ ಬಗ್ಗೆ ದಂತಕತೆಗಳಿವೆ.

ರಾಜಪ್ರಭುತ್ವ ತನ್ನ ಭೋಗಲಾಲಸೆ ಮತ್ತು ಐಶ್ವರ್ಯದ ಮದದಲ್ಲಿ ಪ್ರತ್ಯಕ್ಷ -ಪರೋಕ್ಷವಾಗಿ ಈ ವೃತ್ತಿಯ ಅಸ್ತಿತ್ವಕ್ಕೆ ಕಾರಣವಾಗಿದೆ. ಸಂಗೀತ, ನೃತ್ಯ, ಕೌಶಲ್ಯಗಳು, ದೇವಾಲಯದ ಪ್ರಾಂಗಣ, ಕೆಲಸಗಳ ಹೊಣೆಗಾರಿಕೆ, ಹೀಗೆ ಭಿನ್ನವಾದ ಜವಾಬ್ದಾರಿಗಳೊಂದಿಗೆ, ಲಕ್ಷಣಗಳೊಂದಿಗೆ ಧಾರ್ಮಿಕ ವೇಶ್ಯಾವೃತ್ತಿ ನಡೆದು ಬಂದಿದೆ. ' ಸೇವಾ ಮನೋಭಾವದಿಂದ ತಮ್ಮ ಕನ್ಯತ್ವವನ್ನು ದೇವರಿಗೆ ಅರ್ಪಿಸುವುದು'- ದೇವರ ಹೆಸರಲ್ಲಿ ಅರ್ಪಿಸುವುದು, ಇದಿಷ್ಟೇ ಧಾರ್ಮಿಕ ವೇಶ್ಯಾವೃತ್ತಿಯ ಮೂಲ ಸೆಲೆಯಲ್ಲ.

ಇಲ್ಲಿ ಧಾರ್ಮಿಕ ನಂಬಿಕೆ ಅಂದರೆ ದೈವಭಕ್ತಿ

- ❑ ದೇವಾಲಯಗಳು ಕೇಂದ್ರ ಸ್ಥಾನಗಳು
- ❑ ಪುರೋಹಿತರು ಮುತ್ತು ಕಟ್ಟುವವರು, ವಾರಸುದಾರರು
- ❑ ಬ್ರಾಹ್ಮಣ, ಕ್ಷತ್ರಿಯರಲ್ಲದ ಕನ್ಯೆಯರು
- ❑ ಈ ಕನ್ಯೆಯರಿಗೆ ಕೌಶಲ್ಯಗಳೂ ಮುಖ್ಯ. (ಉದಾ: ನೃತ್ಯ, ಸಂಗೀತ..... ಇತ್ಯಾದಿ.)
- ❑ ದಾಸಿಯರಾಗಿ, ದೇವಾಲಯಗಳಲ್ಲಿ ಜೀತ ಮಾಡಲು ದಷ್ಟಪುಷ್ಟ ದೇಹ.
- ❑ ಸ್ವರ್ಗ ಪ್ರಾಪ್ತಿಯೆಂಬ ಪೊಳ್ಳು ನಂಬಿಕೆ, ಧಾರ್ಮಿಕ ನಂಬಿಕೆ.

ಇದು ಧಾರ್ಮಿಕ ವೇಶ್ಯಾವೃತ್ತಿಯ ಚೌಕಟ್ಟು, ಪರಿಧಿ. ಪ್ರಾಚೀನ ಕಾಲದಿಂದಲೂ ಹೆಣ್ಣನ್ನು ಭೋಗಿಸುತ್ತಾ ಬಂದಿರುವ ಮಾನವನ ಬುದ್ಧಿ ಮತ್ತೆ! ಪುರಾಣ ಕಥೆಗಳ, ಸ್ಮೃತಿಗಳ, ವೇದಗಳ ಸೃಷ್ಟಿಕರ್ತನಾದ ಮಾನವ ತನ್ನ ಅಭೀಪ್ಸೆಗಳ ಈಡೇರಿಕೆಗಾಗಿ ಈ ಸಮಾಜದ ವ್ಯವಸ್ಥೆಯನ್ನು ಹೇಗೆ ವ್ಯವಸ್ಥಿತವಾಗಿ ರೂಪಿಸಿಕೊಂಡಿದ್ದಾನೆ. ತನಗೆ ಬೇಕಾದ್ದನ್ನು ಅನುಭವಿಸಲು ಪರವಾನಗಿಯಾಗಿ ಕಥೆಗಳು, ಪುರಾಣಗಳನ್ನು ಹೇಳುವುದು. 'ಮನು' ಈ ವ್ಯವಸ್ಥೆಯ ಸರದಾರ! ಹೆಣ್ಣುಗಳನ್ನು ಭೋಗದ, ದಾಸ್ಯದ ಜೀತಕ್ಕಾಗಿಯೇ ಬಳಸಲು ಅವನು ಸೃಷ್ಟಿಸಿದ ಸ್ಮೃತಿ.

ಈ ವ್ಯವಸ್ಥೆಯ ಪ್ರತಿಪಾದಕ ಮನು ವೇಶ್ಯೆಯರ ಬಗ್ಗೆ ಅದೆಷ್ಟು ತುಚ್ಛವಾಗಿ ವ್ಯಾಖ್ಯಾನಿಸಿದ್ದಾನೆ. ಇದೇ ಮನುವಿನ ಸಮರ್ಥಕರೇ ಮುಂದೆ ಈ ಧಾರ್ಮಿಕ ವೇಶ್ಯೆಯರನ್ನು ಸೃಷ್ಟಿಸಿದ್ದು.

ಸಾಮಾಜಿಕ ವೇಶ್ಯಾವೃತ್ತಿ:

ಸಾಮಾನ್ಯವಾಗಿ 'ವೇಶ್ಯಾ' ಎನ್ನುವಾಗಲೇ ಈ ಸಮಾಜದ ಎರಡನೇ ದರ್ಜೆ ಪ್ರಜೆ 'ಹೆಣ್ಣು' ನಮ್ಮ ಮುಂದೆ ನಿಲ್ಲುತ್ತಾಳೆ. ಆದರೆ ಆಳಕ್ಕೆ ಇಳಿದಾಗ ಅದರ ಬಿಳಿಲುಗಳು ಟಿಸಿಲೊಡೆದಿರುವುದನ್ನು ನಾವು ಕಾಣಬಹುದು. ಲೈಂಗಿಕ ವೃತ್ತಿಯಲ್ಲಿರುವ ಲೈಂಗಿಕ ಅಲ್ಪಸಂಖ್ಯಾತರು, ಹಿಜ್ರಾಗಳು, ಕೋಥಿಗಳು, ಸಲಿಂಗ ಕಾಮಿ, ದ್ವಿಲಿಂಗಕಾಮಿಗಳೂ ಸೇರುತ್ತಾರೆ. ಅವರ ಬಗ್ಗೆ ಮುಂದೆ ವಿಷದ ಪಡಿಸುತ್ತೇನೆ.

ಹದಿ ಹರೆಯದಲ್ಲಿ ಪ್ರೇಮದ ಪಾಶಕ್ಕೆ ಸಿಲುಕಿಯೋ, ಬಡತನದ ಬೇಗೆಗೆ ಬಳಲಿ ಬೆಂಡಾಗಿಯೋ, ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸಲು ಬಲಾತ್ಕರಿಸಲ್ಪಟ್ಟೋ, ಅತ್ಯಾಚಾರಕ್ಕೊಳಗಾಗಿಯೇ, ಇಲ್ಲವೆ ನಯ ವಂಚಕರ ಜಾಲದ ಸುಳಿಗೆ ವಿಕ್ರಯಗೊಂಡೋ ಇಲ್ಲವೇ ವಿಕ್ಷಿಪ್ತ ಸಾಮಾಜಿಕ ಪರಿಸ್ಥಿತಿಗಳ ಆಟಿಕೆಗಳಾಗಿಯೋ ಈ ವೃತ್ತಿಗೆ ತಳ್ಳಲ್ಪಟ್ಟು ಅತ್ಯಂತ ಬರ್ಭರ ಸಾಮಾಜಿಕ ಅನ್ಯಾಯದ ಅನಿಷ್ಠಗಳನ್ನು ಅನುಭವಿಸುವ ಹೆಣ್ಣುಗಳೇ ಈ ಸಾಮಾಜಿಕ ವೇಶ್ಯಾವೃತ್ತಿಯ ಪರಿಧಿಯಲ್ಲಿ ನಿಲ್ಲುತ್ತಾರೆ.

ವೇಶ್ಯಾಗೃಹಗಳಲ್ಲಿ, ಲಾಡ್ಜ್‌ಗಳಲ್ಲಿ, ಹೆದ್ದಾರಿಗಳ ಡಾಬಾಗಳಲ್ಲಿ, ಕಾಡುಗಳಲ್ಲಿ, ಬೆಟ್ಟಗುಡ್ಡಗಳ ಕಿರಿದುಗಳಲ್ಲಿ, ನದಿ ತೀರಗಳಲ್ಲಿ, ಸಮುದ್ರದ ಮರಳು ದಂಡೆಗಳಲ್ಲಿ, ಕುರುಚಲು ಮೆದೆಗಳ ಮರೆಯಲ್ಲಿ, ಬೀದಿಗಳಲ್ಲಿ, ಲಾರಿ, ಕಾರುಗಳಲ್ಲಿ..... ಹೀಗೆ ಹಣ ಮತ್ತು ಬೆತ್ತಲೆಯೊಂದಿಗೆ ತನ್ನ ಬದುಕನ್ನೇ ಸವಾಲಿಗಿಟ್ಟು ದೇಹ ವಿಕ್ರಯದಂತಹ ಸಂಕೀರ್ಣತೆಯೊಂದಿಗೆ ಉಸಿರಾಡುತ್ತಿರುವ ಲಕ್ಷಾಂತರ ಹೆಣ್ಣುಗಳು ಈ ಚೌಕಟ್ಟಿನೊಳಗೆ ಸೇರುತ್ತಾರೆ.

ಇತರೆ ಲೈಂಗಿಕ ವೃತ್ತಿನಿರತರು:

ದ್ವಿಲಿಂಗ ಕಾಮಿಗಳು: ದೈಹಿಕವಾಗಿ, ಭಾವನಾತ್ಮಕವಾಗಿ ಹಾಗೂ ಲೈಂಗಿಕವಾಗಿ ಗಂಡು ಹಾಗೂ ಹೆಂಗಸು ಇಬ್ಬರಿಗೂ ಆಕರ್ಷಿತನಾಗುವ ವ್ಯಕ್ತಿಗೆ ದ್ವಿಲಿಂಗ ಕಾಮಿ ಎಂದು ಕರೆಯುತ್ತಾರೆ.

ಬೈಫೋಬಿಯಾ: ದ್ವಿಲಿಂಗ ಕಾಮಿಗಳ ಬಗೆಗಿನ ಪೂರ್ವಾಗ್ರಹ/ದ್ವೇಷ

'ಹೊರ ಬರುವುದು' (ಕಮಿಂಗ್ ಔಟ್):

ಒಬ್ಬ ಗಂಡು/ಹೆಣ್ಣು ಸಲಿಂಗ ಕಾಮಿ, ದ್ವಿಲಿಂಗ ಕಾಮಿಯು ತನ್ನ ಲೈಂಗಿಕತೆಯನ್ನು ಮುಕ್ತವಾಗಿ ಸ್ವತಃ ಒಪ್ಪಿಕೊಂಡು, ಇನ್ನಿತರರಿಗೆ ಹೇಳಿಕೊಳ್ಳುವಂತಹ ಪ್ರಕ್ರಿಯೆಗೆ, 'ಹೊರ ಬರುವುದು' ಎಂದು ಹೇಳಲಾಗುತ್ತದೆ. 'ಹೊರ ಬರುವುದ'ರಲ್ಲಿ ಅನೇಕ ಹಂತಗಳಿದ್ದು, ಇದು ವ್ಯಕ್ತಿ ತನ್ನ ಲೈಂಗಿಕತೆಯನ್ನು ಸ್ವತಃ ಒಪ್ಪಿಕೊಳ್ಳುವುದರಿಂದ

ಹಿಡಿದು ಅದನ್ನು ಗೆಳೆಯರಿಗೆ, ಪರಿವಾರದವರಿಗೆ ಹಾಗೂ ಸಮಾಜದ ಇನ್ನಿತರರಿಗೆ ತಿಳಿಸುವ ಪ್ರಕ್ರಿಯೆಯಾಗಿದೆ. ಸಮಾಜ ಕಾರ್ಯಕರ್ತರ ಪ್ರಕಾರ ಈ ಪ್ರಕ್ರಿಯೆಯು ಸಾಮಾಜಿಕ ಬದಲಾವಣೆಗೆ ಸಹಕಾರಿಯಾಗುತ್ತದೆ.

ಸಂಚಾರಿ ಸ್ಥಳಗಳು (ಕ್ರ್ಯಾಸಿಂಗ್ ಏರಿಯಾಸ್):

ಸಲಿಂಗ/ದ್ವಿಲಿಂಗ ಕಾಮಿಗಳಿಗೆ ತಮ್ಮಂತಹ ಸಲಿಂಗ/ದ್ವಿಲಿಂಗಕಾಮಿಗಳನ್ನು ಭೇಟಿಯಾಗಲು ಯಾವುದೇ ಸ್ಥಳವಿರದ ಕಾರಣ ಸಾರ್ವಜನಿಕ ಉದ್ಯಾನವನಗಳು, ಅಂಗಡಿ/ಬೀದಿ, ಶಾಪಿಂಗ್ ಕಾಂಪ್ಲೆಕ್ಸ್‌ಗಳು, ಲೋಕಲ್ ಟ್ರೈನ್‌ಗಳು ಹಾಗೂ ಸಾರ್ವಜನಿಕ ಶೌಚಾಲಯಗಳು ಇವರಿಗೆ ಭೇಟಿಯ ಸ್ಥಳಗಳಾಗಿರುತ್ತವೆ. ಇಂತಹ ಜಾಗಗಳನ್ನು ಸಂಚಾರಿ ಸ್ಥಳಗಳೆಂದು ಕರೆಯಲಾಗುತ್ತದೆ.

ಗಂಡು ಸಲಿಂಗ ಕಾಮಿಗಳು (ಗೇ):

ಗಂಡಸೊಬ್ಬ ದೈಹಿಕವಾಗಿ, ಭಾವನಾತ್ಮಕವಾಗಿ ಹಾಗೂ ಲೈಂಗಿಕವಾಗಿ ಗಂಡಸರಿಗೆ ಆಕರ್ಷಿತನಾದರೆ ಅವನು ಗಂಡು ಸಲಿಂಗ ಕಾಮಿಯಾಗುತ್ತಾನೆ.

ಪರಲಿಂಗ ಕಾಮಿ:

ಹೆಣ್ಣು/ಗಂಡು ದೈಹಿಕವಾಗಿ, ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ತಮ್ಮದಲ್ಲದ ಲಿಂಗದ ಜನರಿಗೆ ಆಕರ್ಷಿಸಲ್ಪಡುವವರನ್ನು (ಹೆಂಗಸು ಗಂಡಸಿಗೆ, ಗಂಡಸು ಹೆಂಗಸಿಗೆ) ಪರಲಿಂಗ ಕಾಮಿಗಳೆನ್ನುವರು.

ಪರಲಿಂಗ ಕಾಮತ್ವ

ನಮ್ಮ ಸಮಾಜದ ಎಲ್ಲಾ ಆಯಾಮಗಳು ಗುಣಸ್ವಭಾವಗಳು ಪರಲಿಂಗ ಕಾಮಿಯ ಪರವಾಗಿರುವುದನ್ನು ಕಾಣುತ್ತೇವೆ. ಪರಲಿಂಗ ಕಾಮಿಗಳ ರೀತಿ, ನೀತಿಗಳು ಸಮಾಜದಲ್ಲಿ ಸಂಸ್ಥೀಕರಣಗೊಂಡು, ಸಮಾಜದ ರಚನೆ, ಕಾನೂನು, ಸರ್ಕಾರದೊಳಗೂ ಪ್ರವೇಶಿಸಿ ಲೈಂಗಿಕತೆಯ ಶೋಷಿತರ ವಿರುದ್ಧ ಕೆಲಸ ಮಾಡುತ್ತಿರುತ್ತದೆ.

ಹಿಜ್ರಾ:

ಇದೊಂದು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಅಸ್ಥಿತ್ವದಲ್ಲಿರುವಂತಹ ಒಂದು ಸಮುದಾಯ (ಸಾಮಾಜಿಕ ಸಾಂಸ್ಕೃತಿಕ ರಚನೆ ಎಂದು ಕರೆಯಬಹುದು). ಹುಟ್ಟುತ್ತ ಗಂಡಸಾಗಿದ್ದವರು ಹೆಂಗಸಿನಂತಿರಲು ಇಚ್ಛಿಸುವ, ಕೆಲವೊಮ್ಮೆ ಲಿಂಗ ಬದಲಾವಣೆಯ ಶಸ್ತ್ರಕ್ರಿಯೆಯನ್ನೂ ಮಾಡಿಸಿಕೊಳ್ಳುವ ಸಮುದಾಯಕ್ಕೆ ಹಿಜ್ರಾ ಎನ್ನುವರು. ಹಿಜ್ರಾಗಳಲ್ಲಿ ಕೆಲವರು ಹುಟ್ಟುತ್ತಲೇ ಪುರುಷ ಹಾಗುಸ್ತ್ರೀ ಲೈಂಗಿಕ ಅಂಗಗಳನ್ನು ಒಳಗೊಂಡಿರುತ್ತಾರೆ.

ಸಲಿಂಗಗಳ ಬಗೆಗಿನ ಭಯ/ ಭೀತಿ:

ಇದು ಸಲಿಂಗ ಲೈಂಗಿಕತೆಯ ಬಗ್ಗೆ ಇರುವಂತಹ ಅವ್ಯಕ್ತ ಭಯ. ಇದ ಸಮಾಜದಲ್ಲಿ ಸಲಿಂಗ/ದ್ವಿಲಿಂಗ ಕಾಮಿಗಳ ಬಗ್ಗೆ ಕಾಣುವ ಅಸಹ್ಯ, ತಿರಸ್ಕಾರ, ದ್ವೇಷದ ಭಾವನೆಗಳ ರೂಪದಲ್ಲಿ ಕಾಣಸಿಕೊಳ್ಳುತ್ತದೆ.

ಕೋಥಿ:

ಇದು ದಕ್ಷಿಣ ಏಷ್ಯಾದಲ್ಲಿ ಪ್ರಚಲಿತವಾಗಿರುವ ರಚನೆ. ಕೋಥಿ ಒಂದು ಗಂಡು ಸಲಿಂಗ ಕಾಮಿ. ಹೆಣ್ಣಿನ ಗುಣ ಸ್ವಭಾವ ಹೊಂದಿರುತ್ತಾನೆ, ಅಥವಾ ಇನ್ನೊಬ್ಬ, ಗಂಡಿನೊಡನೆ ತೊಡಗುವ ಲೈಂಗಿಕ ಕ್ರಿಯೆಯಲ್ಲಿ ವಿಧೇಯವಾಗಿ ಸ್ವೀಕರಿಸುವ ಹೆಣ್ಣಿನ ಪಾತ್ರವಹಿಸಲು ಇಚ್ಛಿಸುತ್ತಾನೆ.

ಹೆಣ್ಣು ಸಲಿಂಗ ಕಾಮಿ:

ಹೆಣ್ಣೊಬ್ಬಳು ದೈಹಿಕವಾಗಿ, ಭಾವನಾತ್ಮಕವಾಗಿ ಹಾಗೂ ಲೈಂಗಿಕವಾಗಿ ಹೆಂಗಸರಿಗೆ ಆಕರ್ಷಿತಳಾಗುವವಳನ್ನು ಹೆಣ್ಣು ಸಲಿಂಗಕಾಮಿ ಎನ್ನುತ್ತಾರೆ.

ಟ್ರಾನ್ಸ್-ವರ್ಸ್‌ಸೈಟ್:

ಸಮಾಜದ ನಿರ್ಧರಿತ ಉಡುಪುಗಳನ್ನು ಹೊರತುಪಡಿಸಿ, ಭಿನ್ನಲಿಂಗದ ಅಥವಾ ವಿರುದ್ಧ ಲಿಂಗದ ಉಡುಪನ್ನು ತೊಡಬಯಸುವ ಜನ (ಹೆಣ್ಣು ಗಂಡಸಿಗೆ ನಿಗದಿಸಿದ್ದನ್ನು, ಗಂಡು ಹೆಣ್ಣಿಗೆ ನಿಗದಿಸಿದ್ದನ್ನು).

ಲಿಂಗ ಬದಲಾಯಿಸಿಕೊಳ್ಳುವವರು (ಟ್ರಾನ್ಸ್ ಜೆಂಡರ್):

ಜೈವಿಕವಾಗಿ ಒಂದು ಲಿಂಗಕ್ಕೆ ಸೇರಿದವರು, ವಿರುದ್ಧ ಲಿಂಗದ (ಗಂಡಾಗಿದ್ದರೆ ಹೆಣ್ಣಿನ, ಹೆಣ್ಣಾಗಿದ್ದರೆ ಗಂಡಿನ) ಗುಣ ಸ್ವಭಾವವನ್ನು ಹೊಂದಿರುತ್ತಾರೆ. ಕೆಲವು ಬಾರಿ ಲಿಂಗ ಬದಲಾವಣೆಯ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಳ್ಳುತ್ತಾರೆ. ಅಥವಾ ಹೆಂಗಸಿನ ಹಾರ್‌ಮೋನ್‌ಗಳನ್ನು ತೆಗೆದುಕೊಳ್ಳುತ್ತಾರೆ.

ಲೈಂಗಿಕತೆಯ ಶೋಷಿತರು:

ತಮ್ಮ ಲೈಂಗಿಕತೆಯಿಂದಾಗಿ ಭೇದಭಾವಕ್ಕೆ ಒಳಪಟ್ಟ ಜನರು ಲೈಂಗಿಕತೆಯ ಶೋಷಿತರು. ಸಲಿಂಗಕಾಮಿಗಳು, ದ್ವಿಲಿಂಗಕಾಮಿಗಳು, ಹಿಜ್ರಾಗಳು ಕೋಥಿಗಳು, ಹಾಗೂ ಲಿಂಗಬದಲಾಯಿಸಿಕೊಳ್ಳುವವರು ಇದರಲ್ಲಿ ಸೇರಿರುತ್ತಾರೆ. ಇದರಲ್ಲಿ ಒತ್ತಾಯ ಪೂರ್ವಕ ಹಾಗೂ ಒಪ್ಪಿಗೆಯಿರದ ಲೈಂಗಿಕ ಸಂಬಂಧಗಳು ಸೇರಿರುವುದಿಲ್ಲ. (ಆಧಾರ: ಪಿಯುಸಿಎಲ್ - ಕರ್ನಾಟಕ ವರದಿ.)

ವಿಲಾಸೀವೇಶ್ಯಾ ವೃತ್ತಿ:

ಇದುವರೆವಿಗೂ ತೆರೆದಿಟ್ಟ ಈ ಮೇಲಿನ ಹಲವು ವಿಚಾರಗಳಿಗಿಂತ ಭಿನ್ನವಾದುದು. ಸಾಮಾಜಿಕ ವೇಶ್ಯಾವೃತ್ತಿ ಹಾಗೂ ಧಾರ್ಮಿಕ ವೇಶ್ಯಾವೃತ್ತಿಯಲ್ಲಿ ಯಾವುದಾದರೂ ಸಂಕೀರ್ಣತೆಯಲ್ಲಿ ಬಂಧಿತರಾದವರು. ಆದರೆ ವಿಲಾಸೀ ವೇಶ್ಯಾವೃತ್ತಿ ತನ್ನನ್ನು ತಾನು ಬಿತ್ತರಿಸಿಕೊಳ್ಳುವ ಪ್ರಕ್ರಿಯೆ. ಅಂದ ಮಾತ್ರಕ್ಕೆ ಇಲ್ಲಿ ಯಾವುದೇ ಅನಿವಾರ್ಯತೆಯಿಲ್ಲವೆಂದಲ್ಲ. ಎಲ್ಲವೂ ತಮ್ಮ ಅಭೀಷ್ಟೆಯ ಮೇರೆಗೆ ನಡೆಯುತ್ತದೆಯೆಂದೂ ಅಲ್ಲ. ಆದರೂ ಇಲ್ಲಿ ಆಯ್ಕೆಗೆ ಅವಕಾಶಗಳು ವಿಪುಲವಾಗಿರುತ್ತವೆ.

ಪಂಚತಾರಾ ಹೋಟೆಲ್‌ಗಳಲ್ಲಿ, ಅತ್ಯಾಧುನಿಕ ಮಹಲುಗಳಲ್ಲಿ, ಹೊರ ವಲಯಗಳ ರೆಸಾರ್ಟ್‌ಗಳಲ್ಲಿ ಈ ವ್ಯವಸ್ಥೆಯ ಸರದಾರರಾದ ಮಂತ್ರಿ ಮಹೋದಯರಿಗೆ, ರಾಜಕಾರಣಿಗಳಿಗೆ, ಮಠಾಧೀಶರುಗಳಿಗೆ, ಉನ್ನತ ಅಧಿಕಾರಿಗಳಿಗೆ, ಕೈಗಾರಿಕೋದ್ಯಮಿಗಳಿಗೆ, ಶ್ರೀಮಂತರುಗಳಿಗೆ ನಿರಂತರವಾಗಿ ಅವರ ತೃಷೆ ಹಿಂಗಿಸಲು ಮಾಲುಗಳನ್ನು ಒದಗಿಸುವ ದೊಡ್ಡ ದೊಡ್ಡ ಜಾಲಗಳೇ ಇವೆ. ಅತಿ ಆಧುನಿಕವಾದ ಪರಿಕರಗಳನ್ನು ಸಂಜ್ಞೆಗಳನ್ನು ಬಳಸುವ ವೇಶ್ಯಾವೃತ್ತಿಯವರು ಕಾಲ್‌ಗರ್ಲ್‌ಗಳಾಗಿ ಕರೆಯಲ್ಪಡುತ್ತಾರೆ.

ಜಾಗತೀಕರಣದ ಪ್ರಭಾವದಲ್ಲಿ ಪ್ರತಿ ಹೆಜ್ಜೆಯಲ್ಲೂ ವೇಶ್ಯಾವಾಟಿಕೆ ಆಕರ್ಷಕ ದಂಧೆಯಾಗಿ ವ್ಯಾಪಿಸುತ್ತಿದೆ. ಹೆಣ್ಣು ಇಂದಿನ ಮಾರುಕಟ್ಟೆಯಲ್ಲಿ ಪಡೆದುಕೊಳ್ಳುವವರ, ಕೊಡುವವರ ಮಧ್ಯವರ್ತಿಯಾಗಿ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ.

ವೇಶ್ಯಾವಾಟಿಕೆಯನ್ನು ಹಿಂದಿನಿಂದಲೂ ವ್ಯಾಖ್ಯಾನಿಸುತ್ತಾ ಅರ್ಥೈಸುತ್ತಾ ಬಂದಿರುವ ಮಾನವಶಾಸ್ತ್ರಜ್ಞರು, ಮನಃಶಾಸ್ತ್ರಜ್ಞರುಗಳು ಬಹುತೇಕವಾಗಿ ಪುರುಷರು. ಪುರುಷ ಪ್ರಾಧಾನ್ಯ ವ್ಯವಸ್ಥೆ, ಪಾಳೇಗಾರಿ, ಬಂಡವಾಳಶಾಹಿ ವ್ಯವಸ್ಥೆಯು ಹಡೆದಿರುವ, ಹಡೆಯುತ್ತಿರುವ ಕೂಸೇ ವೇಶ್ಯಾವಾಟಿಕೆ. ಕೆಲವು ಮನಸ್ಸುಗಳನ್ನು ಹೊರತು ಪಡಿಸಿದರೆ ಈ ವ್ಯಾಖ್ಯಾನಕಾರರೆಲ್ಲಾ ಈ ವ್ಯವಸ್ಥೆಯ ಸಂಚಲನಕಾರರೇ. ಇಲ್ಲಿ ಎಲ್ಲಿಯೂ ವೈಯಕ್ತಿಕ ಅನುಭವಗಳಿಲ್ಲದೆ ಅಥವಾ ಆ ಬದುಕುಗಳ ಒಳ ನುಸುಳಿ ಆಳಕ್ಕಿಳಿಯದೇ, ಮೂರನೇ ವ್ಯಕ್ತಿಯಾಗಿ ದೂರದಲ್ಲೆಲ್ಲೋ ನಿಂತು ಅರ್ಥೈಸಿರುವ ಪರಿಮಿತಿ ಇದ್ದೇ ಇದೆ. ಆ ಪರಿಮಿತಿಯಿರುವುದರಿಂದಲೇ ಇವರ ವ್ಯಾಖ್ಯಾನಗಳಲ್ಲಿ ವೇಶ್ಯಾವಾಟಿಕೆಯ ಕೇಂದ್ರ ಬಿಂದುವಿನಲ್ಲಿ ಹೆಣ್ಣು ನಿಲ್ಲುತ್ತಾಳೆ. ಹಾಗೆಯೇ ಅಲ್ಲಿ ಅವಳನ್ನು ಅಪರಾಧಿಯನ್ನಾಗಿಸುವ, ಅಥವಾ ಅನುಕಂಪದ ಧ್ವನಿಯಿದೆ.

ಇನ್ನು ಇತ್ತೀಚಿನ ಮಹಿಳಾ ವ್ಯಾಖ್ಯಾನಗಳು ಇನ್ನೊಂದು ರೀತಿಯ ಪರಿಮಿತಿಗಳನ್ನು ಬಿಂಬಿಸುತ್ತವೆ. ಈ ವೇಶ್ಯಾ ವೃತ್ತಿಯ ಸುತ್ತಲಿನ ಸಂಕೀರ್ಣತೆಗಳನ್ನು ಅರಗಿಸಿಕೊಳ್ಳಲಾರದೆ ಸಹಜವಾಗಿ ಸ್ವಜಾತಿಯ ಮೇಲಿನ ಅನುಕಂಪದಿಂದಾಗಿ ಬಹುಬೇಗ ಭಾವುಕರಾಗಿ ಬಿಡುತ್ತಾರೆ. ಕೆಲವೊಮ್ಮೆ ತಮ್ಮ ಅಧ್ಯಯನಗಳಿಗೆ ಸೀಮಿತಗೊಳಿಸಿ ಅವರನ್ನು ಅಧ್ಯಯನ ಮಾಡಲು ಯತ್ನಿಸಿದಾಗ ಅವರ ಬದುಕಿನ ಹೊರ ಹಂದರಗಳನ್ನೇ ದೇಹವೆಂದು ಭ್ರಮಿಸುತ್ತಾರೆ.

ಇದಕ್ಕೆ ವ್ಯಾಖ್ಯಾನಗಳನ್ನು, ಅರ್ಥಗಳನ್ನು ಹುಡುಕುತ್ತಾ ಹೊರಟರೆ ಅವೆಲ್ಲಾ ಲಭ್ಯವಾಗುವುದು ಈ ಹರಿಕಾರರಿಂದಲೇ. ಆಧುನಿಕ ವ್ಯಾಖ್ಯಾನಕಾರರೂ ಹೇಗೆ ಈ ವೇಶ್ಯಾವಾಟಿಕೆಯನ್ನು ತುಚ್ಛೀಕರಿಸುತ್ತಾ ಸಮಯ ಸಾಧಕತನ ತೋರಿಸುತ್ತಾರೆ ಎಂದರೆ, ನಾನು ಅಭಿಪ್ರಾಯ ಕೇಳಿದ ಅನೇಕ ಪುರುಷರು ಹೇಳುವ ಗತ್ತಿನ ಅಭಿಪ್ರಾಯ, ಈ ವೇಶ್ಯಾವಾಟಿಕೆ ಇರುವುದರಿಂದಲೇ ಇನ್ನೂ ನಮ್ಮ ಮನೆಗಳ ಗೃಹಸ್ಥ ಮರ್ಯಾದಸ್ಥ ಹೆಣ್ಣು ಮಕ್ಕಳು ತಮ್ಮ ಮಾನ ಮರ್ಯಾದೆ ಕಾಯ್ದುಕೊಳ್ಳಲು ಸಾಧ್ಯವಾಗಿದೆ. ಇಲ್ಲವಾದರೆ ದಿನನಿತ್ಯ ನಮ್ಮ ಹೆಣ್ಣು ಮಕ್ಕಳು ಮಾನಭಂಗಗಳಾಗುತ್ತಿದ್ದವು ಎಂದು ಸಮರ್ಥನೆ ಮಾಡುತ್ತಾರೆ. ಆದರೆ ಇಲ್ಲಿ ಗಮನಿಸಬೇಕಾದ್ದು ಮತ್ತು ಬಹಳ ಮುಖ್ಯವಾದದ್ದು ಮಹಿಳೆಯ ಪ್ರಗತಿಯನ್ನು ಚಿಂತಿಸುವ, ಅದನ್ನೇ ಬಂಡವಾಳವಾಗಿಸಿಕೊಳ್ಳಲು ಬಯಸುವ ಮನಸ್ಸುಗಳು. ಈ ವೇಶ್ಯಾವೃತ್ತಿಯನ್ನು ಸಮರ್ಥಿಸುವ ಆ ಮೂಲಕ ತಮ್ಮ ಹೆಣ್ಣುಗಳ ಮಾನ ರಕ್ಷಿಸಿಕೊಳ್ಳುವ ಮನೋಭಾವ ಉಳಿಸಿಕೊಳ್ಳಲು ಯತ್ನಿಸುತ್ತಿರುವ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ.

ಪ್ರಾಚೀನದಿಂದ ಇಂದಿನವರೆಗೂ ವೇಶ್ಯಾವಾಟಿಕೆ ಬಗ್ಗೆ ಪ್ರತಿಪಾದಿಸಿರುವ ರೀತಿಯೇ ಆ ಹೆಣ್ಣನ್ನು ಅನೈತಿಕವಾಗಿಸಿರುವುದು. ಆ ವೃತ್ತಿಯನ್ನೇ ಅಪರಾಧಿಯನ್ನಾಗಿಸಿರುವುದು. ವೇಶ್ಯೆ, ವೇಶ್ಯಾವೃತ್ತಿ ಇವೆರಡರ ಹೊರತಾಗಿ ಅವಳೊಂದಿಗೆ ಸಂಭೋಗ ಸುಖ ಪಡೆವ, ಪ್ರತಿಫಲವನ್ನು ನೀಡುವ, ತನ್ನ ತೃಷೆಯನ್ನು ಹಿಂಗಿಸಿಕೊಳ್ಳುವ, ಪಾಲುದಾರರ ಬಗ್ಗೆ ವ್ಯಾಖ್ಯಾನಗಳೆಲ್ಲೆಲ್ಲೂ ಪ್ರಸ್ತಾಪಿಸಿಯೇ ಇಲ್ಲದಿರುವುದು. ಈ ಸಮಾಜ ವ್ಯವಸ್ಥೆ ಹೆಣ್ಣಿಗೆ ನೀಡಿರುವ ಸ್ಥಾನಮಾನದ ಪ್ರತೀಕವಾಗಿದೆ. ಹಾಗೆಯೇ ಈ ವ್ಯಾಖ್ಯಾನಗಳು ಅಪರಿಪೂರ್ಣವಾದವು ಮತ್ತು ಸವಕಲಾದವುಗಳಾಗಿವೆ.

ಬಹುತೇಕವಾಗಿ ವೇದಗಳಲ್ಲಿ, ನಿಘಂಟುಗಳಲ್ಲಿ, ಸ್ಮೃತಿಗಳಲ್ಲಿ ಬಹುತೇಕ ಸಮಾಜ ಶಾಸ್ತ್ರಜ್ಞರುಗಳು, ಮನಃಶಾಸ್ತ್ರಜ್ಞರುಗಳು, ಮಾನವ ಶಾಸ್ತ್ರಜ್ಞರುಗಳು, ಮಾನವ ವಿಜ್ಞಾನಿಗಳು, ಜನಪದ ವಿಜ್ಞಾನಿಗಳು ಈ ವೃತ್ತಿಯ ಬಗ್ಗೆ ತಮ್ಮ ವ್ಯಾಖ್ಯಾನಗಳನ್ನು ಪ್ರತಿಪಾದಿಸುವಾಗ ನಿರ್ಭಾವುಕತೆ, ತಾರತಮ್ಯರಹಿತ, ಪ್ರತಿಫಲರಹಿತವಾಗಿರದೆ, ಯಾರಿಗೆ ಬೇಕಾದರೂ ಲಭ್ಯಳಾಗುವವಳು, ಮಾರಾಟಕ್ಕೆ ತನ್ನನ್ನು ಒಪ್ಪಿಸಿಕೊಂಡವಳು, ಯಾರು ಬೇಕಾದರೂ ಭೋಗಿಸಬಹುದಾದವಳು ಎಂಬ ಅರ್ಥಗಳನ್ನು ನೀಡುತ್ತಾ ಬಂದಿದ್ದಾರೆ. ಆದರೆ ಅದು ಪೂರ್ಣ ಸತ್ಯವಲ್ಲ.

ನಿರ್ಭಾವುಕತೆ :

ಮನುಷ್ಯ ಭಾವನಾ ಜೀವಿ.ಭಾವನಾತ್ಮಕವಾದ ಕೊಂಡಿಗಳಲ್ಲಿ ಹೆಣೆದುಕೊಂಡು ಬರುವುದು ಮಾನವನ ಸಹಜವಾದ ಗುಣ.

ಆದರೆ ವೇಶ್ಯೆ ವ್ಯಾಖ್ಯಾನದಲ್ಲಿ ಯಾವುದೇ ಭಾವನಾತ್ಮಕವಾದ ಸಂಬಂಧ ಇಲ್ಲದಿರುವುದು, ಭಾವನೆಗಳ ಕೊಂದುಕೊಂಡಿರುವುದು, ನಿರ್ಲಿಪ್ತವಾಗಿರುವುದು ಎಂಬ ಯಾಂತ್ರೀಕರಣದ ಅರ್ಥ ಬರುತ್ತದೆ. ಅಂದರೆ ಭಾವನೆಗಳ ಸಮ್ಮಿಳನದಿಂದಲೇ ಹುಟ್ಟಿಕೊಂಡಿರುವ, ಮನುಷ್ಯ ಸಂಬಂಧಗಳನ್ನು ಬೆಸೆಯುವ, ಗಂಡು ಹೆಣ್ಣಿನ

ರಾಗ ತರಂಗಗಳನ್ನು ಎಬ್ಬಿಸುವ, ಭಾವನೆಗಳಿಲ್ಲದೆ ಲೈಂಗಿಕ ಸಂಪರ್ಕದಂತಹ ಕ್ರಿಯೆ ನಡೆಯುವುದಾದರೂ ಹೇಗೆ? ಮಾನಸಿಕ ಸಿದ್ಧತೆಯಿಲ್ಲದ, ಪ್ರೀತಿ ಅನುರಾಗಗಳಿಲ್ಲದ ಲೈಂಗಿಕ ಕ್ರಿಯೆಗೆ ಅಂಗಾಂಗಗಳು, ದೇಹಗಳು ಸಿದ್ಧವಾಗುವುದಾದರೂ ಹೇಗೆ? ಇವಾವು ಇಲ್ಲದ ದೈಹಿಕ ಸಂಬಂಧಗಳು ಬಲವಂತದ, ಬಲಾತ್ಕಾರದಂತಹ, ಮಾನಸಿಕವಾಗಿ ಘಾಸಿಗೊಳಿಸಬಹುದಾದಂತಹ ಪ್ರಕ್ರಿಯೆಗಳಾಗುವುದಿಲ್ಲವೇ? ಮಾನಸಿಕವಾಗಿ ಜರ್ಝರಿತವಾಗುವುದಿಲ್ಲವೇ?

ಸಾರಾ ಸಗಟಾಗಿ ನಿರ್ಭಾವುಕತೆ ಎಂದು ವ್ಯಾಖ್ಯಾನಿಸುವುದು ಸರಿಯಲ್ಲ. ಬಂದ ಗಿರಾಕಿಗಳೊಂದಿಗಿನ ಲೈಂಗಿಕ ಕ್ರಿಯೆಗೆ ಅವಳನ್ನು ಒಡ್ಡಿಕೊಳ್ಳುವಲ್ಲಿ ಕೆಲವೊಮ್ಮೆ ಭಾವನಾತ್ಮಕ ಸಂಬಂಧವೂ ಇರುತ್ತದೆ. ಉದಾ. ತನಗಿಷ್ಟವಾದ ದೇಹ ಚೌಕಟ್ಟು, ಆತ್ಮೀಯತೆ ತೋರುವ ಗಿರಾಕಿ, ಪದೇ ಪದೇ ತನ್ನಲ್ಲಿಗೇ ಬರುವವ, ಮಾನವೀಯತೆ ನಡವಳಿಕೆಯವನು ಸೌಂದರ್ಯ, ಬಣ್ಣ ಗತ್ತು.... ಹೀಗೆ ಒಂದು ಕ್ಷಣವಾದರೂ ಅವನ ಬಗ್ಗೆ ನವಿರಾದ ಭಾವತರಂಗ ಅವಳನ್ನು ವ್ಯವಹಾರವನ್ನು ಮೀರಿ ಹೆಣ್ಣಾಗಿಸುವ ಸಂದರ್ಭಗಳೂ ಇರುತ್ತವೆ.

ವೇಶ್ಯಾವೃತ್ತಿ ಮಾಡುವವಳನ್ನು ಮನುಷ್ಯ ಪರಿಧಿಯನ್ನು ಬಿಟ್ಟು ಹೊರಗೆ ನಿಲ್ಲಿಸಿ ಯೋಚಿಸುವುದು ಅದೆಷ್ಟು ಸೂಕ್ತ? ಅದೆಷ್ಟು ನಿರ್ದಾಕ್ಷಿಣ್ಯವಾಗಿ, ನಿರ್ಭಾವುಕವಾಗಿ ಅವಳನ್ನು ಒಂದಿಷ್ಟು ಪರಿಗಣಿಸದೆ ಅವಳ ಬಗ್ಗೆ ವ್ಯಾಖ್ಯಾನಗಳನ್ನು ಸೃಷ್ಟಿಸುವ ಸ್ವಾತಂತ್ರ್ಯ ಪಡೆದುಕೊಂಡು ಬಿಡುತ್ತೇವೆ. ಹಾಗಿದ್ದರೆ ಎಲ್ಲವೂ ಸಂತೃಪ್ತವಾಗಿರುವ, ಗೌಪ್ಯತೆಯನ್ನು ಕಾಯ್ದುಕೊಂಡಿರುವ, ಅನುಕೂಲತೆಗಳಿರುವ, ಭಾವತರಂಗಗಳಿಂದ ಹುಟ್ಟಿಕೊಳ್ಳುವ ಲೈಂಗಿಕ ಕ್ರಿಯೆ ಮಾತ್ರ ಮೌಲ್ಯಾಧಾರಿತವಾದುದಾ? ಪವಿತ್ರವಾದುದಾ? ಹಾಗಿದ್ದಲ್ಲಿ ಸಹಸ್ರಾರು ದಾಂಪತ್ಯಗಳಲ್ಲಿ ಏಕತಾನತೆ ಕಾಡಿದ ನಂತರವೂ ಸಾಮಾಜಿಕ ಕಟ್ಟು ಕಟ್ಟಳೆಯ ಬಂಧನದಲ್ಲಿ ನಡೆಯುವ ನಿರ್ಭಾವುಕತೆಯ, ಯಾಂತ್ರಿಕತೆಯ, ಕೇವಲ ತಮ್ಮ ತೃಷೆ ತೀರಿಸಿಕೊಳ್ಳುವ, ಕಟ್ಟಿಕೊಂಡ ತಪ್ಪಿಗಾಗಿ ದೇಹವನ್ನು ಒಡ್ಡಿ ಕೊಳ್ಳುವ ಆ ಲೈಂಗಿಕ ಕ್ರಿಯೆ ನಿರ್ಭಾವುಕವಾಗುವುದಿಲ್ಲವೇ?

ತಾರತಮ್ಯ ರಹಿತ :

ಹೀಗೆನ್ನುವಾಗಲೂ ಅವಳನ್ನು ನೋಡಿರುವ ದೃಷ್ಟಿ, ಅವಳ ಮಾನಸಿಕ, ದೈಹಿಕ ಸ್ಥಿತಿಯ ಬಗ್ಗೆ ಕಿಂಚಿತ್ತೂ ಚಿಂತಿಸದೆ, ಅವಳ ಆ ಅನಿವಾರ್ಯ ಸಂಧಿಗ್ಧತೆಗಳ ಬಗ್ಗೆ ಮಾನವೀಯ ಚಿಂತನೆಯೇ ಇಲ್ಲದೆ ಅರ್ಥ, ವ್ಯಾಖ್ಯಾನ ಕೊಟ್ಟು ಬಿಡುವುದೂ ಪ್ರಶ್ನಾರ್ಹವೇ. ಮನುಷ್ಯ ಸಹಜವಾದ ಬಯಕೆಗಳು, ನಿರೀಕ್ಷೆಗಳು ವೇಶ್ಯೆಯಾದ ಮಾತ್ರಕ್ಕೆ ಜೀವಂತಿಕೆ ಕಳೆದುಕೊಂಡು ಬಿಡಬೇಕು ಎನ್ನುವ ಪರಿಕಲ್ಪನೆಯೇ ಹೇರಲ್ಪಟ್ಟುದು ಎಂಬ ಅನುಮಾನ ಬರುತ್ತದೆ.

ಎಷ್ಟೋ ಬಾರಿ ಭಾವುಕತೆಯ ನವಿರಲ್ಲಿ ಗಿರಾಕಿಯೊಂದಿಗೂ ಹೆಣ್ಣಾಗುವ ಇವಳು ಅದೆಷ್ಟೋ ಬಾರಿ ಬಂದ ಗಿರಾಕಿಗಳನ್ನು ಸಂಭೋಗವಿಲ್ಲದೆಯೂ ಯಾಮಾರಿಸಿ ಕಳುಹಿಸುತ್ತಾಳೆ. ಕುಡಿದು ಅಮಲೇರಿ ಬಂದಿದ್ದರಂತೂ ಇನ್ನೂ ಸುಲಭವಾಗಿ ಅವಳಿಗೆ ಸಾಧ್ಯವಾಗುತ್ತದೆ. ಅವನು ಬರುವಾಗಲೇ ಈ ಸಮಾಜದ ಕಣ್ಣಿಗೆ ಬೀಳದಂತೆ ಎಚ್ಚರಿಕೆ ವಹಿಸುತ್ತಾನೆ. ಅಲ್ಲಿಯೇ ಅರ್ಧ ಬಳಲಿರುತ್ತಾನೆ, ಉಳಿದರ್ಧವನ್ನು ಅವನು ಬಟ್ಟೆ ಕಳಚುವಾಗಲೇ ಪೊಲೀಸರು ಬಂದರು ಎಂತಲೋ, ಯಾರೋ ನೋಡ್ತಿದ್ದಾರೆ ಎಂತಲೋ ಅಥವಾ ತಮ್ಮ ದೇಹವನ್ನು ತಾಕಿಸಿಯೇ ಅವನನ್ನು ಅಲ್ಲಿಂದ ಕಾಲು ಕೀಳುವಂತೆ ಮಾಡುತ್ತಾರೆ.

ಮನು ಅಥವಾ ಯಾವುದೋ ಪುರಾಣ ಪುಣ್ಯ ಕಥೆಗಳಲ್ಲಿನ ಭ್ರಮೆಯಲ್ಲಿ ವ್ಯಾಖ್ಯಾನಕಾರರು 'ನಿರ್ಭಾವುಕತೆ' 'ತಾರತಮ್ಯ ರಹಿತ' ಎಂದೆಲ್ಲಾ ವ್ಯಾಖ್ಯಾನಿಸುವುದನ್ನು ಬದಲಿಸಬೇಕಿದೆ. ತಾರತಮ್ಯ ರಹಿತ ವಾಸ್ತವವಾದುದಲ್ಲ. ಬಂದ ಗಿರಾಕಿಗಳಲ್ಲೇ ಅವಳಿಗೆ ದೈಹಿಕ ಕ್ರಿಯೆಯಲ್ಲಿ ಆಯ್ಕೆಯಿರುತ್ತದೆ. ಹಾಗಾಗಿಯೇ ತನಗಿಷ್ಟವಾದ, ಇಷ್ಟವಾಗದ ದೇಹಗಳೊಂದಿಗೆ ಮೈಥುನ ಮಾಡಿಕೊಳ್ಳುವ ವಿಚಾರದಲ್ಲಿ ಅನೇಕ ಕಾರ್ಯ ತಂತ್ರಗಳನ್ನು ರೂಪಿಸಿಕೊಳ್ಳುತ್ತಾಳೆ.

ವೇಶ್ಯೆ ಎನ್ನುವಾಗಲೇ ಅವಳ ಸುತ್ತ ಅವಳನ್ನು ಸರಕಾಗಿಸಿ ಲಾಭ ಪಡೆಯುವ ಒಂದು ದೊಡ್ಡ ವರ್ತುಲವೇ ಇದೆ. ಪೊಲೀಸರು, ರೌಡಿಗಳು, ತಲೆ ಹಿಡುಕರು, ಬ್ರೋಕರ್‌ಗಳು, ಡೋಂಗಿ ಗಂಡಂದಿರು, ಅವಳ ಸುತ್ತ ಗಿರಕಿ ಹೊಡೆಯುತ್ತಾರೆ. ಧಾರ್ಮಿಕವೇ ಆಗಲಿ, ಸಾಮಾಜಿಕವೇ ಆಗಲಿ ಆ ಹೆಣ್ಣಿನ ಮೇಲೆ ಸಾಕಷ್ಟು ಒತ್ತಡಗಳಿವೆ. ಎಲ್ಲ ಅರ್ಥ, ವ್ಯಾಖ್ಯಾನಗಳು ಪ್ರತಿಪಾದಿಸುವಂತೆ ಅವಳು ಒಪ್ಪಿಕೊಂಡವಳಲ್ಲ. ಆಯ್ಕೆ ಅವಳದಲ್ಲ. ಅವಳನ್ನು ತಳ್ಳಿರುವುದು, ಬಲಾತ್ಕರಿಸುವುದು, ಭೋಗಕ್ಕಾಗಿ, ಹಣಕ್ಕಾಗಿ, ಲಾಭಕ್ಕಾಗಿ ಅವಳನ್ನು ದುರುಪಯೋಗಪಡಿಸಿಕೊಂಡ, ಶೋಷಿಸಿದ ಪಿಪಾಸೆಗಳ ಪಾತ್ರವಿದೆ ಎಂಬುದನ್ನು ಈ ಸಮಾಜ, ಸಮಾಜ ಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರುಗಳು ಈ ವ್ಯವಸ್ಥೆಯ ಆಳುವವರು ಅರ್ಥೈಸಿಕೊಳ್ಳಬೇಕಾಗಿದೆ. ತಮ್ಮ ಬುದ್ಧಿವಂತಿಕೆಯಿಂದ ಜಾಣ ಕುರುಡರಾಗಿ ಆ ಹೆಣ್ಣನ್ನು ನೀಚಳನ್ನಾಗಿಸಿ, ಅಪರಾಧಿಯನ್ನಾಗಿಸಿ, ಕುಂಟಿತೆಯನ್ನಾಗಿಸಿ, ಮನೆ ಮುರುಕಳನ್ನಾಗಿಸಿ ವ್ಯಾಖ್ಯಾನಿಸುವುದನ್ನು ಬದಲಿಸಿಕೊಳ್ಳಬೇಕಾಗಿದೆ. ಅವಳ ಮೇಲಿನ ಈ ಆಪಾದನೆಗಳನ್ನು ಅವಳನ್ನು ಈ ಸ್ಥಿತಿಗೆ ತಂದು ತಳ್ಳುವ ಪರಿಸ್ಥಿತಿಗಳ ಬಗ್ಗೆ, ವ್ಯವಸ್ಥೆಯ ಕಡೆಗೆ ಹಾಗೂ ಈ ಪ್ರಾಧಾನ್ಯತೆಯ ಕಡೆಗೆ ಹರಿಸಬೇಕಾಗಿದೆ.

ಎಲ್ಲ ಪರಿಮಿತಿಗಳನ್ನು ಮೀರಿ ಜಗದಗಲವಿರಿಸಿಕೊಳ್ಳುತ್ತಾ ದಿನದಿಂದ ದಿನಕ್ಕೆ ವ್ಯಾಪಿಸುತ್ತಾ ಹೆಣ್ಣನ್ನು ಮನುಷ್ಯಳನ್ನಾಗಿಸದೆ ಸರಕಾಗಿಸುತ್ತಿರುವ ಈ ವೇಶ್ಯಾ ವೃತ್ತಿಯ ಬಗ್ಗೆ, ಅದರ ಹಲವು ಮುಖಗಳ ಬಗ್ಗೆ ಆಳಕ್ಕಿಳಿದು ಅರ್ಥೈಸಿಕೊಳ್ಳಬೇಕಾಗಿದೆ.

ವೇಶ್ಯಾವೃತ್ತಿ ಈಗ ಲೈಂಗಿಕ ವೃತ್ತಿಯಾಗಿದೆ. ಜಗತ್ತಿನ ಕೋಟ್ಯಾಂತರ ಲೈಂಗಿಕ ವೃತ್ತಿ ಮಹಿಳೆಯರು ತಮ್ಮದೇ ಆದ ಸಂಘಟಿತ ವೇದಿಕೆ ರೂಪಿಸಿಕೊಳ್ಳುತ್ತಿದ್ದಾರೆ.

ಭಾರತದಲ್ಲಿ ಒಬ್ಬ ಹೆಣ್ಣು ಮಗಳು ಹೊಟ್ಟೆಪಾಡಿಗಾಗಿ ತನ್ನ ದೇಹವನ್ನು ಲೈಂಗಿಕ ವೃತ್ತಿಗಾಗಿ ಬಳಸುವುದು ಅಪರಾಧವಲ್ಲ ಎಂದು ಕಾಯಿದೆ ಜಾರಿಗೊಳಿಸಿದೆ.

ಈ ಹಿನ್ನೆಲೆಯಲ್ಲಿ ಇಂದು ಲೈಂಗಿಕ ವೃತ್ತಿ ಮಹಿಳೆಯರು ಬದುಕುವ ಹಕ್ಕಿಗಾಗಿ, ಮಾನವ ಹಕ್ಕುಗಳಿಗಾಗಿ, ಆರೋಗ್ಯ ರಕ್ಷಣೆಗಾಗಿ ಸಂಘಟಿತರಾಗಿ ಹೋರಾಟ ನಡೆಸಲು ಅಣಿ ನೆರೆಯುತ್ತಿದ್ದಾರೆ.

ಅರ್ಥ ವ್ಯಾಖ್ಯಾನಗಳನ್ನು ಶಾಸ್ತ್ರಜ್ಞನಿಗೆ ಸೀಮಿತಗೊಳಿಸದೆ ತಮ್ಮ ಬದುಕಿನ ಅರ್ಥ ವ್ಯಾಖ್ಯಾನಗಳನ್ನು ತಾವೇ ರೂಪಿಸಿ, ಈ ಸಮಾಜಕ್ಕೆ, ಆಳುವವರಿಗೆ ಅರ್ಥೈಸಲು ಪ್ರಯತ್ನಿಸುತ್ತಿದ್ದಾರೆ.

ಲೈಂಗಿಕ ವೃತ್ತಿಗೂ ಕೂಡ ಮಾನ್ಯತೆ ದೊರೆಯಬೇಕು. ಇತರೆ ಸೇವಾ ವೃತ್ತಿಗಳಂತೆಯೇ (ಉದಾ-ವೈದ್ಯ, ಶಿಕ್ಷಕ, ದಾದಿ) ಲೈಂಗಿಕ ವೃತ್ತಿಯನ್ನು ಸೇವಾ ವೃತ್ತಿಯಾಗಿ ಮಾನ್ಯತೆ ನೀಡಬೇಕೆಂಬ ಕೂಗೆದ್ದಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದೆಂದರೆ ವೇಶ್ಯೆಯನ್ನು ಏಕಾಂಗಿಯಾಗಿ ನೋಡುವುದು ಸರಿಯಲ್ಲ. ಅದೊಂದು ಜಾಲ. ಪುರಾತನದಿಂದಲೂ ನಡೆಯುತ್ತಾ ಬಂದಿರುವ ವ್ಯವಸ್ಥಿತವಾದಂತಹ ಈ ಸಮಾಜ ಮತ್ತು ಈ ವ್ಯವಸ್ಥೆ ಸೃಷ್ಟಿಸಿರುವ ಒಂದು ಹುನ್ನಾರ.

ಲೈಂಗಿಕ ವೃತ್ತಿ ಮಹಿಳೆಯರು

ಬಳಕೆಯಾಗಿರುವ ಶಬ್ದಗಳ ಅರ್ಥ:

ಬಹಳ ಮುಖ್ಯವಾದ ಇನ್ನೊಂದು ಅಂಶವೆಂದರೆ ಲೈಂಗಿಕ ವೃತ್ತಿ ನಿರತರು ಎಂದಾಗ ಆ ಪರಿಧಿಯೊಳಗೆ ಈ ಕೆಳಗೆ ಪ್ರಸ್ತುತ ಪಡಿಸಿರುವವರೆಲ್ಲರೂ ಬರುತ್ತಾರೆ. 'ಲೈಂಗಿಕ ವೃತ್ತಿ ಕಾಮಿಗಳು', 'ಹಿಜ್ರಾಗಳು', 'ಕೋಥಿಗಳು' 'ಹೆಣ್ಣು ಸಲಿಂಗ ಕಾಮಿಗಳು'. 'ಗಂಡು ಸಲಿಂಗ ಕಾಮಿಗಳು' 'ದ್ವಿಲಿಂಗ ಕಾಮಿಗಳು'.

ಈ ಅಧ್ಯಯನದಲ್ಲಿ ಲೈಂಗಿಕ ವೃತ್ತಿ ಮಹಿಳೆಯರಲ್ಲದೆಯೂ ಈ ಮೇಲಿನ 'ಲೈಂಗಿಕ ವೃತ್ತಿ ನಿರತರ' ಬಹಳ ಸಂಕ್ಷಿಪ್ತವಾದ ಪರಿಚಯ ನೀಡಿದ್ದೇನಾದರೂ ನನ್ನ ಅಧ್ಯಯನದ ಮುಖ್ಯ ಕೇಂದ್ರ ಬಿಂದುವಾಗಿ ಲೈಂಗಿಕವೃತ್ತಿ ಮಹಿಳೆಯನ್ನು ಆಯ್ಕೆ ಮಾಡಿಕೊಂಡಿರುತ್ತೇನೆ ಎಂಬುದನ್ನು ಇಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ.

ಇತ್ತೀಚೆಗೆ ವೇಶ್ಯಾವಾಟಿಕೆ ಅಥವಾ ಅಲ್ಲಿಯ ಮಹಿಳೆಯ ಬಗ್ಗೆ ಬಳಸಲ್ಪಡುತ್ತಿರುವ ಶಬ್ದಗಳ ಬಗ್ಗೆಯೂ ಚರ್ಚೆಯಾಗುತ್ತಿದೆ. ಸಾಂಪ್ರದಾಯಿಕವಾಗಿ ಬಳಸುತ್ತಾ ಬಂದಿರುವ 'ಸೂಳೆ,' 'ವೇಶ್ಯೆ','ಗಣಿಕೆ' 'ಪಾತರದವಳು', 'ವಾರಸ್ತಿ', 'ಪಡೆಪುಗಾರ್ತಿ' 'ದೇವದಾಸಿ' 'ಪಣ್ಯಾಂಗನಾ', 'ಮುಜಿಕಾ',.... ಹೀಗೆ ಸಾಕಷ್ಟು

ಪದಗಳಿದ್ದರೂ ಹೆಚ್ಚು ಬಳಕೆಯಲ್ಲಿರುವುದು 'ಸೂಳೆ' ಮತ್ತು 'ವೇಶ್ಯೆ', ದೇವದಾಸಿ, ಬಸವಿ,... ಮುಂತಾದವು.

ಎಚ್.ಐ.ವಿ./ಏಡ್ಸ್‌ಛಾಪು ಒತ್ತಿದ್ದು ಮೊದಲು ಈ 'ಲೈಂಗಿಕ ವೃತ್ತಿನಿರತರ' ಮೇಲೆ. ಆಗ ವಿಶ್ವ ಆರೋಗ್ಯ ಸಂಸ್ಥೆ (WHO) ಒಂದು ಬದಲಾವಣೆಯನ್ನು ಶಬ್ಧ ಪ್ರಯೋಗದಲ್ಲಿ ತಂದಿತು. ಅದರ ಬಗ್ಗೆ ಆದಂತಹ ಚರ್ಚೆಯನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲು ಬಯಸುತ್ತೇನೆ.

ಶಬ್ಧ ಬಳಕೆಯ ಬಗ್ಗೆ ಬೌದ್ಧಿಕವಾಗಿ ಎಷ್ಟಾದರೂ ಚರ್ಚಿಸಬಹುದು, ಆದರೆ ಅದಕ್ಕೊಂದು ಭಾವನಾತ್ಮಕವಾದ ಸ್ಪರ್ಶವಿಲ್ಲದಿದ್ದರೆ, ಕಾಳಜಿಯ ಸ್ಪರ್ಶವಿಲ್ಲದಿದ್ದರೆ, ತಾವು ಚರ್ಚಿಸುತ್ತಿರುವ ಸಮುದಾಯ ಅಪರಿಚಿತವಾಗಿದ್ದರೆ, ಅದಕ್ಕೇನೂ ಹುರುಳಿರುವುದಿಲ್ಲ. ಹಾಗೆಯೇ ಚರ್ಚೆಗಾಗಿ ಚರ್ಚೆ ಮಾಡಿ ಕೈ ತೊಳೆದುಕೊಳ್ಳಬಹುದಷ್ಟೇ ಎಂಬುದು ನನ್ನ ಅಭಿಪ್ರಾಯವಾಗಿದೆ.

ಲೈಂಗಿಕ ವೃತ್ತಿ ನಿರತ ಸಮುದಾಯ ಪ್ರತಿನಿಧಿಗಳು, ಕಾರ್ಯಕರ್ತರು, ಸಂಘಟನಕಾರರೂ ಸೇರಿದಂತೆ ನಡೆದ ಸಂವಾದದ ಆಧಾರದಲ್ಲಿ ಈ ಶಬ್ಧ ಬಳಕೆ ಜಾರಿಯಾಯಿತು.

ಸಾಂಪ್ರದಾಯಿಕವಾಗಿ ಬಳಸುತ್ತಿರುವ ಶಬ್ದಗಳೆಲ್ಲವೂ ಸಾಮಾನ್ಯವಾಗಿ ಉದ್ದೀಪನ ಗೊಳಿಸುವ ಅರ್ಥಗಳು, ಪ್ರತಿಕ್ರಿಯೆಗಳನ್ನು ಭಾವನೆಗಳನ್ನು ಅವಹೇಳನಕಾರಿಯಾಗಿ, ಕಳಂಕರೂಪಿತವಾಗಿ, ತಾರತಮ್ಯಭಾವನೆಯನ್ನು ಮೂಡಿಸುತ್ತವೆ. ಮಹಿಳೆಯರನ್ನೇ ಕಳಂಕಿತವಾಗಿ ನೋಡುವುದು, ಬೇಧ ಮಾಡುವಂತಹ ಅರ್ಥವಿದೆ. ಅವುಗಳು ಅಮಾನವೀಯವಾದ ಸಾಮಾನ್ಯವಾದ ಧೋರಣೆ ಇರುವಂತಹ ಪ್ರತಿಕ್ರಿಯೆಯಾಗಿ ಇದ್ದವು. ಅದೇ ಸಂದರ್ಭದಲ್ಲಿ ಅವರು ಮುಖ್ಯವಾಹಿನಿಯ ಪುರುಷರ ಲೈಂಗಿಕ ನಿರೀಕ್ಷೆಗಳಿಗೆ ತಮ್ಮನ್ನು ಅರ್ಪಿಸಿಕೊಳ್ಳಬೇಕೆನ್ನುವ ವಾಂಛಲ್ಯದ ಅಭಿವ್ಯಕ್ತಿ ಕೂಡ ಅದಾಗಿದೆ. ಇಲ್ಲಿ ಬಹಳ ನಾಜೂಕಾಗಿ ದೇವರಿಗೆ 'ಎಡೆ' ಮಾಡಿದ ಪ್ರಸಾದವನ್ನು ತಾವು ಭೋಗಿಸುವ ಹುನ್ನಾರ ಈ ಶಬ್ದಗಳ ಹಿಂದೆಯೂ ಅಡಗಿದೆ.

ಹೆಚ್.ಐ.ವಿ/ಏಡ್ಸ್ ಪಿಡುಗು ವ್ಯಾಪಕವಾದಾಗ ಅದನ್ನು ತಡೆಗಟ್ಟುವ ಪ್ರಯತ್ನಗಳಲ್ಲಿ ಲೈಂಗಿಕ ವೃತ್ತಿ ನಿರತರನ್ನು ಒಳಗೊಳ್ಳುವ ಪ್ರಕ್ರಿಯೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ (WHO)ಯು 'ಕಮರ್ಷಿಯಲ್ ಲೈಂಗಿಕ ಕಾರ್ಯಕರ್ತರು' ಎಂಬ ಈ ಪದವನ್ನು ಸಾರ್ವತ್ರೀಕರಣಗೊಳಿಸಿತು. ಇದರಿಂದ ಅವರ ವೃತ್ತಿಗೊಂದು ಘನತೆಯನ್ನು ತಂದು ಕೊಡುವುದಕ್ಕೆ ಮತ್ತು ಅದನ್ನು ಕಳಂಕರಹಿತಗೊಳಿಸುವ ನಿಟ್ಟಿನ ಒಂದು ಪ್ರಯತ್ನವಾಗಿ ಈ ಪದ ಬಳಸಲಾಯಿತು.

ಪುರುಷ ಲೈಂಗಿಕ ವೃತ್ತಿ ನಿರತರು ಗಣನೀಯ ಪ್ರಮಾಣದಲ್ಲಿರುವ ಆಂಗ್ಲೋ ಅಮೇರಿಕನ್ ಸಂದರ್ಭದಲ್ಲಿ ಈ ಪದವನ್ನು ರೂಪಿಸಿಲಾಯಿತು. ಆದರೆ ಯಾವ ಕಳಂಕವನ್ನು ತೊಡೆದುಹಾಕಬೇಕೆನ್ನುವ ಉದ್ದೇಶದಿಂದ

WHO ಪ್ರಯತ್ನಿಸಿತೋ ಅದೇ ಶಬ್ದ ಬಳಕೆ ಬಗ್ಗೆ ಸಾಕಷ್ಟು ಜಿಜ್ಞಾಸೆ ಉಂಟಾಯಿತು. ಅದರಲ್ಲೂ ಭಾರತದ ಸಂದರ್ಭಕ್ಕಂತೂ ಅದು ಉಚಿತವಲ್ಲ ಎನ್ನುವ ಅಭಿಪ್ರಾಯ ಬಂತು. ಏಕೆಂದರೆ ಅದು 'ವ್ಯಾಪಾರಿ' (ಕಮರ್ಷಿಯಲ್) ಎನ್ನುವ ಶಬ್ದ-ಅರ್ಥ ಎರಡೂ ಅವಹೇಳನಕಾರಿಯಾಗಿವೆ ಎಂಬ ಅಭಿಪ್ರಾಯ ಮೂಡಿಬಂತು. ಹಾಗೆಯೇ 'ವೇಶ್ಯಾವಾಟಿಕೆಯಲ್ಲಿನ ಮಹಿಳೆ' (Women in prostitution) ಪ್ರಮುಖವಾಗಿ ಮಹಿಳೆಯರನ್ನೇ ಕೇಂದ್ರೀಕರಿಸಿಕೊಂಡಿರುವ ಪದ ಮತ್ತು ವೇಶ್ಯಾವಾಟಿಕೆಯ ಸಾಂಸ್ಥಿಕರೂಪವನ್ನು ಅಭಿವ್ಯಕ್ತ ಮಾಡುತ್ತದೆ.

ಈ ಸಾಂಸ್ಥಿಕ ವೇಶ್ಯಾವಾಟಿಕೆಯಲ್ಲಿ ಮಹಿಳೆ ಎನ್ನುವ ಶಬ್ದವನ್ನು 'ವೇಶ್ಯಾವಾಟಿಕೆ'ಯೊಂದಿಗೆ ಬಳಸುವುದರಿಂದ ಮಹಿಳೆಯ ಹೊರತಾದ ಅಪಹರಣಕಾರರು, ನಿರ್ವಾಹಕರು, ಬಂಡವಾಳಗಾರರು, ಪರ್ಕಿಗಳು, ರೌಡಿಗಳು ಮುಂತಾದ ಪ್ರಮುಖವಾಗಿ ತೊಡಗುವವರ್‍ಯಾರೂ ಇಲ್ಲಿ ಚಿತ್ರಣಕ್ಕೆ ಬರುವುದೇ ಇಲ್ಲ. ಇದರಿಂದಾಗಿ ಪೋಲೀಸರು, ಸೈನಿಕರುಗಳು, ಈ ವೃತ್ತಿಯ ಮಹಿಳೆಯರನ್ನು ಅಪರಾಧದ ಅಂಚಿನಲ್ಲಿಡಲು ಬಹಳ ಸುಲಭವಾದಂತಾಗುತ್ತದೆ. ಹಾಗೂ ಸಾಮಾಜಿಕವಾಗಿ ಕೂಡ ಇದರಲ್ಲಿ ತೊಡಗಿಕೊಂಡವರೆಲ್ಲರೂ ಈ ಅರ್ಥದ ವ್ಯಾಪ್ತಿಯಲ್ಲಿ ಹೊರಗಡೆ ನಿಲ್ಲುತ್ತಾರೆ. ಅವರುಗಳೇ ಈ ವೃತ್ತಿಯ ಮೇಲೆ ಕಪಿಮುಷ್ಟಿಯ ಹಿಡಿತ ಸಾದಿಸಿ ತಾವೇ ಸೂತ್ರದಾರರಾಗಲೂ ಇನ್ನು ಹೆಚ್ಚು ಸುಲಭವಾಗುತ್ತದೆ. ಅಪರಾಧವೆಲ್ಲವೂ 'ಮಹಿಳೆ'ಯ ಸುತ್ತ ನಿಲ್ಲುತ್ತದೆ.


1993ರ ಪೀಟಾ (PITA) ಕಾಯಿದೆಯಲ್ಲಿ ''ಲೈಂಗಿಕವೃತ್ತಿ ನಿರತರು'' ಎನ್ನುವ "Sexual Worker" ಎಂಬ ನಾಗರೀಕವಾದಂತಹ ಉದ್ದೇಶವುಳ್ಳ ಪದದ ಬಳಕೆಯಾಗಿದೆ.

ಈ ಸಂದರ್ಭದಲ್ಲಿ ಗಾಂಧೀಜಿಯವರು 'ಹರಿಜನ' ಶಬ್ದ ಬಳಕೆ ಜಾರಿ ಮಾಡಿದ್ದು ನೆನಪಿಗೆ ಬರುತ್ತದೆ. ಹೆಸರಿನ ಬದಲಾವಣೆಯಿಂದಲೇ ಪರಿಸ್ಥಿತಿಗಳು ಬದಲಾಗದಿದ್ದರೂ ಅದೂ ಕೂಡ ಬದಲಾವಣೆಯ ಪ್ರತಿಕ್ರಿಯೆಯಲ್ಲಿ ಅಲ್ಪವಾದರೂ ತನ್ನ ಪಾತ್ರವನ್ನು ವಹಿಸುತ್ತದೆ ಎಂಬ ನಂಬಿಕೆಯಿಂದ ಆ ಪ್ರತಿಕ್ರಿಯೆಗಳು ನಡೆಯುತ್ತವೆ ಎಂದು ನನ್ನ ಅಭಿಪ್ರಾಯವಾಗಿದೆ. ಆ ಅಭಿಪ್ರಾಯದಿಂದಲೇ ಈ ಅಧ್ಯಯನದಲ್ಲಿ ನಾನು 'ವೇಶ್ಯೆ' ಅಥವಾ ಯಾವುದೇ ಸಾಂಪ್ರದಾಯಿಕ ಶಬ್ದಗಳಿಗಿಂತಲೂ ಹೆಚ್ಚು '**ಲೈಂಗಿಕ ವೃತ್ತಿ ಮಹಿಳೆ**' ಎಂದೇ ಬಳಸಿರುತ್ತೇನೆ.

ಅಡಿ ಟಿಪ್ಪಣಿಗಳು:

1. ಶಬ್ದ ಕಲ್ಪದ್ರುಮ, 4ನೇ ಕಾಂಡ, ಪುಟ-505
2. ಶಬ್ದಾರ್ಥ ಕೌಸ್ತುಭ ಭಾಗ-6, ಪು-2504
3. ಕಿಟಲ್ ನಿಘಂಟು ಸಂ.4, ಪು.1662
4. English Sanskrit Dictionary, p- 552
5. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂ.6, ಪು.2465
6. ಕಿಟಲ್ ನಿಘಂಟು ಪು. 1226
7. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂ.6, ಪು. 6263.
8. ಡಿ.ಟಿ. ಬಸವರಾಜ್ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವೇಶ್ಯಾಜೀವನ(ಅಪ್ರಕಟಿತ) ಪುಟ.43,44.
9. Psychology of sex p. 225
10. ಅದೇ ಪುಟ 225
11. Chamber's Encyclopaedia, vol.11, p. 257
12. Psychology of sex p.225
13. ನಗರ ಸಮಾಜಶಾಸ್ತ್ರ ಪು. 205
14. ಮನುಸ್ಮೃತಿ, ಚರ್ರ್ರೋಡಿ ಈಶ್ವರ ಶಾಸ್ತ್ರೀ
15. ಕನ್ನಡ ಮತ್ಸ್ಯ ಪುರಾಣ ಪಂಡರೀನಾಥಾಚಾರ್ಯ ಗಲಗಲಿ ಪು.70.
16. ಪಿಯುಸಿಎಲ್-ಕರ್ನಾಟಕದಲ್ಲಿ ವರದಿ. ಪು. 3, 4, 5.


ಎಂ.ಜಿ. ದೀಪಿಕಾ




ಅಧ್ಯಾಯ: ೪

ಮಹಿಳೆ ಮತ್ತು ಭಾರತೀಯ ಸಮಾಜ

೪.೧ ಪ್ರಮುಖ ಧರ್ಮಗಳ ಹಿನ್ನೆಲೆಯಲ್ಲಿ ಮಹಿಳೆ

೪. ೨ ಪ್ರಾಚೀನ ಯುಗದಿಂದ ಅದುನಿಕದವರೆಗೆ





೪.೧ ಪ್ರಮುಖ ಧರ್ಮಗಳ ಹಿನ್ನೆಲೆಯಲ್ಲಿ ಮಹಿಳೆ :

ವೇಶ್ಯಾವಾಟಿಕೆ ಅನಾದಿಕಾಲದಿಂದಲೂ ಇಂದಿನವರೆಗೂ ಹೊಸ ಹೊಸ ರೂಪ ಪಡೆದುಕೊಂಡು ಯಾಕೆ ಬರುತ್ತಿದೆ? ಎನ್ನುವ ಪ್ರಶ್ನೆ ನನ್ನನ್ನು ಕಲಕುತ್ತಲೇ ಇತ್ತು.

ಈ ಸಮುದಾಯಕ್ಕೆ ಸಂಬಂಧಿಸಿದ ಕಾನೂನುಗಳು ಎಲ್ಲಿಯೂ ಪುರುಷರನ್ನು ಅಪರಾಧಿಯನ್ನಾಗಿಸದೆ ಮಹಿಳೆಯನ್ನು ಅಪರಾಧಿಯನ್ನಾಗಿಸಿರುವುದರ ಒಳ ಸುಳಿವು ಸಿಕ್ಕಿದಾಗ ಅದರ ಸುತ್ತ ಒಂದಷ್ಟು ಅಧ್ಯಯನ ನಡೆಸಿದೆ. ಪುರುಷನ ಬಗ್ಗೆ ಅಲ್ಲೊಂದಿಷ್ಟು ಪ್ರಸ್ತಾಪವಿದ್ದರೂ ಅವನು ನುಣುಚಿಕೊಳ್ಳುವ ಸುಲಭೋಪಾಯಗಳೂ ಅಲ್ಲಿದ್ದುದು ಕಂಡುಬಂತು. ಅಷ್ಟೇ ಅಲ್ಲದೆ ಇದುವರೆಗಿನ ಯಾವ ಕಾನೂನು ಕೂಡ ಅವಳನ್ನು ಮನುಷ್ಯಳನ್ನಾಗಿಸದೆ ಅವಳ ಸ್ಥಿತಿಯನ್ನು ಇನ್ನೂ ಬರ್ಭರ ಮಾಡಿರುವುದರ ವಾಸ್ತವತೆ ಇಂದು ನಮ್ಮೊಂದಿಗೆ ಇದೆ. ಇಂತಹ ತುಡಿತಗಳು ನನ್ನನ್ನು ಚಡಪಡಿಸುವಂತೆ ಮಾಡಿದಾಗಲೆಲ್ಲಾ ಈ ವ್ಯವಸ್ಥೆಯ ಆಳಕ್ಕೆ ಇಳಿದು ನೋಡಿದಾಗ ಮಾತ್ರ ಇಂತಹ ಪ್ರಶ್ನೆಗಳ ಪರಿಹಾರಕ್ಕೆ ಹುಡುಕಾಟ ಸಾಧ್ಯವಾಗ ಬಹುದೇನೋ ಎನ್ನಿಸಿತು.

ಸಾಂಸ್ಕೃತಿಕವಾದ ಕಾರಣಗಳಿವೆ ಎನ್ನಿಸಿದರೂ ಅದರ ಪೂರ್ಣ ಪರಿಚಯ ಸಾಧ್ಯವಾಗಿರಲಿಲ್ಲ. ಈ ವೃತ್ತಿ ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹೇಗೆ ಹೆಣೆದುಕೊಂಡು ಮುಂದುವರಿದು ಬರುತ್ತಾ ಇದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಕೂಡ ಇದಾಗಿದೆ.

ಧರ್ಮವೇ ಉಸಿರಾಡುತ್ತಿರುವ ಈ ಭಾರತೀಯ ಸಮಾಜದಲ್ಲಿ ಭಾರತೀಯ ಮನಸ್ಸು ಧಾರ್ಮಿಕವಾದುದ್ದು ಹಾಗೂ ಈ ಪ್ರಶ್ನೆಗೂ ಅದರದ್ದೇ ಚೌಕಟ್ಟಿನಲ್ಲಿ ಉತ್ತರಗಳನ್ನು ಹುಡುಕ ಬಾರದೇಕೆ ಎಂಬ ಪ್ರಶ್ನೆ ನನ್ನನ್ನು ಕಾಡಿತ್ತು. ಸಾಮಾಜಿಕ, ಸಾಂಸ್ಕೃತಿಕ ಮೇಲ್ ರಚನೆಯಲ್ಲಿ ಅಡಗಿರಬಹುದಾದ ಅಧ್ಯಯನ ಅಗತ್ಯ ಎನಿಸುತ್ತಿದೆ. ಈ ಸಮಸ್ಯೆಯ ಬೇರುಗಳು ಮಹಿಳೆಯರನ್ನು ನೋಡುವ ಈ ವ್ಯವಸ್ಥೆಯ ಮತ್ತು ಅದರ ಮೂಲ ಪ್ರಭಾವದಲ್ಲಿ ಅಡಗಿರಬಹುದು.

ಭಾರತದಲ್ಲಿ ಹಿಂದೂ ಧರ್ಮದ ಪ್ರಭಾವವಿದ್ದು ಬಹಳ ಸಹಜವಾಗಿ 'ಹೆಣ್ಣು' ಈ ಸ್ಥಿತಿಯಲ್ಲಿದ್ದಾಳೆ ಎಂದು ಭಾವಿಸುವುದಾದರೆ ವೇಶ್ಯಾವಾಟಿಕೆಯ ವಿಚಾರ ಜಾಗತಿಕವಾಗಿದ್ದು, ಹಾಗಿದ್ದರೆ ಅವುಗಳ ನಿರಂತರತೆಗೆ ಕಾರಣವೇನಿರಬಹುದು ಎಂಬುದರ ಹುಡುಕಾಟದ ಪ್ರಯತ್ನವೂ ಇದಾಗಿದೆ. ಇಡೀ ಮಹಿಳಾ ಸಮುದಾಯದ ಒಂದು ಹಿನ್ನೆಲೆಯಲ್ಲಿ ಧರ್ಮಗಳ ದೃಷ್ಟಿಕೋನ ಯಾವುದಿರಬಹುದು? ಈ ಹಿನ್ನಲೆಯಲ್ಲಿ ವೇಶ್ಯಾವಾಟಿಕೆ ಮತ್ತು ಜಾಗತಿಕ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಬಹುದೆಂಬ ಪ್ರಯತ್ನವೂ ಇದಾಗಿದೆ.

ಇಷ್ಟೆಲ್ಲಾ ಆಗಿಯೂ ಸಮಪಾಲು ಪುರುಷನದ್ದು ಇದ್ದರೂ, ಒಂದಲ್ಲ ಒಂದು ರೀತಿಯಲ್ಲಿ ಈ ಸಮಾಜ ತನ್ನನ್ನು ತೊಡಗಿಸಿಕೊಂಡಿದ್ದರೂ ಇಂದಿಗೂ 'ವೇಶ್ಯಾವಾಟಿಕೆ' ಒಂದು ಸಾಮಾಜಿಕ ಅನಿಷ್ಟವಾಗಲು ಕಾರಣಗಳೇನಿರಬಹುದು?

ಒಟ್ಟಾರೆಯಾಗಿ ಧರ್ಮಗಳು ಮಹಿಳೆಯರನ್ನು ಹೇಗೆ ನೋಡಿವೆ ಎಂಬುದರ ಆಳಕ್ಕೆ ಇಳಿದಾಗ ಮಾತ್ರ ಮಹಿಳೆಯರಲ್ಲಿಯೂ 'ದಯನೀಯ' ಸ್ಥಾನ ಹೊಂದಿರುವ ವೇಶ್ಯೆಯ ಬಗ್ಗೆ ಇನ್ನೆಷ್ಟು ಕೀಳಾಗಿ ನೋಡಿದೆ ಎಂಬುದನ್ನು ಮನನ ಮಾಡಿಕೊಳ್ಳುವ ಪ್ರಯತ್ನವಾಗಿ ಪ್ರಮುಖವಾದ ಕೆಲವು ಧರ್ಮಗಳ ಹಿಂದೂ ಧರ್ಮ, ಬೌದ್ಧ ಧರ್ಮ, ಜೈನ ಧರ್ಮ, ಕ್ರೈಸ್ತ ಧರ್ಮ, ಇಸ್ಲಾಂ ಧರ್ಮ, ಮತ್ತು ಸಿಖ್ ಧರ್ಮ ಧಾರ್ಮಿಕ ಸುಧಾರಕರುಗಳು ಉದಯಿಸಿದ ಧರ್ಮಗಳನ್ನು ಇಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ.

ಹಿಂದೂ ಧರ್ಮ ಮತ್ತು ಮಹಿಳೆ

ಹಲವು ಧರ್ಮಗಳ ಅಥವಾ ಅವುಗಳ ಪ್ರಭಾವಗಳ ತಳಪಾಯದಲ್ಲಿ ಸ್ವನಿರ್ಮಿಸಿಕೊಂಡಿರುವ ಸಮಾಜಗಳಲ್ಲಿ ಹಿಂದೂ ಧರ್ಮ ತನ್ನ ಪ್ರಾಧಾನ್ಯತೆಯನ್ನು ಮೆರೆದಿದೆ. ಭಾರತದಂತಹ ಬೃಹತ್ ರಾಷ್ಟ್ರದಲ್ಲಿಯೂ ಇಷ್ಟೊಂದು ವಿಶಿಷ್ಟತೆ, ವಿಭಿನ್ನತೆ ಹೊಂದಿರುವ ಭರತಖಂಡದಲ್ಲಿಯೂ ಎಲ್ಲೆಲ್ಲೂ ತನ್ನ ಛಾಪನ್ನು ಒತ್ತಿದೆ. ಹಿಂದೂ ಧರ್ಮವು ತನ್ನ ಪ್ರಭಾವದಿಂದ ಮಹಿಳೆಯನ್ನು ಯಾವ ದೃಷ್ಟಿಯಿಂದ ನೋಡಿದೆ ಎಂದು ವಿಶ್ಲೇಷಿಸುವ ಪ್ರಯತ್ನವನ್ನು ನಾನಿಲ್ಲಿ ಮಾಡಬಯಸುತ್ತೇನೆ.

ಬಹು ಸಂಖ್ಯಾತ ಹಿಂದೂ ಸಮುದಾಯ ಹೊಂದಿರುವ ಭಾರತದಂತಹ ವ್ಯವಸ್ಥೆಯಲ್ಲಿ ತನ್ನ ಪ್ರಭಾವಬೀರಲು ಸಮರ್ಥವಾದ, ಹೇರಳವಾದ ಅವಕಾಶಗಳಿವೆ. ಹೆಣ್ಣನ್ನು ಎರಡನೇ ದರ್ಜೆ ಪ್ರಜೆಯಾಗಿಸಿ ಅವಳ ವ್ಯಕ್ತಿತ್ವವನ್ನು ಅಡಗಿಸಿದ್ದು 'ಹಿಂದೂಧರ್ಮ' ಎನ್ನುವ ಕಟುಸತ್ಯ ನಮ್ಮೊಂದಿಗಿದೆ. ಈ ನಿಟ್ಟಿನಲ್ಲಿ ಹಿಂದೂಧರ್ಮದಲ್ಲಿ 'ಮಹಿಳೆ'ಯನ್ನು ಪರಿಭಾವಿಸಿರುವ ಮೂಲಬೇರುಗಳನ್ನು ಹುಡುಕುತ್ತಾ ಹೊರಟಾಗ ಅಲ್ಲಿ ಬಹಳ ಮುಖ್ಯವಾದ ನಾಲ್ಕು ಮಾದರಿಗಳನ್ನು ಕಾಣುತ್ತೇವೆ.

1. **'ಬೀಜ-ಕ್ಷೇತ್ರ ನ್ಯಾಯ' ಮಾದರಿ**
2. **'ಪುರುಷ-ಪ್ರಕೃತಿ' ಮಾದರಿ**
3. **'ಬ್ರಹ್ಮ-ಮಾಯಾ' ಮಾದರಿ**
4. **'ಶಿವ-ಶಕ್ತಿ' ಮಾದರಿ**

‘ಬೀಜ-ಕ್ಷೇತ್ರ’ದಂತಹ ಒಂದು ಸಿದ್ಧಾಂತವನ್ನು ‘ಮನು’ ಪರಿಕಲ್ಪಿಸುವಾಗಲೇ ಅಂದಿನ ಸಮಾಜದಲ್ಲಿ ಇದ್ದ ಮಹಿಳೆಯನ್ನು ಬಲಿ ತೆಗೆದುಕೊಳ್ಳುವ ಹುನ್ನಾರ ಅದರೊಂದಿಗಿತ್ತು. ಹಾಗೆಯೇ ಮುಂದುವರಿದ ಹಿಂದೂಧರ್ಮವಾದಿಗಳು ಮನುವಿನಷ್ಟೇ ಅಥವಾ ಇನ್ನೂ ವಿಕೃತವಾದಂತಹ ಪೆಡಸು ಮನೋಭಾವ ಹೊಂದಿದ್ದವರೇ ಆಗಿದ್ದರು.

ಈ ಹಿನ್ನೆಲೆಯಲ್ಲಿ ಮೇಲಿನ ಮಾದರಿಗಳನ್ನು ನಾನಿಲ್ಲಿ ವಿಶ್ಲೇಷಿಸಲು ಬಯಸುತ್ತೇನೆ.

‘ಬೀಜ-ಕ್ಷೇತ್ರ ನ್ಯಾಯ’-ಮಾದರಿ:

ಮಾತೃ ಪ್ರಾಧಾನ್ಯತೆಯನ್ನು ಹೊಂದಿದ್ದ ಪ್ರಾಚೀನ ಸಮಾಜದಲ್ಲಿ ‘ಮಹಿಳೆ’ ಹಡೆಯವುದನ್ನು ಅಂದಿನ ಪುರುಷ ಸಮುದಾಯ ತಮ್ಮ ಪೂರ್ವಜರು ಮತ್ತೆ ಜನ್ಮವೆತ್ತಿ ಬರುತ್ತಿದ್ದಾರೆ ಎಂದು ಭಾವಿಸಿದ್ದರು. ಸಂತಾನಾಭಿವೃದ್ಧಿಯ ‘ಸಾಮ್ರಾಜ್ಞೆ’ ಹೆಣ್ಣಾಗಿದ್ದಳು. ಆ ಗೌರವ, ಮಾನ್ಯತೆ ಹೆಣ್ಣಿಗಿತ್ತು. ಸರಳತೆ ಮತ್ತು ಜೀವನ ಪ್ರೀತಿಗೆ ಮಾತ್ರ ಸೀಮಿತವಾಗಿದ್ದ ಆ ಸಮುದಾಯ ತಮ್ಮ ಬದುಕಿನ ದಿನಚರಿಯನ್ನು ಹಂಚಿಕೊಂಡಿದ್ದರು.

ನಂತರ ಪುರುಷನಿಗೆ ಸಂತಾನಾಭಿವೃದ್ಧಿಯಲ್ಲಿ ತನ್ನ ಪಾತ್ರವೂ ಮುಖ್ಯ ಎಂಬ ಜ್ಞಾನ ಬಂದೊಡನೆ ಅವನ ಇಡೀ ಬದುಕಿನ ಒಂದು ಪೌರುಷಕ್ಕೆ ಶಕ್ತಿ ಬಂದಂತಾಯಿತು, ಅಸ್ತಿತ್ವವೇ ಅಸ್ತವ್ಯಸ್ತವಾಯಿತು. ಈ ‘ಬೀಜ-ಕ್ಷೇತ್ರ ನ್ಯಾಯ’ ವನ್ನು ಸಮರ್ಥಿಸಲು ಹಿಂದೂಧರ್ಮವು ಪುರುಷನ ಪರವಾಗಿ ನಿಂತು ತಾನೇ ‘ಪುರುಷನಾಗಿ’ ವರ್ತಿಸಲು ಆರಂಭಿಸಿತು. ಈ ಪರಿಕಲ್ಪನೆ ಬುಡಕಟ್ಟುಗಳಲ್ಲಿದ್ದ ಮಾತೃ ಪ್ರಧಾನ ವ್ಯವಸ್ಥೆಗೆ ಒಂದು ಬಲವಾದ ಪೆಟ್ಟನ್ನು ನೀಡಿ ಅದುಕ್ರಮೇಣ ಪಿತೃಪ್ರಾಧಾನ್ಯತೆಗೆ ಹೊರಳುವಂತೆ ಮಾಡಿತು. ಈ ಬೀಜ-ಕ್ಷೇತ್ರ ನ್ಯಾಯ ಸಮರ್ಥಿಸುವವರಿಗೆ ವೈಜ್ಞಾನಿಕವಾಗಿ ಕಾಣಲು ಸಾಧ್ಯವಾಯ್ತು. ಹೆಣ್ಣನ್ನು ಕೀಳಾಗಿ ನೋಡಲೋಸುಗವೇ ಶ್ರೇಣಿಯನ್ನು ವ್ಯವಸ್ಥಿತವಾಗಿ ನೋಡಲು ಬಳಸಿಕೊಂಡ ಕ್ರಮ ಇದಾಗಿದೆ.

ಸಾಂಖ್ಯ ತತ್ವ : ಈ ತತ್ವ ಎರಡು ವಾಸ್ತವಗಳನ್ನು ಮಾನ್ಯ ಮಾಡುತ್ತದೆ. ೧.ಪುರುಷ ೨. ಪ್ರಕೃತಿ. ಇದರ ಪ್ರಕಾರ ಈ ಎರಡನ್ನು ನೇರವಾಗಿ ಗ್ರಹಿಸಲು ಸಾಧ್ಯವಿಲ್ಲ.

ಪುರುಷ ಎಲ್ಲವನ್ನು ಸಾಕ್ಷೀಕರಿಸಿ ನೋಡುತ್ತಿರುತ್ತಾನೆ. ಸಂತೋಷವಾಗಲೀ ಮತ್ತು ದುಃಖವಾಗಲೀ ಅನುಭವಕ್ಕೆ ಬರುವುದಿಲ್ಲ. ಬಂಧನವೂ ಇಲ್ಲ, ಬಿಡುಗಡೆಯೂ ಇಲ್ಲ. ಪ್ರಕೃತಿಯ ಸಂಪರ್ಕಕ್ಕೆ ಬಂದಾಗ ಮಾತ್ರ ದೇಹ ಮತ್ತು ಮನಸ್ಸಿನ ಸಂಕೀರ್ಣಕ್ಕೆ ಬರುತ್ತಾನೆ. ಆಗ ಮಾತ್ರ ನೋವು ಅಥವಾ ಸಂತೋಷ ಅನುಭವಿಸುತ್ತಾನೆ. ಪ್ರಕೃತಿ ಜಡವಾಗಿರೋದು. ಪ್ರಜ್ಞೆ ಇರೋಲ್ಲ. ಸತ್ವ, ರಜಸ್, ಥಮಸ್‌ಗಳಿರುತ್ತವೆ. ಈ ಸ್ವಭಾವಗಳು ಪರಸ್ಪರ ಪ್ರತಿಕ್ರಿಯಿಸುತ್ತವೆ. ಕೆಲವೊಮ್ಮೆ ಪೂರಕವಾಗಿ, ಕೆಲವೊಮ್ಮೆ ವಿರುದ್ಧವಾಗಿ ಒಂದರ ಮೇಲೊಂದು ಮೇಲುಗೈ ಪಡೆಯುತ್ತವೆ. ಇವುಗಳ (ಪುರುಷ-ಪ್ರಕೃತಿ) ಸಮ್ಮಿಳನವೇ ಮನುಷ್ಯ ಕುಲ ಎನ್ನುವುದು.

ಆದರೆ ಕ್ರಮೇಣ ಅತಿಯಾದ ಪ್ರಾಮುಖ್ಯತೆಯನ್ನು ಬೀಜಕ್ಕೆ ಕೊಡುತ್ತಾಬರುವುದರೊಂದಿಗೆ ಕ್ಷೇತ್ರಕ್ಕೆ ಒಂದು ಅಧೀನ ಪ್ರಜ್ಞೆಯನ್ನು ಪ್ರತಿಪಾದಿಸುತ್ತಾ ಬಂದರು.

ತನಗೂ ತನ್ನ ಮಗುವಿಗೂ ಜೈವಿಕ ಸಂಬಂಧವಿರುವುದು ತಿಳಿದ ಕೂಡಲೇ ತನ್ನ ಹೆಂಡತಿ ಇತರರೊಂದಿಗೆ ಲೈಂಗಿಕಕ್ರಿಯೆ ಹೊಂದುವುದನ್ನು ನಿಷೇಧಿಸಿದ. ಕ್ಷೇತ್ರದ ಮಾಲೀಕನಿಗೆ ಕ್ಷೇತ್ರದಿಂದ ಉತ್ಪತ್ತಿಯಾದ ಪ್ರತಿಫಲ ದೊರೆಯತಕ್ಕದ್ದು ಎನ್ನುವ ಸ್ಥಿತಿ ತಲುಪಿದ. ಜನಾಂಗದ ಮುಂದುವರಿಕೆ ಮತ್ತು ಮಗು ಅವನ ಆತ್ಮದ ವಿಸ್ತಾರ ಅಂತ ಪರಿಕಲ್ಪಿಸಿದ. ಇದರಲ್ಲಿ ಹೆಣ್ಣು ಒಬ್ಬ ರಕ್ಷಕಳ ಪಾತ್ರಕ್ಕೆ ಗುರಿಯಾದಳು. ದೈಹಿಕ, ಮಾನಸಿಕ ನಿಯಂತ್ರಣಕ್ಕೆ ಒಳಪಟ್ಟ ಮಹಿಳೆ ಮಗಳು, ಆದರ್ಶಪತ್ನಿ, ಆದರ್ಶ ತಾಯಿಯಾಗಿ ಪಾತ್ರ ಧಾರಿಯಾದಳು. ಇವಾವು ಆಗದಿದ್ದಲ್ಲಿ ಅವಳು ವೇಶ್ಯೆಯಾಗಬೇಕು. ಎಲ್ಲಿಯೂ ಅವಳನ್ನು ಮನುಷ್ಯಳನ್ನಾಗಿ ನೋಡುವುದಿಲ್ಲ. ಈ ಕರ್ತವ್ಯಗಳನ್ನು ಬಿಟ್ಟರೆ ಉಳಿದ ಅಸ್ತಿತ್ವವೇ ಅವಳಿಗಿಲ್ಲ. ಸ್ವಭಾವತಃ ಅವಳು ಚಂಚಲೆ ಎಂಬ ಬಿರುದು ಬೇರೆ.

ಬೀಜ-ಕ್ಷೇತ್ರ ನ್ಯಾಯ: ಅವರದ್ದೇ ಒಂದು ವಿಶ್ಲೇಷಣೆ:

ಕೆಟ್ಟ ಬೀಜವನ್ನು ಉತ್ಕೃಷ್ಟವಾದ ಕ್ಷೇತ್ರದಲ್ಲಿ ಹಾಕಿದರೂ ಹಾಗೆಯೇ ಕೆಟ್ಟ ಕ್ಷೇತ್ರದಲ್ಲಿ ಒಳ್ಳೆಯ ಬೀಜಹಾಕಿದರೂ ಪ್ರಯೋಜನವಿಲ್ಲ. ಯಾವುದೇ ಬೀಜ ಹಾಕದಿದ್ದರೂ ಅದು ಬರಡು ಭೂಮಿಯಾಗುತ್ತದೆ.

ಯಾವ ಬೀಜ ಬಿತ್ತುತ್ತೇವೋ ಅಂಥ ಫಲ ಪಡಿತೀವಿ ಅನ್ನೋ 'ಮನು' ಅಭಿಪ್ರಾಯದಂತೆ ಬೀಜ ಬಹಳ ಪ್ರಾಮುಖ್ಯ ಎಂಬುದು ಸ್ಥಾಪಿತವಾಯಿತು.

ಪುರುಷ ಆಸ್ತಿಯ ಒಡೆಯನೂ ಆದ ಹಾಗೆಯೇ ಹೆಣ್ಣಿನ ಒಡೆಯನೂ ಆದ. ಆದ್ದರಿಂದ ಪುರುಷನೇ ಮಾಲೀಕನಾಗಿ ಬಂದ ಬೆಳೆಯೆಲ್ಲವೂ ಅವನಿಗೇ ಸೇರತಕ್ಕದ್ದು ಎಂಬ ಅಲಿಖಿತ ನಿಯಮವಾಯಿತು.

ಮಹಿಳೆ ಒಂದು ಸರಕಾಗಿ ಅಥವಾ ಉಡುಗೊರೆಯಾಗಿ'ಕೊಡುವ' ಸ್ವೀಕರಿಸುವ ವಸ್ತುವಾದಳು.

ಆಸ್ತಿಯ ರಕ್ಷಣೆಯ ಹಾಗೆಯೇ ಹೆಣ್ಣಿನ ರಕ್ಷಣೆಯಹೊಣೆ ಕೂಡ ಪುರುಷನಿಗೆ ಸೇರಿದ್ದು ಎಂದಾಯಿತು.

ತಂದೆ, ಗಂಡ, ಮಗನ ರಕ್ಷಣೆಯ ಪರಿಧಿಯೊಳಗೆ ಹೆಣ್ಣು ಬಂದಳು.

ಅನುಲೋಮ-ಪ್ರತಿಲೋಮ ವಿವಾಹ ಪದ್ಧತಿಯಲ್ಲೂ ಸಹ ಬೀಜ ಕ್ಷೇತ್ರ ಸಿದ್ಧಾಂತ ಪ್ರತಿಬಿಂಬಿಸಿತು.

ಉನ್ನತ ಜಾತಿ ಪುರುಷ-ಕೆಳಜಾತಿ ಹೆಣ್ಣನ್ನು ಮದುವೆಯಾಗಿ ಪಡೆದ ಮಗು ಉನ್ನತ ಜಾತಿಯದ್ದೇ ಆಗುತ್ತದೆ.

ಶೂದ್ರನೊಬ್ಬ-ಬ್ರಾಹ್ಮಣಕನ್ಯೆಯನ್ನು ವಿವಾಹವಾದರೂ ಅವನಿಗೆ ಹುಟ್ಟಿದ ಮಗು ಶೂದ್ರನೇ ಆಗುವುದು. ಆದ್ದರಿಂದ ಹುಟ್ಟು ತಂದೆಯಿಂದ ನಿರ್ಧಾರವಾಗುವುದು, ಇಂತಹ ಮಾದರಿಗಳಿಗೆ 'ವರ್ಣಸಂಕರ'ಅಂತ ಕರೀತಿದ್ರು. ಮಾನ್ಯತೆಯಿಲ್ಲದಿದ್ದರೂ ಇಂತಹವೂ ನಡೆಯುತ್ತಾ ಇದ್ದವು.

ತನ್ನ ಹೆಂಡತಿಯಿಂದ ಸಂತಾನ ಆಗದಿದ್ದಾಗ ಪುರುಷ ಬೇರೆ ಹೆಣ್ಣಿನಿಂದ ಮಗು ಪಡೆಯುವುದು ಪ್ರತೀತಿಯಾಯಿತು.

ಇಪ್ಪತ್ತೊಂದನೆಯ ಶತಮಾನದ ಈ ಆಧುನಿಕತೆಯ ಬದುಕಿನಲ್ಲೂ ಈ ಸಮಾಜದ ಬಹುದೊಡ್ಡ ಭಾಗದ ಮನಸ್ಸುಗಳು ಹೇಗೆ ಜಡ್ಡುಗಟ್ಟಿವೆ, ಮೌಢ್ಯದಿಂದ ಕೂಡಿವೆ ಎಂಬುದನ್ನು ನೋಡುವಾಗ ಆಶ್ಚರ್ಯವಾಗುತ್ತದೆ.

ಬೀಜಕ್ಷೇತ್ರ ಸಿದ್ಧಾಂತದಂತಹ ಅವೈಜ್ಞಾನಿಕವಾದ, ಅಪರಿಪೂರ್ಣತೆಯ ವಿಚಾರಗಳು ರಕ್ತಗತವಾಗಿ ಜನಾಂಗದಿಂದ ಜನಾಂಗಕ್ಕೆ ಅದೆಷ್ಟು ಸರಾಗವಾಗಿ ಹರಿದುಬರುತ್ತಿವೆ. ಇಂದಿಗೂ ಇದೇ 'ಬೀಜಕ್ಷೇತ್ರ' ನ್ಯಾಯ ನಮ್ಮ ಬದುಕುಗಳೊಳಗೆ ಜೀವಂತವಾಗಿವೆ ಎನ್ನುವುದನ್ನು ಸಾಬೀತು ಮಾಡುತ್ತಿವೆ.

ಮಹಿಳೆಯ ಬಗ್ಗೆ 'ಮನು' ವಿನಂತಹ ಮನಸ್ಸುಗಳು ಅದೆಷ್ಟು ವಿಕೃತವಾಗಿವೆ ಹಾಗೂ ವಿತಂಡವಾಗಿವೆ ಎನ್ನುವುದು ಬಹಳ ಸ್ಪಷ್ಟ. ಹಾಗೆಯೇ ಹೆಣ್ಣನ್ನು ಒಂದು ಹೊಲವಾಗಿಯೋ, ಸರಕಾಗಿಯೋ, ಭೋಗಕ್ಕೆ ಬಂದಿರುವ ಒಂದು ಪ್ರಾಣಿಯಾಗಿಯೋ ಕಂಡಂತಹ ಮನಸ್ಸುಗಳು ಅದ್ಹೇಗೆ ವಿಶಾಲ ಮನೋಭಾವದಿಂದ, ಜೀವಗಳ ಸಂಗಮದಿಂದ, ಬದುಕಿನ ಸಮಪಾಲುದಾರರಾಗಿ, ಪ್ರಬುದ್ಧವಾಗಿ ಚಿಂತಿಸಲು ಸಾಧ್ಯವಾಗುತ್ತದೆ.

ಪುರುಷನ ಕ್ರೋಮೋಸಂನಿಂದ ಒಂದು ಮಗುವಿನ ಲಿಂಗ ನಿರ್ಧರಿತವಾಗುತ್ತದೆ ಎಂಬುದು ವೈಜ್ಞಾನಿಕವಾಗಿ ಕಣ್ಣೆದುರಿದ್ದರೂ ಪದೇಪದೇ ಹೆಣ್ಣು ಮಕ್ಕಳನ್ನು ಹಡೆಯುವವಳನ್ನು ದೂಷಿಸಿ, ಹೀಯಾಳಿಸಿ ಚಿತ್ರಹಿಂಸೆ ಕೊಡುತ್ತಿರುವ 'ಮನು'ವಿನ ಹರಿಕಾರರು ಇಂದಿಗೂ (ಅತಿ ವಿದ್ಯಾವಂತರಾಗಿಯೂ) ನಮ್ಮ ನಡುವೆ ಅದೇ 'ಬೀಜಕ್ಷೇತ್ರ'ದೊಂದಿಗೆ ಬದುಕುತ್ತಿಲ್ಲವೇ?

ಬ್ರಹ್ಮ ಮಾಯಾ ಮಾದರಿ:

ಬ್ರಹ್ಮ: ಶಾಶ್ವತವಾದದ್ದು, ಸತ್ಯವಾದದ್ದು. ಸರ್ವಶಕ್ತ, ಸರ್ವಾಂತರ್ಯಾಮಿ. ಇನ್ನುಳಿದ ಎಲ್ಲವೂ ಮಾಯೆ. ಬ್ರಹ್ಮನನ್ನುಳಿದು ಯಾವ ಅಸ್ತಿತ್ವಕ್ಕೂ ಪ್ರಾಧಾನ್ಯತೆಯಿಲ್ಲ.

ಅದ್ವೈತದ ಒಂದು ವಿಶಿಷ್ಟ ಪರಿಕಲ್ಪನೆಯೇ ಈ ಬ್ರಹ್ಮಮಾಯಾ.

ಮಾಯೆ: ಇದು ಮುಸುಕು. ನಾನು, ನನ್ನದು ಎಲ್ಲವೂ ಈ ಮಾಯೆಯಲ್ಲಿರುವವರೆಗೂ ಮಾತ್ರ. ನಂತರ ಬ್ರಹ್ಮನಲ್ಲಿ ಐಕ್ಯವಾಗುವುದು. ಮಾಯೆಗೆ ಸ್ವತಂತ್ರ ಅಸ್ತಿತ್ವವೇ ಇಲ್ಲ. ಅದೊಂದು ವಸ್ತುವೂ ಅಲ್ಲ. ಅದು ಕೆಳ ದರ್ಜೆಯ ಅಸ್ತಿತ್ವ. ಮಹಿಳೆ ಕೂಡ ಇಲ್ಲಿ ಈ ಅಸ್ತಿತ್ವ ಹೊಂದಿರುವುದು. ಅಂದರೆ ಅವಳ ಅಸ್ತಿತ್ವ ಮತ್ತು ಜೀವನ ಇರುವುದೇ ಪುರುಷನಿಗೋಸ್ಕರ.

ಪುರುಷ ಮತ್ತು ಪ್ರಕೃತಿ ಮಾದರಿ:

ಪುರುಷ ಮತ್ತು ಪ್ರಕೃತಿ ಎರಡು ಸ್ವತಂತ್ರ ವಸ್ತುಗಳು ಎಂದು ಸಂಖ್ಯಾತತ್ವ ಪರಿಗಣಿಸುತ್ತದೆ. ಆದರೆ ಇವುಗಳ ನೇರ ಗ್ರಹಿಕೆ ಸಾಧ್ಯವಿಲ್ಲ.

ಪುರುಷ: ಶಾಶ್ವತವಾಗಿರುವವನು ಪುರುಷ. ಮೂಲ ಸ್ವರೂಪವಾದ ಅವನು ಸ್ಥಾಯೀರೂಪನಾಗಿ ಎಲ್ಲರ ವೀಕ್ಷಣೆ ಮಾಡುತ್ತಾನೆ. ಅವನು ನಿರ್ಗುಣ, ನೋವು ನಲಿವುಗಳಿಲ್ಲ. ತಟಸ್ಥ. ನಿರಾಸಕ್ತ ಬಂಧನದಿಂದ ಮುಕ್ತನಾಗಿರುತ್ತಾನೆ.

ಆದರೆ ಸ್ಥಾಯೀ ರೂಪದಿಂದ ಹೊರಬಂದ ದೇಹ ಮತ್ತು ಮನಸ್ಸಿನ ರೂಪದೊಳಗೆ ಅವನು ಪ್ರಕೃತಿಗೆ ಬಂದು ಸೇರುತ್ತಾನೆ. ಪ್ರಕೃತಿಯೊಂದಿಗೆ ಸುಖ ದುಃಖ ಅನುಭವಿಸುತ್ತಾನೆ. ಪ್ರಕೃತಿಯ ಒಡನಾಟಕ್ಕೆ ಬಂದಾಗ ಪುರುಷ ಬೇರೆಯಾಗಿ ಕಾಣುತ್ತಾನೆ. ದೇಹ ಮತ್ತು ಮನಸ್ಸಿನ ಜೀವಿಗಳ ರೂಪದಲ್ಲಿ ವೈವಿಧ್ಯಮಯವಾಗಿ ಕಾಣುತ್ತಾನೆ.

ಪ್ರಕೃತಿ: ಇದಕ್ಕೆ ಪ್ರಜ್ಞೆ ಇಲ್ಲ. ಆದರೂ ಅವಳಿಗೆ ಹುಟ್ಟುಸಾವು ಇದೆ. ಪುರುಷನ ಆನಂದಕ್ಕೋಸ್ಕರ, ಮುಕ್ತಿಗೋಸ್ಕರ ಪ್ರಕೃತಿ ಕ್ರಿಯಾಶೀಲವಾಗುತ್ತಾಳೆ. ಪುರುಷ ಪ್ರಕೃತಿಯನ್ನು ತನ್ನ ಸುಖಕ್ಕಾಗಿ ಕ್ರಿಯಾಶೀಲವಾಗಿಸುತ್ತಾನೆ.

ಪ್ರಕೃತಿಯು ಮೂರುಗುಣಗಳಿಂದ ಮಾಡಲ್ಪಟ್ಟವಳಾಗಿರುತ್ತಾಳೆ.

ಸತ್ವ: ಅನೇಕ ವಸ್ತುಗಳನ್ನು ಮಾಡುವ ಜ್ಞಾನಕೊಡುತ್ತದೆ

ರಜಸ್: ಕ್ರಿಯೆಯನ್ನು ಆರಂಭಿಸುತ್ತದೆ

ತಮಸ್: ಕ್ರಿಯೆಯನ್ನು ನಿಲ್ಲಿಸುವ-ಸೋಮಾರಿತನವನ್ನು ಪ್ರಚೋದಿಸುವ ಸ್ವಭಾವ.

ಇವುಗಳು ಪರಸ್ಪರ ಪ್ರತಿಕ್ರಿಯಿಸುತ್ತಿರುತ್ತವೆ. ಪರಸ್ಪರ ಒಡನಾಡುತ್ತಿರುತ್ತವೆ. ಕೆಲವೊಮ್ಮೆ ಒಂದು ಇನ್ನೊಂದರ ಅಡಿಯಾಳಾಗಿ, ಮತ್ತೆ ಕೆಲವೊಮ್ಮೆ ಒಂದು ಮತ್ತೊಂದರ ಮೇಲುಗೈ ಸಾಧಿಸುತ್ತದೆ. ಮತ್ತೆ ಕೆಲವು ಬಾರಿ ಈ ಮೂರೂ ಗುಣಗಳು ಒಂದು ಮತ್ತೊಂದಕ್ಕೆ ಪೂರಕವಾಗಿ ವರ್ತಿಸುವುದು ಉಂಟು.

ಈ ಮೂರೂ ಸ್ವಭಾವಗಳು ಸಮತೋಲನದಲ್ಲಿರುವುದನ್ನು 'ಮೂಲಪ್ರಕೃತಿ' ಎಂದು ಕರೆಯುತ್ತಾರೆ.

ಪುರುಷ ತನ್ನ ಸುಖಕ್ಕಾಗಿ ಪ್ರಕೃತಿಯನ್ನು ಪ್ರಚೋದಿಸುತ್ತಾನೆ. ಕ್ರಿಯಾಶೀಲವಾಗಿಸುತ್ತಾನೆ. ಪ್ರಕೃತಿ ಅವನ ಆನಂದಕ್ಕಾಗಿಯೇ ಕ್ರಿಯಾಶೀಲವಾಗುತ್ತಾಳೆ. ಇವೆರಡೂ ಒಟ್ಟಿಗೆ ಸೇರಿದಾಗ ಕುರುಡ-ಕುಂಟ ಒಟ್ಟಿಗೇ ಬರುತ್ತಿರುವುದರ ಅನುಭವ ತರುತ್ತದೆ.

ನೋವು-ನಲಿವುಗಳನ್ನು ಅನುಭವಿಸಲೋಸ್ಕರ ಪುರುಷ ಪ್ರಕೃತಿಯೆಡೆಗೆ ಬರುತ್ತಾನೆ. ಸ್ವಲ್ಪ ಸಮಯ ಆದ ಮೇಲೆ ತನಗೆ ಮುಕ್ತಿಬೇಕೆನಿಸಿದಾಗ, ತಾನು ಪ್ರಕೃತಿಗಿಂತ ಭಿನ್ನವಾದವನು ಎಂಬ ಪ್ರಜ್ಞೆ ಪುರುಷನಿಗೆ ಬಂದೊಡನೆ ಮುಕ್ತಿ ದೊರೆಯುತ್ತದೆ. ಬೇರೆ ವಸ್ತುಗಳ ಒಡನಾಟಕ್ಕೆ ಬಂದಂತಹ ದೇಹ ನಟನ ಹಾಗೆ ನಟನೆ ಮಾಡುತ್ತದೆ ಅಷ್ಟೆ.

ಇಲ್ಲಿ ಪುರುಷನ ನಿರ್ಧಿಷ್ಟವಾದ ಮತ್ತು ವಿಶೇಷವಾದ ಸ್ವಭಾವ 'ಜ್ಞಾನ'

ಪ್ರಕೃತಿಯ ನಿರ್ಧಿಷ್ಟವಾದ ಮತ್ತು ವಿಶೇಷವಾದ ಸ್ವಭಾವ 'ಕ್ರಿಯೆ'.

ಇವರಿಬ್ಬರೂ ತಮ್ಮ ಅಸಮರ್ಪಕತೆಗಳನ್ನು ಸರಿದೂಗಿಸಿಕೊಳ್ಳೋಕೆ ಬರುತ್ತಾರೆ. ಪುರುಷ ಶುದ್ಧ ಮತ್ತು ಸ್ವತಂತ್ರ. ಆದರೆ ಪ್ರಕೃತಿಯ ಸಂಪರ್ಕಕ್ಕೆ ಬಂದು ಈ ಜಗತ್ತಿನ ಘಟನೆಗಳ ಚಕ್ರಗಳಲ್ಲಿ ಸಿಲುಕುತ್ತಾನೆ. ಪ್ರಜ್ಞಾವಂತನಾಗಿ ಪ್ರಕೃತಿಗಿಂತ ಮೇಲ್‌ಸ್ತರದಲ್ಲಿರುತ್ತಾನೆ. ಮಹಿಳೆ ಪ್ರಜ್ಞೆ ಹೊಂದಿದವಳು. ಆದರೆ ಅವಳಿಗೆ ನಟನಾ ಕೌಶಲ್ಯಗಳಿವೆ. ಆಕರ್ಷಿಸುವ ಮತ್ತು ಮೋಡಿ ಮಾಡುವ ಗುಣಗಳಿವೆ.

ಇಲ್ಲಿ ಪ್ರಕೃತಿ ಸೃಷ್ಟಿಯ ಸಂಕೇತ. ಪುರುಷ ಮತ್ತು ಮಹಿಳೆಯ ಪಾತ್ರಗಳು ಮೂಲಭೂತವಾಗಿ ಭಿನ್ನವಾದವುಗಳು. ಆದರೆ ಅವು ಒಟ್ಟಿಗೇ ಬರಲು ಒಂದು ಉದ್ದೇಶವಿದೆ. ನಿಜ ಜೀವನದಲ್ಲಿ ಅವರ ಬುದ್ಧಿಮತ್ತೆಯನ್ನು ತೋರಿಸುತ್ತದೆ. ಇಬ್ಬರಿಗೂ ಪರಸ್ಪರ ಪರಿಪೂರ್ಣತೆ ಪಡೆಯಲು ಸಾಧ್ಯವಾಗುತ್ತದೆ. ಇಲ್ಲಿ ಉಪಯುಕ್ತತೆಯೇ ಬಹಳ ಮುಖ್ಯ ಅಂಶವಾಗುತ್ತದೆ.

ಬ್ರಹ್ಮ-ಮಾಯಾ ಮಾದರಿಗಿಂತಲೂ ಪುರುಷ-ಪ್ರಕೃತಿ ಸ್ವಲ್ಪ ಭಿನ್ನವಾಗಿದೆ. ಈ ಮಾದರಿಯಲ್ಲಿ ಪ್ರಕೃತಿಯನ್ನು ಮಾಯೆಯಷ್ಟು ಕೀಳಾಗಿ ಕಾಣುವುದಿಲ್ಲ.

ಆದರೂ ಮೇಲ್ನೋಟಕ್ಕೆ ಇಬ್ಬರೂ ಸಮಾನರು ಎನ್ನಿಸಿದರೂ ಮಹಿಳೆಗೆ ಆರೋಪಿಸಿರುವ ಗುಣಗಳನ್ನು ನಾವಿಲ್ಲಿ ವಿಶ್ಲೇಷಿಸಬೇಕಾಗುತ್ತದೆ. ನಿರ್ದೇಶಕ ಮಂಡಳಿಯ ಆದೇಶಗಳನ್ನು ಪಾಲಿಸುವ, ಜಾರಿಗೊಳಿಸುವ ಒಬ್ಬ ಕಾರ್ಯ ನಿರ್ವಾಹಕಳ ಪಾತ್ರವನ್ನು ಮಹಿಳೆ ವಹಿಸುತ್ತಾಳೆ, ಗುಲಾಮಳು ಮತ್ತು ಯಂತ್ರವಾಗುತ್ತಾಳೆ.

ಶಿವಶಕ್ತಿ ಮಾದರಿ:

ಕಾಶ್ಮೀರಿ ಶೈವ ಪಂಥದ ಜ್ಞಾನೇಶ್ವರ ಪ್ರತಿ ಪಾದಿಸಿದ ಶಾಕ್ತತತ್ವ ಇದಾಗಿದ್ದು ಶಿವಶಕ್ತಿ ಮಾದರಿಯ ಪರಿಕಲ್ಪನೆಯನ್ನು ಹೀಗೆ ವಿವರಿಸುತ್ತಾರೆ.

ಶಿವ: ಶಿವ ಪರಿಶುದ್ಧ ಪ್ರಜ್ಞೆಯುಳ್ಳವನು. ಸರ್ವಾಂತರ್ಯಾಮಿ. ಗ್ರಹಿಕೆಗೆ ಮೀರಿದವನು. ಶಿವನ ಗ್ರಹಿಕೆ ಪದಗಳಿಂದ, ಆಲೋಚನೆಗಳಿಂದ ಸಾಧ್ಯವಿಲ್ಲದ್ದು. ಅವನನ್ನು ನಿರೂಪಿಸುವ ಚಿಹ್ನೆಯೂ ಯಾವುದೇ ಮನುಷ್ಯನ ಬುದ್ಧಿ ಶಕ್ತಿಗೆ ನಿಲುಕದಿರುವುದು.

ಈಶ್ವರ: ಈಶ್ವರ ಪ್ರೀತಿಯನ್ನು ತುಂಬಿಕೊಂಡಿರುವ ಶಿವನನ್ನು ನೇರವಾಗಿ ಅನುಭವಿಸಲು ಸಾಧ್ಯವಿಲ್ಲದಿದ್ದರೂ ಈಶ್ವರನ ಮೂಲಕ ಅವನನ್ನು ನೇರವಾಗಿ ಅನುಭವಿಸಬಹುದಾಗಿದೆ.

ಶಕ್ತಿ: ಈಶ್ವರನ ಅವಿಭಾಜ್ಯತೆಯ ಅಂಗ, ಶಕ್ತಿ ಪ್ರೀತಿ ದೇವತೆ, ಇವಳಿಗೊಂದು ಸ್ವತಂತ್ರವಾದ ಅಸ್ತಿತ್ವ ಏನು ಕೊಡೋಲ್ಲ. ಆದರೆ ಶಕ್ತಿಯನ್ನು ಜಡ ಅಂತ ಪರಿಭಾವಿಸುವುದಿಲ್ಲ. ಸಜೀವವಾದ ಶಿವನ ಚೈತನ್ಯ ಅಂತ ಭಾವಿಸುತ್ತಾರೆ. ಶಿವನ ಜ್ಞಾನ, ಕ್ರಿಯೆ, ಅಪೇಕ್ಷೆಯಾಗಿ ಶಕ್ತಿ ಗೋಚರಿಸುತ್ತಾಳೆ. ಕೆಲವೊಮ್ಮೆ ಸ್ಥೈರ್ಯ, ಅರಿವಿನ ಶಕ್ತಿ ಪಡೆಯುವುದು, ದೇವರನ್ನು ತಿಳಿಯುವ ಮಾರ್ಗ. ಅವಳು ಕ್ರಿಯೆಯ ಚೈತನ್ಯ. ಆ ಕ್ರಿಯೆಯ ಮೂಲಕವೇ ಈ ಇಡೀ ಜಗತ್ತು ಜೀವಂತವಾಗಿ ಬೆಳೀತಾ ಇರೋದು. ಶಕ್ತಿ ಬಂಧನ ಮತ್ತು ಮುಕ್ತಿ ಎರಡಕ್ಕೂ ಕಾರಣಳು. ಈ ಶಕ್ತಿಯ ಮಾಧ್ಯಮದ ಮೂಲಕ ಶಿವ ಸೃಷ್ಟಿಕರ್ತನಾಗುತ್ತಾನೆ ಮತ್ತು ಪಾಲಕನಾಗುತ್ತಾನೆ. ಇಡೀ ಜಗತ್ತು ಶಕ್ತಿಯಿಂದ ರೂಪಿತವಾಗಿದೆ. ಶಿವ-ಶಕ್ತಿ ಇಬ್ಬರೂ ಪರಸ್ಪರ ರೂಪಿಸಲ್ಪಟ್ಟಿದ್ದಾರೆ. ಅವರೆಡೂ ವಿಭಿನ್ನ ಹೆಸರುಗಳನ್ನು ಹೇಳುವ ಪಾತ್ರಗಳು. ಆದರೆ ಅವರಿಬ್ಬರೂ ಒಂದೇ.

ಶಿವ: ನಿಶ್ಚಲ, ಮೌನ ಮತ್ತು ತಟಸ್ಥ ರೂಪ. ಶಕ್ತಿ ಶಿವನ ಚಲನಶೀಲವಾದ ಕ್ರಿಯಾರೂಪ. ಒಂದು ಇನ್ನೊಂದರ ಅಭಿವ್ಯಕ್ತಿ. ಶಿವ ಮತ್ತು ಶಕ್ತಿಯ ಸಂಬಂಧ ಸೂರ್ಯ ಮತ್ತು ಕಿರಣಗಳ ಹಾಗೆ. ಇಬ್ಬರೂ ಪರಸ್ಪರ ಅವಿಭಾಜ್ಯರ ಅರ್ಧಾಂಗಿಗಳು. ಒಂದೇ ಅಸ್ತಿತ್ವದ ವಿಭಿನ್ನ ಅಭಿವ್ಯಕ್ತಿಗಳು. ಶಿವ ತಟಸ್ಥ ಮತ್ತು ನಿಷ್ಕ್ರಿಯ. ಆದರೆ ಶಕ್ತಿ ಕ್ರಿಯಾಶೀಲೆ ಮತ್ತು ಚಲನಶೀಲಳು. ಅವರಿಬ್ಬರ ಸೇರ್ಪಡೆ ಒಂದು ಸ್ಥಾಯೀ ಭಾವದ್ದು.

ಈ ಮಾದರಿಯಲ್ಲಿ ಶಿವ ಪುರುಷನಾಗಿ ಒಂದು ವಸ್ತುವಾಗುತ್ತಾನೆ. ಶಕ್ತಿ ಸ್ತ್ರೀಯಾಗಿ ಅವನ ಕ್ರಿಯೆಯಾಗುತ್ತಾಳೆ.

ಶಿವಶಕ್ತಿ 'ಅಂತರ್ಗತ ಸಾಮರಸ್ಯ' ಎನ್ನುತ್ತದೆ ಶಾಕ್ತಾ ತತ್ವ, ಎರಡೂ ಸ್ವತಂತ್ರವಾದವುಗಳು, ಆದರೆ ಒಟ್ಟಿಗೇ ಇರುತ್ತವೆ. ಇಬ್ಬರೂ ಒಂದೇ ಎನ್ನುವ ಭಾವವೂ ಇದೆ. ಪರಸ್ಪರ ತಾವು ಒಬ್ಬರಿಗೆ ಇನ್ನೊಬ್ಬರು ಸೇರಿದವರು ಎನ್ನುವ ಭಾವ ಇದೆ. ಇದು 'ಅಸ್ತಿತ್ವದ ಅನಾಧಿಸ್ಥಿತಿ' ಎನ್ನುತ್ತದೆ ಕಾಶ್ಮೀರಿ ಶೈವ ಪಂಥ.

ಈ ಏಕೀಭಾವ ಮುಂದಿನ ಹಂತದಲ್ಲಿ ವಿಶಿಷ್ಟ ಅನುಭವಕ್ಕೆ ದಾರಿ ಮಾಡಿಕೊಡುತ್ತದೆ. ಈ ಎರಡೂ ಚೇತನಗಳ ರೂಪವನ್ನು ಅಗ್ನಿ ಮತ್ತು ಸೋಮ (ಚಂದ್ರ) ಎಂದು ಕರೆಯಲಾಗುತ್ತದೆ.

ಇಡೀ ಜಗತ್ತು ಶಿವಶಕ್ತಿಯ ಆಟದ ರಂಗಭೂಮಿ ಎನ್ನುವ ಪರಿಕಲ್ಪನೆಯನ್ನು ಇಲ್ಲಿ ತರುತ್ತಾರೆ. ಶಕ್ತಿಗೆ ಶಿವನ ಕ್ರಿಯೆಯನ್ನು ನೋಡುವ ಬಯಕೆಯಾದಾಗ ಜಗತ್ತು ಸೃಷ್ಟಿಯಾಗುವುದು.

ಇಲ್ಲಿ ಮಹಿಳೆಗೆ ಎಲ್ಲರ ತಾಯಿ ಎಂದು ಹೇಳಿ'ಮಾತೃಸ್ವರೂಪ' ನೀಡಿದ್ದಾರೆ. ಅದು ಜಡವಲ್ಲ. ಜೀವಂತಿಕೆಯ ರೂಪ. ಇವಳು ಚತುರ ಶೀಲೆ, ಬೇರೆ ಮಾದರಿಗಳಂತೆ ಭೋಗದ ವಸ್ತುವಲ್ಲ. ಇವಳೂ ಕೂಡ ಒಬ್ಬ ಭೋಗಿ. ಪುರುಷ ಅನುಭವಿಸುವ ಸುಖವನ್ನು ಇಲ್ಲಿ ಮಹಿಳೆಯೂ ಅನುಭವಿಸುತ್ತಾಳೆ. ಹಾಗೂ ಇಲ್ಲಿಯ

(ಮಹಿಳೆ) ಶಕ್ತಿ 'ಕುಂಡಲಿನಿ' ಕೇವಲ ಜನ್ಮಕೊಡುವವಳಷ್ಟೇ ಅಲ್ಲ. ರೂಪಿಸುತ್ತಾಳೆ, ಬೆಳೆಸುತ್ತಾಳೆ, ಆದ್ದರಿಂದ ಮಾತೃರೂಪವಾಗಿ ಶಕ್ತಿ ಗೌರವಿಸಲ್ಪಡುತ್ತಾಳೆ.

ಹೀಗೆ ಹಿಂದೂ ಧರ್ಮದ 'ಬ್ರಹ್ಮ-ಮಾಯಾ' ಮಾದರಿ, 'ಪುರುಷ-ಪ್ರಕೃತಿ' ಮಾದರಿ, 'ಬೀಜ-ಕ್ಷೇತ್ರ' ಮಾದರಿಗಳು ಈ ಸಮಾಜದಲ್ಲಿ ಮಹಿಳೆ ಎಂದೂ ಒಬ್ಬ ವ್ಯಕ್ತಿಯಾಗಿ ನಿಲ್ಲದಂತೆ ಮಾಡಿಬಿಟ್ಟಿವೆ. 'ಧರ್ಮಾಂಧತೆ'ಅದೆಷ್ಟಿದೆಯೆಂದರೆ ಅರ್ಧದಷ್ಟಿರುವ ಒಂದು ಸಮುದಾಯವನ್ನು ಅವಲಂಬಿತವನ್ನಾಗಿಯೊ, ಬಂಧಿತಳನ್ನಾಗಿಯೊ ಮಾಡುವುದರಿಂದ ಬದುಕುಗಳನ್ನು ಕಟ್ಟುವುದಾದರೂ ಹೇಗೆ ಎಂದು ಒಂದರೆ ಕ್ಷಣ ಆಲೋಚಿಸದಾಗಿವೆ. ಅದರಲ್ಲೂ ಮುಖ್ಯವಾಗಿ ಭೋಗದ ವಸ್ತುವನ್ನಾಗಿಯೇ ಪರಿಗಣಿಸಿರುವುದು ಅಕ್ಷಮ್ಯ ವಾಗಿದೆ. ಮನುವಿನಂತಹ ಮನಸ್ಸುಗಳು ಇದೇ ಮನೋಭಾವವನ್ನು ಇರಿಸಿಕೊಂಡು ಶತಶತಮಾನಗಳನ್ನು ದಾಟುತ್ತಲೇ ಇನ್ನೂ ಧರ್ಮಾಂಧರಾಗಿಗಟ್ಟಿಗೊಳ್ಳುತ್ತಿದ್ದಾರೆ.

ಆದರೆ ಆರ್ಯೇತರವಾದ ಕೆಲವು ಧರ್ಮಗಳು ಸ್ತ್ರೀಪರವಾಗಿ ನಿಲ್ಲುತ್ತವೆ, ಅಷ್ಟೇ ಅಲ್ಲ ಅವಳನ್ನು ಒಬ್ಬ ವ್ಯಕ್ತಿಯಾಗಿ ಬದುಕುಗಳನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಸಮಪಾಲುದಾರಳು ಎಂದು ವಿಶ್ಲೇಷಿಸಿರುವುದು ಬಹಳ ಮುಖ್ಯ.

'ಶಿವಶಕ್ತಿ' ಮಾದರಿ 'ಪುರುಷ-ಸ್ತ್ರೀ'ಯನ್ನು ಸರಿಸಮಾನವಾಗಿ ಕೊಂಡೊಯ್ಯುತ್ತದೆ. ಮೇಲುಕೀಳುಗಳೆಂಬ ಭಾವವಿಲ್ಲ ಅಲ್ಲಿ ಇಬ್ಬರಿಗೂ ಸ್ವತಂತ್ರ ವ್ಯಕ್ತಿತ್ವವಿದೆ. ಶಾಂತಿ ಮತ್ತು ಸಮಭಾವ ಹೊಂದಿರುವ ಸಹ ಅಸ್ತಿತ್ವವನ್ನು ಸೂಚಿಸುತ್ತದೆ. ಈ ಮಾದರಿಯು ಬಹಳ ಮುಖ್ಯವಾಗಿ ಪುರುಷವಾದ-ಸ್ತ್ರೀವಾದಗಳೆರಡೂ ಕರಗಿ ಹೋಗುವ ಪ್ರತಿಪಾದನೆ ಮಾಡುತ್ತದೆ. ಹಾಗೆಂದರೆ ಪುರುಷತ್ವ-ಸ್ತ್ರೀತ್ವವನ್ನು ಸಂಪೂರ್ಣವಾಗಿ ಧ್ವಂಸ ಮಾಡುವಂತಹುದಲ್ಲ ಆದರೆ ಅದರ ಮಿತಿಯನ್ನು ತಿಳಿಯುವಂತದ್ದು. ಒಟ್ಟಾರೆಯಾಗಿ 'ಅವಿನಾಭಾವ' ಸಂಬಂಧವನ್ನು ಗಟ್ಟಿಗೊಳಿಸುವಂಥದ್ದು.

ಬೌದ್ಧಧರ್ಮ:

'ಆಸೆಯೇ ದುಃಖಕ್ಕೆ ಕಾರಣ' ಎಂಬ ತತ್ವವನ್ನು ಬದುಕಿನಲ್ಲಿಯೂ, ಬೌದ್ಧ ಧರ್ಮದಲ್ಲಿಯೂ ಅಳವಡಿಸಿಕೊಂಡ ಬುದ್ಧ.

ಮಹಿಳೆಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ವಾಸ್ತವತೆಗಳ ನೆಲೆಗಟ್ಟಿನಲ್ಲಿ ನೇರವಾದ, ವೈಜ್ಞಾನಿಕವಾದ ದೂರದೃಷ್ಟಿಯನ್ನೊಳಗೊಂಡ ಸೂತ್ರಗಳನ್ನು ವಿಶ್ಲೇಷಿಸಿದ ಬುದ್ಧ ಸೈದ್ಧಾಂತಿಕವಾಗಿ ಸ್ಪಟಿಕದಂತೆ ಈ ಸಮಾಜದ ಕಣ್ತೆರಿಸಿದ್ದಾನೆ. ಅಷ್ಟೇ ಅಲ್ಲ ಮಹಿಳಾ ಸಮುದಾಯ ಹಾಗೂ ಆ ಸಮುದಾಯದೊಂದಿಗೆ ಒಗ್ಗೂಡಿಸುವಿಕೆಯ ಪ್ರಯತ್ನ ಮಾಡುವ ಎಲ್ಲರಿಗೂ ಬುದ್ಧ ಮಾದರಿಯಾಗಿ ಮೊದಲು ನಿಲ್ಲುತ್ತಾನೆ.

ಕ್ರಿ.ಪೂ. 6 ನೆಯ ಶತಮಾನದಲ್ಲಿನ ಸಾಮಾಜಿಕ ಸ್ಥಿತಿಗತಿಗಳು ಬಹಳ ಅರಾಜಕವಾಗಿದ್ದವು. ರಾಜಪ್ರಭುತ್ವ ತನ್ನ ಅಟ್ಟಹಾಸ ಮೆರೆಯುವುದರೊಂದಿಗೆ ನೂರಾರು ಬುಡಕಟ್ಟುಗಳು ಕ್ಷೀಣವಾಗುತ್ತಿದ್ದವು. ಆ ಬುಡಕಟ್ಟುಗಳ ಬದುಕುಗಳಲ್ಲಿ ಅಶಾಂತಿ ತುಂಬಿಕೊಳ್ಳುವಂತಾಯ್ತು. ರಾಜಪ್ರಭುತ್ವವು ತಮ್ಮ ರಾಜ್ಯ ವಿಸ್ತರಣೆಗಾಗಿ ನಿರ್ದಾಕ್ಷಿಣ್ಯವಾಗಿ ಬುಡಕಟ್ಟುಗಳ ಮೇಲೆ ಎರಗಿದವು. ಇದರ ಪರಿಣಾಮವಾಗಿ ಜನರ ಬದುಕುಗಳು ಬಹಳ ದುಸ್ತರವಾದವು. ಹಿಂಸೆ, ಕ್ರೌರ್ಯ, ಲೈಂಗಿಕ ಅತ್ಯಾಚಾರಗಳು ಪರಸ್ಪರ ದ್ವೇಷಾಸೂಯೆಗಳು ಕಣ್ಣಿಗೆ ರಾಚುವಷ್ಟರ ಮಟ್ಟಿಗೆ ತಾಂಡವವಾಡಿದವು. ಸರಳತೆ ಮತ್ತು ಜೀವನ ಪ್ರೀತಿಯನ್ನು ತಮ್ಮ ಶಕ್ತಿಯನ್ನಾಗಿಸಿಕೊಂಡು ಬದುಕುತ್ತಿದ್ದ ಜನರು ಈ ಅರಾಜಕ ಪರಿಸ್ಥಿತಿಯಿಂದ ತತ್ತರಿಸಿದರು. ತಮ್ಮ ಹಿಂದಿನ ಬದುಕನ್ನು ಮೆಲುಕು ಹಾಕುವಂತಾಯಿತು.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಬೌದ್ಧಧರ್ಮ ಉದಯವಾಯಿತು. ಈ ಧರ್ಮದ ಆಗಮನ ಜನರಲ್ಲಿ ಚೈತನ್ಯ ತುಂಬುವುದರೊಂದಿಗೆ ಆಕರ್ಷಣೀಯವೂ ಆಯಿತು. ಅಂದಿನ ಸಮಾಜವನ್ನು ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡಿದ್ದ ವೈದಿಕ ಧರ್ಮ ಮತ್ತು ಸಂಸ್ಕೃತಿಯನ್ನು ಮೊದಲು ಬೌದ್ಧಧರ್ಮ ಪ್ರತಿಭಟಿಸಿತು.

ಬೌದ್ಧ ಸಂಘಗಳು ಹುಟ್ಟಿಕೊಂಡವು. ದಿನದಿನಕ್ಕೆ ಗಟ್ಟಿಯಾಗ ತೊಡಗಿದವು. ಸಮಾಜದ ಎಲ್ಲ ವರ್ಗಗಳಿಂದ, ಜಾತಿಗಳಿಂದ ಬಂದವರು ಬೌದ್ಧ ಸಂಘ ಸೇರ ತೊಡಗಿದರು. ಇಲ್ಲಿ ಅಸ್ಪೃಶ್ಯತೆ, ಜಾತೀಯತೆಯ ಸುಳಿವೂ ಇರದಂತೆ ಬೌದ್ಧ ಸಂಘಗಳನ್ನು ಬೆಳೆಸಲಾಯಿತು.

ಇಲ್ಲಿ ಮಹಿಳೆಯ ಪ್ರಶ್ನೆ ಬೌದ್ಧ ಸಂಘಗಳಿಗೆ ಎದುರಾಯಿತು. ಮೊದಮೊದಲು ಬೌದ್ಧ ಸಂಘಗಳಿಗೆ ಸೇರಲು ಉತ್ಸುಕರಾಗಿ ಬಂದ ಮಹಿಳೆಯರಿಗೇನೂ ಆದರದಸ್ವಾಗತ ಸಿಗಲಿಲ್ಲ. ಸಾಕಷ್ಟು ಮಹಿಳೆಯರು ಬರುತ್ತಿದ್ದಾರೆ. ಅವರನ್ನು ಸೇರಿಸಿಕೊಳ್ಳುವುದರ ಬಗ್ಗೆ ನಿನ್ನಅಭಿಪ್ರಾಯವೇನು? ಎಂದು ಬುದ್ಧನ ಶಿಷ್ಯ ಆನಂದ ಬುದ್ಧನೊಂದಿಗೆ ಪ್ರಶ್ನಿಸಿದ. ಮಹಿಳೆಯರೊಂದಿಗೆ ಬಹಳ ಜಾಗ್ರತೆಯಿಂದಿರಬೇಕು ಮತ್ತು ಮಹಿಳೆಯರು ಸಂಘಕ್ಕೆ ಸೇರುತ್ತಾರೆಂದರೆ ಆ ಸಂಘದ ಆಯುಷ್ಯ ಅರ್ಧಕ್ಕೆ ಮುಗಿಯುವುದು ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದ ಬುದ್ಧ. ನಂತರ ಬುದ್ಧ ಆಲೋಚಿಸಿದ. ಈ ಸಮಾಜದ ಎಲ್ಲ ದೌರ್ಜನ್ಯಗಳಿಗೂ ಮೊದಲು ಬಲಿಯಾಗುವವಳು 'ಮಹಿಳೆ'. ಅವಳನ್ನು ಸಬಲೀಕರಿಸುವ, ತನ್ನ ಸಾಮರ್ಥ್ಯದೊಂದಿಗೆ ಬದುಕುವ ಪರಿ ಕಂಡುಕೊಳ್ಳಬೇಕೆನ್ನುವ ಉತ್ಕಟತೆ ಅವನಲ್ಲಿ ಬಂದಿತು.

ಬುದ್ಧ ತನ್ನ ನಿಲುವನ್ನು ಬದಲಿಸಿಕೊಂಡ. ನೂರಾರು ಮಹಿಳೆಯರು ಬೌದ್ಧ ಸಂಘಗಳನ್ನು, ಬಸದಿಗಳನ್ನು ಸೇರಿದರು. ಬುದ್ಧನ ಸಾಕು ತಾಯಿ ಸೇರಿದಂತೆ ಬುದ್ಧನ ಕುಟುಂಬದವರೂ ಬೌದ್ಧ ಸಂಘ ಸೇರಿದರು. ಬುದ್ಧನ ಸಾಕು ತಾಯಿ ಗೌತಮಿಯೇ ಥೇರಿಗಳ ಆಶ್ರಮಕ್ಕೆ ಸಂಸ್ಥಾಪಕಿಯಾದಳು. 'ಥೇರಿ ಗಾಥಾ' ಅದೊಂದು ಜನಪದ ಪ್ರಕಾರದ ಮೌಖಿಕವಾದ ಕಲೆ. 'ಗಾಥಾ' ಎಂದರೆ ಹಾಡು. ಥೇರಿ ಎಂದರೆ ಜ್ಞಾನ ಅಥವಾ ವೃದ್ಧಿ. ಈ ಹಾಡುಗಳನ್ನು ರಚಿಸಿ ಹಾಡುತ್ತಿದ್ದರು. ಪದ್ಮಾವತಿ, ರುಕ್ಷಿದಾಸಿ, ಸಾರ್ಥಕ, ಭಿಕ್ಷುಣಿ ಶುಭಾ, ಬುದ್ಧ ಕುಂಡಲ ಕೇಶ, ಮುಂತಾದ ಅನೇಕ ಭಿಕ್ಷುಣಿಯರು ಹಾಡುಗಳನ್ನು ರಚಿಸಿದರು.

ಹೀಗೆ ವೃತ್ತಿ, ವರ್ಗ, ಜಾತಿ, ಅಂತಸ್ತು ಯಾವ ಬೇಧಗಳಿಲ್ಲದೆ ಬೌದ್ಧ ಸಂಘಗಳಲ್ಲಿ ಮಹಿಳೆಯರು ಸ್ವತಂತ್ರವನ್ನು ಅನುಭವಿಸಿದರು. ಇದು ಅವರ ಬದುಕಿಗೆ ಒಂದು ಹೊಸ ಚಾಲನೆಯನ್ನು ತಂದುಕೊಟ್ಟಿತು. ಬುದ್ಧನಿಗಿದ್ದ ಮಾನವಪ್ರೀತಿ, ಗೌರವ ಸ್ತ್ರೀಯರ ಘನತೆಯನ್ನು ಎತ್ತರಿಸುವಲ್ಲಿ ಬಹು ಮುಖ್ಯ ಪಾತ್ರ ವಹಿಸಿತು.

ವಿವಾಹದ ಬಗ್ಗೆಯೂ ಬೌದ್ಧ ಧರ್ಮ ಬಹಳ ಸ್ಪಷ್ಟವಾದ ಕ್ರಾಂತಿಕಾರಿಯಾದ ನಿಲುವನ್ನು ಹೊಂದಿತ್ತು. ವಿವಾಹವೆಂಬುದು ನಿರ್ಬಂಧವೇನೂ ಅಲ್ಲ. ಬಲವಂತದ ಪ್ರಯೋಗವೂ ಅಲ್ಲ. ಪರಸ್ಪರ 'ಹೆಣ್ಣುಗಂಡು'ಗಳು ಸಮಾನವಾದ, ಸ್ಪಷ್ಟ ಹಕ್ಕು-ಕರ್ತವ್ಯಗಳನ್ನು ಹೊಂದಿ ಅರ್ಥಮಾಡಿಕೊಂಡು ಸ್ವೀಕರಿಸುವ ನಿರ್ಧಾರವೇ 'ವಿವಾಹ', ಎಂದು ಒಂದು ಹೊಸ ಆಯಾಮವನ್ನೇ ಮದುವೆಗೆ ನೀಡಲಾಯಿತು. ಹಾಗೂ ವಿವಾಹ ಸಾಮಾಜಿಕ, ಆರ್ಥಿಕವಾದಂತಹ ಒಂದು ಒಪ್ಪಂದವಾಗಿತ್ತು.

'ಸತಿ', ಬಾಲ್ಯವಿವಾಹ, ವರದಕ್ಷಿಣೆಯಂತಹವುಗಳು ಇಲ್ಲಿ ತ್ಯಾಜ್ಯವಾದವು. ವೈಯಕ್ತಿಕ ಸ್ವಾತಂತ್ರವನ್ನು ಅನುಭವಿಸಲು ಸಾಧ್ಯವಾದ ಬೌದ್ಧ ಸಂಘದ ಮಹಿಳೆ ಅಂದಿನ ಸಾಮಾಜಿಕ ದುಸ್ತರತೆಯಿಂದ ಹೊರಬಂದು ಉಸಿರಾಡುವಂತಾಯಿತು. ತಮ್ಮ ವ್ಯಕ್ತಿತ್ವಗಳನ್ನು ರೂಪಿಸಿಕೊಳ್ಳುವಲ್ಲಿ ಸಿಕ್ಕ ಈ ಅವಕಾಶದಿಂದಾಗಿ ಮಹಿಳೆಯರು ಧನ್ಯತಾಭಾವ ಹೊಂದಿದ್ದರು. ಆ ಸಂಭ್ರಮ ಸಮಾಜವನ್ನು ಸುಸ್ಥಿತಿಗೆ ತರುವಲ್ಲಿ ಶ್ರಮಿಸಿತು.

ಇಲ್ಲಿ ಇನ್ನೊಂದು ಬಹಳ ಮುಖ್ಯವಾದುದೆಂದರೆ ಬೌದ್ಧಧರ್ಮಕ್ಕೆ ಅನೇಕ ಮಹಿಳಾ ಕಲಾವಿದೆಯರು ಬಂದರು. ಹೀಗೆ ಬಂದ ವಾರಾಂಗನೆಯರೂ, ಕಲೆ ಮತ್ತು ಸಂಸ್ಕೃತಿಯ ಸಂಕೇತಗಳಾದಾಗ ಅವರನ್ನು ಸಹಿಷ್ಣುತೆಯಿಂದ ನಡೆಸಿಕೊಂಡ ಮನೋಭಾವ ಅವರ ಬದುಕನ್ನೇ ಬದಲಿಸಿಬಿಟ್ಟಿತು. ಪ್ರಸಿದ್ಧ ನೃತ್ಯಗಾರ್ತಿ ಆಮ್ರಪಾಲಿಯು ಬುದ್ಧನ ಸ್ನೇಹ ಹೊಂದಿದಳು. ಸಾಂಪ್ರದಾಯಿಕವಲ್ಲದ ಘಟನೆಗಳನ್ನು ದಾಖಲಿಸಿರುವ ಜಾತಕ ಕಥೆಗಳಲ್ಲಿ ಕಂಡು ಬರುವಂತೆ, ಈ ವರ್ಗದ ಮಹಿಳೆಯರು ಧಾರ್ಮಿಕ ಮೃದು ಸ್ವಭಾವದ ಹಾಗೂ ಉನ್ನತ ಧ್ಯೇಯ ಧೋರಣೆಯಿಂದ ಮಾರ್ಗದರ್ಶಿತರಾದರು. ಮತ್ತೆ ಕೆಲವರು ಸುಶಿಕ್ಷಿತರೂ, ಪ್ರತಿಭೆಯುಳ್ಳವರೂ ಆಗಿದ್ದರೆಂದು ತಿಳಿದು ಬರುತ್ತದೆ. ಹೀಗೆ ವೃತ್ತಿಪರ ಕಲಾವಿದೆಯರಿಗೆ ಸಮಾಜದಲ್ಲೊಂದು ಶ್ರೇಷ್ಠ ಸ್ಥಾನ ಸಿಕ್ಕಿತ್ತು.

'ಆಮ್ರಪಾಲಿ'ಯ ನೆನಪಾದಾಗ ನನಗೊಂದು ಘಟನೆ ನೆನಪಾಗುತ್ತಿದೆ. ಈ ಸಮಾಜ 21ನೇ ಶತಮಾನದಲ್ಲಿಯೂ 'ಆಮ್ರಪಾಲಿ'ಯನ್ನು ನೋಡುವ ಪರಿ ಅದೆಷ್ಟು ಅಸಹ್ಯ ಹುಟ್ಟಿಸುತ್ತದೆ. ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ಆರಂಭವಾದ ಸುಸಜ್ಜಿತ 'ಬಾರ್' ಒಂದಕ್ಕೆ 'ಆಮ್ರಪಾಲಿ ಬಾರ್' ಎಂದು ನಾಮಕರಣ ಮಾಡಲಾಯಿತು. ಏಕೆಂದರೆ ಅಲ್ಲಿ ಅತಿ ಸುಂದರ ಯುವತಿಯರು ನೃತ್ಯವನ್ನು (ಕ್ಯಾಬರೆ) ಮಾಡುತ್ತಿದ್ದರು.ಇದನ್ನು ಅಂದಿನ ವಿಧಾನ ಪರಿಷತ್ತು ಸದಸ್ಯರಾಗಿದ್ದ ಡಾ. ಸಿದ್ಧಲಿಂಗಯ್ಯನವರು ಪ್ರತಿಭಟಿಸಿದರು.

ಅಂದರೆ ಬುದ್ಧನ ಒಡನಾಡಿಯಾಗಿದ್ದು, ಅತ್ಯಂತ ಪ್ರತಿಭಾವಂತೆ, ಚತುರಶೀಲತೆಯಿದ್ದ ಹಾಗೂ ಸಾಮಾಜಿಕ ಕಳಕಳಿಯಿದ್ದಂತ, ಬೌದ್ಧಿಕವಾಗಿ ಬೌದ್ಧಧರ್ಮದ ಮೊರೆಹೋಗಿ ತನ್ನ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿಕೊಂಡ 'ಆಮ್ರಪಾಲಿ'ಯನ್ನು ನಮ್ಮ ಇಂದಿನ ಜನ ಈಗಲೂ ತಲೆತಲಾಂತರಗಳ ನಂತರವೂ ನೋಡಿದ ದೃಷ್ಟಿ, ಆ ನಿಲುವು ಆದಿನ್ನೆಂತಹ ಪರಂಪರೆಯನ್ನು ತಂದುಕೊಟ್ಟಿದೆ ಎನ್ನುವುದು ಇಲ್ಲಿ ಗಮನಾರ್ಹವಾಗುತ್ತದೆ. ಇನ್ನು ಬಡಪಾಯಿ ವೇಶ್ಯೆಯರ ಸ್ಥಾನಮಾನ, ಸಾಮಾಜಿಕ ಬದುಕು, ಸಾಂಸ್ಕೃತಿಕವಾದ ನೆಲೆಗಟ್ಟುಗಳನ್ನು ಅದೆಷ್ಟು ಗಂಭೀರವಾಗಿ ಚಿಂತಿಸಬೇಕಾಗುತ್ತದೆ ಎನ್ನುವುದು ಈ ಮೇಲಿನ ಘಟನೆಯಿಂದ ತಿಳಿದು ಬರುತ್ತದೆ.

ಬೌದ್ಧ ಧರ್ಮದ ಪ್ರಭಾವ ಸಮಾಜದ ಮೇಲೆ ಬಹಳ ತ್ವರಿತವಾಗಿ ಹಬ್ಬತೊಡಗಿತು. ಅಲ್ಲಿ ಜನತೆ ಅನುಭವಿಸುತ್ತಿದ್ದ ಸ್ವತಂತ್ರ ಮತ್ತು ಸುಖವನ್ನು ಕಂಡು ವೈದಿಕಧರ್ಮ ಬಹಳ ಬೇಗ ಎಚ್ಚೆತ್ತು ಕೊಂಡು ಬಿಟ್ಟಿತು. ಸಮಾಜದಲ್ಲಿ ತಮಗೆ ಉಳಿಗಾಲವಿಲ್ಲವೆಂದು ಅರಿತ ವೈದಿಕಧರ್ಮ ಪ್ರವರ್ತಕರು ಬಿಗಿಬಂದೋಬಸ್ತು ಮಾಡಲು ಆರಂಭಿಸಿದರು. ಸಮಾಜದಲ್ಲಿ ಅವರ ಹಿಡಿತ ಬಲವಾಯಿತು.

ಬಹಳ ಮುಖ್ಯವಾಗಿ ಆಸ್ತಿ ಸಂಪಾದನೆಯಿಲ್ಲದ, ರಾಗದ್ವೇಷಗಳಿಲ್ಲದ ಸರಳತೆಯ ಬದುಕನ್ನು ಸ್ವೀಕರಿಸಲು ಸಮಾಜದ ಬಹುದೊಡ್ಡ ವರ್ಗಕ್ಕೆ ಸಾಧ್ಯವಾಗಲಿಲ್ಲ. ಈ ಪರಿಮಿತಿಯಲ್ಲೂ 'ಬೌದ್ಧ ಧರ್ಮ' ವಿಸ್ತರಿಸಿಕೊಳ್ಳಬಹುದಾದ ಸಾಧ್ಯತೆಗಳು ಕಂಡು ಬರುವಾಗಲೇ ವೈದಿಕಧರ್ಮ ತನ್ನ ಪ್ರಾಧಾನ್ಯತೆಯನ್ನು ಬಲವಾಗಿ ವೃದ್ಧಿಸಿತು. ಅದಕ್ಕೆ ಬಲಿಯಾದ ಮೊದಲ ಜೀವಿ 'ಮಹಿಳೆ'.

ಬೌದ್ಧ ಧರ್ಮ ಸಂಸ್ಥಾಪಕ ಬುದ್ಧನು ಈ ಎಲ್ಲ ಅನುಭವಗಳ ನೆಲೆಗಟ್ಟಿನಲ್ಲಿ, ಎಲ್ಲ ವಾಸ್ತವತೆ, ಪರಿಮಿತಿಗಳ ನೆಲೆಗಟ್ಟಿನಲ್ಲಿ 'ಮಹಿಳೆ'ಯ ಸಬಲೀಕರಣವನ್ನು ಗಂಭೀರವಾಗಿ ಪರಿಗಣಿಸಿದನು.

ಸಮಾಜದಲ್ಲಿ ಬದಲಾವಣೆಗಷ್ಟೇ ಪ್ರಾಮುಖ್ಯತೆ ಕೊಡದ ಬುದ್ಧ, ಸಮಾಜ ಮತ್ತು ಮಹಿಳೆಯ 'ಮಾನಸಿಕ ಮತ್ತು ಆಧ್ಯಾತ್ಮಿಕತೆಯ ಬದಲಾವಣೆ' ಅಪೇಕ್ಷಿಸುತ್ತಾನೆ. ಹೆಣ್ಣಿಗೆ ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ್ಯ ಕೊಟ್ಟರೆ ಅವಳು ಸ್ವತಂತ್ರಳು ಅಥವಾ ಸಬಲೀಕರಗೊಂಡವಳು ಎಂದು ಭಾವಿಸಲಾಗುವುದಿಲ್ಲ. ಸಂಪ್ರದಾಯ ಮತ್ತು ಆಚರಣೆಗಳ ಗುಲಾಮತ್ವದಿಂದ ಹೊರಬಂದಾಗ ಮಾತ್ರ ಸಬಲೀಕರಣ ಸಾಧ್ಯವಾಗುವುದು. ಮತ್ತು ಸಾಕ್ಷಾತ್ಕಾರವಾಗುವುದು ಎಂಬುದು ಬುದ್ಧನ ಅಭಿಮತ.

'ಮಹಿಳೆಯ ಸ್ವಯಂ ಪರಿಜ್ಞಾನ' ಪರಿಕಲ್ಪನೆಯಿಂದ ಸಾಕ್ಷಾತ್ಕಾರವನ್ನು ಮಾನ್ಯ ಮಾಡಿದ ಮೊದಲ ಸಿದ್ಧಾಂತಿಯಾಗಿ ಬುದ್ಧನು ಸಬಲೀಕರಣದ ಬಗ್ಗೆ ಬೆಳಕು ಚೆಲ್ಲಿದ್ದಾನೆ ಅಷ್ಟೇ ಅಲ್ಲ ಹಾದಿ ತೋರಿದ್ದಾನೆ.

ಮಹಿಳೆಯ ಸಬಲೀಕರಣವನ್ನು ಪ್ರತಿಪಾದಿಸಿದ ಬುದ್ಧ ಅದರ ವಿಶ್ಲೇಷಣೆ ಮತ್ತು ಪ್ರಕ್ರಿಯೆಗಳನ್ನು ವಿವರಿಸಿ ಕೊಟ್ಟಿದ್ದಾನೆ. ಇದು ಯಾವುದೇ ಒಂದು ಸಮುದಾಯವನ್ನು ಒಗ್ಗೂಡಿಸಲು ಅದರಲ್ಲೂ ಲೈಂಗಿಕವೃತ್ತಿಯಲ್ಲಿರುವ ಮಹಿಳೆಯರನ್ನು ಒಗ್ಗೂಡಿಸಲು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಅವನುನಿರೂಪಿಸಿದ, 'ಕ್ಲೇಶಾವರ್ಣ', 'ಜ್ಞೇಯಾವರ್ಣ', (ಇವುಗಳ ಸಂಪೂರ್ಣ

ವಿವರಣೆಯನ್ನು ಒಗ್ಗೂಡಿಸುವಿಕೆಯ ಪ್ರಕ್ರಿಯೆಯಲ್ಲಿ ಕೊಡಲಿದ್ದೇನೆ) ಗಳ ಮೂಲಕ 'ಆತ್ಮೀಯ ದೃಷ್ಟಿ', 'ಧರ್ಮಾತ್ಮಯ ದೃಷ್ಟಿ'ಗಳು ಒಗ್ಗೂಡಿಸುವಿಕೆಗೆ ಅದೆಷ್ಟು ಮುಖ್ಯವಾದವು ಎಂಬುದನ್ನು ವಿವರಿಸುತ್ತದೆ.

ಜೈನ ಧರ್ಮ ಮತ್ತು ಮುಕ್ತಿ ಹೊಂದದ ನಾರಿ:

'ಜೈನ ಧರ್ಮ'ದಲ್ಲಿ ಪ್ರಸ್ತಾಪವಾಗುವ 'ಸ್ತ್ರೀ ಮುಕ್ತವಾದ'ವನ್ನು ವಿಶ್ಲೇಷಿಸಿದರೆ ಧರ್ಮಪ್ರವರ್ತಕರು ಮಹಿಳೆಯನ್ನು ಪರಿಭಾವಿಸುತ್ತಿದ್ದ ದೃಷ್ಟಿ ಕಣ್ಣಿಗೆ ರಾಚುತ್ತದೆ. ಅಷ್ಟೇ ಅಲ್ಲ ಈ ಎಳೆಗಳಿಂದಲೇ ಅವರಿಗಿದ್ದ ಸಂಕುಚಿತತೆ, ಅಜ್ಞಾನ, ಅಹಂಭಾವಗಳು ತೆರೆದುಕೊಳ್ಳುತ್ತವೆ. ಮನುಷ್ಯ ಸಂಕುಲವನ್ನು ಮನುಷ್ಯರನ್ನಾಗಿ ನೋಡಲು ಸಾಧ್ಯವಾಗದ ಯಾವುದೇ ಧರ್ಮಗಳು ಅದ್ಯಾವ ಸಾರ್ಥಕತೆಯನ್ನು, ಬದುಕನ್ನು ಕಟ್ಟಿಕೊಡಲು ಸಾಧ್ಯ? ಕೂಪಮಂಡೂಕಗಳಂತೆ ತಮ್ಮೊಳಗೆ ತಾವೇ ಗಿರಕಿ ಹೊಡೆಯುತ್ತಿರಬೇಕು ಅಷ್ಟೆ. ಬದಲಾಗಿ ಬದುಕನ್ನು ರೂಪಿಸುವ ಯಾವುದೇ ಸಕಾರಾತ್ಮಕವಾದ, ಕ್ರಿಯಾಶೀಲವಾದ, ಪ್ರಚೋದಿಸುವ, ಬೆಳೆಸುವ, ಅಭಿವೃದ್ಧಿ ಹೊಂದಿಸುವ, ಯಾವ ಆಶಯಗಳೂ ಇಲ್ಲದೆ ಜೀವಂತಿಕೆ ಕಳೆದುಕೊಂಡು ಬಿಡುತ್ತವೆ. ಅಂಥದೊಂದು ಸತ್ವಕಳೆದುಕೊಂಡ ದೃಷ್ಟಿಕೋನಗಳನ್ನು ಯಾವುದೇ ಧರ್ಮ ಹೊಂದಿದ್ದರೂ ಇದೇ ಪರಿಮಿತಿಗಳು ಆ ಧರ್ಮವನ್ನು ಸುತ್ತುವರಿದೇ ಇರುತ್ತವೆ.

ಆದರೂ ಈ ಧರ್ಮಗಳು ಅದ್ಹೇಗೆ ಸಮಾಜದ ಮೇಲೆ ಪ್ರಭಾವ ಬೀರಿ ಹರಡಿಕೊಂಡು ಬಿಡುತ್ತವೆ ಹಾಗೆಯೇ ಅದರ ಪರಿಣಾಮ, ದುಷ್ಪರಿಣಾಮಗಳನ್ನು ಸಾಮಾನ್ಯ ಬದುಕುಗಳು ಎದುರಿಸಬೇಕಾಗುತ್ತದೆ ಅಥವಾ ಬಲಿಪಶುಗಳಾಗಬೇಕಾಗುತ್ತದೆ ಎಂಬುದು ಕಟುಸತ್ಯವಾಗಿದೆ.

ಅಂಥದೊಂದು ಹಿನ್ನೆಲೆಯಲ್ಲಿ ಅತ್ಯಂತ ಹೀನಾಯವಾಗಿ ಮಹಿಳೆಯನ್ನು ಚಿತ್ರಿಸಿರುವ ಜೈನಧರ್ಮದ ಬಗ್ಗೆ ವಿಶ್ಲೇಷಿಸಲು ನಾನಿಲ್ಲಿ ಇಚ್ಚಿಸುತ್ತೇನೆ. ಜೈನ ಧರ್ಮದಲ್ಲಿ ಸ್ತ್ರೀ ಮುಕ್ತವಾದವನ್ನು ಕೇಂದ್ರವಾಗಿಟ್ಟುಕೊಂಡು ಶ್ವೇತಾಂಬರರು ಮತ್ತು ದಿಗಂಬರರುಗಳು ಭಿನ್ನವಾಗಿ ಪರಿಭಾವಿಸುತ್ತಾರೆ.

ಶ್ವೇತಾಂಬರರು: ಇವರು ಮಹಿಳೆಗೆ ಮೋಕ್ಷ ಸಾಧ್ಯವೇ ಇಲ್ಲ ಎನ್ನುತ್ತಾರೆ. ಅದಕ್ಕೊಂದು ಸಮರ್ಥನೆಯನ್ನು ಹೀಗೆ ಕೊಡುತ್ತಾರೆ. ದಿಗಂಬರರ ಮುನಿಗಳೂ ವಿದ್ವಾಂಸರೂ ಆದ ಪ್ರಭಾಚಂದ್ರಸೂರಿ ಮತ್ತು ಕುಂದಕುಂದಾಚಾರ್ಯರು ತಮ್ಮ ಎರಡು ಕೃತಿಗಳಲ್ಲಿ ವಿಶ್ಲೇಷಿಸುತ್ತಾರೆ.

೧. ಪ್ರಮೇಯ ಕಮಲ ಮಾರ್ತಾಂಡ

೨. ನ್ಯಾ ಕುಮುದ ಚಂದ್ರ. (ಎರಡು ಕೃತಿಗಳು)

ಒಟ್ಟಾರೆಯಾಗಿ ಮಹಿಳೆಯೇ ಒಂದು 'ಪ್ರಮಾದ' ಎನ್ನುವ ಇವರು ಮಹಿಳೆ ವಕ್ರ ನಡವಳಿಕೆಯವಳು. ದ್ವೇಷ, ಭಯ, ದುಗುಡ, ಸುಖಾಪೇಕ್ಷೆ, ಬಲಿಷ್ಠವಾದ ಮನಸ್ಸಿಲ್ಲದವಳು ಎಂದು ಮೂದಲಿಕೆಯಿಂದ ಹೀಯಾಳಿಸುತ್ತಾರೆ. ಇನ್ನು ಮುಂದುವರೆದು 'ಮಾಸಿಕ ಋತುಚರ್ಯೆಯಲ್ಲಿ ಸಾವಿರಾರು ರೋಗಾಣುಗಳಿಗೆ ಜನ್ಮ ನೀಡುತ್ತಾಳೆ ಹಾಗೂ ಅವುಗಳ ಸಾವಿಗೂ ಇವಳೇ ಕಾರಣಳಾಗುತ್ತಾಳೆ. ಆದ್ದರಿಂದ ಸ್ವಭಾವಜನ್ಯವಾಗಿ ಅಶುದ್ಧಳು, ಹಿಂಸೆ ನಿಯಂತ್ರಣ ಇವಳಿಂದ ಸಾಧ್ಯವಿಲ್ಲ. ಆದ್ದರಿಂದ ನಿರ್ಜರರಾಗಲೂ (ಕರ್ಮವನ್ನು ಸಂಪೂರ್ಣವಾಗಿ ನಾಶಪಡಿಸಿಕೊಳ್ಳುವುದು) ಸಾಧ್ಯವಿಲ್ಲ ಎನ್ನುತ್ತಾರೆ. ಇವರ ತರ್ಕ ಇನ್ನೂ ಮುಂದುವರೆದು, ಮೋಕ್ಷದದಾರಿಯಲ್ಲಿ ವಿವಸ್ತ್ರರಾಗುವುದು ಅನಿವಾರ್ಯ. ಆದ್ದರಿಂದ ಮಹಿಳೆಗೆ ಪ್ರವರ್ಜ್ಯ (ಸನ್ಯಾಸ ಸ್ವೀಕರಿಸುವುದು) ಸಾಧ್ಯವಿಲ್ಲ. ಋತುಚಕ್ರಕ್ಕೆ ಬಲಿಯಾದವಳು ಹಾಗೂ ದುರ್ಬಲ ಮನಸ್ಸಿನವಳಾದ ಅವಳಿಗೆ ಏಕಾಗ್ರತೆಯಿಂದ ಧ್ಯಾನ ಮಾಡುವುದು ಸಾಧ್ಯವೇ ಇಲ್ಲ. ಮಹಿಳೆ ಬಟ್ಟೆ ತೆಗೆಯುವುದು ನಿಷೇಧ. ಆದ್ದರಿಂದ ಅವಳಿಗೆ ಮೋಕ್ಷವೂ ನಿಷೇಧ.

ಶ್ವೇತಾಂಬರರು: (ಶಕಟಾಯನ ಮತ್ತು ರತ್ನಪ್ರಭಾಸೂರಿ)

ಇವರುಗಳ ದಿಗಂಬರರಿಗಿಂತ ಸ್ವಲ್ಪ ಮೆದುಧೋರಣೆಯನ್ನು ಮಹಿಳೆಯ ಮೇಲೆ ಕರುಣಿಸಿದ್ದಾರೆ. ಇವರುಗಳು ಮಹಿಳೆ ಮೋಕ್ಷ ಪಡೆಯಲು ಸಾಧ್ಯವಿದೆ ಎನ್ನುತ್ತಾರೆ. ಇವರದೊಂದು 'ಕರ್ಮ ಪರಿಕಲ್ಪನೆ' ವಿಚಿತ್ರ ಮತ್ತು ಸಂಕೀರ್ಣವಾದುದು.

ಮೋಕ್ಷ ನೀಡುವ ಅನುಭವಿಸುವ ಮತ್ತು ಋತುಚಕ್ರಗಳು ಅವಳ 'ಪಾಪದ ಫಲ' ಅನುಭವಿಸುವುದೇ ಆಗಿದೆ. ಆತ್ಮದ ಮೇಲೆ ಸಂಗ್ರಹವಾಗಿರುವ ಪಾಪ ಅವಳ ಮೊದಲಿನ 'ಕರ್ಮ'(ಹಿಂದಿನ ಜನ್ಮದಿಂದ) ದಿಂದ ಮಹಿಳಾಜನ್ಮಕ್ಕೆ ಬಂದಿದ್ದಾಳೆ. ನಂತರ ಪುರುಷನ ದೇಹದಲ್ಲಿ ಮರುಜನ್ಮ ತಾಳಿ, ಪಾಪ ಕಳೆದು ಮೋಕ್ಷಪಡೆಯಲು ಸಾಧ್ಯ' ಎಂದಿದ್ದಾರೆ.

ಈಗಾಗಲೇ ಹೇಳಿರುವಂತೆ ಇಂತಹ ವಿತಂಡವಾದಗಳು ಯಾವುದೇ ಬದುಕುಗಳನ್ನು ಕಟ್ಟುವಲ್ಲಿ ಪ್ರಭಾವ ಬೀರಲಾರವು. ಇಂತಹ ಅಜ್ಞಾನದ ಬಗ್ಗೆ ಕನಿಕರ ಪಟ್ಟುಕೊಳ್ಳಬಹುದಷ್ಟೆ.

ಇಸ್ಲಾಂ ಮತ್ತು ಮಹಿಳೆ:

ಸ್ತ್ರೀಯನ್ನು ಎಂದೂ ಒಂದು ಭೋಗ ವಸ್ತುವಾಗಿ ನೋಡದ ಮುಸ್ಲಿಂ ಧರ್ಮ ಸ್ಥಾಪಕ ಮಹಮದ್ ಪೈಗಂಬರ್ ಸ್ತ್ರೀಯರಿಗೆ ಅತ್ಯಂತ ಗೌರವವನ್ನು ಕೊಟ್ಟಿದ್ದ. ಬುರ್ಖಾ ಪದ್ಧತಿಯನ್ನು ಪ್ರತಿಷ್ಠಾನಗೊಳಿಸುವ ಮೊದಲು ಅರಬ್ ಜನಾಂಗದ ಮಹಿಳೆಯರು ಆಗ ಸ್ವಚ್ಛಂದವಾಗಿ ಬದುಕುತ್ತಿದ್ದರು. ತಮ್ಮ ಬದುಕಿನ ಪಯಣದಲ್ಲಿ ಪುರುಷರೊಂದಿಗೆ ದುಡಿದು ಗಟ್ಟಿಗಿತ್ತಿಯರಾಗಿ ಬಿಟ್ಟಿದ್ದರು.

''ಉದರಭರಣಕ್ಕಾಗಿ ಪುರುಷರೊಂದಿಗೆ ಸರಿಗಟ್ಟ ಆಕೆಯೂ ದುಡಿಯಬೇಕಾಗಿದ್ದಂಥ ಪರಿಸ್ಥಿತಿಯಲ್ಲಿ ಪ್ರತ್ಯೇಕವಾಗಿರುವುದಕ್ಕೆ ಅವಕಾಶವೇ ಇರಲಿಲ್ಲ. (ಗಂಡ ದುಡಿದು ತರುವವನಾಗಿ, ಹೆಣ್ಣು ಅಡಿಗೆ, ಮಕ್ಕಳು ಎಂದಷ್ಟೇ ತನ್ನ ಕಾರ್ಯಕ್ಷೇತ್ರವನ್ನು ಸಂಕುಚಿತಗೊಳಿಸಿಕೊಂಡಾಗ ಮಾತ್ರ ಹಾಗಾಗಲು ಸಾಧ್ಯ.)'' ಎಂದು ಅಭಿಪ್ರಾಯ ಪಡುತ್ತಾರೆ ಕಮಲಾದೇವಿ ಚಟ್ಟೋಪಾಧ್ಯಾಯ.

ಪ್ರಾಚೀನ ಅರಬ್ ಸಮಾಜದಲ್ಲಿ ಆರ್ಥಿಕ ಸ್ವರೂಪ ತೀವ್ರತರ ಬದಲಾವಣೆ ಎಷ್ಟು ಸೆಣಸಾಡಿದರೂ ಸಾಧ್ಯವಾಗದೇ ಬುರ್ಖಾ ಪದ್ಧತಿ ಜಾರಿಗೊಂಡಾಗಲೇ ಮುಸ್ಲಿಂ ಮಹಿಳೆಯರ ಈ ಹಿಂದಿನ ಸ್ವಾತಂತ್ರ್ಯ ಬದುಕಿಗೂ ಪರದೆ ಎಳೆದಂತಾಯಿತು. ಮೊದಲಿಗೆ ಪ್ರತಿರೋಧ ವ್ಯಕ್ತ ಪಡಿಸಿದರಾದರೂ ಆ ಬುರ್ಖಾಕ್ಕೆ ಸಿಗುತ್ತಿದ್ದ ಮಾನ್ಯತೆಯ ಮುಂದೆ ಪ್ರತಿರೋಧದ ಮನಸ್ಸುಗಳೂ ಶರಣಾಗಬೇಕಾಯ್ತು.

ಮುಂದಿನ ಹಂತದಲ್ಲಿ ಮುಸ್ಲಿಂ ಮಹಿಳೆಯರು ಶಯ್ಯಾಗಾರ, ಪಾಠಶಾಲೆಯೊಳಗೆ ಬಂಧಿಸಲ್ಪಟ್ಟರು. ಪರದೆಯೊಳಗಿನ ದೇಹ, ಮನಸ್ಸುಗಳನ್ನು ಸ್ವಚ್ಛಂದವಾಗಿಸುವ ಯಾವುದೇ ಅವಕಾಶ ನಂತರದ ಕಾಲಘಟ್ಟದಲ್ಲಿರಲಿಲ್ಲ. ಈ ಪರದೆಯನ್ನು ಧರಿಸಿದ್ದರಿಂದ ದೊರೆತ ಗೌರವದ ಹೊರತಾಗಿ ಮುಸ್ಲಿಂ ಮಹಿಳೆ ನಾಲ್ಕುಗೋಡೆಗಳ ಮಧ್ಯೆ ಬಂಧಿತಳಾದಳು. ಬಡ ಮಹಿಳೆಯರ ಪರಿಸ್ಥಿತಿಯಂತೂ ಉಸಿರುಗಟ್ಟಿಸುವ ವಾತಾವರಣದಲ್ಲಿ ಬೆಂದು ಹೋಗುವಂತಾಯಿತು. ಇದು ಅಷ್ಟಕ್ಕೇ ನಿಲ್ಲದೆ ಪುರುಷರು ಈ ಮಹಿಳೆಯರನ್ನು ಹೊರ ಜಗತ್ತಿನ ಎಲ್ಲವುಗಳಿಂದಲೂ ದೂರವಿಡುವ ಹುನ್ನಾರ ಮಾಡಿದರು.

ಇಲ್ಲಿಂದ ಪುರುಷ-ಮಹಿಳೆಯರ ಮಧ್ಯೆ ಅಸಮಾನತೆ ಗೂಡುಕಟ್ಟಿತು. ಹೆಣ್ಣು ಮರುಮದುವೆಯಾಗುವುದು ಅಕ್ಷಮ್ಯವಾದರೆ ಗಂಡು ಎಷ್ಟಾದರೂ ವಿವಾಹವಾಗಬಹುದೆಂದು ನೀತಿಯನ್ನು ಮುಸ್ಲಿಂ ಪುರುಷರು ಹೇರ ತೊಡಗಿದರು. ನಂತರ ಇಲ್ಲಿಯು ಹೆಣ್ಣಿನ ಪಾತ್ರ ತಾನು ಹೀಗೆ ಇರಬೇಕಾದವಳು' ಎಂದು ತನ್ನ ಬದುಕನ್ನು ಬಂಧೀಖಾನೆಯಲ್ಲಿಡುವಂತಹ ಅನಿವಾರ್ಯತೆಯ ಮನೋಭಾವ ಬೇರೂರಲು ಆರಂಭಿಸಿತು. ಇದು ಮುಸ್ಲಿಂ ಮಹಿಳೆ ಇಸ್ಲಾಂ ಧರ್ಮದ ಆಗಮನಕ್ಕಿಂತಲೂ ಮೊದಲಿನ ಪರಿಸ್ಥಿತಿಯಾಗಿತ್ತು.

ನಂತರದ ಕಾಲಘಟ್ಟದಲ್ಲಿ ಇಸ್ಲಾಂ ಆಗಮನ ಅರೇಬಿಯನ್ನರ ಬದುಕಿನಲ್ಲಿ ಒಂದು ಹೊಸ ಅಲೆಯೆಬ್ಬಿಸಿತು. ಕಂದಾಚಾರಗಳನ್ನು ಕಿತ್ತೆಸೆಯುದರೊಂದಿಗೆ ಆಲೋಚನೆಗಳು ಬದಲಾಗತೊಡಗಿದವು. ಬಹಳ ಮುಖ್ಯವಾಗಿ ಮಹಿಳೆಯನ್ನು ಒಂದು ಸಮಾನ ಜೀವಿಯಾಗಿ ನೋಡುವ ಪರಿಪಾಠ ಮೆಲ್ಲನೆ ಹೊಕ್ಕಿತು. ಹೆಣ್ಣಿಗೆ ಸಮಾಜದಲ್ಲಿ ಮಾನ್ಯತೆ ದೊರೆಯಿತು. ಅಷ್ಟೇ ಅಲ್ಲದೆ ಅಂದಿನ ನಿರ್ದೇಶನದಲ್ಲಿದ್ದ ಸಮಾಜದ ಕಟ್ಟುಪಾಡುಗಳು ಸಡಿಲವಾದವು. ಕ್ರೂರ ಪದ್ಧತಿಗಳು ನಿಷೇದಿಸಲ್ಪಟ್ಟವು. ಹೆಣ್ಣು ಶಿಶುಹತ್ಯೆಯಂತಹವುಗಳನ್ನು ಪ್ರತಿಬಂಧಿಸಲಾಯಿತು. ವಿವಾಹ ಸಂಬಂಧಗಳು ಪರಸ್ಪರ ಎರಡು ಕುಟುಂಬಗಳ ಸಮ್ಮತಿಗೆ ಪೂರಕವಾದ ಸರಳ ನಾಗರೀಕ ಒಪ್ಪಂದಗಳಾದವು. ವೈವಾಹಿಕ ಸಂಬಂಧಗಳು ಆರೋಗ್ಯ ಹಾಗೂ ಔಚಿತ್ಯವಾಗಿರಬೇಕೆಂಬ ಕಳಕಳಿಯಿತ್ತು. ಪತಿಯಿಂದಲೇ ನಡೆಯುವ ದೈಹಿಕ ಹಿಂಸಾಚಾರಕ್ಕೂ ಅವಳಿಗೆ ರಕ್ಷಣೆಯಿತ್ತು.

ಎಲ್ಲದಕ್ಕಿಂತಲೂ ಮುಖ್ಯವಾಗಿ ಆಸ್ತಿಯ ಹಕ್ಕು ಇತ್ತು. ಮಗ ಪಡೆಯಬಹುದಾದಷ್ಟು ಸೊತ್ತನ್ನು ಮಗಳೂ ಪಡೆಯಬಹುದಿತ್ತು. ಇವಳ ಆಸ್ತಿಯ ಮೇಲೆ ಗಂಡನು ಹಕ್ಕು ಚಲಾಯಿಸುವಂತಿರಲಿಲ್ಲ. ಅವಳು ತನಗಿಷ್ಟ ಬಂದವರಿಗೆ ಅದನ್ನು ವರ್ಗಾಯಿಸಬಹುದಾಗಿತ್ತು. ಮುಸ್ಲಿಂರಲ್ಲಿ ಇಷ್ಟೆಲ್ಲಾ ಸುಂದರ ಪದ್ಧತಿಗಳಿದ್ದೂ ಮುಸ್ಲಿಮರು ರಾಜ್ಯ ವಿಸ್ತರಿಸಿ ಪ್ರಬಲರಾಗುತ್ತ ಹೋದಂತೆ ಮಹಿಳೆಯರನ್ನು ಬೆಪ್ಪು ಬಡಿದು ಕೂಡಿಸಲು ಆರಂಭಿಸಿದರು. ಆವರೆಗೆ ಒಂದು ಮಾದರಿ ಧರ್ಮದಂತಿದ್ದ ಇಸ್ಲಾಂ ಭಾರತವನ್ನು ಮುಟ್ಟುವ ವೇಳೆಗೆ ಕೈಕಾಲು ಕಳೆದುಕೊಂಡು ತಿರುಚಲ್ಪಟ್ಟಿತ್ತು.'' ಎಂದು ಕಮಲಾ ದೇವಿ ಚಟ್ಟೋಪಾಧ್ಯಾಯ ಅಭಿಪ್ರಾಯ ಪಡುತ್ತಾರೆ.

ಭಾರತಕ್ಕೆ ಪ್ರವೇಶಿಸುವ ಕಾಲಘಟ್ಟದ ಇಸ್ಲಾಂಧರ್ಮ ಮಹಿಳೆಗಿದ್ದ ಎಲ್ಲ ಮಾನ್ಯತೆಗಳನ್ನು ಸದೆ ಬಡಿಯುತ್ತಾ ವ್ಯವಸ್ಥಿತವಾಗಿ ಅವಳು ನಾಲ್ಕು ಗೋಡೆಗಳೊಳಗಿನ ಬಂಧಿಯಾಗುವಂತೆ ಮಾಡಿತು. ಮತ್ತೆ ತನ್ನ ಅಸ್ತಿತ್ವ ಸಾಧಿಸಿ ಕೊಂಡ ಪರದೆಯಂತೂ ಹೆಣ್ಣಿನ ಬೌದ್ಧಿಕತೆಯ ಎಲ್ಲ ಬಾಗಿಲುಗಳನ್ನು ಮುಚ್ಚಿತು. ಆ ವ್ಯವಸ್ಥೆಯಿಂದ 'ಗೌರವಾನ್ವಿತೆ' ಎನ್ನಿಸಿಕೊಳ್ಳುವುದರಲ್ಲೇ ತನ್ನ ಬದುಕನ್ನು ಮುಗಿಸುವಷ್ಟರ ಮಟ್ಟಿಗೆ ಅವಳನ್ನು ಮೂಕಳನ್ನಾಗಿಸಿಬಿಟ್ಟಿತು.

ಹೀಗೆ ಮುಸ್ಲಿಂ ಮಹಿಳೆಯರನ್ನು ಇಂತಹ ಅಧೋಗತಿಗೆ ತಂದೊಡ್ಡಿದ್ದೇ ಉಲೇಮಾಗಳು ಎಂದು ಸಯ್ಯದ್ ಅಮಿರ್ ಅಲಿ ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಪೈಗಂಬರ್ ಎಂದಿಗೂ ಇದನ್ನೆಲ್ಲಾ ಹೇಳಲೇ ಇಲ್ಲ. ಸ್ವತಃ ಪೈಗಂಬರ್ ಕುಟುಂಬದಲ್ಲಿಯ ಮಹಿಳೆಯರು ಬಹಳ ಸ್ವತಂತ್ರರಾಗಿದ್ದರು. ಬುದ್ಧಿಜೀವಿಗಳಾಗಿದ್ದರು. ಕ್ರಿಯಾತ್ಮಕವಾಗಿ ಸಾರ್ವಜನಿಕವಾದ ಚರ್ಚೆ, ಸಭೆ, ಸಮಾರಂಭ ಸಂವಾದಗಳಲ್ಲಿ ಭಾಗಿಯಾಗುತ್ತಿದ್ದರು. ಮೂಲಭೂತವಾದಿಗಳಾದ ಉಲೇಮಾಗಳು ಇಸ್ಲಾಂ ಧರ್ಮದ ದೃಷ್ಟಿಕೋನಗಳನ್ನು ತಮಗೆ ಬೇಕಾದಂತೆಲ್ಲಾ ತಿರುಚಿ ಮೆರೆದಿದ್ದಾರೆ ಎನ್ನುವುದು ಸಯ್ಯದ್ ಅಮಿರ್ ಅಲಿಯವರ ಖೇದವಾಗಿದೆ.

ಆದರೆ ಪ್ರಾಚೀನ ಮುಸ್ಲಿಂ ಮಹಿಳೆಯರು ವಿದ್ಯಾವಂತರಲ್ಲದಿದ್ದರೂ ಬಹಳ ಕ್ರಿಯಾಶೀಲರಾಗಿದ್ದರು. ಚಾಣಾಕ್ಷರಾಗಿದ್ದರು. ಸಾಂಪ್ರದಾಯಿಕ ಕಲೆ, ಜಾನಪದ ಐತಿಹಾಸಿಕ ಕಥೆಗಳು, ಘಟನೆಗಳನ್ನು ರಸವತ್ತಾಗಿ ಹೇಳುವುದು ಮುಂತಾದ ಕೌಶಲ್ಯಗಳು ಹೇರಳವಾಗಿದ್ದವು.

ನಂತರದ ಬ್ರಿಟೀಷರ ಆಗಮನ ಮತ್ತು ಆಳ್ವಿಕೆ ಮುಸ್ಲಿಂ ಮಹಿಳೆಯರ ಬದುಕಿನಲ್ಲಿ ಯಾವ ಬದಲಾವಣೆಯನ್ನು ತರಲಿಲ್ಲ. ಆ ಸಂದರ್ಭದಲ್ಲಿ ಸೇನೆಯ ನಾಯಕಿಯರಾಗಿ, ಒಳ್ಳೆಯ ಆಡಳಿತಗಾರರಾಗಿಯೂ ಇದ್ದರು. ಚಾಂದ್ ಬೇಬಿ, ರಜಿಯಾ ಸುಲ್ತಾನ್‌ನಂತಹವರು ಉದಾಹರಣೆಗಷ್ಟೇ ಆದರೂ ಅದೆಷ್ಟೋ ಮಹಿಳೆಯರು ಯುದ್ಧ ಭೂಮಿಯಲ್ಲಿ ಮಡಿದಿದ್ದು ಸ್ಮರಣೀಯ. ನೂರ್‌ಜಹಾನ್ ಕೇವಲ ಚಕ್ರವರ್ತಿನಿ ಮಾತ್ರವಲ್ಲ ಶತೃಗಳಿಂದ ಪತಿ ಬಂಧಿತನಾದಾಗ ಸೇನೆಯನ್ನು ಮುನ್ನಡೆಸಿದಳು. ಪ್ರಸಿದ್ಧ ಕವಿಯತ್ರಿಯರು, ವಕೀಲರುಗಳು,ನ್ಯಾಯಧೀಶೆಯರು, ಲೇಖಕಿಯರು, ಸಾಕಷ್ಟು ಮಂದಿ ಇದ್ದರು.

ಮುಸ್ಲಿಂ ಆಳ್ವಿಕೆ ಪತನದ ನಂತರ ಮತ್ತೆ ಮುಸ್ಲಿಂ ಮಹಿಳೆಯರ ಮಾನ್ಯತೆ ಮತ್ತು ಬದುಕುಗಳ ತಿರುವುಗಳು ಬದಲಾಗುತ್ತಾ ಬಂದವು.ನಂತರ ಮುಸ್ಲಿಂ ಮಹಿಳೆಯರ ಶಿಕ್ಷಣ, ಜೀವನ ಕ್ರಮಗಳು ಬಿಗಿಯಾಗ ತೊಡಗಿದವು. ಮಹಿಳಾ ಶಿಕ್ಷಣಕ್ಕಾಗಿ ಪ್ರಯತ್ನಗಳು ನಡೆದಿಲ್ಲವೆಂದಲ್ಲ. ಹಾಗೆ ಪ್ರಪಾದಿಸುವವರನ್ನು ಮುಸ್ಲಿಂ ಸಮಾಜದವರು 'ಧರ್ಮಬಿಟ್ಟವನು' ಎಂದು ದೂರವಿಡಲು ಆರಂಭಿಸಿದರು.

ಸುಮಾರು 1896 ರ ಹೊತ್ತಿಗೆ ಸ್ತ್ರೀ ವಿದ್ಯಾಭ್ಯಾಸದ ಮಹತ್ವದ ಅರಿವು ಮೂಡಿಸುವ ಪ್ರಯತ್ನವನ್ನು ಕೆಲವು ಮುಸ್ಲಿಂ ನಾಯಕರುಗಳು ಮಾಡಿದರು. ಪರದೆಯಿದ್ದರೆ ಮಾತ್ರ ಶಾಲೆಗೆ ಕಳುಹಿಸಬಹುದೇನೋ ಎನ್ನುವ ಪೋಷಕರ ಸುಳಿವು ಅರಿತು ಹೇಗಾದರೂ ಸ್ತ್ರೀ ಶಿಕ್ಷಣ ಪ್ರಗತಿಯಾದರೆ ಸಾಕು ಎನ್ನುವ ಧೋರಣೆ ತಳೆದು ಶಾಲೆಗೆ ಬರುವ ಪ್ರತಿ ಹೆಣ್ಣು ಮಗಳೂ ಪರದೆ ತೊಟ್ಟು ಬರಬೇಕೆಂಬ ನಿಯಮ ಮಾಡಿದರು. ಇದರಿಂದ ಸ್ವಲ್ಪ ಸಮಾಧಾನ ಹೊಂದಿದ ಪೋಷಕರು ನಿಧಾನವಾಗಿ ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸತೊಡಗಿದರು. ಭೂಪಾಲದಲ್ಲಿದ್ದ ಬೇಗಂ ಆಳ್ವಿಕೆ ಶಿಕ್ಷಣಕ್ಕೆ ಇನ್ನು ಹೆಚ್ಚು ಒತ್ತು ನೀಡಿತು. ಆಕೆಯ ಸಹಕಾರ ಮತ್ತು ಅಧಿಕಾರ ಬಳಸಿ ಶಿಕ್ಷಣ ಪ್ರಚಾರದ ವೇಗ ಹೆಚ್ಚಿಸಲಾಯಿತು. ಹೆಚ್ಚು ಹೆಚ್ಚು ಮನ ಒಲಿಸಲು ಕುರಾನ್‌ನನ್ನು ಓದುವ ಸಮರ್ಪಕ ವಿಧಾನ ಹಾಗೂ ಮಹಿಳೆಯರ ಅಭಿರುಚಿಗೆ ತಕ್ಕ ವಿಷಯಗಳನ್ನು ಪಠ್ಯದಲ್ಲಿ ಸೇರಿಸಲಾಗಿದೆ ಎಂದು ಹೇಳಲಾಯಿತು.

ಅಂದಿನ ಪರಿಸ್ಥಿತಿ ನಿಭಾಯಿಸಲು ಹೆಣ್ಣು ಮಕ್ಕಳಿಗೆ ಜ್ಞಾನಾರ್ಜನೆಯೇ ದಾರಿದೀಪ ಎಂದು ನಂಬಿದ್ದ ಅನೇಕ ಮಹಿಳೆಯರು (ಬೇಗಂ ನಂತಹವರೂ ಸೇರಿ) ಮನೆಮನೆಗೆ ಹೋಗಿ ಹೆಣ್ಣು ಮಕ್ಕಳನ್ನು ಶಾಲೆಗೆ ಕರೆತರುವ ಪ್ರಯತ್ನ ಮಾಡಿದರು. ಆಧುನಿಕತೆ ಮತ್ತು ಶಿಕ್ಷಣ ಸಮಾಜದೊಳಗೆ ನುಸುಳಿದಂತೆಲ್ಲಾ ಅನೇಕ ಬದಲಾವಣೆಗಳಾಗ ತೊಡಗಿದವು. ಯುವ ಪೀಳಿಗೆ ವಿದ್ಯಾವಂತ ಪತ್ನಿಯರನ್ನು ಆಯ್ಕೆ ಮಾಡಿಕೊಳ್ಳುವ ಪರಿಪಾಠ ಬೆಳೆಯಿತು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಒಂದು ಆಂದೋಲನವೇ ಬೆಳೆಯಿತು. 'ಹಲಿ' ಎಂಬ ಪ್ರಸಿದ್ಧ ಸುಧಾರಕ ತನ್ನ ''ಹೋಮ್ ಟು ಸೈಲೆನ್ಸ್'' ಎಂಬ ಉರ್ದು ಕವನದಲ್ಲಿ ಸಮಗ್ರ ಮಹಿಳೆಯರ ಬಗೆಗಿನ ಸಮಾಜದ ಮನೋಧರ್ಮವೇ ಮೂಲತಃ ಬದಲಾಗಬೇಕು ಎಂಬ ಧ್ವನಿಯನ್ನು ತುಂಬಿಸಿದ. ಇದು ಬಹಳ ಜನಪ್ರಿಯವಾಯಿತು.'' ಪರದೆ ಧರಿಸಿ ಶಿಕ್ಷಣ ಪಡೆದ ಹುಡುಗಿಯರ ಪರಿಮಿತಿಗಳೇನೇ ಇದ್ದರೂ, ಹಳೆಯ ಸಂಪ್ರದಾಯದ ಗೋಡೆಗಳನ್ನು ಕೆಡವಿ, ತೀರಾ ಒಬ್ಬಂಟಿತನದ ಬದುಕನ್ನು ದೂರ ತಳ್ಳಿ, ಇಂತಹ ಶಾಲೆಗಳು ಸ್ತ್ರೀ ಹೊರ ಬಯಲಿಗೆ ಬಂದು ಉಸಿರಾಡುವಂತೆ ಬಾಗಿಲು ತೆರೆದವು.

ಭಾರತದ ಸಂಪ್ರದಾಯಸ್ಥರೂ ಪರಸ್ಪರ ತಮ್ಮ ಅನುಕೂಲಕ್ಕಾಗಿ ಶಾಮಿಲಾಗಿದ್ದ ಅನೇಕ ಬ್ರಿಟೀಷರೂ ಮುಸ್ಲಿಮ ಹುಡುಗಿಯರು ವಿದ್ಯೆ ಪಡೆಯುವುದನ್ನು ವಿರೋಧಿಸಿದ್ದರು.

ಕುರಾನ್ ಪ್ರಕಾರ ಮದುವೆಯ ಬಂಧನವನ್ನು ಇಷ್ಟೊಂದು ಕಟುವಾಗಿ ನೋಡಿರಲೇ ಇಲ್ಲ. ಪೈಗಂಬರರೂ ಕೂಡ ವಿಚ್ಛೇದನದ ಪರವಾಗಿ ಇರಲೇ ಇಲ್ಲ. ಆದರೂ ಒಬ್ಬ ಪುರುಷ ಕಾನೂನಿನ ಪ್ರಕಾರ ನಾಲ್ವರನ್ನು ಮಾತ್ರ ಉಳಿಸಿಕೊಂಡು ಉಳಿದವರನ್ನು 'ತಲಾಖ್' ನುಡಿದು ವಿಚ್ಛೇದನ ಕೊಡಬಹುದು ಎಂಬ ಅಂತಿಮ ನೀತಿ ನಿರೂಪಿಸಲಾಯಿತು.

ಪೈಗಂಬರ್ ಕಾಲಘಟ್ಟದಲ್ಲಿ ಅರಬ್ಬರ ಅನಾಗರೀಕ ಅರಾಜಕತೆ ಮುಗಿಲು ಮುಟ್ಟಿದಾಗ ಅಂತಹ ಸಂದರ್ಭದಲ್ಲಿ ಅವರನ್ನು ನಾಗರೀಕತೆ ತರುವ ಪ್ರಯತ್ನವನ್ನು ಪೈಗಂಬರ್ ಮಾಡಿದ. ಹೆಣ್ಣನ್ನು ಉಪಭೋಗಿಸಿ ಕೈ ಬಿಡುವುದಲ್ಲ ಅವರನ್ನು ಪೋಷಿಸಲೂಬೇಕು ಎನ್ನುವ ಮಾನ್ಯತೆ ತಂದು ಕೊಟ್ಟರು.

ಇಸ್ಲಾಂ ಧರ್ಮ ಸ್ಥಾಪಕ ಮಹಮದ್ ಪೈಗಂಬರರಿಗೆ ಮಹಿಳೆಯರ ಬಗೆಗಿದ್ದ ಆಶಯಗಳು ಪ್ರಗತಿಪರವಾಗಿಯೇ ಇದ್ದವು ಹಾಗೂ ವಿಶಾಲವಾದ, ಮಾನವೀಯತೆಯ ನೆಲೆಯಲ್ಲಿ ಹೆಣ್ಣನ್ನು ನೋಡಿದ್ದರು ಎಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಹೆಣ್ಣನ್ನು ಅತ್ಯಂತ ಶ್ರದ್ಧೆ-ಗೌರವದಿಂದ ಕಾಣಲು ಅಪ್ಪಣೆ ಮಾಡಿದ್ದಾರೆ, ಪುತ್ರ ಮತ್ತು ಪುತ್ರಿಯರಲ್ಲಿ ಆಕಾಶ-ಪಾತಾಳದ ಅಂತರ ಮಾಡುವುದನ್ನು ನಿಷೇಧಿಸಿರುವ ಉಲ್ಲೇಖಗಳಿವೆ. ಸ್ತ್ರೀಯರೊಡನೆ ಕರುಣೆಯಿಂದ ವರ್ತಿಸಬೇಕೆಂದು ಕುರಾನಿನ ನಾಲ್ಕನೆಯ ಅಧ್ಯಾಯದಲ್ಲಿದೆ. ಆದರೂ ಕಾಲಘಟ್ಟಗಳು ಉರುಳಿದಂತೆಲ್ಲಾ ಪರದೆಯೊಳಗಿನ ಅವಳ ಬದುಕು ಮಾತ್ರ ತೆರೆದು ಕೊಳ್ಳಲೇಇಲ್ಲ. ಹಾಗೆಂದ ಮಾತ್ರಕ್ಕೆ ಪರದೆಗೆ ದೊರೆತ ಮಾನ್ಯತೆಗೌರವಗಳು ಅಷ್ಟೇ ಹುಸಿಯಾದವು.

ಹಿಂದೂ ಧರ್ಮದಲ್ಲಿ ''ಸ್ತ್ರೀ ಪೂಜೆಗೆ ಅರ್ಹಳು'' ಎಂದಿರುವುದೋ ಅಥವಾ ಎಲ್ಲಿ ಸ್ತ್ರೀಯರು ಸಂತೋಷದಿಂದಿರುತ್ತಾರೋ ಅಲ್ಲಿ ದೇವತೆಗಳು ಸಂತುಷ್ಟರಾಗಿರುತ್ತಾರೆ'' ಎಂಬ ದೋಖಾತನಕ್ಕಿಂತ ಏನೂ ಭಿನ್ನವಾಗಿಲ್ಲ ಈ 'ಪರದೆ'ಗೆ ಸಿಕ್ಕಿರುವ ಮಾನ್ಯತೆ.

ಹಾಗೆಯೇ ಇತರ ಧರ್ಮಗಳಲ್ಲಿ ಮಹಿಳೆಯ ಬದುಕು ಪರಿಪೂರ್ಣವಾಗಿದೆಯೆದೇನೂ ಅಲ್ಲ. ಒಟ್ಟಾರೆಯಾಗಿ ಮಹಿಳಾ ಸಮುದಾಯವನ್ನು ಆ ಸಮಾಜ ಹೇಗೆ ನೋಡುತ್ತಿದೆ ಎನ್ನುವುದು ಅಲ್ಲಿಯ ಶಿಕ್ಷಣ ಮತ್ತು ಅವಳ ಸ್ಥಾನಮಾನದಿಂದ ಅರಿತುಕೊಳ್ಳಬಹುದಾಗಿದೆ.

21ನೇ ಶತಮಾನದ ಆಧುನಿಕತೆ ನಡುವೆಯೂ ಅನಕ್ಷರತೆ, ಬಡತನ, ಅಪೌಷ್ಟಿಕತೆ, ಹೆಣ್ಣು ಭ್ರೂಣ ಹತ್ಯೆಯಂತಹ ಸಮಸ್ಯೆಗಳು ಮಹಿಳೆಯನ್ನು ಕಾಡುತ್ತಲೇ ಇವೆ.

ಹಾಗೆಂದ ಮಾತ್ರಕ್ಕೆ ದಿಟ್ಟತನದಿಂದ ಈ ಎಲ್ಲ ಮೂಲಭೂತವಾದಿಗಳಿಗೆ, ಕಂದಾಚಾರಗಳಿಗೆ ಸೆಡ್ಡು ಹೊಡೆದು ಪ್ರಕಾಶಿಸಿದವರು ಇಲ್ಲವೆಂದಲ್ಲ. ಆದರೆ ಅವರ ಸಂಖ್ಯೆ ಅತ್ಯಲ್ಪ. ಹಾಗೆಯೇ ಮುಸ್ಲಿಂ ಸಮುದಾಯದಲ್ಲೂ ದಿಟ್ಟತನದಿಂದ, ವೈವಿಧ್ಯಮಯವಾಗಿ ಬದುಕಿದ ಮಹಿಳೆಯರ ಪಾತ್ರಗಳಿವೆ. ಉದಾಹರಣೆಗಷ್ಟೇ ಸಿಗಬಹುದಾದ ಇವರ ಸಂಖ್ಯೆ ಅತ್ಯಲ್ಪವಾದರೂ ಅವರ ಕೊಡುಗೆ ಈ ಸಮಾಜಕ್ಕೆ ಅಪಾರವಾಗಿದೆ ಹಾಗೂ ಸಿಡಿದೇಳುವ, ಕ್ರಿಯಾಶೀಲವಾಗಿುವ ಮನಸ್ಸುಗಳಿಗೆ ಅವರು ದಾರಿದೀಪವಾಗಬಲ್ಲರು. ಅಂತಹ ಕೇಲವೇ ಉದಾಹರಣೆಗಳ

ನ್ನು ಇಲ್ಲಿ ನಿರೂಪಿಸಲು ಇಚ್ಚಿಸುತ್ತೇನೆ. ಆ ರೀತಿಯ ಬದುಕುಗಳನ್ನು ರೂಪಿಸಿಕೊಳ್ಳಲು, ಪ್ರವಾಹದ ವಿರುದ್ಧ ಈಜುವ ಅವರ ದಿಟ್ಟತನದೊಳಗೆ ಅದೆಷ್ಟು ತುಮುಲಗಳು, ತುಡಿತಗಳು ಅವರ ಬದುಕಿನುದ್ದಕ್ಕೂ ಹರಿದು ಬಂದಿರಬಹುದು ಎನ್ನುವುದೂ ಕೂಡ ಮುಖ್ಯವಾದುದು.

ಜಹಾನಾರಾ ಬೇಗಂ:

ಈಗಿನ ಹೊಸದಿಲ್ಲಿಯಲ್ಲಿನ ಚಾಂದಿನಿ ಚೌಕ ವಾಸ್ತುಶಿಲ್ಪದ ಪ್ರಸಿದ್ಧ ಕೇಂದ್ರವೆನಿಸಿದೆ. ಇಲ್ಲಿನ ನೀರು ಒಂದು ಸುಂದರ ರಾತ್ರಿಯಲ್ಲಿ ಚಂದ್ರನ ಬೆಳದಿಂಗಳನ್ನು ಪ್ರತಿಫಲಿಸಿದ್ದು ಕಲ್ಪನಾತೀತವಾದುದಾಗಿತ್ತು. ಆದ್ದರಿಂದಲೇ ಇದಕ್ಕೆ ಚಾಂದಿನೀ ಚೌಕ ಎಂದು ಕರೆಯಲಾಗಿರುವುದು ಎಂದು ಹೇಳಲಾಗುತ್ತಿದೆ. ಪ್ರವಾಸಿಗರಿಗಂತೂ 'ಚಾಂದಿನೀ ಚೌಕ' ಪ್ರೀತಿ ಪಾತ್ರವಾಗಿದೆ.

ಇಂತಹ ಒಂದು ಸೃಷ್ಟಿ ಜಹಾನಾರಾಬೇಗಂಳಿಂದ ಆಗಿದ್ದು ಷಹಾಜಹಾನ ಚಕ್ರವರ್ತಿಯ ಆಡಳಿತ ಕಾಲದಲ್ಲಿ ಇದನ್ನು ಕಟ್ಟಲಾಗಿದೆ.

ಜಹಾನಾರಾಳಿಗೆ ವಾಸ್ತುಶಿಲ್ಪದಲ್ಲಿ ಅತ್ಯಂತ ಆಸಕ್ತಿಯಿತ್ತು. ಅತ್ಯಂತ ಸುಂದರ ಶಿಲ್ಪಗಳನ್ನು ಸೃಷ್ಟಿಸಿದ್ದಳು. ಅಜಮೀರದಲ್ಲಿ ಖ್ವಾಜಾ ಮೋಹಿನುದ್ದೀನ್ ಸಭಾಂಗಣವನ್ನು ಜಹಾನಾರಾಳೇ ನಿರ್ದೇಶಿಸಿ ಕಟ್ಟಿಸಿದ್ದಾಳೆ. ಆಗ್ರಾದಲ್ಲಿರುವ ಮಸೀದಿ, ಕಾಶ್ಮೀರದ ಮುಲ್ಲಾಬಡಾಕ್ಷಿಯೂ ಕೂಡ ಜಹಾನಾರಾಳ ಪ್ರತಿಭೆ ಮತ್ತು ಆಸಕ್ತಿಗೆ ಸಾಕ್ಷಿಯಾಗಿ ನಿಂತಿವೆ. ಇದರೊಂದಿಗೆ ಇವಳು ಲೇಖಕಿಯೂ ಆಗಿದ್ದಳು. ಚಿಸ್ತಿ ಸಂತ ಹಾಗೂ ಅವನ ಶಿಷ್ಯರ ಬಗೆಗೆ ಜೀವನ ಚರಿತ್ರೆ ಬರೆದು ಅತ್ಯಂತ ಖ್ಯಾತಳಾಗಿದ್ದಳು. ಈ ಸಾಹಿತ್ಯವು ಮುನಿಸ್ ಅಲ್ ಅರವಾಹ್‌ದಲ್ಲಿ ಸೇರಿಕೊಂಡಿದೆ.

ಜಹಾನಾರಾ ತನಗಾಗಿ ನಿಜಾಮುದ್ದೀನ್ ಜಾಲಿಯಾದರ್ಗಾದಲ್ಲಿ ಒಂದು ಸರಳವಾದ ಸಮಾಧಿಯನ್ನು ಸಹ ಕಟ್ಟಿಸಿಕೊಂಡಿದ್ದಳು. ಪ್ರತಿಭೆಗಳು ನಾಲ್ಕು ಗೋಡೆಗಳೊಳಗೆ ಅಥವಾ ನಿರ್ಬಂಧಿತ ಪರದೆಯೊಳಗೆ ಹೂತು ಹೋಗದಿದ್ದರೆ ಅದೆಂಥಹ ಸೃಷ್ಟಿ ಸಾಧ್ಯ ಎನ್ನುವುದಕ್ಕೆ ಜಹಾನಾರಾ ನಮ್ಮೊಂದಿಗಿರುವ ಒಂದು ಕಿರಣವೇ ಸರಿ.

ರಜಿಯಾ ಸುಲ್ತಾನ್:

ಭಾರತದ ಇತಿಹಾಸದಲ್ಲಿಯೇ ಮಹಿಳೆಯೊಬ್ಬಳು ಆಡಳಿತವನ್ನು ನಡೆಸಿದ ಕೀರ್ತಿಗೆ ಪಾತ್ರಳಾದವಳು ರಜಿಯಾಸುಲ್ತಾನಾ. ಇನ್ನು ಕುಮಾರಿಯಾಗಿರುವಾಗಲೇ ರಜಿಯಾ ದಿಲ್ಲಿ ಸಿಂಹಾಸನವನ್ನೇರಿದಳು. ಮಧ್ಯಯುಗದಲ್ಲಿ ದಿಲ್ಲಿ ದರಬಾರಿನಲ್ಲಿ ಚಾಣಾಕ್ಷತೆಯಿಂದ ಖ್ಯಾತಿ ಪಡೆದವಳು ರಜಿಯಾ ಸುಲ್ತಾನಾ.

ಬಾಲ್ಯದಿಂದಲೇ ರಜಿಯಾ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾ ಬೆಳೆದವಳು. ಅವಳ ರೀತಿ, ನೀತಿ, ಧೈರ್ಯ, ಸಾಹಸ, ಬುದ್ಧಿವಮತಿಕೆಗಳು ಯಾರಿಗೇನೂ ಕಡಿಮೆಯಿರಲಿಲ್ಲ. ಯುದ್ಧ ಕಲೆಯಲ್ಲಿ ಸಹ ರಜಿಯಾ ಪರಿಣತಿ ಸಾಧಿಸಿದ್ದಳು. ಆ ಕಾಲದಲ್ಲಿ ದಿಲ್ಲಿ ಸಿಂಹಾಸನದ ಅಡಿಯಾಳಾಗಿದ್ದ ಪಂಜಾಬ್, ಬಂಗಾಳ, ಬಿಹಾರ ಮತ್ತು ದೇಶದ ಇತರ ಭಾಗದಲ್ಲಿ ಗುಲಾಮರ ಆಡಳಿತವಿತ್ತು.

ರಜಿಯಾ ಪುರುಷರಂತೆ ವೇಷಭೂಷಣ ಧರಿಸಿ ಸಿಂಹಾಸನದಲ್ಲಿ ಕುಳಿತು ಸ್ವತಃ ಆಡಳಿತ ನಡೆಸುತ್ತಿದ್ದಳು. ಮುಂದಾಲೋಚನೆಯಿದ್ದ ರಜಿಯಾ ಅತ್ಯಂತ ವಿವೇಕಿಯಾಗಿದ್ದಳು. ತನಗೆ ಸರಿತೋರಿದ್ದನ್ನು ಮಾಡಲು ಹಿಂಜರಿಯುತ್ತಿರಲಿಲ್ಲ. ಆದರೆ ಒಬ್ಬ ಮಹಿಳೆಯು ಆಡಳಿತ ನಡೆಸಿದರೆ ತಮಗೆ ತೊಂದರೆ ತಪ್ಪಿದ್ದಲ್ಲ ಎಂದು ಮಂತ್ರಿ ಗಳು, ಸೇನಾಪತಿಗಳು ಆಲೋಚಿಸಿದರು.

ರಜಿಯಾ ಒಬ್ಬ ಗುಲಾಮ ಯಾಕತ್‌ನನ್ನು ಪ್ರೀತಿಸುತ್ತಿದ್ದಳು. ಇಲ್ಲಿಯೂ ಅವಳು ಎಲ್ಲ ತತ್ವಗಳನ್ನು ಮೀರಿದ 'ಪ್ರೀತಿ'ಗೆ ಶರಣಾಗಿದ್ದಳು. ಗೌರವಿಸಿದ್ದಳು. ಅವಳ ಈ ದಿಟ್ಟತನವನ್ನು ಸಹಿಸದ ಎಲ್ಲರೂ ಅವಳ ವಿರುದ್ಧ ದಂಗೆ ಎಬ್ಬಿಸುವ ಹುನ್ನಾರ ಮಾಡಿದರು.

ಅಭಿಸಿನಿಯಾದ ಜಲಾವುದ್ದೀನ್ ಯಾಕತ್‌ನನ್ನು ಪ್ರೀತಿಸಿದ ಕಾರಣವನ್ನು ಮುಂದೆ ಮಾಡಿ ಟರ್ಕರು ರಾಣಿಯನ್ನು ಗುಲಾಮನನ್ನು ದ್ವೇಷ ಮಾಡುತ್ತಾ ದಂಗೆ ಎಬ್ಬಿಸಿದರು. ಲಾಹೋರ್ ಮತ್ತು ಭತಿಂಡ್‌ಗಳಲ್ಲಿ ದಂಗೆಗಳಾದವು. ರಜಿಯಾ ಅವರ ಗೊಡ್ಡು ಬೆದರಿಕೆಗಳಿಗೆ ಮಣಿಯಲೇ ಇಲ್ಲ. ಆ ದಂಗೆಯನ್ನು ನಿಯಂತ್ರಿಸಿದಳು. ಲಾಹೋರದಲ್ಲಿಯೂ ಸ್ವತಃ ತಾನೇ ಆ ದಂಗೆಯನ್ನು ನಿಯಂತ್ರಿಸಲು ಸೆಣಸಾಡಿದಳು. ಭತಿಂಡದ ಸುಬೇದಾರ ಅಲ್ತೂನಿಯನ್ನು ಸೋಲಿಸಿ ದೆಹಲಿಗೆ ಹಿಂತಿರುಗುವಾಗಲೇ ೧೨೪೦ ರಲ್ಲಿ ವಂಚಕರಿಂದ ಕೊಲ್ಲಲ್ಪಟ್ಟಳು.

ಸಾಧಾರಣವಾಗಿ ಆಳುವ ಅರಸ ತೀರಿಕೊಂಡಾಗ ಸಹೋದರರಿಲ್ಲದಿದ್ದಾಗ ರಾಣಿಯರು ಅಧಿಕಾರ ವಹಿಸಿಕೊಂಡ ಇತಿಹಾಸ ಭಾರತದಲ್ಲಿ ಅಪರಿಚಿತವೇನೂ ಅಲ್ಲ. ಆದರೆ ಕುಮಾರಿಯಾದ, ಸಾಧಾರಣ ಮನೆತನದ ಹೆಣ್ಣಾಗಿ ಮಧ್ಯೆಯುಗದಲ್ಲಿ ಅತ್ಯುತ್ತಮ ಆಡಳಿತ ನೀಡಲು ಬಯಸಿದ ವೀರ ಮಹಿಳೆ ರಜಿಯಾ ಸುಲ್ತಾನಾ ಇತಿಹಾಸದಲ್ಲಿಯೇ ಆಡಳಿತದಲ್ಲಿ ಗಟ್ಟಿಗಳೂ, ಪ್ರೀತಿಯಲ್ಲಿ ಮಾನವಳೂ ಆಗಿ ಮೆರೆದಿದ್ದಾಳೆ.

ಹಲವು ಪ್ರಮುಖ ಧರ್ಮಗಳ ಅಧ್ಯಯನದ ನಿಟ್ಟಿನಲ್ಲಿ ಸ್ಪರ್ಶಿಸಲು ಸಾಧ್ಯವಾಗಿರುವ ಕೆಲವು ಮುಖ್ಯ ಅಂಶಗಳು ಈ ಅಧ್ಯಾಯದಿಂದ ಸ್ಪಷ್ಟವಾಗಿವೆ. ಈ ತರಹದ ಧಾರ್ಮಿಕ ಪರಿಕಲ್ಪನೆಗಳನ್ನು ಬದಲಾಯಿಸದೇ ಮಹಿಳೆಯರ ಬದುಕನ್ನು ಅಭಿವೃದ್ಧಿಗೊಳಿಸುತ್ತೇವೆ ಎನ್ನುವುದು ಅದೆಷ್ಟು ಹಾಸ್ಯಾಸ್ಪದ ಎನ್ನಿಸುತ್ತಿದೆ.

''ಹೆಣ್ಣನ್ನು ನರಕಕ್ಕೇ ದಾರಿ'' ಎಂದ 'ಭಗವಾನ್' ಶಂಕರಾರ್ಯರಂತಹ, ''ಅವಳು ಸೈನಾತನ ಬಾಗಿಲು, ದೈವೀ ನಿಯಮ ಅಥವಾ ಧರ್ಮವನ್ನು ಪರಿತ್ಯಜಿಸುವ ಮೊಟ್ಟ ಮೊದಲ ವ್ಯಕ್ತಿ'' ಎಂದ ಯುರೋಪಿನ ಪ್ರಸಿದ್ಧ ಲ್ಯಾಟಿನ್ ಧರ್ಮ ಬೋಧಕ ಟ್ಯಾರ್‌ಟ್ಯೂಲಿಯನ್ ಆಗಲೀ, 'ನಾಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದು ಘರ್ಜಿಸಿದ ಮನುವಾಗಲೀ, ಜನಕನ ಆಸ್ಥಾನದಲ್ಲಿ ಪಂಡಿತೆಯಾಗಿ ಗಟ್ಟಿಗಳಾದ ಗಾರ್ಗಿಯು ತತ್ವಶಾಸ್ತ್ರಕ್ಕೆ ಸಂಬಂಧಿಸಿ ಪ್ರಶ್ನೆಗಳ ಸುರಿಮಳೆಗೆರೆದಾಗ ಹೆಚ್ಚಿನ ಪ್ರಶ್ನೆ ಕೇಳಿದರೆ 'ಅವಳ ತಲೆ ನೂರು ಹೋಳಾದೀತು' ಎಂದು ಯಾಜ್ಞವಲ್ಕನಾಗಲೀ, ಅಥವಾ ಇಲ್ಲಿಯವರೆವಿಗೂ ವಿಶ್ಲೇಷಿಸಿದ ಯಾವ ಧರ್ಮಗಳೂ ಮಹಿಳೆಯನ್ನು ಮನುಷ್ಯಳನ್ನಾಗಿ ನೋಡಲು ಸಾಧ್ಯವೇ ಆಗಿಲ್ಲ. ಜಾಗತಿಕವಾಗಿ ಪಾಶ್ಚಾತ್ಯರಲ್ಲಿ ಪ್ರಭಾವ ಬೀರಿರುವ ಧರ್ಮಗಳೂ ಇದರಿಂದ ಹೊರತಾಗಿಲ್ಲ ಎನ್ನುವುದರಿಂದಮಹಿಳೆ ಎರಡನೇ ದರ್ಜೆಯವಳಾಗಿಯೇ ಬದುಕುತ್ತಿದ್ದಾಳೆ ಎನ್ನುವುದು ಕಟುವಾಸ್ತವವಾಗಿದೆ.

ಹಾಗಾಗಿಯೇ ಈ ಧರ್ಮಗಳು ಮಹಿಳೆಯನ್ನು ಮನುಷ್ಯಳಾಗಿ ನೋಡಿಯೂ ಇಲ್ಲ. ಅವಳದ್ದೊಂದು ಬದುಕು ಕಟ್ಟಿಕೊಳ್ಳಲು ಅವಳನ್ನು ವ್ಯಕ್ತಿಯಾಗಿ ರೂಪಿಸಿಯೇ ಇಲ್ಲ. ಹೆಣ್ಣನ್ನು ಭೋಗದ ವಸ್ತುವಾಗಿಯೋ, ಮಕ್ಕಳ ಹೇರುವ ಯಂತ್ರವಾಗಿಯೋ, ದಾಸಿಯಾಗಿಯೋ, ಪುರುಷನ ಮುಕ್ತಿಗೆ-ಸಂತೋಷಕ್ಕಾಗಿಯೋ, ಕ್ರಿಯಾಶೀಲೆಯಾಗಿಯೋ, ಉದ್ದಕ್ಕೂ ಚಿತ್ರಿಕರಿಸಲಾಗಿದೆ.

ಭೂಮಿಯ ಮೇಲೆ ಗುಲಾಮಳಾಗಿದ್ದು ಸಾಲದೆಂಬಂತೆ ಸತ್ತವನ ಹಿಂದೆಯೇ ಗುಲಾಮಳನ್ನು ಸಜೀವವಾಗಿ ದಹಿಸಿ ಸತಿಯಾಗಿಸಿ, ಅದನ್ನು ವೈಭವೀಕರಿಸುವ, ಅವಳ ಹೆಸರಲ್ಲಿ ದೇವಾಲಯ ಕಟ್ಟಿಸುವಂತಹ ಶಕ್ತಿಗಳು 21ನೇ ಶತಮಾನದಲ್ಲೂ ಈ ಭಾರತದ 'ಪುಣ್ಯಭೂಮಿ'ಯಲ್ಲಿ ಮೆರೆಯುತ್ತಿದ್ದಾರೆ ಎಂದರೆ ಈ 'ಧರ್ಮ' ಅದೆಂಥಹ ಕ್ರೂರತೆಯನ್ನು ಮೆರೆಯುತ್ತಿದೆ ಎನ್ನುವುದರ ಅರಿವು ಮಹಿಳಾ ಸಮುದಾಯಕ್ಕಾಗಬೇಕಿದೆ.

'ಹೆಣ್ಣು ಎಲ್ಲಿ ಸಂತೋಷವಾಗಿರುತ್ತಾಳೋ ಅಲ್ಲಿ ದೇವತೆಗಳು ಸಂತುಷ್ಟರಾಗುತ್ತಾರೆ' ಎಂದು ಬೊಗಳೆ ಬಿಡುವ ಈ ಧರ್ಮಗಳು ಮತ್ತು ಅದರ ಹರಿಕಾರರು ಈ ಪ್ರಶ್ನೆಗೆ, ಈ ದ್ವಂದ್ವಗಳಿಗೆ, ಮುಖವಾಡಗಳ ಬಗ್ಗೆ ಉತ್ತರ ನೀಡಿಯಾರೆ?

೧೯೭೮ ರಿಂದ ೮೩ ರವರೆಗೆ (ಗಾರ್ಡಿಯನ್ ೪-೧೧-೮೬) ಭಾರತದಲ್ಲಿ ೭೮,೦೦೦ ಸ್ತ್ರೀ ಭ್ರೂಣ ಹತ್ಯೆಗಳು ನಡೆದಿವೆ ಎಂದು ವರದಿಯಾಗಿದೆ.

ಇವೆಲ್ಲಾ ಒಂದು ಸ್ಯಾಂಪಲ್ ಅಷ್ಟೆ. ದಿನನಿತ್ಯವೂ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಾಳೆ, ಕೊಲೆಯಾಗುತ್ತಾಳೆ, ಶಿಕ್ಷಣದಿಂದ ವಂಚಿತಳಾಗುತ್ತಾಳೆ, ಎಲ್ಲಕ್ಕಿಂತಲೂ ಹೆಚ್ಚಾಗಿ ತಾಯಗರ್ಭದಲ್ಲೇ ಹರಿದುಹೋಗಿ ಬಿಡುತ್ತಾಳೆ.

ಸಾಮಾನ್ಯ ಮಹಿಳೆಯ ಸ್ಥಿತಿಗತಿಯೇ ಹೀಗಿರುವಾಗ ಈ ಧರ್ಮಾಂಧರ ಬಿಳಿಲುಗಳೆಲ್ಲಾ, ಬೇರುಗಳಾಗಿ, ಬೇರುಗಳೆಲ್ಲಾ ಆಳಕ್ಕಿಳಿದು ತನ್ನ ಆಳದ ಸತ್ವವನ್ನು ಪೂರೈಕೆ ಮಾಡಿ ಸಲಹುತ್ತಿರುವ ಈ ಸಮಾಜದಲ್ಲಿ 'ವೇಶ್ಯೆಯರ' ಪರಿಸ್ಥಿತಿ ಹೀಗಿರುವುದರಲ್ಲಿ ಆಶ್ಚರ್ಯವೇನಿದೆ? ಹೆಣ್ಣನ್ನೇ ಹೊಲವನ್ನಾಗಿಸಿಕೊಂಡು ಮಾಲೀಕರಾಗಿ ಬೇಲಿ ಹಾಕಿಕೊಂಡಿರುವ ಮನಸ್ಸುಗಳು ಆ ಮಹಿಳೆಯರಲ್ಲಿ ಅದೆಷ್ಟು ಪಾಪಪ್ರಜ್ಞೆಯನ್ನು, ಹಾಗೂ ನೈತಿಕ, ಧಾರ್ಮಿಕ ಕೀಳರಿಮೆಗಳನ್ನು ತುಂಬಿಬಿಟ್ಟಿವೆ ಎನ್ನುವುದು ಸ್ಪಷ್ಟವಾಗುತ್ತದೆ. ಇದೆಲ್ಲದರ ನಡುವೆ ಮಹಿಳೆಗೆ, ವ್ಯಕ್ತಿಯ ಸ್ಥಾನ ನೀಡಿ ಸಮಾನವಾದ ಗೌರವಗಳೊಂದಿಗೆ ಮಹಿಳೆಯ ಸಬಲೀಕರಣ ಸಾಧ್ಯ ಎಂದಿರುವ ಬೌದ್ಧ ಧರ್ಮ ಇಲ್ಲಿ ಮಾದರಿಯಾಗುತ್ತದೆ. ಅದರಲ್ಲೂ ವೇಶ್ಯಾವಾಟಿಕೆಯಂತಹ ಸಂಕೀರ್ಣತೆಯೊಳಗಿನ ಬದುಕುಗಳಿಗೆ ಒಂದು ಸ್ಪಷ್ಟವಾದಂತಹ ಸಬಲೀಕರಣದ ಮಾರ್ಗದರ್ಶನವನ್ನು ಬೌದ್ಧ ಧರ್ಮ ವಿಶ್ಲೇಷಿಸುತ್ತದೆ.

ಈ ನಿಟ್ಟಿನಲ್ಲಿ ಈ ವೃತ್ತಿಯ ಸಾಂಸ್ಕೃತಿಕವಾದಂತ ಹಿನ್ನೆಲೆ ಅವರ ಬದುಕನ್ನು ಅರ್ಥೈಸಿಕೊಳ್ಳಲು ಹಾಗೂ ಬದುಕನ್ನು 'ಕಟ್ಟಿಕೊಳ್ಳುವ' ಪ್ರಯತ್ನಗಳನ್ನು ರೂಪಿಸಲು ಸಾಧ್ಯವಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಸಿಖ್ ಧರ್ಮ:

ನಾನಕದೇವ ಸ್ಥಾಪಿಸಲ್ಪಟ್ಟ ಸಿಖ್ಖ ಮತಧರ್ಮವೂ ಕೂಡ ಭಾರತದ ಮಹಿಳೆಯರ ಬಗ್ಗೆ ಪ್ರಗತಿಪರ ಮನೋಭಾವ ರೂಪಿಸಿರುವುದೂ ಕೂಡ ಒಂದು ಗುಣಾತ್ಮಕ ಅಂಶವಾಗಿದೆ. ಬಹುಶ್ರೇಷ್ಠ ವ್ಯಕ್ತಿಯಾಗಿದ್ದ ನಾನಕದೇವ ಗುರುನಾನಕನಾಗಿಯೇ ಎಲ್ಲರ ಮನದಲ್ಲಿ ಅಚ್ಚೊತ್ತಿದ್ದ. ಇದೂ ಕೂಡ ಭೌಗೋಳಿಕ ಪರಿಮಿತಿಯನ್ನು ಹೊಂದಿದ್ದರೂ ಬಸವಣ್ಣನಂತೆ ಸಮಾಜದಲ್ಲಿನ ದುರಾಚಾರ, ದೌರ್ಜನ್ಯಗಳ ವಿರುದ್ಧ ಸಮರಸಾರಿದ್ದು ಮತ್ತು ಸಮುದಾಯವನ್ನು ಅಣಿನೆರೆಸಿದ್ದು ಸ್ಮರಣೀಯವಾದದ್ದು. ಅಂದಿನ ಪಂಜಾಬ್ ರಾಜಕೀಯ, ಧಾರ್ಮಿಕ, ಸಾಮಾಜಿಕ ಪಲ್ಲವುಗಳಿಗೆ, ವಲಸೆಗಾರರಿಗೆ, ಆಕ್ರಮಣಗಳಿಗೆ ಒಳಗಾಗಿತ್ತು. ಗುರುನಾನಕನ ಮನಸ್ಸು ಕುಲಗೆಟ್ಟು ಆಡಳಿತ ಹಾಗೂವಿರೂಪವಾದ ತನ್ನ ಮೂಲಧರ್ಮದ ವಿರುದ್ಧ ಬಂಡೆದ್ದಿತ್ತು.

ಗುರನಾನಕನಿಗೆ ಸ್ತ್ರೀಯರ ಬಗೆಗೆ ಅಪಾರ ಗೌರವವಿತ್ತು. ಆಕೆಯ ಸ್ಥಾನಮಾನದ ಔನತ್ಯವನ್ನು ಸಮರ್ಥಿಸುತ್ತಿದ್ದ. ಸ್ತ್ರೀಯರ ಸಾಮರ್ಥ್ಯಗಳನ್ನು ಅರ್ಥಮಾಡಿಕೊಂಡು ಗುರುನಾನಕ ಅವುಗಳನ್ನು ಈ ಸಮಾಜದ ಹಾಗೂ ತನ್ನ ವ್ಯಕ್ತಿತ್ವವನ್ನು ಸಮರ್ಥನೀಯವಾಗಿ ರೂಪಿಸಿಕೊಳ್ಳಲು ಮಹಿಳೆಯರಿಗೆ ಸ್ಫೂರ್ತಿ ನೀಡಿದಂತ ಪ್ರಗತಿಪರ ಚಿಂತಕನಾಗಿದ್ದ. ಹಾಗೂ ಮುಂಬರುವ ಧರ್ಮಗುರುಗಳೂ ಕೂಡ ಈ ಹಾದಿಯಲ್ಲಿಯೇ ಚಿಂತಿಸುವಂತಹ ಭದ್ರ ಬುನಾದಿಯನ್ನು ಹಾಕಿದ. ಇದು ಇಂದಿನ ಸಮಾಜದ ನಾಯಕರುಗಳು ಮತ್ತು ಧರ್ಮಗುರುಗಳು ಮಾಡಬೇಕಾಗಿರುವ ಆದ್ಯ ಕರ್ತವ್ಯ. ಅದನ್ನು ಗುರುನಾನಕ್ ಅರ್ಥೈಸಿಕೊಂಡಿದ್ದನು.

ಆ ನಿಟ್ಟಿನಲ್ಲಿ ಸ್ತ್ರೀಯರನ್ನು ಅಲಕ್ಷ್ಯ ಮಾಡುವುದು ಸಂಪ್ರದಾಯಬದ್ಧ ಸಿಖ್ಖರಿಗೆ ನಿಷಿದ್ಧ, ಅಷ್ಟೇ ಅಲ್ಲ ಹಾಗೆ ಮಾಡುವವರೊಡನೆ ಸಂಪರ್ಕ ಇಟ್ಟುಕೊಳ್ಳುವುದೂ ಅವರಿಗೆ ಉಚಿತವಲ್ಲ.

ಸಿಖ್ಖರ ಪವಿತ್ರ ಗ್ರಂಥವಾದ 'ಗುರುಗ್ರಂಥ ಸಾಹೇಬ'ದಲ್ಲಿ ಪರದೆಯ ಹಾಗೂ ಇನ್ನಿತರ ಕುರೂಪಿ ಪದ್ಧತಿಗಳ ವಿರುದ್ಧ ಆದೇಶಗಳಿವೆ. ತನ್ನ ಸಂಗಾತಿಯನ್ನು ತಾನೇ ಆರಿಸಿಕೊಳ್ಳಲು ಹೆಣ್ಣಿಗೆ ಸ್ವಾತಂತ್ರ್ಯ ನೀಡಲಾಯಿತು. ಅತಿ ದುಂದುವೆಚ್ಚದ ಮದುವೆಗಳು ಹೆಣ್ಣು ಶಿಶು ಹತ್ಯೆಗೆ ಕಾರಣವಾಗುತ್ತಿದ್ದವಾದ್ದರಿಂದ ಮದುವೆಗಳನ್ನು ತುಂಬಾ ಸರಳ ಸಮಾರಂಭಗಳನ್ನಾಗಿಸಿದ್ದು ಗುರುನಾನಕರ ಚಿಂತನಾ ಶಕ್ತಿ ಮೆಚ್ಚುವಂತಹುದ್ದು.

ಧರ್ಮ ಶ್ರದ್ಧೆ ಪ್ರಸಾರ ಕಾರ್ಯದಲ್ಲಿಯೂ ಸ್ತ್ರೀಯರನ್ನು ಸೇರಿಸಿಕೊಂಡಿದ್ದರಿಂದ ಇಡೀ ಸಮುದಾಯದ ಮಹಿಳೆಯರನ್ನು ಅಣಿ ನೆರೆಸಲು ಮತ್ತು ಪ್ರಗತಿಪರವಾಗಿ ರೂಪಿಸಲು ಸಾಧ್ಯವಾಯಿತು.

ಸಮಾನತೆ ಸಾರಿದ ಬಸವಣ್ಣ:

ಸ್ತ್ರೀ ವಿಮೋಚನೆಯ ಬಗ್ಗೆ ಆರೋಗ್ಯಕರವಾದ ಕಾಳಜಿಯಿಟ್ಟುಕೊಂಡು ಬಂದ ಬಸವಣ್ಣ, 12ನೇ ಶತಮಾನದ ಕೊನೆಯಲ್ಲಿ ಸಾಮಾನ್ಯ ಹಿನ್ನಲೆಯೊಂದರಿಂದ ಬಂದು ಇಡೀ ಕರ್ನಾಟಕದಲ್ಲಿ ಅನೇಕ ಮೂಢನಂಬಿಕೆಗಳನ್ನು ಖಂಡತುಂಡಾಗಿ ತಿರಸ್ಕರಿಸಿದ. ಬಾಲ್ಯವಿವಾಹ, ಸತಿ ಪದ್ಧತಿಯಂತವುಗಳು ಹಿಂದೂ

ಧರ್ಮಕ್ಕೆ ಮತ್ತುತ್ತರುವಂಥಹ ಸಾಂಪ್ರದಾಯಗಳಿಂದು ಆತ ಮನಗಂಡಿದ್ದ. ಸ್ತ್ರೀಯರ ಹಕ್ಕು ಬಾಧ್ಯತೆಗಳ ಬಗ್ಗೆ ಬಹಳ ಸ್ಪಷ್ಟತೆಯಿದ್ದ ಬಸವಣ್ಣ ಸ್ತ್ರೀಯರ ಸ್ವತಂತ್ರ ವ್ಯಕ್ತಿತ್ವ, ಸಂಗಾತಿಯನ್ನು ಆರಿಸುವ ಹಕ್ಕು, ವಿಧವಾವಿವಾಹ, ಪರಿಸ್ಥಿತಿಗಳು ಒತ್ತಡ ತಂದಾಗ ವಿಚ್ಛೇದನದ ಹಕ್ಕು... ಹೀಗೆ ಅತ್ಯಂತ ಪ್ರಾಮಾಣಿಕವಾಗಿ ಬದಲಾವಣೆಯ ಹರಿಕಾರನಾಗಿ ಈ ಸಮಾಜದಲ್ಲಿ ಒಂದು ಹೊಸ ಕ್ರಾಂತಿಯೆಬ್ಬಿಸಿದ. ಜಾತಿ ಪದ್ಧತಿಯ ವಿರುದ್ಧ ಬಂಡಾಯವೆದ್ದ ಬಸವಣ್ಣ ಅನೇಕ ಅಂತರ್‌ಜಾತಿ ವಿವಾಹಗಳನ್ನು ಮಾಡಿಸಿದ. ಅನೇಕ ಮಹಿಳೆಯರೂ ಸೇರಿದಂತೆ ಒಂದು ದೊಡ್ಡ ಸಮೂಹವೇ ಬಸವಣ್ಣನೊಂದಿಗೆ ಟೊಂಕಕಟ್ಟಿ ನಿಂತರು. ಅನೇಕ ಮಹಿಳೆಯರು ವಚನಕಾರ್ತಿಯರಾದರು. ಸರಳತೆ, ಪ್ರಾಮಾಣಿಕತೆಗಳನ್ನು ಮುಖ್ಯವಾಗಿರಿಸಿಕೊಂಡಿದ್ದ ಬಸವಣ್ಣ ತನು, ಮನ ಶುದ್ಧಿಗಳ ಬಗ್ಗೆ ಸ್ಪಷ್ಟಪಡಿಸುತ್ತಿದ್ದ ಧರ್ಮದ ಹೆಸರಲ್ಲಿ ಕೊಳಕು ಮನಸ್ಸುಗಳನ್ನು ಹೊಂದಿ ಕಾರ್ಯಾಚರಣೆಯಲ್ಲಿ ಆಡಂಭರ, ಡೋಂಗಿ ಮಾಡುತ್ತಿದ್ದವರನ್ನು ಗೇಲಿ ಮಾಡಿ ಬಿಸಾಡಿದ.

ಬಹಳ ಮುಖ್ಯವಾದದ್ದೆಂದರೆ ಅಸಂಖ್ಯ ಸ್ತ್ರೀ ಅನುಯಾಯಿಗಳು ಬಂಡುಗಾರರು, ಸ್ವತಂತ್ರ ವ್ಯಕ್ತಿತ್ವದವರು, ವಿಮೋಚನೆಗಾಗಿ ಹೋರಾಡಿದವರು ಇಲ್ಲಿ ಸ್ಮರಣೀಯವಾಗುತ್ತಾರೆ. ಭೌಗೋಳಿಕವಾಗಿ ಈ ಆಂದೋಲನ ಪರಿಮಿತಿಯನ್ನು ಹೊಂದಿತ್ತಾದರೂ ಆ ವಿಚಾರಧಾರೆಗಳು ಸಾರ್ವಕಾಲಿಕವಾದವು.

ಈ ಅಧ್ಯಯನದಲ್ಲಿ ಬಸವಣ್ಣ ಏಕೆ ಮುಖ್ಯವಾಗುತ್ತಾನೆಂದರೆ 12ನೇ ಶತಮಾನದಲ್ಲೂ ವೇಶ್ಯೆಯರು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ನಿಂದನೆಗೆ ಒಳಗಾಗುವುದರೊಂದಿಗೆ ಮಾನಸಿಕ ದೌರ್ಜನ್ಯಕ್ಕೂ ಒಳಗಾಗಿದ್ದರು.

ಇಂತಹ ಮನಸ್ಥಿತಿಯಲ್ಲಿದ್ದ ಅತಂತ್ರ, ದುಗುಡಗಳಿಂದ ಜರ್ಜರಿತರಾಗಿದ್ದ ಅನೇಕ ವೇಶ್ಯೆಯರನ್ನು ಬಸವಣ್ಣ ಮಾನವತೆಯ ನೆಲೆಗಟ್ಟಿನಲ್ಲಿ ನೋಡಿದ. ಅಷ್ಟೇ ಅಲ್ಲ ಅವರನ್ನು ತನ್ನ ಗುಂಪಿಗೆ ಸೇರಿಸಿಕೊಂಡಿದ್ದು, ಆ ಆಂದೋಲನದ ಹರಿಕಾರರಾಗಿ ಅವರು ಮುನ್ನುಗ್ಗಿದ್ದು ಐತಿಹಾಸಿಕವಾದಂತಹುದ್ದು. ಹಾಗೂ ಅನೇಕ ವೇಶ್ಯೆಯರು ಬರೆದ ವಚನಗಳು ಅಂತರಾಳದ ನೋವಿನ ಹೆಪ್ಪುಗಳನ್ನು ಒಡೆದು ಹೊರಬಂದಿದ್ದವು. ಸಮಾಜದ ಕಣ್ತೆರೆಸುವಂತಿದ್ದವು.

ಇಂತಹ ಕ್ರಾಂತಿಕಾರಿ ಬದಲಾವಣೆ ಮಾಡಿದ ಬಸವಣ್ಣ ಆ ಮಹಿಳೆಯರನ್ನು ಸಮಾನವಾಗಿ ರೂಪಿಸಲು ಎಂದೂ, ಯಾರಿಗೂ ಹಿಂಜರಿಯಲಿಲ್ಲ. ಈ ವಿಚಾರದಲ್ಲಿ ಬಸವಣ್ಣ ಅತ್ಯಂತ ಉತ್ಕೃಷ್ಟವಾದ, ಬದುಕುಗಳನ್ನು ಕಟ್ಟಿಕೊಡುವ ವಿಚಾರಧಾರೆಗಳ ಆಧಾರ ಸ್ತಂಭವಾಗಿದ್ದಾನೆ.

ತಾಂತ್ರಿಕರ ಪ್ರಭಾವ:

ಬೌದ್ಧ ಧರ್ಮದ ನಂತರ ಸ್ವಲ್ಪ ಪ್ರಾಬಲ್ಯಗಳಿಸಿದವರು. ತಾಂತ್ರಿಕರ ಪ್ರಭಾವ ಸ್ತ್ರೀ ಸಾಮರ್ಥ್ಯವೇ ಪುರುಷನಿಗಿಂತ ಹೆಚ್ಚಿನದೆಂಬ ಅವರ ಧೋರಣೆ ಸಕಾರಾತ್ಮಕವಾಗಿ ಪರಿಗಣಿಸುವಂತೆ ಮಾಡಿದೆ. ಪುರುಷನ

ಮೂಲದ್ರವ್ಯ ಜಡವೆಂತಲೂ ಸ್ತ್ರೀ ದ್ರವ್ಯ ಕ್ರಿಯಾತ್ಮಕವೆಂತಲೂ, ಇದರಿಂದಲೇ ಸಕಲ ಕ್ರಿಯಾ ಶಕ್ತಿಗಳೂ ಹರಿದು ಬಂದುವೆಂತಲೂ ಪ್ರತಿಪಾದಿಸಿದರು. ಹೆಣ್ಣನ್ನು ಶಕ್ತಿ ದೇವತೆಯೆಂದೇ ಆರಾಧಿಸಿದರು. ಸ್ತ್ರೀ ನಿಂದೆ ಕಠೋರ ಶಿಕ್ಷೆಗೆ ಗುರಿಯಾಗುತ್ತಿತ್ತು. 'ಸತಿ' ಇತ್ಯಾದಿಗಳು ಉಗ್ರ ಟೀಕೆಗೆ ಗುರಿಯಾದವು. ಅತ್ಯಾಚಾರಕ್ಕೆ ಮರಣ ದಂಡನೆಯೇ ಶಿಕ್ಷೆಯಾಗಿತ್ತು.

ಈ ವಿಚಾರಗಳು ಮಹಿಳಾ ಸಮುದಾಯಕ್ಕೆ ಉತ್ತೇಜಕವಾಗಿದ್ದರೂ ಇವರ ಪ್ರವಚನ-ಕಲಿಕೆ, ಗ್ರಂಥಗಳ ಹಂಚಿಕೆ, ಜವಾಬ್ದಾರಿ ವಿಂಗಡನೆಗಳಲ್ಲಿನ ಕಟ್ಟು ಪಾಡುಗಳು ವಿಶಾಲ ಸಮುದಾಯವನ್ನು ಎಂದಿಗೂ ತಲುಪಲೇ ಇಲ್ಲ. ಹಾಗೂ ಸಾಕಷ್ಟು ಮೂಲಭೂತವಾದಿಗಳು ತಮ್ಮ ಪ್ರಾಭಲ್ಯ ಮೆರೆದಿದ್ದ, ಬೇರು ಬಿಟ್ಟಿದ್ದ ಕಾಲದ ವಿರುದ್ಧ ಸೆಣೆಸಾಡುವಂತಹ ವೈಶಾಲ್ಯತೆಯ ಕೊರತೆಯೂ ಇವರಲ್ಲಿದ್ದುದರಿಂದಲೇ ಜನ ಸಾಮಾನ್ಯರ ಬದುಕಿಗೆ ಸ್ಪಂದಿಸಲಿಲ್ಲ.

ಭಾರತೀಯ ನಾರಿ: ಪ್ರಾಚೀನ ಯುಗದಿಂದ ಆಧುನಿಕದವರೆಗೆ

''ಭಾರತೀಯ ನಾರಿ ಅನೇಕ ಸಾಮಾಜಿಕ ಸ್ತರಗಳ, ಐತಿಹಾಸಿಕ ಯುಗಗಳ ಮತ್ತು ರಾಜಕೀಯ ಪರಿಸ್ಥಿತಿಗಳ ಮೂಲಕ ಹಾದು ಬಂದಿದ್ದಾಳೆ. ಬೆಂಕಿಯನ್ನು ನೀರನ್ನು ಆಕೆ ಒಂದೇ ರೀತಿಯಲ್ಲಿ ದಾಟಿ ಬಂದಿದ್ದಾಳೆ. ಸೇವೆಯೇ ಅವಳ ಸ್ವಭಾವವಾಗಿದೆ; ತ್ಯಾಗವೇ ಅವಳ ಪಾಥೇಯವಾಗಿದೆ-ಅಂದರೆ, ಬಾಳಿನ ಬುತ್ತಿಯಾಗಿದೆ. ಅವಳ ಇತಿಹಾಸದ ಯುಗಗಳು ಅಥವಾ ಸ್ಥರಗಳು ಸ್ಥೂಲ ರೂಪದಲ್ಲಿ ಹೀಗಾಗಬಹುದು; ವೈದಿಕಯುಗ, ವೀರಕಾವ್ಯಯುಗ, ಉಪನಿಷತ್‌ಯುಗ, ಸೂತ್ರಯುಗ ಮತ್ತು ರಾಜಪೋತ ಯುಗ. ಭಾರತೀಯ ನಾರಿ ಈ ಯುಗಗಳಲ್ಲಿ ಅನುಕ್ರಮವಾಗಿ ಸಾಧಿಸಿದ ಮುನ್ನಡೆ ಅಥವಾ ಅನುಭವಿಸಿದ ಹಿನ್ನಡೆಯ ಕಥೆಯನ್ನು ಇಲ್ಲಿ ನಿರೂಪಿಸುತ್ತೇನೆ. ಕಥೆ ಉದಾತ್ತವಾಗಿದೆ; ಕರುಣಾಜನಕವಾಗಿದೆ, ಕಠೋರವಾಗಿಯೂ ಇದೆ.''[2]

ಭಗವತ್‌ಶರಣ ಉಪಾಧ್ಯಯರ ಈ ಮೇಲಿನ ಅಭಿಪ್ರಾಯ ವಾಸ್ತವತೆಯ ಕನ್ನಡಿಯಂತಿದೆ. ಋಗ್ವೇದ ಕಾಲದ ಮಹಿಳೆ ಅತಿ ಎತ್ತರಕ್ಕೆ ಬೆಳೆದು ನಿಂತಿದ್ದಳು. ಆಸ್ತಿಯ ಹಕ್ಕು, ಬಾಳ ಸಂಗಾತಿಯನ್ನು ತಾನೇ ಆಯ್ಕೆ ಮಾಡಿಕೊಳ್ಳುವ ಹಕ್ಕು, ಮನೆಯ ಒಡತಿಯಾಗಿ ವಿಜೃಂಭಿಸಿದ್ದಾಳೆ. ವಿದ್ಯೆ ಕಲಿಯುವಲ್ಲಿ ಯಾವ ತಾರತಮ್ಯವೂ ಇಲ್ಲದ ಆ ಕಾಲಘಟ್ಟ ಬಹಳ ಪ್ರಗತಿಪರವಾಗಿಯೇ ಹೆಣ್ಣನ್ನು ಬದುಕಿನ ಸಮಪಾಲುದಾರಳಾಗಿಸಿದೆ.

ಋಗ್ವೇದದ ಅಧ್ಯಾಯವೊಂದರಲ್ಲಿ ಪೌಲೋಮ ಅಭಿಮಾನಪೂರ್ವಕವಾದ ವಾಕ್ಯಾವಳಿಯಲ್ಲಿ ಹೀಗೆಂದು ಹೇಳುತ್ತಾಳೆ; ''ಸೂರ್ಯ ಆಕಾಶದ ನಡು ನೆತ್ತಿಗೇರುವಂತೆ, ನನ್ನ ಸೌಭಾಗ್ಯವು; ಊರ್ಧ್ವಮುಖಿಯಾಗಿ ಪರಿಣಮಿಸಿದೆ, ನನ್ನ ಸವತಿಯರು ಮಣ್ಣಿನಲ್ಲಿ ಬಿದ್ದು ಹೊರಳಾಡುತ್ತಿದ್ದಾರೆ. ನನ್ನ ಮಕ್ಕಳು ದಿಕ್ಕುಗಳಿಗೆ ಒಡೆಯರಾಗಿದ್ದಾರೆ. ನನ್ನ ಪತಿಯಾದ ಇಂದ್ರ ನಾನು ಅರ್ಪಿಸಿದ ಹವಿಸ್ಸಿನಿಂದಲೇ ಶಕ್ತಿಯನ್ನು ಪಡೆದುಕೊಳ್ಳುತ್ತಾನೆ.''[3]

ಈ ಅಭಿವ್ಯಕ್ತಿ ಜೊತೆಯಲ್ಲೇ ಪತನದ ಬೀಜವೂ ಅಡಗಿದೆ. ಭಾರತೀಯ ನಾರಿಯ ಪಾಲಿಗೆ ವಿಷವೃಕ್ಷವಾಗಿ ಋಗ್ವೇದದಲ್ಲಿ ಉಷಸ್, ರಾತ್ರಿ, ಪೃಥ್ವಿ, ಸರಸ್ವತಿ, ಕುಹೂ, ಬೃಹಸ್ಪತಿ ಮುಂತಾದ ಸ್ತ್ರೀ ದೇವತೆಗಳನ್ನು ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಪ್ರಸ್ತಾಪಿಸಿರುವುದೇ ಅವರು ಮಹಿಳೆಗೆ ಕೊಟ್ಟಿದ್ದ ಸ್ಥಾನಮಾನದ ಪ್ರತೀಕವಾಗಿದೆ.

ಹೆಣ್ಣು ಸಂತಾನವನ್ನು ಎಂದಿಗೂ ತಿರಸ್ಕರಿಸದ ಆ ಸಮಾಜ ಹೆಣ್ಣನ್ನು ಅತ್ಯುನ್ನತವಾಗಿ ಪರಿಗಣಿಸಿತ್ತು. ಇನ್ನು ಶಿಕ್ಷಣ ವೆಂದರೆ ಸ್ತ್ರೀ ಸಂಕೇತವಾಗಿ, ಸರಸ್ವತಿಯೆಂದೇ ಸಂಭೋದಿಸಲ್ಪಡುತ್ತಿತ್ತು. ಋಷಿಗಳು ತಮ್ಮ ಅರ್ಧಾಂಗಿಯನ್ನು ಬೌದ್ಧಿಕ ಸಾಧನೆಗಳಿಗಾಗಿ ತೊಡಗಿಸುತ್ತಿದ್ದರು. ಮಹತ್ತರವಾದ ಸಭೆ ಸಮಾರಂಭಗಳಲ್ಲಿಯೂ ಸ್ತ್ರೀ ಸಮಾನವಾಗಿ ಭಾಗವಹಿಸುತ್ತಿದ್ದಳು. ಧಾರ್ಮಿಕ ಸಹಚರ್ಯೆಯೂ ಅಂದಿನ ಸ್ತ್ರೀ ಪುರುಷರ ನಡುವೆ ಇತ್ತು. ಧರ್ಮ, ಕಲೆ, ವಿಜ್ಞಾನ, ರಾಜಕೀಯ ಎಲ್ಲ ಕ್ಷೇತ್ರಗಳಲ್ಲಿಯೂ ಸ್ತ್ರೀ ತನ್ನ ಪ್ರಭಾವ ಬೀರಿದ್ದಳು.

ಕೃಷಿ, ಕೈಗಾರಿಕೆ, ವಿದ್ವತ್ಪೂರ್ಣ ಚರ್ಚೆ, ಅಧ್ಯಾಪಕ ವೃತ್ತಿ, ಎಲ್ಲದರಲ್ಲೂ ಹೆಣ್ಣು ಪ್ರವೀಣೆ. ಅಥರ್ವವೇದದಲ್ಲಿ ಹೆಣ್ಣಿಗೆ ಸಿಗುವ ಶಿಕ್ಷಣದ ಮೇಲೆಯೇ ಅವಳ ಬದುಕಿನ ಯಶಸ್ಸು ಹೊಂದಿಕೊಂಡಿದೆ ಎಂದು ಉಲ್ಲೇಖಿಸಿದೆ. ''ಎಲೆ ಸ್ತ್ರೀಯೇ, ಎದ್ದೇಳು, ನಿರ್ಜೀವ ಪತಿಯಿಂದ ದೂರ, ಜೀವಂತ ಬದುಕಿಗೆ ಬಾ'' ಋಗ್ವೇದದಲ್ಲಿ ವಿಧವೆಯನ್ನು ಸಂಬೋಧಿಸುತ್ತಾ ಹೇಳಿರುವುದು ಅಂದಿನ ಮಾನವ ಪ್ರೀತಿಯ ಸಂಕೇತವಾಗಿದೆ.

ಅಂದಿನ ಹೆಣ್ಣು ಆತ್ಮ ವಿಶ್ವಾಸ, ಆತ್ಮಗೌರವ ಬೆಳೆಸಿಕೊಂಡಿದ್ದಳು. ನಂತರದ ಕಾಲಪ್ರವಾಹದಲ್ಲಿ ಋಗ್ವೇದದ ನಾರಿ ಅಧೋಗತಿಯತ್ತಲೇ ಮುನ್ನಡೆದಳು. ಜೂಜುಗಾರರು ಹೆಣ್ಣನ್ನೇ ಪಣ ಒಡ್ಡ ತೊಡಗಿದರು. ಋಗ್ವೇದ ಕಾಲದ ಕೊನೆಯ ಹಂತ ರಾಮಾಯಣ ಮತ್ತು ಮಹಾಭಾರತಗಳ ಮೊದಲ ಹಂತಗಳ ನಾರಿ ಅನುಭವಿಸಿದ ಅಧೋಗತಿ ಸತತವಾಗಿ ಮುಂದುವರಿಯಿತು. ದೇವದಾಸಿ ನೃತ್ಯದಂತಹ ಅನೇಕ ಪ್ರಕಾರಗಳು ಗೌರವಾನ್ವಿತವಾಗಿ ಹುಟ್ಟಿ ಬಂದರೂ ಇತರೆ ಅನೇಕ ಪದ್ಧತಿಗಳಂತೆ ಭ್ರಷ್ಟರೂಪ ತಳೆದವು.

''ಕ್ರಿ.ಪೂ. 300 ರ ನಂತರದ ಆರ್ಯರ ಯುಗದಲ್ಲಿ ಸಮಾಜ ಜಾತಿ ಪದ್ಧತಿಯ ಸಿಕ್ಕಿನೊಳಗೆ ಸಿಲುಕಿ, ಸ್ತ್ರೀ ಸ್ವಾತಂತ್ರ್ಯ ಮೊಟಕಾದದ್ದನ್ನು ಕಾಣುತ್ತೇವೆ. ಈ ಅವನತಿಯ ಕಾಲದಲ್ಲಿ ಹೆಂಗಸರು ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಹೇಗೆ ಕಳೆದುಕೊಂಡರೆಂಬುದರ ಕುರಿತು ಅನೇಕ ಅಭಿಪ್ರಾಯಗಳಿವೆ. ಅಮಾಯಕ ಕನ್ಯೆಯರು ಆರ್ಯ ಮನೆತನಗಳಿಗೆ ವಿವಾಹವಾಗಿ ಬರಲು ಸಾಮಾಜಿಕ ಒಪ್ಪಿಗೆ ಸಿಕ್ಕಿದ್ದು ಈ ಬಗೆಗಿನ ಪಿತೂರಿಗಳಲ್ಲೊಂದು ಎಂದು ಪರಿಗಣಿಸಬಹುದು. ಅಂತಹ ಹುಡುಗಿಯರು ನೀಚ ಕುಲದವರೆಂದು ಪರಿಗಣಿಸಲ್ಪಟ್ಟು ಹಲವಾರು ಹಕ್ಕುಗಳಿಂದ ವಂಚಿತರಾದರು. ಸಂಸ್ಕೃತ ಜ್ಞಾನವಿಲ್ಲದ, ಶಾಲೆಯ ಹೊಸಲಿನ ಹೊರಗೇ ಉಳಿದ ಅವರು ಗ್ರಂಥಗಳನ್ನು ಓದಲು ಅಶಕ್ತರಾದರು. ಅತಿ ಪುನೀತವೆಂದು ಗೌರವಿಸಲ್ಪಡುವ ಗಾಯತ್ರೀ ಮಂತ್ರಕ್ಕೂ ಹೊರತಾದರು.''[4]

ತನ್ನ ಕಪಿ ಮುಷ್ಠಿಯಲ್ಲಿಟ್ಟುಕೊಂಡು ಮುನ್ನಡೆಸುತ್ತಿರುವ ಅನೇಕ ಧರ್ಮಗಳು ಭಾರತದಂತಹ ವ್ಯವಸ್ಥೆಯಲ್ಲಿ ಹೆಣ್ಣನ್ನು ತನ್ನ ಕಾಲ್ತುಳಿತಕ್ಕೆ ಸಿಕ್ಕಿಸಿಕೊಂಡಿವೆ. ಈ ವ್ಯವಸ್ಥೆ ಹೆಣ್ಣನ್ನು ದಾಸಿಯನ್ನಾಗಿ, ಭೋಗದ ವಸ್ತುವನ್ನಾಗಿ ನಿರಂತರವಾಗಿ ಭೋಗಿಸುತ್ತಲೇ ಬಂದಿವೆ. ಈ ನಿಟ್ಟಿನಲ್ಲಿಯೇ ಹೆಣ್ಣು ಮಗಳಾಗಿ/ ಹೆಂಡತಿಯಾಗಿ/ತಾಯಿಯಾಗಿ/ ಗೃಹಿಣಿಯಾಗಿ ಆದರ್ಶವನ್ನು ಮೆರೆಯಬೇಕೆಂದು ಈ ವ್ಯವಸ್ಥೆ ನಿರೀಕ್ಷಿಸುತ್ತದೆ. ಇದಾವ ಪಾತ್ರವೂ ಇಲ್ಲದವಳು ವೇಶ್ಯೆಯಾಗಿಯಾದರೂ ಪಾತ್ರ ನಿರ್ವಹಿಸಲೇ ಬೇಕು. ಈ ನಿಟ್ಟಿನಲ್ಲಿ ಈ ವ್ಯವಸ್ಥೆಯಲ್ಲಿ ಪ್ರಾಚೀನದಿಂದ ಆಧುನಿಕದವರೆಗೂ ಎಲ್ಲಾ ಕಾಲಘಟ್ಟಗಳಲ್ಲಿಯೂ ಹೆಣ್ಣು ಭೋಗದ ವಸ್ತುವಾಗಿ ಪುರುಷನ ಭೋಗಲಾಲಸೆಯನ್ನು ಪೂರೈಸುತ್ತಾ ಬಂದ ಒಂದು ಪರಂಪರೆಯೇ ನಮ್ಮೊಂದಿಗಿದೆ.

ಸಮಾಜವನ್ನಾಳುವ ಪಿತೃ ಪ್ರಧಾನ ಮೌಲ್ಯ ಪುರುಷನಿಗೆ ಲೈಂಗಿಕ ಸಂಗಾತಿಗಳ ಮುಕ್ತ ಅವಕಾಶವನ್ನು ಕಲ್ಪಿಸಿ ಮಹಿಳೆಗೆ ಆ ಸೌಲಭ್ಯವನ್ನು ನಿರಾಕರಿಸುವ ಮೂಲಕ ಭೇದ, ಭಾವ ಪೂರಿತವಾದ ನೀತಿಯನ್ನು ಅನುಸರಿಸುವುದೇ ಅಲ್ಲದೆ ಲೈಂಗಿಕ ವೃತ್ತಿ ಮಹಿಳೆಯರು ಬಹು ಲೈಂಗಿಕ ಸಂಗಾತಿಗಳನ್ನು ಹೊಂದುವುದನ್ನು ಸಮಾಜಬಾಹಿರವೆಂದು, ಅನೀತಿಯುತವಾದುದ್ದೆಂದು, ಕಳಂಕಪೂರಿತವೆಂದು, ಅಧಾರ್ಮಿಕವೆಂದೂ ಹೇಳುವ ಮೂಲಕ ತಮ್ಮ ಭೋಗ ಸುಖಕ್ಕೆ ಮುಕ್ತ ಅವಕಾಶವನ್ನು ಈ ಸಮಾಜ ಕಲ್ಪಿಸಿದೆ. ಅವರು ಮಹಿಳೆಯರನ್ನು ದುರ್ಬಲರು, ಅವಲಂಬಿತರು, ಅನೀತಿಯುಳ್ಳವರು, ವಿಚಾರರಹಿತರು ಎಂದು ಪರಿಭಾವಿಸಿ ಅವರನ್ನು ನಿರ್ದೇಶಿಸುವ ಮತ್ತು ನಿಯಮ ವಿದೇಯರಾಗಿಸುವ ನೀತಿಗಳಿಗೆ ಮುಂದಾಗುತ್ತಾರೆ. ಈ ಪಿತೃ ಪ್ರಧಾನ ತತ್ವಗಳಿಗೆ ಬಲಿಯಾಗಿ ಪುರುಷರು ಮಹಿಳೆಯರನ್ನು ಮರ್ಧಿಸುವುದನ್ನು ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಲು ಅತ್ಯಗತ್ಯವಾದ ಸಾಮಾಜಿಕ ಮೌಲ್ಯವೆಂಬಂತೆ ಪ್ರತಿಬಿಂಬಿಸಲಾಗಿದೆ. ಈ ಮೌಲ್ಯಗಳೇ ಆ ಗಿರಾಕಿಗಳನ್ನು, ಮಹಿಳೆಯರನ್ನು, ಆಳುವುದರಿಂದ ಅವರುಗಳು ಈ ಕೀಳರಿಮೆಯ ಪಾಪಪ್ರಜ್ಞೆಯಲ್ಲಿ ತೊಳಲಾಡಿದರೂ ಈ ವೃತ್ತಿಯ ಎಲ್ಲ ಅಪಖ್ಯಾತಿಯನ್ನು ಮಹಿಳೆಯ ಮೇಲೆ ಧಾರಾಕಾರವಾಗಿ ಸುರಿದು ಅವಳನ್ನು ಈ ಸಮಾಜ ಕಳಂಕಗಳ ಮಹಾ ಪ್ರತಿರೂಪದಂತೆ ಚಿತ್ರಿಸುತ್ತದೆ. ಲೈಂಗಿಕತೆ ಪುರುಷ ಮತ್ತು ಮಹಿಳೆ ನಡುವೆ ಒಂದು ಸಮಾನ, ಆರೋಗ್ಯ ಪೂರ್ಣ ಸಂಬಂಧದ ಅಡಿಪಾಯವಾಗುವುದರ ಬದಲು ಅದು ಅಸಮಾನತೆಯನ್ನು ಹೆಚ್ಚಿಸುವ ಮತ್ತು ಅತಿ ನಿಯಂತ್ರಣಕ್ಕೊಳಪಡುವ ಒಂದು ಸಾಮಾಜಿಕ ಕ್ರಿಯೆಯಾಗಿ ಈ ಅನಿಷ್ಟಗಳಿಗೆಲ್ಲಾ ಕಾರಣವಾಗಿದೆ.

ಸಾಮಾಜಿಕ ಮನೋಭಾವ ಈ ಸಮಸ್ಯೆಯ ಎಲ್ಲ ಅವಘಡಗಳಿಗೆ ಕಾರಣ. ಈ ಸಮಾಜ ಇಂತಹ ಲೈಂಗಿಕ ವೃತ್ತಿಯನ್ನು ಕೌಟುಂಬಿಕ ವ್ಯವಸ್ಥೆಗೆ ವಿರೋಧವಾದುದ್ದೆಂದು ಪರಿಭಾವಿಸುತ್ತದೆ. ಧರ್ಮದಿಂದ ಹಿಡಿದು ಸಾಂಪ್ರದಾಯಿಕ ಶಿಕ್ಷಣದವರೆಗಿನ ಎಲ್ಲ ಸಾಮಾಜಿಕ ಸಂಸ್ಥೆಗಳು ಈ ವೃತ್ತಿಯನ್ನು ಕೀಳಾಗಿ ಕಾಣುವ ಮನೋಭಾವವನ್ನೇ ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿವೆ. ಈ ಸಂಬಂಧದಲ್ಲಿ ವಿವಾಹಿತ ಮಹಿಳೆಯ ಲೈಂಗಿಕತೆಯನ್ನು ಮಾತ್ರ ವಿವಾಹದ ಪ್ರಮುಖ ಭಾಗವಾಗಿ ಪರಿಭಾವಿಸಿ ಮಹಿಳೆಯನ್ನು ವೇಶ್ಯೆಯ ವಿರುದ್ಧ ಮುಖಾಮುಖಿಯಾಗಿಸುವ ನೀತಿಯನ್ನುಂಟು ಮಾಡಿವೆ. ಅದನ್ನು ಹೆಂಡತಿ ಮತ್ತು ವೇಶ್ಯೆ, ಪತಿತೆ ಮತ್ತು ಕಳಂಕಿತೆಯ ಸಂಘರ್ಷವನ್ನಾಗಿಸಿದೆ. ಇವರೀರ್ವರೂ ಪುರುಷರ ಆಕಾಂಕ್ಷೆಯ ತೃಪ್ತಿಗಾಗಿ ಬಡಿದಾಡುವ

ಸನ್ನಿವೇಶವನ್ನುಈ ಸಾಮಾಜಿಕ ನಿಯಮ ಸೃಷ್ಟಿಸಿದೆ. ಪತಿತೆ ಹೆಂಡತಿಗೆ ಲೈಂಗಿಕ ಸುಖವನ್ನು ಗೌಣವಾಗಿಸಿ ಅವಳ ತಾಯ್ತನ ಮತ್ತು ಗೃಹಕೃತ್ಯವನ್ನು ಒಂದು ತುದಿಯಲ್ಲಿ ಪ್ರಧಾನವಾಗಿಸಿ ಮತ್ತೊಂದು ತುದಿಯಲ್ಲಿ ಲೈಂಗಿಕ ವೃತ್ತಿ ಮಹಿಳೆಯನ್ನು ಮಹಿಳಾ ಭಾವನೆಗಳಿಂದ ಹೊರತಾದ ಯಾವುದೇ ಕೌಟುಂಬಿಕ ಆಕಾಂಕ್ಷೆಯೇ ಇಲ್ಲದೆ ಭೋಗಿಸುವ ಲೈಂಗಿಕ ಯಂತ್ರವನ್ನಾಗಿ ಇಡುತ್ತದೆ. ಒಬ್ಬ ಮಹಿಳೆಯ ಒಳ್ಳೆಯತನವನ್ನು ಅವಳು ತನ್ನ ಲೈಂಗಿಕ ಆಕಾಂಕ್ಷೆಯನ್ನು ನಿಯಂತ್ರಿಸುವ, ಗೌಪ್ಯವಾಗಿರಿಸಿಕೊಳ್ಳುವ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಆದರೆ ಪುರುಷನಿಗೆ ಹೆಂಡತಿಯಿಂದ ಸಂತಾನ ಹೊಂದುವ, ಗೃಹ ನಿಭಾಯಿಸುವ ಅಗತ್ಯಗಳ ಪೂರೆಕೆಯಾಗಲು ಅವಕಾಶ ಕಲ್ಪಿಸುವುದೇ ಅಲ್ಲದೆ, ಅವನ ಅತ್ಯಂತ ವೈವಿದ್ಯಮಯವಾದ ಆಕಾಂಕ್ಷೆಗಳ ಪೂರೈಕೆಯನ್ನು ಲೈಂಗಿಕ ವೃತ್ತಿ ಮಹಿಳೆಯರಿಂದ ಪಡೆಯಲೂ ಅವಕಾಶ ಕಲ್ಪಿಸಿದೆ.


ಅಡಿ ಟಿಪ್ಪಣಿಗಳು:

1. Meena Kelkar: Deepti Gangavane: Feminism in serach of an Identity. page :121.

2. ಭಗವತ್ ಶರಣ ಉಪಾಧ್ಯಾಯ, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ ಪುಟ:278

3.ಋಗ್ವೇದ: 10, 125.

4. ಕಮಲಾ ದೇವಿ ಚಟ್ಟೋಪಾಧ್ಯಾಯ, ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ. ಪುಟ. 19



ಅಧ್ಯಾಯ: ೫

ಜನಪದ ಮತ್ತು ಬುಡಕಟ್ಟು ಸಮುದಾಯಗಳ ಧಾರ್ಮಿಕ ಮತ್ತು ಆಚರಣಾತ್ಮಕ ಲೈಂಗಿಕ ಸಂಪ್ರದಾಯಗಳು



ಜನಪದ ಮತ್ತು ಬುಡಕಟ್ಟು ಸಮುದಾಯಗಳ ಧಾರ್ಮಿಕ ಮತ್ತು ಆಚರಣಾತ್ಮಕ ಲೈಂಗಿಕ ಸಾಂಪ್ರದಾಯಗಳು ವೇಶ್ಯಾವಾಟಿಕೆ ಪರಂಪರೆ ಮತ್ತು ಸಮಸ್ಯೆಗಳು ಅಧ್ಯಯನಕ್ಕೆ ಬಹಳ ಪ್ರಮುಖವಾಗುತ್ತವೆ. ತಳಪಾಯವೆಂದೇ ಹೇಳಬಹುದಾಗಿದೆ. ಒಂದೆಡೆ ಮಾನವ ಜೀವಿಯ ಕೆಲವು ಬುಡಕಟ್ಟು ಸ್ವಭಾವ ಮತ್ತು ಲಕ್ಷಣಗಳು ಹುಟ್ಟಿನಿಂದಲೇ ಬಂದವುಗಳಾಗಿವೆ. ಇನ್ನು ಜೀವನ ಶೈಲಿ, ಆಚರಣೆಗಳು, ಬದುಕಿನೊಂದಿಗೆ ಸಾಗಿಬಂದ ನಂಬಿಕೆಗಳ ಆಧಾರದಲ್ಲಿರುತ್ತದೆ. ಇಂತಹ ಆಚರಣೆಗಳಲ್ಲಿ ಲೈಂಗಿಕ ಆಚರಣೆಗಳು ಮನುಷ್ಯನ ಬದುಕಿನುದ್ದಕ್ಕೂ ಹಾಸು ಹೊಕ್ಕಾಗಿವೆ. ಅದರಲ್ಲೂ ಬುಡಕಟ್ಟು ಜನಾಂಗಗಳಿಂದ, ಜನಪದ ಸಮುದಾಯಗಳ ಬದುಕಿನೊಂದಿಗೆ ಹರಿದು ಬರುತ್ತಿರುವ ಧಾರ್ಮಿಕ ಮತ್ತು ಆಚರಣಾತ್ಮಕ ಲೈಂಗಿಕ ಸಾಂಪ್ರದಾಯಗಳ ಬಗ್ಗೆ ಅಧ್ಯಾಯದಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡುತ್ತಿದ್ದೇನೆ.

ಜನಪದ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಆರಾಧನೆ ಮತ್ತು ಆಚರಣೆಗಳ ಅಂಗವಾಗಿ ಹುಟ್ಟಿಕೊಂಡ ಕೆಲವು ಸಂಪ್ರದಾಯಗಳು ಮುಂದೆ ಲೈಂಗಿಕ ಚಟುವಟಿಕೆಯ ಕೇಂದ್ರಗಳಾಗಿ ಪರಿವರ್ತನೆ ಹೊಂದಿದ ವಿವರಗಳನ್ನು ಈ ಅಧ್ಯಾಯನದಲ್ಲಿ ನೀಡಲಾಗಿದೆ. ಇಂತಹ ಧಾರ್ಮಿಕ ಆವರಣದ ಮನೋಭಾವವನ್ನು ಪಟ್ಟಭದ್ರರು ಮತ್ತು ಪ್ರತಿಷ್ಠಿತರು ಕ್ರಮೇಣ ಶೋಷಣೆಯ ಭಾಗವನ್ನಾಗಿ ಮಾಡಿಕೊಂಡ ಬಗೆಯನ್ನು ಕೂಡ ಈ ಅಧ್ಯಾಯನದಲ್ಲಿ ವಿಶ್ಲೇಷಿಸಲಾಗಿದೆ. ದೇವದಾಸಿಯರು, ಬಸವಿಯರು, ಜೋಗತಿಯರು, ಪಾತರದವರು ಮುಂತಾದ ಅನೇಕ ಸಮುದಾಯಗಳಲ್ಲಿ ಇಂದಿಗೂ ಲೈಂಗಿಕ ವೃತ್ತಿ ಅಂಟಿಂಕೊಂಡುಬಂದ ಜಾಡ್ಯವಾಗಿಯೇ ಉಳಿದಿರುವ ಪರಿಸ್ಥಿತಿಯನ್ನು ಪರಿಚಸುವ ಪ್ರಯತ್ನವೂ ಇಲ್ಲಿ ನಡೆದಿದೆ. ಡಿ.ಡಿ. ಕೊಸಾಂಬಿಯವರು ಅಭಿಪ್ರಾಯ ಪಡುವಂತೆ ಬುಡಕಟ್ಟುಗಳ ಲೈಂಗಿಕ ಆಚರಣೆಗಳಲ್ಲಿ ಬಹಳ ಪ್ರಧಾನವಾದುದುದ 'ಕುಂಭಪೂಜೆ'. 'ಕುಂಭ' ಶಬ್ಧ ಪುಲ್ಲಿಂಗ ವಾಚಕವಾದರೂ ಅದು ಸೂಚಿಸುವುದು ಮಾತ್ರ ಮಾತೃದೇವತೆಯ ಪರಿಕಲ್ಪನೆಯನ್ನು. ಪ್ರಾಚೀನದಲ್ಲಿ ಮಡಕೆ ಮಾಡುತ್ತಿದ್ದವರು ಮಹಿಳೆಯರು. ಮಡಕೆ ತಯಾರಿಕೆಯಲ್ಲಿ ಚಕ್ರದ ಬಳಕೆ ಬಂದು ಬೃಹತ್ ಪ್ರಮಾಣದ ತಯಾರಿಕೆ ಪ್ರಾರಂಭವಾಗುವ ಮುನ್ನ ಮಹಿಳೆಯರೇ ಕೈಯಿಂದ ಮಡಕೆ ತಯಾರಿಸುತ್ತಿದ್ದರು.

ಮಡಕೆ ಮಾತೃದೇವತೆಯ ಆರಾಧನೆಯಲ್ಲಿ ಲೈಂಗಿಕ ಆರಾಧನೆ ಕೂಡ ಅಡಕವಾಗಿದೆ. ಈ ಮಡಕೆಯ ಮೇಲೆ ಮಾಡುವ ಅಲಂಕಾರಗಳೂ ಕೂಡ ಮಾತೃದೇವಾರಾಧನೆಯ ಪ್ರಭಾವದಿಂದ ಬಂದಂತವುಗಳು ಬಣ್ಣಗಳಿಂದ ಕೆಲವು ನೈಜವಾದ ಮಾತೃದೇವತಾ ರೂಪದ ಅಂಗಗಳನ್ನೇ ಬಿಂಬಿಸುತ್ತಾರೆ.

ವಿಶ್ವಕೋಶಗಳು ಕುಂಭ ಎಂಬ ಪದವನ್ನು ವೇಶ್ಯ ಎಂಬ ಅರ್ಥದಲ್ಲಿ ಬಳಸುತ್ತವೆ. ಮೆಸಪಟೋಮಿಯಾದ ಕಲ್ಲು ಕೆತ್ತನೆಯೊಂದರಲ್ಲಿ 'ಈಯಾ' ಅಥವಾ ಅವನ ಸೇವಕ ಹಿಡಿದಿರುವ ಮಡಕೆಯಿಂದ ಎರಡು ನದಿಗಳು ಹರಿಯುತ್ತಿರುವಂತೆ ಚಿತ್ರಸಲಾಗಿದೆ. ಇನ್.ಬಿ.ಒರ್ನ್‌ಸ್ಟ್ರು ಗುರುತಿಸಿರುವಂತೆ ನೀರು ಹರಿಯುತ್ತಿರುವ ಮಡಕೆಯೂ ಫಲವತ್ತತೆಯ ಸಂಕೇತ. ಮರಿಯಾ ಮಸ್ತ್ರಳ ವಿಗ್ರಹವು ಮಡಕೆ ಹಿಡಿದುಕೊಂಡಿದೆ.

ಬ್ರಿಟೀಷ್ ಸಂಗ್ರಹಾಲಯದ ಮೊಹರಿನಲ್ಲಿ ಮರಿಯಳ ಭುಜಗಳಿಂದ ಎರಡು ನದಿಗಳು ಹರಿದು ಹೋಗುತ್ತಿರುವಂತೆ ಚಿತ್ರಿಸಲಾಗಿದೆ. ಹಾಗಾಗಿ ಮಡಕೆಯು ಆಕೆಯ ವಿಶೇಷವಾದ ಫಲವತ್ತತೆಯ ಸಂಕೇತವಾಗಿದೆ. ಹಾಗಾಗಿಯೇ ಅದು ಗರ್ಭವನ್ನು ಸಂಕೇತಿಸುತ್ತದೆ. ಯಶಸ್ಸನ್ನು ಪಡೆಯಲು ಇಚ್ಛಿಸುವವರು ನೀರುತುಂಬಿದ ಉದಕ ಕುಂಭಕ್ಕೆ ಭಕ್ತಿಪೂರ್ವಕವಾಗಿ ಕೈ ಜೋಡಿಸುತ್ತಾರೆ. ಇದರಿಂದಾಗಿಯೇ ವಿವಾಹವಾಗುತ್ತಿರುವ ದಂಪತಿಗಳು ನೀರುತುಂಬಿದ ಕೊಡವನ್ನು ಹಿಡಿದುಕೊಂಡು ಪ್ರದಕ್ಷಿಣೆ ಹಾಕುವಂತೆ ಮಾಡಲಾಗುತ್ತದೆ. ಕಥಾಸರಿತ್ಸಾಗರದ ಪ್ರಕಾರ (70-112) ಕುಂಭ ಅಥವಾ ಘಟ ಎಂದರೆ ಗರ್ಭ ಎಂದೇ ಅರ್ಥ. ಮಾತೃದೇವತೆಗಳಿಗಾಗಿ ಅಶ್ವಯುಜದ ಮೊದಲ ದಿನ ಆಚರಿಸುವ ನವರಾತ್ರಿಯ ಫಲವತ್ತತೆಯ ಹಬ್ಬವನ್ನು ಘಟಸ್ಥಾಪನೆಯೊಂದಿಗೇ ಪ್ರಾರಂಭಿಸುವುದಕ್ಕೆ ಇದು ಸ್ಪಷ್ಟವಾದ ವಿವರಣೆ ನೀಡುತ್ತದೆ.''2

ದಕ್ಷಿಣ ಭಾರತದ ಅನೇಕ ಹಬ್ಬಗಳಲ್ಲಿ ಮಾತೃದೇವತೆಗೆ ಬದಲಾಗಿ ಕಳಶಗಳನ್ನು ಬಳಸುವ ಪರಿವಾರ ಇಂದಿಗೂ ಇದೆ. ಬೆಂಗಳೂರಿನ ಕರಗ ಮಹೋತ್ಸವ ಅದಕ್ಕೊಂದು ಉದಾಹರಣೆ.

ಮೆರವಣಿಗೆಯಲ್ಲಿ ಪ್ರಧಾನ ಅರ್ಚಕರೆ ತಲೆಯ ಮೇಲೆ ಒಂದರ ಮೇಲೋದರಂತೆ ಜೋಡಿಸಿಟ್ಟ ಮೂರು ಮಡಕೆಗಳನ್ನು ಹೊತ್ತುಕೊಂಡು ನಡೆಯುತ್ತಾರೆ. ಇದನ್ನೇ ಕರಗ ಎನ್ನುತ್ತಾರೆ. ವೃತ್ತಿಪರ ಕುಂಬಾರರೇ ಈ ಮಡಕೆಗಳನ್ನು ತಯಾರಿಸಿ ಬಿಸಿಲಲ್ಲಿ ಒಣಗಿಸಿರುತ್ತಾರೆ. ಚೈತ್ರಮಾಸದ ಹುಣ್ಣಿಮೆಗಿಂತ ಮೊದಲ 9 ದಿನಗಳೂ ಅನೇಕ ಸಂಪ್ರದಾಯ ಆಚರಣೆಗಳು ನಡೆಯುತ್ತವೆ. ಹುಣ್ಣಿಮೆಯಂದು ಈ ಕರಗದ ಮಡಕೆಯನ್ನು ಕೊಳಕ್ಕೆ ಹಾಕುತ್ತಾರೆ. ಈ ಸಮಯದಲ್ಲಿ ಅಲ್ಲಿ ಪೂಜಾರಿ ಮತ್ತು ಕರಗದಪ್ಪ ಇಬ್ಬರೇ ಇರುತ್ತಾರೆ. ಅಲ್ಲಿಗೆ ಕರಗದ ಮಹೋತ್ಸವ ಮುಗಿಯುತ್ತದೆ.

ಈ ಆಚರಣೆಯ ಮೂಲ ದೇವತೆ ಮಾತೃದೇವತೆಯಾಗಿದ್ದು ಇತ್ತಿಚೆಗೆ ದ್ರೌಪದಿ ಕರಗ ಶಕ್ತಿಯಾಗಿ ಬದಲಾಗಿದ್ದಾಳೆ ಎಂದು ಡಿ.ಡಿ. ಕೊಸಾಂಬಿಯರವರು ಅಭಿಪ್ರಾಯಪಟ್ಟಿದ್ದಾರೆ. ಈ ಕರಗ ಮಹೋತ್ಸವದ ಸಾಂದರ್ಭದಲ್ಲಿ ಪೂಜಾರಿಯು ಹೆಂಗಸಿನ ವೇಷ ಹಾಕಿಕೊಂಡಿರುತ್ತಾನೆ. ಹಬ್ಬ ನೆಯುವಷ್ಟು ದಿನವೂ ಅವನ ಹೆಂಡತಿತು ಬೇರೆ ಗಂಡಸರ ಕಣ್ಣಿಗೆ ಬೀಳದಂತೆ ಅಡಗಿಕೊಂಡಿರಬೇಕು. ಕರಗದ ಪವಿತ್ರ ಕಳಶದಲ್ಲಿ ದ್ರೌಪತಿಯ ಶಕ್ತಿಯೆಂದು ಕರೆಯಲಾದ ಪೂಜಾ ವಸ್ತು ಹೊಂದಿರುತ್ತದೆ. ಪಂಚ ಪಾಂಡವರನ್ನು ಸಂಕೇತಿಸುವ ಐದು ನಿಂಬೆ ಹಣ್ಣುಗಳು ಸ್ವಲ್ಪ ಸಾದಾ ನೀರು, ಸ್ವಲ್ಪ ಎಳನೀರು ಇರುತ್ತದೆ. ತಿಗಳ ಜನಾಂಗಕ್ಕೆ ಈ ಆಚರಣೆಯು ಬಹಳ ಮಹತ್ವದ್ದಾಗಿದೆ.[3]

ಬೆಂಗಳೂರಿನ ಕರಗ ನಡೆಯುವ ಸಂದರ್ಭದಲ್ಲಿ ಬೆಂಗಳೂರಿನ ಹಾಗೂ ಸುತ್ತಮುತ್ತಲಿನ ನೂರಾರು ಲೈಂಗಿಕ ವೃತ್ತಿ ಮಹಿಳೆಯರು ಶ್ರದ್ಧೆಯಿಂದ ಮಹೋತ್ಸವದ ಸಂಭ್ರಮ ಪಡುತ್ತಾರೆ, ಪೂಜೆ, ಭಕ್ತಿ ತೋರಿಸುತ್ತಾರೆ. ದ್ರೌಪದಿಯಮ್ಮನ ಬಗ್ಗೆ ಅದೇಂಥದೋ ಮುಮಕಾರ ಈ ಸಮುದಾಯಕ್ಕೆ ಬಹುಜನರ ಪತ್ನಿಯಾಗಿ, ಪಣಕ್ಕಿಟ್ಟ ವಸ್ತುವಾಗಿ, ಅನೇಕ ದೈಹಿಕ ಮಾನಸಿಕ ದೌರ್ಜನ್ಯಗಳಿಗೆ, ಕಾಮುಕರ ಕ್ರೂರ ದೃಷ್ಟಿಗೆ ತುತ್ತಾದವಳೆಂದೇ ಅವಳ ಬಗ್ಗೆ ಈ ಸಮುದಾಯದ ಮಹಿಳೆಯರಿಗೆ ಮಮಕಾರ ಹುಟ್ಟಬಹುದೇನೋ. ಬದುಕಿನುದ್ದಕ್ಕೂ ಅನೇಕ ಕಷ್ಟ ಕಾರ್ಪಣ್ಯಗಳನ್ನು ಬಹಳ ದಿಟ್ಟವಾಗಿ ಎದುರಿಸುತ್ತಾ ಬದುಕಿನ ದ್ರೌಪದಿಯನ್ನು ಈ ಸಮುದಾಯ ಅಂತರಾಳದಲ್ಲೆಲ್ಲೋ ತಮ್ಮ ಪ್ರತಿನಿಧಿಯಾಗಿ, ದಿಟ್ಟ ಹೆಣ್ಣಾಗಿ ಪರಿಗಣಿಸುತ್ತಾರೆ.

''ಈ ಮಾತೃ ಪ್ರಧಾನ ಕುಂಟುಂಬ ವ್ಯವಸ್ಥೆ ರೂಪುಗೊಂಡ ಮಾತೃದೇವತೆಗಳ ಪ್ರತಿನಿಧಿಗಳಾದ ಗ್ರಾಮದೇವತೆಗಳು ಗ್ರಾಮಗಳ ಆರಾಧನೆಗೆ ಒಳಗಾದವು. ಸಮೃದ್ಧಿಯ ಆಚರಣೆಗಳೆಲ್ಲಾ ಸ್ತ್ರೀ ಸಂಬಂಧಿ ಆಚರಣೆಗಳಾಗಿದ್ದರಿಂದ ಅನೇಕ ಸಂಸ್ಕೃತಿಗಳಲ್ಲಿ ಗಂಡಿಗೆ ಆಚರಣೆಯ ಹಕ್ಕನ್ನು ಆಚರಣೆಯ ಸ್ಥಳಕ್ಕೆ ಪ್ರವೇಸವನ್ನು ನಿರಾಕರಿಸಲಾಗಿದೆ. ಮಾನವನ ಜೀವನ ವಿಧಾನ ಬದಲಾದಂತೆ ಕೃಷಿಯ ಮುಂದುವರೆದ ಘಟ್ಟದಲ್ಲಿ ಗಂಡು ಮಹತ್ವದ ಸ್ಥಾನವನ್ನು ಗಳಿಸುತ್ತಾನೆ. ಹಿಂದೆ ಆಚರಣೆಗಳು ಹೆಣ್ಣಿನ ಮೇಲ್ವಿಚಾರಣೆಯಲ್ಲಿ ಆಗುತ್ತಿದ್ದವು. ಈ ತೊಡಕನ್ನು ನಿವಾರಿಸಲು ಗಂಡು ಪೂಜಾರಿಯು ಸ್ತ್ರೀ ವೇಷಧಾರಿಯಾಗುತ್ತಾನೆ.''[4]

''ಆದಿ ಮಾನವನ ಮನಸ್ಸಿನಲ್ಲಿ ಹೆಣ್ಣು ಮತ್ತು ಪ್ರಾಣಿ ಈ ಎರಡು ಸಂಗತಿಗಳು ವಿಶೇಷವಾದ ಆಸಕ್ತಿಯನ್ನು ಕೆರಳಿಸಿದವು. ಲೈಂಗಿಕ ಸಂತೋಷದ ಮೂಲಾಧಾರವಾದ್ದರಿಂದ ಹೆಣ್ಣಿನ ಬಗ್ಗೆಯೂ, ಆಹಾರ ಮೂಲವಾದ್ದರಿಂದ ಪ್ರಾಣಿಗಳ ಬಗ್ಗೆಯೂ ಆದಿಮಾನವನಲ್ಲ ಕುತೂಹಲ ಬೆಳೆದಿರಬೇಕು. ಪ್ರಾರಂಭದ ಕಲಾಚಿತ್ರಗಳಲ್ಲಿ ನಾವು ಬೇಟೆಯ ದೃಶ್ಯಗಳನ್ನು, ಹೆಣ್ಣಿನ ಚಿತ್ರಣಗಳನುನ ಕಾಣುತ್ತೇವೆ. ಹೆಣ್ಣನ್ನು ಚಿತ್ರಿಸುವಾಗ ಆಕೆಯ ಸ್ತನಗಳನ್ನು, ಜಘನಗಳನ್ನು ಪ್ರಧಾನವಾಗಿ ಚಿತ್ರಿಸಲಅಗಿದೆ. ಹೀಗೆ ಸ್ತ್ರೀಯರು ಆರಂಭದ ಕೃಷಿಕಾರರಾದರೆ ಪುರುಷರು ಆರಂಭದ ಕಲಾಕಾರರಾಗಿದ್ದಾರೆ. ಆದ್ದರಿಂದ ಧಾರ್ಮಿಕ ಭಾವನೆಗಳು ಸ್ತ್ರೀಯ ಸುತ್ತ ಹೆಣೆದು ಕೊಂಡಿರುವುದನ್ನು ಕಾಣುತ್ತೇವೆ.''[5]

ಚಿಡಿ ಬಿಡುವುದು: ಬೆತ್ತಲೆ ಸೇವಯನ್ನು ಚಿಡಿ ಬಿಡುವುದು ಎಂದು ಕರೆಯುತ್ತಾರೆ. ಹರಸಿಕೊಂಡವರು ಜಾತ್ರೆಗೆ ಸಂಜೆ ಹೋಗಿ ಬಾವಿಯಲ್ಲಿ ಸ್ನಾನಮಾಡಿ ಬೆತ್ತಲೆ ಆಗುತ್ತಾರೆ. ಮರ್ಮಾಂಗದ ಸುತ್ತ ಬೇವಿನ ಸೊಪ್ಪನ್ನು ಕಟ್ಟಿಕೊಳ್ಳುತ್ತಾರೆ. ಸ್ತನಗಳಿಗೂ ಬೇವಿನ ಸೊಪ್ಪನ್ನು ಕಟ್ಟುತ್ತಾರೆ. ಆಗ ದೇವತೆ ಮೈದುಂಬುತ್ತಾಳೆ. ಇನ್ನೊಂದು ಥರದ ಬೆತ್ತಲೆ ಸೇವೆ ಗಂಧದ ಉಡಿಗೆ. ಇದು ರಾತ್ರಿ ಹೊತ್ತು ಗಂಧ ಬಳಿದುಕೊಂಡು ಬೆತ್ತಲೆ ಹೋಗುತ್ತಾರೆ. ಬಾವಿಯಿಂದ ಬೆತ್ತಲಾಗಿ ಗುಡಿಗೆ ಹೋಗುತ್ತಾರೆ. ಆಗ ಇವರ ಹತ್ತಿರ ಸಂಬಂಧಿಕರಾರೂ ಇರುವುದಿಲ್ಲ. ಗುಡಿಗೆ 5 ಸುತ್ತು ಬರಬೇಕು. ಅಲ್ಲಿ ಇವರ ಸಂಬಂಧಿಗಳು ಮತ್ತೆ ಸ್ನಾನ ಮಾಡಿಸುತ್ತಾರೆ. ಹೊಸಬಟ್ಟೆ, ಹಸಿರು ಬಳೆ ತೊಡಿಸುತ್ತಾರೆ. ಆರೋಲಿ ಹುಲಿಗೆಮ್ಮನ ಜಾತ್ರೆ ಸಂದರ್ಭದಲ್ಲಿ ಈ ಆಚರಣೆ ನಡೆಯುತ್ತದೆ.

ಹೀಗೆಯೇ ಬೆತ್ತಲೆ, ಅರೆಬೆತ್ತಲಾಗಿ ನಡೆಯುವ ಆಚರಣೆಗಳು ರಾಜ್ಯದಾದ್ಯಂತ ನಡೆಯುತ್ತವೆ. ಜಾನಪದ ದೇವತೆಗಳಾದ ಎಲ್ಲಮ್ಮ, ಈದೆಮ್ಮ, ಮೈಸಮ್ಮ, ಸುಂಕಲಮ್ಮ ರೆಡ್ಡಮ್ಮ, ನಲ್ಲೂರು ದೊರೆಕಾಳಿ, ಕೋಲಾರಮ್ಮ, ಮೊದಲಾದವರಿಂದ ಸ್ಫೂರ್ತಿಪಡೆದು ಅವರ ಸ್ಥಾನದಲ್ಲಿ ನಿಂತು, ಪುರಾಣ ಕಾಲದಲ್ಲಿ ಲಕ್ಷ್ಮಿ, ದುರ್ಗೆ, ಸರಸ್ವತಿಯರ ರೂಪಗಳಲ್ಲಿ ಪೂಜೆಗಳನ್ನು ಮಾಡಿಸಿಕೊಂಡಿದ್ದಾರೆ. ಜಾನಪದ ಮಾತೃದೇವತೆಗಳನ್ನು ಪರಿಶೀಲಿಸುವಲ್ಲಿ ಒಂದೊಂದು ದೇವತೆ ಒಂದೊಂದು ಪ್ರದೇಶದಲ್ಲಿ, ಯಾವುದಾದರೊಂದು ಕುಲದೇವತೆಯಾಗಿ ಪ್ರಸಿದ್ಧಿ ಹೊಂದಿ ಎಲ್ಲ ಜನರಿಂದಲೂ ಪೂಜೆ ಸಲ್ಲಿಸಲ್ಪಡುವುದನ್ನು ಗಮನಿಸಬಹುದಾಗಿದೆ.

ಹಿಂದಿನ ಸಮಾಜದಲ್ಲಿ ಕೆಳಜಾತಿಯ ಗಂಡು ಮೇಲ್‌ಜಾತಿಯ ಹೆಣ್ಣಿನೊಂದಿಗೆ ದೈಹಿಕ ಸಂಬಂಧ ಹೊಂದಿದಾಗ ಅಥವಾ ಅಂತರ್‌ಜಾತಿ ವಿವಾಹವಾದಾಗ ಬಲು ಕಟ್ಟುನಿಟ್ಟಿನ ನಿಯಮಗಳನ್ನು ಹೇರುತ್ತಿದ್ದರೆಂಬುದಕ್ಕೆ ಮಾರಮ್ಮ,ಎಲ್ಲಮ್ಮರ ಕಥೆಗಳೇ ಸಾಕ್ಷಿ. ಅದನ್ನು ಸಹಿಸಲಾರದ ಮೇಲ್ಜಾತಿಯವರು ತಮಗಾದ ಅಪಮಾನವನ್ನು ಮುಚ್ಚಿಕೊಳ್ಳಲು ಮಾರಮ್ಮನೇ ಗಂಡನನ್ನು ಕೊಂದಳು ಎಂದು ತಿರುಚಿದ್ದಾಂದು ಪ್ರೊ.ಎನ್. ಚಂದ್ರಪ್ಪರವರು ಅಭಿಪ್ರಾಯ ಪಡುತ್ತಾರೆ.

ಎಲ್ಲಮ್ಮನು ಶೀಲಗೆಟ್ಟವಳೆಂದೂ, ವ್ಯಭಿಚಾರಿಯೆಂದೂ, ಆ ಕಾರಣದಿಂದಲೇ ಆಕೆಯ ತಲೆ ಕಡಿಯಲಪಟ್ಟಿತೆಂದೂ ಆಕೆಯ ಕಥೆಯ ಮುಖ್ಯ ಆಶಯಗಳಲ್ಲಿ ಒಂದು. ಇದನ್ನು ಅವಲಂಬಿಸಿಯೇ ದೇವದಾಸಿ, ಜೋಗತಿ, ಬಸವಿ ಸಂಪ್ರದಾಯಗಳು ಎಲ್ಲಮ್ಮನ ಸುತ್ತ ಹರಡಿಕೊಂಡಿರುವುದು. ಈಕೆಯ ಭಕ್ತರಲ್ಲಿ ಎಲ್ಲಾ ಜಾತಿಯವರೂ ಇದ್ದಾರೆ. ಆದರೆ ದೇವದಾಸಿಯರು ಮತ್ತು ಪೂಜಾರಿಗಳು ಮಾತ್ರ ಕೆಳವರ್ಗದ ಮೊಂಡ, ಮಾದಿಗ, ಅಗಸ, ಹಜಾಮರಿಗೆ ಮಾತ್ರ ಉಳಿದಿದೆ. ಸಾಮಾನ್ಯ ಪಂಚಮ ಹೆಣ್ಣಾದ ಎಲ್ಲಮ್ಮ - ಮಾರಮ್ಮಗಳ ಅನೈತಿಕ ಲೈಂಗಿಕ ಸಂಬಂಧಗಳಿಂದಲೇ ಈ ಕಥೆಗಳು ಹೀಗೆ ಬೆಳೆದಿರಬೇಕು''.

ಸವದತ್ತಿಯ ಎಲ್ಲಮ್ಮ, ಚಂದ್ರಗುತ್ತಿ ಎಲ್ಲಮ್ಮ, ಆರೋಲಿ ಹುಲಿಗೆಮ್ಮ, ಚುಂಚೂರು ಮಾಪುರ ತಾಯಿ ಮುಂತಾದವರ ಭಕ್ತರುಗಳಲ್ಲಿ ಬೆತ್ತಲೆ ಸೇವೆ ಆಚರಣೆಯಿದೆ.

ಪೂಜೆ, ಪ್ರಾರ್ಥನೆ ಹರಕೆಗಳ ರೂಪದಲ್ಲಿ ತನ್ನ ಭಕ್ತಿಯನ್ನು ದೇವರಿಗೆ ಸಲ್ಲಿಸ ಬಹುದೆಂಬುದು ಜನಪದರ ದೃಢ ನಂಬಿಕೆ. ದೇವರಿಗೆ ಅರ್ಪಿಸುವ ಅರ್ಪಣೆ ಮತ್ತು ದೇವರನ್ನು ಮೆಚ್ಚಿಸಲು ದೇವರನ್ನು ಹೊಗಳುವುದು. ಪ್ರೊ. ಎನ್. ಚಂದ್ರಪ್ಪನವರು ಅಭಿಪ್ರಾಯ ಪಡುವಂತೆ ಹರಕೆಗಳನ್ನು ಮೂರು ಬಗೆಗಳಾಗಿ ವರ್ಗೀಕರಿಸಬಹುದು (1) ಬಹುಮಾನ ಅಥವಾ ಉಡುಗೊರೆ ಹರಕೆಗಳು (2) ನಿಯಂತ್ರಣ ಅಥವಾ ಶಿಕ್ಷಾ ಹರಕೆಗಳು (3) ಬಲಿಯರ್ಪಣೆಯ ಹರಕೆಗಳು. ಎಲ್ಲಮ್ಮನಿಗೆ ಬಳಿ ಮತ್ತು ಶಿಕ್ಷಾ ಹರಕೆಗಳೇ ಹೆಚ್ಚು ರೂಢಿಯಲ್ಲಿದ್ದು ಉಡುಗೊರೆಯ ಹರಕೆಗಳು ಕ್ರಮೇಣ ಸೇರಿಕೊಂಡಂತಿವೆ.

ಬೆತ್ತಲೆ ಸೇವೆ: ಎಲ್ಲಮ್ಮನ ಹರಕೆಗಳಲ್ಲಿ ಬೆತ್ತಲೆ ಸೇವೆ ವಿಶಿಷ್ಟ ಸ್ಥಾನ ಪಡೆದಿದೆ. ಉಳಿದ ಎಲ್ಲ ಹರಕೆಗಳಿಗಿಂತ ಬೆತ್ತಲೆ ಸೇವೆ ಹರಕೆ ಹೆಚ್ಚು ಪವಿತ್ರವಾದುದೆಂದೂ ಭಕ್ತರು ನಂಬಿದ್ದಾರೆ. ಭಕ್ತರು ಸಂಪೂರ್ಣವಾಗಿ ನಗ್ನರಾಗಿ ಮರ್ಮಾಂಗಗಳಿಗೆ ಮಾತ್ರ ಬೇವಿನ ಸೊಪ್ಪಿನಿಂದ ಮಚ್ಚಿಕೊಂಡು ಸಲ್ಲಿಸುವ ಸೇವೆಯೇ ಬೆತ್ತಲೆ ಸೇವೆ.

ಅನಾದಿ ಕಾಲದ ಆದಿವಾಸಿ ಬುಡಕಟ್ಟುಗಳಲ್ಲಿ ಲೈಂಗಿಕತೆಯ ಬಗ್ಗೆ ಮಡಿವಂತಿಕೆಯಾಗಲೀ, ಹೆಣ್ಣಿನ ಶೀಲದ ಬಗ್ಗೆ ಪಾತಿವ್ರತ್ಯದ ಕಲ್ಪನೆಯಾಗಲೀ ಇರಲಿಲ್ಲ. ಇಂದೂ ಸಹ ಕಾಡು ಮೇಡುಗಳಲ್ಲಿಯೇ ಜೀವಿಸುತ್ತಿರುವ ಬುಡಕಟ್ಟುಗಳಲ್ಲಿ ಈ ಭಾವನೆ ಬದಲಾಗಿಲ್ಲ. ಬುಡಕಟ್ಟುಗಳಲ್ಲಿ ಅಷ್ಟೇ ಅಲ್ಲ ನಾಗರೀಕರ ಮಧ್ಯೆ ಜೀವಿಸುತ್ತಿರುವ ಹಲವು ಹತ್ತು ಕೆಲಸ್ತರದ ಜಾತಿಗಳಲ್ಲಿಯೂ ಈ ಭಾವನೆ ಇದೆ. ಮೇಲ್ವರ್ಗದವರಿಗೆ ಬೆತ್ತಲೆಸೇವೆ, ಉರುಳುಸೇವೆ, ದೇವದಾಸಿಗಳಾಗುವುದು ಧಾರ್ಮಿಕ ಪ್ರತಿಷ್ಟೆಯಾದರೆ, ಕೆಲವರ್ಗದವರಿಗೆ ಮೈ ಮಾರಿಕೊಂಡು ಜೀವನ ಮಾಡುವ ಜೀವನೋಪಾಯವಷ್ಟೇ ಆಗಿದೆ.

ಹೀಗೆ ಜೀವನೋಪಾಯ ಮಾಡಿಕೊಳ್ಳುತ್ತಿರುವ ಸಾವಿರಾರು ಹೆಣ್ಣುಗಳು ಧಾರ್ಮಿಕ ವೇಶ್ಯಾವಾಟಿಕೆಯ ಪರಿಧಿಯಿಂದಲೇ ಬಂದವರಾಗಿದ್ದಾರೆ. ಮುಗ್ಧ ಬಡತನದ ಬೇಗೆಯ, ಅನಕ್ಷರಸ್ತ ಜನತೆಯನ್ನು ದುರುಪಯೋಗ ಪಡಿಸಿಕೊಳುತ್ತಿರುವುದು ಇಂದಿಗೂ ಕಟು ವಾಸ್ತವವಾಗಿದೆ. ಅರ್ಚಕರ ಅಥವಾ ಶ್ರೀಮಂತರ ಕಣ್ಣಿಗೆ ಕೆಳಸ್ತರದ ಸುಂದರ ಹೆಣ್ಣು ಮಕ್ಕಳು ಬಿದ್ದರೆ ದೇವರೇ ಇವರನ್ನು ದಾಸಿಯರನ್ನಾಗಿ ಮಾಡಿಕೊಳ್ಳಲು ಇಚ್ಛಿಸಿದ್ದಾನೆಂದು ಹೇಳಿಸಿ ತಮ್ಮ ಭೋಗಲಾಲಸೆಗೆ ಬಳಸಿಕೊಳ್ಳುತ್ತಿರುವುದೂ ಕೂಡ ಚಾರಿತ್ರಿಕ ಸತ್ಯ.

ವಿದೇಶಿ ಪ್ರವಾಸಿಗ ಬಾರ್ಬೂಸಾರು ದೇವದಾಸಿಯಾಗುವ ಕನ್ಯೆಗೆ ನೆರವೇರಿಸುತ್ತಿದ್ದ ಶಾಸ್ತ್ರ ವಿವರಣೆಯನ್ನು ಹೀಗೆ ನೀಡುತ್ತಾರೆ. ''ಹತ್ತು ವರ್ಷದ ಬಾಲೆಯನ್ನು ಬಂಧು ಬಳಗದವರೆಲ್ಲ ಕೂಡಿ ದೇವಾಲಯಕ್ಕೆ ಕರೆದುಕೊಂಡು ಬರುತ್ತಿದ್ದರು. ದೇವಾಲಯದ ಬಾಗಿಲಿನಲ್ಲಿ ಒಂದಾಳೆತ್ತರದ ಕಲ್ಲಿನ ಬೋದಿಗೆ ಇರುತ್ತಿತ್ತು. ಅದರ ಸುತ್ತ ಪರದೆ ಹಾಕುತ್ತಿದ್ದರು. ದೇವದಾಸಿಯಾಗುವ ಬಾಲೆ ತಾಯಿಯ ಜೊತೆ ಪರದೆಯೊಳಕ್ಕೆ ಬರುತ್ತಿದ್ದಳು. ಕಲ್ಲಿನ ಬೋದಿಗೆಗೆ ಪೂಜೆ ಮಾಡಿ ಬೋದಿಗೆಗೆ ಸಿಕ್ಕಿಸಿದ್ದ ಉದ್ದನೆಯ ಕಡ್ಡಿಯ ತುದಿಗೆ ಬಾಲೆಯ ಜನನಾಂಗವನ್ನು ತಾಯಿಯೆ ಇಡುತ್ತಿದ್ದಳು. ಆಗ ಸುರಿದ ರಕ್ತ ಕಡ್ಡಿಯ ಮೂಲಕ ಬೋದಿಗೆಯನ್ನು ಮುಟ್ಟುತ್ತಿತ್ತು. ದೇವರು ಆಕೆಯನ್ನು ಭೋಗಿಸಿದನೆಂದು ನೆರೆದವರೆಲ್ಲರೂ ನಂಬುತ್ತಿದ್ದರು. ಅಲ್ಲಿಂದ ಮುಂದೆ ಆಕೆ 'ದೇವದಾಸಿ' ಯಾಗುತ್ತಿದ್ದಳು ಅರ್ಥಾತ್ ದೇವಾಲಯಕ್ಕೆ ಸಂಬಂಧಿಸಿದ ಎಲ್ಲಾ ಪುರುಷರ ದಾಸಿಯಾಗುತ್ತಿದ್ದಳು''.

ದೇವದಾಸಿ- ಜೋಗಿತಿ ಪದ್ಧತಿಗಳಿಗೂ ವೇಶ್ಯಾವೃತ್ತಿಗೂ ಇರುವ ಮೂಲಭೂತವಾದ ವ್ಯತ್ಯಾಸವನ್ನು ಪ್ರೊ. ಎನ್. ಚಂದ್ರಪ್ಪರವರು ಹೀಗೆ ವಿಶ್ಲೇಷಿಸಿದ್ದಾರೆ. ಜೋಗತಿ-ಜೋಗಪ್ಪಗಳು ಎಲ್ಲಮ್ಮನಿಗೆ ಮಾತ್ರ ನಡೆದುಕೊಳ್ಳಲು ಸಿದ್ಧರಿರುವವರು ತಾವು ಅರ್ಪಿತವಾದ ದೇವರ ಪ್ರಚಾರಕರು. ಇವರು ನೃತ್ಯ ಸಂಗೀತ ಲಲಿತ ಕಲೆಗಳಲ್ಲಿ ಪ್ರವೀಣತರಾಗಿ ಯಾವ ದೇವಾಲಯದಲ್ಲಾದರೂ ದೇವರ ಸೇವೆಗೆ ತಮ್ಮ ಜೀವನವನ್ನು

ಮುಡುಪಿಟ್ಟವರು. ಇವರಿಗೆ ವಿವಾಹ ನಿಷೇಧವಾದ್ದರಿಂದ ಅರಸ, ಅರ್ಚಕ ಅಥವಾ ತನಗಿಷ್ಟ ಬಂದವರೊಡನೆ ಲೈಂಗಿಕ ಸಂಪರ್ಕ ಪಡೆಯುಲು ಸ್ವತಂತ್ರ್ಯವುಳ್ಳವರು. ದೇವದಾಸಿ, ಜೋಗತಿ ಪದ್ಧತಿಗಳೆರಡೂ 'ದೈವ'ದ ಸುತ್ತ ಹರಡಿಕೊಂಡು ಧಾರ್ಮಿಕ, ಸಾಮಾಜಿಕ, ಆರ್ಥಿಕ ಕಾರಣಗಳಿಂದಾಗಿ ಎರಡು ಭಿನ್ನ ಸಂಪ್ರದಾಯಗಳನ್ನು ಸ್ಥಾಪಿಸಿವೆ.

ಹೀಗೆ 'ದೈವ'ದ ಸುತ್ತ ಮುಗ್ಧತೆ, ಭಕ್ತಿಯ ಸುತ್ತ ಹುಟ್ಟಿಕೊಂಡ ಈ ಆಚರಣೆಗಳು ಇಂದು ಈ ಹೆಣ್ಣುಗಳನ್ನು ಹೊಟ್ಟೆಪಾಡಿಗಾಗಿ, ಹಣದ ಓಡಾಟಕ್ಕಾಗಿ ದೈವ ಪರಿಧಿಯನ್ನು ಮೀರುವಂತೆ ಮಾಡಿವೆ. ಈಗ ಈ ಆಚರಣೆಯ ಒಳಸುಳಿ 'ವೇಶ್ಯಾ ವೃತ್ತಿ'ಗೆ ಅವಳನ್ನು ತಳ್ಳಲು ಪರವಾನಗಿಯಾಗಿ ಮಾರ್ಪಾಡಾಗಿದೆ.

ಕರ್ನಾಟಕದಲ್ಲಿ ಬಸವಿಯರು-ಜೋಗತಿಯರೆಂದರೆ ಸವದತ್ತಿ, ಚಂದ್ರಗುತ್ತಿ ಎಲ್ಲಮ್ಮನಿಗೆ ಅರ್ಪಿಸಲ್ಪಟ್ಟವರೆಂದೇ ಅರ್ಥ. ಇವರು ಸಮಾಜದ ತೀರ ಕೆಲವರ್ಗದವರಾದ ಮಾದಿಗ, ಮೊಂಡ, ಹೊಲೆಯ, ವಡ್ಡ, ಬೇಡ, ಲಂಬಾಣಿ ಮೊದಲಾದ ಜಾತಿಗಳಿಗೆ ಸೇರಿದವರಾಗಿದ್ದಾರೆ. ಎಲ್ಲಮ್ಮನಿಗೆ ಅರ್ಪಿಸಲ್ಪಡುವ ದೇವದಾಸಿ ಪದ್ಧತಿಯನ್ನು 'ಜೋಗತಿ ಸಂಪ್ರದಾಯ'ವೆಂದೂ ಕರೆಯುತ್ತಾರೆ. ಈ ಸಂಪ್ರದಾಯದಲ್ಲಿ ಹೆಣ್ಣನ್ನು 'ಜೋಗಿತಿ' ಎಂದರೆ, ಗಂಡನ್ನು 'ಜೋಗಪ್ಪ' ಎನ್ನುತ್ತಾರೆ. ಗಂಡು-ಹೆಣ್ಣುಗಳಿಬ್ಬರೂ ಸೇರಿಕೊಂಡಿರುವುದು ಈ ಸಂಪ್ರದಾಯದ ವಿಶಿಷ್ಟತೆ. ಕನ್ನಡದ ವೃತ್ತಿಗಾಯಕರಲ್ಲಿ ವಿಶೇಷವಾಗಿ ಎದ್ದು ಕಾಣುವ ಚೌಡಿಕೆಯವರು ಮತ್ತು ಗೊಂದಲಿಗಳು ಈ ಜೋಗತಿ ಸಂಪ್ರದಾಯದ ಪ್ರಚಾರಕರಾಗಿ ಕರ್ನಾಟಕ-ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಕಂಡು ಬರುತ್ತಿದ್ದಾರೆ.

ದೇವದಾಸಿಯರನ್ನು 'ನಿತ್ಯ ಸುಮಂಗಲಿ ನಿತ್ಯ ಕಲ್ಯಾಣಿ'ಯರೆಂದೂ ಕರೆಯುತ್ತಾರೆ. ಸಾವಿಲ್ಲದ ದೇವರಿಗೆ ಇವರನ್ನು ಅರ್ಪಿಸುವುದರಿಂದ ಇವರೂ ಅಮರರೇ! ಲೌಕಿಕ ವಿವಾಹಿತ ಹೆಣ್ಣಿಗೆ ಪತಿಸತ್ತ ಮೇಲೆ ಮುತ್ತೈದೆತನ ಅಳಿಸಿ ವೈದವ್ಯ ಪ್ರಾಪ್ತವಾಗುತ್ತದೆ. ದೇವದಾಸಿಯರು ಅಮರರ ಪತ್ನಿಯರಾದುದರಿಂದ ದೀರ್ಘಸುಮಂಗಲಿಯರು, ನಿತ್ಯ ಸುಮಂಗಲಿಯರು ಎಂಬ ಜನಪದ ನಂಬಿಕೆ ಕರ್ನಾಟಕದಾದ್ಯಂತ ಪ್ರಚಾರದಲ್ಲಿದೆ.

ದೇವದಾಸಿ ಆಚರಣೆ:

ಯಲ್ಲಮ್ಮನ ದೇವಾಲಯದಲ್ಲಿ ಪೌರ್ಣಮಿ ದಿನದಂದು ಅರ್ಪಣೆಯ ಸಮಾರಂಭ ನಡೆಯುತ್ತಿತ್ತು. ಈಗ ಕಾನೂನಿನ ತೊಡಕಿರುವುದರಿಂದ ಸಣ್ಣಪುಟ್ಟ ಗುಡಿಗಳಲ್ಲಿ , ಮನೆಗಳಲ್ಲಿಯೇ ಗೌಪ್ಯವಾಗಿ ನಡೆಯುತ್ತಿದೆ. ಇದನ್ನೆಲ್ಲಾ ಪೂಜಾರಿ ನಿರ್ವಹಿಸುತ್ತಾನೆ.

ಯಲ್ಲಮ್ಮ ದೇವತೆಯ ಮುಂದೆ ಕಲಾತ್ಮಕವಾಗಿ ರಂಗೋಲಿ ಬಿಡಿಸುತ್ತಾರೆ. ಇದನ್ನೆ 'ಜೋಗತಿಪಟ್ಟ' ಎನ್ನುವುದು. ಇದರ ಮಧ್ಯಭಾಗದಲ್ಲಿ ಅರ್ಪಣೆ ಮಾಡಲಿರುವ ಹೆಣ್ಣು ಕುಳಿತುಕೊಳ್ಳುತ್ತಾಳೆ. ಜೋಗತಿಪಟ್ಟದ

ಸಾಲ್ಕು ಅಂಚಿನಲ್ಲಿಡುವ ಕಳಶಗಳನ್ನು ಹಿಡಿಯುತ್ತಾರೆ. ಉಳಿದ ದೇವದಾಸಿಯರು ಯಲ್ಲಮ್ಮನನ್ನು ಪ್ರಶಂಸಿಸುವ ಹಾಡುಗಳನ್ನು ಹಾಡುತ್ತಿರುತ್ತಾರೆ.

ಪೂಜಾರಿ ಕಾರ್ಯ ಆರಂಭಿಸುತ್ತಾನೆ. ತಂದೆ-ತಾಯಿಗಳ ಅಪ್ಪಣೆ ಕೇಳುವ ಶಾಸ್ತ್ರ ಮುಗಿಸುತ್ತಾನೆ. ಅರ್ಪಣೆಯಾಗಲಿರುವ ಕನ್ಯೆಗೆ ಅನುಸರಿಸಬೇಕಾದ ಎಲ್ಲ ಬದ್ಧತೆಗಳನ್ನು ಭೋಧಿಸುತ್ತಾನೆ. ದೇವತೆಗೆ ನೈವೇದ್ಯ ಮಾಡಿದ, ಅರ್ಪಿಸಿದ ತಟ್ಟೆಯಲ್ಲಿದ್ದ ಮಣಿಸರವನ್ನು ಹಿರಿಯ ದೇವದಾಸಿಯೊಬ್ಬಳು ಅರ್ಪಣೆಯಾಗಲಿರುವ ಹೆಣ್ಣಿಗೆ ಕಟ್ಟುತ್ತಾಳೆ. ನಂತರ ಜೋಗಭಿಕ್ಷೆಗೆ ಹೋಗುವಳು. ಮೊದಲ ಜೋಗ ಭಿಕ್ಷೆಯಿಂದ ನೈವೇದ್ಯವನ್ನು ಸಿದ್ಧಪಡಿಸಿ ದೇವತೆಗೆ ನೀಡಿ ನಂತರ ಊರಿನ ದೇವದಾಸಿಯರಿಗೆ ಊಟ ನೀಡುವಳು. ಇದಾದ ನಂತರ ಆಕೆ ದೇವದಾಸಿ ಸ್ಥಾನವನ್ನು ಪಡೆದು ಉಳಿದವರೊಂದಿಗೆ ಕೂಡಿಕೊಳ್ಳುವಳು.

ಅರ್ಪಿಸಿಕೊಂಡ ಕನ್ಯೆಯು ಋತುಮತಿಯಾದ ಮೇಲೆ ಕನ್ಯತ್ವ ಒಡೆಯುವ ಆಚರಣೆ. ಮೊದಮೊದಲು ಈ ಸಂತೋಷದ ಹಕ್ಕು ಸ್ಥಳೀಯ ದೇವಾಲಯದ ಪೂಜಾರಿಗಿತ್ತು. ನಂತರದಲ್ಲಿ ಕನ್ಯೆಯ ತಂದೆತಾಯಿಗಳು ಶ್ರೀಮಂತರಿಂದ, ಭೂಮಾಲೀಕರಿಂದ, ವ್ಯಾಪಾರಿಗಳಿಂದ ಕನ್ಯತ್ವ ಒಡೆಯುವುದನ್ನು ಹೆಚ್ಚು ಬಯಸಿದರು. ಅವರುಗಳಿಂದ ಸಾಕಷ್ಟು ಹಣ, ಆಭರಣ, ಬಟ್ಟೆ ಮುಂತಾದವುಗಳನ್ನು ಪಡೆದು ಒಪ್ಪಂದ ಮಾಡಿಕೊಳ್ಳುತ್ತಾರೆ. ಇವರಿಬ್ಬರ ಮಧ್ಯವರ್ತಿಯಾಗಿ ಹಿರಿಯ ದೇವದಾಸಿ ಒಪ್ಪಂದ ಕುದುರಿಸುತ್ತಾಳೆ. ನಂತರ ಅವಳು ಅವನೊಂದಿಗೆ ಎಷ್ಟೇ ನಿಷ್ಠೆಯಿಂದಿರಲಿ ಅಥವಾ ಇಲ್ಲದಿರಲಿ ಅವಳಿಗೆ ಅವನ ಆಸ್ತಿಯ ಮೇಲೆ ಹಕ್ಕಿರುವುದಿಲ್ಲ. ಅಷ್ಟೆ ಅಲ್ಲ ಅವನಿಂದ ಹುಟ್ಟಿದ ಮಕ್ಕಳಿಗೂ ಕೂಡ ಅವನ ಮೇಲೆ ಯಾವುದೇ ಹಕ್ಕಿರುವುದಿಲ್ಲ. ಅವಳು ಬೇರೆ ಗಿರಾಕಿಗಳೊಂದಿಗೆ ವ್ಯವಹರಿಸಬಹುದು.

ಕ್ರಿ.ಶ. 8ನೆಯ ಶತಮಾನದ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಶಾಸನದಲ್ಲಿ ಬಾದಿ ಮತ್ತು ಪೊಡ್ಡಿ ಎಂಬ ಇಬ್ಬರು ದೇವದಾಸಿಯರು ಲೋಕ ಮಹಾದೇವಿ ಕಟ್ಟಿಸಿದ ಲೋಕೇಶ್ವರ ದೇವಸ್ಥಾನಕ್ಕೆ ದಾನ ಆಡಿದ ವಿವರಣೆಯಿದೆ. ಸದ್ಯಕ್ಕೆ ಇವರೇ ಕರ್ನಾಟಕದ ದೇವಾಲಯ ಸೂಳೆಯರಲ್ಲಿ ಮೊದಲಿಗರು. ಅನೇಕ ಶಾಸನಗಳಲ್ಲಿ 'ದೇವದಾಸಿ' ಎಂಬ ಪದಕ್ಕೆ ಸಂವಾದಿಯಾಗಿ ವೇಶ್ಯೆ ಅಥವಾ 'ಸೂಳೆ' ಎಂಬ ಪದವನ್ನು ಬಳಸಲಾಗಿದೆ. 6

ಜೋಗ್ತಿಸಂಪ್ರದಾಯ: ದೇವದಾಸಿ ಪದ್ಧತಿಗಿಂತ ಭಿನ್ನವಾದುದು ಜೋಗತಿ-ಜೋಗಪ್ಪಗಳ ಪದ್ಧತಿ. ಎಲ್ಲಮ್ಮ ದೇವತೆಯ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡವರು ಜೋಗತಿಯರು, ಜೋಗಪ್ಪಗಳು ಎಲ್ಲಮ್ಮ ಸ್ತ್ರೀ ಮತ್ತು ಪುರುಷ ಶಕ್ತಿಗಳು ಸಮ್ಮಿಲನವಾದ್ದರಿಂದ ಆಕೆಯ ಭಕ್ತರಾದ ಜೋಗತರಿ-ಜೋಗಪ್ಪಗಳು ಅವಳನ್ನು ಮದುವೆಯಾಗುತ್ತಾರೆ. ಆಕೆಗೆ ತಮ್ಮನ್ನು ಅರ್ಪಿಸಿಕೊಳ್ಳುವ ಈ ಸಂಪ್ರದಾಯಿಕ ಮದುವೆಯ ದೀಕ್ಷೆ ದೇವಸ್ಥಾನಗಳಲ್ಲಿಯೇ ನಡೆಯುತ್ತಿತ್ತು. ಸರ್ಕಾರ ಇದನ್ನು ನಿಷೇಧಿಸಿರುವುದರಿಂದ ಪೂಜಾರಿಗಳ ಮನೆಗಳಲ್ಲಿ ಅಥವಾ ಹಿರಿಯ ಜೋಗತಿ ಅಥವಾ ಜೋಗಪ್ಪರ ಮನೆಯಲ್ಲಿ ಈ ದೀಕ್ಷೆ ನಡೆಯುತ್ತದೆ. ಉಳಿದ

ಗ್ರಾಮದೇವತೆಗಳಿಗೆ ಸಂಬಂಧವಿಲ್ಲದ ಈ ಜೋಗ್ತಿಯ ಸಂಪ್ರದಾಯ ಎಲ್ಲಮ್ಮನಿಗೆ ಮಾತ್ರ ಸೀಮಿತವಾದುದಾಗಿದೆ. ಹೀಗೆ ಅರ್ಪಿಸಿಕೊಳ್ಳುವ ಈ ಜೋಗ್ತಿ ಸಂಪ್ರದಾಯ ಹೊಸದಲ್ಲ. ತಲತಲಾಂತರದಿಂದ ಬೆಳೆದು ಬಂದಿರುವ ಪದ್ಧತಿ ಗಂಡನ್ನು. ಜೋಗಪ್ಪನೆಂದೂ, ಹೆಣ್ಣನ್ನು ಜೋಗ್ತಿ ಜೋಗವ್ವನೆಂದೂ ಕರೆಯುತ್ತಾರೆ. ಜೋಗ್ತಿಯನ್ನು ಎಲ್ಲಮ್ಮನ ಸೂಳೆ, ಬಸವಿಯೆಂದೂ ಕರೆಯುತ್ತಾರೆ. ಇವರಿರುವ ಊರುಗಳಲ್ಲಿ ಊರಿಗೊಬ್ಬಳನ್ನಾದರೂ ಬಸವಿ ಬಿಡಬೇಕೆಂಬ ನಿಯಮವಿದೆ. ಎಲ್ಲಮ್ಮನ ತಂಗಿ ಅಥವಾ ಕಷ್ಟಕಾಲದಲ್ಲಿ ನೆರವು ನೀಡಿ ಕಾಪಾಡಿದ ಗೆಳತಿಯೆಂದು ಕರೆಯಲ್ಪಡುವ 'ಮಾತಂಗಿ'ಯ ಪ್ರತಿರೂಪವೇ ಈ ಜೋಗ್ತಿ ಸಂಪ್ರದಾಯ.

ಬಸವಿ ಬಿಡುವುದು: ದೇವರು ಬಿಡುವುದು : ಬಸವಿ ಬಿಡುವ ಕಾಲದಲ್ಲಿ ಮೊದಲು ಆಕೆಗೆ ಸ್ನಾನ ಮಾಡಿಸುತ್ತಾರೆ. ವಧುವಿಗೆ ಅಲಂಕಾರ ಮಾಡಿದಂತೆ ಮಾಡುತ್ತಾರೆ. ಇದಕ್ಕಿಂತ ಮೊದಲು ಹೆಣ್ಣು ಮಾಡಲು ಯಾರಾದರೂ ಶ್ರೀಮಂತರು ಹಣ ಕೊಟ್ಟಿರುತ್ತಾರೆ. ಜೋಗತಿಯವರು ವಾದ್ಯದವರೊಡನೆ ಯಾವುದೋ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ಗುಡಿಯ ಮುಂದೆ ಕರಿಕಂಬಳಿ ಹಾಸಿ ಈಕೆಯನ್ನು ಅದರ ಮೇಲೆ ಕೂರಿಸುತ್ತಾರೆ. ಪೂಜಾರಿ ತಾಳಿ ಕಟ್ಟುತ್ತಾನೆ. ಒಂದು ಮನೆಯಲ್ಲಿ ಗಂಡು ಮಕ್ಕಳಿಲ್ಲದಿದ್ದರೆ ಆಕೆಯ ತಂದೆ ತಾಯಿ ಗೌಡನ ಹತ್ತಿರ ಹೋಗಿ ತಮಗೆ ಸಂತಾನ ಬೇಕಾದರೆ ತಾವು ಉಪಕಾರ ಮಾಡಬೇಕೆಂದು ಕೇಳಿಕೊಳ್ಳುತ್ತಾರೆ. ಗೌಡ ಒಪ್ಪುತ್ತಾನೆ.[13]

ಧರ್ಮಕೇಂದ್ರಿತ ಲೈಂಗಿಕ ದಾಸಿಯರಲ್ಲಿ ಪ್ರಧಾನವಾಗಿ ಎರಡು ಕವಲುಗಳು ಕಾಣಿಸಿಕೊಳ್ಳುತ್ತವೆ. ರಂಭಾ ಪರಂಪರೆ, ರೇಣುಕೆ ಪರಂಪರೆ. ಇದರಲ್ಲಿಯೇ ಮತ್ತೊಂದು ಹನುಮ ಪರಂಪರೆಯನ್ನು ಗುರುತಿಸಬಹುದು. ರಂಭಾ ಪರಂಪರೆಗೆ ಸೆರಿದವರು ದೇವಾಲಯದ ಲೈಂಗಿಕದಾಸಿಯರಾದರೆ, ರೇಣುಕೆ ಮತ್ತು ಹನುಮ ಪರಂಪರೆಗೆ ಸೆರಿದವರು ದೇವರ ಲೈಂಗಿಕದಾಸಿಯರು. ಮೊದಲನೆಯ ವರ್ಗಕ್ಕೆ ಸೇರಿದವರು ಪಾತರದವರಾದರೆ, ಎರಡನೆಯ ವರ್ಗಕ್ಕೆ ಸೇರಿದವರು ದೇವಸ್ತ್ರೀಯರಾಗುತ್ತಾರೆ. ರೇಣುಕೆ ಹಾಗೂ ಹನುಮ ಪರಂಪರೆಗೆ ಸೇರಿದವರಲ್ಲಿ ಸಂಪ್ರದಾಯ, ಆಚರಣೆಗಳು ಭಿನ್ನವಾದರೂ ಆವರಿಬ್ಬರಿಗೆ ಲೈಂಗಿಕ ಸೇವೆ ಧರ್ಮ ಪ್ರದಾನವಾದುದಾಗಿದೆ. ಈ ಅಂಶವನ್ನು ಗಮನಿಸಿಯೇ ಅವರನ್ನು ಒಟ್ಟಾರ್ಥದಲ್ಲಿ ದೇವಸ್ತ್ರೀಯರು ಎಂದು ಗುರುತಿಸಿದೆ. ಅದಕ್ಕಾಗಿ ರೇಣುಕಾ ಪರಂಪರೆಗೆ ಸೇರಿದವರು ಮಾತೃಮೂಲ ಸಂಸ್ಕೃತಿಯ ಪಳೆಯುಳಿಕೆಗಳು, ಮುತ್ತು ಕಟ್ಟಿಸಿಕೊಳ್ಳುವ ಇವರು ಪುರುಷ ಸ್ಪರ್ಶಕ್ಕೆ ಒಳಗಾದ ತಾಳಿ ಮತ್ತು ಕರಿಮಣಿಯನ್ನು ಹಾಕಿಕೊಳ್ಳುವುದಿಲ್ಲ. ಇತ್ತೀಚಿನ ಜೋಗತಿಯರು ಮುತ್ತಿನ ಜೊತೆ ತಾಳಿಯನ್ನು ಕಟ್ಟಿಕೊಳ್ಳುತ್ತಾರೆ. ಆದರೆ ಅದು ಮೂಲದಲ್ಲಿ ಹಾಗಿರಲಿಲ್ಲ. ಹೆಣ್ಣು ಮಕ್ಕಳನ್ನು ದೇವರ ಹೆಸರಿನಲ್ಲಿ ಬಿಡುವುದಕ್ಕೆ ಹೊರಿ ಹೊರಿಸುವುದು, ಮನೆಗೆ ಬಿಡುವುದು, ದೇವರಿಗೆ ಬಿಡುವುದು, ದೇವರ ಹೊರಿಸುವುದು, ದೇವರ ಬಿರುದಾವಳಿ ಹೊರುವುದು ಮೊದಲಾಗಿ ಹೇಳುವರು.[14]

ದೇವರ ಸೇವೆಯಲ್ಲಿ ತೊಡಗಿಸಿ ಕೊಂಡವರನ್ನು 'ಅಂಗಭೋಗ ಮತ್ತು ರಂಗಭೋಗ' ಸೂಳೆಯರೆಂದು ಕರೆಯಲಾಗಿದೆ. ದೇವರ ವಿಗ್ರಹಕ್ಕೆ 'ಸ್ನಾನ, ಗಂಧಲೇಪನ, ಧೂಪ ದೀಪ ಪುಷ್ಪ' ಮೊದಲಾದವುಗಳ ಸೇವೆ ಸಲ್ಲಿಸುತ್ತಿದ್ದವರು ಅಂಗ ಭೋಗದ ಸೂಳೆಯರಾದರೆ, ದೇವಸ್ಥಾನದಲ್ಲಿ ರಂಗ ಮಂಟಪದಲ್ಲಿ ಪೂಜೆ ನಡೆಯುವಾಗ ನೃತ್ಯಗಳ ಸೇವೆ ಸಲ್ಲಿಸುತ್ತಿದ್ದವರು ರಂಗಭೋಗದ ಸೂಳೆಯರು. 'ದೇವದಾಸಿಯರು ರಂಗಭೋಗದ ಉಪಕರಣಗಳು' ಅಂಗಭೋಗದ ಸೂಳೆಯರ ಬಗ್ಗೆ ಭಿನ್ನವಾಗಿ ಚಿಂತಿಸಿರುವ ಚೆನ್ನಕ್ಕ ಎಲಿಗಾರ ಅವರ ಅಭಿಪ್ರಾಯವೊಂದು ಹೀಗಿದೆ. ಅಂಗಭೋಗವ ಸೂಳೆಯರನ್ನು 'ತೆರೆಯಮರೆಯ ಸೂಳೆ' 'ತೆರೆಯೊಳಗೆ ಬಿಟ್ಟ ಸೂಳೆ' 'ಪಿರಿಯರವಾಳ ಸೂಳೆ' 'ಪೆರ್ಗಡೆವಾಳ ಸೂಳೆ' ಮತ್ತು 'ಪರುಕೆರಗ ಭೋಗದ ಸೂಳೆ'ಯರೆಂಬ ಪರ್ಯಾಯ ನಾಮಗಳಿಂದ ಕರೆಯಲಾಗಿದೆ. ರಂಗಭೋಗದ ಸೂಳೆಯರಿಗಿಂತ ಇವರಿಗೆ ಕೊಟ್ಟ ದಾನ ಪ್ರಮಾಣ ಅಧಿಕವಾಗಿರುವುದರಿಂದ ಅಂಗಭೋಗದ ಸೂಳೆಯರು ಹೆಚ್ಚಿನ ಸ್ಥಾನಮಾನ ಪಡೆದಿದ್ದಿರಬೇಕು ಹಾಗೂ ಗರ್ಭಗೃಹದ ಒಳಗಡೆ ಕೂಡ ಇವರಿಗೆ ಪ್ರವೇಶವಿದ್ದಂತೆ ಕಂಡುಬರುತ್ತದೆ.'

ಪಾತರದವರು:

ನೃತ್ಯವಾಗಲಿ, ಸಂಗೀತವಾಗಲಿ ಆದರಲ್ಲಿ ಪಾತರ ಹೆಣ್ಣು ಪ್ರವೇಶ ಪಡೆಯುವ ಸಂದರ್ಭದಲ್ಲಿ 'ಗಂಡಾ ಕಟ್ಟುವುದು' ಎಂಬ ಧಾರ್ಮಿಕ ಮಾಡುವರು, ಅವರ ಕಲಾ ಪರಂಪರೆಯಲ್ಲಿ ಅತ್ಯಂತ ಪ್ರಮುಖವಾದ ಧಾರ್ಮಿಕ ಕಾರ್ಯಕ್ರಮವಿದು. ಅವರಿಗೆ ಕಲೆ ನೃತ್ಯ ಸಂಗೀತ ಶಿಕ್ಷಣ ನೀಡುವ ಗುರುಗಳು ಈ ಪದ್ಧತಿಯನ್ನು ನೆರವೇರಿಸುತ್ತಿದ್ದರು. ಗುರು ಶಿಷ್ಯಳನ್ನು, ಶಿಷ್ಯಳು ಗುರುವನ್ನು ಒಪ್ಪಿಕೊಂಡ ಹಾಗೆ ಪ್ರತಿಜ್ಞೆಗೈಯುವ ಕಾರ್ಯಕ್ರಮವೇ 'ಗಂಡಾ ಕಟ್ಟುವುದು'. ಅವರಿಬ್ಬರ ಮಧ್ಯೆ ಇಂತಿಷ್ಟು ವರ್ಷಗಳವರೆಗೆ ಶಿಕ್ಷಣ ಸಂಬಂಧದ ಒಪ್ಪಂದವಿರುತ್ತದೆ. ಆ ಅವದಿ ಮುಗಿಯುವವರೆಗೆ ಆಕೆ ಬೇರೆ ಗುರುವನ್ನು ಸ್ವೀಕರಿಸುವಂತಿಲ್ಲ. ಗುರು ಬೇರೆ ಶಿಷ್ಯೆಯನ್ನು ಒಪ್ಪಿಕೊಳ್ಳಬಹುದು. ಗಂಡಾ ಕಟ್ಟಿಸಿಕೊಂಡ ನಂತರವೇ ಅವಳು ಪಾತರದವಳಾಗುವಳು. ಅವಳು ಮದುವೆಯಾಗುವಂತಿಲ್ಲ. ಗಂಡಾ ಕಟ್ಟಿಸಿಕೊಳ್ಳುವುದು ಪಾತರದ ಬದುಕಿಗೆ ದೀಕ್ಷೆಯಾಗಿದೆ. ಇದೊಂದು ಶಾಸ್ತ್ರಕರ್ಮ. ಆಕೆ ನರ್ತನ ಕಾಲದಲ್ಲಿ ತಾನು ಧರಿಸಿರುವ ಗೆಜ್ಜೆ ಸರಪಳಿಗಳನ್ನೂ ತಾಳಗಳನ್ನೂ ಮದ್ದಳೆ ಮೊದಲಾದ ವಾದ್ಯಗಳನ್ನೂ ದೇವತಾ ಪ್ರತಿಬಿಂಬವೆಂದು ಭಾವಿಸಿ, ಆ ಬಳಿಕ ಒಂದು ಕಳಶವನ್ನೂ ಅರಿಶಿನದ ಗೌರಿಯನ್ನೂ ಇರಿಸಿ ಕ್ರಮವಾಗಿ ಪೂಜೆ ನಡೆಸಿ ಆ ಗೆಜ್ಜೆಗಳನ್ನು ಪುರೋಹಿತರ ಕೈಯಿಂದ ಗ್ರಹಿಸಿ ಗುರುಗಳಿಗೆ ದಕ್ಷಿಣೆಯನ್ನೂ ಸಭಿಕರಿಗೆ ಗಂಧಪುಷ್ಪ ತಾಂಬೂಲಗಳನ್ನೂ ಹಂಚಬೇಕು. ಪೂಜೆಯಾದ ತರುವಾಯ ಗುಡಿಗೆ ಹೋಗಿ, ಅಲ್ಲಿ ಆ ಗೆಜ್ಜೆಗಳನ್ನು ಸ್ವಾಮಿಯ ಸನ್ನಿಧಿಯಲ್ಲಿ ನರ್ತನ ಮಾಡಬೇಕು.'' ಗಂಡಾ ಕಟ್ಟಿಸಿಕೊಂಡು, ದೇವರೆದುರಿಗೆ ನರ್ತನ ಇಲ್ಲವೆ ಸಂಗೀತ ಸೇವೆ ಸಲ್ಲಿಸಿದ ನಂತರವೇ ಬಹಿರಂಗ ಸಭೆಗಳಲ್ಲಿ ಕಲಾಪ್ರದರ್ಶನ ನೀಡುವ ಅಧಿಕೃತತೆಯನ್ನು ಪಾತರದವಳು ಪಡೆದುಕೊಳ್ಳುತ್ತಿದ್ದಳು.[16]

ಮುರಳಿಗಳು:

ಶಿವನ ಅವತಾರವೆಂದೇ ಜನಪ್ರಿಯವಾಗಿರುವ 'ಖಂಡೋಬ', ಮಹಾರಾಷ್ಟ್ರದ ಒಂದು ದೇವತೆ. ಪೂನಾ ಜಿಲ್ಲೆಯ ಜೆಜುರಿ ಖಂಡೋಬನ ಪ್ರಧಾನ ಸ್ಥಳ. ಸತಾರ ಜಿಲ್ಲೆಯಲ್ಲಿ ಪಾಳಿ ಎಂಬಲ್ಲೂ ಒಂದು ಪೂಜಾ ಸ್ಥಳವಿದೆ. ಬಾಲ್ಯದ ದಿನಗಳಲ್ಲೇ ತಮ್ಮ ತಂದೆ ತಾಯಿಗಳಿಂದ ಖಂಡೋಬ ದೇವತೆಗೆ ಸಮರ್ಪಿಸಲ್ಪಟ್ಟ ಹುಡುಗಿಯರಿಗೆ 'ಮುರಳಿಗಳು' ಎಂದು ಹೆಸರು. ''ಮೋಸ ಹೋದ ಬಡ ಹೆಂಗಸರು, ಖಂಡೋಬನು ತಮಗೆ ಹೆಚ್ಚು ಮಕ್ಕಳನ್ನು ಕರುಣಿಸುವುದಾದರೆ, ಮೊದಲು ಹುಟ್ಟಿದ ಮಗಳನ್ನು ಅವನಿಗೆ ಅರ್ಪಿಸುವುದಾಗಿ ಪ್ರಮಾಣ ಮಾಡುತ್ತಿದ್ದರು. ಅದರಂತೆ, ಮೊದಲು ಹುಟ್ಟಿದ ಮಗಳನ್ನು ಖಂಡೋಬನಿಗೆ ಅರ್ಪಿಸುತ್ತಿದ್ದರು. ಅವಳ ಕತ್ತಿಗೆ ಏಳು ಕವಡೆಗಳ ಒಂದು ಸರವನ್ನು ಹಾಕಿ ಸಣ್ಣ ಹೆಣ್ಣು ಮಗಳನ್ನು ಖಂಡೋಬನಿಗೆ ಅಥವಾ ಒಂದು ಕಠಾರಿಗೆ ಅವಳನ್ನು ಮದುವೆ ಮಾಡುತ್ತಿದ್ದರು. ಹಾಗಾಗಿ ಅವಳು ಅವನ ಹೆಂಡತಿಯಾಗುತ್ತಿದ್ದಳು. ಅವಳು ಬದುಕಿರುವ ಯಾವ ಪುರುಷನನ್ನೂ ಮದುವೆ ಆಗುವ ಹಾಗಿಲ್ಲ ಮತ್ತು ತನ್ನ ಜೀವನೋಪಾಯಕ್ಕಾಗಿ ಅವಳು ಕೀಳು ಬದುಕನ್ನು ಪಾಪ ಮಾಡುತ್ತ ಸವೆಸಬೇಕಾಗಿತ್ತು. ಈ ಪೈಕಿ ಕೆಲವು ಹುಡುಗಿಯರು ಸುತ್ತಾಡುವ ಮುರುಳಿಯರಾಗುತ್ತಿದ್ದರು. ಇನ್ನು ಕೆಲವರು ಪಟ್ಟಣ ಅಥವಾ ನಗರಗಳಲ್ಲಿ ಸಾಮಾನ್ಯ ವೇಶ್ಯೆಯರಾಗಿ ಬದುಕತೊಡಗುತ್ತಿದ್ದರು. ಕೆಲವರು ಯಾರಾದರೂ ಒಬ್ಬನೊಂದಿಗೆ ಹಲವು ವರ್ಷಗಳ ಕಾಲ ಇರುತ್ತಿದ್ದರೆಂದು ಹೇಳಲಾಗಿದೆ. ಅವರ ತಂದೆ ತಾಯಿಗಳು ಅವರು ಹಾಕಿಕೊಂಡಿರುವ ಓಲೆಗಳನ್ನು ಕಳಚಿಕೊಳ್ಳಲು ನಾಚುವುದಿಲ್ಲ. ಯಾಕೆಂದರೆ, ಅವು ಖಂಡೋಬನದು. ಅವರು ಹಾಗೆ ಮಾಡುವುದು ಪಾಪ ಕೃತ್ಯವೆಂದು ಯಾವ ಭಕ್ತಳಿಗೂ ಅನ್ನಿಸುತ್ತಿರಲಿಲ್ಲ. ಕುಂಬಿಳಗು, ಮಹರ್‌ಗಳು, ಮಾಂಗ್‌ಗಳು ಮತ್ತಿತರ ಕೆಳಜಾತಿಗೆ ಸೇರಿದವರು ಈ ಬಗೆಯಲ್ಲಿ ತಮ್ಮ ಮಕ್ಕಳನ್ನು ಮುರುಳಿಗಳನ್ನಾಗಿ ಮಾಡುತ್ತಿದ್ದರು.'' [21]

ಮಧ್ಯಮ ಯುಗದ ಮಹಾನ್ ಪ್ರವಾಸಿ ಮಾರ್ಕೊಪೋಲೊ ತಂಜಾವೂರು ಪ್ರದೇಶದಲ್ಲಿ ರೂಢಿತವಾಗಿದ್ದ ಈ ವಿಷಯದ ಬಗ್ಗೆ ಗಮನ ಹರಿಸಿರುವುದನ್ನು ಗುರುತಿಸಬಹುದು. ಕೋರಮಂಡಲ ತೀರವನ್ನು ಅವನು ಕ್ರಿ.ಶ 1290 ರಲ್ಲಿ ಸಂದರ್ಶಿಸಿದ. 'ಮಾಬಾರ್ ಪ್ರಾಂತ್ಯ (ಅಂದರೆ ತಂಜಾವೂರು)ದ ನಿವಾಸಿಗಳನ್ನು ಕುರಿತು ಅವನು ಹೇಳುತ್ತಾನೆ. ''ಅವರು ಕೆಲವು ಭವ್ಯವಾದ ದೇವಾಲಯದ ಕಟ್ಟಡಗಳನ್ನು ಹೊಂದಿದ್ದರು. ಅಲ್ಲಿರುವ ದೇವರು ಮತ್ತು ಹೆಣ್ಣು ದೇವತೆಗಳಿಗೆ ಅನೇಕ ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳು ಸಮರ್ಪಣೆಗೊಂಡಿದ್ದರು. ಅವರ ತಂದೆತಾಯಿಗಳು ಅವರಿಗೆ ನೀಡಿದ ಪ್ರತಿಮೆಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಮತ್ತು ಯಾವುದಾದರೂ ದೇವಾಲಯದ ಸನ್ಯಾಸಿಯು ದೇವರಿಗೆ ಹಬ್ಬ ಮಾಡಲು ಇಚ್ಚಿಸಿದಾಗ ಈ ಮದನಿಕೆಯರನ್ನು ಕಳುಹಿಸಲಾಗುತ್ತಿತ್ತು. ಅಲ್ಲಿ ಅವರು ಪ್ರತಿಮೆಯ ಮುಂದೆ ಹಾಡುಗಾರಿಕೆ, ನರ್ತನಗಳನ್ನು ಮಾಡುತ್ತಿದ್ದರು. ಅವರ ಪ್ರತಿಮೆಗೆ ನೈವೇದ್ಯ ನೀಡಲು ತಮ್ಮೊಂದಿಗೆ ಮಾಂಸವನ್ನು ಕೂಡ ತರುತ್ತಿದ್ದರು. ಇದರ ಅರ್ಥ ಆ ಮದನಿಕೆಯರು ಮಾಂಸಾಹಾರಗಳನ್ನು ತಯಾರಿಸುತ್ತಿದ್ದರು ಮತ್ತು ಕೆಲಹೊತ್ತು ಅದನ್ನು ದೇವರ ಮುಂದೆ ಇರಿಸುತ್ತಿದ್ದರು. ಆ ದೇವರು ಅವರು ತಂದ ಆಹಾರವನ್ನು ತಿನ್ನುವವರೆಗೆ ಆ ಮದನಿಕೆಯರು ಹಬ್ಬದ

ವಾತಾವರಣದಲ್ಲಿ ಹಾಡುವುದು ಮತ್ತು ನರ್ತಿಸುವುದನ್ನು ಮಾಡುತ್ತಿದ್ದರು. ಆ ಹೊತ್ತಿನಲ್ಲಿ ದೇವರು ಗಾಳಿ ರೂಪದಲ್ಲಿ ಬಂದು ಆಹಾರದ ಸಾರವನ್ನು ತಿಂದು ಹೋಗಿದೆ ಎಂದು ಅವರು ಅಂದುಕೊಳ್ಳುತ್ತಿದ್ದರು. ಹಾಗಾಗಿ, ಅವರು ನೈವೇದ್ಯದ ಮುಚ್ಚಳವನ್ನು ತೆರೆದು ಸಂತೋಷದಿಂದ ತಿನ್ನುತ್ತಿದ್ದರು. ಈ ಹಬ್ಬಕ್ಕೆ ಮದನಿಕೆಯರನ್ನೆಲ್ಲ ಒಂದೆಡೆ ಸೇರಿಸುತ್ತಿದ್ದ ಕಾರಣವೆಂದರೆ ದೇವರು ಹೆಣ್ಣು ದೇವತೆಯನ್ನು ಪೀಡಿಸುತ್ತಾನೆ ಮತ್ತು ಅವಳೊಂದಿಗೆ ಕೋಪಗೊಂಡಿದ್ದಾನೆಂದು. ಯಾವುದೇ ರೀತಿಯ ಮಾತುಕತೆಯನ್ನು ಅವರೊಂದಿಗೆ ಮಾಡುತ್ತಿಲ್ಲ ಎಂದು ಸನ್ಯಾಸಿಗಳು ಹೇಳುತ್ತಿದ್ದರು. ಅವರಿಬ್ಬರ ನಡುವೆ ಶಾಂತಿ ಏರ್ಪಡದಿದ್ದರೆ ಪರಿಸ್ಥಿತಿಯು ಹದಗೆಡುತ್ತದೆ ಮತ್ತು ಆವರು ತಮಗೆ ವರ ಅನುಗ್ರಹಿಸುವುದಿಲ್ಲವೆಂಬುದರಿಂದ ದೇವರು ಮತ್ತು ಹೆಣ್ಣು ದೇವತೆಯ ಎದುರು ಬೆತ್ತಲೆಯಾಗಿ ಬಂದು ಹಾಡಿ ನರ್ತಿಸಿ ಅವರಿಬ್ಬರನ್ನೂ ಈ ಹೆಣ್ಣುಗಳು ತಣಿಸಬೇಕಾಗಿತ್ತು.''[22]

ರಾಜಾಶ್ರಯಗಳು, ಶ್ರೀಮಂತ, ಭೂಮಾಲೀಕರ ಆಶ್ರಯಗಳಲ್ಲಿಯೂ ಕಲೆ ಮತ್ತು ನೃತ್ಯಗಳಿಗೆ ಪ್ರೋತ್ಸಾಹ ದೊರೆಯುತ್ತಿತ್ತು. ದೇವದಾಸಿಯರಿಂದ ಸಾಂಪ್ರದಾಯಿಕ ನೃತ್ಯ ಶೈಲಿಯನ್ನು ಕಲಿಸುತ್ತಿದ್ದ ಗುರುಗಳಿಗೆ ನಟುವರ್‌ಗಳು ಎಂದು ಕರೆಯಲಾಗುತ್ತಿತ್ತು. 'ದೈವ'ದ ಸುತ್ತ ಜೀವಂತವಾಗಿದ್ದ ನೃತ್ಯ ಪ್ರದರ್ಶನಗಳು 19 ಮತ್ತು 20 ನೇ ಶತಮಾನದಲ್ಲಿ ವೃತ್ತಿನಿರತ ನರ್ತಕಿಯರಾಗಿ ಬೆಳಕಿಗೆ ಬಂದರು. ತಮ್ಮ ಪ್ರತಿಭೆಗಳನ್ನು ಕೂಡ ಶಾಸ್ತ್ರೀಯವಾಗಿ ಹೊರಹೊಮ್ಮಿಸಿದರು. ಉದಾಹರಣೆಗೆ; ಜಟ್ಟಿ ತಾಯಮ್ಮ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಪೋಷನೆಯಲ್ಲಿ ಉನ್ನತ ಅಭ್ಯಾಸಗಳನ್ನು ಮಾಡಿದ ಪ್ರತಿಷ್ಟಿತ ನರ್ತಕಿ ಶಾಸ್ತ್ರೀಯ ನೃತ್ಯವನ್ನು ಸುಬ್ಬರಾಯಪ್ಪನಿಂದಲೂ, ಅಭಿನಯವನ್ನು ಕವೀಶ್ವರ ಕರಿಬಸವ ಸಾಸ್ತ್ರಿಯಿಂದಲೂ ಕಲಿತಳು. ತನ್ನ 82 ನೆಯ ವಯಸ್ಸಿನವರೆಗೂ ಕಲಾಪ್ರೇಮದ ಸುಧೆ ಹರಿಸಿದ ಜಟ್ಟಿ ತಾಯಮ್ಮ ಭಾತರದ ರಾಷ್ಟ್ರಪತಿಗಳಿಂದ 'ನಾಟ್ಯಸರಸ್ವತಿ' ಎಂಬ ಬಿರುದನ್ನು ಪಡೆದಳು. 21ನೆಯ ಶತಮಾನದ ಹೊಸ್ತಿಲಲ್ಲಿ ಬದಲಾದ ಸ್ವರೂಪದಲ್ಲಿ ದಂಧೆಯಾಗಿ ಮಾರ್ಪಟ್ಟಿದೆ. ಲೈವ್ ಬ್ಯಾಂಡ್‌ಗಳು, ಕ್ಯಾಬರೆಗಳೆ, ಪಂಚತಾರಾ ಸಂಸ್ಕೃತಿಯ ವಹಿವಾಟಿಗಂತೂ 'ಹೆಣ್ಣು' ಕೇಂದ್ರ ಬಿಂದುವಾಗಿ ಬಿಟ್ಟಿದ್ದಾಳೆ. ''ಕಲೆ ಮತ್ತು ವೇಶ್ಯಾವಾಟಿಕೆ ಹಿಂದಿನಿಂದಲೂ ಒಂದಕ್ಕೊಂದು ತಳಕು ಹಾಕಿಕೊಂಡೂ ಬಂದಿವೆ'' ಎನ್ನುವ ರಂಗ ನಿರ್ದೇಶಕರಾದ ಸಿ.ಜಿ.ಕೆ.ಯವರ ಮಾತುಗಳು ಇಂದಿಗೂ ಅಷ್ಟೇ ಹಸಿಹಸಿಯಾಗಿವೆ.

ಯೋನಿ ಪೂಜೆ:

''ಸಂಗಮವನ್ನು ಮಾಡುವುದೇ ಸತ್ಕರ್ಮ, ಅವಯವಗಳನ್ನು ಪೂಜಿಸುವುದೇ ಆರಾಧನೆ. ದೇವಾಲಯಗಳೆಲ್ಲವೂ ನಿತ್ಯ ಶೋಭನ ಕೊಠಡಿಗಳು, ಅಲ್ಲಿಯ ಚಟುವಟಿಕೆಗಳೆಲ್ಲವೂ ಸಂಗಮ ಕಾರ್ಯದ ಪ್ರೋತ್ಸಾಹಕ್ಕಾಗಿಯೇ, ದಡ್ಡರಿಗೂ ಮನ್ಮಥಾವೇಶ ಬರುವಂತಾಗುತ್ತದೆ. ಕೆಲಸಕ್ಕೆ ಬಾರದವರನ್ನು ಸಿದ್ಧಹಸ್ತನನ್ನಾಗಿ ಮಾಡಬೇಕು. ಅದಕ್ಕಾಗಿಯೇ ಆ ಬಂಧ ಪ್ರತಿಮೆಗಳು, ಆ ಕಳಾಶಾಸ್ತ್ರಪರಿಸ್ಥಿತಿಗಳು, ವ್ಯಭಿಚಾರ ಮಾಡಬೇಕೆಂಬ ಆ ನಿಯಮಗಳು. ಯೋನಿಲಿಂಗದ ಆ ದೇವತಾಕಾರಗಳು.''[9]

''ಕರ್ನೂಲು ಜಿಲ್ಲೆಯಲ್ಲಿ ಅಲಂಪುರ'' ಎಂಬ ಪುಣ್ಯಕ್ಷೇತ್ರವಿದ್ದು ಇಲ್ಲಿರುವ ದೇವತೆಗೆ ಯೋನಿಪೂಜೆ ಸಲ್ಲಿಸುತ್ತಾರೆ. ದೇವಿಯ ವಿಗ್ರಹವನ್ನು ಶಿಲ್ಪಿಯು ಕಲ್ಲಿನಲ್ಲಿ ಕಡೆಯುತ್ತಾ ತೊಡೆಗಳನ್ನು ದೂರವಾಗಿ ಕೆತ್ತಿ ಯೋನಿಯನ್ನು ಸ್ಪಷ್ಟವಾಗಿ ಬಿಡಿಸಿ ಕಾಣಿಸುವಂತೆ ಮಾಡಿ ಭಗಪೂಜೆ ಮಾಡುತ್ತಾರೆ. ಹೀಗೆ ಪೂಜಿಸಿದವರಿಗೆ ಅಷ್ಟಭಾಗ್ಯಗಳೂ ಅನಾಯಾಸವಾಗಿ ಲಭಿಸುತ್ತವೆ ಎಂದು ನಂಬಿಕೆ.''

''ಈ ಲೈಂಗಿಕ ಪೂಜೆಯು ಯಾವುದೋ ಒಂದು ಮೂಲೆಯಲ್ಲಿ ಇರುವುದಿಲ್ಲ. ಯಾವುದೋ ಒಂದು ಜಾತಿಯವರು ಮಾತ್ರ ಮಾಡುವುದಲ್ಲ. ಪ್ರಪಂಚದ ಎಲ್ಲೆಡೆಯಲ್ಲಿಯೂ ಈ ಪೂಜೆ ಬಳಕೆಯಲ್ಲಿದೆ. ವಿಶ್ವದಲ್ಲೆಲ್ಲಾ ಈ ಲೈಂಗಿಕ ಪೂಜೆಯ ವಿಶ್ವರೂಪ ದರ್ಶನವಾಗುತ್ತದೆ. ನಾಗರೀಕತೆ, ಸಭ್ಯತೆ, ಇರುವ ಎಲ್ಲ ದೇಶಗಳಲ್ಲಿಯೂಈ ಪವಿತ್ರ ಪೂಜೆ ಇದ್ದಿತು.''

''ಆ ದಿವಸಗಳಲ್ಲಿಯೇ ದೇವರನ್ನು ಪುರುಷ ಭಾಗವೆಂದು ಭಾವಿಸಿದ್ದರು. ದೇವರು ಎನ್ನುವುದು ಒಂದು ದೊಡ್ಡ ಪುರುಷಾಂಗ, ಆ ಪುರುಷ ಭಾಗವೇ ನಮ್ಮ ದೇವತಾ ನಾಮಗಳಲ್ಲಿ ಲಿಂಗ ಎಂದಾಗಿದೆ. ಸ್ತ್ರೀಯ ಭಾಗವೇ ಪಾಣಿವಟ್ಟ.'' [10]

ದೇವರು ಪುರುಷಲಿಂಗ, ದೇವಿ ಸ್ತ್ರೀ ಪಾಣಿವಟ್ಟ (ಯೋನಿ), ಈ ವಿಧಾನವೇ ಲಿಂಗಯೋನಿ ವಿಧಾನ. ಈ ವಿಧಾನಕ್ಕೆ ದೇವಾಲಯಗಳು ಮೂಲಸ್ಥಾನಗಳಾದವು. ಲೈಂಗಿಕ ಕ್ರಿಯೆಯೆಂಬುದು ದೇವತೆಗೆ ಬಲಕೊಡುವುದು ಮತ್ತು ಪುಣ್ಯ ಕಾರ್ಯವಾಯಿತು.

ಯಾವುದೇ ಶಿವಲಿಂಗಕ್ಕೆ ಯೋನಿರೂಪದ ತಳವಿಲ್ಲದೆ ಇರುವುದಿಲ್ಲ. ಇದು ಪ್ರಾಚೀನ ಜನರ ಗಂಡು ಹೆಣ್ಣಿನ ಸಮಭಾವದ ಸಂಕೇತ. ಆಗ ಲೈಂಗಿಕತೆ ಎಂಬುದು ಈಗಿನಂತೆ ವ್ಯವಹಾರವಲ್ಲ. ಅದೊಂದು ಬದುಕು. ಸಹಜ ಪೂಜೆ. ಬುಡಕಟ್ಟುಗಳ ಕಲ್ಪನೆ ಅದು.

ಕಂಚುಕೋತ್ಸವ:

''ಕಂಚುಕ ಎಂದರೆ ರವಿಕೆ. ಹಬ್ಬದ ದಿನ ಹೆಂಗಸರೆಲ್ಲರೂ ದೇವಸ್ಥಾನದೊಳಕ್ಕೆ ಬರುತ್ತಾರೆ. ಪೂಜೆ, ಪುರಸ್ಕಾರಗಳೆಲ್ಲವೂ ನಡೆಯುತ್ತದೆ. ನಂತರ ಹೆಂಗಸರೆಲ್ಲರೂ ತಾವು ತೊಟ್ಟುಕೊಂಡಿರುವ ರವಿಕೆಗಳನ್ನು ತೆಗೆದು ಒಂದು ಕಡೆ ಗುಡ್ಡೆ ಹಾಕುತ್ತಾರೆ. ಪ್ರತಿಯೊಬ್ಬರೂ ಒಂದೊಂದು ರವಿಕೆ ಎತ್ತಿಕೊಳ್ಳುತ್ತಾರೆ. ಒಬ್ಬನು ಎತ್ತಿಕೊಂಡ ರವಿಕೆ ಯಾರದೋ ಆ ಹೆಂಗಸು ರಾತ್ರಿಯೆಲ್ಲಾ ಆ ಗಂಡಸಿನೊಡನೆ ಭೋಗಿಸಬೇಕು.''[11]

''ಕೆಲವೆಡೆ ಲೈಂಗಿಕ ಉತ್ಸವಗಳನ್ನು ನಡೆಸುವರು, ಇಡೀ ವರ್ಷ ಸಸ್ಯವೃದ್ಧಿ ಮಾಡಿ ದೇವತೆಗಳು ಬಲಹೀನರಾಗುತ್ತಾರೆ. ಅವರಿಗೆ ಬಲವುಂಟು ಮಾಡಲು ಭಕ್ತರೆಲ್ಲರೂ ಸಂಗಮ ಶಕ್ತಿಯನ್ನು ಅರ್ಪಣೆ ಮಾಡುತ್ತಾರೆ. ಎಲ್ಲರೂ ಮಹಾಲಿಂಗ ಪ್ರೀತಿ ಎಂದರೆ ನಿದ್ರೆಯಿಲ್ಲದೆ ಲೈಂಗಿಕ ಕಾರ್ಯ ನಡೆಸಬೇಕು. ಈ ಕಾರ್ಯವನ್ನು ಮಾಡದವರು ದೇಶದ್ರೋಹಿಗಳಾಗುತ್ತಿದ್ದರು. ಪವಿತ್ರವಾದ ಭಾವನೆಯಿಂದ, ತಮ್ಮ

ಭಕ್ತಿಯನ್ನು ಪ್ರದರ್ಶಿಸುತ್ತಾ, ಶಕ್ತಿ ಮೀರಿ ಸ್ತ್ರೀ ಪುರುಷರೆಲ್ಲರೂ ಈ ಲೈಂಗಿಕ ಉತ್ಸವದಲ್ಲಿ ಭಾಗವಹಿಸುತ್ತಿದ್ದರು.''

''ನಮ್ಮ ಉತ್ಸವಗಳಲ್ಲಿ ಮಾಡುವ ತಿಂಡಿಗಳು ಕಡುಬು, ಉದ್ದಿನವಡೆ, ಪುಳ್ಳಂಗಾಯುಂಡೆ. ದೇವತಾರ್ಚನೆಗೆ ಉಪಯೋಗಿಸುವ ಪಾತ್ರೆಗಳು ಹಣತೆ, ಕಂದೀಲು ಸ್ತ್ರೀ ಪುರುಷರ ಗುಪ್ತಾಂಗಗಳ ರೂಪದಲ್ಲಿರುತ್ತವೆ. ಉದ್ಧರಣೆ, ಪಂಚಪಾತ್ರೆ, ಮಂಗಳ ಸೂತ್ರ- ಮೊದಲಿನ ರೂಪ ಅಸ್ಪಷ್ಟ ಎಲೆಯಂತೆ [illegible] ಸ್ವಲ್ಪ ಉಬ್ಬಿರುವ ಒಂದು ಮೊನೆ, ಅದೇ ಸಂಗಮ ಚಿಹ್ನೆ.''

ಸಿರಿ ಆಚರಣೆ :

''ಏಪ್ರಿಲ್ ತಿಂಗಳಿನ ಚೆಲ್ಲಿದ ತಿಂಗಳು ಬೆಳಕಿನಲ್ಲಿ ನಡೆಯುವ ಹಿರಿಯಡ್ಕದ 'ಸಿರಿ' ಜಾತ್ರೆ ಇಡೀ ದಕ್ಷಿಣ ಭಾರತದಲ್ಲಿಯೇ ವೈಶಿಷ್ಟ್ಯಪೂರ್ಣವಾದದ್ದು. ಸಾವಿರಾರು ಹೆಂಗಸರು ಸಾಮೂಹಿಕವಾಗಿ ದೈವಾವೇಶಕ್ಕೆ ಒಳಗಾಗುವ ಮತ್ತು ಇಡೀ ರಾತ್ರಿ ಕುಣಿದು, ಕಿರುಚಿ ಎದ್ದು ಬಿದ್ದು ತನ್ನ ಮನದಾಳದ ಎಲ್ಲ ದುಗುಡವನ್ನು ಹೊರಚೆಲ್ಲುವ ರಾತ್ರಿ ಅದು. ಬಹುತೇಕ ಕೆಳವರ್ಗದ ಜನ ಮಾತ್ರ ಆಚರಿಸುವ ಈ ಸಿರಿ ದಕ್ಷಿಣ ಕನ್ನಡದ ಕೆಲವೆಡೆ ಈಗಲೂ ಆಚರಣೆಯಲ್ಲಿರುವ ಅಳಿಯ ಸಂತಾನದ ಹಿಂದಿನ ಮಾತೃ ಪ್ರಧಾನ ಕುಟುಂಬದ ಹಿನ್ನೆಲೆಯುಳ್ಳದ್ದು.'' [18]

ಸಿರಿಯ ಕಥೆಯನ್ನು ನಿಧಾನವಾಗಿ ನಿರೂಪಿಸುವ ತುಳುಪಾಡ್ದನಗಳನ್ನು ಹಾಡತೊಡಗುವರು. ಸಿರಿಯ ಕಷ್ಟಕಾರ್ಪಣ್ಯ, ಅವಳ ಗಂಡನ ಅನಾದರ, ಅವನ ಅಸಭ್ಯತೆ ಅವರ ಮನತುಂಬುತ್ತಾ ಹೋಗುತ್ತದೆ. ಕ್ರಮೇಣವಾಗಿ ಆವೇಶ ಹೆಚ್ಚುತ್ತಾ ಹೋದಂತೆ ಪಾಡ್ದಾನ ಗೌಣವಾಗಿ ಕಿರುಚಾಟ ಹೆಚ್ಚಾಗುತ್ತದೆ. ಆವೇಶ ಬಂದು ಕೂಗಿ ಕೂಗಿ ಸುಸ್ತಾಗಿ ಕೆಲವರು ಹಾಗೇ ನೆಲಕ್ಕೆ ಒರಗುತ್ತಾರೆ. ಮತ್ತೆ ಸಿರಿ ಐತಿಹ್ಯದ ಪಾಡ್ದಾನವನ್ನು ಹಾಡಲಾಗುತ್ತದೆ. ಹಾಡುತ್ತಾ ಹೋದಂತೆ ಬಸವಳಿದು ಬಿದ್ದ ಹೆಣ್ಣು ಮತ್ತೆ ಜೀವತುಂಬಿಕೊಳ್ಳುತ್ತಾಳೆ. ಮತ್ತೆ ಅದೇ ರೀತಿಯ ಆವೇಶಕ್ಕೆ ಒಳಗಾಗುತ್ತಾಳೆ. ಈ ತೆರನಾದ ಆವೇಶಭರಿತ ಅಸ್ಪಷ್ಟ ನರ್ತನ ಇಡೀ ದೇವಸ್ಥಾನದ ಆವರಣದಲ್ಲಿ ಇಡೀ ರಾತ್ರಿ ನಡೆಯುತ್ತದೆ. [19]

''ಈ ಆಚರಣೆಯ ಜೊತೆಗೆ ಉತ್ಸವವೂ ನಡೆಯುತ್ತದೆ. ಉತ್ಸವಕ್ಕೂ ತಟ್ಟೀರಾಯನಿಗೂ ಎಡೆಬಿಡದ ಸಂಬಂಧ. ಬೃಹದಾಕಾರದ ತಟ್ಟೀರಾಯ ಕುಣಿಯುತ್ತಾ ಮುಂದೆ ಸಾಗಿದರೆ ತೇರು ಹಿಂದೆ ಹೊರಡುತ್ತದೆ. ಗೋಳಾಕಾರದ ತೇರಿಗೆ ಬಣ್ಣಬಣ್ಣದ ಅಲಂಕಾರ, ಪಲ್ಲಕ್ಕಿಯೂ ಜೊತೆ ಸೇರುತ್ತದೆ. ತಟ್ಟೀರಾಯನ ಹಿಂದೆ ತೇರು, ತೇರಿನ ಹಿಂದೆ ಸಿರಿ ಮೈದೂಗಿಸಿಕೊಂಡ ನೂರಾರು ಪಾತ್ರಗಳ ಮೆರವಣಿಗೆ.'' [20]

'ಸಿರಿ' ಆಚರಣೆಯು ಲೈಂಗಿಕವೃತ್ತಿ ಮಹಿಳಾ ಸಮುದಾಯಕ್ಕೆ ಬಹಳ ಹತ್ತಿರವಾದಂತಹುದು. ಇಡೀ ಬದುಕಿನ ಎಲ್ಲ ಜರ್ಝರಿತಗಳನ್ನು, ದುಗುಡದುಮ್ಮಾನಗಳನ್ನು ಹೊರಹಾಕುವ ಪ್ರಕ್ರಿಯೆಯೇ ಈ ಆಚರಣೆ ತಮ್ಮ ಬದುಕಿಗೇ ಸ್ಪಂದಿಸುವಂತಹುದ್ದಾಗಿದೆ. ಧಾರ್ಮಿಕ ಚೌಕಟ್ಟಿನಲ್ಲಿ ಅಲ್ಲದಿದ್ದರೂ ಇಂದಿಗೂ ಲೈಂಗಿಕವೃತ್ತಿ ಮಹಿಳಾ ಸಮುದಾಯ ಅತಿಪಾನಮತ್ತರಾಗಿ ತಮ್ಮ ಎಲ್ಲ ನೋವು, ಕಷ್ಟಕಾರ್ಪಣ್ಯಗಳನ್ನು ಹೊರಹಾಕುತ್ತಾರೆ.

ಒಂದು ಘಟನೆ ನೆನಪಿಗೆ ಬರುತ್ತಿದೆ. ಲೈಂಗಿಕವೃತ್ತಿ ಸಮುದಾಯದ ಆಯ್ಕೆ ಮಾಡಿದ ಕೆಲವು ಮಹಿಳೆಯರಿಗೆ ನಾಯಕತ್ವ ತರಬೇತಿ ನೀಡುತ್ತಿದ್ದೆವು. ಅದರ ಒಂದು ಭಾಗವಾಗಿ ಸ್ವಾಮೀಜಿಯೊಬ್ಬರನ್ನು ಆಹ್ವಾನಿಸಿ ಈ ಸಮುದಾಯಕ್ಕೆ ಮಾನಸಿಕ ಶಾಂತಿ ಸಿಗುವಂತಹ ಒಂದು ಮೆಡಿಟೇಷನ್ ಹೇಳಿಕೊಡಲು ಸ್ವಾಮೀಜಿಯವರಲ್ಲಿ ಮನವಿ ಮಾಡಿದ್ದೆವು. ಅವರು 'ಡೈನಾಮಿಕ್ ಮೆಡಿಟೇಷನ್' ಹೇಳಿಕೊಡಲು ಆರಂಭಿಸಿದವರು. ಜೀವನದಲ್ಲಿ ಪ್ರಥಮಬಾರಿಗೆ ಸ್ವಾಮೀಜಿಯೊಬ್ಬರ ಸಾನಿಧ್ಯ, ಹಾಗೂ ಇಂತಹ ಒಂದು ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರಿಗೆ ಆರಂಭದಲ್ಲಿ ಮುಜುಗರವಾಯ್ತು. ಆರಂಭಿಸಿದ ಕೆಲವೇ ಕ್ಷಣಗಳಲ್ಲಿ ಮೈಮರೆತರು. ಸಿಕ್ಕ ಅವಕಾಶ ಅವರ ಮಾನಸಿಕ ತುಮುಲಗಳನ್ನು ಒತ್ತರಿಸಿತು. ಧುಮ್ಮಿಕ್ಕಿ ಬಂದ ದುಃಖ ಕಟ್ಟೊಡೆಯಿತು. ಅಲ್ಲಿ ಸೇರಿದ್ದ 21 ಲೈಂಗಿಕವೃತ್ತಿ ಮಹಿಳೆಯರೂ ತಮ್ಮ ಬದುಕುಗಳು ನಡೆದು ಬಂದ ಹಾದಿಯನ್ನು ಪರಸ್ಪರ ತೆರೆದಿಟ್ಟರು. ಎಲ್ಲವೂ ಎಲ್ಲರಿಗೂ ಬಟಾಬಯಾಲಾದಗ ಸಮಾನ ದುಃಖ, ಕಷ್ಟಕಾರ್ಪಣ್ಯಗಳು ಪರಸ್ಪರ ಆತ್ಮೀಯತೆಯನ್ನು, ಪರಿಚಿತವಾದ ಸ್ನೇಹವನ್ನುಂಟು ಮಾಡಲು ಸಹಕಾರಿಯಾಯಿತು. ತಮ್ಮ ಬಾಲ್ಯದಿಂದ ತಾವು ಹಡೆದ ಮಕ್ಕಳ ಬಾಲ್ಯದವರೆಗೂ ಎಲ್ಲವೂ ಹೊರಹೊಮ್ಮಿ, ನೆನಪುಗಳು ಹೆಪ್ಪುಗಳನ್ನು ಒಡೆದಾಗ ಎಲ್ಲರೂ ನಿಟ್ಟುಸಿರಿಟ್ಟರು. ಹಗುರಾದರು. ಮುಂದಿನ ಬಹುತೇಕ ಸಂದರ್ಭಗಳಲ್ಲಿ ಪರಸ್ಪರ ಹಂಚಿಕೆಗೆ ಅವಕಾಶ ಮಾಡಿಕೊಡಲಾಯಿತು.

ಬಿದಿರು ಮಳೆ ಸೇವೆ:

'ಬಿದಿರು ಮಳೆ ಸೇವೆ' ಮತ್ತು 'ತೇರಡಿ ಸೇವೆ'ಗಳು ಲೈಂಗಿಕಮುಕ್ತ ಸಮಾಜವೊಂದು ಈ ಮಣ್ಣಿನಲ್ಲಿ ಇದ್ದ ಬಗ್ಗೆ ಬೆಳಕು ಚೆಲ್ಲುತ್ತವೆ. ಅಂದರೆ ಮಕ್ಕಳಾಗದಿರುವ ಹೆಂಗಸರು ಹರಕೆ ಹೊತ್ತು ದೇವಿಯ ಜಾತ್ರೆಗೆ ಹೊರಡುತ್ತಾರೆ. ನಿಗದಿಪಡಿಸಲಾದ ಬಿದಿರುಮಳೆ ಪಕ್ಕದಲ್ಲಿ ಕುಳಿತು ಗಂಡಿಗಾಗಿ ಹೆಣ್ಣು ಕಾಯುತ್ತಾಳೆ. ಆ ಸಂದರ್ಭದಲ್ಲಿ ಅಲ್ಲಿಗೆ ಬರಬಹುದಾದ ಯಾವುದೇ ಗಂಡು ದೇವ ದೂತ. ಅಂದು ಆ ಇಬ್ಬರಿಗೆ ಸ್ವಾತಂತ್ರ್ಯ. ಅಂದಿನ ಫಲವಾಗಿ ಹುಟ್ಟುಬಹುದಾದ ಮಗು ದೇವರ ಪ್ರಸಾದ.

ದಕ್ಷಿಣ ಕನ್ನಡದ ಕೊರಗ ಜನಾಂಗದವರು ಕಂಬಳದ ಹಬ್ಬದಲ್ಲಿ ಆಚರಿಸುವ 'ಪನಿಕುಲ್ಲುನ (ಹನಿಯಲ್ಲಿ ಕುಳಿತುಕೊಳ್ಳುವುದು) ಆಚರಣೆ ಮುಕ್ತ ಲೈಂಗಿಕತೆಯನ್ನು ಸಂಕೇತಿಸುವ ಒಂದು ವಿಧಿ ಎಂದು ಹೇಳಲಾಗುತ್ತದೆ.[24]

ಸಿಡಿ ಕಂಬ ನೆಡುವುದು:

ಗುನ್ನಾಗರದ ಎಲ್ಲಮ್ಮ ದೇವತೆಯ ಹಬ್ಬದಲ್ಲಿ ಸಿಡಿ ಆಡುವುದೇ ಪ್ರಧಾನ ಆಚರಣೆ. ಆದ್ದರಿಂದ ಹಬ್ಬ ಎಂಟು ದಿನ ಇದೆ ಎನ್ನುವಂತೆ ಸಿಡಿಗಂಬವನ್ನು ನೆಡುವರು. ಒಂದು ಗುರುವಾರ ಬೆಳಿಗ್ಗೆ ಹತ್ತು ಗಂಟೆಗೆ ಕಂಬವನ್ನು ತರುವರು. ಮನೆಗೊಂದು ಆಳು ದೇವತೆಯ ಗುಡಿಯ ಮುಂದೆ ಬಂದು ಸೇರುತ್ತಾರೆ. ದೇವಸ್ಥಾನದ ಮುಂಭಾಗದಲ್ಲಿ ಏಳು ಅಡಿಯ ಗುಂಡಿಯನ್ನು ತೋಡಿ, ದೇವತೆಯನ್ನು ಪೂಜಿಸಿ, ಬೇವಿನ ಮರದ

ದೊಡ್ಡದಾದ ಕಂಬವನ್ನು ನೆಡಲಾಗುವುದು. ಕಂಬಕ್ಕೆ ಮೂರು ಮೊಳ ಹೂ ಸುತ್ತಿ ಅದರ ಬುಡ, ಮಧ್ಯಭಾಗ, ತುದಿಗೆ ಹೊಂಬಾಳೆ ಕಟ್ಟುವರು. ಕಂಬಕ್ಕೆ ಬಿಳಿ ಮತ್ತು ಕೆಂಪು ಬಣ್ಣವನ್ನು ಬಳಿಯುತ್ತಾರೆ. ಒಂದು ಕೋಳಿಯನ್ನು ಬಲಿ ಕೊಟ್ಟು ಅದರ ರಕ್ತವನ್ನು ಕಂಬಕ್ಕೆ ಮೂರು ಸುತ್ತು ಚೆಲ್ಲುವರು. ಕಂಬ ನೆಡುವ ಸಂದರ್ಭದಲ್ಲಿ ಅರೆ, ತಮಟೆ, ರಬ್ಬದೋಳು, ನಗಾರಿ, ಓಲಗ, ಶ್ರುತಿ ಈ ವಾದ್ಯಗಳನ್ನು ಬಾರಿಸುತ್ತಾರೆ. ಕೊನೆಯಲ್ಲಿ ಫಲಹಾರ ಹಂಚಲಾಗುವುದು. ಸಿಡಿಕಂಬ ನೆಡುವುದು ಗುನ್ನಾಗೆರೆಯನ್ನೂ ಒಳಗೊಂಡಂತೆ ಸುತ್ತಮುತ್ತ ಹಳ್ಳಿಗಳಿಗೆ ಹಬ್ಬದ ಸೂಚನೆ ಕೊಡುವುದು. ಈ ದಿನದಿಂದ ಸಿಡಿ ಆಡುವವರು ಸಿದ್ಧತೆಗಳನ್ನು ಮಾಡಿಕೊಳ್ಳುವರು.

''ದ್ರಾವಿಡರಿಗೂ ಮೊದಲಿದ್ದವರು ಬುಡಕಟ್ಟಿನ 'ಮುಂಡಾ'ಗಳು, ಇವರೆ, ಈ ಕೆಳವರ್ಗದ ಜನರೇ ನಿಜವಾಗಿ ಭಾರತೀಯರು ಎನ್ನುವುದೇ ಅಲ್ಲದೆ, 'ಅಮ್ಮ' ಆರಾಧನೆಯ ಬೇರು ಈ ಮುಂಡಾ ಸಂಸ್ಕೃತಿಯಲ್ಲಿದೆ ಎನ್ನುವ ಮಹತ್ವದ ವಿಚಾರವನ್ನು ಎತ್ತಿಹಿಡಿದಿದ್ದಾರೆ. ಮಾತೃಪ್ರಧಾನ ಮುಂಡಾ ಸಮಾಜ, ಸಂಸ್ಕೃತಿಯಲ್ಲಿ ತಾಯಿಯ ಹೊಣೆಗಾರಿಕೆಯೇ ಹೆಚ್ಚಾಗಿದ್ದು, ಗಂಡಸರು ಬೇಟೆಯ ನೆಪದಲ್ಲಿ ಹೊರಗೆ ಹೋಗುತ್ತಿದ್ದು, ಮನೆ, ಮಕ್ಕಳು ಲಾಲನೆ ಪಾಲನೆಗಳೆಲ್ಲ ಇವಳ ಪಾಲಿಗೇ ಬಗೆಯ ಗೌರವ, ಆದರಗಳು ಭಕ್ತಿಯಾಗಿ ರೂಪಾಂತರಗೊಂಡು 'ಅಮ್ಮ' ಕೇವಲ 'ಅಮ್ಮ' ಮಾತ್ರವಲ್ಲದೆ, ಕುಲದೇವಿ ಮನೆದೇವಿ, ಗಡಿದೇವಿ, ಗ್ರಾಮದೇವಿ- ಹೀಗೆ ಹಲವು ರೂಪಗಳಲ್ಲಿ ಅಭಿವ್ಯಕ್ತಳಾದ ಸಂಗತಿಯನ್ನು ಐತಿಹಾಸಿದ ಸತ್ಯತೆಯೊಂದಿಗೆ ಪ್ರಸ್ತಾಪಿಸಿದ್ದಾರೆ. ಮೂಲಭೂತವಾಗಿ ಮಾತೃಪ್ರಧಾನವಾಗಿದ್ದ ಸಮಾಜ ಕ್ರಮೇಣ ದ್ರಾವಿಡ ಆರ್ಯರ ಆಕ್ರಮಣ, ವಲಸೆಗಳಿಂದಾಗಿ ಪಿತೃಪ್ರಧಾನವಾಗಿ ರೂಪಾಂತರಗೊಂಡು ಭಾರತದ ಸಮಾಜಗಳು ಕೆಲವು ಜಾತಿಗಳನ್ನು ಹೊರತುಪಡಿಸಿ, ಪಿತೃಪ್ರಧಾನವಾಗಿವೆ. ಆದರೆ ಲೇಖಕರು ಆದಿಮ ಸಂಸ್ಕೃತಿಯಾದ ಮುಂಡಾ ಸಂಸ್ಕೃತಿಯನ್ನು ತಮ್ಮ ಅಧ್ಯಯನದ ಹಿನ್ನೆಲೆಗೆ ಇರಿಸಿಕೊಂಡಿರುವುದು.''

''ಒಂದೊಂದು ಪ್ರದೇಶದ ಸಂಸ್ಕೃತಿ ಬೇರೆ ಬೇರೆಯಾಗಿದ್ದು, ಗಂಡು-ಹೆಣ್ಣು ಸಂಬಂಧದ ಬಗೆಗಿನ ನಿಯಮಗಳು ಬಹುಮುಖವಾಗಿರುವುದರಿಂದ ಏಕಮುಖ ತೀರ್ಮಾನಗಳು ಅಪಾಯಕಾರಿಯಾಗುತ್ತವೆ ಎನ್ನಬಹುದು.''

''ಅನಾದಿ ಕಾಲದ ಆದಿವಾಸಿ ಬುಡಕಟ್ಟುಗಳಲ್ಲಿ ಲೈಂಗಿಕತೆಯ ಬಗ್ಗೆ ಮಡಿವಂತಿಕೆಯಾಗಲಿ, ಹೆಣ್ಣಿನ ಶೀಲದ ಬಗ್ಗೆ ಪಾತಿವ್ರತ್ಯದ ಕಲ್ಪನೆಯಾಗಲಿ ಇರಲಿಲ್ಲ. ಇಂದೂ ಸಹ ಕಾಡು ಮೇಡುಗಳಲ್ಲಿಯೇ ಜೀವಿಸುತ್ತಿರುವ ಬುಡಕಟ್ಟುಗಳಲ್ಲಿ ಈ ಭಾವನೆ ಬದಲಾಗಿಲ್ಲ. ಬುಡಕಟ್ಟುಗಳಲ್ಲಿ ಅಷ್ಟೇ ಅಲ್ಲ ನಾಗರಿಕರ ಮಧ್ಯೆ ಜೀವಿಸುತ್ತಿರುವ ಹಲವು ಹತ್ತು ಕೆಳಸ್ತರದ ಜಾತಿಗಳಲ್ಲಿಯೂ ಈ ಭಾವನೆ ಇದೆ. ಮೇಲ್ವರ್ಗದವರಿಗೆ ಬೆತ್ತಲೆಸೇವೆ, ಉರುಳುಸೇವೆ, ದೇವದಾಸಿಗಳಾಗುವುದು ಧಾರ್ಮಿಕ ಪ್ರತಿಷ್ಠೆಯಾದರೆ, ಕೆಳವರ್ಗದವರಿಗೆ ಮೈಮಾರಿಕೊಂಡು ಜೀವನ ಮಾಡುವ ಜೀವನೋಪಾಯವಷ್ಟೇ ಆಗಿದೆ. ಪ್ರಪಂಚದ ಎಲ್ಲಾ ಪ್ರಾರಂಭಿಕ ಸಂಸ್ಕೃತಿಗಳಲ್ಲಿಯೂ ಮುಕ್ತ ಲೈಂಗಿಕ ಪ್ರಕ್ರಿಯೆಯೇ ಕಂಡು ಬಂದಿದೆ. ಇಂದಿನ ಹಾಸಿಗೆ ಪೂಜೆ ಇದರ ಸಂಕೇತವಾಗಿ ಉಳಿದಿದೆ. ಇಲ್ಲಿ

ಅಶ್ಲೀಲತೆಯಾಗಲಿ ಅಸಹ್ಯತೆಯಾಗಲಿ, ಅನೈತಿಕತೆಯಾಗಲಿ ಇಲ್ಲ. ದೇವರ ಹೆಸರಿನಲ್ಲಿ ನಡೆಸುವ ಮುಕ್ತ ಲೈಂಗಿಕ ಸಂಪರ್ಕಕ್ಕೆ ಜನಪದರಲ್ಲಿ ಇಂದಿಗೂ ರೂಢಿಯಲ್ಲಿರುವ ಆಚರವೊಂದರನ್ನು ಇಲ್ಲಿ ಗಮನಿಸುವುದು ಅವಶ್ಯಕ.

ಈ ಎಲ್ಲ ಒತ್ತಡಗಳ ನಡುವೆಯೂ ಸಮಾಜ ಹೇರಿದ ಈ ಎಲ್ಲ ಒತ್ತಡಗಳ ನಡುವೆಯೂ ನಿಷೇಧಗಳ ಉಲ್ಲಂಘನೆಯ ಕ್ರಿಯೆ ನಿರಂತರವಾಗಿ ನಡೆದಿದೆ. ಹೀಗೆ ಉಲ್ಲಂಘನೆ ಮಾಡಿ ಶಿಕ್ಷೆಗೊಳಗಾದವರೇ ದೇವತೆಗಳು. ಈ ಗೆರೆದಾಟುವಿಕೆ ಅನ್ಯಜಾತಿಯವರೊಡನೆ ಹೊಂದುವ ಲೈಂಗಿಕ ಸಂಬಂಧವೇ ಆಗಬೇಕಿಲ್ಲ. ಅದು ಆಹಾರ ಪದ್ಧತಿಯ ಉಲ್ಲಂಘನೆಯೂ ಆಗಬಹುದು. ನೋಡಬಾರದ್ದನ್ನು ನೋಡುವುದರಿಂದ ಆಗಬಹುದು. ಮೇಲುಜಾತಿಯ ಹೆಣ್ಣುಮಗಳೊಬ್ಬಳು ಕೆಳಜಾತಿಯವರೊಂದಿಗೆ ಬೆಳೆಸಿದ ಗೆಳೆತನವೂ ಆಗಬಹುದು. ಮೇಲುಜಾತಿಯ ಹೆಣ್ಣುಮಗಳೊಬ್ಬಳಿಗೆ ಒಮ್ಮೆ ಹಸಿವಾಯಿತು. ಅವಳು ಹೊಲತಿಯಾದ ತನ್ನ ಗೆಳತಿಯಂದ ಗೆಣಸು ಪಡೆದು ತಿಂದಳು. ಅವಳ ದೈಹಿಕ ಹಸಿವು ಇಂಗಿತು. ಆದರೆ ಇದು ಸುದ್ದಿಯಾಗಿ ಅವಳು ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದಳು. ನಂತರ ಗ್ರಾಮದೇವತೆಯಾದಳು. ಈ ಉಲ್ಲಂಘನೆ ಅವಳಿಗೆ ಅನಿವಾರ್ಯವಾಗಿತ್ತು. ಹಸಿವನ್ನು ಇಂಗಿಸಿಕೊಳ್ಳುವುದರ ಹೊರತು ಅವಳಿಗೆ ಯಾವುದೇ ದಂಗೆಯ ಉದ್ದೇಶ ಇರಲಿಲ್ಲ. ಈ ಸರಳವಾದ ಉಲ್ಲಂಘನೆಗೆ ಅವಳು ಬಹಳ ಬೆಲೆ ತೆರಬೇಕಾಯಿತು. ಗುಲ್ಬರ್ಗಾ ಜಿಲ್ಲೆಯ ಗೋಳದಲ್ಲಿ ಪೂಜೆಗೊಳ್ಳುತ್ತಿರುವ ಲಕ್ಕಮ್ಮನನ್ನು ಮುಂಭಾಗದಿಂದ ಪೂಜಿಸುವಂತಿಲ್ಲ. ಹಿಂಭಾಗದಿಂದ ಪೂಜಿಸಬೇಕು. ಇದನ್ನು 'ಕುಂಡಿ ಪೂಜೆ' ಎನ್ನುವರು. ಈ ಆಚರಣೆಯ ಹಿಂದೆ ಒಂದು ಕಥೆ ಇದೆ. ಮೇಲುಜಾತಿಯ ಈ ಹೆಣ್ಣು ಮಗಳು ಮಾಂಸಾಹಾರಿಯಾದಳು. ವೀರಣ್ಣ ಎಂಬುವವನ ನೇತೃತ್ವದಲ್ಲಿ ಊರಜನ ಇವಳನ್ನು ಅಟ್ಟಿಸಿಕೊಂಡು ಬಂದರು. ಧುತ್ತರಿಗಿಯಿಂದ ಅವಳು ಗೋಳದವರೆವಿಗೂ ಓಡಿದವಳು. ಗೋಳದ ಹತ್ತಿರ ನೆಲಮುಖನಾಗಿ ಬಿದ್ದು ಬಿಟ್ಟಳು. ಅಲ್ಲಿ ಅವಳು ಸತ್ತು ದೇವತೆಯಾದಳು. ಭಯಗೊಂಡ ಜನ ಅವಳನ್ನು ಆ ಭಂಗಿಯಲ್ಲೇ ಪೂಜಿಸಲಾರಂಭಿಸಿದರು. ಒಂದೊಂದು ಪ್ರದೇಶದ ಸಂಸ್ಕೃತಿಯೂ ವೈವಿಧ್ಯವಾಗಿದ್ದು ಗಂಡು-ಹೆಣ್ಣಿನ ಸಂಬಂಧದ ಬಗೆಗಿನ ನಿಯಮಗಳು ಬಹುಮುಖ್ಯವಾಗಿರುತ್ತದೆ. ಅದರಲ್ಲೂ ಲೈಂಗಿಕ ಪೂಜೆ ಆಧಾರದಲ್ಲಿ ಅತ್ಯಂತ ಪ್ರಾಚೀನಕಾಲದಿಂದಲೂ ಇರುವುದು ಶಕ್ತಿ ಪೂಜೆ, ಆದಿಶಕ್ತಿ ಸಪ್ತ ಮಾತೃಕೆಯರ ಕಲ್ಪನೆ, ಶಾಕ್ತಪಂಥ ಇವುಗಳೂ ಕೂಡ ಬೇರೆ ಬೇರೆ ಆಯಾಮದಲ್ಲಿರುವಂತಹವು.

ಜನಪದ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಆರಂಭಗೊಂಡ ಲೈಂಗಿಕ ಆಚರಣೆಗಳಿಗೆ ಅಂದಿನ ಜನಸಮುದಾಯದ ನಂಬಿಕೆಗಳು, ಭಯ, ಮುಗ್ಧತೆ, ಮೌಢ್ಯತೆ, ಪ್ರಕೃತಿಯೊಂದಿಗಿನ ಬೆಸುಗೆಗಳು ಕಾರಣವಾಗಿದ್ದವು. ಇವು ಕಾಲದಿಂದ ಕಾಲಕ್ಕೆ ಮಾನವನ ಬದುಕಿನ ಭಾಗವಾಗಿ ಹರಿಯುತ್ತಲೇ ಬಂದಿವೆ. ಆದರೆ ಇಂದು ಅಂದಿನಿಂದ ಇಂದಿನವರೆವಿಗೂ ಕೆಲವು ಮಾರ್ಪಾಡುಗಳಾಗಿದ್ದರೂ ಜೀವಂತವಾಗಿರುವ ಆಚರಣೆಗಳು ದಿಕ್ಕು ತಪ್ಪುತ್ತಿವೆ. ಇಂದಿನ ಆಧುನಿಕತೆಯ ಸೋಗುಗಳು ಇವುಗಳನ್ನು ದುರುಪಯೋಗ ಪಡಿಸುತ್ತಿರುವುದು ಕಣ್ಣಿಗೆ ರಾಚುವಷ್ಟು ಬೆಳೆದುನಿಂತಿವೆ. ಪುರುಷ ಪ್ರಧಾನ್ಯ ವ್ಯವಸ್ಥೆಯು ಹೆಣ್ಣನ್ನು ಒಂದು ಭೋಗದ ಸರಕಾಗಿಸಿಕೊಳ್ಳಲು ಅತ್ಯಂತ ಸುಲಭ ಮಾರ್ಗವಾಗಿದೆ.

ಬಡತನ, ನಿರುದ್ಯೋಗ, ಅನಕ್ಷರತೆ, ಪರಿಸ್ಥಿತಿಗಳ ಒತ್ತಡಗಳು ಇಂದು ಹೆತ್ತವರನ್ನು ಅಸಹಾಯಕರನ್ನಾಗಿಸುವ, ದೇವರ, ಧರ್ಮದ ಹೆಸರಲ್ಲಿ ಹಡೆದ ಮಕ್ಕಳನ್ನೇ ವೇಶ್ಯಾವಾಟಿಕೆಗೆ ತಳ್ಳುವ ಪರಿಪಾಠ ಹೆಚ್ಚುತ್ತಿದೆ. ಮಾನವನ ಅತ್ಯಗತ್ಯಗಳಲ್ಲಿ ಒಂದಾದ ಲೈಂಗಿಕತೆಯು ಇಂದು ಉಳ್ಳವರ ಭೋಗಲಾಲಸೆಯ ಭಾಗವಾಗಿದೆ. ದೇವದಾಸಿ, ಪಾತರದವರು, ಬಸವಿ, ಜೋಗತಿ... ಹೀಗೆ ದೇವರ ಹೆಸರಲ್ಲಿ ದಿನನಿತ್ಯ ಕೆಂಪುದೀಪಗಳಿರುವ ದೊಡ್ಡದೊಡ್ಡ ನಗರಗಳಿಗೆ ಮಾರಾಟದ ವಸ್ತುವಾಗಿ ರವಾನೆಯಾಗುತ್ತಿದ್ದಾರೆ. ಪ್ರಾಚೀನದಿಂದಲೂ ಬಂದಿರುವ ಜನಪದ ಮತ್ತು ಬುಡಕಟ್ಟು ಸಮುದಾಯಗಳ ಲೈಂಗಿಕ ಆಚರಣೆಗಳು ಇಂದಿಗೂ ವೇಶ್ಯಾವಾಟಿಕೆಯ ಎಲ್ಲ ಸ್ತರಗಳಿಗೂ ಬೇರುಗಳಾಗಿರುವುದು ಗಮನಾರ್ಹವಾಗಿದೆ.

ಒಂದೊಂದು ಪ್ರದೇಶದ ಸಂಸ್ಕೃತಿಯೂ ವೈವಿಧ್ಯವಾಗಿದ್ದು ಗಂಡು ಹೆಣ್ಣಿನ ಸಂಬಂಧದ ಬಗೆಗಿನ ನಿಯಮಗಳು ಬಹುಮುಖ್ಯವಾಗಿರುತ್ತವೆ. ಅದರಲ್ಲೂ ಲೈಂಗಿಕ ಪೂಜೆ ಆಧಾರದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಇರುವುದು ಶಕ್ತಿಪೂಜೆ. ಆದಿಶಕ್ತಿ, ಸಪ್ತಮಾತೃಕೆಯರ ಕಲ್ಪನೆ, ಶಾಕ್ತಪಂಥ ಇವುಗಳೂ ಕೂಡ ಬೇರೆ ಬೇರೆ ಆಯಾಮದಲ್ಲಿರುವಂತಹವು. ಒಂದು ವರ್ಗದವರು ಇನ್ನೊಂದು ವರ್ಗದ ಮೌಲ್ಯವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಸಂಕೇತವಾಗಿ ತೋರುತ್ತದೆ. ವ್ಯವಸ್ಥೆಯ ರಕ್ಷಕರು ಯಾವಾಗಲೂ ಮೇಲಿರುತ್ತಾರೆ. ವ್ಯವಸ್ಥೆಯ ಮೀರಿದವರು ಬಲಿಯಾಗುತ್ತಾರೆ. ಇಂದಿನ ಲೈಂಗಿಕ ವೃತ್ತಿ ಸಮುದಾಯವೂ ಈ ವ್ಯವಸ್ಥೆಯ ಹುನ್ನಾರಗಳಿಗೆ ಬಲಿಯಾದವರು.

ಅಡಿ ಟಿಪ್ಪಣಿಗಳು

೧. ಡಿ.ಡಿ.ಕೊಸಾಂಬಿ-ಪುರಾಣ ಮತ್ತು ವಾಸ್ತವ. ಅನು: ಟಿ.ಎಸ್. ವೇಣುಗೋಪಾಲ್, ಶೈಲಜಾ, ಪು.೧೦೦, ೧೦೩, ೧೦೪.

೨. ಆದೇ ಪುಟ ೧೦೫

೩. ಅದೇ ಪುಟ ೧೦೬

೪. ಡಾ. ಸಿದ್ಧಲಿಂಗಯ್ಯ - ಗ್ರಾಮದೇವತೆಗಳು ಪುಟ. ೧೮.

೫. ಅದೇ ಪುಟ ೧೯

೬. ಅದೇ ಪುಟ ೨೯೯

೭. ಪ್ರೊ. ಎನ್. ಚಂದ್ರಪ್ಪ ಎಲ್ಲಮ್ಮ: ಒಂದು ಜಾನಪದೀಯ ಅಧ್ಯಯನ, ಪುಟ.೫೪,

೮. ಅದೇ ಪುಟ - ೫೯

೯. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವೇಶ್ಯಾಜೀವನ. ಡಿ.ಟಿ. ಬಸವರಾಜ್ (ಅಪ್ರಕಟಿತ) ಪುಟ 24

೧೦. ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ- ತಾಪಿ ಧರ್ಮಾರಾವ್ ಪು.50

೧೧. ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ- ತಾಪಿ ಧರ್ಮಾರಾವ್ ಪು.51

೧೨. ಅದೇ ಪುಟ ೨೩೧

೧೩. ಡಾ. ಸಿದ್ಧಲಿಂಗಯ್ಯ-ಗ್ರಾಮದೇವತೆಗಳು ಪುಟ.೩೦೧

೧೪. ಡಾ. ಶೈಲಜ ಹಿರೇಮಠ-ಸ್ತ್ರೀಕಥನ ಪುಟ.೬೧,೬೩,೬೪

೧೫. ಡಾ. ಶೈಲಜ ಹಿರೇಮಠ- ಪಾತರದವರು ಪುಟ. ೮೪, ೮೬

೧೬. ಅದೇ ಪುಟ ೮೬

೧೭. ಡಾ. ಜೋಗನ್ ಶಂಕರ್, ದೇವದಾಸಿ ಸಂಪ್ರದಾಯ ಪುಟ.೮೯

೧೮. ಡಾ. ಹಿ.ಚಿ. ಬೋರಲಿಂಗಯ್ಯ: ಸಿರಿಯ ಆ ನಿಶಾರಾತ್ರಿ ಪುಟ. ೭೧

೧೯. ಅದೇ ಪುಟ ೭೭

೨೦. ಅದೇ ಪುಟ. ೭೯

೨೧. ಡಾ. ಜೋಗನ್ ಶಂಕರ್; ಪುಟ. ೭೦, ೭೧


೨೨. ಅದೇ ಪುಟ ೭೩, ೭೪

೨೩. ಗ್ರಾಮದೇವತೆಗಳು, ಪುಟ.೧೦೭

೨೪. ಡಾ. ಹಿ.ಚಿ. ಬೋರಲಿಂಗಯ್ಯ, ವಿಸ್ಮೃತಿ ಮತ್ತು ಸಂಸ್ಕೃತಿ ಪುಟ. ೬೫, ೬೬

೨೫. ಗ್ರಾಮದೇವತೆಗಳು. ಪುಟ. ೭೯


ಎಂ.ಜಿ. ದೀಪಿಕಾ..



ಅಧ್ಯಾಯ - ೬

ವೇಶ್ಯಾವಾಟಿಕಾ ಕೇಂದ್ರಗಳು:

ಆಧುನಿಕ ರೂಪ ವೈವಿಧ್ಯ ಮತ್ತು ಸಾಮಾಜಿಕ ಸ್ವರೂಪಗಳು



ಹೆಣ್ಣು ಒಬ್ಬ ವ್ಯಕ್ತಿಯಾಗದೆ ವ್ಯಕ್ತಿಯೊಬ್ಬನ ಸ್ವತ್ತಾಗಿ ಸಮಾಜದಲ್ಲಿ 'ಸರಕು' ಆದಂತಹ ಸಂಬಂಧವನ್ನು ಹೊಂದಿರುವವರೆಗೂ ದೇಹ ಮಾರಾಟಕ್ಕಿಟ್ಟ ವಸ್ತುವಾಗುತ್ತದೆ.

ಸಮಾಜ ಎಲ್ಲಿಯವರೆಗೂ ಹೆಣ್ಣಿನ ಸರ್ವಸ್ವವೇ ಅವಳ ಶೀಲ, ಪಾತಿವ್ರತ್ಯ ಎಂಬ ನಿಲುವನ್ನು ತಾಳುತ್ತದೆಯೋ, ಅಲ್ಲಿಯವರೆಗೂ ವಿವಾಹ ವ್ಯವಸ್ಥೆಯೊಂದಿಗೆ ವೇಶ್ಯಾವಾಟಿಕೆಯ ವ್ಯವಸ್ಥೆಯೂ ಅನಿವಾರ್ಯವಾಗಿ ಸಾಮಾಜಿಕ ಸಮಸ್ಯೆಯಾಗಿ ಉಳಿದು ಬಿಡುತ್ತದೆ.

ವೇಶ್ಯಾವಾಟಿಕೆ ಎಂದಿನಿಂದ ಆರಂಭವಾಯಿತು ಎಂದು ಸ್ಪಷ್ಟವಾಗಿ ಹೇಳಲಾಗದಿದ್ದರೂ ಋಗ್ವೇದದಲ್ಲಿಯೂ ವೇಶ್ಯಾವಾಟಿಕೆಯ ಉಲ್ಲೇಖಗಳು ಕಾಣಸಿಗುತ್ತವೆ. ಹಾಗೆಯೇ ವಿಶ್ವದಾದ್ಯಂತ ದೇಹದ ಮಾರಾಟ ಸರ್ವೇ ಸಾಮಾನ್ಯ. ಪ್ರಾಚೀನ ನಾಗರೀಕತೆಯಿರುವ ಭಾರತದಂತಹ ದೇಶದಲ್ಲೂ ವೇಶ್ಯಾವೃತ್ತಿಗೆ ತನ್ನದೇ ಆದ ದೀರ್ಘ ಇತಿಹಾಸವಿದೆ. ಪತ್ನಿ ಗಂಡನ ವೈಯ್ಯಕ್ತಿಕ ಸೊತ್ತೆಂದು ಹೆಣ್ಣನ್ನು ಪರಿಗಣಿಸಿದಂದಿನಿಂದಲೂ ವೇಶ್ಯಾವೃತ್ತಿ ಸ್ಪಷ್ಟವಾಗಿ ಗೋಚರಿಸಲಾರಂಭಿಸಿತು.

ಪಾಳೇಗಾರಿ ಮೌಲ್ಯಗಳು, ಪುರೋಹಿತಶಾಹಿ ಪ್ರಭಾವಗಳು ಹೆಣ್ಣನ್ನು ಒಬ್ಬ ವ್ಯಕ್ತಿಯಾಗಿ, ಮನುಷ್ಯ ಜೀವಿಯಾಗಿ ಪರಿಗಣಿಸಿಯೇ ಇಲ್ಲ. ರಾಜರ, ಭೂ ಮಾಲೀಕರ, ಪುರೋಹಿತರ, ಸೈನಿಕರ, ರಾಜಕಾರಣಿಗಳ ಕಾಮ ಪೂರೈಕೆಯ ವಸ್ತುವಾಗಿ ಕಾಲದಿಂದ ಕಾಲಕ್ಕೆ, ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಸಾಗಿ ಬಂದಿದೆ.

ಭಾರತೀಯ ನಾರಿ ಅನೇಕ ಸಾಮಾಜಿಕ ಸ್ತರಗಳ, ಐತಿಹಾಸಿಕ ಯುಗಗಳ ರಾಜಕೀಯ ಪರಿಸ್ಥಿತಿಗಳ ಮೂಲಕ ಹಾದು ಬಂದಿದ್ದಾಳೆ. ನೀರನ್ನೂ, ಮತ್ತು ಬೆಂಕಿಯನ್ನೂ ಆಕೆ ಒಂದೇ ರೀತಿಯಲ್ಲಿ ದಾಟಿ ಬಂದಿದ್ದಾಳೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿಯೂ ಹೆಣ್ಣಿನ ಲೈಂಗಿಕ ಸಮಸ್ಯೆ ಹಲವಾರು ಆಯಾಮಗಳನ್ನು ಪಡೆದಿದೆ. ಇಂದಿನ ಸಮಾಜದ ಸಂಸ್ಕೃತಿಯ ಒಂದು ಭಾಗವಾಗಿ ಇದು ಹರವಿಕೊಂಡಿದೆ. ವೇಶ್ಯಾವಾಟಿಕೆ ಎನ್ನುವಾಗಲೇ ಮಡಿವಂತಿಕೆಯ ಸೋಗು ಪರದೆಯೆಳೆಯುತ್ತದೆ. ಆದರೆ ಮಾನವ ಸಹಜವಾದ ಒಳ ಮನಸ್ಸು ತೆರೆದುಕೊಳ್ಳುತ್ತದೆ. ಏಕೆಂದರೆ ಸೃಷ್ಟಿಯ ಎಲ್ಲಾ ಜೀವರಾಶಿಗಳಿಗೂ ಮೈಥುನ ಪ್ರವೃತ್ತಿಯ ಬಹು ಮುಖ್ಯವಾದುದು. ಅಂತಹ ಮೈಥುನ ಕ್ರಿಯೆಯ ಬುನಾದಿಯಿಂದಲೇ ಹುಟ್ಟಿಕೊಂಡಿದ್ದು ಈ ವೇಶ್ಯಾವಾಟಿಕೆ.

ಸೃಷ್ಟಿಯ ಇತರೆ ಜೀವಿಗಳಿಗಿಂತ ಮನುಷ್ಯನ ನಡವಳಿಕೆಗಳು ಭಿನ್ನ. ಹಾಗೆಯೇ ಲೈಂಗಿಕ ಕ್ರಿಯೆಯಲ್ಲಿಯೂ ಕೂಡ . ಜೀವ ಸಂಕುಲದಲ್ಲಿ ಲೈಂಗಿಕ ಕ್ರಿಯೆಯ ತೃಷೆಯು ಋತುಮಾನಗಳಿಗೆ ನಿರ್ಧಿಷ್ಟ ಕಾಲಾವಧಿಯ ಪರಿಧಿಯಲ್ಲಿರುತ್ತದೆ. ಆದರೆ ಮಾನವ ಜೀವಿಯ ಲೈಂಗಿಕ ತೃಷೆಯು ಸದಾ ಜಾಗೃತ ಸ್ಥಿತಿಯಲ್ಲಿರುತ್ತದೆ.

ಸುಖಾನುಭವ ಮತ್ತು ಸಂತಾನೋತ್ಪತ್ತಿ ಇದ್ದೂ ಕೂಡ ಮನುಷ್ಯನ ಲೈಂಗಿಕ ಬದುಕಿನಲ್ಲಿ ಸಂಕೀರ್ಣತೆ ಮತ್ತು ವೈವಿಧ್ಯ ರೂಪಗೊಳ್ಳಲು ಮುಖ್ಯ ಕಾರಣವಾಗಿದೆ. ಸಂತನಾಭಿವೃದ್ಧಿ ಮೀರಿದ ಆನಂದಕ್ಕಾಗಿ ಲೈಂಗಿಕ ಕ್ರಿಯೆ ಮನುಷ್ಯನಿಗೆ ಮಾತ್ರ. ಇದನ್ನು ಹಿಂಗಿಸಿಕೊಳ್ಳಲು ಸಮರ್ಥನೆ.

ಮನುಕುಲದ ಆರಂಭದಿಂದಲೂ ಲೈಂಗಿಕ ಜೀವನ ಕ್ರಮ ಒಂದಲ್ಲ ಒಂದು ರೀತಿಯಲ್ಲಿ ಆಯಾ ಕಾಲ ಘಟ್ಟಗಳಿಗೆ ಪೂರಕವಾದ ವ್ಯವಸ್ಥೆಯೊಂದಿಗೆ ನಡೆದುಕೊಂಡೇ ಬಂದಿದೆ. ವೇಶ್ಯಾವೃತ್ತಿ ಮಾನವನ ತೀರಲಾರದ ಅಬಾದಿತ ತೃಷೆಯೊಂದಿಗೆ ಪಯಣಿಸುತ್ತಾ ಬಂದಿದೆ.

ಪುರಾತನ ನಾಗರೀಕ ಸಮಾಜಗಳಿದ್ದ ಗ್ರೀಕ್, ರೋಮ್, ಬ್ಯಾಬಿಲೋನಿಯಾದಲ್ಲಿಯೂ ವೇಶ್ಯಾವೃತ್ತಿ ಇದ್ದುದು ಕಂಡು ಬಂದಿದೆ. ಇದು ಮಾನವನ ಪ್ರಾಚೀನ ವೃತ್ತಿಗಳಲ್ಲಿ ಒಂದು. ಇಲ್ಲಿ ಮನುಷ್ಯನ ಮೂಲಭೂತ ಪ್ರವೃತ್ತಿ ಲೈಂಗಿಕ ಸಂಬಂಧ ಕುರಿತ ನೈತಿಕತೆಯ ಪ್ರಶ್ನೆ- ದೇಹ ವಿಕ್ರಯದಂತಹ ಗಂಭೀರ ಅಂಶಗಳ ಸಂಕೀರ್ಣ ಸ್ವರೂಪ ಗಮನಾರ್ಹವಾಗಿದೆ. ಈ ಹಿನ್ನೆಲೆಯಲ್ಲಿಯೇ ಈ ವೃತ್ತಿ ಕುತೂಹಲಕಾರಿ!

ವೇಶ್ಯಾವೃತ್ತಿಯಲ್ಲಿ ಪ್ರಮುಖವಾಗಿ ಮೂರು ಸ್ವರೂಪಗಳನ್ನು ಕಾಣಬಹುದಾಗಿದೆ.

1. **ಧಾರ್ಮಿಕ ವೇಶ್ಯಾವೃತ್ತಿ**

2. **ಸಾಮಾಜಿಕ ವೇಶ್ಯಾ ವೃತ್ತಿ**

3. **ವಿಲಾಸಿ ವೇಶ್ಯಾವೃತ್ತಿ**

ಧಾರ್ಮಿಕ ವೇಶ್ಯಾವೃತ್ತಿ :

''ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ ಎಂಬಲ್ಲಿ ಹುಟ್ಟಿ ಬಂದೆ ಏನೇ ಎಲ್ಲವ್ವಾ ತಾಯೇ... ಬಡ ಹೆಣ್ಣು ಮಕ್ಕಳ ಬೆತ್ತಲೆ ಮಾಡೋ ಕೆಲಸ ಯಾಕವ್ವ'' ಇಲ್ಲಿ ಮುಖ್ಯವಾಗಿ ಬಡತನ, ದೈವಶಕ್ತಿ, ಶೋಷಣೆ, ಮುಗ್ದತೆ ಎಲ್ಲಾ ಅಂಶಗಳನ್ನೂ ಮೇಲಿನ ಜನಪದ ಗೀತೆಯಿಂದಲೇ ಗುರುತಿಸಬಹುದಾಗಿದೆ. ಎಲ್ಲಾ ಪುರುಷರೂ ಬಂದು ಅಲ್ಲಿ ನೆರೆದಿರುತ್ತಿದ್ದರು. ದೇವಾಲಯದ ಅಂಗಳ ಶೃಂಗರಿಸಿಕೊಂಡಿರುತ್ತಿತ್ತು ಸ್ತ್ರೀಯರೊಂದಿಗೆ. ದೇವಾಲಯಕ್ಕೆ ಬಂದ ಪುರುಷರು ಅಲ್ಲಿದ್ದ ಸ್ತ್ರೀಯರ ಮೇಲೆ ಬೆಳ್ಳಿಯ ನಾಣ್ಯಗಳನ್ನು ಎಸೆಯುತ್ತಿದ್ದರು. ಯಾವ ಪುರುಷನ ನಾಣ್ಯ ತನ್ನ ಉಡಿಯಲ್ಲಿ ಬಂದು ಬೀಳುವುದೋ ಆತನೊಡನೆ ಆ ಸ್ತ್ರೀ ಲೈಂಗಿಕ ಸಂಪರ್ಕ ಹೊಂದುತ್ತಿದ್ದಳು. ಇಲ್ಲಿ ಹೆಣ್ಣಾದವಳು ತನ್ನ ಜೀವಮಾನದಲ್ಲಿ ಒಮ್ಮೆಯಾದರೂ ಕೈಗೊಳ್ಳಲೇ ಬೇಕಿದ್ದ ಸಂಪ್ರದಾಯವಿದು. ಇದು ಹೆರಡೋಡಸ್‌ನ ದಾಖಲೆಗಳ ಪ್ರಕಾರ ಕ್ರಿ.ಪೂ. 5ನೇ ಶತಮಾನದಲ್ಲಿ ಬ್ಯಾಬಿಲೋನಿಯಾದಲ್ಲಿದ್ದ ವೀನಸ್ ದೇವತೆ ಮಿಳಿತಾ ದೇವಾಲಯದಲ್ಲಿದ್ದ ಪದ್ಧತಿ.

ಪಶ್ಚಿಮ ಏಷ್ಯಾ, ಉತ್ತರ ಆಫ್ರಿಕಾ, ಸೈಪ್ರಸ್ ಮತ್ತು ಮೆಡಿಟರೇನಿಯನ್ ದೀಪಗಳಲ್ಲಿಯೂ ಇಂತಹುದೇ ಪದ್ಧತಿಯನ್ನು ಕಾಣಬಹುದಾಗಿದೆ. ಧಾರ್ಮಿಕ ವೇಶ್ಯಾವೃತ್ತಿಯು ಕನ್ಯತ್ವವನ್ನು ದೇವರಿಗೆ ಸೇವಾಭಾವದಿಂದ ಅರ್ಪಿಸುವುದು, ಇಷ್ಟಾರ್ಥವಾಗಿ ಹರಿಕೆ ಸಲ್ಲಿಸುವುದು. ಹೀಗೆ ಹುಟ್ಟಿಕೊಂಡ ಈ ಪದ್ಧತಿಯು ಕಾಲಾನಂತರದಲ್ಲಿ ರೂಪಾಂತರ ಹೊಂದುತ್ತಾ ಬಂತು.

ಶ್ರೀ ಜೋಗನ್ ಶಂಕರ್‌ರವರು 'ಈ ಆಚರಣೆಯು ಉತ್ತರ ಭಾರತದಲ್ಲಿ, ಮಧ್ಯ ಭಾರತದಲ್ಲಿ ಹಾಗೂ ಪೂರ್ವದ ಪುರಿಯಲ್ಲಿ, ದಕ್ಷಿಣ ಭಾರತದಲ್ಲಿ ಬಹು ಮುಖ್ಯವಾಗಿ ಕರ್ನಾಟಕದಲ್ಲಿ ಗುರುತಿಸಬಹುದು. ಕೆಳ ಜಾತಿಯ ಜನರನ್ನು ಶೋಷಣೆ ಮಾಡಲೆಂದು ಪುರೋಹಿತಶಾಹಿ ಮಾಡಿಕೊಂಡಿರುವ ವ್ಯವಸ್ಥೆ ಇದಾಗಿರಬಹುದು. ಧರ್ಮದ ಹೆಸರಿನಲ್ಲಿ ಕೆಳ ಜಾತಿಯ ಹೆಣ್ಣು ಮಕ್ಕಳನ್ನು ಶೋಷಿಸಲೆಂದೇ ಈ ವ್ಯವಸ್ಥೆಯನ್ನು ರೂಪಿಸಲಾಗಿದೆ' ಎನ್ನುತ್ತಾರೆ.

ವ್ಯಾಪಾರ ಕೇಂದ್ರಗಳು, ರೇವು ಪಟ್ಟಣಗಳಲ್ಲಿದ್ದ ದೇವಾಲಯಗಳಂತೂ ಸಾಕಷ್ಟು ಹಣ ಸಂಗ್ರಹ ಮಾಡುತ್ತಿದ್ದವು. ಇಲ್ಲಿಗೆ ಬರುತ್ತಿದ್ದ ನಾವಿಕರು ವರ್ತಕರು ದೇವಾಲಯಗಳಿಗೆ ತಪ್ಪದೇ ಭೇಟಿ ನೀಡಿ ಲೈಂಗಿಕ ಸಂಪರ್ಕ ಪಡೆಯುತ್ತಿದ್ದರು. ಇವರನ್ನು ಉಪಚರಿಸಲೆಂದೇ ವೇಶ್ಯಾ ಸಿಬ್ಬಂದಿಗಳಿದ್ದರು. ವೇಶ್ಯಾಗೃಹಗಳಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳು ಇಲ್ಲಿದ್ದುದರಿಂದ ನಾವಿಕರು ಲೆಕ್ಕಿಸದೆ ಹಣ ಸುರಿಯುತ್ತಿದ್ದರು. ಈ ನಿಟ್ಟಿನಲ್ಲಿ ಈ ವೃತ್ತಿಯ ಬಹುಪಾಲು ಆದಾಯ ದೇವಾಲಯಗಳಿಗೆ ಸಂದಾಯವಾಗುತ್ತಿತ್ತು. ಪುರಾತನ ಕಾಲದಲ್ಲಿ ಅನೇಕ ದೇವಾಲಯಗಳು ಇಂಥ ವೃತ್ತಿನಿರತ ವೇಶ್ಯೆ ಸಿಬ್ಬಂದಿಯನ್ನು ಆದಾಯ ಮೂಲಗಳಾಗಿಟ್ಟುಕೊಂಡಿದ್ದರು. ಈ ಆದಾಯ ನೇರವಾಗಿ ದೇವಸ್ಥಾನಗಳಿಗೆ, ಪುರೋಹಿತರಿಗೆ ಸೇರುತ್ತಿತ್ತು. ಇಲ್ಲಿ ಮುಖ್ಯವಾಗಿ ಆರ್ಥಿಕವಾದ ತಳಪಾಯದಲ್ಲಿ ಸಾಂಸ್ಕೃತಿಕ, ಧಾರ್ಮಿಕವಾದ ಮೇಲ್‌ರಚನೆಗಳನ್ನು ಸೃಷ್ಟಿಸಿಕೊಳ್ಳಲಾಗಿದೆ. ದೇವಾಲಯದ ಪರಿವಾರದಲ್ಲಿ ವಾದ್ಯ ವಾದಕರುಗಳು. ಸ್ವಚ್ಛ ಮಾಡುವವರು ಹೀಗೆ ಅದರ ಒಂದು ಭಾಗವಾಗಿ ವೇಶ್ಯೆಯರೂ ಕೂಡ ಸೇವಾ ನಿಷ್ಠರಾಗಿರುತ್ತಿದ್ದರು. ಈ ಸೇವಾ ನಿಷ್ಠೆ ಪರಂಪರಾನುಗತವಾಗಿ ಹರಿದು ಬರುತ್ತಿತ್ತು. ವೈದಿಕನ ಮಗ ವೈದಿಕನಾಗುವಂತೆ ಕುಂಬಾರನ ಮಗ ಕುಂಬಾರನಾಗುವಂತೆ, ವೇಶ್ಯೆಯ ಮಗಳು ವೇಶ್ಯೆಯಾಗಿ ತೊಡಗಿಸಿಕೊಳ್ಳುತ್ತಿದ್ದರು.

ಸಂಗೀತ, ನೃತ್ಯ, ಕೌಶಲ್ಯಗಳು, ನೈಪುಣ್ಯತೆಗಳೊಂದಿಗೆ ಪುರುಷ ಪ್ರಾಧಾನ್ಯತೆಯ, ಪುರೋಹಿತಶಾಹಿಯ, ಪಾಳೆಗಾರಿಕೆಯ ಮನಗಳನ್ನು ತಣಿಸುವುದನ್ನೇ ತಮ್ಮ ಧರ್ಮವಾಗಿಸಿಕೊಂಡಿರುವುದು ಗಮನಾರ್ಹ. ಅವರನ್ನು ಭೋಗಿಸುವ ವರ್ಗ ಯಾವಾಗಲೂ ಮೇಲ್‌ಸ್ತರದಲ್ಲಿರುತ್ತಿತ್ತು.

''ಇಲ್ಲಿ ಊರಿನ ಆದಿದೈವ ಗ್ರಾಮ ದೇವತೆಗಳು 'ದೇವದಾಸಿ' ಅಥವಾ ಧಾರ್ಮಿಕ ವೇಶ್ಯಾವೃತ್ತಿಯ ಮೂಲ ಪ್ರೇರಕರಾಗಿದ್ದಾರೆ. ವೈಭವೋ ಪೇತ ದೈವವಲ್ಲದಿದ್ದರೂ ಕೆಳ ಜಾತಿಯವರ ಆರಾಧ್ಯ ದೈವ, ಗ್ರಾಮ ದೇವತೆ. ಈ ದೈವದ ಉತ್ಸವಗಳಲ್ಲಿ ಮಾತ್ರ ಸಮಾನತೆ! ಎಲ್ಲ ವರ್ಗದ ಜನರೂ ಪಾಲುದಾರರು, ಈ ಸಿದ್ಧಾಂತದಲ್ಲಿಯೇ

ದೇವದಾಸಿ, ಜೋಗತಿ, ಬಸವಿಯರು ಎಲ್ಲ ಜನರ ಸ್ವತ್ತಾಗಿರುವುದನ್ನು ಗಮನಿಸಬಹುದು.'' (ಚನ್ನಣ್ಣ ವಾಲೀಕಾರ)

ಬ್ಯಾಬಿಲೋನಿಯಾ, ಇಷ್ಟಾರ, ಪಶ್ಚಿಮ ಆಫ್ರಿಕಾಗಳಲ್ಲಿಯೂ ಕೂಡ ಧಾರ್ಮಿಕ ವೇಶ್ಯಾವಾಟಿಕೆ ಮತ್ತು ಪ್ರಣಯ ದೇವತೆಗಳ ಬಗ್ಗೆ ಸಾಕಷ್ಟು ದೃಷ್ಟಾಂತಗಳಿವೆ. ಧಾರ್ಮಿಕ ವೇಶ್ಯಾ ವೃತ್ತಿಯು ದೈವೀ ಮೂಲವಾಗಿರುವುದರಿಂದ ಭಯ ಭಕ್ತಿಗಾಗಿ, ಕಷ್ಟ ನಿವಾರಣೆಗಾಗಿ, ಬಡತನ, ಅನಕ್ಷರತೆ, ಮೂಡನಂಬಿಕೆಗಳ ಕೂಪವಾಗಿ, ಶೋಷಣೆಯ ಪ್ರತೀಕವಾಗಿ ಹುಟ್ಟಿಕೊಂಡರೂ ಇದರ ಮೂಲ ಆಶಯವನ್ನು ಅಳೆದು ನೋಡಿದಾಗ ಮನುಷ್ಯನ ಭೋಗಲಾಲಸೆ, ಪುರುಷ ಪ್ರಧಾನ ಸಮಾಜದ ವಕ್ರಾರತೆ, ಐಶಾರಾಮ ಜೀವನ ನಡೆಸಲು ತಾನೇ ಸೃಷ್ಟಿಸಿಕೊಂಡಂತಿದೆ.

ದೇವಲೋಕವನ್ನು ಸೃಷ್ಟಿಸಿದ ಮನುಷ್ಯ ದೇವತೆಗಳಿಗೂ ದೇವಲೋಕದ ವೇಶ್ಯೆಯರನ್ನು ಸೃಷ್ಟಿಸಿದ್ದಾನೆ. ಸಂಪ್ರದಾಯ, ಜೀವನ ಸಮಸ್ಯೆಗಳನ್ನು ಸೃಷ್ಟಿಸಿದ ಪುರುಷ ಪ್ರಧಾನ ವ್ಯವಸ್ಥೆಯು ಧಾರ್ಮಿಕ ವೇಶ್ಯೆಯರನ್ನು ಸೃಷ್ಟಿಸಿತು.

ದೇವದಾಸಿಯರಲ್ಲಿ ಬಹುತೇಕರು ವಿವಿಧ ಹರಿಜನ ಪಂಗಡಗಳಾದ ಮಹಾರರು ಮತ್ತು ಮಾಂಗರು, ದೇತರು ಮುಂತಾದ ಪಂಗಡಗಳಿಗೆ ಸೇರಿದವರಾಗಿರುತ್ತಾರೆ. ಶೇ. 36.7ರಷ್ಟು ದಲಿತ ಮತ್ತು ಹಿಂದುಳಿದ ವರ್ಗಗಳಿಂದ ಬಂದ ಹೆಣ್ಣು ಮಕ್ಕಳು ಈ ದಂಧೆಯ ವಕ್ತಾರರಾಗಿದ್ದಾರೆ. ಇದಕ್ಕೆ ಬಲಿಯಾಗುತ್ತಿರುವವರು ಬಹುಮಟ್ಟಿಗೆ ಬೇಡ, ಮೊಂಡ, ಹೊಲೆಯ, ಮಾದಿಗ, ಲಂಬಾಣಿ, ವಡ್ಡರು. (ದೇವದಾಸಿ ಸಂಪ್ರದಾಯ, ಪುಟ. 229)

ಬ್ರಿಟೀಷರ ಆಳ್ವಿಕೆಯಲ್ಲಿಯೂ ಧಾರ್ಮಿಕ ವೇಶ್ಯಾವೃತ್ತಿಗೆ ಸಾಕಷ್ಟು ಬೆಂಬಲ ದೊರೆಯಿತು. ಗ್ರಾಮಗಳಿಂದ ನಗರಕ್ಕೆ ಹೋದ ದೇವದಾಸಿಯರು ಬ್ರಿಟೀಷ್ ಮಿಲಿಟರಿ ಸಿಬ್ಬಂದಿಗಳ ಕಾಮ ಪೂರೈಕೆಯ ಸರಕಾಗುತ್ತಿದ್ದರು.

ತೀರಾ ಇತ್ತೀಚೆಗೆ ಈ ಪದ್ಧತಿಯ ವಿರುದ್ಧ ಪ್ರತಿಭಟನಾ ಧ್ವನಿ ಎದ್ದಿದೆ. ಕರ್ನಾಟಕ ಸರ್ಕಾರ ಇದನ್ನು 'ಕಾನೂನು ಬಾಹಿರ'ವಾಗಿಸಿದಾಗಲೂ 1987ರಲ್ಲಿ ಸವದತ್ತಿಯಲ್ಲಿ 1000 ಹುಡುಗಿಯರನ್ನು ದೇವದಾಸಿಯರನ್ನಾಗಿಸಿದುದಾಗಿ ವರದಿಯಾಗಿದೆ. ಈ ಕಾನೂನುಗಳೂ ಕೂಡ ತಲುಪ ಬೇಕಾದವರನ್ನು ತಲುಪದೇ ಇರುವುದು ವಿಷಾದನೀಯ.

ನಾಯಕಸಾನಿ, ಜೋಗತಿ, ದೇವದಾಸಿ, ಬಸವಿಯರಿಗೂ ಸ್ವಲ್ಪ ಭಿನ್ನತೆಯಿದೆ. ದೇವದಾಸಿ, ಜೋಗತಿಯರು, ಸಾಂಪ್ರದಾಯಿಕವಾಗಿ ದೇವರ ಸೇವೆಗೆಂದೇ ಬಿಟ್ಟವರು. ಆದರೆ ಬಸವಿಯರಿಗೆ ನಿರ್ಧಿಷ್ಟವಾದ ಕಾಯಕವಿರುತ್ತದೆ. ದೇವಸ್ಥಾನದ ಪ್ರಾಂಗಣವನ್ನು ಶುಚಿಯಾಗಿಡುವವರು ಗುಡಿಬಸವಿ, ಪವಿತ್ರ ಕಂಭಗಳ ಉಸ್ತುವಾರಿ ನೋಡಿಕೊಳ್ಳುವವರು ಕಂಭದ ಬಸವಿ, ಗಂಟೆಗಳ ಉಸ್ತುವಾರಿ ಗಂಟೆ ಬಸವಿ ಹೀಗೆ

ಆರಂಭದಲ್ಲಿ ಬಸವಿಯರು ಕೇವಲ ದೇವಾಲಯದ ಕೆಲಸ ಕಾರ್ಯ ಮಾಡುತ್ತಿದ್ದು ನಂತರ ವೇಶ್ಯಾವಾಟಿಕೆಗೆ ಪೂರ್ತಿಯಾಗಿ ತೆತ್ತುಕೊಂಡರು. ಆಧುನಿಕ ಸಮಾಜದಲ್ಲಿ, ಬದಲಾದ ಪರಿಸ್ಥಿತಿಯಲ್ಲಿ ಓಶೋ ರಜನೀಶರಂತಹವರು, 'ಸಂಭೋಗದಿಂದ ಸಮಾಧಿಯೆಡೆಗೆ' ಎನ್ನುವ ನವ ನವೀನವಾದ ಬಾಟಲಿಯಲ್ಲಿ ಅದೇ ಹಳೇ ವ್ಯಾದಿಕೆಯನ್ನು ತುಂಬುವ ತವಕ ತೋರಿಸುತ್ತಿದ್ದಾರೆ.

ಸಾಮಾಜಿಕ ವೇಶ್ಯಾ ವೃತ್ತಿ:

''ಆ ದಿನ ಬೆಳದಿಂಗಳಲ್ಲಿ ಪ್ರದೀಪನೊಂದಿಗೆ ಬಿರಬಿರನೆ ನಡೆದು ಲಾರಿ ಹತ್ತಿ ಬೆಳಗಾಗುವುದರೊಳಗೆ ಚಿತ್ರದುರ್ಗದ ಮುಂಜಾನೆಯ ಮಸುಕಲ್ಲಿ ಧುಮುಕಿದ್ದಳು ಕಮಲ. ಮದಕರಿಯ ವೀರಗಾಥೆಯ ಪಿಸುಗುಡುತ್ತಿದ್ದ ಆ ಬಂಡೆಗಳ ಒಂದೊಂದು ಇಂಚಿಂಚೂ ಸಾಕ್ಷಿಯೆಂಬಂತೆ ಪ್ರದೀಪ ಪ್ರೀತಿಯ ಸುರೆ ಕುಡಿದಿದ್ದ. ಅಮರ ಪ್ರೇಮಿಗಳ ಸಾಲು ಸಾಲು ಕತೆಗಳನ್ನೇ ಹರವಿದ್ದ. ಹಳ್ಳಿಯ ಮೇಷ್ಟ್ರ ಮಗ ಪ್ರದೀಪ ನಗರಕ್ಕೆ ಹೋಗಿ ಕಲಿತು ಬಂದಿದ್ದ. ಅವನ ಪ್ರೀತಿಯ ಮುಂದೆ ಕಮಲ ಪ್ರಪಂಚವನ್ನೇ ಮರೆತಳು.

ನಾಲ್ಕನೆಯ ದಿನ ಬೆಂಗಳೂರಿಗೆ ಪಯಣ. ಹೋಟೆಲೊಂದರಲ್ಲಿ ರೂಮು ಹಿಡಿದರು. ಕಮಲ ಮನೆಯಿಂದ ತಂದಿದ್ದ ಹಣದ ಗಂಟು ಕರಗಿತ್ತು. ''ನಿನ್ನ ಸೌಂದರ್ಯದ ಮುಂದೆ ಈ ಒಡವೆಗಳು ಸಾಟಿಯೇ'' ಎಂದು ರಮಿಸಿದ ಪ್ರದೀಪನ ಮುಂದೆ ಮಾಯಾಲೋಕದ ಸ್ವಪ್ನ ಸುಂದರಿ ನಿರಾಭರಣೆಯಾದಳು. ಆಭರಣಗಳ ಪುಟ್ಟ ಗಂಟು ಕಟ್ಟಿ ''ನಿನ್ನ ಮುಡಿಯಲ್ಲಿ ಮಲ್ಲಿಗೆಯಿದ್ದರೇ ನನ್ನ ಮೈಗೆ ಕಾವೇರುವುದು'' ಎಂದು ಪ್ರದೀಪ ಮಲ್ಲಿಗೆ ತರಲು ಹೊರ ಹೋದ. ಸಂಜೆಯಾದರೂ ಹಿಂತಿರುಗದ ಪ್ರದೀಪನ ಬಗ್ಗೆ ಕಾತುರಳಾದಳು ಕಮಲ. ''ನಿಮ್ಮ ಯಜಮಾನರು ಕರೀತಾರೆ ಬಾ'' ಹೋಟೆಲ್ ಹುಡುಗನೊಬ್ಬ ಸೂಚಿಸಿದ. ಕಪಟವರಿಯದ ಮುಗ್ಧ ಮನಸ್ಸು ಹಿಂಬಾಲಿಸಿತ್ತು.

ಒಂದೊಂದೇ ಮೆಟ್ಟಲುಗಳು ಇಳಿದಳು... ಕಿರಿದಾದ ಜಾಗ ಕಪ್ಪಾದ ಕಣ್ಣಿಗೆ ಎಟುಕುವಷ್ಟೇ ಬೆಳಕು.... ಇಳಿದಿಳಿದು ಬಂದಾಗ ಇದ್ದಕ್ಕಿದ್ದಂತೆಯೇ ಮೆಟ್ಟಲುಗಳು ಮುಗಿದವು. ವಿಶಾಲವಾದ ಕೋಣೆ. ಅದಕ್ಕೆ ತಾಗಿದಂತೆಯೇ ಮೂರು ಕಿರು ಕೋಣೆಗಳು. ರಾಚುವ ಬೆಳಕು, ಒನಪು, ಒಯ್ಯಾರದ ಹತ್ತಾರು ದನಿಗಳು ಕಿವಿತಾಗಿದವು, ಆಲಿಸಿದಳು..... ಅಲ್ಲೆಲ್ಲೂ ಪ್ರದೀಪನ ಸುಳಿವಿರಲಿಲ್ಲ. ಪ್ರೀತಿಯ ಅಮಲೇರಿ ಮುದುಡಿದ್ದ ಮೆದುಳು ಎಡೆಯೆತ್ತಿ ನಿಂತಾಗ ಹೌ ಹಾರಿದಳು. ಗಡಿಬಿಡಿ, ನಿಯಂತ್ರಿಸಲಾಗದ ದುಗುಡ. ಸುಪ್ತ ಮನಸ್ಸಿನೊಳಗೆ ಎಲ್ಲವೂ ಗೊಂದಲ. ಅಪಾಯದ ಕರೆಗಂಟೆ ತಿದಿಯೊತ್ತತೊಡಗಿದಾಗಲೇ ಕಮಲಳಿಗೆ ಅರಿವಾದುದ್ದು, ಪ್ರದೀಪ ಕೈ ಕೊಟ್ಟಿದ್ದ, ಹತ್ತು ಸಾವಿರದ ಕಟ್ಟೊಂದಕ್ಕೆ ಕಮಲಳನ್ನು ಮಾರಿದ್ದ.''

ಹೀಗೆಯೇ ಆಕಸ್ಮಿಕಗಳು, ಅನಿವಾರ್ಯತೆಗಳು, ಅಸಹಾಯಕತೆಯ ಒತ್ತಡಗಳಲ್ಲಿ ಸಾವಿರಾರು ಹೆಣ್ಣುಗಳು ಈ ವೃತ್ತಿಗೆ ಧುಮುಕುತ್ತಿರುತ್ತಾರೆ. ಕೆಲಸ ಹುಡುಕಿ ನಗರಗಳಿಗೆ ಬಂದವರು, ವಿಳಾಸ ತಪ್ಪಿ ಹಾದಿ ಹುಡುಕಿದವರು,

ವರದಕ್ಷಿಣೆ ಕೊಡಲು ಹಣ ಹೊಂದಿಸುವವರು, ಶೋಕಿಗಾಗಿ ಹಣದ ಮೋಹಕ್ಕೆ ಸಿಲುಕಿದ ವಿಧ್ಯಾರ್ಥಿನಿಯರು, ಪ್ರೀತಿಯಿಂದ ವಂಚಿತರಾದವರು, ಬಡತನದ ಕಾವಿಳಿಸುವ ಭರದಲ್ಲಿ ಬಂದವರು.... ಹೀಗೆ ಈ ಕೂಪದೊಳಕ್ಕೆ ಜಾರಿ ಬಿಡುತ್ತಾರೆ. ಇತ್ತೀಚಿನ ಅಧ್ಯಯನವೊಂದರ ಪ್ರಕಾರ ಭಾರತದಲ್ಲಿ ಪ್ರತಿ ದಿನ ಸುಮಾರು 200 ಹೆಣ್ಣು ಮಕ್ಕಳು ಈ ವೃತ್ತಿಗೆ ಧುಮುಕುತ್ತಿದ್ದಾರೆ. ಸಾಮಾಜಿಕ ವೇಶ್ಯಾ ವೃತ್ತಿ ಎನ್ನುವಾಗಲೇ ಹೀಗೆ ಹರಿದು ಬಂದ ಹೆಣ್ಣು ಮಕ್ಕಳು ಬೇರೆ ಬೇರೆ ಸ್ವರೂಪದ ನೆಲೆಗಳಲ್ಲಿ ತೊಡಗಿಸಿಕೊಳ್ಳುತ್ತಾ ಹೋಗುತ್ತಾರೆ. ಇದರಲ್ಲಿಯೂ ಅನೇಕ ವಿಧಗಳಿವೆ. ಅವುಗಳೆಂದರೆ:-

ಮನೆಗಳಲ್ಲಿ ವೇಶ್ಯಾವೃತ್ತಿ- Brothel based

ಲಾಡ್ಜ್‌ಗಳಲ್ಲಿ ವೇಶ್ಯಾವೃತ್ತಿ-Lodge based

ಬೀದಿಗಳಲ್ಲಿ ವೇಶ್ಯಾವೃತ್ತಿ- Street based

ಪ್ರಾಯವಾದ ಅಂದರೆ ಸುಮಾರು 40ರ ನಂತರ ಘರ್‌ವಾಲಿ, ಮೇಡಂ, ಅಮ್ಮ, ಅವ್ವ, ಅಕ್ಕ, ಸಾಕವ್ವ, ದೀದೀ ಮುಂತಾದ ಹೆಸರುಗಳಿಂದ ತನ್ನನ್ನು ಕರೆಸಿಕೊಳ್ಳುವ ಯಜಮಾನಿಯೊಬ್ಬಳು ಈ ಗೃಹಗಳಲ್ಲಿ ಇದ್ದೇ ಇರುತ್ತಾಳೆ.

ಸಾಮಾನ್ಯವಾಗಿ ಸದಾ ಕೆಂಪಾದ ತಾಂಬುಲ ತುಂಬಿದ ಬಾಯಿ, ಒಮ್ಮೆ ಮಮತಾಮಯಿ, ಒಮ್ಮೆ ರೌದ್ರವ, ನಾಟಕೀಯತೆಯ ನಾಯಕಿಯಂತೆ, ಕೆಲವೊಮ್ಮೆ ನಗು, ಸಿಟ್ಟು, ಕ್ರೂರತೆ, ಛಲ, ತಂತ್ರಗಾರಿಕೆ, ಉಪಾಯಗಾರ್ತಿ..... ಹೀಗೇ ನವರಸಗಳನ್ನೇ ತನ್ನ ಬಂಡವಾಳವಾಗಿಸಿಕೊಂಡು ಕ್ಷಣಂ ಚಿತ್ತಂ ಎಂಬಂತೆ ಮಾನಸಿಕ ಪ್ರಕ್ಷೋಭೆ, ಪ್ರಲೋಭನೆಗೊಳಗಾಗಿ ಆ ಮನೆಯನ್ನು ನಡೆಸುವ ಅಂಬಿಗಳಾಗಿರುತ್ತಾಳೆ.

ಅವಳ ಪರಿಸ್ಥಿತಿಗಳೇ ಹಾಗಿರ್ತಾವೆ. ಆತಂಕ, ದುಗುಡ, ಭಯಗಳೂ ಕೂಡ ಅವಳನ್ನು ಸದಾ ಕಾಡುತ್ತಲೇ ಇರ್ತಾವೆ. ಇಂತಹ ಪರಿಸ್ಥಿತಿಗಳಿಂದ ಪಾರಾಗಲು ಅವಳದ್ದೇ ಆದ ಒಂದು ವ್ಯೂಹವನ್ನು ರಚನೆ ಮಾಡಿಕೊಂಡಿರುತ್ತಾಳೆ. ಮೊದ ಮೊದಲು ಅವಳ ರಕ್ಷಣೆಗೆಂದು ಇದ್ದ ಆ ತಂಡ ಬರ ಬರುತ್ತಾ ''ಬ್ಲಾಕ್‌ಮೇಲ್'' ಮಾಡುವ ಒಂದು ಚಕ್ರವ್ಯೂಹವಾಗಿ ಮಾರ್ಪಾಡಾಗುತ್ತಾ ಬೆಳೆಯುತ್ತದೆ.

'ಬ್ಲಾಕ್‌ಮೇಲ್' ಹಾಗೂ ಕಾನೂನು ಬಾಹಿರ ಮತ್ತು ಕಾನೂನು ರೀತ್ಯಾ ಎಲ್ಲಾ ಕಟ್ಟು ಕಟ್ಟಳೆಗಳನ್ನು ನೋಟಿನ ಕಟ್ಟುಗಳಿಂದಲೇ ತಾಳೆ ಹಾಕುತ್ತಾ, ಅವಳನ್ನು ಪೀಡಿಸುವ ಇನ್ನೊಂದು ಮುಖವೇ ಪೊಲೀಸ್ ವ್ಯವಸ್ಥೆ. ಅವಳ ವೇಶ್ಯಾಗೃಹದ ವ್ಯಾಪ್ತಿಯ ಸ್ಥಳೀಯ ಪೊಲೀಸ್ ಠಾಣೆ, ಸರ್ಕಲ್, ಹಾಗೂ ಉನ್ನತ ಅಧಿಕಾರಿಗಳವರೆಗೂ ಹಂಚಿಕೆಯಾಗುವ ಧನರಾಶಿ ಪೊಲೀಸ್ ವ್ಯವಸ್ಥೆಯನ್ನು ಸದಾ ಸಂತೃಪ್ತಗೊಳಿಸುತ್ತಲೇ ಇರಬೇಕಾಗುತ್ತದೆ. ಉದಾ: ಇದರ ಮೊತ್ತ ತೀರಾ ಕನಿಷ್ಟವೆಂದರೆ ಒಂದು ವೇಶ್ಯಾ ಗೃಹದಿಂದ ಪ್ರತಿ ತಿಂಗಳು ೮ ರಿಂದ ೧೦ ಸಾವಿರ ''ಮಾಮೂಲಿ ಕಟ್ಟು'' ಅಲ್ಲಿಗೆ ತಲುಪುತ್ತದೆ. ವಿಶೇಷ ಅಧಿಕಾರಿಗಳು ಬಂದಾಗ ಅಥವಾ ಠಾಣೆಯ

ಅಧಿಕಾರಿಗಳು, ಕಾನ್‌ಸ್ಟೇಬಲ್‌ಗಳಿಗೇ ತೆವಲುಗಳು ಮೈದುಂಬಿದಾಗ ಈ ಗೃಹದ ಹೆಂಗಳೆಯರ ದೇಹಗಳು, ಹುಳಿ ಹೆಂಡಗಳು, ಕುರಿ ಕೋಳಿಯೂಟಗಳು ಪುಕ್ಕಟೆ ಬಳುವಳಿಗಳಾಗಿ ಲಭಿಸುತ್ತಾ ಇರುತ್ತವೆ.

ಇಷ್ಟೆಲ್ಲಾ ಅಭಯವಿತ್ತರೂ ಪೊಲೀಸರು ಕಾನೂನು ರೀತಿಗಳ ನಾಟಕವಾಡಬೇಕಾದಾಗೆಲ್ಲಾ ತೀರಾ ಪರಿಚಿತವಾದ ಈ ಗೃಹಗಳ ಮೇಲೂ ರೇಡ್ ಮಾಡಬೇಕಾದ ಅನಿವಾರ್ಯತೆಯಿರುತ್ತದೆ. ಎಲ್ಲವೂ ಕೆಲವೊಮ್ಮೆ ಪೂರ್ವ ನಿರ್ಧಾರವಾದುದು. ಕೆಲವೊಮ್ಮೆ ಪರಸ್ಪರ ಸಹಕರಿಸುವುದು ಆಗಿರುತ್ತದೆ. ಹಾಗೆಂದ ಮಾತ್ರಕ್ಕೆ ಎಲ್ಲಾ ಸಂದರ್ಭಗಳಲ್ಲಿಯೂ ಎಲ್ಲಾ ವೇಶ್ಯಾ ಗೃಹಗಳಲ್ಲಿಯೂ ಹೀಗೆಯೇ ಇರುತ್ತದೆಂದಲ್ಲ. ಅಧಿಕಾರಿಗಳು ಬದಲಾದಾಗಲೆಲ್ಲಾ, ಪರಿಸ್ಥಿತಿಗಳು ವಿಪರೀತವಾದಾಗಲೆಲ್ಲಾ ಈ ''ಅಮ್ಮಂದಿರು'' ಪುಕ್ಕಟೆ ಪುರಸ್ಕಾರ ಮಾಡಿ ಸ್ವಾಗತಿಸುವುದು ವಿಧಾಯ ಹೇಳುವುದು ವಾಡಿಕೆ.

ಒಮ್ಮೊಮ್ಮೆ ಇವೆಲ್ಲವನ್ನೂ ಮೀರಿ ಆ ಇಡೀ ಗೃಹದ ವ್ಯವಸ್ಥೆಯನ್ನೇ ಪುಡಿಗಟ್ಟುವುದೂ ಉಂಟು. ಹಾಗಾದಾಗಲೆಲ್ಲಾ ಟೆಂಟು ಕಿತ್ತುಕೊಂಡು ಹೋಗಿ ಇನ್ನೊಂದೆಡೆ ಟೆಂಟಿಗೆ ಗೂಟ ನೆಡುವ ಕೆಲಸವನ್ನು ಈ ಗೃಹದ ವ್ಯವಸ್ಥೆ ಮಾಡಬೇಕಾಗುತ್ತದೆ.

ಸ್ಥಳೀಯ ಪುಡಾರಿಗಳನ್ನು ಸದಾ ಓಲೈಸುತ್ತಲೇ ಇರಬೇಕಾಗುತ್ತದೆ. ಮೇಲ್ನೋಟಕ್ಕೆ ಹೆಮ್ಮಾರಿಯಂತೆ ವರ್ತಿಸಿದರೂ ಒಳಗಿನ ವ್ಯಕ್ತಿತ್ವ ಸದಾ ಆತಂತ್ರದ, ಭಯದ ನೆರಳಲ್ಲೇ ಇರುತ್ತದೆ. ಇವರೆಲ್ಲ ಅಲ್ಲದೆ ಈ ಗೃಹಕ್ಕೆ ಮಾಲುಗಳನ್ನು ತಂದೊದಗಿಸುವ ಬ್ರೋಕರ್‌ಗಳು, ಪಿಂಪ್‌ಗಳು, ಪುಡಾರಿಗಳನ್ನು ಸದಾ ಕಾಯುತ್ತಲೇ ಇರಬೇಕಾಗುತ್ತದೆ. ಮಾಲುಗಳಷ್ಟೇ ಅಲ್ಲದೆ ಗಿರಾಕಿಗಳನ್ನು ಕರೆದು ತರುವ ಈ ದಳ್ಳಾಳಿಗಳು ಸದಾ ಲಾಭದ ಒಂದಷ್ಟು ಪರ್ಸಂಟೇಜನ್ನು ಒತ್ತಾಯಿಸುತ್ತಲೇ ಇರುತ್ತಾರೆ.

ಇನ್ನು ಆಂತರಿಕ ಆಡಳಿತವೂ ಅಷ್ಟೇ ಸಂದಿಗ್ಧವಾದುದು. ಅವರಿಗೆಲ್ಲಾ ಕಾಲ ಕಾಲಕ್ಕೆ ಊಟ, ಅಲಂಕಾರ, ಬಟ್ಟೆ, ಆರೋಗ್ಯ ಮಕ್ಕಳಿದ್ದಲ್ಲಿ ಅವರ ಮಕ್ಕಳ ವ್ಯವಸ್ಥೆ, ಕುಡಿತ, ಅವರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಸ್ಪರ್ಧಾತ್ಮಕವಾದ ನವೀನವಾದ ಈ ವೃತ್ತಿಯಲ್ಲಿ ಸರಕುಗಳನ್ನು ಗಿಲೀಟು ಮಾಡಿ ಇಟ್ಟುಕೊಳ್ಳಬೇಕಾದ ಜವಾಬ್ದಾರಿಯೂ ಈ ''ಅಮ್ಮನದೇ''.

ಇಷ್ಟೆಲ್ಲಾ ಆದ ಮೇಲೆ ಇವಳು 'ಆಶ್ರಯಧಾತೆಯಾಗಿ' ಫೋಸ್ ಕೊಡುತ್ತಾಳೆ. ಗಿರಾಕಿಗಳು ಇವಳ ಮಾಲುಗಳಿಗೆ ತೆತ್ತ ನೋಟುಗಳನ್ನು ಎದೆಯ ಸಂದಿಗೆ ತುರುಕಿಸುವ ಈ ಅಮ್ಮ ಎಲ್ಲವನ್ನು ಮರೆತು ಒಂದರೆಕ್ಷಣ ಆ ಧನಸ್ಪರ್ಶ ಸುಖ ಅನುಭವಿಸುತ್ತಾಳೆ. ಈ ಎಳೆ ಎಳೆಗಳನ್ನು ಬಿಡಿಸುವಾಗಲೇ ಗುಲಾಮಿ ಪದ್ಧತಿಯ ಪಳಿಯುಳಿಕೆಗಳು, ಪಾಳೆಗಾರಿಕೆಯ ತೋಳ್ಬಲಗಳು ಇಂದಿಗೂ ಉಸಿರಾಡುತ್ತಿರುವ ಅನುಭವವಾಗುತ್ತದೆ.

ಯಾವನೋ ಅಪರಿಚಿತ, ರೋಗಿಷ್ಟ, ಕುಡುಕ, ವಿಕೃತ ಕಾಮಿ, ನರಸತ್ತವ, ಕ್ರೂರಿ, ಒರಟ ಹೀಗೆ ವಿಧ ವಿಧವಾದ ಮನುಷ್ಯ ಪ್ರಾಣಿಗಳೊಂದಿಗೆ ಆ ಸರಕಾದ ಹೆಣ್ಣು ತನ್ನ ದೇಹವನ್ನು ತನ್ನದಲ್ಲವಾಗಿಸಿ

ಅರ್ಪಿಸಬೇಕಾಗುತ್ತದೆ. ಮೊದ ಮೊದಲು ಮಾನಸಿಕ ಚಿತ್ರಹಿಂಸೆಗೆ ಒಳಪಟ್ಟು ಅನುಭವಿಸಿದ ಯಾತನೆಗಳು ಕ್ರಮೇಣ ''ದಿನವೂ ಸಾಯುವವರಿಗೆ ಅಳುವವರ್‍ಯಾರು'' ಎಂಬಂತೆ ಹೆಪ್ಪುಗಟ್ಟುತ್ತಾ ಮನಸ್ಸನ್ನೂ ಹೃದಯವನ್ನೂ ಬಿರುಕು ಮೂಡಿಸಲು ಶುರುವಿಟ್ಟುಕೊಳ್ಳುತ್ತವೆ. ಹೃದಯದ ಬಿರುಕು ಹೆಚ್ಚಾದಂತೆಲ್ಲಾ ದೇಹದ ಅಲಂಕಾರ, ಬದಲಾದ ನಡವಳಿಕೆಗಳು, ಸ್ವಾಮಿಭಕ್ತಿ, ಹಣ ಸಂಪಾದನೆಯ ಸಂಕ್ಕೆ.... ಇವೆಲ್ಲವುಗಳ ಮುಖವಾಡಗಳನ್ನು ಧರಿಸುತ್ತಲೇ ಹೋಗುತ್ತಾಳೆ ಪ್ರತಿ ಪ್ರತಿ ಕ್ಷಣವೂ.

ಗಿರಾಕಿ ನೀಡಿದ ಹಣದಲ್ಲಿ ಇಂತಿಷ್ಟು ಭಾಗ ಮಾಲೀಕಳಿಗೆ, ಇಂತಿಷ್ಟು ಮಾಲಿಗೆ ಎಂದು ಒಪ್ಪಂದವಾಗಿದ್ದರೂ ಎಲ್ಲವನ್ನೂ ನೀಡುವ ಆಶ್ರಯಧಾತೆ ಬಹುತೇಕವಾಗಿ ಹಣ ನೀಡದೆ ವಂಚಿಸುತ್ತಾಳೆ. ಒಂಟಿಯಾದ ಈ ಹೆಣ್ಣು ಆ ಚಕ್ರವ್ಯೂಹ ಭೇದಿಸಿ ಸಿಡಿದು ನಿಲ್ಲಲು ಸಾಧ್ಯವಾಗದೇ ಮತ್ತೆ ಮತ್ತೆ ಸರಕಾಗುತ್ತಲೇ ಹೋಗುತ್ತಾಳೆ.

ಸಾಮಾನ್ಯವಾಗಿ ಒಂದು ವೇಶ್ಯಾಗೃಹದಲ್ಲಿ ಸುಮಾರು 6 ಹುಡುಗಿಯರಿಂದ ೨೦-೨೨ ಹೆಣ್ಣು ಮಕ್ಕಳಿರುತ್ತಾರೆ. ೧೩ ವರ್ಷದ ಮಕ್ಕಳಿಂದ ೪೦ ವರ್ಷದವರೆಗೂ ಮಾಲುಗಳನ್ನು ಹೊಂದಿರುತ್ತಾರೆ. ಬಂದ ಗಿರಾಕಿಗಳು ಹೆಚ್ಚಿನವರು ಚಿಕ್ಕ ಪ್ರಾಯದ ಹೆಣ್ಣುಗಳನ್ನು ಬಯಸುತ್ತಾರೆ. ಮಾಲೀಕರು ಅವರಿಗೆ ಅಷ್ಟೇ ಬೆಲೆಯನ್ನು ಕಟ್ಟುತ್ತಾರೆ. ಈ ಎಲ್ಲಾ ಹೆಣ್ಣು ಮಕ್ಕಳೂ ಎಲ್ಲೆಲ್ಲಿಂದಲೋ ಬಂದವರು. ಯಾವುದೋ ಭಾಷೆ, ಸಂಸ್ಕೃತಿ, ಹಿನ್ನೆಲೆಯಿಂದ ಬಂದರೂ ಇಲ್ಲಿ ಭಾವೈಕ್ಯತೆ ಸಾಧಿಸುತ್ತಾರೆ. ವಿವಿಧತೆಯಲ್ಲೂ ಏಕತೆ ಇಲ್ಲಿಯ ಸಿದ್ಧಾಂತ. ಈ ಕಮ್ಯೂನ್‌ನಲ್ಲಿ ಹಂಚಿ ತಿನ್ನಬೇಕು, ಮೈ ಮುರಿಯುವಷ್ಟು ದುಡಿಯಬೇಕು, ಸಮಾನವಾಗಿ ಜವಾಬ್ದಾರಿ ಹಂಚಿಕೊಳ್ಳಬೇಕು.

ಹೀಗೆ ವರ್ಗ, ವರ್ಣವನ್ನು ಅವಲಂಬಿಸಿ, ಸಾಧಾರಣ ವೇಶ್ಯಾಗೃಹಗಳಿಂದ ಅತಿ ದುಬಾರಿ ವೇಶ್ಯಾ ಗೃಹಗಳು ಕೂಡ ಚಾಲ್ತಿಯಲ್ಲಿರುತ್ತವೆ. 'ಕಾಸಿಗೆ ತಕ್ಕ ಕಜ್ಜಾಯ' ವೆಂಬಂತೆ ಗಿರಾಕಿಯ ಆರ್ಥಿಕ ಸ್ಥಿತಿ, ಅರ್ಹತೆ, ಸಾಮರ್ಥ್ಯ, ತಿಳುವಳಿಕೆಗೆ ತಕ್ಕಂತೆ ವೇಶ್ಯಾಗೃಹಗಳ ಬಾಗಿಲುಗಳು ತೆರೆದುಕೊಳ್ಳುತ್ತವೆ.

ಇಲ್ಲಿ ಹುಡುಗಿಯರನ್ನು ಮನೆಯಲ್ಲಿಯೇ ಇಟ್ಟುಕೊಂಡು ವ್ಯಾಪಾರ ನಡೆಸುವುದು ಒಂದೆಡೆಯಾದರೆ, ಗಿರಾಕಿಗಳೇ ಒಪ್ಪಂದ ಮಾಡಿ ಕರೆ ತರುವ ಜೋಡಿಗಳಿಗೆ ತಮ್ಮ ಮನೆಯಲ್ಲಿ ಅವಕಾಶ ಮಾಡಿಕೊಡುವ ವೇಶ್ಯಾಗೃಹಗಳೂ ಇವೆ.

ಇಲ್ಲಿಯ ಮನೆ ಮಾಲೀಕರು ಸ್ಥಳ ಬಾಡಿಗೆ ಪಡೆದು ಈ ದಂಧೆಯ ಪಾಲುದಾರರಾಗುತ್ತಾರೆ. ಇವರಿಗೆ ಇತರೆ ವೇಶ್ಯಾಗೃಹಗಳಿಗಿರುವ ರಿಸ್ಕ್‌ಗಳಿರುವುದಿಲ್ಲ. ಮತ್ತು ಇವರು ಜಾಗ ಕೊಡುವ ಗಿರಾಕಿಗಳ ಅರ್ಹತೆಯನ್ನು ಗಮನಿಸುತ್ತಾರೆ. ಹಾಗೆಯೇ ಅವರ ಪರಿಚಯ, ವೃತ್ತಿಯನ್ನು ಗಮನಿಸುತ್ತಾರೆ.

ಬೀದಿಯಲ್ಲಿ ಬಿದ್ದವಳು:

“ಬೀದಿ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದ ಕರ್ಚೀಫ್ ಅಂಗಡಿಯವನು ಕರ್ಚೀಫ್‌ಗಳೆಲ್ಲವವನ್ನೂ ಬಾಚಿ ಎದೆಗೊತ್ತಿ ಓಡಿದ. ಬಾಚಣಿಗೆ, ಕನ್ನಡಿ, ಬ್ರಷ್, ಸೀರಣಿಗೆ ಮಾರುತ್ತಿದ್ದ ಸಲೀಮ ಹರವಿದ್ದ ಪ್ಲಾಸ್ಟಿಕ್ ಕವರನ್ನೇ ಮಡಚಿ ಪಕ್ಕಕ್ಕೆ ಸರಿದು ಹಾಗೆಯೇ ಮೆಲ್ಲನೆ ಕಾಲು ಕಿತ್ತ. ಅದೆಲ್ಲಿಂದಲೋ ಹೊಂದಿಸಿದ್ದ ಸೆಕೆಂಡ್ ಹ್ಯಾಂಡ್ ಚಪ್ಪಲಿಗಳನ್ನು ರಾಶಿ ಹಾಕಿ ಹರಾಜು ಹಾಕುತ್ತಿದ್ದ ರಾಜು ಒಂದೇ ಉಸಿರಿಗೆ ಗೋಣಿ ಚೀಲಕ್ಕೆ ಎಲ್ಲಾ ಚಪ್ಪಲಿಗಳನ್ನು ತುರುಕಿ ಹೊರಲಾರದೆ ಹೊತ್ತು ಓಡಿದ. ಎಲ್ಲವೂ ಕ್ಷಣಾರ್ಧದಲ್ಲಿಯೇ. ಎಲ್ಲೂ ಮಾತಿಲ್ಲ, ಕೂಗಾಟವಿಲ್ಲ, ಇಲ್ಲಿರುವುದು ಒಂದೇ ಆತಂಕ ಬೂಟು ಕಾಲಿನವನ ಕೈಯಲ್ಲಿನ ಬೆತ್ತ! ಆ ಬೆತ್ತಕ್ಕೆ ತೆರಬೇಕಾದ ಮಾಮೂಲಿ ಧನ. ಎಷ್ಟೋ ಸಮಯದಿಂದ ಇರದಿದ್ದ ಅಮ್ಮ ಸಿಕ್ಕಿದ್ದಳು. ಸಿಕ್ಕಿದಾಗ ಎಲ್ಲವನ್ನು ಕುಡಿದು ಬಿಡಬೇಕು ಎಂಬಂತೆ ಅವಸರವಸರವಾಗಿ ಕುಡಿದ ಹಾಲು ನೆತ್ತಿಗೇರಿದರೂ ಲೆಕ್ಕಿಸದೆ ಎದೆ ಕಚ್ಚಿತ್ತು ಶಾರದಳ ಮಗು. ಎಲ್ಲವೂ ಅರ್ಥವಾಯಿತು ಅವಳಿಗೆ. ಹಾಲುಣಿಸುತ್ತಿದ್ದ ಮಗುವನ್ನೇ ಅವಚಿಕೊಂಡು ಓಡಿದಳು.... ಓಡಿದಳು.... ತನ್ನ ಸನಿಹದಲ್ಲೇ ಪೋಲೀಸ್ ಬೆನ್ನತ್ತಿದಾಗ ಓಡಿ ಓಡಿ ಹಾದಿ ತಪ್ಪಿಸಿದಳು. ಲೆಫ್ಟ್, ರೈಟ್, ಶಿಸ್ತಿನಲ್ಲಿದ್ದ ಬೆಪ್ಪ ಮುಂದಕ್ಕೆ ಓಡಿದಾಗ ನಿಟ್ಟುಸಿರಿಟ್ಟಳು ಶಾರದಾ. ಆಗ ತಾನೇ ಮೈಯೊಡ್ಡಿ ಸಂಪಾದಿಸಿದ್ದ ನೋಟುಗಳನ್ನು ತೆಗೆದು ಬ್ರಾದೊಳಗೆ ತುರುಕಲು ಹೊರಟವಳಿಗೆ ರಾಕ್ಷಸ ರಾಮಯ್ಯ ಬ್ರಾನೂ ಬಿಡೋಲ್ಲ ಕಣೆ ಅಂತ ಲಲ್ಲಿ ಹೇಳಿದ್ದ ನೆನಪಾಯ್ತು. ಕೂಡಲೇ ಕಾಚಾದೊಳಕ್ಕೆ ಹಣದ ಚೀಲ ಇಳಿಬಿಟ್ಟು ಬಟ್ಟೆ ಯನ್ನು ಹಾಕಿಕೊಂಡಳು. ಸಾವರಿಸಿಕೊಂಡು ಹಾಗೆಯೇ ಇಣುಕಿದಳು ಪರಿಸ್ಥಿತಿಯನ್ನು ಅವಲೋಕಿಸುತ್ತ, ವೇಶ್ಯಾವಾಟಿಕೆಯಲ್ಲಿಯೇ ಅತ್ಯಂತ ಶೋಷಿತರು ಈ ಬೀದಿ ಬದಿಯ ವೇಶ್ಯೆಯರು.”

ಸೂರಿಲ್ಲದವರು, ದಿಕ್ಕಿಲ್ಲದವರು, ಬದುಕಿಗೆ ಭಿನ್ನ ದಾರಿಯೇ ತಿಳಿಯದವರು, ಗಂಡನಿಂದಲೇ ತಲೆ ಹಿಡಿಸಿಕೊಂಡವರು, ಆಕಸ್ಮಿಕ ಅನಿವಾರ್ಯತೆಯ ಅನೂಹ್ಯ ಎಳೆಗಳೊಂದಿಗೆ ಬಲೆ ಹೆಣೆದುಕೊಂಡವರು, ಅನಾಥ ಪ್ರಜ್ಞೆಯನ್ನೇ ಉಸಿರಾಡುವವರು.... ಇವರು!

ಅದರಲ್ಲಿ ಒಂದೇ ಒಂದು ಸಂತೋಷದ ಪಕಳೆಗಳಿಲ್ಲ. ನೋವಿನ, ಅನುಮಾನದ, ಹತಾಶೆಯ, ಸಂಕಟದ ಬುತ್ತಿ ಅದು. ಬದುಕಿನ ಆಕಸ್ಮಿಕ ತಿರುವುಗಳು, ಅನೂಹ್ಯ ಸೆಳೆತಗಳು, ಪಾಚಿಗಟ್ಟಿದ ಜಾರು ದಾರಿಯಲ್ಲಿ ಸಾವರಿಸಿ ನಿಲ್ಲಲಾಗದೇ ಜಾರಿದವರ ವೃತ್ತಾಂತಗಳು. ಇವೆಲ್ಲದರ ನಡುವೆ ಎಲ್ಲರಂತೆ ಬಾಳುವ ಹಂಬಲ, ಸಂಸಾರದ ಕನಸು, ಗಂಡ, ಮನೆ ಮಕ್ಕಳು, ಇವೆಲ್ಲದರ ಸಂಸರ್ಗ ಇರಬೇಕಿತ್ತೆಂಬ ದೂರದಾಸೆ ಜತೆಗೆ ಅದೆಲ್ಲಾ ತಮ್ಮ ಪಾಲಿಗೆ ಗಾಳಿಗೋಪುರವೆಂಬ ಅರಿವು.

ಬಾಡಿಗೆ ಗಂಡಂದಿರು:

''ನಮ್ಮ ಯಜಮಾನ್ರು'' ಎನ್ನುತ್ತಲೇ ವ್ಯಂಗ್ಯವಾದ ಒಂದು ಕಿರುನಗೆ ಹೊರ ಹೊಮ್ಮುತ್ತದೆ.

ಸಪ್ತಪದಿಯಿಲ್ಲ, ಗಟ್ಟಿಮೇಳವಿಲ್ಲ, ಹಾರ ಬದಲಿಸಲಿಲ್ಲ, ಉಂಗುರ ಧರಿಸಲಿಲ್ಲ. ಪ್ರೇಮವೂ ಇಲ್ಲ, ಗಾಂಧರ್ವ ವಿವಾಹವೂ ಅಲ್ಲ, ಮದುವೆಯ ಯಾವ ಪರಿಧಿಗೂ ಸಿಲುಕದಂತೆ ಆತ ಗಂಡನಾಗುತ್ತಾನೆ. ತನ್ನದೇ ಒಂದು ಮನೆ, ಸಭ್ಯ ಗೃಹಿಣಿಯ ಪಟ್ಟ, ಮಧ್ಯಮ ವರ್ಗದ ಬದುಕು ಬೇಕೆಂಬ ಹಂಬಲಿಕೆ, ಯಾವ ಜೀವನವೇ ಆದರೂ ಮೈ ಚೆಲ್ಲಿ ದಣಿವಾರಿಸಿಕೊಳ್ಳಲು ಒಂದು ಮನೆ ಬೇಕು ಎಂದು ಕೊಳ್ಳುವಾಗಲೇ ಸಮಸ್ಯೆ ಆರಂಭವಾಗುತ್ತದೆ. ಮನೆ ಹುಡುಕಿ ಹೊರಟವರಿಗೆ ಒಂಟಿ ಹೆಣ್ಣಿಗೆ ಮನೆ ಕೊಡುವುದಿಲ್ಲ. ನಿಮ್ಮ ಯಜಮಾನರು ಎಲ್ಲಿ? ಪ್ರಶ್ನೆಗಳು ಎದುರಾಗುತ್ತವೆ. ಉತ್ತರ ಬರದಾಗ ಬಾಗಿಲು ಮುಚ್ಚಿಕೊಳ್ಳುತ್ತವೆ.

ಇಂತಹ ಸಂದರ್ಭಗಳನ್ನು ಎದುರಿಸಲು ತಮ್ಮ ಬಳಿಗೆ ಬರುವ ಗಿರಾಕಿಗಳಲ್ಲೇ ವಿಶ್ವಾಸಾರ್ಹ ಎನಿಸಿದ ಒಬ್ಬ ಗಿರಾಕಿಯನ್ನೇ ''ಒಂದು ಸಾರಿ ಬಂದು ಮನೆ ಓನರ್‌ಗೆ ನೀನೇ ನನ್ನ ಗಂಡ ಅಂತ ಮುಖ ತೋರಿಸಿ ಹೋಗು'' ಎಂದು ಹೇಳಿ ಒಪ್ಪಿಸುತ್ತಾರೆ. ಸರಿ! ಗಂಡನೆಂದು ಒಪ್ಪಿ ಮನೆಯೊಳಗೆ ಬಂದು ಸೇರಿದ ಈ ಬಾಡಿಗೆ ಗಂಡಂದಿರು ಮನೆ ಬಿಟ್ಟು ಹೊರಗೆ ಕಾಲಿಡುವುದೇ ಇಲ್ಲ. ಹಗಲಿಡೀ ದುಡಿದು ಹೈರಾಣಾಗಿ ಮನೆಗೆ ಬಂದವಳನ್ನು ರಾತ್ರಿಯಿಡೀ ಪೀಡಿಸುವುದು, ಬಿಟ್ಟಿಯಾದ ದೇಹ, ಅವಳು ಸಂಪಾದಿಸಿದ ದುಡ್ಡಲ್ಲೂ ಪಾಲು, ಬಿಟ್ಟಿ ಊಟ, ಉಳಿಯುವುದಕ್ಕೆ ಮನೆ, ಕುಡಿಯೋಕೆ ಅವಳಿಂದ ಹಣ ವಸೂಲಿ, ಬೀಡಿ, ಸಿಗರೇಟು, ಜರ್ದಾ ಅಡಿಕೆಲೆ, ಹೆಂಡ, ತಂದುಕೊಡಲು ಅವಳ ಎಳೆ ಕಂದಮ್ಮಗಳು....

ಹೀಗೆ ಅವರ ಕರಾಳ ದಿನಗಳು ಆರಂಭವಾಗುತ್ತವೆ. ಕುಡಿದು ಮತ್ತೇರಿದಾಗ ಚಿತ್ರಹಿಂಸೆ, ವಿಶ್ವಾಸದಿಂದ ಕರೆ ತಂದ ಅವನು ಅವಳ ಬದುಕನ್ನೇ ಛಿದ್ರ ಛಿದ್ರ ಮಾಡಲು ಆರಂಭಿಸುತ್ತಾನೆ. ತಿರುಗಿ ಬಿದ್ದರೆ ಎಲ್ಲವನ್ನೂ ಬಯಲು ಮಾಡುತ್ತೇನೆಂದು ಬ್ಲಾಕ್ ಮೇಲ್ ಶುರು ಮಾಡ್ತಾನೆ.

ಎಲ್ಲರಂತೆ ಮದುವೆಯಾಗಿ ಬದುಕಿನ ಆನಂದವನ್ನು ಅನುಭವಿಸಲು ಸಾಧ್ಯವಾಗದ ಸಾವಿರಾರು ಹೆಣ್ಣು ಮಕ್ಕಳು ಇಂತಹ ಬಾಡಿಗೆ ಗಂಡಂದಿರ ಮೊರೆ ಹೋಗುತ್ತಾರೆ.

ಬಾಡಿಗೆ ಮನೆ ಹಿಡಿಯುವುದರಿಂದ ಹಿಡಿದು, ಬೀದಿ ನಲ್ಲಿಯಲ್ಲಿ ಬಿಂದಿಗೆಯಿಟ್ಟು ಕಾಯುವಾಗ, ಕಂದಮ್ಮನನ್ನು ಸ್ಕೂಲ್ ಆಟೋ ಹತ್ತಿಸುವಾಗ, ಸೀಮೆ ಎಣ್ಣೆಗಾಗಿ ಕ್ಯೂ ನಿಂತಾಗ, ಮಕ್ಕಳನ್ನು ಸ್ಕೂಲ್‌ಗೆ ಸೇರಿಸುವ ಕನಸು ಹೊತ್ತಾಗ, ಅಪ್ಪನ ಕಾಲಂ ತುಂಬುವಾಗ ತಾನೊಬ್ಬ ಗರತಿಯೆಂದು ನಂಬಿಸಲಿಕ್ಕಾಗಿ ಇವರಿಗೆ ಈ ಬಾಡಿಗೆ ಗಂಡಂದಿರು ಬೇಕಾಗುತ್ತಾರೆ.

ಬೀದಿ ಬದಿಯ ಈ ಹೆಣ್ಣುಗಳ ಬದುಕೇ ನೋವಿನದ್ದು. ಆ ನೋವಿನ ಒಂದು ಎಸಳು ಈ ಬಾಡಿಗೆ ಗಂಡಂದಿರು. ಒಮ್ಮೆ ಬಾಡಿಗೆಗೆ ಗಂಡನಾದವನು ಬೆಂಬಿಡದ ಸೀಳು ನಾಯಿಯಾಗುತ್ತಾನೆ. ಹೋದಲ್ಲೆಲ್ಲಾ ಕಾಡುತ್ತಾನೆ. ತಲೆ ಹಿಡುಕನಂತೆ ವರ್ತಿಸತೊಡಗುತ್ತಾನೆ. ಹಣ ಕೊಟ್ಟು ದೇಹ ಸುಖ ಪಡೆಯುವರಿಗಿಂತ ಈ ಹಣ ಕಿತ್ತುಕೊಂಡು ದೇಹದಲ್ಲಿ ಪಾಲು ಕೇಳುವ ಇವರುಗಳೇ ಭಯಾನಕವಾಗುತ್ತಾರೆ. ದೇಹವನ್ನು ಬಾಡಿಗೆಗೆ ಕೊಡುತ್ತಾರೆ ಅಷ್ಟೇ ಅಲ್ಲ ಮನಸ್ಸನ್ನು ಕೂಡ. ಬಾಡಿಗೆ ಮನೆಯಲ್ಲಿ ಬಾಡಿಗೆ ಗಂಡನ ಜೊತೆ ಬದುಕು, ಕನಸುಗಳೂ ಬಾಡಿಗೆಯವೇ!

ಪೊಲೀಸ್ ವ್ಯವಸ್ಥೆ:

ಬೆಂಗಳೂರಿನ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಟ್ರಾನ್ಸ್‌ಫರ್‌ಗಾಗಿ ಒಬ್ಬ ಕಾನ್‌ಸ್ಟೇಬಲ್ ಸುಮಾರು ಐದೆಷ್ಟೋ ಲಂಚ ಕೊಟ್ಟಿರುತ್ತಾನೆ. ಅಂತಹ ಪ್ರದೇಶಗಳೇ ಹಾಗೆ ದಿನವೂ ಚಿನ್ನದ ಮೊಟ್ಟೆಯಿಡುವ ಕೋಳಿಗಳಂತೆ!

ಬೇರೆ ಎಲ್ಲಾ ದಂಧೆಗಳು ಹಾಗಿರಲಿ, ಬೀದಿ ಬದಿಯ ವೇಶ್ಯೆಯರಿಂದ ಪ್ರತಿ ದಿನ ಪ್ರತಿ ಕಾನ್‌ಸ್ಟೇಬಲ್ ಕನಿಷ್ಠ ನೂರು ಮಾಮೂಲಿ ವಸೂಲಿ ಮಾಡುತ್ತಾನೆ. ಸಾಮಾನ್ಯವಾಗಿ ಒಂದು ಪ್ರದೇಶದಲ್ಲಿ ಇಬ್ಬರು ಕಾನ್‌ಸ್ಟೇಬಲ್‌ಗಳಿರುತ್ತಾರೆ. ಅಂದರೆ ಕನಿಷ್ಠ 200 ರೂ. ಮಾಮೂಲಿ ದಿನಕ್ಕೆ ತೆರಬೇಕಾಗುತ್ತದೆ.

ಇದು ಬೇರೆ ಬೇರೆ ಪ್ರದೇಶಗಳಿಗೆ ಭಿನ್ನವಾಗುತ್ತದೆಯೇ ಹೊರತು ಮಾಮೂಲಿಯಿಲ್ಲದ ಪ್ರದೇಶಗಳಂತೂ ಇಲ್ಲ. ತಿಂಗಳ ಕೊನೆಯಲ್ಲಿ, ಹೊಸ ಅಧಿಕಾರಿಗಳು ವರ್ಗವಾಗಿ ಬಂದಾಗ, ಕೆಲವೊಮ್ಮೆ ಪೊಲೀಸ್ ತಾಕತ್ತು ತೋರ ಬೇಕಾದಾಗ, ಮಾಧ್ಯಮಗಳಲ್ಲಿ ವರದಿಯಾದಾಗ, ಹಿಂದಿನ ದಿನ ಅವಳು ಮಾಮೂಲಿ ಕೊಡದಿದ್ದಾಗ.... ಹೀಗೆಲ್ಲಾ ಅವಳು ಬಂಧಿತಳಾಗುತ್ತಾಳೆ. ಇದು ಹಲವು ವರ್ಷಗಳಿಂದಲೂ ನಡೆಯುತ್ತಲೇ ಬರುತ್ತಿದೆ. ಮಹಾನಗರಗಳು, ಜಿಲ್ಲಾ ಕೇಂದ್ರಗಳು, ತಾಲ್ಲೂಕು ಕೇಂದ್ರಗಳು ಎಲ್ಲಿಯೂ ಈ ಮಾಮೂಲಿನಿಂದ ಪಾರಾಗುವಂತಿಲ್ಲ.

ಈ ಬಗ್ಗೆ ಕಾನ್‌ಸ್ಟೇಬಲ್‌ಗಳೊಂದಿಗೆ ಮಾತಾಡಿದಾಗ ಅವರು ಒಂದು ದೊಡ್ಡ ಹರವನ್ನೇ ಹರವಿ ಬಿಡುತ್ತಾರೆ. ಇಲ್ಲಿ ನಮಗೇನೂ ಸಿಗೋಲ್ಲ. ಎಸ್.ಐ., ಸರ್ಕಲ್, ಡಿ.ಎಸ್.ಪಿ. ಉನ್ನತ ಅಧಿಕಾರಿಗಳವರೆಗೂ ಹಂಚಿಕೆಯಾಗುತ್ತೆ. ನಾವು ಕೊಟ್ಟ ಲಂಚಗಳಿಗೆ ಬಡ್ಡಿ ಕೊಡೋಕೂ ಸಾಲೋಲ್ಲ ಈ ಹಣ. ಇದು ಅವರ ಸಮರ್ಥನೆ. ಇತ್ತೀಚೆಗೆ ಬಂದಿರುವ ಮಹಿಳಾ ಪೊಲೀಸ್ ವ್ಯವಸ್ಥೆಯೂ ಇದಕ್ಕಿಂತ ಭಿನ್ನವೇನಿಲ್ಲ.

''ಇವರು ನಿಜವಾಗಿಯೂ ರಕ್ತಹೀರುವ ರಾಕ್ಷಸಿಯರು. ಗಂಡಸು ಪೊಲೀಸ್‌ರಾದರೆ ಮಾಮೂಲಿ ಕಿತ್ಕೊಳ್ಳೋವ್ರು. ಕಾಸೇ ಇಲ್ಲ ಎಂದಾಗ ಹೋಗ್ಲಿ ಬಾ ನನ್ಜೊತೆನಾದ್ರೂ ಅಂತ ನಮಗೂ ಕುಡಿಸಿ ತಿನ್ನಿಸಿ ನಮ್ಮನ್ನು ಅನುಭವಿಸಿ ಹೋಗೋರು. ಆದ್ರೆ, ಆ ಗಯ್ಯಾಳಿಗಳು ಬ್ರಾ, ಕಾಚಾನೂ ಬಿಚ್ಚಿಸ್ತಾರೆ, ನಮ್ಮ ಕಾಸಿಗಾಗಿ

ಕಂಕುಳಲ್ಲಿರೋ ಮಗುವಿನ ಬಗ್ಗೆಯೂ ಕನಿಕರ ಇಲ್ದೆ ಎಳ್ಕೊಂಡು ಹೋಗ್ತಾರೆ. ನಮ್ಮನ್ನು ಇನ್ನೂ ಹೀರಿ ಬಿಸಾಡೋಕೆ ಈ ಹೆಂಗಸು ಪೋಲಿಸ್ನೋರ್ನ ಹಾಕವ್ರೆ'' ಅನ್ನೋದೇ ಆ ಹೆಣ್ಣು ಮಕ್ಕಳ ಅಭಿಪ್ರಾಯ.

ಹೀಗೆ 'ಮಾಮೂಲಿ' ಸ್ವರೂಪದಲ್ಲಿ ವಸೂಲಿಯಾಗುವ ಸುಮಾರು ೩೦ ಕೋಟಿಗಿಂತಲೂ ಹೆಚ್ಚು ಹಣ ಈ ಅರ್ಥ ವ್ಯವಸ್ಥೆಗೆ ಸೇರುತ್ತದೆ ಎಂದು ಅಧ್ಯಯನವೊಂದು ಹೇಳುತ್ತದೆ.

ರಾಷ್ಟ್ರೀಯ ಹೆದ್ದಾರಿಗಳು:

ರಾಷ್ಟ್ರೀಯ ಹೆದ್ದಾರಿಗಳು ಎನ್ನುವಾಗಲೇ.... ಹಾದಿಯ ತುಂಬೆಲ್ಲಾ ಹರಿದಾಡುವ ನಿರಂತರ ವಾಹನಗಳು. ಅದರಲ್ಲೂ ಸರಕು ಸಾಗಾಣಿಕೆ ಮಾಡುವ ಲಾರಿಗಳು. ಇದರೊಂದಿಗೇ ಕಣ್ಣೆದುರು ಧುತ್ತೆಂದು ನಿಲ್ಲುವುದು ಹಾದಿ ಬದಿಯ ಡಾಬಾಗಳು.

ಈ ಹೆದ್ದಾರಿಗಳನ್ನೇ ತಮ್ಮ ವೃತ್ತಿಯ ಜೀವಧಾತುವಾಗಿಸಿಕೊಂಡಿರುವ ಸಾವಿರಾರು ವೇಶ್ಯೆಯರೂ ಕೂಡ ಅಷ್ಟೇ ಬ್ಯುಸಿಯಾಗಿರುತ್ತಾರೆ. ಹತ್ತಿದ ಲಾರಿಯಲ್ಲಿ ಒಂದಷ್ಟು ದೂರ ಪಯಣಿಸಿ ಅವರ ಕಾಮ ತೃಷೆ ಹಿಂಗಿಸಿ, ಒಂದಷ್ಟು ಕುಡಿದು ತಿಂದು ಅವರ ತಾಕತ್ತಿಗನುಗುಣವಾಗಿ ಹಣ ಪಡೆದು ಇನ್ನೊಂದು ವಾಹನಕ್ಕೆ ಜಿಗಿಯುತ್ತಾಳೆ ಸರಕಾಗಿ! ಸದಾ ಆತಂಕ, ಭಯದ ನಿರೀಕ್ಷೆಗಳಲ್ಲೇ ಮೈ ಒಡ್ಡುತ್ತಾಳೆ ಈ ಮಾನಿನಿ. ಇಲ್ಲಿಯೂ ಹಣ, ನಿರ್ಭಾವುಕತೆ, ಆತಂಕಗಳೇ ಪ್ರಧಾನ. ಇನ್ನು ಡಾಬಾಗಳಲ್ಲಿರುವ ಹೆಚ್ಚಿನ ಹೆಣ್ಣು ಮಕ್ಕಳು ಸಮೀಪದ ರಾಜ್ಯದವರು ಅಥವಾ ದೂರದ ಜಿಲ್ಲೆಯವರು ಆಗಿರುತ್ತಾರೆ. ಮೇಲ್ನೋಟಕ್ಕೆ ಚಾ, ಊಟದ ತಯಾರಿ ನಡೆಸುವಂತೆ ಕಂಡರೂ ಬಹುತೇಕ ಡಾಬಾಗಳಲ್ಲಿ ನಡೆಸುವ ದಂಧೆಯೇ ಬೇರೆ.

ಆಶ್ರಯ ಕೊಟ್ಟ ಯಜಮಾನಿ, ಯಜಮಾನನಿಗೆ ಒಂದಷ್ಟು ಮತ್ತು ಇವಳಿಗೊಂದಷ್ಟು. ಎಲ್ಲ ವೇಶ್ಯೆಯರು ಅನುಭವಿಸುವ ಎಲ್ಲವನ್ನು ಇವಳು ಅನುಭವಿಸುತ್ತಾಳೆ. ಆದರೆ ಮುಖಗಳು ಮುಖವಾಡಗಳು, ಬೇರೆ ಬೇರೆ ಅಷ್ಟೇ! ಹೀಗೆ ಸ್ವಾತಂತ್ರ್ಯ ನಂತರದ ಭಾರತದಲ್ಲಿಯ ನಗರಗಳಂತೂ ವೇಶ್ಯೆಯರಿಂದ ತುಂಬಿ ತುಳುಕಿದವು ''ವಲಸೆ ಹೋಗುವ ಪುರುಷ'' ಕುಟುಂಬದ ವಿಘಟನೆ, ಎರಡು ಮಹಾಯುದ್ಧಗಳು, ಹೆಚ್ಚಿದ ಬಡತನ, ಹೀಗೆ ಕಾರಣಗಳು ಸಮರ್ಥನೆಗಳು ಏನೇ ಇದ್ದರೂ ಹೆಣ್ಣು ಪ್ರತಿ ಕ್ಷಣ ಕ್ಷಣವೂ ಸರಕಾಗುತ್ತಲೇ ಹೋಗುತ್ತಾಳೆ.

ಆಧುನಿಕ ಸಂದರ್ಭದಲ್ಲಿ ಉದಾ: 'ತೆಹಲ್ಕಾ'ದಂತಹ ಘಟಿಸಿ ಹೋದ ಘಟನೆಯಲ್ಲಿಯೂ ಹೆಣ್ಣು ಸರಕಾಗಿದ್ದಾಳೆ ಎಂಬುದು ಗಂಭೀರವಾದ ವಿಚಾರ. ದೇಶದ ರಕ್ಷಣೆಯಂತಹ ಅತಿ ಜವಾಬ್ದಾರಿ ಉಸ್ತುವಾರಿಗಳಲ್ಲಿ ಲಂಚದ ಒಂದು ಭಾಗವಾಗಿ ಹೆಣ್ಣು ಆಮಿಷಗಳ ವಸ್ತುವಾಗುತ್ತಾಳೆ.

ಜಾಗತೀಕರಣದ ಪ್ರಭಾವದಲ್ಲಿ ಪ್ರತಿ ಹೆಜ್ಜೆಯಲ್ಲಿಯೂ ವೇಶ್ಯಾವಾಟಿಕೆ ಆಕರ್ಷಕ ದಂದೆಯಾಗಿ ವ್ಯಾಪಿಸುತ್ತಿದೆ. ಇಂದಿನ ಕಛೇರಿಗಳಲ್ಲಿ, ಬಹು ರಾಷ್ಟ್ರೀಯ ಕಂಪನಿಗಳಲ್ಲಿ ತಮ್ಮ ಅಹವಾಲನ್ನು ಪಡೆದುಕೊಳ್ಳುವ ಉಪಾಯಕ್ಕಾಗಿ ಪಡೆದುಕೊಳ್ಳುವವರ, ಕೊಡುವವರ ಮಧ್ಯವರ್ತಿಯಾಗಿ ಹೆಣ್ಣು ತನ್ನನ್ನು ಅರ್ಪಿಸಿಕೊಳ್ಳುತ್ತಿದ್ದಾಳೆ.

೧೯೧೩ ರಲ್ಲಿ ವೇಶ್ಯಾ ವೃತ್ತಿಯ ವಿರುದ್ಧ ಐದನೆಯ ಅಂತರಾಷ್ಟ್ರೀಯ ಮಹಾಧಿವೇಶನ ನಡೆಯಿತು. ಅಂದಿನ ಅಧಿವೇಶನದ ಅಜೆಂಡಾ, 'ವೇಶ್ಯಾವೃತ್ತಿಗಾಗಿ ಯುವತಿಯರನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಿ ವಿಕ್ರಯ ಮಾಡುವ ವ್ಯವಹಾರವನ್ನು ಹತ್ತಿಕ್ಕುವ ಒತ್ತಾಯ'ವೇ ಆಗಿತ್ತು.

ಡ್ಯೂಕ್‌ಗಳ ಪತ್ನಿಯರು, ಕೆಂಟ್‌ಗಳ ಪತ್ನಿಯರು, ಬಿಷಪ್‌ಗಳು, ಪಾದ್ರಿಗಳು, ಯಹೂದ್ಯ ಗುರುಗಳು, ಪೊಲೀಸ್ ಅಧಿಕಾರಿಗಳು ಇದರಲ್ಲಿ ಭಾಗವಹಿಸಿದ್ದರು. ಭವ್ಯ ಔತಣಕೂಟಗಳು, ಸತ್ಕಾರ ಕೂಟಗಳು ಬಹಳ ವಿಜೃಂಭಣೆಯಿಂದ ಏರ್ಪಡಿಸಿದ್ದರು. ಪ್ರತಿನಿಧಿಗಳು,ಉನ್ನತ ಸ್ಥಾನಗಳ ವ್ಯಕ್ತಿಗಳು ಈ ಬಗ್ಗೆ ಕೂಗೆಬ್ಬಿಸಿ ಮೌನ ತಾಳುವಂತೆ ಮಾಡಿದರು!

''ಅದೆಷ್ಟು ಬೋಧಪ್ರದವೂ, ಪರಮೋದಾತ್ತವೂ ಆಗಿತ್ತೆಂದರೆ ಉದಾಹರಣೆಗೆ ಜರ್ಮನ್ ಚಕ್ರವರ್ತಿನಿ ಹೆರಿಗೆ ಆಸ್ಪತ್ರೆಯೊಂದಕ್ಕೆ ಭೇಟಿ ಕೊಟ್ಟಾಗ, ಆ ಆಸ್ಪತ್ರೆಯಲ್ಲಿದ್ದ ವಿವಾಹ ಬಾಹಿರ ಮಕ್ಕಳ ತಾಯಂದಿರ ಬೆರಳುಗಳಿಗೆ ಉಂಗುರಗಳನ್ನು ತೊಡಿಸಲಾಯಿತಂತೆ.... ಆ ಮಾಹಿಮಾನ್ವಿತ ಮಹಿಳೆಯು ಅವಿವಾಹಿತ ತಾಯಂದಿರನ್ನು ಕಂಡು ಮುಜುಗರಗೊಳ್ಳದಿರಲೆಂದು!!

''ಇಂಥ ಶ್ರೀಮಂತ ಬೂರ್ಜ್ವಾ ಮಹಾಧಿವೇಶನಗಳಲ್ಲಿ ಅವರ ಬೂಟಾಟಿಕೆಯನ್ನು ಮನಗಾಣಬಹುದು. ಪೊಲೀಸ್ ರಕ್ಷಕರು ಶ್ರೀಮಂತ ಪ್ರಭುತ್ವ ಹಾಗೂ ಬೂರ್ಷ್ವಾ ಸೀಯಿಂದಲೇ ಬೆಂಬಲ ಪಡೆದು ಬೆಳೆಯುತ್ತಿರುವ ವೇಶ್ಯಾವೃತ್ತಿಯ ವಿರುದ್ಧ ಹೋರಾಡಲು ಸಮಾವೇಶ ನೆರೆಯುತ್ತಾರೆ....'' ಎಂದು ೧೯೧೩ ರಲ್ಲಿ ಲೆನಿನ್‌ರವರು ಪ್ರತಿಕ್ರಿಯಿಸಿದ್ದು ಇಂದಿಗೂ ಸತ್ಯವಾಗಿದೆ. (ಲೆನಿನ್: ಮಹಿಳೆಯರ ವಿಮೋಚನೆ ಕುರಿತು, ಪುಟ.40)

ಬಾಲ ವೇಶ್ಯಾವಾಟಿಕೆ:

ಬಾಲವೇಶ್ಯಾ ದಂಧೆಯಂತೂ ಪಕ್ಕಾ ಲಾಭದಾಯಕ ಉದ್ಯಮವೇ ಸರಿ. ಅದರಲ್ಲೂ ತೃತೀಯ ಜಗತ್ತಿನ ಬಹುದೊಡ್ಡ ಲಾಭದಾಯಕ ದಂಧೆಯಾಗಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬಾಲವೇಶ್ಯಾವೃತ್ತಿಯು ಜಗತ್ತಿನ ದೊಡ್ಡ ಸಮಸ್ಯೆಯಾಗಿಯೂ ಮಾರ್ಪಾಡಾಗುತ್ತಿದೆ.

ಸಮೀಕ್ಷೆಯೊಂದರ ಪ್ರಕಾರ ಭಾರತದಲ್ಲಿ ೪೦ ರಿಂದ ೮೦ ಲಕ್ಷ ವೇಶ್ಯೆಯರು ಇದ್ದು ಇವರಲ್ಲಿ ೫ ರಿಂದ ೧೦ ಲಕ್ಷದಷ್ಟು ಬಾಲವೇಶ್ಯೆಯರು ಇದ್ದಾರೆ. ಕರ್ನಾಟಕದಲ್ಲಿಯೂ ರಾಜ್ಯ ಸರ್ಕಾರ ನಡೆಸಿದ ಸಮೀಕ್ಷೆಯೊಂದರಲ್ಲಿ ಬಹಿರಂಗಗೊಂಡ ಒಂದು ವಿಚಾರವೆಂದರೆ ಒಟ್ಟು ವೇಶ್ಯೆಯರ ಸಂಖ್ಯೆಯಲ್ಲಿ ಬಾಲವೇಶ್ಯೆಯರು ಶೇ 25 ರಿಂದ 30 ರಷ್ಟು ಎಂಬುದು ಹಾಗೂ ರಾಜ್ಯದ ಗಡಿ ಪ್ರದೇಶದಲ್ಲಿರುವ ದೇವದಾಸಿಯರ ಸಂಖ್ಯೆ ೨.5 ಲಕ್ಷಕ್ಕೂ ಹೆಚ್ಚಿದ್ದು ಅದರಲ್ಲಿ ಶೇ.30 ರಷ್ಟು 16 ವರ್ಷಕ್ಕಿಂತ ಕಡಿಮೆ ಪ್ರಾಯದವರು.

ಬಾಲವೇಶ್ಯಾವೃತ್ತಿ ಭಾರತದ ಸಮಸ್ಯೆಯಷ್ಟೇ ಅಲ್ಲ. ಜಗತ್ತಿನ ಬಹುತೇಕ ರಾಷ್ಟ್ರಗಳ ಸಮಸ್ಯೆ. ತೃತೀಯ ಜಗತ್ತಿನಲ್ಲಿ ಇದರ ಪ್ರಮಾಣ ಹೆಚ್ಚಿದೆ ಅಷ್ಟೆ. ಥೈಲ್ಯಾಂಡ್, ಬ್ರೆಝಿಲ್ ಇನ್ನಿತರ ರಾಷ್ಟ್ರಗಳಲ್ಲಿಯೂ ಹೆಚ್ಚಿದ್ದು ಬ್ಯಾಂಕಾಕ್, ರ್ಯಾನೊಂಗ್‌ಗಳಲ್ಲಿ ಇದು ಅತಿ ಹೆಚ್ಚಿದೆ.

ಬಾಲಕಾರ್ಮಿಕ ಪದ್ಧತಿಯಲ್ಲಿ ಬಾಲವೇಶ್ಯಾವೃತ್ತಿ ಅತ್ಯಂತ ಹೀನಾಯವಾಗಿದ್ದು ಅನಕ್ಷರತೆ, ಕಿತ್ತು ತಿನ್ನುವ ಬಡತನ, ಬರಗಾಲ, ಮೌಢ್ಯತೆಗಳು ಈ ಅನಿಷ್ಟವನ್ನು ದಿನದಿಂದ ದಿನಕ್ಕೆ ಅತಿವೇಗವಾಗಿ ಬೆಳೆಯಲು ಅವಕಾಶ ಮಾಡಿಕೊಟ್ಟಿವೆ.

ವೇಶ್ಯಾವೃತ್ತಿಯೊಂದಿಗೇ ಎಲ್ಲಾ ಕಾಲಘಟ್ಟಗಳಲ್ಲೂ ಬಾಲವೇಶ್ಯಾವೃತ್ತಿಯೂ ಪ್ರಚಲಿತವಾಗುತ್ತಿದೆ. ಅದರಲ್ಲೂ ಆಧುನಿಕ ಸಮಾಜದಲ್ಲಿಯಂತೂ ಬಾಲವೇಶ್ಯಾವೃತ್ತಿಯ ಬೇಡಿಕೆ ಬಹಳ ಅನಾಗರೀಕವಾಗಿ ಅತಿರೇಕಕ್ಕೇರುತ್ತಿದೆ. ಈ ನಿಟ್ಟಿನಲ್ಲಿ ನಾನಿಲ್ಲಿ ಬಾಲವೇಶ್ಯಾವೃತ್ತಿ ಮತ್ತು ಸಮಾಜದ ಬಗ್ಗೆ ಒಂದು ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡುತ್ತೇನೆ. ವೇಶ್ಯಾವಾಟಿಕೆ ಎನ್ನುವಾಗಲೇ ಮಡಿವಂತಿಕೆಯ ಮನಸ್ಸುಗಳು ತಮ್ಮ ವಿಚಾರ ವೈಶಾಲ್ಯತೆಯ ಬಾಗಿಲು ಮುಚ್ಚಿಕೊಂಡು ಬಿಡುತ್ತವೆ. ಈ ವಾಸ್ತವತೆಯ ಪರಿಧಿಯಲ್ಲಿ ಬಾಲವೇಶ್ಯಾವೃತ್ತಿ ಮತ್ತು ಬಾಲವೇಶ್ಯಾ ದಂಧೆಯ ಬಗ್ಗೆ ಹಿಂದಿನಿಂದಲೂ ಸಮಾಜ ಹೇಗೆ ನಡೆದುಕೊಳ್ಳುತ್ತಿದೆ ಎನ್ನುವುದರ ಬಗ್ಗೆ ಸಂಕ್ಷಿಪ್ತವಾಗಿ ವಿಶ್ಲೇಷಿಸಲು ಪ್ರಯತ್ನಿಸುತ್ತೇನೆ.

ಮಕ್ಕಳನ್ನು ಲೈಂಗಿಕತೆಗೆ ಉಪಯೋಗಿಸಿಕೊಳ್ಳುವುದರ ಬಗ್ಗೆ ಸಮಾಜದಲ್ಲಿ ಅಭಿಪ್ರಾಯ ಭೇದಗಳಿವೆ.

'ವಯಸ್ಕರು ಮತ್ತು ಮಕ್ಕಳ ನಡುವಿನ ಲೈಂಗಿಕ ಸಂಬಂಧ ಅಪೇಕ್ಷಣೀಯವಾದದ್ದು ಮತ್ತು ಅನುಮತಿಸಬಹುದಾದ್ದು'. 'ಪ್ರೀತಿಯ ಅತ್ಯುನ್ನತ ರೂಪ' ಎಂದು ಪರಿಗಣಿಸಿದ ಅನೇಕ ಪ್ರಸಿದ್ಧರಲ್ಲಿ ಪ್ಲೇಟೋ ಮತ್ತು ಪ್ಲುಟಾರ್ಚ್ ಕೂಡ ಮುಖ್ಯರು.

ಮತ್ತೊಂದು ಮಡಿವಂತಿಕೆಯ ಮನಸ್ಸಿನ ಸಮೂಹ ಈ ಬಾಲವೇಶ್ಯಾವೃತ್ತಿಯ ಬಗ್ಗೆ ಚರ್ಚಿಸಲೂ ಕೂಡ ಸಿದ್ಧವಿಲ್ಲ. ಮಕ್ಕಳ ಲೈಂಗಿಕತೆ ಕುರಿತು ಯಾವುದೇ ಜ್ಞಾನ ಅಥವಾ ಚರ್ಚೆಯನ್ನು ಹತ್ತಿಕ್ಕುವ ಉದಾಹರಣೆಗಳಿವೆ. ವಯಸ್ಕರ ಲೈಂಗಿಕತೆಯನ್ನು ಪೆಡಸಾಗಿರುವ ತತ್ವಗಳ ಜೊತೆ ಪ್ರಸ್ತಾಪಿಸುತ್ತಾರೆ.

ಸಮಾಜದಲ್ಲಿ ಲೈಂಗಿಕ ಶೋಷಣೆ ಹೇಗಿರುತ್ತದೆಯೋ ಅದಕ್ಕೆ ಪೂರಕವಾಗಿ ಬಾಲವೇಶ್ಯಾ ದಂಧೆ ಕೂಡ ಇರುತ್ತದೆ. ಇಲ್ಲಿ ಲೈಂಗಿಕಕತೆಗಿಂತಲೂ ಅಧಿಕಾರ ದುರುಪಯೋಗ ಪ್ರಶ್ನೆಯಾಗುತ್ತದೆ. ಜೀತ ವ್ಯವಸ್ಥೆಯ ಒಂದು ಭಾಗದಂತೆ ಬಾಲವೇಶ್ಯಾ ದಂಧೆಯೂ ಕೂಡ ಇದೆ.

ಮಕ್ಕಳ ಲೈಂಗಿಕತೆ ಒಂದು ಸಾಮಾನ್ಯವಾದ ನೈತಿಕ, ಸಾಮಾಜಿಕ ಅನಿಷ್ಟದ ಒಂದು ಫಲ. ಇತ್ತೀಚೆಗೆ ಇದರ ವಿರುದ್ಧ ಒಂದು ದೊಡ್ಡ ನೈತಿಕ ವಿಮೋಚನಾ ಚಳುವಳಿಯೇ ನಡೆಯುತ್ತಿದೆ.

ಪ್ರವಾಸೋದ್ಯಮ ಮತ್ತು ಬಾಲವೇಶ್ಯಾವಾಟಿಕೆ:

ಬಾಲವೇಶ್ಯಾ ದಂಧೆಯು ಜಾಗತಿಕವಾದ ಒಂದು ಉದ್ಯಮ ಹಾಗೂ ಬಹು ದೊಡ್ಡ ದಂಧೆಯಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಸಾಧಿಸಿರುವ ಹಿಡಿತಗಳು, ತೋರುವ ಆಮಿಷಗಳ ಭಾಗವಾಗಿ ಇಂದು ತೃತೀಯ ಜಗತ್ತಿನಲ್ಲಿ ಸೆಕ್ಸ್ ಉದ್ಯಮ ಶರವೇಗದಲ್ಲಿ ಬೆಳೆಯುತ್ತಿದೆ.

1967 ರಲ್ಲಿ ವಿಯಟ್ನಾಂ ವಿರುದ್ಧ ಅಮೇರಿಕಾ ಯುದ್ಧ ಸಾರಿದಾಗ ಅದು ತನ್ನ ಸೈನಿಕರ ವಿಶ್ರಾಂತಿಗಾಗಿ ಥೈಲ್ಯಾಂಡಿನೊಂದಿಗೆ ಒಪ್ಪಂದ ಮಾಡಿಕೊಂಡಿತು. ಉಳ್ಳವರ ದೈಹಿಕ ತೃಷೆ ಹಿಂಗಿಸಲು ಥೈಲ್ಯಾಂಡ್‌ನಂತಹ ತೃತೀಯ ಜಗತ್ತಿನ ರಾಷ್ಟ್ರಗಳು 'ಸೆಕ್ಸ್ ಉದ್ಯಮ'ವನ್ನು ಒಂದು ಬೃಹತ್ ಉದ್ಯಮವನ್ನಾಗಿಸಿ ಲಾಭ ಪಡೆಯಲು ಮುಗಿಬಿದ್ದವು. ಆ ಸಂದರ್ಭದಲ್ಲಿಯೇ ಒಂದು ದಶಕದೊಳಗೇ ಥೈಲ್ಯಾಂಡ್ ಒಂದರಲ್ಲಿಯೇ ಸಾವಿರಾರು ವೇಶ್ಯಾಗೃಹಗಳು ತಲೆ ಎತ್ತಿದವು. ಸಮೀಕ್ಷೆಯೊಂದರ ಪ್ರಕಾರ ಈ ವೇಶ್ಯಾಗೃಹಗಳು ಆರಂಭವಾಗುವ ಮೊದಲು ಥೈಲ್ಯಾಂಡಿಗೆ ಭೇಟಿ ನೀಡುತ್ತಿದ್ದ ಪ್ರವಾಸಿಗರ ಸಂಖ್ಯೆ ೧೮ ಲಕ್ಷ ಇತ್ತು. ೧೯೮೮ ರಲ್ಲಿ ಈ ಸಂಖ್ಯೆ ೪೫ ಲಕ್ಷಕ್ಕೇರಿತು.

ಅಂದರೆ ಪ್ರವಾಸೋದ್ಯಮವನ್ನು ಲಾಭದಾಯಕ ಉದ್ಯಮವನ್ನಾಗಿಸಲು ತೃತೀಯ ಜಗತ್ತಿನ ಅಮಾಯಕ ಜೀವಿಗಳನ್ನು ಸೇವೆಯ ಸರಕಾಗಿಸಿಕೊಳ್ಳಲು ಆರಂಭಿಸಿದರು. ಈ ಬಗ್ಗೆ ಒಂದಿಷ್ಟು ಅಳುಕಿಲ್ಲದ ಲಾಭ ಬಡುಕರು ವೇಶ್ಯಾವಾಟಿಕೆಯನ್ನು ಪ್ರವಾಸೋದ್ಯಮದ ಒಂದು ಅವಿಭಾಜ್ಯ ಅಂಗವನ್ನಾಗಿಸಿಕೊಂಡರು. ಹಾಲೆಂಡ್‌ಗೆ ಹೋದ ಪ್ರವಾಸಿಗರನ್ನು ನಿಮಗೆ ಹೆಚ್ಚಿನ ಸುಖ ನೀಡಲು ನಿಮಗಾಗಿ ಪುಟ್ಟ ಗುಲಾಮರು ಕಾಯುತ್ತಿದ್ದಾರೆ', 'ನಿಮ್ಮ ಮೈಮನ ತಣಿಸಲುನಿಮ್ಮ ಪ್ರೀತಿಯ ಹುಡುಗಿ' ಇಂತಹ ಜಾಹೀರಾತುಗಳು ಸೆಳೆಯುತ್ತವೆಯಂತೆ!

ವೇಶ್ಯೆಯರ ಮಕ್ಕಳು:

ಐತಿಹಾಸಿಕ ಸಂದರ್ಭದಲ್ಲಿ ನಿರ್ಮಾಣಗೊಳ್ಳುವ ಸಾಮಾಜಿಕ ಸಂರಚನೆಗಳು, ಲೈಂಗಿಕತೆಯ ತತ್ವಗಳು ಪಿತೃಪ್ರಾಧಾನ್ಯತೆಯ ಸಾಮಾಜಿಕ ಸಂರಚನೆಯಲ್ಲಿ ಬೇರುಬಿಟ್ಟಿವೆ. ಇಲ್ಲಿ ಬರುವ ಖುಷಿ, ಸಂತೋಷ, ಸೌಲಭ್ಯ ಆತ್ಮೀಯತೆ, ಇವೆಲ್ಲವೂ ವಿಶೇಷ ಅಧಿಕಾರವುಳ್ಳ ಪುರುಷರ ಮರ್ಜಿಯಲ್ಲಿವೆ. ಖಾಸಗಿ ಆಸ್ತಿ ಒಡೆತನ ಮತ್ತು ಪಿತೃತ್ವದ ಸಂರಕ್ಷಣೆ ಮಹಿಳೆಯ ಸಂತಾನೋತ್ಪತ್ತಿ ಲೈಂಗಿಕ ಸೇವೆಯ ನಿಯಂತ್ರಣದಲ್ಲಡಕವಾಗಿದೆ. ಲೈಂಗಿಕತೆಯನ್ನು ಮೂಲಭೂತವಾಗಿ ಮತ್ತು ಪರಿಪೂರ್ಣವಾಗಿ ಸಂತಾನಾಭಿವೃದ್ಧಿಯ ಸಾಧನವಾಗಿ ಮಾತ್ರ ನಮ್ಮ ಸಮಾಜ ಪರಿಗಣಿಸುತ್ತದೆ. ಲೈಂಗಿಕತೆಯೊಂದಿಗೆ ಥಳಕು ಹಾಕಿಕೊಂಡಿರುವ ಆನಂದ, ಅಪೇಕ್ಷೆಗಳನ್ನು ನಿರಾಕರಿಸುತ್ತದೆ. ಸಂತಾನಾಭಿವೃದ್ಧಿಯನ್ನು ಮೀರಿದ ಯಾವುದೇ ಸಾಮಾಜಿಕ ಮಾನ್ಯತೆಯನ್ನು ಸಮಾಜ ಲೈಂಗಿಕ ಕ್ರಿಯೆಗೆ ನೀಡುವುದಿಲ್ಲ.

ಲೈಂಗಿಕತೆಯನ್ನು ಮೂಲಭೂತವಾಗಿ ಸಂತೋಷ ಮತ್ತು ಆತ್ಮೀಯತೆಗೆ ಮಾತ್ರ ಪ್ರಧಾನವೆಂದು ಪರಿಭಾವಿಸಿ ಸಂತಾನೋತ್ಪತ್ತಿಯಿಂದ ಅದನ್ನು ಪ್ರತ್ಯೇಕಗೊಳಿಸಿದರೆ ಮಾತೃತ್ವಕ್ಕೆ ಯಾವ ಸ್ಥಾನವಿದೆ ಎಂಬ ಪ್ರಶ್ನೆ ಎದುರಾಗುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ ಮಾತೃತ್ವಕ್ಕೆ ಅವಕಾಶವಿಲ್ಲವೆಂದೇನಿಲ್ಲ. ಲೈಂಗಿಕ ವೃತ್ತಿ ಮಹಿಳೆಯರು ತಮ್ಮ ವೃತ್ತಿಯ ಅವಧಿಯಲ್ಲಿ ತಮ್ಮ ಪ್ರಿಯಕರನೊಂದಿಗೆ, ಗಂಡನೆಂದು ಹೇಳಿಕೊಳ್ಳುವ ವ್ಯಕ್ತಿಯೊಂದಿಗೆ, ಅಥವಾ ಆಕಸ್ಮಿಕವಾಗಿ ಗಿರಾಕಿಯೊಂದಿಗೆ ಲೈಂಗಿಕ ಸಂಪರ್ಕ ಹೊಂದಿ ಮಕ್ಕಳನ್ನು ಪಡೆಯುವುದೇ ಅಲ್ಲದೆ ಅಂತಹ ಮಕ್ಕಳ ಬಾಳ್ವೆಯನ್ನು ಪಣಕ್ಕಿಟ್ಟು ಹೆಣಗಾಡುತ್ತಿರುತ್ತಾರೆ. ಸಮಾಜದ ದೃಷ್ಟಿಯಲ್ಲಿ ಶಾಸನಬಾಹಿರ ಮಕ್ಕಳು ಎಂದು ಪರಿಗಣಿಸಲ್ಪಟ್ಟ ಹೋರಾಟವೇ ಅತ್ಯಂತ ವಿಶಿಷ್ಟವಾದುದು. ಆದ್ದರಿಂದ ಲೈಂಗಿಕವೃತ್ತಿ ಮಹಿಳೆಯ ಲೈಂಗಿಕ ಸೇವೆ ನೀಡುವ

ಸಂದರ್ಭದಲ್ಲಿ ಮಾತೃತ್ವ ನಷ್ಟವಾಗುವ ಪ್ರಶ್ನೆಯೇ ಇಲ್ಲ. ಈ ಮಹಿಳೆಯರೆಂದೂ ತಾಯ್ತನ ಮತ್ತು ಮಕ್ಕಳು ಹೊಂದಿರುವುದನ್ನು ಅಪ್ರಮುಖವಾದುದೆಂದಾಗಲೀ, ಅಮೂಲ್ಯವಲ್ಲವೆಂದಾಗಲೀ ಭಾವಿಸುವುದಿಲ್ಲ.

ಪ್ರತಿ ಮಹಿಳೆಗೂ ತಾಯಿಯಾಗುವ ಹಕ್ಕಿದೆ. ಆದರೆ ಅದು ಅವಳು ಅಪೇಕ್ಷಿಸಿದರೆ ಮಾತ್ರ ಆಗುವಂತಿರಬೇಕು. ಆದರೆ ತಾಯ್ತನ ಹೊಂದುವುದೇ ಮಹಿಳೆಯೋರ್ವಳ ಜೀವನದ ಪರಮ ಗುರಿಯಾಗಬೇಕಿಲ್ಲ. ಆದರೆ ವಾಸ್ತವಾಗಿ ಗಂಡನೆಂದು ಹೇಳಿಕೊಂಡು ಬೇರೆ ಬೆರೆ ಕಾರಣಗಳಿಂದ, ಅನಿವಾರ್ಯತೆಗಳಿಂದ ಲೈಂಗಿಕ ವೃತ್ತಿ ಮಹಿಳೆಯರ ಜೀವನದೊಳಗೆ ಪ್ರವೇಶಿಸುವ ಪ್ರತಿಯೊಬ್ಬನೂ ತನಗೊಂದು ತನ್ನದೇ ಆದ ಮಗುವಿನ ಬೇಡಿಕೆಯನ್ನಿಡುತ್ತಾನೆ. ತಾತ್ಕಾಲಿಕವಾಗಿ ತನ್ನೊಂದಿಗಿದ್ದು ಯಾವುದೇ ಕ್ಷಣದಲ್ಲಾದರೂ ಓಡಿಹೋಗಿ ಬಿಡುವ ಬಾಡಿಗೆ ಗಂಡಂದಿರ ಬಗ್ಗೆ ಲೈಂಗಿಕ ವೃತ್ತಿ ಮಹಿಳೆಗೆ ಅರಿವಿದ್ದರೂ ಕೂಡ ಅವನನ್ನು ತನ್ನ ಬಾಳಸಂಗಾತಿಯಾಗಬಲ್ಲನೆಂಬ ಭ್ರಮೆಯಲ್ಲಿ ಮತ್ತೆ ಮತ್ತೆ ಹಡೆಯುತ್ತಲೇ ಹೋಗುತ್ತಾಳೆ. ಹಾಗೆ ಹಡೆದ ನಂತರವೇ ಅವರಿಬ್ಬರ ಮಧ್ಯೆ ಬಿರುಕುಗಳು ಆರಂಭವಾಗುವುದು. ಹೀಗೆಯೇ ಸಾಮಾನ್ಯವಾಗಿ ಒಬ್ಬ ಲೈಂಗಿಕ ವೃತ್ತಿ ಮಹಿಳೆಗಿರುವ ನಾಲ್ಕು ಮಕ್ಕಳಿಗೂ ನಾಲ್ಕು ಅಪ್ಪಂದಿರು. ಇದೊಂದು ಅವರ ಬದುಕುಗಳಿಗಿರುವ ದೊಡ್ಡ ಸವಾಲು ಮತ್ತು ಏಕಾಂಗಿಯಾಗಿ ಲೈಂಗಿಕ ವೃತ್ತಿ ಮಹಿಳೆ ಸೆಣಸಾಡಬೇಕಾದ ಹೊಣೆಯಾಗಿರುತ್ತದೆ.

ಈ ನಿಟ್ಟಿನಲ್ಲಿ ನಡೆಸಿದ ಅಧ್ಯಯನದ ವರದಿಯೊಂದು ಲೈಂಗಿಕ ವೃತ್ತಿ ಮಹಿಳೆಯರ ಮಕ್ಕಳ ಅಂಕಿ ಅಂಶಗಳನ್ನು ಈ ಕೆಳಗಿನಂತೆ ನೀಡಿದೆ.

ಭಾರತದ ಪ್ರಮುಖ ನಗರವಾರು ವಿವರ


(ರಾಷ್ಟ್ರೀಯ ಮಹಿಳಾ ಆಯೋಗ ವರದಿ 95-96)

	ಒಟ್ಟು	ಬೆಂಗಳೂರು	ಬಾಂಬೆ	ಕಲ್ಕತ್ತ	ದೆಹಲಿ	ಚೆನ್ನೈ
1 ಮಕ್ಕಳನ್ನು ಹೊಂದಿರುವವರು	65.60	41.83	82.00	63.65	64.00	76.50
2 ಮಕ್ಕಳಿಲ್ಲದವರು	33.70	58.17	17.00	36.35	36.00	21.00
3 ಪ್ರತಿಕ್ರಿಯಿಸದವರು	0.70	-	1.00	-	-	2.50
ಒಟ್ಟು	100	100	100	100	100	100

ಈ ಸಮಾಜವನ್ನಾಳುವ ಪಿತೃತ್ವ ಪ್ರಧಾನ ಮೌಲ್ಯ ಪುರುಷರಿಗೆ ಬಹುಲೈಂಗಿಕ ಸಂಗಾತಿಗಳಿಗೆ ಮುಕ್ತ ಅವಕಾಶವನ್ನು ಕಲ್ಪಿಸಿ ಮಹಿಳೆಗೆ ಆ ಸೌಲಭ್ಯವನ್ನು ನಿರಾಕರಿಸುವ ಮೂಲಕ ಭೇದ ಭಾವ ಪೂರಿತವಾದ ನೀತಿಯನ್ನು ಅನುಸರಿಸುವುದೇ ಅಲ್ಲದೆ ಲೈಂಗಿಕ ವೃತ್ತಿ ಮಹಿಳೆಯರು ಬಹು ಲೈಂಗಿಕ ಸಂಗಾತಿಗಳನ್ನು ಹೊಂದುವುದನ್ನು ಸಮಾಜ ಪಾಪವೆಂದು. ಅನೀತಿಯುತವಾದುದ್ದೆಂದು, ಕಳಂಕಪೂರಿತವೆಂದು, ಅಧಾರ್ಮಿಕವೆಂದೂ ಹೇಳುವ ಮೂಲಕ ತಮ್ಮ ಭೋಗಸುಖಕ್ಕೆ ಮುಕ್ತ ಅವಕಾಶವನ್ನು ಈ ಸಮಾಜ ಕಲ್ಪಿಸಿದೆ. ಅವರು ಮಹಿಳೆಯರನ್ನು ದುರ್ಬಲರು, ಅವಲಂಬಿತರು, ಅನೀತಿಗುಳ್ಳವರು ವಿಚಾರರಹಿತರು ಎಂದು ಪರಿಭಾವಿಸಿ ಅವರನ್ನು ನಿರ್ದೇಶಿಸುವ ಮತ್ತು ನಿಯಮ ವಿದೇಯಯರಾಗಿರುವ ನೀತಿಗಳಿಗೆ ಮುಂದಾಗುತ್ತಾರೆ. ಈ ಪಿತೃಪ್ರಧಾನ ತತ್ವಗಳಿಗೆ ಬಾಗಿ ಪುರುಷ ಮತ್ತು ಮಹಿಳೆಯರನ್ನು ಮರ್ಧಿಸುವುದು ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಲು ಅತ್ಯಗತ್ಯವಾದ ಸಾಮಾಜಿಕ ಮೌಲ್ಯವೆಂಬಂತೆ ಪ್ರತಿಬಿಂಬಿಸಲಾಗಿದೆ. ಈ ಮೌಲ್ಯಗಳೇ ಆ ಗಿರಾಕಿಗಳನ್ನು ಮಹಿಳೆಯರನ್ನು ಆಳುವುದರಿಂದ ಅವರುಗಳು ಈ ಕೀಳರಿಮೆಯ ಪಾಪಪ್ರಜ್ಞೆಯಲ್ಲಿ ತೊಳಲಾಡಿದರೂ ಅವಳನ್ನು ಈ ಸಮಾಜ ಕಳಂಕಗಳ ಮಹಾಪ್ರತಿರೂಪದಂತೆ ಚಿತ್ರಿಸುತ್ತದೆ. ಲೈಂಕಿಕತೆ ಪುರುಷ ಮತ್ತು ಮಹಿಳೆ ನಡುವೆ ಒಂದು ಸಮಾನ, ಆರೋಗ್ಯ ಪೂರ್ಣ ಸಂಬಂಧದ ಅಡಿಪಾಯವಾಗುವುದರ ಬದಲು ಅದು ಅಸಮಾನತೆಯನ್ನು ಹೆಚ್ಚಿಸುವ ಮತ್ತು ಅತಿ ನಿಯಂತ್ರಣಕೊಳ್ಳಪಡುವ ಒಂದು ಸಾಮಾಜಿಕ ಕ್ರಿಯೆಯಾಗಿ ಈ ಅನಿಷ್ಟಗಳಿಗೆಲ್ಲ ಕಾರಣವಾಗಿದೆ.

ಪ್ರತ್ಯಕ್ಷವಾಗಿಯಲ್ಲದಿದ್ದರೂ ಪರೋಕ್ಷವಾಗಿ ವೇಶ್ಯೆಯರ ಮಕ್ಕಳೂ ಕೂಡ ವೇಶ್ಯಾವಾಟಿಕೆಯಂತಹ ವ್ಯವಸ್ಥೆಯೊಂದಿಗೆ ತಳಕು ಹಾಕಿಕೊಂಡೇ ಇರುತ್ತಾರೆ. ಭ್ರೂಣವಾಗಿರುವಾಗಲೇ ತಾಯಿಯ ಒಡಲಲ್ಲಿ ಬೆಚ್ಚಗಿರಲೂ ಆಗದ ಜಂಜಾಟಗಳಿಂದ ಆರಂಭಗೊಂಡ ಈ ಕಂದಮ್ಮಗಳ ಬದುಕಿನ ಪಯಣ ಜೀವನ ಪರ್ಯಂತ ಮುಳ್ಳಿನ ಹಾಸಿಗೆಯಾಗುತ್ತದೆ. ತಿಂಗಳ ನವಜಾತರನ್ನೇ ಕಂಕುಳಲ್ಲಿರಿಸಿಕೊಂಡು ವೃತ್ತಿಗಿಳಿಯುವ ಅನಿವಾರ್ಯತೆ ಬಹುತೇಕ ಈ ಅಮ್ಮಂದಿರಿಗಿರುವುದು ನನ್ನ ಅಧ್ಯಯನದ ಅನುಭವದಿಂದ ಕಂಡುಕೊಂಡ ಸತ್ಯ.

ಚಿಕ್ಕ ಪ್ರಾಯದಿಂದಲೇ ಆ ಮಕ್ಕಳು ಅರಳುವ ವಾತಾವರಣವೇ ಆ ಮಕ್ಕಳ ಮನಸ್ಸುಗಳನ್ನು ಅನಾರೋಗ್ಯಕರವಾಗಿಸುತ್ತದೆ. ತಾಯಿಗೆ ಬರುವ ಗಿರಾಕಿಗಳು, ಅವರುಗಳ ನಡತೆಗಳು, ಅಮ್ಮನನ್ನು ಕಾಡಿಸುವ ಅವಳ ಗಂಡನಾಗಿ ಪಾತ್ರವಹಿಸುವ ಈ ಮಕ್ಕಳ ಅಂಕಲ್‌ಗಳು, ಮಾಮಂದಿರು, ಹಾಗೂ ದುಷ್ಟಟಗಳು, ಅರಾಜಕ ನಡತೆಗಳು, ಮಕ್ಕಳನ್ನು ಕಂದಿಸುತ್ತಲೇ ಹೋಗುತ್ತವೆ. ಆರೋಗ್ಯ, ಪೌಷ್ಠಿಕತೆ, ಶಿಕ್ಷಣ, ಪೋಷಕರ ಆರೈಕೆ, ಶಾಂತಿ, ನೆಮ್ಮದಿಯ ವಾತಾವರಣ...ಇವಾವೂ ಇಲ್ಲದೆಯೇ ಬೆಳೆಯುವ ಈ ಮಕ್ಕಳ ಭವಿಷ್ಯ ಈ ಸಮಾಜಕ್ಕೆ ಹೊರೆಯಾಗದಿರದು.



ಅಧ್ಯಾಯ: ೭

ವೇಶ್ಯಾವಾಟಿಕೆ ಮತ್ತು ರಾಜಕಾರಣ



ದಿನಾಂಕ. ೧೩.ಮಾರ್ಚ್.೨೦೦೧. 'ಜಸ್ಟೀಸ್ ವೆಂಕಟಸ್ವಾಮಿ ಆಯೋಗ'ದ ಮುಂದೆ 'ತೆಹಲ್ಕಾ' ಡಾಟ್‌ಕಾಮ್ ಸಿಡಿಸಿದ ಬಾಂಬಿಗೆ ಇಡೀ ದೇಶ ತಲ್ಲಣಗೊಂಡಿತ್ತು. ಸರ್ಕಾರ ತಳಮಳಗೊಂಡಿತ್ತು. ಬೃಹತ್ ಪ್ರಜಾಪ್ರಭುತ್ವದ 'ಭರತಖಂಡ' ಇಡೀ ಜಗತ್ತಿನ ಮುಂದೆ ಪ್ರಶ್ನೆಯಾಗಿ ನಿಲ್ಲುವಂತಾಗಿತ್ತು.

ವೇಶ್ಯಾವಾಟಿಕೆ ಮತ್ತು ರಾಜಕಾರಣದ ಅಧ್ಯಾಯದ ಮುನ್ನುಡಿಯೆಂಬಂತೆ 'ತೆಹಲ್ಕಾ' ಪ್ರಸ್ತಾಪಕ್ಕೆ ಬಹಳ ಮುಖ್ಯವಾದ ಎಳೆಯಿದೆ.

ಲಂಡನ್ ಮೂಲದ ಶಸ್ತ್ರ ತಯಾರಿಕೆ ಕಂಪನಿ 'ವೆಸ್ಟ್‌ಎಂಡ್ ಇಂಟರ್‌ನ್ಯಾಷನಲ್' ಕಂಪನಿಯ ಪ್ರತಿನಿಧಿಗಳೆಂದು 'ಅನಿರುದ್‌ಬೆಹಾಲ್' ನಾಯಕತ್ವದ 'ತೆಹಲ್ಕಾ' ತಂಡ ರಕ್ಷಣಾ ಇಲಾಖೆಯ ಒಪ್ಪಂದಗಳ ಅಕ್ರಮಗಳನ್ನು ಬಯಲಿಗೆಳೆಯಲು ಕಾರ್ಯತಂತ್ರ ಹೂಡಿತ್ತು 'ತೆಹಲ್ಕಾ ಡಾಟ್‌ಕಾಮ್.' ದೇಶದ ಚುಕ್ಕಾಣಿ ಹಿಡಿದಿದ್ದ ಗಣ್ಯಾತಿಗಣ್ಯರನೇಕರು 'ತೆಹಲ್ಕಾ ಡಾಟ್‌ಕಾಮ್' ಹೆಣೆದ ಬಲೆಗೆ ಬಿದ್ದಿದ್ದರು.

ಈ ಘಟನೆ ತನಿಖೆಗೆ ಒಳಪಟ್ಟಿತ್ತು. ತನಿಖೆಯ ಸಂದರ್ಭದಲ್ಲಿ ಈ ಭ್ರಷ್ಟಾಚಾರದ ವಾರಸುದಾರ ಹಣ ಮಾತ್ರವಲ್ಲದೆ 'ಲೈಂಗಿಕವೃತ್ತಿ' ಮಹಿಳೆಯರನ್ನು ಬಳಸಿಕೊಂಡಿರುವ ವಿಚಾರ ಸ್ಫೋಟವಾಯ್ತು. ರಕ್ಷಣಾ ಇಲಾಖೆಯ (Class-D-terms) ಕೆಳಗಿನ ಅಧಿಕಾರಿಗಳಿಗೆ (Wine and Women) ಮದ್ಯ ಮತ್ತು ಲೈಂಗಿಕವೃತ್ತಿ ಮಹಿಳೆಯರನ್ನು ಒದಗಿಸಿ ಮೇಲಿನ ಅಧಿಕಾರಿಗಳನ್ನು ಸಂಪರ್ಕ ಮಾಡಿಕೊಡುವಂತೆ ವ್ಯವಸ್ಥೆ ಮಾಡಿದ್ದರು. ಇಲ್ಲಿಂದ ಆರಂಭವಾದಈ ನಾಟಕ ಹಲವಾರು ಮಜಲುಗಳೊಂದಿಗೆ ಅಂತ್ಯವಾಗಿತ್ತು. ಈ ನಾಟಕದ ಸೂತ್ರದಾರ 'ತೆಹಲ್ಕಾ' ತಂಡ ಮತ್ತು 'ರಕ್ಷಣಾ ಇಲಾಖೆ' ಹಾಗೂ ಚುಕ್ಕಾಣಿಯ ವಕ್ತಾರರು ತೇಲಿ, ಮುಳುಗಿ ಎದ್ದರು.

'TEHALKA' 'Pimps masquerading as Journalists' ಎನ್ನುವ ಬ್ಯಾನರ್‌ಗಳೊಂದಿಗೆ ದೇಶದಾದ್ಯಂತ ಪ್ರತಿಭಟನೆ ನಡೆಸಲಾಯಿತು.

ಬೋಫೋರ್ಸ್ ಫಿರಂಗಿ ಅವ್ಯವಹಾರದ ತನಿಖೆಯಿಂದ ಬುಸುಗುಟ್ಟುತ್ತಿದ್ದ ವಿರೋಧ ಪಕ್ಷಕ್ಕೆ ತಾರುಣ್ಯ ಬಂದಿತ್ತು.

ಇಂತಹ ಒಂದು ಅತ್ಯಂತ ಮಹತ್ವದ ಪತ್ರಿಕಾಕಾರ್ಯ ನಡೆಸಿದ 'ತೆಹಲ್ಕಾ' ಕೂಡ ಕಟಕಟೆಯಲ್ಲಿ ನಿಲ್ಲಬೇಕಾಯಿತು. ಈ ಘಟನೆಯ ಸುತ್ತ ಕೆಲ ನೈತಿಕ ಪ್ರಶ್ನೆಗಳು ತಲೆ ಎತ್ತಿದವು! ಭ್ರಷ್ಟಾಚಾರವನ್ನು ಬಹಿರಂಗ ಪಡಿಸಲು ಅನೀತಿಯುತ ಮತ್ತು ಕಾನೂನುಬಾಹಿರ ವಿಧಾನಗಳನ್ನು ತೆಹಲ್ಕಾ ಅನುಸರಿಸಿದೆ ಎಂದು ತನಿಖೆ

ನಡೆಸಲು ವಿಚಾರಣಾ ಆಯೋಗವನ್ನು ನೇಮಿಸಲಾಯಿತು. ಈ ತನಿಖೆಯಲ್ಲಿ ಬಹಳ ಮುಖ್ಯವಾಗಿ - ಲೈಂಗಿಕವೃತ್ತಿ ಮಹಿಳೆಯರನ್ನು ಪತ್ತೇ ಕಾರ್ಯದಲ್ಲಿ ಉಪಯೋಗಿಸಿದ್ದು ನೈತಿಕವೋ ಅಲ್ಲವೋ? 'ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಈ ತಂತ್ರ ಉಪಯೋಗಿಸಲಾಗಿತ್ತು' ಎನ್ನುವ ಪ್ರಶ್ನೆಯನ್ನು ಮುಂದಿಡಲಾಯಿತು.

'ಮೂವರು ಅಧಿಕಾರಿಗಳಿಗೆ ವ್ಯವಹಾರ ಕುದುರಿಸಲು ಲೈಂಗಿಕವೃತ್ತಿ ಮಹಿಳೆಯರನ್ನು ಸರಬರಾಜು ಮಾಡಿ ಅದನ್ನು ಗುಪ್ತವಾಗಿ ಚಿತ್ರೀಕರಿಸಿ ಆ ಮೂಲಕ ಬ್ಲಾಕ್‌ಮೇಲ್ ಮಾಡಿ ಹಿರಿಯ ಅಧಿಕಾರಿಗಳ ಸಂಪರ್ಕ ಕುದುರಿಸಿಕೊಡಲು 'ತೆಹಲ್ಕಾ'ತಂಡ ತಮ್ಮ ಪತಿಯರನ್ನು ಒತ್ತಾಯಿಸುತ್ತಿತ್ತು', ಎಂದು ಆ ಅಧಿಕಾರಿಗಳ ಪತ್ನಿಯರು ವಿಚಾರಣಾ ಆಯೋಗದ ಎದುರು ಸುರುಳಿ ಬಿಚ್ಚದಿದ್ದರೆ 'ತೆಹಲ್ಕಾ' ಈ ದಿನ ಅತ್ಯಂತ ಮಾನ್ಯತೆ ಪಡೆದಿರುತ್ತಿತ್ತು.

ಇಲ್ಲಿ ಚರ್ಚೆಗೆ-ಮಂಥನಕ್ಕೆ ಒಳಗಾದದ್ದು

ಅಧಿಕಾರಿಗಳು ಆಮಿಷಕ್ಕೆ ಒಳಗಾದುದು ನೈತಿಕವೇ? ಎನ್ನುವ ಪ್ರಶ್ನೆಗಿಂತ ಅವರನ್ನು 'ತೆಹಲ್ಕಾ' ತನಿಖೆಗೆ ಬಳಸಿದ್ದು ಅನೈತಿಕ ಎನ್ನುವ ಅಭಿಪ್ರಾಯ ಮೂಡಿಸಲಾಯಿತು.

ಲೈಂಗಿಕವೃತ್ತಿ ಮಹಿಳೆಯರು ಅನೀತಿವಂತರು ಎಂಬ ಪೂರ್ವಾಗ್ರಹದಿಂದ ಅವರನ್ನು ಬಳಸಿದ್ದೂ ಅನೀತಿಯುತವಾದ್ದು ಎಂದು ತಿರುಚುವ ಮೂಲಕ ಇಡೀ ಘಟನೆಗೆ ಇದ್ದ ಗಂಭೀರತೆಯನ್ನು ವಿಮುಖಗೊಳಿಸಿ ದೇಶದ ಜನತೆಯನ್ನು ತಟಸ್ಥಗೊಳಿಸುವಲ್ಲಿ ಆಳುವ ಸರ್ಕಾರ ಯಶಸ್ವಿಯಾಯಿತು.

ದೇಶದ ರಾಜಧಾನಿಯಲ್ಲಿ ಲೈಂಗಿಕವೃತ್ತಿ ಸಮುದಾಯ, ಅನಗತ್ಯವಾಗಿ ತಮ್ಮ ಪ್ರಶ್ನೆಯನ್ನು ಮುಂದಿಟ್ಟು ನೈತಿಕ/ಅನೈತಿಕತೆಯ ಧೋರಣೆಯಿಂದ ಘಟನೆಯನ್ನು ದಿಕ್ಕು ತಪ್ಪಿಸುತ್ತಿದ್ದುದರ ವಿರುದ್ಧ ಬೀದಿಗಿಳಿದು ಪ್ರತಿಭಟಿಸಿದರು.

'ತೆಹಲ್ಕಾ' ಬೆಳಕಿಗೆ ತಂದ ಒಂದು ಘಟನೆ ರಾಜಕಾರಣದ ಇನ್ನೊಂದು ಮುಖದ ಪಾತಕ ಲೋಕದಲ್ಲಿ ಬೆಳಕಿಗೆ ಬಾರದ ಅದೆಷ್ಟು ಇಂತಹ ಘಟನೆಗಳು ಹೀಗೆಯೇ ನಡೆಯುತ್ತಿವೆಯೋ? ಇಡೀ ದೇಶದ ರಕ್ಷಣೆಯಂತಹ ಗಂಭೀರವಾದ ಹೊಣೆ ಹೊತ್ತಿರುವ ರಕ್ಷಣಾ ಇಲಾಖೆಯಲ್ಲಿಯೇ ಇಷ್ಟೊಂದು ಬೇಜವಾಬ್ದಾರಿ ಯಿಂದ, ಅಪ್ರಮಾಣಿಕತೆಯಿಂದ ಚೆಲ್ಲಾಟವಾಡುವ ವಾಡಿಕೆಗಳು ಇರುವುದಾದರೆ ಇನ್ನುಳಿದ ಇಲಾಖೆಗಳ ಒಳಸುಳಿಗಳಾದರೂ ಹೇಗಿರಬಹುದು?

ಇಲ್ಲಿ ಚರ್ಚೆಯಾಗಿದ್ದು ಭ್ರಷ್ಟಾಚಾರ ಬಯಲಿಗೆಳೆಯಲು ಅನುಸರಿಸಿದ ಮಾರ್ಗ ಅನೈತಿಕವಾದು ದು-ಎಂಬುದಾದರೆ ಬೇರೆಯಾವುದಾದರೂ ಮಾರ್ಗಗಳನ್ನು ಬಳಸಬಹುದಿತ್ತಾ? ಅಥವಾ ಬೇರೆ ಯಾವುದೇ ಮಾರ್ಗವಾಗಿದ್ದರೆ ಇಷ್ಟೊಂದು ಚರ್ಚೆಗೆ ಒಳಗಾಗುತ್ತಿತ್ತಾ? ಇಲ್ಲಿ ಭ್ರಷ್ಟಾಚಾರಕ್ಕೆ ಒಳಗಾದ ದೇಶದ ಕವಚದಂತಿರುವ ರಕ್ಷಣಾ ಇಲಾಖೆಯ ಕ್ಷುಲ್ಲಕತನ ಅನೈತಿಕವೋ ಅಥವಾ ಅಲ್ಲಿ ಲೈಂಗಿಕವೃತ್ತಿ ಮಹಿಳೆಯರು

ಒಳಕೆಯಾದ್ದುದು ಅನೈತಿಕವೋ? ಈ ವಿಚಾರದಲ್ಲಿ ನೈತಿಕ/ಅನೈತಿಕ ಚರ್ಚೆ ಬಂದದ್ದೇ ಲೈಂಗಿಕ ವೃತ್ತಿ ಮಹಿಳೆಯರು ಒಳಗೊಂಡಿದ್ದರಿಂದ. ನೀತಿ ಪಾಲಕರು ಈ ಮನೋಭಾವದೊಂದಿಗೆ-ನೈತಿಕ ಚರ್ಚೆಯೊಳಗಡೆ ಆವೃತ್ತಿಯನ್ನು ಹೀಗೆಳೆಯುವ ಕೆಲಸವನ್ನೇ ಪ್ರಧಾನವಾಗಿಸಿಕೊಂಡು ದೇಶವೇ ತಲೆ ತಗ್ಗಿಸಬೇಕಾದಂತಹ ಘಟನೆಯನ್ನು ಅದನ್ನು ಗಂಭೀರವಾಗಿ ಪರಿಗಣಿಸಿಬೇಕಾಗಿದ್ದ ಜನತೆಯ ಗಮನವನ್ನು ಬೇರೆಡೆಗೆ ತಿರುಗಿಸುವ ಹುನ್ನಾರ ಮಾಡಿದ್ದಾರೆ.

ಈ ಪರಂಪರೆಯ ಸೃಷ್ಟಿಯ ಮೂಲಕ್ಕೆ ಹೋದಂತೆಲ್ಲಾ ಆಧುನಿಕ ಕಾಲಘಟ್ಟದ ಈ ಘಟನೆಯ ಪೌರಾಣಿಕ ಸ್ವರೂಪ-ಚಾರಿತ್ರಿಕವಾದ ಸ್ವರೂಪವನ್ನು ಹಿಂತಿರುಗಿ ನೋಡಬಹುದಾಗಿದೆ.

ಪೌರಾಣಿಕವಾಗಿ-ಶತೃಗಳನ್ನು (ರಕ್ಕಸರನ್ನು) ಸೋಲಿಸಲು ಮತ್ತು ಅವರನ್ನು ಮೋಸಗೊಳಿಸಲು ರಂಭೆ, ಊರ್ವಶಿ, ಮೇನಕೆ ಮೊದಲಾದವರನ್ನೂ ಬಳಸುತ್ತಿದ್ದುದರ ಬಗ್ಗೆ ಬಹಳಷ್ಟು ಉಲ್ಲೇಖಗಳಲ್ಲಿದೆ. ಹಾಗೆಯೇ ದೇವೇಂದ್ರನಿಂದ ಕೆಲಸ ಮಾಡಿಸಿಕೊಳ್ಳಲೂ ಕೂಡ ಈ ಮಾನಿನಿಯರ ಸ್ನೇಹ ಬೆಳೆಸುತ್ತಿದ್ದುದನ್ನು ಪುರಾಣಕತೆಗಳು ಹೇಳುತ್ತವೆ.

ಚಾರಿತ್ರಿಕವಾಗಿ ರಾಜರುಗಳು ವಿಷಕನ್ಯೆಯರನ್ನು ಬಳಸುತ್ತಿದ್ದುದು, ಶತೃರಾಜರುಗಳನ್ನು ಕೊಲ್ಲಲು ಇವರನ್ನು ದಾಳಗಳಾಗಿ ಬಳಸಿ ಕಾರ್ಯ ಸಾಧಿಸುತ್ತಿದ್ದುದು ಇಲ್ಲಿ ಗಮನಾರ್ಹ.

ಯಾವುದೇ ಕೆಲಸವು ಪರಪುರುಷನಿಂದ ಆಗಬೇಕೆಂದಿದ್ದಾಗ ರಾಜನು ವೇಶ್ಯೆಯನ್ನು ರಾಜಕೀಯ ಸೂತ್ರವಾಗಿ ಬಳಸಿಕೊಳ್ಳುವ ಕ್ರಮವಿತ್ತೆಂಬ ಸೂಚನೆಯು ತೊರವೆ ರಾಮಾಯಣದಲ್ಲಿ ಬರುತ್ತದೆ.[೧]

''ವೇಶ್ಯಾವಾಟಿಕೆಗೂ ರಾಜಕೀಯಕ್ಕೂ ನಿಕಟ ಸಂಬಂಧವಿದೆ''[೨] ಎನ್ನುತ್ತಾರೆ ಡಿ.ಡಿ. ಕೊಸಾಂಬಿಯವರು. ರಾಜಕೀಯ ವ್ಯವಸ್ಥೆಗೂ ವೇಶ್ಯಾಪದ್ಧತಿಗೂ ಸಂಬಂಧವಿದೆ. ದೇಹ ವಿಕ್ರಯದ ಮೂಲಕ ಕೆಳವರ್ಗದ ಸ್ತ್ರೀಯರು ಸಂಪಾದನೆಯನ್ನು ಮಾಡುವುದರಿಂದ ಇಲ್ಲಿ ಲೈಂಗಿಕವಾದ ತೃಪ್ತಿಯು ಈ ಸ್ತ್ರೀಯರ ದೃಷ್ಟಿಯಿಂದ ಮುಖ್ಯವಾಗಿರುವುದಿಲ್ಲ. ಮಹಾನಿರ್ವಾಣ ತಂತ್ರದಲ್ಲಿ ರಾಜ್ಯ ವೇಶ್ಯಾ(ಆಸ್ಥಾನದ ಸೂಳೆ) ನಾಗರಿ (ಪ್ರಜೆಗಳೊಂದಿಗಿರುವ ಸೂಳೆ) ಗುಪ್ತವೇಶ್ಯಾ (ಗುಪ್ತವಾಗಿರುವ ವೇಶ್ಯೆ) ದೇವವೇಶ್ಯಾ(ದೇವಸ್ಥಾನದ ನರ್ತಕಿ) ಬ್ರಹ್ಮವೇಶ್ಯಾ(ಪವಿತ್ರ ಕ್ಷೇತ್ರಗಳಲ್ಲಿಯ ವೇಶ್ಯೆ) ಎನ್ನುವ ವಿಭಾಗ ಮಾಡಲಾಗಿದೆ.[೩]

ಪೌರಾಣಿಕ, ಪ್ರಾಚೀನ, ಇತಿಹಾದುದ್ದಕ್ಕೂ ಮನರಂಜನೆಗೆ, ಕಾಮತೃಷೆಗೆ, ಹಗುರಾಗಲು, ಕಾರ್ಯತಂತ್ರಗಳಿಗೆ, ಕಲೆಗೆ, ಬೋಗಕ್ಕೆ, ವೈಭವಕ್ಕೆ, ಪರಿಚಾರಿಕೆಗೆ, ಮಧ್ಯಸ್ಥಿಕೆಗೆ, ಒಡನಾಟಕ್ಕೆ, ಕಾರ್ಯಸಿದ್ಧಿಗೆ, ಸೇವೆಗೆ, ಆಲಾಪನೆಗೆ, ಹೊಗಳಿಕೆಗೆ, ಹಣಕ್ಕೆ, ಅಲಂಕಾರಕ್ಕೆ.....ಹೀಗೆ ಎಲ್ಲ ಕಾಲಘಟ್ಟಗಳಲ್ಲು ರಾಜಕಾರಣ ಮತ್ತು ಬದುಕಿನೊಂದಿಗೆ 'ಹೆಣ್ಣು' ಬೆಲೆವೆಣ್ಣಾಗಿ ನಡೆದು ಬರುತ್ತಲೇ ಇದ್ದಾಳೆ, ಒಂದನ್ನೊಂದು ಬಿಟ್ಟಿರಲಾರದಷ್ಟು!

ರಾಜಕಾರಣಿಯರು ರಾಜಕಾರಣದ ಮತ್ತು ರಾಜಪರಿವಾರದ ಭಾಗವಾಗಿದ್ದರು. ಸಾಮಾನ್ಯ ವೇಶ್ಯೆಯರಿಗಿಂತ ಇವರ ಅಂತಸ್ತು ಹೆಚ್ಚಿನದಾಗಿತ್ತು. ಕಲೆವಿದ್ಯೆಗಳಲ್ಲಿ ವಿಶೇಷ ಪರಿಣತಿ ಇವರಿಗಿತ್ತು.

ಪಟ್ಟಾಭಿಷೇಕ, ವಿವಾಹ, ಪುತ್ರೋತ್ಸವ, ವಿಜಯೋತ್ಸವದಂತಹ ಶುಭಪ್ರಸಂಗಗಳಲ್ಲಿ, ವನಕೇಳಿ, ಜಲಕೇಳಿ, ಗರ್ಭಿಣಿರಾಣಿ ಉಪಚಾರದಂತಹ ವಿನೋದ ಪ್ರಸಂಗಗಳಲ್ಲಿಯೂ ಇವರಿಲ್ಲದೆ ಇಲ್ಲ.

ಯುದ್ಧ ಪ್ರಸಂಗಗಳಲ್ಲಿಯಂತೂ ಆಯುಧ-ಆಹಾರ ಸಾಮಗ್ರಿಯಷ್ಟೇ ಮುಖ್ಯವಾಗಿ ವೇಶ್ಯೆಯರು ಹೋಗುತ್ತಿದ್ದರು. ಚೈತ್ರಯಾತ್ರೆಗೆ ಹೊರಟ ಭರತನ ಸೈನ್ಯದಲ್ಲಿ ವೇಶ್ಯಸ್ತ್ರೀಯರು ಇದ್ದ ಉಲ್ಲೇಖ ಪಂಪನ (ಆದಿ ಪುರಾಣ-11-17)ಲ್ಲಿದೆ. ಹಾಗೂ ಭರತನು ಆ ಶಿಬಿರದಲ್ಲಿ ಇವರೊಡನೆ ಊಟಮಾಡಿದ ಚಿತ್ರಣವೂ ಇದೆ. 'ರಾಮನಾಥ ಚರಿತೆ'ಯಲ್ಲಿ ವೇಶ್ಯೆಯರನ್ನು ಯುದ್ಧ ಸಂದರ್ಭಗಳಲ್ಲಿ ಸೈನಿಕರ ಮನರಂಜನೆಯ ಉದ್ದೇಶಕ್ಕಾಗಿ ಬಳಸಿಕೊಂಡ ಬಗ್ಗೆ ವಿವರಗಳಿವೆ. ಉಡುಗೊರೆಯನ್ನಾಗಿ ಕೊಡುತ್ತಿದ್ದ ಆನೆ, ಕುದುರೆ, ಮುತ್ತಿನಹಾರ ವಸ್ತು ವಿಶೇಷಗಳೊಂದಿಗೆ ಗಣಿಕೆಯರೂ ಸೇರಿರುತ್ತಿದ್ದರು. ರಾಜ್ಯ ಹಂಚಿಕೆಯಾದ ಮೇಲೆ ಪಾಂಡವರು ಪರಿವಾರ ಸಹಿತ ಇಂದ ಪ್ರಸ್ಥಕ್ಕೆ ಹೋದಾಗ ಪರಿವಾರದವರಲ್ಲಿ ಗಣಿಕೆಯರೂ ಪ್ರಸ್ತಾಪಿತರಾಗಿದ್ದಾರೆ. (ಪಂಪ. ಭಾ, 4-9).

ರಾಜನಿಗಿರುವಂತೆಯೆ ರಾಣಿಯರಿಗೂ ಅವರು ಹೋಗಿ ಬರುವೆಡೆಗಳಲ್ಲೆಲ್ಲ ಉಳಿಗದ ಹೆಣ್ಣುಗಳಿಂದ ರಾಜಗೌರವ ಸಲ್ಲುತ್ತಿತ್ತು. (ಶ್ರೀಕಂಠಯ್ಯ. ಕೆ : ವಿಜನಯಗರ ಕಾಲದ ಕ.ಸಾಹಿತ್ಯದಲ್ಲಿ ಜನಜಿವನ ಚಿತ್ರ, ಪು. 77).

ರಾಜ್ಯಾಡಳಿತದಲ್ಲಿಯ ಅರ್ಥವ್ಯವಸ್ಥೆಯ ಭಾಗವಾಗಿ, ಆರ್ಥಿಕ ಚಟುವಟಿಕೆಯಾಗಿಯಷ್ಟೇ ಅಲ್ಲದೆ ರಾಜ್ಯಾಡಳಿದತ ಕೆಲವು ಜವಾಬ್ದಾರಿಗಳಲ್ಲೂ ವೇಶ್ಯಾವಾಟಿಕೆಯ ಪಾತ್ರವಿರುತ್ತಿತ್ತು ಎಂಬುದು ಕೌಟಿಲ್ಯನ ಅರ್ಥಶಾಸ್ತ್ರದಿಂದ ಹಾಗೂ ಐತಿಹಾಸಿಕವಾಗಿ ಕಂಡುಬರುತ್ತದೆ. ಗಣಿಕೆಯರನ್ನು ರಾಜ್ಯಾಡಳಿತವೇ ನೇಮಿಸಲ್ಪಟ್ಟು ಅವರಿಗೆ ಅನೇಕ ವಿದ್ಯೆಗಳನ್ನು ಕರಗತ ಮಾಡಿಸುತ್ತಿದ್ದರು. ಭಾಷೆ ಕಲಿಯುವುದು, ನಟನಾಭಂಗಿಗಳು, ಮನಸ್ಸು ಓದುವುದು, ಪ್ರೀತಿ-ಪ್ರಣಯ ಕೇಳಿಗಳನ್ನು ಕಲಿಸಿ ಅವರ ವೃತ್ತಿಗೆ ಬಳಸುವುದಕ್ಕಿಂತಲೂ ಹೆಚ್ಚಾಗಿ ಗೂಢಚರ್ಯೆಗೆ, ಶತೃಪಾಳಯದಲ್ಲಿ ತಪ್ಪು ಅಭಿಪ್ರಾಯಗಳನ್ನು ಮೂಡಿಸಲು, ಕ್ರೂರಿಗಳನ್ನು, ಬಂಡುಕೋರರನ್ನು, ಶತೃಗಳನ್ನು ಕೊಲ್ಲಲು ಬಳಕೆಯಾಗುತ್ತಿತ್ತು. ಈ ಕಲಿಕೆಯ ಎಲ್ಲಾ ಖರ್ಚನ್ನು ರಾಜ್ಯ ಸರ್ಕಾರವೇ ವಹಿಸಿಕೊಳ್ಳುತ್ತಿತ್ತು.

ಆ ರಾಜ್ಯ ಆಡಳಿತದೊಂದಿಗೆ ಅವಳಿಗೆ ಕೆಲವು ಬಾಧ್ಯತೆಗಳೂ ಇದ್ದವು. ತನ್ನ ಆದಾಯದ ಲೆಕ್ಕ, ತನ್ನಲಿಗೆ ಬರುವ ವಿಟರ ಬಗ್ಗೆ ವಿವರಣೆಯನ್ನು ಅವಳು ಕೊಡಬೇಕಿತ್ತು. 'ಗಣಿಕಾಧ್ಯಕ್ಷ' ಎಲ್ಲವನ್ನು ನಿಯಂತ್ರಣದಲ್ಲಿಡುತ್ತಿದ್ದ.

ಈ ಎಲ್ಲಾ ಅಂಶಗಳಿಂದಲೂ ಪೌರಾಣಿಕವಾಗಿ, ಐತಿಹಾಸಿಕವಾಗಿ, ಇಂದಿನ ಆಧುನಿಕ ಕಾಲಘಟ್ಟದಲ್ಲಿಯೂ ಕೂಡ ಈ ಸಮುದಾಯದ ಪ್ರತಿಭೆ, ಕೌಶಲ್ಯಗಳನ್ನು ಅಪರಾಧೀ ಚಟುವಟಿಕೆಗಳಿಗೆ ಬಳಸುತ್ತಿದ್ದುದು ಗಮನಾರ್ಹ. ಅವಳಿಷ್ಟೇ ರೂಪಸಿಯಿರಲಿ, ವಿಶ್ವಾಸದಿಂದಿರಲಿ, ಪ್ರೀತಿ ಪಾತ್ರಳಿರಲಿ ಅವಳು ಬಳಕೆಯಾಗುತ್ತಿದ್ದುದು ಮಾತ್ರ ಪುರುಷನನ್ನು ಸಂತೃಪ್ತಿಯಗೊಳಿಸಲು, ಅವನಿಗೆ ಮನರಂಜನೆ ನೀಡಲು, ಪರಿಚಾರಿಕೆ ಮಾಡಲು,

ಅವನ ಹೊಂಚುಗಳಿಗೆ ಸಂಚಾಗಲು ಇವೇ ಅಂದಿನಿಂದಲೂ ಅವಳ ಪಾತ್ರವನ್ನು ನಡೆಸಿಕೊಂಡು ಬರುತ್ತಿರುವುದು.

ಇಂದಿಗೂ ಕೂಡ ಅನೇಕ ಭೂಗತ ಲೋಕದ ಕಾರ್ಯಾಚರಣೆಯಲ್ಲಿ ಇವಳು ಪಾಲುದಾರಳಾಗುತ್ತಾಳೆ. ರಾಜಕೀಯ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಇವಳು ಬಳಕೆಯಾಗುತ್ತಲೇ ಇದ್ದಾಳೆ.ಹಾಗೆಯೇ ಸೇವಾಕಾರ್ಯಗಳಿಗೆ, ಮನರಂಜನೆಗೆ, ಅಲಂಕರಿಸಲು, ಉಡುಗೊರೆಯ ಒಂದು ಭಾಗವಾಗಿ ಪರಿಚಾರಿಕೆಯಾಗಿ ತೊಡಗಿಸಿ ಕೊಂಡಿರುತ್ತಿದ್ದರು.

ದೇವಾನುದೇವತೆಗಳಿಗೂ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆಯರನ್ನು ಸೃಷ್ಟಿಸಿ ಅವರ ಮೂಲಕ ಕಾರ್ಯಸಿದ್ಧಿಗಳನ್ನು ಗೆಲ್ಲುವ ಕಲ್ಪನೆ ಮಾಡಿದ ಮಾನವನ ಬದುಕಿನುದ್ದಕ್ಕೂ ಆಯಾ ಕಾಲಘಟ್ಟಗಳಿಗೆ ಹೊಂದಿಕೊಂಡಂತೆ ವೇಶ್ಯಾವಾಟಿಕೆ ನಡೆದು ಬರುತ್ತಲೇ ಇದೆ. ಆದರಲ್ಲೂ ರಾಜಕೀಯದೊಂದಿಗೆ ಅವ್ಯಾಹತವಾಗಿ, ನವಿರಾಗಿ, ಪರೋಕ್ಷವಾಗಿ, ಅಪ್ರತ್ಯಕ್ಷವಾಗಿ ಬೆಸೆದುಕೊಂಡಿದೆ.

'ಮಾನಿನಿ-ಮದಿರೆ ನನ್ನ ಜೀವನದ ಭಾಗ' ಎಂದ ಈ ರಾಜ್ಯದ ಚುಕ್ಕಾಣಿ ಹಿಡಿದಿದ್ದವರೊಬ್ಬರು ಉಳಿದಾಗ ಅದೆಷ್ಟೋ ಮಂದಿ ಹುಬ್ಬೆರಿಸಿದ್ದರು. ಆದರೆ ಸುಮಾರು ಹತ್ತು ವರ್ಷಗಳ ನನ್ನ ಅಧ್ಯಯನದ ಸಂದರ್ಭದಲ್ಲಿ ನಾನು ಕಂಡಿದ್ದು ಅವರ ಹೇಳಿಕೆಗಿಂತ ಭಿನ್ನವಾಗಿಯೇನೂ ಇಲ್ಲ. ವಿಧಾನಸಭೆಗಳು ನಡೆಯುವಾಗ ಬೆಂಗಳೂರಿನ ಆದೆಷ್ಟು ವೇಶ್ಯಾಗೃಹಗಳು ಗಿಜಿಗುಡುತ್ತವೆ, ಆದೆಷ್ಟು ಹೆಣ್ಣುಗಳು ಮೊದಲೇ ಕಾಯ್ದಿರಿಸಿರುತ್ತಾರೆ, ಆದೆಷ್ಟು ಪಿಂಪ್, ಬ್ರೋಕರ್‌ಗಳು ಬಿರಬಿರನೆ ನಡಿಗೆಯನ್ನು ತೀವ್ರಗೊಳಿಸಿರುತ್ತಾರೆ ಎನ್ನುವುದು. ಮಂತ್ರಿ ಮಹೋದಯರು, ಶಾಸಕರುಗಳು, ಅವರ ಚೇಲಾಗಳು, ಹುಡಿ, ಪುಡಿ ರಾಜಕಾರಣಿಗಳು..ಹೀಗೆ ಆದೆಷ್ಟು ಗರಿಗರಿಯಾದ ಖಾದಿಗಳಿಗೆ, ಕಾಟನ್‌ಗಳಿಗೆ ಈ ಬೆಲೆವೆಣ್ಣುಗಳು ಬೆವರಿಳಿಸಬೇಕಾಗುತ್ತದೆ ಎನ್ನುವ ಅಂದಾಜು ಲೆಕ್ಕಾಚಾರ ಹಿಂದಿನ ರಾಜ, ಮಹಾರಾಜರುಗಳ ನಡವಳಿಕೆಗಳನ್ನು ಮತ್ತೆ ನೆನಪಿಗೆ ತರುತ್ತವೆ.

ಇಡೀ ರಾಜ್ಯದಲ್ಲಿ ಅಧಿಕಾರ, ಅಂತಸ್ತುಗಳಿಂದ ಆಸ್ತಿಪಾಸ್ತಿ ಸಂಪಾದನೆ, ವ್ಯವಹಾರ, ವಹಿವಾಟುಗಳಂತೆಯೇ ವೇಶ್ಯಾಗೃಹಗಳು ಆದರಲ್ಲೂ ಹೈಟೆಕ್ ವೇಶ್ಯಾಗೃಹಗಳಿಂದ ದಂಧೆ ನಡೆಸುತ್ತಿರುವ ಗಣ್ಯಾತಿಗಣ್ಯರುಗಳು ನಮ್ಮೊಂದಿಗಿದ್ದಾರೆ.

ಮಾಡೆಲಿಂಗ್ ಹೆಸರಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಜಾಲವೊಂದು ದೆಹಲಿ ಐಷಾರಾಮಿ ಹೋಟೆಲ್ ಮೌರ್ಯಶೆರೆಟಾನ್‌ನ ಲ್ಲಿ ಸಿಕ್ಕಿಬಿದ್ದಿದೆ.

ಈ ಜಾಲ ಬೆಂಗಳೂರಿನಿಂದ ಹುಡುಗಿಯರನ್ನು ಸರಬರಾಜು ಮಾಡುತ್ತಿತ್ತು. ಇದರ ನಾಯಕಿ ಅಧಿಕಾರಸ್ಥ ರಾಜಕಾರಣಿಗಳನ್ನು ತನ್ನ ದಂಧೆಯ ರಕ್ಷಾಕವಚವಾಗಿ ಬಳಸಿಕೊಳ್ಳುತ್ತಿದ್ದಳು. ಅಧಿಕಾರದಲ್ಲಿರುವ ಪಕ್ಷದ ನಾಯಕಿಯೆಂದೇ ಪೋಜು ಕೊಡುತ್ತಿದ್ದ ಈಕೆ ಮುಖ್ಯಮಂತ್ರಿಗಳಿಗೂ ಪರ್ಸನಲ್ ಫೋನ್ ಮಾಡಬಲ್ಲಳು, ಅವರ ಆಪ್ತ ಸ್ನೇಹಿತರುಗಳು, ಮಂತ್ರಿ ಮಹೋದಯರು ಎಲ್ಲರೂ ಆಪ್ತರಾಗಿದ್ದರು.

ಈ ಜಾಲ ಸಿಕ್ಕಿಬಿದ್ದಿರುವುದು ಒಂದು ನಾಟಕೀಯ ಪ್ರಸಂಗದಂತೆ. ದೆಹಲಿಯ ಜಾಲದ ನಾಯಕ ಬೆಂಗಳೂರಿನಲ್ಲಿಯ ಈಕೆಯನ್ನೇ ಅವಲಂಬಿಸಿದ್ದ. ಅವನ ಪ್ರತಿಸ್ಪರ್ಧಿ ಇನ್ನೊಬ್ಬ ತಲೆಹಿಡುಕ ಇವರ ವಹಿವಾಟಿನ ಬಗ್ಗೆ ಕತ್ತಿಮಸೆಯುತ್ತಲೇ ಇದ್ದ. ಪೊಲೀಸರಿಗೆ ಬಿಸಿ ಮುಟ್ಟಿಸಿ ಖುದ್ದು ದಂಧೆಯಲ್ಲಿ ತೊಡಗಿದ್ದವರನ್ನು ಬಂಧಿಸಲು ಕಾರಣನಾಗಿದ್ದ. ಗಮನಾರ್ಹ ಅಂಶವೆಂದರೆ ಅಂದು ಬಂಧಿಸಿದ್ದ ಆ ಹುಡುಗಿಯರಿಗೆ ವಿರೋಧಿ ನಾಯಕನೇ ಜಾಮೀನು ಕೊಟ್ಟಿರುವುದು!

ಸರ್ಕಾರಿ ದೊರಗಳೇ ನನ್ನ ರಕ್ಷಣೆಗಿರುವಾಗ ಯಾರು ತಾನೇ ಏನು ಮಾಡಲು ಸಾಧ್ಯ ಎನ್ನುತ್ತಾಳೆ ಬೆಂಗಳೂರಿನ ನಾಯಕಿ.[೪]

ಇದಕ್ಕೆ ಪೂರಕವಾಗಿಯೇ ಇನ್ನೊಂದು ಜಾಲ ಬೆಳಕಿಗೆ ಬಂದಿದೆ.

ಕಾನ್ಪುರದಲ್ಲಿ ಬೆಂಗಳೂರಿನ ಯುವತಿಯನ್ನೂ ಸೇರಿದಂತೆ ನವಂಬರ್ ೨೯.೨೦೦೩ರಂದು ೨೨ ಮಂದಿಯನ್ನು ಬಂಧಿಸಿದ್ದಾರೆ. ಈ ಜಾಲದ ಹಿಂದೆ ಅನೇಕ ಉನ್ನತ ಪೊಲೀಸ್ ಅಧಿಕಾರಿಗಳು, ಮತ್ತು ರಾಜಕೀಯಪುಡಾರಿಗಳು ಇದ್ದಾರೆ ಹಾಗೂ ಬಂಧಿತ ೧೦ ಯುವತಿಯರು ಉನ್ನತ ಪೊಲೀಸ್ ಅಧಿಕಾರಿಗಳ ಸಮೀಪ ಸಂಬಂಧಿಗಳೆಂದು ತಿಳಿದು ಬಂದಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಸೂಪರಿಟೆಂಡೆಂಟ್ ಮತ್ತುನ್ಯಾಯವಾದಿಯಾಗಿರುವ ಆತನ ಸಹೋದರ ಈ ಜಾಲ ನಡೆಸುತ್ತಿದ್ದರು ಎಂಬುದು ತನಿಖೆಯಿಂದ ತಿಳಿದು ಬಂದಿದೆ.[೫]

ಇವು ಜೆಸ್ಟ್ ಉದಾರಣೆಗಳು ಅಷ್ಟೆ. ಇದರಿಂದ ರಾಜಕೀಯ, ಪೊಲೀಸ್, ಭೂಗತ ಲೋಕದೊಂದಿಗೆ, ಅಪರಾಧಿ ಜಗತ್ತಿನೊಂದಿಗಿನ ಜಾಲಗಳು ಈ ದಂಧೆಗಳನ್ನು ನಡೆಸುತ್ತಿವೆ ಎಂಬುದರ ಚಿತ್ರಣ ಸ್ಪಷ್ಟವಾಗುತ್ತದೆ. ಅದೆಷ್ಟು ಪಂಚತಾರಾ ಹೋಟೆಲ್‌ಗಳು, ರೆಸಾರ್ಟ್‌ಗಳು, ಹೊರ ವಲಯದ ವೇಶ್ಯಾಗೃಹಗಳು, ತೋಟದ ಉದ್ದನೆಯ ಕಾಂಪೌಂಡ್‌ನ ಅತಿ ಗಣ್ಯರ ವಿಲಾಸೀಗೃಹಗಳಲ್ಲಿ ನಿರಂತರವಾಗಿ ಈ ದಂಧೆ ನಡೆಯುತ್ತಲೇ ಇದೆ. ಪಾತಕಲೋಕದ ಹುನ್ನಾರಗಳು ನಡೆಯುತ್ತವೆ. ಇಲ್ಲಿ ಅಮಾಯಕ ಹೆಣ್ಣುಗಳ ಸಾಮೂಹಿಕ ಅತ್ಯಾಚಾರಗಳು ನಡೆಯುತ್ತವೆ. ಪ್ರತಿಯಾಗಿ ತಲೆ ಹಿಡುಕರುಗಳು ಕೋಟ್ಯಾಧೀಶರುಗಳಾಗುತ್ತಿದ್ದಾರೆ, ರಾಜಕೀಯ ದುರುದ್ದೇಶಗಳು ಕೈಗೂಡುತ್ತವೆ. ಭ್ರಷ್ಟಾಚಾರಗಳು ಇಲ್ಲಿ ಗೂಡು ಕಟ್ಟಿಕೊಳ್ಳುತ್ತವೆ. ಪಕ್ಷಾಂತರಗಳಾಗುತ್ತ ಖಾವಿ, ಖಾದಿ, ಖಾಕಿ ತೊಟ್ಟ ಅದೆಷ್ಟೋ ಜೀವಗಳು ಇಲ್ಲಿ ಬೆತ್ತಲಾಗುತ್ತವೆ.

ಅಂದರೆ ಈ ದಂಧೆ ಅದಿನ್ನೆಷ್ಟು ಪ್ರಭಾವಯುತವಾದದ್ದು. ಬಹಳ ಸುಲಭವಾಗಿ ಶ್ರೀಮಂತರಾಗಿ ಬಿಡುವ ದೊಡ್ಡ ಜಾಲವೇ ಇದರ ಸುತ್ತ ಗಿರಕಿ ಹೊಡೆಯುತ್ತಿರುತ್ತವೆ. ಕಚ್ಚೆ ಹರುಕರುಗಳೆಲ್ಲಾ ಜೊಲ್ಲು ಸುರಿಸುತ್ತಾ ತಾವ್ಯಾರು? ತಮ್ಮ ಹೊಣೆ ಏನು? ತಾವೇನು ಮಾಡುತ್ತಿದ್ದೇವೆ ಎನ್ನುವುದರ ಅರಿವೂ ಇಲ್ಲದೆ ಪಾತಕಿಗಳಂತೆ ರಾಜಕಾರಣಿಗಳೂ, ಗಣ್ಯರೂ, ಅಧಿಕಾರಿಗಳೂ, ಮಠಾಧೀಶರುಗಳು ಪಾಲ್ಗೊಳ್ಳುತ್ತಾರೆ ಎಂದರೆ ಅದೆಷ್ಟು ಸೆಳೆತವಿರಬೇಕು ಇಲ್ಲಿ.

ಈ ಕಾನೂನುಗಳೆಲ್ಲಾ ಸೀಟಾ-ಪೀಟಾ-ಈಟಾ ಯಾರಿಗಾಗಿ? ಇವೆಲ್ಲ ನಾಟಕಗಳೇ? ಅಮಾಯಕರಾಗಿ, ವಂಚಿತರಾಗಿ, ಅನಿವಾರ್ಯವಾಗಿ ಬಂದು ಬಿದ್ದಿರುವ ಆ ಬೀದಿ ಬದಿಯ, ಹೊಟ್ಟೆ ಪಾಡಿಗಾಗಿ ಹೆಣಗಾಡುವ ಆ ಹೆಂಗಳೆಯರಿಗಾ ಈ ಕಾನೂನುಗಳೆಲ್ಲಾ? ಇಷ್ಟೊಂದು ವ್ಯಾಪಕವಾಗಿ ವ್ಯಾಪಿಸಿಕೊಂಡಿರುವ ಈ ಜಾಲಗಳು ಈ ಕಾನೂನುಗಳಿಂದ ಹೇಗೆ ಶಿಕ್ಷೆಗೊಳಗಾಗಲು ಸಾಧ್ಯ? ನ್ಯಾಯಾನೀಡುವ ನ್ಯಾಯಾಧೀಶರುಗಳೇ ದಂಧೆ ನಡೆಸಿದರೆ,ಮತ್ತು ರಕ್ಷಣೆ ನೀಡಿದರೆ ಪೊಲೀಸ್ ಅಧಿಕಾರಿಗಳೇ ತಲೆಹಿಡುಕರಾದರೆ, ಗಣ್ಯಾತಿ ಗಣ್ಯರೇ ವೇಶ್ಯಾಗೃಹಗಳನ್ನು ನಡೆಸಿದರೆ ಈ ಸಮಸ್ಯೆ ಬಗೆಹರಿಯುವುದಾದರೂ ಹೇಗೆ? ಎಲ್ಲಿ?

ಬಹುಶಃ ಬಂದ ಎಲ್ಲ ಕಾನೂನುಗಳೂ ಪ್ರಯೋಜನಕ್ಕೆ ಬಾರದೆ ಸಮಸ್ಯೆಗಳು ದಿನದಿಂದ ದಿನಕ್ಕೆ ಉಲ್ಬಣವಾಗಲು ಇದೂ ಒಂದು ಬಹಳ ಮುಖ್ಯವಾದ ಕಾರಣವಾಗಿದೆ ಎಂದು ನನಗನ್ನಿಸುತ್ತದೆ.

ಗುಪ್ತರೋಗಗಳಿಂದ, ಏಡ್ಸ್‌ನಂತಹ ಮಾರಣಾಂತಿಕ ಆರ್ಜಿತ ರೋಗಗಳಿಗೆ ತುತ್ತಾಗಿ ಅಕಾಲಿಕ ಮರಣವನ್ನಪ್ಪಿದ ಅದೆಷ್ಟು ರಾಜಕೀಯ ನಾಯರುಗಳು ಕರ್ನಾಟಕದ ಇತಿಹಾಸವಾಗಿದ್ದಾರೆ ಎನ್ನುವುದು ರಾಜಕಾರಣ ಮತ್ತು ವೇಶ್ಯಾವಾಟಿಕೆ ಅಧ್ಯಾಯಕ್ಕೆ ಚರಮಗೀತೆಯಿದ್ದಂತೆ.

ಬ್ರಿಟೀಷರಿಗೆ ದೇಶೀಯರು ಇಲ್ಲಿಯ ಹೆಣ್ಣುಗಳನ್ನು ತಲೆಹಿಡಿಯುತ್ತಿದ್ದುದು ಮನಸ್ಸಿಗೆ ಕಸಿವಿಸಿ-ಕ್ರೋಧಗಳನ್ನುಂಟು ಮಾಡಿದ್ರೆ, ಇಲ್ಲಿಯ ಸಾವಿರಾರು ವೇಶ್ಯಾಗೃಹಗಳ ಮಾಲೀಕರು, ಬ್ರೋಕರ್‌ಗಳು ಇಂದಿನ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ, ಶ್ರೀಮಂತರಿಗೆ, ವ್ಯಾಪಾರಸ್ಥರಿಗೆ ಸುಂದರ ಹೆಣ್ಣುಗಳನ್ನು ತಲೆಹಿಡೀತಾರೆ. ಇಂತಹ ವೇಶ್ಯಾಗೃಹಗಳು ಇಲ್ಲಿಯೇ ನಗರದಲ್ಲಿಯೇ ಸುಸಜ್ಜಿತವಾದ ಪ್ರದೇಶಗಳಲ್ಲಿರುತ್ತವೆ. ಕೋರಮಂಗಲ, ಜಯನಗರ, ಸದಾಶಿವನಗರ...ಹೀಗೆ! ಇವಕ್ಕೆ ಕಾನೂನು ಚೌಕಟ್ಟುಗಳೇ ಇಲ್ಲವೆನ್ನಬಹುದು. ಏಕೆಂದರೆ ಕಾನೂನು ಪಾಲಕರನೇಕರಗಳು ಇವುಗಳ ಪಹರೆಯಲ್ಲಿರುತ್ತಾರೆ.

ವೇಶ್ಯಾವಾಟಿಕೆ ಮತ್ತು ರಾಜಕಾರಣಕ್ಕೊಂದು ಅವ್ಯಾಹತವಾದ ಪರಂಪರೆಯೇ ಹರಿದು ಬಂದಿದೆ. ಬರುತ್ತಿದೆ. ಬರುತ್ತಲೇ ಇರುತ್ತದೆ. 'ತೆಹಲ್ಕಾ' ಇದಕ್ಕೆ ಹೊರತಾಗಿಯೇನೂ ಇಲ್ಲ. ಆದರೆ ಇಲ್ಲಿ ಅನೇಕ ಪ್ರಶ್ನೆಗಳು ಏಳುತ್ತವೆ.

ಆಧುನಿಕ ಯುಗದ ಬೀಜಮಂತ್ರಗಳಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳು ವಿಶಾಲ ಜನಸಮೂಹಗಳ ಬದುಕನ್ನು ಅಸ್ಥಿರಗೊಳಿಸುತ್ತಿವೆ. ಈ ಪ್ರಕ್ರಿಯೆ ವೇಶ್ಯಾವೃತ್ತಿಗಿಳಿಯುವ ಮಹಿಳೆಯರ ಸಂಖ್ಯೆಯನ್ನು ಅಗಾಧವಾಗಿ ಹೆಚ್ಚಿಸುತ್ತಿದೆ.

ಇಂತಹ ಸಂದರ್ಭದಲ್ಲಿಯೂ ಪರಂಪರಾನುಗತವಾಗಿಯೂ ಈ ವೃತ್ತಿಯನ್ನು 'ಕಡೆಗಣಿಸಿ' 'ನೈತಿಕ' ಪ್ರಶ್ನೆಯಾಗಿಯೇ ಉಳಿಸುತ್ತಿರುವುದನ್ನು ಗಮನಿಸಬಹುದು.

ಈ ಪುರುಷ ಪ್ರಧಾನವ್ಯವಸ್ಥೆಗೆ ದೈಹಿಕ ತೃಷೆ ಹಿಂಗಿಸಲು ಅವರ ದೇಹಗಳು ಸರಕುಗಳಾಗಬೇಕು. ಅವರ ದುಡಿಮೆಯ ಫಲ ಈ ವ್ಯವಸ್ಥೆಯ ಆರ್ಥಿಕ ಸಂಬಂಧಕ್ಕೆ ಸಹಕರಿಸಬೇಕು. ಹಿಂದಿನಿಂದಲೂ ಇಂದಿನವರೆವಿಗೂ 21ನೇ ಶತಮಾನದವರೆಗೂ ರಾಜಕೀಯ ದಾಳಗಳಾಗಿ ಪಾತ್ರವಹಿಸಬೇಕು.

ಡಿ.ಡಿ.ಕೋಸಾಂಬಿಯವರ ಅಭಿಪ್ರಾಯದಂತೆ ಇವೆರಡೂ ಅತ್ಯಂತ ನಿಕಟವಾದವುಗಳು. ಹಾಗಿದ್ದಲ್ಲಿ ಸಾವಿರಾರು ವರ್ಷಗಳಿಂದಲೂ ಈ ವೃತ್ತಿ 'ಅಪವಿತ್ರತೆ'ಯಿಂದಲೇ ಉಸಿರಾಡುತ್ತಿದೆ ಏಕೆ? ಕಾರಣ ಯಾವುದೇ ಇರಲಿ ರಾಜಕೀಯ ದಾಳಕ್ಕೆ ಬಳಸಲೂ ಸಾಧ್ಯವಾಗಬಹುದಾದ ಈ ವೃತ್ತಿ 'ಅನೈತಿಕ' ಏಕೆ?

ಈ ವೃತ್ತಿಯಲ್ಲಿರುವ ಲಕ್ಷಾಂತರ ಹೆಣ್ಣುಗಳು ಕನಿಷ್ಟ ಮೂಲಭೂತ ಹಕ್ಕುಗಳಿಂದಲೂ ವಂಚಿತರಾಗಿ ನಾಗರೀಕ ಸಮಾಜದ ಸದಸ್ಯರೇ ಅಲ್ಲವೆಂಬಂತೆ ಬದುಕುತ್ತಿರುವುದಾದರೂ ಏಕೆ? ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಯನವೊಂದರ ಪ್ರಕಾರ ಭಾರತ ಸರ್ಕಾರಕ್ಕೆ ವಾರ್ಷಿಕ ಸುಮಾರು 200 ರಿಂದ 300 ಕೋಟಿ ರೂಗಳ ವಹಿವಾಟು ಈ ವೃತ್ತಿಯಿಂದ ನಡೆಯುತ್ತದೆ ಎನ್ನುವುದಾದರೆ ಈ ಹೆಣ್ಣುಗಳ ನೆಲೆಯೆಲ್ಲಿ? ಇಷ್ಟೊಂದು ವ್ಯಾಪಕವಾಗಿ ಈ ವೃತ್ತಿ ನಡೆಯುತ್ತಿದ್ದರೂ 'ಹೆಣ್ಣನ್ನು' ಮಾತ್ರ ಅಪರಾಧಿಯನ್ನಾಗಿಸಿ ಪಾಲುದಾರನಾದ ಗಂಡು ಪ್ರತಿಷ್ಠಿತನಾಗುವುದಾದರೂ ಹೇಗೆ?

೧೯೧೩ ರಲ್ಲಿ ಲೆನಿನ್‌ರವರು ಈ ವೃತ್ತಿಯ ಬಗ್ಗೆ ಈ ವ್ಯವಸ್ಥೆಗಳು ಮಾಡುವ ದೋಖಾತನದ ಬಗ್ಗೆ ಹೇಳಿದ್ದುದು ಇಲ್ಲಿ ಇಂದಿಗೂ ಪ್ರಸ್ತುತವಾಗಿದೆ.

''ಎಲ್ಲ ದೇಶಗಳ ಬಂಡವಾಳಗಾರರೂ ತಮಗಾಗಿ ಪುರಾತನ ಗುಲಾಮರ ಮಾಲೀಕರಂತೆ ಮತ್ತು ಮಧ್ಯಯುಗದ ಸಾಮಂತಶಾಹಿಪ್ರಭುಗಳಂತೆ ಎಷ್ಟು ಸಂಖ್ಯೆಯಲ್ಲಿ ಬೇಕಾದರೂ ಬೆಲೆವೆಣ್ಣುಗಳನ್ನು ಪಡೆದುಕೊಳ್ಳಬಲ್ಲರು. ವೇಶ್ಯಾವೃತ್ತಿಯ ಬಗೆಗೆ ಎಷ್ಟೇ ಪ್ರಮಾಣದ ನೈತಿಕ ರೋಷಾವೇಷಗಳನ್ನು ತೋರಿದರೂ ನೂರರಲ್ಲಿ ತೊಂಭತ್ತೊಂಬತ್ತು ಪ್ರಸಂಗಗಳು ಸೋಗಿನವು. ಅವು ಈ ಸ್ತ್ರೀ ದೇಹ ವಿಕ್ರಯದ ವಿರುದ್ಧ ಏನೂ ಮಾಡಲಾರವು. ಕೂಲಿ ಗುಲಾಮಗಿರಿ ಇರುವವರೆಗೂ ವೇಶ್ಯಾವೃತ್ತಿಯೂ ಅನಿವಾರ್ಯವಾಗಿ ಇರಲಿರುವುದು. ಮಾನವ ಸಮಾಜಗಳ ಇತಿಹಾಸದಾದ್ಯಂತ ಎಲ್ಲ ಮರ್ದಿತ ಹಾಗೂ ಶೋಷಿತ ವರ್ಗಗಳೂ ಯಾವತ್ತೂ ತಮ್ಮ ಪೀಡಕರಿಗೆ ಮೊದಲು ತಮ್ಮ ಕೂಲಿರಹಿತ ಶ್ರಮವನ್ನು, ಎರಡನೆಯದಾಗಿ ತಮ್ಮ ಮಹಿಳೆಯರನ್ನು ಬೆಲೆವೆಣ್ಣುಗಳಾಗಿ ಬಿಟ್ಟುಕೊಡುವ ಬಲಾತ್ಕಾರಕ್ಕೊಳಗಾಗಿಯೇ ಇದ್ದುಕೊಂಡು ಬಂದಿವೆ. ಈ ವಿಷಯಕ್ಕೆ ಸಂಬಂಧಿಸಿ ಗುಲಾಮ ಪದ್ಧತಿಯೂ, ಸಾಮಂತಶಾಹಿ ವ್ಯವಸ್ಥೆಯೂ, ಬಂಡವಾಳದವೂ ಒಂದೇ ರೀತಿಯವು. ಬದಲಾಗುವುದು ಶೋಷಣೆಯ ರೂಪವಷ್ಟೆ, ಶೋಷಣೆಯಂತೂ ಉಳಿದೇ ಇರುತ್ತದೆ.''

''ಕಾರ್ಮಿಕ ವರ್ಗದ ಇಡೀ ಹೋರಾಟಕ್ಕೂ ಮಹಿಳೆಯರ ಸ್ಥಿತಿಗತಿಗಳ ಸುಧಾರಣೆಗೂ ನಡುವೆ ಅತ್ಯಂತ ನಿಕಟ ಸಂಬಂಧವಿದೆಯಾದರೂ ಕಾರಣ ಲೆನಿನರು ಆಗಾಗ್ಗೆ-ವಾಸ್ತವವಾಗಿ ನಲವತ್ತಕ್ಕೂ ಹೆಚ್ಚು ಸಂದರ್ಭಗಳಲ್ಲಿ ಈ ಪ್ರಶ್ನೆ ಉಲ್ಲೇಖಿಸುತ್ತಲೇ ಬಂದಿದ್ದಾರೆ''

ಆದರೆ ಇಂದಿನ ಎಡಪಕ್ಷಗಳು ಪ್ರಗತಿಪರ ಚಿಂತನೆಗಳ ವಕ್ತಾರರಾಗಿರಬೇಕಿದ್ದ ಅವರ ನಿಲುವುಗಳು ಈ ಸಮಸ್ಯೆಯ ಬಗ್ಗೆ ಯಾವ ಕಾಳಜಿ ವಹಿಸಿವೆ? ನಿರಂತರವಾಗಿ ಈ ಜಾಲಕ್ಕೆ, ದಂಧೆಗೆ ತಳ್ಳಲ್ಪಡುತ್ತಿರುವ ಮಕ್ಕಳನ್ನು ನಿಯಂತ್ರಿಸುವ ಒಂದು ಪ್ರಾಮಾಣಿಕ ಪ್ರಯತ್ನವೇನಾದರೂ ಸಾಧ್ಯವಾಗಿದೆಯಾ? ಮಾರಣಾಂತಿಕವಾದ ಹೆಚ್. ಐ.ವಿ/ಏಡ್ಸ್ ನಿಯಂತ್ರಣದಲ್ಲಿ ಎಷ್ಟರ ಮಟ್ಟಿಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ? ಹಾಗಿದ್ದಲ್ಲಿ ಎಡಪಕ್ಷಗಳು ಮತ್ತು ಅವುಗಳ ಸಂಘಟನೆಗಳನ್ನು ಈ ವಿಚಾರದಲ್ಲಿ ಚಕಾರವೆತ್ತದಂತೆ ಮಾಡಿರುವ ಒಳಸುಳಿಯಾದರೂ ಯಾವುದು?

ಮಹಿಳೆಯರ ಸಮಸ್ಯೆಗಳಲ್ಲಿ ಇದೂ ಒಂದು ಅತ್ಯಂತ ಶೋಷಿತ ಪ್ರಧಾನವಾದ ಸಮಸ್ಯೆಯೆಂದು ಎಲ್ಲಿಯೂ ಪರಿಗಣಿತವಾಗುತ್ತಿಲ್ಲ. ಈ ವ್ಯವಸ್ಥೆಯ ರಾಜಕೀಯವು ಎಲ್ಲವನ್ನು ಜಾತಿಯಾಧಾರದಲ್ಲಿಯೇ ಉಸಿರಾಡಲು ಹವಣಿಸುತ್ತಿದೆ. ಲಿಂಗಾಧಾರಿತ ಪ್ರಶ್ನೆಗಳನ್ನು/ಸಮಸ್ಯೆಗಳನ್ನು ಕೂಡ ಜಾತಿಯಾಧಾರಿತ ಸಮಸ್ಯೆಗಳಾಗಿ ವೈಭವೀಕರಿಸುವ ಹುನ್ನಾರವಾದರೂ ಯಾವುದು? ವಿಧವಾವಿವಾಹದಂತಹ ಪ್ರಗತಿಪರ ನಿಲುವುಗಳಿಗೆ ಎದೆಯೊಡ್ಡಿ ನಿಂತ ರಾಜಾರಾಮ್ ಮೋಹನರಾಯ್‌ರಂತಹವರೂ ಕೂಡ ಈ ಪ್ರಶ್ನೆಯ ಆಳಕ್ಕೆ ಇಳಿದು ನೋಡಲೇ ಇಲ್ಲ. ಗಾಂಧೀಜಿಯವರಂತೂ ನೈತಿಕತೆ/ಅನೈತಿಕತೆ ನೆಲೆಗಟ್ಟಿನಲ್ಲಿ ಈ ವಿಚಾರವನ್ನು ಮಡಿವಂತಿಕೆಯಿಂದಲೇ ಜಾಣಕುರುಡರಾಗಿ ತೇಲಿಸಿದ್ದು ಕಣ್ಣಿಗೆ ರಾಚುತ್ತದೆ.

ಈ ವೃತ್ತಿಯ ಬಗ್ಗೆ ಈ ದ್ವಂದ್ವಗಳು, ಮಾನ್ಯತೆ - ಅಮಾನ್ಯತೆಯ ಗೊಂದಲಗಳು, ಆ ಬೆಲೆವೆಣ್ಣುಗಳ ಬದುಕಿನ ಅಸಹನೀಯಗಳು, ತಲ್ಲಣಗಳು, ಭಾರತಕ್ಕಷ್ಟೇ ಸೀಮಿತವಲ್ಲ. ಆಧುನಿಕ ಲೋಕದ ಸರದಾರ ಅಮೇರಿಕಾದಂತಹ ದೇಶಕ್ಕೂ ಅದೆಂತಹ ತಲ್ಲಣಗಳ ಮಿಡಿತಗಳನ್ನು ಈ ವಿಚಾರ ಉಂಟುಮಾಡುತ್ತದೆ ಎನ್ನುವುದನ್ನು ತೀರಾ ಇತ್ತೀಚೆಗೆ ನಡೆದ ಒಂದು ಘಟನೆಯಿಂದ ನೋಡಬಹುದಾಗಿದೆ.

ವೈಟ್‌ಹೌಸ್‌ಗೆ ''ವೇಶ್ಯೆಯರು ಬೇಕಾಗಿದ್ದಾರೆ'' ಎಂಬ ಶೀರ್ಷಿಕೆಯಡಿ ಒಂದು ಜಾಹೀರಾತು ಬಂತು. ಪಟ್ಟಣದ ಅತ್ಯಂತ ಹಳೆಯದಾದ ವೃತ್ತಿ ಈಗ ನ್ಯಾಯಸಮ್ಮತ ವೃತ್ತಿಯಾಗಿ ಮಾರ್ಪಟ್ಟಿದೆ. ವೈಟ್‌ಹೌಸ್‌ನ ಕೆಳ ಮಹಡಿಯಲ್ಲಿರುವ 'ಮೋನಕಾಸ್'ಗೆ ಹಗಲು-ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಅದ್ಭುತವಾದ ಸಂಬಳ! ಅದ್ಭುತ ಸಿಬ್ಬಂದಿ!! ಅದ್ಭುತವಾದ ಕಾಂಡಮ್ಸ್!!!... ಹೀಗೆ ಮುಂದುವರೆದಿತ್ತು ಆ ಜಾಹೀರಾತು.

ಇದು ನ್ಯೂಝಿಲೆಂಡ್‌ನ ಆಕ್ಲೆಂಡ್ ಪಟ್ಟಣದಲ್ಲಿರುವ ಮಸಾಜ್ ಪಾರ್ಲರ್‌ವೊಂದರ ಪುಟ್ಟ ಜಾಹೀರಾತು. ಈ ಜಾಹೀರಾತು ಪ್ರಕಟಿಸಿರುವ ಪಾರ್ಲರ್‌ನ ಹೆಸರು 'ವೈಟ್‌ಹೌಸ್'. ಪಾರ್ಲರ್‌ನ ಚಿಹ್ನೆಗೂ ಅಮೇರಿಕಾದ ರಾಷ್ಟ್ರಪತಿಗಳ ಕಚೇರಿಯ ಸೀಲ್‌ಗೂ ಬಹಳ ಸಾಮ್ಯತೆ ಇತ್ತು. ಅಮೇರಿಕಾ ಚಿಹ್ನೆಯಲ್ಲಿ ಗರುಡ ಪಕ್ಷಿ ಇದೆ. ಈ ಜಾಹೀರಾತಿನ ಚಿಹ್ನೆಯಲ್ಲೂ ಗರುಡ ಪಕ್ಷಿಯಿದ್ದು ಚೊಂಚಿಗೆ ಸಣ್ಣ ರಿಬ್ಬನ್ ಕಟ್ಟಲಾಗಿತ್ತು.

ಈ ಪುಟ್ಟ ಜಾಹೀರಾತು ತನ್ನನ್ನು ತಾನು ಜಗತ್ತಿನ ಹಿರಿಯಣ್ಣ ಎಂದು ಕೊಂಡಿರುವ ಅಮೇರಿಕಾದ ಕಣ್ಣುಗಳನ್ನು ಕೆಂಪಾಗಿಸಿತ್ತು 'ಆ ರಾಷ್ಟ್ರದ ಆಕ್ರೋಶಕ್ಕೆ ಕಾರಣವಾಯ್ತು. ಅಮೇರಿಕಾ-ನ್ಯೂಝಿಲೆಂಡ್ ಮಧ್ಯೆ ಮನಸ್ತಾಪ ತಂದಿಡುವಷ್ಟು ತಾಕತ್ತು ಆ ಪುಟ್ಟ ಜಾಹೀರಾತಿಗಿತ್ತು.

ಅಡಿ ಟಿಪ್ಪಣಿಗಳು:

೧ ಕೇಶವಶರ್ಮ- ಸ್ತ್ರೀ ಮತ್ತು ರಾಜಕಾರಣ-ಪುಟ.೧೬-೧೭

೨ Kosambi D.D. page.156


೩Chandra-moti p.13

೪ ಆಧಾರ: ಲಂಕೇಶ್. ಪತ್ರಿಕೆ-ಜೂನ್ ೨೫-೨೦೦೩ ಸಂ. ೨,೩ ಸಂಚಿಕೆ- ೫೧

೫ ವಿಜಯ ಕರ್ನಾಟಕ: ಬೆಂಗಳೂರು, ನವೆಂಬರ್ 30 2003

೬ ವಿ.ಐ.ಲೆನಿನ್-ಮಹಿಳೆಯರ ವಿಮೋಚನೆಯ ಕುರಿತು ಪುಟ 34


ಎಂ.ಜಿ. ದೀಪಿಕಾ..



ಅಧ್ಯಾಯ ೮

ವೇಶ್ಯಾವಾಟಿಕೆ ಮತ್ತು ಆರ್ಥಿಕ ಸಂಬಂಧಗಳು:



ವೇಶ್ಯಾವಾಟಿಕೆ ಎನ್ನುವಾಗಲೇ 'ಪ್ರತಿಫಲಾಪೇಕ್ಷೆ' ಯೂ ಒಂದು ಪ್ರಮುಖ ಅಂಶವನ್ನಾಗಿಸಿ ನೂರಾರು ವ್ಯಾಖ್ಯಾನಕಾರರು ವ್ಯಾಖ್ಯಾನಗಳನ್ನು ಕೊಟ್ಟಿದ್ದಾರೆ. ನಿರ್ಭಾವುಕರಾಗಿ ಅವರು ವ್ಯಾಖ್ಯಾನಿಸಿದ್ದಷ್ಟಕ್ಕೇ ನಿಲ್ಲಿಸದೆ ಆ ವೃತ್ತಿ ಮತ್ತು ಆರ್ಥಿಕ ಸಂಬಂಧಗಳ ತಳಸ್ಪರ್ಶ ಮಾಡಿದಾಗ ಅದರ ಹರವು ವಿಸ್ತರಿಸಿಕೊಳ್ಳುತ್ತಲೇ ಹೋಗುತ್ತದೆ.

೧೯೯೫-೯೬ ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ ನಡೆಸಿದ ಅಧ್ಯಯನದ ಪ್ರಕಾರ, ಈ ವೃತ್ತಿಯಿಂದ ಈ ಸಮಾಜಕ್ಕೆ, ಸರ್ಕಾರಕ್ಕೆ ಹರಿದು ಬರುವ ಆರ್ಥಿಕ ಲೆಕ್ಕಾಚಾರದ ಒಂದು ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

'ನ್ಯಾಯಾಲಯಗಳ ಧಂಡಗಳ ಮೂಲಕ ಪ್ರತಿವರ್ಷ ೩ ಕೋಟಿಗೂ ಮಿಕ್ಕಿ ಆದಾಯ ಸಂದುತ್ತದೆ. ವಕೀಲರುಗಳು ವಾರ್ಷಿಕವಾಗಿ ಕಾನೂನು ಸೇವಾ ಶುಲ್ಕದ ರೂಪದಲ್ಲಿ 9 ಕೋಟಿಯಷ್ಟು ಆದಾಯ ಪಡೆಯುತ್ತಾರೆ.

ಒಮ್ಮೆ ಒಬ್ಬ ಲೈಂಗಿಕ ವೃತ್ತಿ ಮಹಿಳೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ೨೦೦ ರೂ.ಗಳಿಂದ ೪೦೦ ರೂ.ಗಳವರೆಗೆ ದಂಡಶುಲ್ಕ ತೆರುತ್ತಾರೆ. ಭಾರತದ ವಿವಿಧ ಭಾಗಗಳಿಂದ ಸುಮಾರು ೨೦೦೦ ಕ್ಕೂ ಹೆಚ್ಚು ಮಹಿಳೆಯರು ಅಭಿಪ್ರಾಯ ಸಂಗ್ರಹಿಸಿ ಚರ್ಚಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿತ್ತು.

ಜುಲೈ, ೨೦೦೩, ಶಾರದಾಳನ್ನು (ಹೆಸರು ಬದಲಿಸಿದೆ) ಪೋಲೀಸರು ಬಂಧಿಸಿ ನ್ಯಾಯಾಲಕ್ಕೆ ಕರೆದೊಯ್ದಿದ್ದರು. ನ್ಯಾಯಾಧೀಶರು ಕತ್ತು ಬಗ್ಗಿಸಿಯೇ ಅವಳಿಗೆ 100ರೂ. ದಂಡ ವಿಧಿಸಿದರು. ಮೊಟ್ಟ ಮೊದಲ ಬಾರಿಗೆ ಶಾರದಾ ಕೋರ್ಟಿನ ಕಟಕಟೆಯಲ್ಲಿ ಬಾಯಿ ಬಿಟ್ಟಿದ್ದಳು. ''ಸ್ವಾಮಿ, ನಮ್ಮನ್ನು ಕರೆತಂದಿರುವ (ಕಾನ್‌ಸ್ಟೇಬಲ್) ಮೇಡಂ ಈಗಾಗಲೇ ಹಣ ಪಡೆದಿದ್ದಾರೆ ''ಎಂದಳು.'' ನ್ಯಾಯಾಧೀಶರು ಕತ್ತು ಎತ್ತಿ ''ಎಷ್ಟು ಹಣ ಪಡೆದಿದ್ದಾರೆ?'' ಎಂದು ಪ್ರಶ್ನಿಸಿದರು. ''400 ರೂಪಾಯಿಗಳು ನಾನೊಬ್ಬಳೇ ಅಲ್ಲ ಇಲ್ಲಿ ಬಂದಿರುವ 9 ಹುಡುಗಿಯರೂ ತಲಾ ೪೦೦ ರೂ. ಗಳನ್ನು ಕೊಟ್ಟಿದ್ದೇವೆ'' ಎಂದಳು ಶಾರದಾ. ಕೂಡಲೇ ಕಾನ್‌ಸ್ಟೇಬಲ್ ಕರೆಸಿದನ್ಯಾಯಾಧೀಶರು 'ದೇಹ ಮಾರಿ ಬದುಕುವ ಅವರನ್ನೂ ಬಿಡೋದಿಲ್ವಲ್ರೀ ನೀವು. ಅವರಿಂದ ತೊಗೊಂಡಿರೋ ಹಣ ವಾಪಸ್ಸು ಕೊಡಿ' ಅಂತ ಗದರಿದಾಗ ಆ ಕಾನ್‌ಸ್ಟೇಬಲ್ ನ್ಯಾಯಾಧೀಶರ ಮುಂದೆ ಹಣ ಹಿಂತಿರುಗಿಸಿದಳು. ನಂತರ ಹೊರಗೆ ಬಂದು ಹೀನಾಯವಾಗಿ ಬೈದು ಅದರಲ್ಲಿಯೂ ಸ್ವಲ್ಪ ರಿಯಾಯಿತಿ ಮಾಡಿ ತಲಾ ೨೦೦ ಪಡೆದಳು. ಶಾರದಾಳಿಗೆ ಒಂದು ಬೆದರಿಕೆಯೊಡ್ಡಿ ಮುಂದೆ ನೋಡಿ ಕೊಳ್ಳುವುದಾಗಿ ಹೇಳಿದಳು.

ನ್ಯಾಯಾಲಯದ ದಂಡ ಶುಲ್ಕವಲ್ಲದೆ ಅಲ್ಲಿರುವ ಗುಮಾಸ್ತರಿಗೆ, ಅಲ್ಲಿಗೆ ಕೊಂಡೊಯ್ಯುವ ಕಾನ್‌ಸ್ಟೇಬಲ್‌ಗಳಿಗೂ ಈ ಮಹಿಳೆಯರು ಮಾಮೂಲಿ ಕೊಡಬೇಕಾಗುತ್ತದೆ. ದಂಡ ಶುಲ್ಕವೂ ಕೂಡ ನ್ಯಾಯಾಧೀಶರ ಮರ್ಜಿಗೆ ಬಿಟ್ಟಿರುತ್ತದೆ. ಅದಕ್ಕೇನು ಇಷ್ಟೇ ಎಂದು ನಿರ್ದಿಷ್ಟ ಚೌಕಟ್ಟಿಲ್ಲವೇ ಇಲ್ಲ. ಅದೆಷ್ಟೋ ಸಂದರ್ಭಗಳಲ್ಲಿ ನಾನು ಗಮನಿಸಿರುವಂತೆ ಬಹುತೇಕ ನ್ಯಾಯಾಧೀಶರುಗಳು ತಲೆ ಎತ್ತುವುದೇ ಇಲ್ಲ. ಈ ಮಹಿಳೆಯರಿಗೇನೂ ಕಟಕಟೆಯಿಲ್ಲ. ಒಳಾಂಗಣಕ್ಕೆ ಕರೆದೊಯ್ದು ಮಧ್ಯೆ ನಿಲ್ಲಿಸುತ್ತಾರೆ. ಒಂದೆರಡು ನಿಮಿಷಗಳಲ್ಲಿ ಈ ಪ್ರಕ್ರಿಯೆಗಳು ನಡೆದು ಹೋಗುತ್ತವೆ. ಯಾವತ್ತೂ ನಿನ್ನ ಅಭಿಪ್ರಾಗಳೇನು ಎಂದು ನ್ಯಾಯಾಧೀಶರುಗಳು ಪ್ರಶ್ನಿಸುವುದಿಲ್ಲ. ಯಾವತ್ತೂ ನನ್ನ ಅಭಿಪ್ರಾಯ ಇದು ಎಂದು ಈ ಮಹಿಳೆಯರೂ ಎದೆಗುಂದದೆ ಮಾತಾಡುವುದಿಲ್ಲ. ತಾನು ಮಹಾಪರಾಧ ಮಾಡಿದ್ದೇನೆ, ಹೇಗಾದರೂ ಇಲ್ಲಿಂದ ಪಾರಾಗಬೇಕು ಎನ್ನುವ ತವಕ ಆ ಮಹಿಳೆಗೆ ಇರುತ್ತದೆ. ಇವಳು ತಪ್ಪು ಮಾಡಿದ್ದಾಳೆ, ಇವಳಿಗೆ ದಂಡಶುಲ್ಕ ಹಾಕಬೇಕು ಎನ್ನುವ ಯಾಂತ್ರಿಕವಾದ ಭಾವನೆ ಆ ನ್ಯಾಯಾಧೀಶರುಗಳಿಗೆ ಇರುತ್ತದೆ. ಈ ಸಂದರ್ಭವನ್ನು ಉಪಯೋಗಿಸಿ ಸಿಕ್ಕಿದಷ್ಟು ದಕ್ಕಿಸಿಕೊಳ್ಳುವ ಹುನ್ನಾರ ಗುಮಾಸ್ತ ಮತ್ತು (ನ್ಯಾಯಾಲಯದ) ಕಾನ್‌ಸ್ಟೇಬಲ್‌ಗಳಿರುತ್ತದೆ. ಒಟ್ಟಾರೆಯಾಗಿ ಈ ಪ್ರಹಸನಗಳು ದಿನನಿತ್ಯ ಲಕ್ಷಾಂತರ ಹೆಣ್ಣುಗಳು ತೆರುವ ದಂಡಶುಲ್ಕ ಮತ್ತು ಮಾಮೂಲಿಗಳಿಂದ ತೆರೆ ಎಳೆಯುತ್ತವೆ.

ಇನ್ನು ನ್ಯಾಯಾಧೀಶರುಗಳು ಅದ್ಯಾವ ಲೆಕ್ಕಾಚಾರ ಹಾಕುತ್ತಾರೋ ಅಥವಾ ನ್ಯಾಯಕ್ಕೆ ಶರಣಾಗುತ್ತಾರೋ ಈ ಮಹಿಳೆಯರನ್ನು ಬಹಳ ಸರಳವಾಗಿ ದಂಡಶುಲ್ಕದೊಂದಿಗೆ ರವಾನಿಸುವ ಇವರು ಒಮ್ಮೊಮ್ಮೆ ದಂಡಶುಲ್ಕ ಮೀರಿ ಜೈಲುಗಳಿಗೆ ರವಾನಿಸುತ್ತಾರೆ. ಆ ಸಂದರ್ಭಗಳಲ್ಲಿ ಈ ಮಹಿಳೆಯರ ಕಡೆಯ ಯಾರಾದರೂ ವಕೀಲರುಗಳನ್ನಿಟ್ಟು ಜಾಮೀನು ಪಡೆಯುತ್ತಾರೆ. ಅಥವಾ ನ್ಯಾಯಾಲಯದಲ್ಲಿ ಇವರ ಪರ ವಾದಿಸುತ್ತಾರೆ. ಕೆಲವೊಮ್ಮೆ ಇದಾವುದೂ ಮಾಡದೆಯೂ ಕಪ್ಪುಕೋಟುಗಳಲ್ಲೇ ನ್ಯಾಯ ಪ್ರಪಂಚ ತೋರಿಸಿ ಹಣ ಕೀಳುತ್ತಾರೆ. ಹಾಗೂ ವೇಶ್ಯಾಗೃಹಗಳ ಮಹಿಳೆಯರನ್ನು ಬಂಧಿಸಿದಾಗ ಆ ಘರ್‌ವಾಲಿಗಳಿಂದ ವಕೀಲರುಗಳಿಗೆ ಸಾಕಷ್ಟು ಹಣ ಸಂದಾಯವಾಗುತ್ತದೆ.

ಇದರೊಂದಿಗೆ ಬೃಹತ್ ಮೊತ್ತ ಲೇವಾದೇವಿ ವಹಿವಾಟಿಗೆ ಸೇರುತ್ತದೆ. ಒಮ್ಮೆ ಬಂಧಿಸಲ್ಪಟ್ಟ ಮಹಿಳೆ ಈ ಮೇಲಿನ ಎಲ್ಲ ಖರ್ಚುಗಳಿಗೆ ಮೈಮೇಲೆ ಆಭರಣಗಳಿದ್ದಲ್ಲಿ (ಓಲೆ, ಕಾಲುಚೈನು, ಉಂಗುರ, ಇತ್ಯಾದಿ) ಅವುಗಳನ್ನು ಅಡವಿಡುತ್ತಾಳೆ. ಅಥವಾ ವಾರದ ಬಡ್ಡಿಗೆ ಹಣ ಪಡೆಯುತ್ತಾಳೆ. (ಸುಮಾರು ೧೦೦ ರೂಪಾಯಿಗೆ ವಾರಕ್ಕೆ ೨೫ ರಿಂದ ೫೦ ರೂ ಬಡ್ಡಿ ಕೊಡುತ್ತಾಳೆ. ಇದು ತಾತ್ಕಾಲಿಕ ಸಾಲವಾಗಿದ್ದು ಅವಳ ತೀರಾ ಹತ್ತಿರದ ಒಡನಾಟದವರೇ ಅದನ್ನು ಕೊಟ್ಟಿರುತ್ತಾರೆ.) ಇದರ ವ್ಯವಸ್ಥೆಯನ್ನೆಲ್ಲಾ ಕಾನ್‌ಸ್ಟೇಬಲ್‌ಗಳು, ಅಥವಾ ಅವಳ ಬಾಡಿಗೆ ಗಂಡಂದಿರು, ಪಿಂಪ್‌ಗಳು, ಸ್ನೇಹಿತೆಯರು, ಘರ್‌ವಾಲಿಗಳು ಮಾಡುತ್ತಾರೆ. ಹೆತ್ತ ಮಕ್ಕಳನ್ನೇ ಬೀದಿಗೆ ಬಿಟ್ಟು ಬದುಕುವ ಎಷ್ಟೋ ತಾಯಂದಿರು ಬಂದು ದಂಡಶುಲ್ಕ ಕಟ್ಟಿ ಬಿಡಿಸಿಕೊಂಡು ಹೋದುದನ್ನು ನಾನು ಕಂಡಿದ್ದೇನೆ.

ಹೀಗೆ ಒಬ್ಬ ಲೈಂಗಿಕ ವೃತ್ತಿ ಮಹಿಳೆ ಒಮ್ಮೆ ಬಂಧಿಸಲ್ಪಟ್ಟರೆ ದಂಡಶುಲ್ಕ, ವಕೀಲರಿಗೆ, ಗುಮಾಸ್ತರಿಗೆ, ಪೊಲೀಸರಿಗೆ, ಇತರೆ ಖರ್ಚುಗಳೂ ಸೇರಿ ಸುಮಾರು ೮೦೦ ರೂ.ಗಳಿಂದ ೧,೦೦೦ ರೂ.ಗಳವರೆಗೆ ವ್ಯಯಿಸುತ್ತಾಳೆ. ಸಾಮಾನ್ಯವಾಗಿ ತಿಂಗಳಲ್ಲಿ ಕನಿಷ್ಟ ಒಮ್ಮೆಯಾದರೂ ಈ ದಂಡ ಅವಳು ತೆತ್ತೇ ತೀರುತ್ತಾಳೆ. (ಒಮ್ಮೊಮ್ಮೆ ೨-೩ ಬಾರಿಯೂ ಬಂಧಿಸಲ್ಪಡುತ್ತಾಳೆ.) ಈ ಅಂದಾಜಿನಲ್ಲಿ ನೋಡಿದರೂ ಒಬ್ಬ ಲೈಂಗಿಕ ವೃತ್ತಿ ಮಹಿಳೆ ನ್ಯಾಯಾಲಯಕ್ಕಷ್ಟೇ ಸೀಮಿತಗೊಳಿಸಿ ವಾರ್ಷಿಕ ಕನಿಷ್ಠ ೧೨,೦೦೦ ರೂಗಳಷ್ಟನ್ನು ತೆರುತ್ತಾಳೆ. ಸ್ವರೂಪಗಳು ಬೇರೆಯಾದರೂ ಇದು ಕರ್ನಾಟಕದ ಎಲ್ಲಾ ಭಾಗಗಳಿಗೂ, ಎಲ್ಲ ತೆರನಾದ ಲೈಂಗಿಕ ವೃತ್ತಿ ಮಹಿಳೆಯರಿಗೂ ಅನ್ವಯಿಸುತ್ತದೆ.

ಪೊಲೀಸರೊಂದಿಗೆ ಲೈಂಗಿಕ ವೃತ್ತಿ ಮಹಿಳೆಯ ಆರ್ಥಿಕ ಸಂಬಂಧಗಳು:

ಪೊಲೀಸರೊಂದಿಗೆ ಆರ್ಥಿಕ ಸಂಬಂಧವಂತೂ ಬಿಡಿಸಲಾರದ ನಂಟು.ಈ ನಂಟು ವೇಶ್ಯಾ ಗೃಹಗಳ ಘರ್ ವಾಲಿಗಳೊಂದಿಗೆ, ಬೀದಿ ಬದಿಯ ಲೈಂಗಿಕ ವೃತ್ತಿ ಮಹಿಳೆಯರೊಂದಿಗೆ, ಲಾಡ್ಜ್ ಮಾಲೀಕರೊಂದಿಗೆ, ಡಾಬಾ ವಾರಸುದಾರರೊಂದಿಗೆ, ಪಿಂಪ್‌ಗಳೊಂದಿಗೆ ಬ್ರೋಕರ್‌ಗಳೊಂದಿಗೆ, ರೌಡಿಗಳೊಂದಿಗೆ.... ಅಂಟಿಕೊಂಡಿದೆ.

ವೇಶ್ಯಾಗೃಹಗಳೊಂದಿಗಿನ ಪೋಲೀಸ್ ಇಲಾಖೆಯ ನಂಟು:

ಸಾಮಾನ್ಯವಾಗಿ ವೇಶ್ಯಾಗೃಹಗಳಲ್ಲಿ ೪ ಮಹಿಳೆಯರಿಂದ ೨೦ ಮಹಿಳೆಯರಿರುತ್ತಾರೆ. ಸುಮಾರು ೧೨ ವರ್ಷಗಳ ಪ್ರಾಯದಿಂದ ಆರಂಭಗೊಂಡು ೩೫ ವರ್ಷದವರಿರುತ್ತಾರೆ. ಈ ಗೃಹಕ್ಕೊಬ್ಬಳು ಮಾಲೀಕಳಿರುತ್ತಾಳೆ. ಸಾಮಾನ್ಯವಾಗಿ ಅವಳೂ ಮಾಜಿ ವೇಶ್ಯೆಯಾಗಿರುತ್ತಾಳೆ. ಕೆಲವು ಗೃಹಗಳ ಮಾಲೀಕರುಗಳೂ ಲೈಂಗಿಕ ವೃತ್ತಿ ಮಾಡುತ್ತಾರೆ.

ಈ ವೇಶ್ಯಾಗೃಹ ನಡೆಸಲು ಎಲ್ಲಕ್ಕಿಂತಲೂ ಹೆಚ್ಚು ಪೊಲೀಸ್ ಕೃಪಾಕಟಾಕ್ಷ ಇರಲೇ ಬೇಕಾಗುತ್ತದೆ. ಈ ಕೃಪೆಗಾಗಿ ಅವಳು ಪ್ರತಿ ತಿಂಗಳು ತಪ್ಪದೆ ಕಾಣಿಕೆ ಸಲ್ಲಿಸಿಬಿಡುತ್ತಾಳೆ. ಒಬ್ಬ ಅಧಿಕಾರಿ ಸಂಬಂಧಿಸಿದ ಸ್ಟೇಷನ್‌ಗೆ ಬಂದಾಗ ಮಾಮೂಲಿ ಹಿಂದಿನದಕ್ಕೆ ಹೋಲಿಸಿ ರೇಟು ನಿಖರವಾಗುತ್ತದೆ. ಅಷ್ಟಕ್ಕೆ ಇಬ್ಬರೂ ಒಪ್ಪಿದ ನಂತರ ಸಾಮಾನ್ಯವಾಗಿ ನಿರಂತರವಾಗಿ ಅದು ತಲುಪುತ್ತಿರುತ್ತದೆ. ಇದೂ ಕೂಡ ಆ ವೇಶ್ಯಾಗೃಹಗಳಿರುವ ಪ್ರದೇಶದ 'Value' ಗೆ ಪೂರಕವಾಗಿ ಇರುತ್ತದೆ. ಮತ್ತೆ ಅವಳು ನಡೆಸುವ ದಂಧೆಯ ವಹಿವಾಟಿಗೆ ತಕ್ಕಂತೆಯೂ ಇರುತ್ತದೆ. ಹೀಗೇ ಅಂದಾಜು ಮಾಡಿದರೆ ಒಂದು ವೇಶ್ಯಾಗೃಹದಿಂದ ಪ್ರತೀ ತಿಂಗಳು ಸುಮಾರು ೮೦೦೦ ರೂ.ಗಳಿಂದ ೨೦,೦೦೦ ರೂ.ಗಳವರೆಗೂ ಪೊಲೀಸ್ ಠಾಣೆ ತಲುಪುತ್ತದೆ. ಇದು ಕಾಲ ಸರಿದಂತೆ, ರೂಪಾಯಿ ಮೌಲ್ಯ ಏರುಪೇರಾದಂತೆ ವ್ಯತ್ಯಾಸವಾಗುತ್ತದೆ. ಕೆಲವೊಮ್ಮೆ ಇಷ್ಟೆಲ್ಲ ಕಾರಣಗಳಿದ್ದರೂ ಕೇಸುಗಳಿಗಾಗಿ ಪೊಲೀಸರೇ ಕರೆದೊಯ್ಯುತ್ತಾರೆ. ಇದೆಲ್ಲ ನಾಟಕ ಮುಗಿದ ನಂತರ ಆ ಮಹಿಳೆಯರು ಮತ್ತೆ ವೇಶ್ಯಾಗೃಹ ಸೇರುತ್ತಾರೆ. ಕೆಲವೊಮ್ಮೆ

ಒಪ್ಪಂದಗಳು ಏರುಪೇರಾಗಿ ಅಥವಾ ಹೊಸದಾಗಿ ಬಂದ ಅಧಿಕಾರಿ ಹೊಸದರಲ್ಲಿ ದರ್ಪ ತೋರಿಸಿ ನಿಜವಾಗಿ ಮತ್ತೂ ಬಂಧಿಸಿದಾಗ ಘರ್‌ವಾಲಿ ದಂಡ ತೆರುತ್ತಾಳೆ ಅಥವಾ ಮೇಲಧಿಕಾರಿಗಳ ಸಂಪರ್ಕಿಸಿ ಈ ಹೊಸ ಅಧಿಕಾರಿಯನ್ನು ಎದ್ದು ಬಸ್ತಿನಲ್ಲಿಡುತ್ತಾಳೆ.

ಇನ್ನೂ ಬಗ್ಗದಿದ್ದಾಗ ಪುಕ್ಕಟೆ 'ವೈನ್ ಅಂಡ್ ವುಮೆನ್' ಒದಗಿಸಿಯೂ ನೋಡುತ್ತಾಳೆ. ಸಾಮಾನ್ಯವಾಗಿ ಈ ಹಂತದಲ್ಲಿ ಪರಸ್ಪರ ನಂಟು ಕುದುರುತ್ತದೆ. ಬಹಳ ಅಪರೂಪಕ್ಕೆ ಒಪ್ಪಂದ ಕುದುರದೇ ವೇಶ್ಯಾಗೃಹಗಳು ಸ್ಥಳಾಂತರವಾದ ಉದಾಹರಣೆಗಳೂ ಇವೆ. ಹೀಗೆ ಒಂದು ವೇಶ್ಯಾಗೃಹದಿಂದ ಪೊಲೀಸ್ ಇಲಾಖೆಗೆ ತಲುಪುವ ಕಪ್ಪ ಮಾಸಿಕ ಅಂದಾಜು. ೮,೦೦೦,-೨೦,೦೦೦ ವಾರ್ಷಿಕವಾಗಿ ೯೬,೦೦೦ ದಿಂದ ೨,೪೦,೦೦೦ ದವರೆಗೂ ತಲುಪುತ್ತದೆ.

ಇದೇ ರೀತಿಯ ಕರಾರುವಕ್ಕಾಗಿ, ಒಪ್ಪಂದವಾಗಿ, ಪರಸ್ಪರ ಸಹಕಾರದ ಸಂಬಂಧದಲ್ಲಿ ಡಾಬಾ ಮಾಲೀಕರುಗಳು, ಲಾಡ್ಜ್ ಮಾಲೀಕರುಗಳಿಂದಲೂ ಮಾಸಿಕ ಅಥವಾ ವಾರದ ಲೆಕ್ಕಾಚಾರದಲ್ಲಿ ಹಣ ಪಾವತಿಯಾಗುತ್ತದೆ. ಇದೂ ಕೂಡ ಬಹುತೇಕವಾಗಿ ವೇಶ್ಯಾಗೃಹಗಳನ್ನು ಹೋಲುವಂತಹ ಕಪ್ಪವಾಗಿರುತ್ತದೆ.

ಬೀದಿ ಬದಿಯ ಲೈಂಗಿಕ ವೃತ್ತಿಯವರೊಂದಿಗಿನ ಪೊಲೀಸ್‌ರ ನಂಟು:

''ಎಲ್ಲೆ೨-೩ ದಿನಗಳಿಂದ ಸುಶೀ ಬಂದೇ ಇಲ್ಲ? ಎಲ್ಲೇ ರತ್ನೀ ತೆಗ್ಯೇ ದುಡ್ಡಾ! ಯಾಕ್ರೇ ಎಲ್ಲ ತಪ್ಪುಸ್ಕೊಂಡು ತಿರುಗ್ತಿದ್ದೀರಾ, ಹಿಡ್ದು ಒಳ್ಗೆ ಹಾಕ್ಲೇನ್ರೇ. ಏನೋ ಹೋಗ್ಲಿ ಅಂದ್ರೆ ಸದ್ರ ಮಾಡ್ಕಂತಿದ್ದೀರಾ, ಅವೆಲ್ಲ ಮುಲಾಜು ಬೇಡ. ತೆಗೀರಿ ತೆಗೀರಿ, ಇಲ್ದಿದ್ರೆ ಹತ್ರೇ ಆಟೋನಾ. ಅಲ್ಲೇ ಕೋಡಿವ್ರಂತೆ...'' ಪ್ರತಿ ದಿನ ಬೀಟ್‌ಗೆ ಬರೋ ಕಾನ್‌ಸ್ಟೆಬಲ್‌ಗಳ ನಂಟು ಇದು. ಇಲ್ಲಿ ಲಿಂಗ ಬೇದವೇನೂ ಇಲ್ಲ. ಇತ್ತೀಚೆಗೆ ಖಾಕಿ ತೊಟ್ಟು ಜಡೆ, ಗಂಟುಗಳೊಂದಿಗೆ ಬಂದ ಮಹಿಳಾ ಪೊಲೀಸರ ದೈಹಿಕ ಬದಲಾವಣೆ ಬಿಟ್ಟರೆ ಇವರ ನಡವಳಿಕೆಗಳಲ್ಲೇನೂ ವ್ಯತ್ಯಾಸವಿಲ್ಲ. ಮಹಿಳಾ ಪೊಲೀಸರು ಇನ್ನೂ ಹೆಚ್ಚು ಸ್ವಾತಂತ್ರ ಪಡೆದು ಸಾರ್ವಜನಿಕವಾಗಿಯೇ ರವಿಕೆಗಳೊಳಗೂ ಕೈ ಹಾಕುತ್ತಾರೆ. ಪುರುಷ ಕಾನ್‌ಸ್ಟೇಬಲ್‌ಗಳು ಇದನ್ನು ಠಾಣೆಗಳೊಳಗೆ ಮಾಡುತ್ತಾರೆ. ಕೆಲವೊಮ್ಮೆ ಮೈದುಂಬಿದರೆ ಅವರೊಂದಿಗೆ ತಮ್ಮ ತೃಷೆ ಹಿಂಗಿಸಿಕೊಳ್ಳುತ್ತಾರೆ. ಇನ್ನುಳಿದಂತೆ ಸೀರೆ ಬಿಚ್ಚುವುದು, ತಲೆಗೆ ಕೈ ಹಾಕುವುದು, ಹಣ ವಸೂಲಿ, ಬೈಗುಳಗಳು ಇವೆಲ್ಲಕ್ಕೂ ಪೊಲೀಸ್ ಇಲಾಖೆಯಲ್ಲಿ ಲಿಂಗ ಭೇದವೇ ಇಲ್ಲ. ಇಸ್ತ್ರೀ ಮಾಡಿದ ಖಾಕಿಯನ್ನು ಹಾಕುವಷ್ಟೇ ನಿಯಮ ಬದ್ಧವಾಗಿ ಈ ವಸೂಲಿ ರೀತಿ ನೀತಿಗಳು ಮತ್ತು ಬೈಗುಳಗಳನ್ನು ಕೂಡ ತರಬೇತಿ ಪಡೆದಿರುತ್ತಾರೇನೋ ಎನ್ನುವಷ್ಟು ಎಲ್ಲಿಂದೆಲ್ಲಿಗೆ ಹೋದರೂ ಕರಾರು ವಕ್ಕಾಗಿರುತ್ತವೆ. ಹೀಗೆ ದೊಣ್ಣೆ ಹಿಡಿದು ಬೀದಿಯಲ್ಲಿ ಗಸ್ತು ತಿರುಗುವ ಪೊಲೀಸರಿಗೆ ಒಬ್ಬ ಲೈಂಗಿಕ ವೃತ್ತಿ ಮಹಿಳೆ ದಿನವೊಂದಕ್ಕೆ (ಸಾಮಾನ್ಯವಾಗಿ ದಿನಕ್ಕೆ ಇಬ್ಬರಿಗೆ) ೧೦೦ ರಿಂದ ೨೦೦ ಮಾಮೂಲಿ ಕೊಡುತ್ತಾಳೆ. ಹೀಗೆ ಕೊಡುವ ಮಾಮೂಲಿ ತಿಂಗಳಿಗೆ ಸರಾಸರಿ ೩.೦೦೦ ದಿಂದ ೬೦೦೦ ರೂ.ಗಳು. ವಾರ್ಷಿಕವಾಗಿ ೩೬,೦೦೦ ದಿಂದ ೭೨,೦೦೦ ದವರೆಗೂ ಕೊಡುತ್ತಾಳೆ.

ಇಷ್ಟೆಲ್ಲ ನಂಟಿದ್ದರೂ ಮಾಮೂಲಿ ಏರುಪೇರಾದಲ್ಲಿ, ತಿಂಗಳ ಕೇಸುಗಳ ಲೆಕ್ಕಾಚಾರ ಒಪ್ಪಿಸಲು, ತಾನೊಬ್ಬ ದಕ್ಷ ಕಾನ್‌ಸ್ಟೇಬಲ್ ಎಂದು ದೃಢೀಕರಿಸಲು, ಹೊಸದಾಗಿ ಸೇರ್ಪಡೆಯಾದಾಗ, ವರ್ಗಾವಣೆಯಾಗಿ ಬಂದಾಗ ಈ ಮಹಿಳೆಯರಿಗೆ ತನ್ನನ್ನು ಪರಿಚಯಿಸಿಕೊಳ್ಳಲು, ಮೇಲಾಧಿಕಾರಿಗಳು ಆದೇಶಿಸಿದಾಗ, ಯಾರಾದರೂ ವಿ.ಐ.ಪಿ.ಗಳು ನಗರಗಳಿಗೆ ಭೇಟಿ ಯಿತ್ತಾಗ ರಸ್ತೆಗಳನ್ನು ಶುಚಿಗೊಳಿಸುವ ನಿಟ್ಟಿನಲ್ಲಿ, ಕೋಮುಗಲಭೆಗಳಾದಾಗ ಅಥವಾ ಯಾವುದಾದರೂ ಗಲಭೆಯಾದಾಗ, ಚುನಾವಣೆ ಬಿರುಸಿದ್ದಾಗ, ಕೆಲವೊಮ್ಮೆ ಮಂತ್ರಿಮಹೋದಯರು ನಗರವನ್ನು ಸ್ವಚ್ಛಗೊಳಿಸಲು ಆದೇಶಿಸಿದಾಗ, ಮಾಧ್ಯಮಗಳಲ್ಲಿ ಸುದ್ದಿಯಾದಾಗ, ಹೀಗೆ ಬೀದಿ ಬದಿಯ ಲೈಂಗಿಕ ವೃತ್ತಿ ಮಹಿಳೆಯರು ಬಂಧಿತರಾಗುತ್ತಾರೆ. ಅವರು ಬಂಧಿತರಾದಾಗ ರಜೆಗಳಿದ್ದಲ್ಲಿ ನ್ಯಾಯಾಲಯಕ್ಕೆ ಒಪ್ಪಿಸಲು ಅಡ್ಡಿಯಾದಲ್ಲಿ ಎಲ್ಲವನ್ನು ಅಲ್ಲಲ್ಲೇ ಬಿಟ್ಟು ಸ್ಟೇಟ್ ಹೋಂನಲ್ಲಿಯೇ ನಿರ್ಲಿಪ್ತಳಾಗಲು ಹೆಣಗಾಡಬೇಕಾಗುತ್ತದೆ. ಹೀಗೆಯೇ ಪಿಂಪ್‌ಗಳು, ರೌಡಿಗಳು, ಬ್ರೋಕರ್‌ಗಳು ತಮ್ಮ ದಂಧೆಯನ್ನು ನಿರಾತಂಕವಾಗಿ ಮಾಡಿಕೊಳ್ಳಲು ಪೊಲೀಸ್ ಇಲಾಖೆಗೆ ಕಪ್ಪ ಕೊಡಲೇ ಬೇಕಾಗುತ್ತದೆ. ಇದೂ ಕೂಡ ಪರಸ್ಪರ ಒಪ್ಪಂದವೇ ಆಗಿರುತ್ತದೆ. ಕೆಲವೊಮ್ಮೆ ರೌಡಿಗಳೇ ಎಲ್ಲವನ್ನು ನಿಯಂತ್ರಿಸುತ್ತಿರುತ್ತಾರೆ. ಪೊಲೀಸರಿಗೆ ಸೌಹಾರ್ದವಾಗಿ ಬಿಡುವು ನೀಡಲು.

ನಮ್ಮ ದೇಶದ ಕಾನೂನು ಬಹಳ ವಿಚಿತ್ರವಾಗಿದೆ. ಇಂಥ ಸಂದರ್ಭಗಳಲ್ಲಿ ಕಾನೂನು ಪಾಲಕರಂತೂ ದಿಕ್ಕು ತಪ್ಪಿದ ತಲೆ ಹಿಡುಕರಾಗುತ್ತಾರೆ. ಈ ವ್ಯವಸ್ಥೆಯನ್ನು ಆಳುವವರೂ ಕೂಡ ಈ ದಂಧೆಯಲ್ಲಿ ಪಾಲುದಾರರು ಕೆಲವೊಮ್ಮೆ ಅವರೇ ಈ ದಂಧೆ ನಡೆಸುತ್ತಿರುತ್ತಾರೆ.

ಬೀದಿ ಬದಿಯ ಲೈಂಗಿಕ ವೃತ್ತಿ ಮಹಿಳೆಯರಂತೂ ಪೊಲೀಸರ ಮಾಮೂಲಿಯ ದಂಧೆಯ ಬಲಿ ಪಶುಗಳು. ತಾವೇನೋ ಮಾಡಬಾರದನ್ನು ಮಾಡುತ್ತಿದ್ದೇವೆ ಎಂಬ ಪಾಪ ಪ್ರಜ್ಞೆಯೊಂದಿಗೆ ಕ್ಷಣ ಕ್ಷಣವೂ ತವಕಿಸುತ್ತಿರುತ್ತಾಳೆ. ಇದೊಂದನ್ನೇ ಬಂಡವಾಳವಾಗಿಸಿಕೊಂಡ ಈ ಖಾಕಿಗಳು ಅವರನ್ನು ಸುಲಿದು ತಿನ್ನುತ್ತಾರೆ. ಅವಳಿಗೇನೋ ಪಾಪಪ್ರಜ್ಞೇ. ಕಾನೂನಿನ ಬಗ್ಗೆ ತನ್ನದೇ ಆದ ತಪ್ಪು ತಿಳುವಳಿಕೆಯಿಂದಿದ್ದಾಳೆ ಎಂದ ಮಾತ್ರಕ್ಕೆ ಈ ಕಾನೂನು ಪಾಲಕರಾದ ಖಾಕಿ ಸಮವಸ್ತ್ರ ಧಾರಿಗಳಿಗಾದರೂ ಕಾನೂನಿನ ಅರಿವಿಲ್ಲವೇ? ಅಥವಾ ಜಾಣ ಕುರುಡರಾಗಿ ದಂಧೆ ನಡೆಸುತ್ತಿದ್ದಾರೋ? ನನ್ನ ಅಧ್ಯಯನದ ಅನುಭವದಲ್ಲಿ ಅಧಿಕಾರಿಗಳಿಗೆ ಈ ಕಾನೂನಿಗೆ ಅರಿವಿದೆ. ಒಬ್ಬ ಹೆಣ್ಣು ಹೊಟ್ಟೆಪಾಡಿಗಾಗಿ ತನ್ನ ದೇಹವನ್ನೇ ಸರಕಾಗಿಸಿಕೊಂಡು ಬದುಕುವುದು ಅಪರಾಧವಲ್ಲ ಎಂಬ ತಿಳುವಳಿಕೆ (ITPA) ಮಾಮೂಲಿ ವಸೂಲಿ ಮಾಡುವ ಕಾನ್‌ಸ್ಟೇಬಲ್‌ಗಳಿಗೆ ಸ್ಪಷ್ಟವಿಲ್ಲ. ತಲೆಹಿಡಿಯುವುದು. ಸಾರ್ವಜನಿಕ ಪ್ರದೇಶಗಳಲ್ಲಿ ಅಸಭ್ಯವಾಗಿ ನಡೆದುಕೊಳ್ಳುವುದು, ಗಿರಾಕಿಗಳನ್ನು ಸೆಳೆಯುವ ನಿಟ್ಟಿನಲ್ಲಿ ವಿವಸ್ತ್ರಳಾಗುವುದು, ಗಿರಾಕಿಗಳನ್ನು ಉಪಯೋಗಿಸಿ (ವ್ಯವಹಾರ) ದಂಧೆ ನಡೆಸುವುದು ಅಪರಾಧ ಎನ್ನುವ ಕಾನೂನು ಮಾಹಿತಿ ಅರಬರೆಯಾಗಿ ಅರ್ಥೈಸಿಕೊಂಡು ಪರಂಪರಾನುಗತವಾಗಿ ಎಂಥದೋ ಒಂದು ಕುರುಡು ನಂಬಿಕೆಯಂತೆ, ತನ್ನ ಹಿರಿಯರು ಇದನ್ನೇ ಮಾಡಿರುವುದು, ನಾವೂ ಅದನ್ನೇ ಮುಂದುವರಿಸುತ್ತೇವೆ ಎನ್ನುವ ಹುಂಬತನದಿಂದಲೂ ಪೊಲೀಸ್ ಇಲಾಖೆ ಈ ವಿಚಾರದಲ್ಲಿ ನಡೆದುಕೊಳ್ಳುತ್ತಿದೆ. ಇದನ್ನೇ ಬಂಡವಾಳವಾಗಿಸಿಕೊಂಡ ಪೋಲೀಸರು ತಮ್ಮ ಲಾಟಿಬೂಟುಗಳಿಗೆ ಶಕ್ತಿ ತುಂಬುತ್ತಾರೆ.

ವೇಶ್ಯಾವಾಟಿಕೆ ಮತ್ತು ಆರ್ಥಿಕ ಸಂಬಂಧಗಳ ಪರಿಧಿಯಲ್ಲಿ ಒಟ್ಟಾರೆಯಾಗಿ ಗಮನಿಸಿದಾಗ ಪೋಲೀಸ್ ಇಲಾಖೆಗೆ ವಾರ್ಷಿಕವಾಗಿ ಕೋಟ್ಯಾಂತರ ರೂ.ಗಳ ''ಸಂಗ್ರಹವಾಗುತ್ತದೆ'' ನನ್ನ ಅಧ್ಯಯನದ ಅನುಭವದಲ್ಲಿ ಈ ವೃತ್ತಿಯಿಂದ ಭಾರತದಲ್ಲಿ ಅತಿ ಹೆಚ್ಚು ಲಾಭ ಪಡೆಯುತ್ತಿರುವ ಫಲಾನುಭವಿಗಳು ಪೊಲೀಸ್ ಇಲಾಖೆಯೆಂಬ ಜಾಲ!

ವೈದ್ಯರು ಮತ್ತು ಔಷಧಿಗಳೊಂದಿಗಿನ ಆರ್ಥಿಕ ಸಂಬಂಧಗಳು:

ಯಾಕೋ ಉಷ್ಣವಾಗೈತೆ ಅಂತ ಒಂದೆರಡು ಎಳನೀರು ಕುಡೀತಾರೆ. ಆದ್ರೆ ಲೈಂಗಿಕ ಸೋಂಕುಗಳು ಕಡಿಮೆಯಾಗೋದೆ ಇಲ್ಲ. ಉರಿ, ತುರಿತ, ನೋವುಗಳು ಹೆಚ್ಚಾಗುತ್ತವೆ. ಕೆಳಹೊಟ್ಟೆನೋವು, ಸೊಂಟನೋವು, ವಿಪರೀತ ರಕ್ತಸ್ರಾವ, ಅನಿಯಮಿತ ಋತುಚಕ್ರಗಳು, ಕಾಲುನೋವು, ಕಿಬ್ಬೊಟ್ಟೆನೋವು... ಇವುಗಳು ಲೈಂಗಿಕ ವೃತ್ತಿ ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಸಾಮಾನ್ಯವಾದ ಲೈಂಗಿಕ ಸೋಂಕಿನ ಲಕ್ಷಣಗಳು.

ಸಾಮಾನ್ಯವಾಗಿ ಈ ಮಹಿಳೆಯರು ಖಾಸಗಿ ವೈದ್ಯರಲ್ಲಿಗೇ ಹೋಗುತ್ತಾರೆ. ಈ ರೋಗ ಲಕ್ಷಣಗಳನ್ನು ಗುರುತಿಸಿದ ಬೆನ್ನಲ್ಲೇ ಆ ವೈದ್ಯರುಗಳು ಈ ಮಹಿಳೆಯರ ಬಗ್ಗೆಯೂ ಗುಮಾನಿ ಶುರು ಮಾಡುತ್ತಾರೆ. ಹೇಗೋ ಇದರಿಂದ ಪಾರಾಗುವ ತವಕ ಅವಳದ್ದು. ಅನೈತಿಕವಾಗಿ ಬೇಕಾದಷ್ಟು ಸಂಪಾದಿಸುತ್ತಾರೆ. ಅನೈತಿಕವಾಗಿ ಅನ್ನೋ ಒಳಸುಳಿ ವೈದ್ಯರದ್ದು. ಇಂತಹ ಹೆಣ್ಣುಗಳನ್ನು ಪರೀಕ್ಷಿಸಿದ್ದಕ್ಕಾಗಿ, ಚಿಕಿತ್ಸೆ ನೀಡಿದ್ದಕ್ಕಾಗಿ ೨ ಪಟ್ಟು, ೪ ಪಟ್ಟು ಹಣ ವಸೂಲಿ ಮಾಡುತ್ತಾರೆ. ಪೊಲೀಸರ ನಂತರ ಈ ದಂಧೆಯ ಫಲಾನುಭವಿಗಳಲ್ಲಿ ಈ ವೈದ್ಯರುಗಳೂ ಹಾಗೂ ಔಷಧಿ ತಯಾರಕರುಗಳೂ ಸೇರುತ್ತಾರೆ. ಸಾಮಾನ್ಯವಾಗಿ ಔಷಧಿಗಳನ್ನು ಹೊರಗೆ ಕೊಂಡುಕೊಳ್ಳಲು ಆದೇಶಿಸುತ್ತಾರೆ. ಹೀಗೆ ಸಾಮಾನ್ಯವಾಗಿ ೨ ಅಥವಾ ೩ ತಿಂಗಳಿಗೊಮ್ಮೆ ವೈದ್ಯರಲ್ಲಿಗೆ ಹೋಗುತ್ತಾರೆ. ಅವರು ಆದೇಶಿಸಿದ ಔಷಧಿಗಳಿಗೆ ಅಂದಾಜು ೨೫೦ ರಿಂದ ೪೦೦ ರೂ.ಗಳವರೆಗೆ ಕೊಡುತ್ತಾಳೆ. ಎಷ್ಟೇ ಸರ್ಕಾರಿ ಆಸ್ಪತ್ರೆಗಳಿದ್ದರೂ ಅಲ್ಲಿಯ ಸಿಬ್ಬಂದಿ ಮತ್ತು ವೈದ್ಯರುಗಳ ವರ್ತನೆಗಳಿಂದಾಗಿ ಈ ಮಹಿಳೆಯರು ಖಾಸಗಿ ವೈದ್ಯರನ್ನೇ ಅವಲಂಬಿಸುತ್ತಾರೆ.

ಸರ್ಕಾರಿ ವೈದ್ಯರುಗಳೂ ಕೂಡ ಈ ಗುಮಾನಿಯಿಂದಲೇ ಹಣ ವಸೂಲಿ ಮಾಡುತ್ತಾರೆ. ಅದಕ್ಕಿಂತಲೂ ಹೆಚ್ಚಾಗಿ ಅಲ್ಲಿ ಕ್ಯೂ ನಿಲ್ಲುವುದು, ಕಾಯುವುದು, ಅವರ ಹೀಯಾಳಿಕೆ ಅನುಭವಿಸುವುದು ಸಹಿಸಲಸಾಧ್ಯ ಎನ್ನುತ್ತಾರೆ ಈ ಮಹಿಳೆಯರು. ಚಿಕಿತ್ಸೆ ನೀಡುವ, ಸುಲಭವಾಗಿ ಹೊರಬರಬಹುದಾದ ಖಾಸಗಿ ಹಣ ಹೆಚ್ಚಾದರೂ ವೈದ್ಯರೇ ಇವರುಗಳಿಗೆ ಸಹ್ಯ. ಇವತ್ತಿನ ಪರಿಸ್ಥಿತಿಗಂತೂ ಈ ಅಂಕಿ ಸಂಖ್ಯೆಗಳು ಅಂದಾಜನ್ನು ಮೀರಿ ನಿಲ್ಲುತ್ತವೆ. ಎಚ್.ಐ.ವಿ. ಸೋಂಕು ಮತ್ತು ಅದರ ಸುತ್ತಲಿನ ದೈಹಿಕ ಮಾನಸಿಕ ತುಮುಲಗಳು, ನೋವು ಸಂಕಟಗಳೂ ಕೂಡ ಈ ಮಹಿಳೆಯರ ಬದುಕಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಎಚ್.ಐ.ವಿ ನಿಯಂತ್ರಣಕ್ಕೆ ಸರ್ಕಾರ ಹಾಗೂ ವಿದೇಶಿ ಸಂಸ್ಥೆಗಳು ಹೆಣಗಾಡಿದರೂ ಎಲ್ಲ ಲೆಕ್ಕಚಾರಗಳನ್ನು ಬುಡಮೇಲು ಮಾಡಿ

ಈ ಸೋಂಕು ಹರಡುತ್ತಿದೆ. ಹೀಗೆ ಆರೋಗ್ಯಕ್ಕಾಗಿ ಒಬ್ಬ ಮಹಿಳೆ ವಾರ್ಷಿಕವಾಗಿ ಅಂದಾಜು ೬೦೦೦ ದಿಂದ ೮೦೦೦ ರೂ.ಗಳಷ್ಟನ್ನು ವ್ಯಯಿಸುತ್ತಾಳೆ.

ಉಡುಗೆ ತೊಡುಗೆ- ಅಲಂಕಾರ ಸಾಮಗ್ರಿಗಳು ಮತ್ತು ಲೆಕ್ಕಾಚಾರ:

ಸಾಮಾನ್ಯವಾಗಿ ವೇಶ್ಯಾಗೃಹಗಳಲ್ಲಿರುವ ಮಹಿಳೆಯರು ವಸ್ತುಗಳನ್ನು ಕಂತಿನಲ್ಲಿ ಕೊಡುವ ಬಹುತೇಕ ಬಟ್ಟೆಗಳನ್ನು ಕೊಂಡು ಕೊಳ್ಳುತ್ತಾರೆ. ಕಂತಿನಲ್ಲಿ ಕೊಡುವುದರಿಂದ ಆ ವಸ್ತುವಿಗಿರುವ ಬೆಲೆಗಿಂತ ಹೆಚ್ಚು ಬೆಲೆ ಇಟ್ಟರೂ ಅನಿವಾರ್ಯವಾಗಿ ಆ ಬೆಲೆಯನ್ನು ತೆರುತ್ತಾರೆ. ಒಟ್ಟಾರೆ ಸಾಲ ಸಿಕ್ಕವರೆ ಸಾಕು ಎನ್ನುವಂತೆ ಬೇಕಾದ್ದನ್ನು ಕೊಂಡುಕೊಳ್ಳುತ್ತಾರೆ. ಬೀದಿಬದಿಯ ಮಹಿಳೆಯರೂ ಕೂಡ ತಾವು ಬಂದು ನಿಲ್ಲುವ ಸ್ಥಳಗಳ ಸುತ್ತಮುತ್ತಲಿನ ಮಾರ್ಕೆಟ್ ಪ್ರದೇಶದಲ್ಲಿಯೂ ವ್ಯಾಪಾರಸ್ಥರಿಂದ ಸಾಲವಾಗಿ ಪಡೆಯುತ್ತಾರೆ. ಇಲ್ಲಿಯೂ ಅವರು ಹೇಳಿದ್ದೇ ಬೆಲೆ. ಸಾಮಾನ್ಯವಾಗಿ ಈ ಮಹಿಳೆಯರು ಅವರಿಗೆ ಪರಿಚಿತರೇ ಆಗಿರುತ್ತಾರೆ. ಈ ರೀತಿಯಲ್ಲಿ ಒಬ್ಬ ಮಹಿಳೆ ವಾರ್ಷಿಕವಾಗಿ ಸುಮಾರು ೧೦,೦೦೦ ರೂ.ಗಳನ್ನು ವ್ಯಾಪಾರಿಗಳಿಗೆ ಕೊಡುತ್ತಾರೆ. ಅದರಲ್ಲಿ ಬಡ್ಡಿಯೇ ಸುಮಾರು ೬,೦೦೦ ದಷ್ಟಿರುತ್ತದೆ. ೯೫.೯೬ ರಲ್ಲಿಯ ರಾಷ್ಟ್ರೀಯ ಮಹಿಳಾ ಆಯೋಗದ ವರದಿಯಲ್ಲಿ ನೀಡಿರುವ ವಿವರದ ಪ್ರಕಾರ ಒಬ್ಬ ಮಹಿಳೆ ಈ ಸಾಲಕ್ಕೆ ಬಡ್ಡಿರೂಪದಲ್ಲಿ ೧೪೪%ಷ್ಟನ್ನು ತೆರುತ್ತಾಳೆ. ಹಾಗೆಯೇ ವಾರ್ಷಿಕ ೨೫೦೦ ರೂ. ಸಾಲ ಪಡೆದರೆ ೪೦೦೦ ರೂ.ಗಳಷ್ಟನ್ನು ಬಡ್ಡಿಯಾಗಿ ಕೊಡುತ್ತಾಳೆ. ಈ ರೀತಿಯಲ್ಲಿ ಆ ಸಮುದಾಯ ತೆರುವ ಬಡ್ಡಿರೂಪದ ವಹಿವಾಟು ಸುಮಾರು ೧೫ ಕೋಟಿಗಳಷ್ಟಿದೆ. ಬೆಲೆಗಳ ಏರಿಕೆ, ಕೊಳ್ಳುವ ಸಾಮರ್ಥ್ಯ, ರೂಪಾಯಿಯ ಮೌಲ್ಯ ಕುಸಿತ ಈ ಎಲ್ಲಾ ಹಿನ್ನೆಲೆಯಲ್ಲಿ ಪಸ್ತುತ ಈ ನಿಟ್ಟಿನ ಹಣದ ವಹಿವಾಟು ಹೆಚ್ಚಿಸಿದೆ.

ಈ ಬಡ್ಡಿ ವಹಿವಾಟು ವಸ್ತುಗಳನ್ನು ಕೊಳ್ಳಲಷ್ಟೇ ಸೀಮಿತವಾಗಿರದೆ ಇದರ ವಿಸ್ತಾರ ಬಹಳ ದೊಡ್ಡದಿದೆ. ಹಿಂದೆ ಮಾಡಿದ ಸಾಲ ತೀರಿಸಲು ಮತ್ತೆ ಸಾಲ ಮಾಡುತ್ತಾರೆ. ಆ ಸಾಲವೂ ಪೂರ್ತಿ ತೀರದೆ ಹೊಸ ಸಾಲವೂ ಸೇರ್ಪಡೆಯಾಗುತ್ತದೆ. ಅನಾರೋಗ್ಯವಾದಾಗ, ನ್ಯಾಯಾಲಯಕ್ಕೆ ದಂಡತೆರಲು, ಕೆಲವೊಮ್ಮೆ ಪೊಲೀಸರಿಗೆ ನೀಡಲು, ಮಕ್ಕಳಿಗಾಗಿ, ಅವಲಂಬಿತರಿಗಾಗಿ ಕುಟುಂಬದವರ ನಿರೀಕ್ಷೆಗಳನ್ನು ಪೂರೈಸಲು, ಹೆರಿಗೆ ಸಮಯದಲ್ಲಿ, ಗಿರಾಕಿಗಳು ಸಿಗದಿದ್ದಾಗ.... ಹೀಗೆ ಅವಳು ಸಾಲ ಪಡೆಯಲೇ ಬೇಕಾದ ಅನಿವಾರ್ಯಗಳು ಸಾವಿರ ಇರುತ್ತವೆ.

ಅದರಲ್ಲಿ ಬೀದಿ ಬದಿಯ ಮಹಿಳೆಗಂತೂ ಇವು ಅನಿವಾರ್ಯ. ಇವರಿಗೆ ಸಾಲವನ್ನಾದರೂ ಯಾರು ಕೊಡುತ್ತಾರೆ? ಯಾವ ಗ್ಯಾರಂಟಿಯಲ್ಲಿ ಇವರಿಗೆ ಸಾಲ ಕೊಡುತ್ತಾರೆ?

ಇವರಿಗೆ ಸಾಲ ಕೊಡುವ, ಪಡೆಯುವ ದಂಧೆಯನ್ನೇ ಜೀವನಾಧಾರವಾಗಿಸಿಕೊಂಡಿರುವ ಒಂದು ಜಾಲವೇ ಇದೆ. ಸಾಮಾನ್ಯವಾಗಿ ಪರ್ಕಿಗಳು, ರೌಡಿಗಳು, ಬ್ರೋಕರ್‌ಗಳು, ಬಾಡಿಗೆ ಗಂಡಂದಿರು,

ಈ ಲೀಲಾದೇವಿ ನಡೆಸುತ್ತಾರೆ. ಇವರುಗಳಿಗೆ ಈ ಮಹಿಳೆಯರು ಪರಿಚಿತರೂ, ಒಡನಾಡಿಗಳೂ ಆಗಿರುತ್ತಾರೆ. ಮಹಿಳೆಯರು ಬಂಧನಕ್ಕೊಳಗಾದಾಗ ದಂಡ, ಮಾಮೂಲಿ ಕೊಟ್ಟು ಬಿಡಿಸಿರುತ್ತಾರೆ. ಈ ಮಹಿಳೆಯರಿಗೆ ಅಗತ್ಯ ವಿದ್ದಾಗಲೆಲ್ಲ ಆಪದ್ಬಾಂದವರಂತೆ ಇರುತ್ತಾರೆ. ಆದರೆ ಸಾಲಗಾರನಿಗೆ ಲೈಂಗಿಕ ವೃತ್ತಿ ಮಹಿಳೆಯ ಬಗ್ಗೆ ಇರುವ ಒಂದೇ ಗ್ಯಾರಂಟಿ ಅವರ ವೃತ್ತಿ ಇವರ ಸಾಲ ತೀರಿಸಲಾದರೂ ಅವರು ವೃತ್ತಿಗೆ ಬರಲೇ ಬೇಕು. ಹಣ ವಸೂಲಿಗೆ ವ್ಯಾಪಾರ ಕುದುರಿಸುವುದರಿಂದ ಅವಳು ಸೀರೆ ಕೊಡವಿಕೊಂಡು ಹಿಂತಿರುಗಿ ಬರುವವರೆಗೂ ಕಾದಿರುತ್ತಾರೆ. ರೂಮಿನೊಳಗೇ ಒಂದಷ್ಟು ದುಡ್ಡನ್ನು ಎದೆಯೊಳಗೆ ತುರುಕಿ ಒಂದರ್ಧದಷ್ಟನ್ನು ತಂದು ಸಾಲಗಾರನಿಗೆ ಒಪ್ಪಿಸುತ್ತಾಳೆ. ಒಂದಷ್ಟು ಗಿಲುಬಿಕೊಂಡು ಸಾಲಗಾರ ಮತ್ತೆ ಬರುವ ಗಿರಾಕಿಗೆ, ಇನ್ನಾವುದೋ ಸಾಲ ವಸೂಲಿಗೆ ನಿಲ್ಲುತ್ತಾನೆ. ಇದು ಮುಗಿಯಲಾರದ ಸಾಲ. ಬಡ್ಡಿ ಮತ್ತು ಅಸಲು ಏರುತ್ತಲೇ ಹೋಗುತ್ತಿರುತ್ತದೆ. ಇದು ಎಲ್ಲಿಗೆ ಕೊನೆಯಾಗುತ್ತದೋ ತಿಳಿಯದು.

ಇನ್ನು ದಿನನಿತ್ಯದ ಖರ್ಚುಗಳು ಇವಳನ್ನು ಎಳೆದಾಡುತ್ತಲೇ ಇರುತ್ತವೆ. ಕುಡಿಯಲು, ಕುಡಿದು ಮೈಮರೆಯಲು, ಮೈ-ಮನಗಳನ್ನು ಮರೆತು ಗಿರಾಕಿಗಳಿಗೆ ತನ್ನನ್ನು ಸರಕಾಗಿಸಲು ಹೆಣಗಾಡುತ್ತಲೇ ಇರುತ್ತಾಳೆ. ಕೆಲವೊಮ್ಮೆ ಗಿರಾಕಿಗಳೇ ಇವರಿಗೆ ಕುಡಿಸುತ್ತಾರೆ. ಊಟ ಕೊಡಿಸುತ್ತಾರೆ. ಇದರ ಜೊತೆಗೆ ಸದಾ ಜಗಿಯುತ್ತಲೇ ಹಗಲು-ರಾತ್ರಿಗಳನ್ನು ಉರುಳಿಸಲು ಪಾನ್ ಪರಾಗ್, ಮಾಣಿಕ್‌ಚಂದ್... ಬೇಕೇ ಬೇಕು. ಸಾಮಾನ್ಯವಾಗಿ ಒಬ್ಬ ಮಹಿಳೆ ದಿನವೊಂದಕ್ಕೆ ೧೦-೧೫ ಮಾಣಿಕ್ ಚಂದ್ ಅಥವಾ ಅದೇ ತರಹದ ಪೊಟ್ಟಣಗಳಿಗೆ ಸುಮಾರು ೨೫ ರಿಂದ ೩೫ ರೂ.ಗಳನ್ನು ಖರ್ಚುಮಾಡುತ್ತಾಳೆ. ಸುಮಾರು ತಿಂಗಳಿಗೆ ೭೫೦-೧೦೫೦ ರವರೆಗೂ ವ್ಯಯಿಸುತ್ತಾಳೆ.

ತನಗಾಗಿ ಕಾಯುತ್ತಿರುವ ಮಕ್ಕಳು, ಮರ್ಜಿಯಲ್ಲಿ ಬೇರೆ ಯಾರದ್ದೋ ಹಂಗಿಗೆ ಬಿಟ್ಟು ಬಂದ ತಪ್ಪಿಗೆ, ತನಗೆ ಖುಷಿಯಾದಾಗ, ಹಣಅಥವಾ ಸಾಲದಕ್ಕಿದ್ದಾಗ, ತಾನು ಹೆಚ್ಚು ಗಮನ ಕೊಡಲು ಸಾಧ್ಯವಾಗುತ್ತಿಲ್ಲ ಎನ್ನುವ ಗಿಲ್ಟ್ ಕಾಡಿದಾಗ, ಗಿರಾಕಿಗಳು ಹೋಗುವವರೆಗೂ ಹೊರಗೆ ಆಟವಾಡಿಕೊಂಡೋ, ಕಾಯ್ದುಕೊಂಡೋ ಇರುವ ಮಕ್ಕಳನ್ನು ಸಂತೈಸುವಾಗ, (ಸಾಮಾನ್ಯವಾಗಿ ಇದು ವೇಶ್ಯಾ ಗೃಹಗಳಲ್ಲಿರುವ ತಾಯಂದಿರಿಗೆ) ಮಕ್ಕಳಿಗಾಗಿ ತನ್ನ ದುಡಿಮೆಯ ಒಂದಿಷ್ಟನ್ನು ಪೂರೈಸುತ್ತಾಳೆ. ಇಷ್ಟೆಲ್ಲಾ ಮಾಡುವ ಇವಳ ಅರಾಜಕ ಮನಸ್ಸಿಗೆಂದೂ ಮಕ್ಕಳಿಗಾಗಿ ಉಳಿತಾಯ ಮಾಡುವ ಸಾಧ್ಯತೆಯೇ ಕಡಿಮೆ. ಆಸೆಯಿದ್ದರೂ ಸಾಧ್ಯವಾಗದಷ್ಟು ಅವಳ ಪರಿಸ್ಥಿತಿಗಳು ಅವಳನ್ನು ಹಿಡಿದಿಟ್ಟು ಬಿಡುತ್ತವೆ. ಕೆಲವೊಮ್ಮೆ ಮಕ್ಕಳನ್ನು ಶಾಲೆಗೆ ಸೇರಿಸಲೂ ಹೆಣಗಾಡುತ್ತಿರುತ್ತಾಳೆ. ಬಹುತೇಕ ವೇಳೆ ಈ ಮಕ್ಕಳು ಅವಳ ಬದುಕಿನೊಂದಿಗೆ ಸಾಮಾನ್ಯ ಮಗುವಾಗಿ ಬದುಕು ರೂಪಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. (ಈ ಬಗ್ಗೆ ಮುಂದೆ ವಿವರಿಸುತ್ತೇನೆ)

ಇನ್ನು ಬೀದಿ ಬದಿಯ ಲೈಂಗಿಕ ವೃತ್ತಿ ಮಹಿಳೆಯರು ಬಾಡಿಗೆ ಗಂಡಂದಿರೆಂಬ ದಂಡಪಿಂಡಗಳನ್ನು ಸಾಕುವುದೂ ಕೂಡ ಪ್ರಯಾಸವೇ. ಕುಡಿತ, ಊಟ, ಲೈಂಗಿಕ ಸೇವೆ ಎಲ್ಲವೂ ಉಚಿತ. ಕೆಲವೊಮ್ಮೆ ಇವನೇ

ಗಿರಾಕಿಗಳನ್ನು ಹೊಂಚಿ ತಲೆ ಹಿಡಿಯುತ್ತಾನೆ. ಮುಂದಿನ ಭವಿಷ್ಯದ ಕನಸುಗಳ ಗೋಪುರಗಳನ್ನು ಅಡಿಪಾಯ ವಿಲ್ಲದೆ ಕಟ್ಟುತ್ತಾನೆ. ತನ್ನದು ಒಂದು ಕುಡಿ ಬೇಕೇ ಬೇಕೆಂದು ರಮಿಸಿ ಅವಳ ಗರ್ಭ ತುಂಬುತ್ತಾನೆ. ಅವಳು ದುಡಿದಿದ್ದರಲ್ಲಿ ಚೀಟಿ ಹಾಕಿಸಿ, ಸಾಲ ತೆಗಿಸಿ ಅವನ ಹೆಸರಿಗೆ ಆಟೋ ತೆಗೆಯುತ್ತಾನೆ. ಬಾಡಿಗೆಗೆ ಬಿಟ್ಟರೂ ಪ್ರತಿ ದಿನ ೨೦೦ ರೂ. ದುಡಿಯಬಹುದು, ನಂತರ ನೀನು ಈ ದಂಧೆ ಬಿಟ್ಟು ನಾವಿಬ್ಬರೂ ಸುಖವಾಗಿರಬಹುದು ಅಂತ ನಂಬಿಸುತ್ತಾನೆ.

ಆ ಕನಸುಗಳ ಸಂಭ್ರಮದಲ್ಲಿ ತಳಪಾಯವಿಲ್ಲದಿರುವುದನ್ನು ಅವಳು ಗಮನಿಸುವುದೇ ಇಲ್ಲ. ತಾನೂ ಕುಟುಂಬದ ಚೌಕಟ್ಟಿನಲ್ಲಿ ಬದುಕಬಹುದೆಂಬ ಭ್ರಮೆಯಲ್ಲಿ ಬಾಡಿಗೆ ಗಂಡನ ಅಥವಾ ಬೂಟಾಟಿಕೆ ಪ್ರೇಮಿ ಯು ಹೆಣೆದ ಬಲು ದೊಡ್ಡ ಹಣದ ಬಲೆಯಲ್ಲಿ ಬಿದ್ದಿರುತ್ತಾಳೆ. ಎಲ್ಲವನ್ನು ವ್ಯವಸ್ಥಿತವಾಗಿ ಯೋಜಿಸಿ ಒಂದೆರಡು ವರ್ಷಗಳು ನಾಟಕವಾಡಿ ಹಾಗೆಯೇ ತೆರೆಯಿಂದ ಸರಿಯುತ್ತಾನೆ. ಹೋಗುವಾಗ ಇವಳಿಗೆ 'ಸೂಳೆ' ಪಟ್ಟಕಟ್ಟಿ ಪಡೆದ ಎಲ್ಲವನ್ನು ಹಾಗೆಯೇ ಕೊಂಡೊಯ್ಯುತ್ತಾನೆ. ಇವಳು ಮತ್ತೆ ನಾಟಕದ ಸೂತ್ರದಾರಿಗೆ ಹುಡುಕಾಟ ನಡೆಸುತ್ತಾಳೆ !

ಕೆಲವೊಮ್ಮೆ ನಿಜವಾದ ಗಂಡಂದಿರೇ ಅಪ್ಪ ಅಮ್ಮಂದಿರೇ, ಕುಟುಂಬದವರೇ ಇವಳಿಂದ ಎಲ್ಲ ನಿರೀಕ್ಷೆಗಳನ್ನು ಪೂರೈಸಿಕೊಳ್ಳುತ್ತಿರುತ್ತಾರೆ. ಎಲ್ಲವೂ ತಿಳಿದು ಮೂಕರಾಗಿ/ ಕುರುಡರಾಗಿ ಅವಳನ್ನು ಅವಲಂಬಿಸಿಬಿಡುತ್ತಾರೆ.

ಇದರೊಟ್ಟಿಗೆ ಗಣೇಶನ ಉತ್ಸವಕ್ಕೆ, ಹಬ್ಬ ಹರಿದಿನಗಳಿಗೆ, ಅಯ್ಯಪ್ಪನ ಭಕ್ತರಿಗೆ, ದೇವರುಗಳಿಗೆ ಹರಕೆ ತೀರಿಸಲು, ರಾಜ್ಯೋತ್ಸವಕ್ಕೆ, ಮಾಟ-ಮಂತ್ರಗಳಿಗೆ ಮುಂತಾದವುಗಳಿಗೆ ಸರಾಸರಿ ವಾರ್ಷಿಕ ಪ್ರತಿ ಮಹಿಳೆ ೧೦೦೦ ದಿಂದ ೫೦೦೦ ದವರೆಗೂ ನೀಡುತ್ತಾಳೆ.

ಇನ್ನು ಬ್ರೋಕರ್‌ಗಳಿಗೆ ಪಿಂಪ್‌ಗಳಿಗೆ, ರೂಮ್ ಬಾಯ್‌ಗಳಿಗೆ ಎಂತಲೇ ದಿನಕ್ಕೆ ಒಬ್ಬ ಮಹಿಳೆ ಸರಾಸರಿ ೫೦-೧೦೦ ರೂ ಕೊಡುತ್ತಾಳೆ. ವಾರ್ಷಿಕ ೧೮,೦೦೦ ರಿಂದ ೩೬,೦೦೦ ದವರೆಗೂ ವ್ಯಯಿಸುತ್ತಾಳೆ.

ಇನ್ನು ವೇಶ್ಯಾಗೃಹಗಳ ಲೆಕ್ಕಾಚಾರವೇ ಬೇರೆ. ಅಲ್ಲಿ ಮೇಡಂ ಅಥವಾ ಘರ್‌ವಾಲಿ ಇರುತ್ತಾಳೆ. ಅವಳು ಬೆಲೆ ನಿಗಧಿಪಡಿಸುತ್ತಾಳೆ. ಮೊದಲೇ ನಿಗಧಿಯಾದಂತೆ ಅದರಲ್ಲಿ ಅರ್ಧಘರ್‌ವಾಲಿಗೆ, ಇನ್ನರ್ಧ ಲೈಂಗಿಕ ವೃತ್ತಿ ಮಹಿಳೆಗೆ. ದಿನದಲ್ಲಿ ಅವಳಿಗೆ ಎಷ್ಟು ಗಿರಾಕಿಗಳು ಬಂದರೂ ಇದೇ ಲೆಕ್ಕ. ಅರ್ಧ ಆ ಹಣದಲ್ಲಿ ಘರ್‌ವಾಲಿ ಅವರಿಗೆ ಸ್ಥಳ, ರಕ್ಷಣೆ, ಗಿರಾಕಿ ಹೊಂಚುವ ಕಾರ್ಯತಂತ್ರ ಮಾಡುತ್ತಾಳೆ. ಕೆಲವೊಮ್ಮೆ ಊಟ ಉಚಿತ. ಕೆಲವೊ ಮ್ಮೆ ಊಟಕ್ಕೆ ಪ್ರತ್ಯೇಕ ವಜಾ ಮಾಡುತ್ತಾಳೆ. ಹೀಗೇ ದುಡಿದ ಹಣವನ್ನು ಲೈಂಗಿಕವೃತ್ತಿ ಮಹಿಳೆಯು ತಿಂಗಳಿಗೆ ೨ ತಿಂಗಳಿಗೊಮ್ಮೆ, ಅಥವಾ ಅವಳು ಹೊರಡುವಾಗ ಪಡೆಯುತ್ತಾಳೆ. ಆದರೆ ಬಹುತೇಕ ಸಂದರ್ಭಗಳಲ್ಲಿ ಇದರಲ್ಲಿ ಮೋಸ ನಡೆಯುತ್ತಲೇ ಇರುತ್ತದೆ. ಘರ್‌ವಾಲಿ ಅವಳ ಹಣಕ್ಕೆ ನಾಮ ಹಾಕಲು ಹೆಣಗಾಡುತ್ತಲೇ

ಇರುತ್ತಾಳೆ. ಹಣ ಕೊಡದಂತೆ ಎಳೆದಾಡಿ ಅವಳು ಬಿಟ್ಟು ಹೋಗಲೂಬಾರದು. ಇರಲೂ ಬಾರದು ಎನ್ನುವ ದ್ವಂದ್ವಕ್ಕೆ ದೂಡುತ್ತಾಳೆ.

ಆದರೆ ಇವಳಿಗೆ ಚಳ್ಳಣ್ಣೆ ತಿನ್ನಿಸಿ ಗಿರಾಕಿಯ ಹತ್ತಿರ ಈ ಹುಡುಗಿಯರು ಟಿಪ್ಸ್ ಪಡೆದಿರುತ್ತಾರೆ. ವೇಶ್ಯಾವಾಟಿಕೆ- ವೇಶ್ಯಾವೃತ್ತಿಯೊಂದಿಗಿನ ಆರ್ಥಿಕ ಸಂಬಂಧದ ಈ ಎಲ್ಲಾ ಒಳಸುಳಿಗಳು ಆ ಸಮುದಾಯದೊಂದಿಗೆ ಹತ್ತು ವರ್ಷಗಳ ನನ್ನ ಅಧ್ಯಯನದ ಮೂಸೆಯಿಂದ ಹೆಕ್ಕಿ ತೆಗೆದವುಗಳು. ಕರ್ನಾಟಕದ ಬಹುತೇಕ ಎಲ್ಲ ಪ್ರದೇಶಗಳೂ ಇದರೊಳಗೆ ಅಡಗಿವೆ. ಮೈಸೂರಿನಂತಹ ಪ್ರವಾಸಿಗರ ಐತಿಹಾಸಿಕ ತಾಣ ಹಾಗೂ ಪ್ರಸಿದ್ಧಿ ಪಡೆದ ಜಿಲ್ಲಾ ಕೇಂದ್ರದ, ಹಾಸನದ ಶಿರಾಡಿಘಾಟಿನ ದಟ್ಟ ಕಾಡುಗಳ ನಡುವೆ ಲೈಂಗಿಕವೃತ್ತಿ ನಡೆಸುವ, ಅರಸೀಕೆರೆಯಂತಹ ತಾಲೂಕುಕೇಂದ್ರಗಳ ವೇಶ್ಯಾಗೃಹಗಳ, ಕೋಲಾರದ ಅಂತರಗಂಗೆ ತಪ್ಪಲು, ಮುಳಬಾಗಿಲಿನ ಬೆಟ್ಟಗುಡ್ಡಗಳ ಸಂದಿಗೊಂದಿಗಳ, ಹುಣಸೂರಿನಂತಹ ಬಟಾಬಯಲಿನ, ತುಮಕೂರಿನ ಕೆರೆ ಏರಿಯ ವ್ಯೂ ಇರುವ ಗೋಡೌನ್‌ಗಳ, ಶಿವಮೊಗ್ಗದ ನೆಹರೂ ರಸ್ತೆಯ ಮಿಂಚು ಮಿಂಚುಗಳ, ಮಂಡ್ಯದಲ್ಲಿರುವ ಈ ವೃತ್ತಿಗೆ ಸಂಬಂಧಿಸಿದಂತೆ ಐತಿಹಾಸಿಕವಾಗಿರುವ ಹಾಳು ಬಿದ್ದಿರುವ ಪಿ.ಪಿ. ನಗರದ ಪಳೆಯುಳಿಕೆಗಳ, ಉತ್ತರ ಕರ್ನಾಟಕದ ವೇಶ್ಯಾಗೃಹಗಳ, ಧಾರ್ಮಿಕ ವೇಶ್ಯಾವೃತ್ತಿಯ ಹೆಸರಲ್ಲಿ ಬೀದಿಪಾಲಾಗಿರುವ ದೇವರ ಮಕ್ಕಳ, ರಾಷ್ಟ್ರೀಯ ಹೆದ್ದಾರಿಗಳ ಡಾಬಗಳಲ್ಲಿರುವ ಬಳುಕುವ ಹೆಣ್ಣುಗಳ, ಹಾಗೂ ರಾಜಧಾನಿ-ಗಾರ್ಡನ್ ಸಿಟಿ ಬೆಂಗಳೂರಿನ ಬೇರೆ ಬೇರೆ ಮಜಲುಗಳ, ಮೆಜೆಸ್ಟಿಕ್ ಪ್ರದೇಶದ ಮನರಂಜನೆಯ ಕೇಂದ್ರ, ಮಾರ್ಕೆಟ್‌ನ ರೈತಾಪಿ ಗಿರಾಕಿಗಳ, ಶಿವಾಜಿನಗರದ ಚರ್ಚ್, ಮಸೀದಿಗಳನ್ನು ಬಿಡದ ಸಂಪರ್ಕ ಸ್ಥಳಗಳ, ಕೆ.ಆರ್.ಪುರಂ ನಲ್ಲಿರುವ ಕುಶಾಲಮ್ಮನ ಲೋಟೆಕ್ ವೇಶ್ಯಾಗೃಹದಿಂದ ಹಿಡಿದು ಆರ್.ಟಿ. ನಗರದ ಲತಾಳ ಹೈಟೆಕ್ ವೇಶ್ಯಾಗೃಹಗಳ, ಮನೆಯಲ್ಲಿರುವ ಸ್ಥಳವನ್ನು ಮಾತ್ರ ಗಂಟೆ ಬಾಡಿಗೆಗೆಕೊಟ್ಟು ದೇಹವನ್ನು ಇಮ್ಮಡಿಯಾಗಿಸಿ ಕೊಂಡಿರುವ ಡಬ್ಬಲ್ ರೋಡಿನ ತಲೆಹಿಡುಕ ಮನೆಗಳ, ಥಿಯೇಟರ್ ಒಳಗಿನ ಕತ್ತಲು-ಬಣ್ಣ-ಬೆಳಕಿನಲ್ಲೇ ಬೆತ್ತಲೆಯಾಗುವ... ಹೀಗೆ ಈ ಎಲ್ಲ ಆಯಾಕಟ್ಟಿನ ಬೀದಿಬದಿಯ, ವೇಶ್ಯಾಗೃಹಗಳ. ಲಾಡ್ಜ್‌ಗಳ, ಡಾಬಾಗಳ ಆಶ್ರಯಗಳಲ್ಲಿ ಲೈಂಗಿಕ ವೃತ್ತಿ ನಡೆಸುತ್ತಿರುವ ಸಾವಿರಾರು ಲೈಂಗಿಕ ವೃತ್ತಿ ಮಹಿಳೆಯರೊಂದಿಗೆ ಹಾಗೂ ನೂರಾರು ವೇಶ್ಯಾವಾಟಿಕೆಗಳೊಂದಿಗೆ ತೊಡಗಿಸಿ ಕೊಂಡಿರುವ ಲೈಂಗಿಕ ವೃತ್ತಿ 'ಮಹಿಳೆಯರ' ಬದುಕನ್ನು ಸುಮಾರು ಹತ್ತು ವರ್ಷಗಳಿಂದ ನಡೆಸಿದ ಅಧ್ಯಯನದಿಂದ ವಿಚಾರಗಳನ್ನು ಹೆಕ್ಕಿ ತೆಗೆಯಲಾಗಿದೆ.

ವೇಶ್ಯಾವಾಟಿಕೆ, ವೇಶ್ಯಾವೃತ್ತಿ ಮತ್ತು ಆರ್ಥಿಕ ಸಂಬಂಧಗಳು ಎನ್ನುವಾಗಲೇ ಈ ಮೇಲಿನ ಎಲ್ಲಾ ವಿಚಾರಗಳೂ ಹರವಿಕೊಂಡರೂ ಹಲವಾರು ಪ್ರಶ್ನೆಗಳು ಕಾಡುತ್ತಲೇ ಇವೆ.

ಒಬ್ಬ ಲೈಂಗಿಕ ವೃತ್ತಿ ಮಹಿಳೆಯ ಸುತ್ತ ಅದೆಷ್ಟು ಹಣದ ವಹಿವಾಟು, ಅದೆಷ್ಟು ಗೋಜಲುಗಳು, ಹೊರೆಗಳು,

ಹೊಣೆಗಳು, ಸಂಚಾರಗಳು, ಕಪಟಗಳು, ಅಸಹಾಯಕತೆಗಳು ಗಿರಕಿ ಹೊಡೆಯುತ್ತಿವೆ ಎಂಬುದನ್ನು ಆಳುವ ಸರ್ಕಾರದ ವಕ್ತಾರರು, ಕಾನೂನು ನಿರ್ವಾಹಕರು, ಹಣೆ ಪಟ್ಟಿ ಅಂಟಿಸಿಕೊಂಡು ಸಿಂಪಲ್ ರೇಷ್ಮೆ ಸೀರೆಯುಟ್ಟು ಪೋಸ್ ಕೊಡುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಹಿಳಾ ಮಣಿಗಳು, ರಾಜ್ಯ ಮಹಿಳಾ ಆಯೋಗದ ಸಾಮಕಾಪನ್ನ ಅಧ್ಯಕ್ಷರುಗಳು, ಮಹಿಳಾ ನಿಗಮಗಳು... ಅರ್ಥೈಸಿಕೊಳ್ಳಬೇಕಿದೆ. ಅವಳ ಸುತ್ತ ಹೆಣೆದುಕೊಂಡಿರುವ ವಿಷ ವರ್ತುಲದಿಂದ ಅವಳ ಬಿಡುಗಡೆ ಸಾಧ್ಯವೇ ಎಂಬುದನ್ನು ಮಂಥಿಸಬೇಕಾಗಿದೆ. ಅವರ ಬದುಕಿನ ಹಂದರವೇ ಅರಿಯದ ಈ ವಕ್ತಾರರು ಅವಳ ಜೀವನವನ್ನು ಸೇರಿ ಸ್ವಚ್ಛ ಮಾಡಿ ಗುಡಿಸಿ ಹಾಕುವ ಅವೈಜ್ಞಾನಿಕ ಪರಿಹಾರದಲ್ಲಿಯೇ ವರ್ಷಗಳನ್ನು ದಿಂಡುರುಳಿಸುವ ಇವರೆಲ್ಲರಿಗೆ ಇದರ ಆಳ ಅರ್ಥ ವಾಗಬೇಕಿದೆ.

ಒಬ್ಬ ಲೈಂಗಿಕ ವೃತ್ತಿ ಮಹಿಳೆ ಸಾಮಾನ್ಯವಾಗಿ ದಿನವೊಂದಕ್ಕೆ ೫ ರಿಂದ ೧೦ ಗಿರಾಕಿಗಳನ್ನು ತನ್ನ ವೃತ್ತಿಗೆ ಬಳಸುತ್ತಾಳೆ. ಪ್ರತಿ ಗಿರಾಕಿಯಿಂದ ೧೦೦-೩೦೦ ರವರೆಗೂ ಪಡೆಯುತ್ತಾಳೆ. (ಇದು ಪ್ರದೇಶದಿಂದ ಪ್ರದೇಶಕ್ಕೆ ಆ ಸ್ಥಳಗಳಿಗೆ ಅನ್ವಯವಾಗಿ ಬೆಲೆಯಿರುತ್ತದೆ. ಕೋಲಾರದ ಮಹಿಳೆ 30-50 ರೂಪಾಯಿಗೂ ಹೋದರೆ ಬೆಂಗಳೂರಿನ ಮಹಿಳೆ 300-3000ರೂಗಳಿಗಳಿಗೂ ಹೋಗುತ್ತಾಳೆ. ಮೆಜೆಸ್ಟಿಕ್ ಗಿರಾಕಿಗಳು ಮನರಂಜನೆಯ ಭಾಗವಾಗಿ ಬಂದಿದ್ದು ಹಣದ ಅಂದಾಜುಮಾಡಿಯೇ ಬಂದಿರುತ್ತಾರೆ. ಆದೇ ಮಾರ್ಕೆಟ್ ವ್ಯಾಪ್ತಿಯ ಗಿರಾಕಿಗಳು ತಾವು ಮಾರಲು ತಂದಿದ್ದ ವಸ್ತುಗಳನ್ನು ಮಾರಿ ಬಂದ ಹಣದಲ್ಲಿ ಇದನ್ನು ಯೋಜಿಸುತ್ತಾರೆ. ಆದ್ದರಿಂದ ಆ ದಿನದ ಮಾರ್ಕೆಟ್ ಸ್ಥಿತಿಗತಿಗೆ ಅಂದಿನ ಗಿರಾಕಿಯ ಬೆಲೆಯೂ ಅವಲಂಬಿಸಿರುತ್ತದೆ. ವೇಶ್ಯಾಗೃಹಗಳಲ್ಲಿ ಸುಮ್ಮನೆ ಅವಳನ್ನು ಕೂಡಿಸುವ ಬದಲು ಬಂದ ಗಿರಾಕಿಯ ವೈಖರಿ ನೋಡಿ ಚೌಕಾಶಿ ಮಾಡಿ ತಕ್ಕ ಬೆಲೆ ನಿಗದಿ ಮಾಡುತ್ತಾಳೆ ಘರ್‌ವಾಲಿ. ಅಂದರೆ ಒಬ್ಬ ಮಹಿಳೆ ಸರಾಸರಿ 500-2500 ದವರೆಗೂ ದುಡಿಯುತ್ತಾಳೆ. ಅಂದ್ರೆ ವಾರ್ಷಿಕವಾಗಿ ಒಬ್ಬ ಮಹಿಳೆಯ ಆದಾಯ ೧,80,000 ದಿಂದ 5,40,000 ದವರೆಗೂ ದುಡಿಯುತ್ತಾಳೆ, ದಿನ ನಿತ್ಯ ಅವಳ ಮೈಯಿಂದ ಹರಿದ ಬೆವರು ಇಷ್ಟೆಲ್ಲ ಹಣವನ್ನು ಹರಿದಾಡಿಸುತ್ತದೆ. ಈ ಹಣದ ಲೆಕ್ಕಚಾರವೇ ಈ ಸಮಾಜದ ಹಾಗೂ ಫಲಾನುಭವಿಗಳ ಕಣ್ಣಿಗೆ ರಾಚುವುದು. ಈ ಹಣವನ್ನು ಅವಳು ಅನುಭವಿಸುತ್ತಾಳಾ? ಎಂದು ಪ್ರಶ್ನಿಸಿದರೆ ಇದುವರೆಗೂ ಅವಳ ಸುತ್ತಲಿನ ವಹಿವಾಟಿನ ವಿವರಣೆ ಕೊಟ್ಟಿದ್ದೇನೆ. ಅದರಂತೆ ಅವಳ ಖರ್ಚುಗಳೂ ಅವಳ ಹಣದ ಸುತ್ತ ಚಕ್ರವ್ಯೂಹ ರಚಿಸಿರುತ್ತಾರೆ,

ಹಾಗೆಯೇ ಒಂದು ಅಂದಾಜು ಮಾಡಿದರೆ, ಸರಾಸರಿಯಾಗಿ, ವಾರ್ಷಿಕವಾಗಿ ಈ ಕೆಳಗಿನಂತ ಆಯವ್ಯಯ ವಿವರಿಸಬಹುದಾಗಿದೆ.

ಕ್ಷೇತ್ರ	ವಾರ್ಷಿಕ (ಸರಾಸರಿ ರೂ.ಗಳಲ್ಲಿ)
	ಕನಿಷ್ಟ - ಗರಿಷ್ಠ
ನ್ಯಾಯಾಲಯಕ್ಕಾಗಿ	12,000-96,000
ಪೊಲೀಸ್ ಇಲಾಖೆಗೆ ಒಟ್ಟು ವೇಶ್ಯಾಗೃಹವೊಂದರಿಂದ	96,000-2,40,000
ಬೀದಿಯ ಬದಿಯ- ಮಹಿಳೆಯೊಬ್ಬಳಿಂದ	36,000- 72,000
ಆಸ್ಪತ್ರೆಗಾಗಿ ಒಬ್ಬ ಮಹಿಳೆ	6,000- 8,000
ಮಾಣಿಕ್ ಚಂದ್ / ಇತರೆ ಜಗಿಯಲು	9,000- 12,000
ಬ್ರೋಕರ್‌ಗಳಿಗೆ/ಪಿಂಪ್ /ರೂಂ ಬಾಯ್	18,000- 36,000
ಸಾಲಕ್ಕೆ ಬಡ್ಡಿಯಾಗಿ	20,000-25,000
ತನಗಾಗಿ ವೃತ್ತಿಗೆ ಪೂರಕವಾಗಿ ಊಟ+ಕುಡಿಯಲು ಪ್ರಯಾಣ	18,000-36,000
ಮಕ್ಕಳಿಗೆ ಅವಲಂಬಿತರಿಗೆ	18,000-36,000
ಬಾಡಿಗೆ ಗಂಡಂದಿರಿಗೆ	36,000-72,000
ಉತ್ಸವಗಳು/ ಹಬ್ಬ ಹರಿದಿನಗಳು/ ಅಯ್ಯಪ್ಪಯಾತ್ರೆಯ	
ಮಾಟ-ಮಂತ್ರಗಳಿಗೆ ಸರಾಸರಿ ವಾರ್ಷಿಕ	5,000-10,000
ಇತರೆ ಖರ್ಚುಗಳು	5,000-10,000
ಮೊತ್ತ	2,75,000-5,52,600

ಮತ್ತೆ ಖೋತಾ ಬಜೆಟ್! ಇಲ್ಲಿ ಹಣದ ಕ್ಷಣಕಾಲದ ಸ್ಪರ್ಶ ಸುಖ ಅಷ್ಟೇ ಅವಳಿಗೆ ದಕ್ಕುವುದು. ಉಳಿದಿದ್ದೆಲ್ಲವೂ ಅಂತಿಮವಾಗಿ ಸಮುದ್ರ ಸೇರಲು ಹರಿಯುವ ನೀರಿನಂತೆ.

ಇದ್ಯಾವುದನ್ನೂ ಲೆಕ್ಕಿಸದ ಈ ಸಮಾಜ ಅವಳು ಸ್ಪರ್ಶಿಸುವ ಹಣವನ್ನಷ್ಟೇ ಲೆಕ್ಕಿಸುತ್ತದೆ. ಹಾಗೆಂದ ಮಾತ್ರಕ್ಕೆ ನೂರಕ್ಕೆ ನೂರರಷ್ಟು ಹೀಗೆಯೇ ಇರುತ್ತಾರೆಂದೇನಲ್ಲ ಅಪರೂಪವೆಂಬಂತೆ ಅದರಲ್ಲೂ ಕೆಲವರು ಹಣ, ಆಭರಣ, ಮನೆ, ಆಸ್ತಿ ಮಾಡಿಕೊಂಡಿರುವ ಉದಾಹರಣೆಗಳೂ ಇವೆ. ಆದರೆ ಇದರ ಸಂಖ್ಯೆ ಪರಿಗಣಿಸಲಾರದಷ್ಟು. ಆದರೆ ಘರ್ ವಾಲಿಗಳು ಎಲ್ಲ ಸವಾಲುಗಳೊಂದಿಗೆ ಬಂಡವಾಳ ಮಾಡಿ ಕೊಳ್ಳುವುದು ಸಾಮಾನ್ಯ ವಿಚಾರ.

ಇಲ್ಲಿ ಘರ್‌ವಾಲಿಗಳು, ಮೇಡಂಗಳು,'ಅಮ್ಮ'ಂದಿರು... ಅಂದರೆ ವೇಶ್ಯಾಗೃಹಗಳ ಮಾಲೀಕರು ವೇಶ್ಯಾಗೃಹಗಳನ್ನು ಒಂದು ಉತ್ಪಾದನಾ ಸಾಧನವನ್ನಾಗಿ ಪರಿಗಣಿಸುತ್ತಾರೆ. ಅವರ ಮನೋಭಾವನೆಗಳು ಮಾಲೀಕ-ಕೂಲಿಯವ ಅಥವಾ ಕಾರ್ಮಿಕ ಸಂಬಂಧದಂತಿರುತ್ತವೆ. ಇವೂ ಕೂಡ 'ಸೇವಾ ಕಾರ್ಖಾನೆ'ಗಳು. ಮಾಲೀಕತ್ವ ಮನೋಭಾವದ ಎಲ್ಲಾ ಅಂಶಗಳೂ ಈ ವೇಶ್ಯಾಗೃಹಗಳ ಮಾಲೀಕರಿಗಿರುತ್ತದೆ. ಈ ಉತ್ಪಾದನಾ ಸಾಧನಕ್ಕಾಗಿ ಅವರು ಬಂಡವಾಳ ಹೂಡಿರುತ್ತಾರೆ. ಅಲ್ಲಿಗೆ ದುಡಿಯಲು ಸರಕುಗಳಾಗಿ ಹೆಣ್ಣುಗಳನ್ನು ತರುವಲ್ಲಿಯೂ ಬಹಳಷ್ಟು ಶ್ರಮ ವಹಿಸಿರುತ್ತಾರೆ. ವೇಶ್ಯಾಗೃಹದ ವಹಿವಾಟಿಗಾಗಿ, ಚಲಾವಣೆಗಾಗಿ ಸ್ಪರ್ಧೆಯನ್ನು ಎದುರಿಸಬೇಕಾಗುತ್ತದೆ. ಉತ್ತಮ ಮಾಲುಗಳನ್ನು ಹೊಂದಲು ಅವರು ಯಾವಾಗಲೂ ಹೆಣಗಾಡುತ್ತಲೇ ಇರುತ್ತಾರೆ. ಕಡಿಮೆ ವಯಸ್ಸಿನ ಹಾಗೂ ಸುಂದರ ಮಾಲುಗಳಿದ್ದಷ್ಟು ಅವರಿಗೆ ಲಾಭವೇ ಲಾಭ. ಈ ದಂಧೆಯ ಅಪಾಯಗಳನ್ನು ಎದುರಿಸಲು ತನ್ನದೇ ಆದ ರಕ್ಷಣಾ ಕಾರ್ಯತಂತ್ರವನ್ನು ಪ್ರತಿ ವೇಶ್ಯಾಗೃಹಗಳೂ ಹೊಂದಿರುತ್ತದೆ. ಆ ಕಾರ್ಯತಂತ್ರಗಳು, ರಕ್ಷಕರು ಆಯಾ ವೇಶ್ಯಾ ಗೃಹಗಳನ್ನು ಅವಲಂಬಿಸಿರುತ್ತವೆ.

ಅತ್ಯಾಧುನಿಕವಾದ, ಶ್ರೀಮಂತ, ವೈಭವಯುತವಾದ, ಸಕಲಸೇವೆಗಳೂ ಲಭ್ಯವಿರುವ ವೇಶ್ಯಾಗೃಹಗಳಿಗೆ ಮಂತ್ರಿ ಮಹೋದಯರುಗಳು, ಪೊಲೀಸ್ ಅಧಿಕಾರಿಗಳು, ನ್ಯಾಯಾಧೀಶರುಗಳು, ಗಣ್ಯಾತಿಗಣ್ಯರುಗಳೇ ಖುದ್ದು ರಕ್ಷಣಾ ಕವಚವಾಗಿರುತ್ತಾರೆ. ಅಲ್ಲಿ ಉತ್ಪಾದನೆಯೂ ಹಾಗೆಯೆ ಇರುತ್ತದೆ. ಇನ್ನೂ ಆಯಾ ವರ್ಗಕ್ಕೆ ಅನುಸಾರವಾಗಿ ವೇಶ್ಯಾಗೃಹಗಳು ಇರುತ್ತವೆ.

ಆದರೆ ಇಲ್ಲಿ ವೃತ್ತಿ ಮಾಡುವ, ಸರಕಾಗುವ, ಮಾಲಾಗುವ ಹೆಣ್ಣುಗಳು ಮಾತ್ರ ನಿರಂತರ ಶೋಷಿತರೇ ಆಗಿರುತ್ತಾರೆ. ಯಾರೋ ಮಾರಿಬಿಡುತ್ತಾರೆ. ಬಹುತೇಕವಾಗಿ ತನಗಿಚ್ಛೆಯಿಲ್ಲದೆ, ಬಲವಂತವಾಗಿ, ವಂಚನೆ ಯಿಂದ, ಅಸಹಾಯಕತೆಯ ಹಸುಕಂದಮ್ಮಗಳು, ಇನ್ನೂ ಹರಯವನ್ನೇ ಕಾಣದ ಹೆಣ್ಣು ಮಕ್ಕಳು ಈ ದಂಧೆಯ ಮಾಲುಗಳಾಗಿ ಬಿಡುತ್ತಾರೆ. ಅವರ ಬದುಕಂತೂ ದುಸ್ತರ, ಇನ್ನು ವೇಶ್ಯಾಗೃಹಗಳಲ್ಲಿ ದುಡಿಯುವ ವೃತ್ತಿ ಮಹಿಳೆ ಯರು ಹಣಕ್ಕೆ ವಂಚಿತರಾಗುವುದೂ ಸಾಮಾನ್ಯ. ದುಡಿದು ಹೈರಾಣವಾಗುವ ಅವಳ ಧನ ಕೂಡಿಕೆ ಲೆಕ್ಕ ಮಾಲೀಕಳ ಹತ್ತಿರ ಇರುತ್ತದೆ. ಕೆಲವೊಮ್ಮೆ ದಕ್ಕುತ್ತದೆ. ಕೆಲವೊಮ್ಮೆ ಮೋಸವಾಗುತ್ತದೆ. ಅವಳ ಧ್ವನಿಯೋ ಇಂಗಿ ಹೋಗುವಂತೆ ಮಾಡಲು ಕೂಡ ಈ ಮಾಲೀಕರು ರೌಡಿಗಳ, ಪರ್ಕಿಗಳ ಪಡೆಯನ್ನೇ ಇಟ್ಟುಕೊಂಡಿರುತ್ತಾರೆ.

ನಾಲ್ಕು ಗೋಡೆಗಳಿರುತ್ತವೆ. ಪೊಲೀಸರಿಂದ ರಕ್ಷಣೆಯಭಾರ ಮಾಲೀಕರ ಮೇಲಿರುತ್ತದೆ ಎನ್ನುವುದೇ ಬೀದಿ ಬದಿಯವರಿಗೂ ಇವರಿಗೂ ಇರುವ ಬಹಳ ಮುಖ್ಯ ವ್ಯತ್ಯಾಸ !

ಹಾಗಿದ್ದಲ್ಲಿ ಲೈಂಗಿಕ ವೃತ್ತಿ ಮಹಿಳೆ ಈ ಎಲ್ಲಾ ವಾಸ್ತವಗಳೊಂದಿಗೂ ಅದರಲ್ಲಿಯೇ ಉಳಿದುಕೊಂಡಿರುವುದರ ಕಾರಣವಾದರೂ ಏನು? ಎಂದು 'ಸಭ್ಯ' ಸಮುದಾಯಕ್ಕೆ ವ್ಯಕ್ತವಾಗುವುದು ಬಹಳ ಸಹಜವಾಗಿದೆ. ಆದರೆ ಸಾಲಕೊಟ್ಟವನು ಆಟೋ ದಲ್ಲಿ ಹೋಗಿ ಅವಳನ್ನು ಪತ್ತೆ ಮಾಡಿ ಅವಳಿಗೆ ಬೇಕಾದರೆ ಗಿರಾಕಿಯನ್ನು ಹೊಂಚಿ ಕಳುಹಿಸುವಷ್ಟು ಬೆಂಬಿಡದ ನಕ್ಷತ್ರಿಕನಾಗಿರುತ್ತಾನೆ. ಅವಳು ಎಲ್ಲಿ ಹೋದರೂ ಗುರುತು ಹಚ್ಚಿ ಹೀಯಾಳಿಸುವ ಗಿರಾಕಿಗಳು, ಪೊಲೀಸರು ಅವಳನ್ನು ಬೀಟ್ ಕಾಯುತ್ತಿರುತ್ತಾರೆ. ಇನ್ನು ಅವಲಂಬಿತರು, ಮಕ್ಕಳು, ಬಾಡಿಗೆ ಗಂಡಂದಿರು ಎಲ್ಲರೂ ಇವಳನ್ನೇ ಹೀರಿ ಬದುಕುವ ಹವ್ಯಾಸ ಮಾಡಿಕೊಂಡು, ಇವಳು ಒಂದು ದಿನ ಸಂಪಾದಿಸದಿದ್ದರೂ ವಿಲಿ ವಿಲಿ ಒದ್ದಾಡುತ್ತಾರೆ. ಅದಕ್ಕಿಂತಲೂ ಇವಳ ಅಭ್ಯಾಸಗಳು, ಚಟಗಳು ಇವಳನ್ನು ಒಂದರೆ ಕ್ಷಣ ಕಣ್ಮುಚ್ಚಲೂ ಬಿಡದಂತೆ ತಿವಿಯುತ್ತಿರುತ್ತವೆ.

ಇಷ್ಟಕ್ಕೂ ಬಿಟ್ಟು ಬದುಕುವುದಾದರೂ ಏನು? ಹೇಗೆ? ಎಲ್ಲಿ? ಇದರಿಂದ ಬಿಡುಗಡೆಯ ಹಾದಿ ಯಾವುದು? ಬಿಡುವುದಾದರೂ ಯಾವುದನ್ನು? ಈ ಎಲ್ಲವು ಯಕ್ಷ ಪ್ರಶ್ನೆಗಳೊಂದಿಗೆ ಮತ್ತದೇ ಜಂಜಾಟಗಳೊಂದಿಗೆ ಮೈ ಕೊಡವಿ ಬಂದು ನಿಲ್ಲುತ್ತಾಳೆ ಅದೇ ಸಿಂಥೆಟಿಕ್ ಬಟ್ಟೆ, ಅದೇ ಪ್ಲಾಸ್ಟಿಕ್ ಚಪ್ಪಲಿಗಳೊಂದಿಗೆ.

ಪ್ರಾಚೀನ ಭಾರತದ ವೇಶ್ಯಾವಾಟಿಕೆ ಮತ್ತು ಆರ್ಥಿಕ ಸಂಬಂಧಗಳು:

ಕ್ರಿ. ಪೂ. ೩೦೦ ರಿಂದ ಕ್ರಿ.ಶ. ೧೫೦ರ ಅವಧಿಯೊಳಗಿನ ಗುಪ್ತರ ಆಡಳಿತಾವಧಿಯಲ್ಲಿ ವೇಶ್ಯಾವಾಟಿಕೆಯನ್ನು ರಾಜ್ಯದ ಅರ್ಥವ್ಯವಸ್ಥೆಯ ಒಂದು ಭಾಗವಾಗಿ, ಆದಾಯದ ಮೂಲವಾಗಿ, ಆರ್ಥಿಕ ಚಟುವಟಿಕೆಯಾಗಿ ನೋಡುತ್ತಿದ್ದುದು ಕಂಡುಬರುತ್ತದೆ. ಇಲ್ಲಿ ಬಹಳ ಮುಖ್ಯವಾಗಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜ್ಯದ ಆಡಳಿತವು ನಡೆಸುತ್ತಿದ್ದ ವ್ಯವಸ್ಥಿತವಾದ ವೇಶ್ಯಾವಾಟಿಕೆಯ ವಿವರಣೆ ದೊರೆಯುತ್ತದೆ. ವಾತ್ಸ್ಯಾಯನನ 'ಕಾಮಸೂತ್ರದಲ್ಲಿ' (ಕ್ರಿ.ಶ.೩೦೦) ಕಾಳಿದಾಸನ 'ಶಾಕುಂತಲಾ'ದಲ್ಲಿ (ಕ್ರಿ.ಶ. ೧೦೦) ಪ್ರಾಚೀನ ಭಾರತದಲ್ಲಿಯ ವೇಶ್ಯಾವಾಟಿಕೆ ಅಸ್ತಿತ್ವ ಹಾಗೂ ಅವುಗಳ ರಾಜಕೀಯ, ಆರ್ಥಿಕ ಕಾರ್ಯಾಚರಣೆಗಳ ಬಗ್ಗೆ ಸ್ಪಷ್ಟವಾದ ವಿವರಗಳಿವೆ.

ವಂಶಪಾರಂಪರ್ಯವಾಗಿ ರೂಪ, ಯೌವನ, ಸಂಗೀತ, ಕಲೆಗಳಲ್ಲಿ ಪ್ರಾವಿಣ್ಯತೆ ಪಡೆದ ಗಣಿಕೆಯ ಮಗಳು ಗಣಿಕೆಯಾಗಿ ಆಯ್ಕೆಯಾಗುತ್ತಿದ್ದಳು. ಇಂತಹ ಗಣಿಕೆಯರು ರಾಜ್ಯದ ಆಡಳಿತ ಚೌಕಟ್ಟಿನೊಳಗೆ ಬರುತ್ತಿದ್ದು ಇವರಿಗಾಗಿ ಮೇಲ್ವಿಚಾರಕರಿರುತ್ತಿದ್ದರು. ಅವರೇ 'ಗಣಿಕಾಧ್ಯಕ್ಷರು'

ಗಣಿಕೆಯರ ಎಲ್ಲಾ ಮೇಲ್ವಿಚಾರಣೆಯನ್ನು ಗಣಿಕಾಧ್ಯಕ್ಷ ನೋಡಿ ಕೊಳ್ಳುತ್ತಿದ್ದುದಲ್ಲದೆ ಅವಳ ಆದಾಯ, ಅವಳಲ್ಲಿಗೆ ಬರುತ್ತಿದ್ದ ವಿಟರಸಂಖ್ಯೆ, ಅವರ ವಿವರ, ಅವಳಿಗೆ ಬರುತ್ತಿದ್ದ ಉಡುಗೊರೆಗಳ ವಿವರ ಮತ್ತು ಅವಳ ಪ್ರಭಾವ, ವರ್ಚಸ್ಸಿನ ಬಗ್ಗೆ ಪ್ರತ್ಯೇಕವಾಗಿ ದಾಖಲಿಸಬೇಕಿತ್ತು. ಅವಳ ಒಟ್ಟು ಆದಾಯ ಮತ್ತು ಅವಳ ಖರ್ಚು

ಎಲ್ಲ ಕಳೆದು ಉಳಿಯುತ್ತಿದ್ದ ಆದಾಯದ ವಿವರಗಳನ್ನು ಗಣಿಕಾಧ್ಯಕ್ಷನಿಗೆ ಕೊಡಬೇಕಿತ್ತು. ಎಲ್ಲವನ್ನು ಗಣಿಕಾಧ್ಯಕ್ಷ ನಿಯಂತ್ರಿಸುತ್ತಿದ್ದನು. ಎರಡು ದಿನದ ಸಂಪಾದನೆಯನ್ನು ತಿಂಗಳಿನ ತೆರಿಗೆಯಾಗಿ ಕೊಡುತ್ತಿದ್ದಳು.

ಗಣಿಕೆಗೆ ಸಂಗೀತ, ನೃತ್ಯ, ಲಲಿತಕಲೆಗಳು, ನಟನಾ ಭಂಗಿಗಳು, ಭಾಷೆ ಕಲಿಯುವುದು, ಚಿತ್ರಕಲೆ, ಇತರರ ಮನಸ್ಸನ್ನು ಓದುವುದು, ಸುಗಂಧ ದ್ರವ್ಯಗಳನ್ನು ಮತ್ತು ಹಾರಗಳನ್ನು ಮಾಡುವುದು, ಪ್ರೀತಿ-ಪ್ರಣಯ ಕೇಳಿಗಳನ್ನು ಕಲಿಸುವುದು, ನಟನೆ, ಕಂಠಪಾಠ... ಹೀಗೆ ಎಲ್ಲ ವಿದ್ಯೆಗಳನ್ನು ಕಲಿಸುತ್ತಿದ್ದರು. ಈ ಎಲ್ಲಾ ಖರ್ಚುಗಳನ್ನು ರಾಜನ ಬೊಕ್ಕಸದಿಂದಲೇ ವ್ಯಯಿಸಲಾಗುತ್ತಿತ್ತು.

ಗಣಿಕೆಯರಿಗೆ ರಾಜನ ಬೊಕ್ಕಸದಿಂದಲೇ ವೇತನವು ವಿತರಣೆಯಾಗುತ್ತಿತ್ತು. ತಮ್ಮ ಆದಾಯದ ಅರ್ಧದಷ್ಟನ್ನು ಪಡೆಯುತ್ತಿದ್ದರು. ಇವರಿಗೆ ರಾಜ್ಯದ ಆಡಳಿತದ ವತಿಯಿಂದಲೇ ವಾಸಗೃಹಗಳು, ಉದ್ಯಾನವನಗಳು, ವ್ಯವಸ್ಥೆಯಾಗುತ್ತಿದ್ದವು. ಆದರೆ ಇವರಿಗೆ ಸ್ವಂತ ಆಸ್ತಿ ಸಂಪಾದನೆಯ ಹಕ್ಕಿರಲಿಲ್ಲ. ವೇಶ್ಯೆಯರ ಸಂಖ್ಯೆ ಕೂಡ ಇಡೀ ರಾಜ್ಯದ ಇತರೆ ವೈಭೋಗಗಳಂತೆಯೇ ಸಮೃದ್ಧಿಯ ಸಂಕೇತವಾಗಿತ್ತು.

ತಮ್ಮ ಆಭರಣಗಳು, ಬೆಲೆ ಬಾಳುವ ವಸ್ತುಗಳನ್ನು ತನ್ನ ತಾಯಿಗಲ್ಲದೆ 'ಇತರೆ ವಿಟರಿಗೋ ಅಥವಾ ಪ್ರಿಯರಿಗೋ ಕೊಟ್ಟರೆ ನಾಲ್ಕು ಕಾಲು ಪಣ, ಅವುಗಳನ್ನು ಅಡವಿಟ್ಟರೆ, ಮಾರಿದರೆ ಐವತ್ತು ಕಾಲು ಪಣ ದಂಡನೆ ತೆರಬೇಕಾಗಿತ್ತು.ಅತ್ಯಂತ ಸುಂದರಿಯಾದ ಅಂಬಪಾಲಿಯು ರಾತ್ರಿಯೊಂದಕ್ಕೆ ೫೦ ಕಹ ಪಣಗಳನ್ನು ಒತ್ತೆಯಾಗಿ ಪಡೆಯುತ್ತಿದ್ದಳು, ಬಿಂಬಸಾರನ ಆಳ್ವಿಕೆಯ ವೈಶಾಲಿ ನಗರದಲ್ಲಿ ಬಹಳಷ್ಟು ಪ್ರಸಿದ್ಧಿ ವೇಶ್ಯೆಯರಿದ್ದು ಅಂಬಪಾಲಿ, ಪದುಮಾವತಿ, ಸಾಲವತಿ, ಅವಳಮಗಳು ಸಿರಿಮಾ ಮುಂತಾದವರುಗಳು ಇದ್ದರು.

ಹೀಗೆ ವೇಶ್ಯಾಗೃಹಗಳಿಂದ (ತೆರಿಗೆಯಿಂದ) ಬಂದ ಹಣವನ್ನು ಪಹರೆಯವರಿಗೆ ಸಂಬಳವಾಗಿ ಕೊಡುತ್ತಿದ್ದುದು ವಿಜಯನಗರ ಸಾಮ್ರಾಜ್ಯದಂತಹ ಮುತ್ತುರತ್ನಗಳ ಆಡಳಿತದಲ್ಲಿಯೂ ಕಂಡುಬಂದಿದೆ. ಅವರಿಗಾಗಿಯೇ ಪ್ರತ್ಯೇಕ ಕೇರಿಯಿದ್ದು ಸುವ್ಯವಸ್ಥಿತವಾದ ಆ ಬೀದಿ ರಾಜಾಡಳಿತದ ಪ್ರತಿಷ್ಠೆಯಾಗಿಯೂ ಇತ್ತು.

೧೨ ನೇ ಶತಮಾನದ ನಮ್ಮಯ್ಯ ಸುಂದರಿ ಕಥಾಕೃತಿಯಲ್ಲಿ ರಾಜ್ಯವು ಶೇಕಡ ೨೫ ರಿಂದ ೩೦ ರಷ್ಟು ವೇಶ್ಯೆಯರ ಆದಾಯವನ್ನು ತೆರಿಗೆಯಾಗಿ ಪಡೆಯುತ್ತಿದ್ದುದರ ಉಲ್ಲೇಖವಿದೆ. ಹಣದ ಪ್ರಮಾಣದ ಆಧಾರದಿಂದ ಅವರ ವರ್ಗಗಳನ್ನು ವಿಂಗಡಿಸಲಾಗುತ್ತಿತ್ತು. ಅವರ ಆದಾಯವನ್ನೆಲ್ಲಾ ಪಡೆದ ರಾಜನ ಬೊಕ್ಕಸದಿಂದ ಸೌಂದರ್ಯ ಮತ್ತು ಅಲಂಕಾರಗಳನ್ನನುಸರಿಸಿ ಆ ಹಣನಿರ್ಧಾರಿತವಾಗುತ್ತಿತ್ತು.

ಸಾವಿರ ಪಣ ಪಡೆಯುವವಳು ಅಧಮ, ಎರಡು ಸಾವಿರ ಪಣ ಪಡೆಯುವವಳು ಮಧ್ಯಮ, ಮೂರು ಸಾವಿರ ಪಣ ಪಡೆಯುವವಳು ಉತ್ತಮರು, ಕೆಲಸ ಕಾರ್ಯಗಳ ಸ್ವರೂಪವನ್ನಾಧರಿಸಿಯೂ ವರ್ಗಗಳಿರುತ್ತಿದ್ದವು, ಛತ್ರ ಮತ್ತು ತಾಂಬೂಲ ಹಿಡಿದವರು ಕನಿಷ್ಠ, ಚಾಮರ ಮತ್ತು ಪಲ್ಲಕಿ ಸೇವೆಯವರು ಮಧ್ಯಮ ಮತ್ತು ಆಸನ ಮತ್ತು ರಥಗಳವರು ಉತ್ತಮರು ಎಂದೂ ವಿಂಗಡಿಸಲಾಗುತ್ತಿತ್ತು.

ಸ್ವತಂತ್ರವಾಗಿ ವೇಶ್ಯಾವಾಟಿಕೆ:

ರಾಜ್ಯದ ನಿಯಂತ್ರಣಕ್ಕೊಳಪಡದೆ ಲೈಂಗಿಕ ಸೇವೆ ಒದಗಿಸುತ್ತಿದ್ದವರು ಅವರ ದುಡಿಮೆಯ ಆರನೇ ಒಂದು ಭಾಗವನ್ನು ತೆರಿಗೆಯಾಗಿ ಕೊಡಬೇಕಿತ್ತು.

ಕ್ರಿ. ಪೂ. ३೦೦ ದಶಕದ ಆ ದಿನದ ವೇಶ್ಯಾವಾಟಿಕೆ ಪರಿಸ್ಥಿತಿ ಇಂದಿಗಿಂತಲೂ ಉತ್ತಮವಾಗಿತ್ತು ಎಂಬುದು ಪ್ರಾಚೀನ ಭಾರತದ ಇತಿಹಾಸ ಬಿಂಬಿಸುತ್ತದೆ. ಸೇವಾವಲಯದ ದುಡಿಮೆಯೆಂದು ರಾಜ್ಯ ಅದನ್ನು ಪರಿಗಣಿಸಿತ್ತು. ಅಂದಿನ ವೇಶ್ಯೆ ಹಕ್ಕನ್ನುಳ್ಳ ರಾಜ್ಯದ ಪ್ರಜೆಯಾಗಿದ್ದಳು, ಅನೇಕ ನಿಮಯ ನಿಬಂಧನೆಗಳು, ನಿಷೇದಗಳ ನಡುವೆಯೂ ಸಂಸ್ಥೀಕರಣಗೊಂಡ ವೇಶ್ಯಾವೃತ್ತಿ ಒಂದು ರೀತಿಯ ಇಂದಿಗಿಂತಲೂ ಹೆಚ್ಚಿನ ನೆಮ್ಮದಿ ಕೊಟ್ಟಿತ್ತು. ಇವರುಗಳಿಗೆ ರಾಜ್ಯದ ಬೊಕ್ಕಸದಿಂದಲೇ ನಿವೃತ್ತಿ ವೇತನವನ್ನು ಕೊಡಬೇಕೆಂದು ಕೌಟಿಲ್ಯನು ಆದೇಶಿಸಿರುವುದನ್ನು ಕಾಣಬಹುದಾಗಿದೆ.

ಇಲ್ಲಿ ಬಹಳ ಮುಖ್ಯವಾಗಿ ಗಮನಾರ್ಹವಾದುದು ಆ ಹೆಣ್ಣುಗಳ ಜೀವನದ ಭದ್ರತೆ. ನಿವೃತ್ತಿ ವೇತನ ನೀಡುವುದರೊಂದಿಗೆ ಅವರಿಗೆ ಸಾಮಾಜಿಕ ಮಾನ್ಯತೆಯನ್ನು ಅದು ತಂದು ಕೊಡುತ್ತಿತ್ತು. ಪುನರ್ ವಸತಿಯನ್ನು ಯಾವುದೇ ರೀತಿಯಲ್ಲಿ ಹೇರದೆ ಅವರಿಗೆ ಪರ್ಯಾಯ ಜವಾಬ್ದಾರಿಗಳನ್ನು ಕೊಡಲಾಗುತ್ತಿತ್ತು. ಉದಾ: ಗಣಿಕೆಯರ ಗೃಹಗಳನ್ನು ನೋಡಿಕೊಳ್ಳುವುದು, ಬಟ್ಟೆ ಒಗೆಯುವುದು, ಅಡಿಗೆ ಕೆಲಸ ನಿರ್ವಹಿಸುವುದು... ಹೀಗೆ ದೈಹಿಕ ಶ್ರಮದಂತಹ ಜವಾಬ್ದಾರಿಗಳನ್ನು ನೀಡುತ್ತಿದ್ದರು.

ಇಂದು ಮೌಲ್ಯಗಳ ದೃಷ್ಟಿಯಿಂದ ಅತ್ಯಂತ ನಿಕೃಷ್ಟವಾಗಿ ಅವರ ಬದುಕಿನುದ್ದಕ್ಕೂ ಪಾಪ ಪ್ರಜ್ಞೆಯೊಂದಿಗೆ ನರಳುವುದರೊಂದಿಗೆ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ. ಬೀದಿ ಪಾಲಾಗುವ ಸ್ಥಿತಿಯೇ ಹೆಚ್ಚು. ಪ್ರಾಚೀನ ಭಾರತದಲ್ಲಿ ಈ ವೃತ್ತಿಯನ್ನು ನೋಡುತ್ತಿದ್ದ ದೃಷ್ಟಿಕೋನ, ವೃತ್ತಿ ಮಾನ್ಯತೆ, ಬದುಕಿಗೊಂದು ಅಗತ್ಯಗಳ ಪೂರೈಕೆ ಮಾಡುತ್ತಿದ್ದ ಆ ಕಾಲಘಟ್ಟವನ್ನು ಇಂದಿಗೂ ವಿಶ್ಲೇಷಿಸಬೇಕಾಗಿದೆ. ಆಧುನಿಕ ಭಾರತದಲ್ಲಿ ದಿಕ್ಕು ದೆಸೆಯಿಲ್ಲದೆ ತನ್ನನ್ನು ವಿಸ್ತರಿಸಿ ಕೊಳ್ಳುವುದರ ಮೂಲಕ 'ವೇಶ್ಯಾವಾಟಿಕೆ' ಅತ್ಯಂತ ಲಾಭದಾಯಕ ದಂಧೆಯನ್ನಾಗಿಸಿಕೊಂಡಿರುವ,ಈ ಮೂಲಕ ಅಮಾಯಕ ಹೆಣುಗಳ ಬದುಕುಗಳನ್ನು ಛಿದ್ರಗೊಳಿಸುತ್ತಿರುವ ತಲೆ ಹಿಡುಕ, ದಂಧೆಕೋರರನ್ನು ಮಟ್ಟಾ ಹಾಕಬೇಕಿದೆ.

ಇದೇ ಭಾರತದ ಪ್ರಾಚೀನ ವ್ಯವಸ್ಥೆಯಲ್ಲಿಯೂ ವೇಶ್ಯಾವಾಟಿಕೆ ಮತ್ತು ವೇಶ್ಯಾ ವೃತ್ತಿಯನ್ನು ಮಾನ್ಯ ಮಾಡಿ ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ವಾಸ್ತವತೆಯ ಕಟುಸತ್ಯಗಳೊಂದಿಗೆ ಒಪ್ಪಿಕೊಂಡಿರುವುದು ಕಂಡುಬಂದಿದೆ. ಅಲ್ಲಿಯೂ ಹಣ, ಸಂಪತ್ತು ಇವರ ಮೂಲಕ ಹರಿದಿರುವುದನ್ನು ಕಾಣುತ್ತೇವೆ. ಹಾಗೆಯೇ ಆ ಇಡೀ ವ್ಯವಸ್ಥೆಯನ್ನು ಆಳುತ್ತಿದ್ದ ರೀತಿ ನೀತಿಯೂ ನಮ್ಮ ಮುಂದಿವೆ.

ಹಾಗಿದ್ದಲ್ಲಿ ಇಂದಿನ ಪರಿಸ್ಥಿತಿಯೇಕೆ ಹೀಗೆ? ನೈತಿಕ, ಅನೈತಿಕತೆಯ ಎಲ್ಲ ಅಪವಾದವನ್ನು ಲೈಂಗಿಕ ವೃತ್ತಿಯ ಮೇಲೆ ಒಗೆದು ಅದರಲ್ಲಿ ಪಾಲುದಾರರಾದ ಈ ಸಮಾಜವೇಕೆ ಹೀಗೆ ವರ್ತಿಸುತ್ತಿದೆ?

ಹಾಗೆಂದು ನಿಯಂತ್ರಣ ಸಾಧ್ಯವಾಗಿದೆಯಾ?

ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿದೆಯಾ? ಅದಕ್ಕೆ ಬದಲಾಗಿ ದಿನದಿಂದ ದಿನಕ್ಕೆ ಹೊಸ ಹೊಸ ರೂಪ ತಾಳಿ ಆಧುನಿಕತೆಯ ಉತ್ತುಂಗದಲ್ಲಿ ವೇಶ್ಯಾವಾಟಿಕೆಯೂ ಪಾತ್ರ ವಹಿಸುತ್ತಿಲ್ಲವೇ? ಇಂದಿಗೂ ಗಂಟೆಗಂಟೆಗೂ ಹೆಣ್ಣುಗಳು ಈ ವೃತ್ತಿಗಿಳಿಯುತ್ತಿರುವುದು ಭ್ರಮೆಯೇ?

ನೂರಾರು ಕೋಟಿ ರೂಪಾಯಿಗಳ ಒಡನಾಟವನ್ನು ಇಂದಿನ ಅರ್ಥವ್ಯವಸ್ಥೆಯೂ ಸ್ಪರ್ಶಿಸುತ್ತಿಲ್ಲವೇ?

ಇದನ್ನು ಅನಿಷ್ಟವೆಂದು ಅಥವಾ ಅನೈತಿಕ, ಕಾನೂನು ಬಾಹಿರವೆಂದು ಘೋಷಿಸುವುದರೊಂದಿಗೆ ಈ ವೃತ್ತಿಯ ಕೋಟ್ಯಾಂತರ ಹೆಣ್ಣುಗಳಿಗೆ ವಿಟರಾಗುವ ದ್ವಂದ್ವದಿಂದ ಹೊರಗೆ ಬರಬೇಕಿದೆ, ಇಂದಿನ ಅರ್ಥಶಾಸ್ತ್ರಜ್ಞರುಗಳು, ಮಾನವ ಶಾಸ್ತ್ರಜ್ಞರುಗಳು, ಸಮಾಜ ಶಾಸ್ತ್ರಜ್ಞರುಗಳು, ಕಾನೂನು, ರಾಜಕೀಯ ಶಾಸ್ತ್ರಜ್ಞರುಗಳು ಈ ಬಗ್ಗೆ ಗಂಭೀರವಾದ ಚಿಂತನೆ ನಡೆಸಿ ನಮ್ಮ ನಡುವೆಯೇ ಬದುಕುತ್ತಿರುವ ಅವರ ಬದುಕು ಹಸನು ಗೊಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ. ಅವರ ಬದುಕಿನ ಸ್ವಾಸ್ಥದೊಂದಿಗೆ ಈ ಸಮಾಜದ ಸ್ವಾಸ್ಥವನ್ನು ಕಾಪಾಡಬಹುದಾಗಿದೆ.

ಇಲ್ಲಿ ಆಧುನಿಕತೆಯ ವೇಶ್ಯಾವಾಟಿಕೆ ಮತ್ತು ಆರ್ಥಿಕ ಸಂಬಂಧಗಳ ಬಗ್ಗೆ ಮಂಥಿಸಲೇ ಬೇಕಾಗುತ್ತದೆ. ಇಲ್ಲಿಯೂ ವರ್ಗಗಳು ಆಯಾ ಕಾಲ ಘಟ್ಟಕ್ಕೆ ತಕ್ಕಂತೆ ತಮ್ಮ ಛಾಪು ಮೂಡಿಸುತ್ತಲೇ ಇವೆ.

'ವೇಶ್ಯಾವೃತ್ತಿ ಪ್ರಪಂಚದ ಅತ್ಯಂತ ಹಳೆಯ ವೃತ್ತಿ' ಈ ಘೋಷಣೆಯೊಂದಿಗೆ ಅಂಟಿಕೊಂಡಿರಲು ಸಾಧ್ಯವಿಲ್ಲ. ಧಾರ್ಮಿಕ ವೇಶ್ಯಾವೃತ್ತಿ, ವಿಲಾಸಿ ವೇಶ್ಯಾವೃತ್ತಿ, ಸಾಮಾಜಿಕ ವೇಶ್ಯಾವೃತ್ತಿ.

ಈ ಪರಿಧಿಯಲ್ಲಿ 21ನೇ ಶತಮಾನದ ಆಧುನಿಕವಾದ ಈ ಸಮಾಜದಲ್ಲಿ ವೇಶ್ಯಾವಾಟಿಕೆಯೂ ಕೂಡ ಹೇಗೆ ತನ್ನನ್ನು ಅಲಂಕರಿಸಿಕೊಳ್ಳುತ್ತದೆ, ರೂಪಿಸಿಕೊಳ್ಳುತ್ತದೆ, ಅವಕಾಶದ ಹೊಂಚು ಹಾಕುತ್ತದೆ ಎಂಬುದು ಇಲ್ಲಿ ಬಹಳ ಮುಖ್ಯವಾಗುತ್ತದೆ. (ಆಧುನೀಕರಣ ಜಾಗತೀಕರಣ ಮತ್ತು ವೇಶ್ಯಾವಾಟಿಕೆ ಅಧ್ಯಾಯನದಲ್ಲಿ ಇನ್ನೂ ವಿವರವಾಗಿ ಪ್ರಸ್ತಾಪಿಸುವೆನು. ಇಲ್ಲಿ ಆರ್ಥಿಕ ಸಂಬಂಧಕ್ಕಷ್ಟೇ ಸೀಮಿತಗೊಳಿಸಿಕೊಂಡಿರುವೆ) ಬೀದಿ ಬದಿಯ ಅಥವಾ ವೇಶ್ಯಾಗೃಹಗಳ ಪರಿಧಿಯಲ್ಲಿ ಬರುವ ವೇಶ್ಯಾವಾಟಿಕೆ ಮತ್ತು ಅಲ್ಲಿ ತೊಡಗಿಸಿ ಕೊಂಡಿರುವವರ ಬದುಕು, ಬದುಕಿನ ಕ್ರಮಗಳು, ಸ್ಥಿತಿಗತಿಗಳು, ಅನಿವಾರ್ಯ ಅಸಹನೀಯಗಳು..... ಒಂದು ತೆರನಾದ ಚಿತ್ರಣ ನೀಡುತ್ತವೆ. ಆದರೆ ಆಧುನಿಕತೆಯ ಅತಿ ಉತ್ತುಂಗಕ್ಕೇರಿ ವೇಶ್ಯಾವಾಟಿಕೆ ಮತ್ತು ಲೈಂಗಿಕ ವೃತ್ತಿ ನಡೆಸುವ ಮತ್ತು ಇದರಲ್ಲಿ ತೊಡಗಿಸಿಕೊಂಡಿರುವ ಬಹು ವಿಸ್ತಾರವಾದ ವೇದಿಕೆಗಳು ಇಂದಿನ ಆಧುನಿಕತೆಯ ವಿಕೃತಿಗೆ ಕನ್ನಡಿ ಹಿಡಿದಿವೆ.

ಸೇವೆಯೇ ಮಾರಾಟ (Trade in Service) : ಇಂದು ಲೈಂಗಿಕ ವೃತ್ತಿ ಕೂಡ ಒಂದು ಸೇವೆಯಾಗಿ ಅಂದರೆ ಸೇವೆಯನ್ನೇ ಮಾರಾಟವನ್ನಾಗಿಸುವ ಬೆಳವಣಿಗೆಗಳು ಆಗುತ್ತಿವೆ. ಒಬ್ಬ ವೈದ್ಯ, ಶಿಕ್ಷಕ, ಕಲಾವಿದನಂತೆ

ಯೇ ಲೈಂಗಿಕ ವೃತ್ತಿಯ ಮಹಿಳೆಯೂ ಕೂಡ ಅವನ ಲೈಂಗಿಕ ತೃಷೆ ಇಂಗಿಸಿ ಹಣಪಡೆಯುತ್ತಾಳೆ (ಸೇವಾಶುಲ್ಕ) ಎನ್ನುವುದರ ಮಟ್ಟಿಗೆ ಕೂಗೆಬ್ಬಿದೆ.

ಈ ನಿಟ್ಟಿನಲ್ಲಿಯೇ ಇತ್ತೀಚೆಗೆ ಬರುತ್ತಿರುವ ಜಾಹಿರಾತುಗಳು ಈ ವಿಲುವನ್ನು ಗಟ್ಟಿಗೊಳಿಸುತ್ತಿವೆ.

'ವೇಶ್ಯೆಯರು ಬೇಕಾಗಿದ್ದಾರೆ' ಎಂತಲೇ ನ್ಯೂಜಿಲ್ಯಾಂಡ್‌ನ 'ಮಸಾಜ್ ಪಾರ್ಲರ್' ಒಂದು ಜಾಹೀರಾತು ನೀಡಿದ್ದುದನ್ನು ಇಲ್ಲಿ ಗಮನಿಸಬಹುದು.

ಇಲ್ಲಿ ಎಲ್ಲವೂ ಹಣದಿಂದ ನಿರ್ಧಾರಿತವಾದದ್ದು :

ಇನ್ನು ಅಂತರರಾಜ್ಯ, ಅಂತರರಾಷ್ಟ್ರೀಯವಾಗಿ ಹೋಗುತ್ತಿರುವ ಮಹಿಳಾ ವಲಸೆಗಾರರು ಬಹುಪ್ರಧಾನವಾಗಿ ಲೈಂಗಿಕ ವೃತ್ತಿಯಿಂದ ದುಡಿದ ದುಡಿಮೆಯನ್ನು ತಮ್ಮ ಕುಟುಂಬಗಳಿಗೆ ಕಳುಹಿಸಲಿದ್ದು ಆ ಹಣದ ಚಲಾವಣೆಕೂಡ ಈ ನೆಲೆಯಲ್ಲೇ ತಾನೇ ಆಗುವುದು.

ಆಧುನಿಕತೆಯ ಜಾಡಿನಲ್ಲಿ ಮಹಿಳೆಯ ಸೇವಾ ಸ್ವರೂಪವೂ ಬಹುತೇಕ ಇದೇ ಆಗುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳಲ್ಲಿ, ಕಾರ್ಪೊರೇಟ್ ಸೆಕ್ಟಾರ್‌ಗಳಲ್ಲಿ, ಒಪ್ಪಂದಗಳ ಪೂರಕವಾದ ಆಮಿಷಗಳಲ್ಲಿ ಹೆಣ್ಣು ತನ್ನ ಸೇವೆಯನ್ನು ಒದಗಿಸಬೇಕಾಗುತ್ತದೆ.

ಹೆಲ್ತ್ ಕ್ಲಬ್‌ಗಳು, ಬ್ಯೂಟಿಪಾರ್ಲರ್‌ಗಳು, ಮಸಾಜ್ ಪಾರ್ಲರ್‌ಗಳಲ್ಲಿಯೂ ಕೂಡ ಈ 'ಸೇವಾ' ವೃತ್ತಿ ಗಣನೀಯವಾಗಿ ಹೆಚ್ಚುತ್ತಿದ್ದು ಇಲ್ಲಿಯೂ ಕೂಡ ಹೆಣ್ಣು ತನ್ನನ್ನು ಸೇವೆಗೆ ತೊಡಗಿಸಿಕೊಳ್ಳಬೇಕಾಗುತ್ತದೆ.

ಇನ್ನು ಬಹುತೇಕವಾಗಿ ಕಂಡುಬರುವ ಉತ್ತರ ಕರ್ನಾಟಕ ಭಾಗದ ನೂರಾರು ವರ್ಷಗಳ ಪರಂಪರೆಯಿರುವ ಧಾರ್ಮಿಕ ವೇಶ್ಯಾವೃತ್ತಿಯು ಇಂದು ಅದೂ ಕೂಡ ತನ್ನ ಸ್ವರೂಪವನ್ನು ಬದಲು ಮಾಡಿಕೊಳ್ಳುತ್ತಿದೆ. ಬಿಜಾಪುರದಲ್ಲಿ ಸಭೆ ಸೇರಿದ್ದ ಸುಮಾರು ೨೦ ಲೈಂಗಿಕ ವೃತ್ತಿ ಮಹಿಳೆಯರೊಂದಿಗೆ (ಧಾರ್ಮಿಕ ವೇಶ್ಯಾವೃತ್ತಿ ಮೂಲದವರೇ) ಚರ್ಚಿಸಿದ ಒಂದು ತುಣುಕನ್ನು ಇಲ್ಲಿ ನಿರೂಪಿಸುತ್ತಿದ್ದೇನೆ. ಇದರಿಂದ ಧಾಮಿಕ ವೇಶ್ಯಾವೃತ್ತಿಯು ಹೇಗೆ ತನ್ನ ಸ್ವರೂಪ ಬದಲಿಸಿ ಕೊಳ್ಳುತ್ತಿದೆ ಎನ್ನುವುದರ ಅರಿವಾಗುತ್ತದೆ.

ಇತ್ತೀಚಿನ ನಿಷೇದಗಳು, ನಿರ್ಬಂದನೆಗಳು ಹೆಚ್ಚಿದಂತೆಲ್ಲಾ ಬೇಡಿಕೆ ಮತ್ತು ಪೂರೈಕೆಗಳೂ ಹೆಚ್ಚುತ್ತಿವೆ. ''ನಿಷೇಧ ಹೇರಿದಷ್ಟು ಇನ್ನಷ್ಟು ಜನಪ್ರಿಯ ಮತ್ತು ಪ್ರಭಲವಾಗುವುದಕ್ಕೆ ಸಾಧ್ಯ'' ಎನ್ನುವ ಹಿ.ಚಿ. ಬೋರಲಿಂಗಯ್ಯನವರ ಅಭಿಪ್ರಾಯ ಇಲ್ಲಿ ಸಮಂಜಸವೆನ್ನಿಸುತ್ತದೆ.

'ದೇವದಾಸಿ' ಹಾಗೂ ಇತರೆ ಧಾರ್ಮಿಕ ವೇಶ್ಯಾವೃತ್ತಿಗೆ ಬರದಂತೆ ತಡೆಯುವ ಒಂದು ಸೋಗಲಾಡಿ ಕಾನೂನನ್ನು ಕರ್ನಾಟಕ ಸರ್ಕಾರ ಆದೇಶಿಸಿತು. ಪ್ರಾಮಾಣಿಕ ಕಳಕಳಿಯಿಲ್ಲದ ಯಾವುದೇ ಕಾನೂನುಗಳು, ನಿಷೇದ, ನಿರ್ಭಂದಗಳು ಗಾಳಿಯಲ್ಲಿ ತೇಲಾಡಬೇಕಾಗುತ್ತದೆ ಎಂಬುವಕ್ಕೆ ಇದೊಂದು ಸ್ಪಷ್ಟ ನಿದರ್ಶನ.

ಆ ಮಹಿಳೆಯರ ಅಭಿಪ್ರಾಯದಂತೆಯೇ, ಇಂದು ಹೆಣ್ಣು ಮಕ್ಕಳೇ ಆ ಕುಟುಂಬಗಳ ಆದಾಯ ಪ್ರವರ್ತಕರು. ಬಹಿರಂಗವಾಗಿ ನಿಷೇದ ಹೇರಿದಾಗ ಗೌಪ್ಯವಾಗಿ ನಡೆಯುತ್ತಿದೆ. ಅದೇ ಅಮಾವಾಸ್ಯೆಗಳು ಇಂದಿಗೂ ಪ್ರಶಸ್ತವಾಗಿಯೇ ಇವೆ. ದೇವಾಲಯಕ್ಕೆ ಹೋಗುವ ಬದಲು ಪೂಜಾರಿಗಳೇ ಮನೆಗೆ ಬರುತ್ತಾರೆ. ನಾಲ್ಕು ಗೋಡೆಗಳೊಳಗೆ ಮುತ್ತು ಕಟ್ಟುತ್ತಾರೆ.

ಇದನ್ನು ಹೆತ್ತವರು, ಕುಟುಂಬದವರೇ ಖುದ್ದು ನಿಂತು ನೆರವೇರಿಸುತ್ತಾರೆ. ಸ್ವಲ್ಪ ತಡವಾದರೂ ಫಲಾನುಭವದ ನಿರೀಕ್ಷೆಯ ಆ ಕುಟುಂಬ ಚಡಪಡಿಸುತ್ತದೆ. ನಂತರ ಅಧಿಕೃತವಾಗಿ ಆ ಹೆಣ್ಣು ವೃತ್ತಿಗಿಳಿಯುತ್ತದೆ.

ಇದರೊಂದಿಗೆ ಈ ಹೆಣ್ಣುಗಳು ವಲಸೆ ಹೋಗುವುದೂ ಕೂಡ ಹಿಂದಿನಿಂದಲೂ ಇದೆ. ಆದರೆ ದಿನದಿಂದ ದಿನಕ್ಕೆ ಅದು ಹೆಚ್ಚುತ್ತಲೇ ಇದೆ. ಉದಾ: ಒಂದು ಹಳ್ಳಿಯಿಂದ ಬಾಂಬೆಗೆ, ಗಲ್ಫ್‌ಗೆ ಹೋದವಳು ಬಾಂಬೆಯಿಂದ ವರ್ಷಕ್ಕೊಮ್ಮೆ 'ಉರುಸ್' ಜಾತ್ರೆಗೆ ಬರುತ್ತಾಳೆ. ಬರುವಾಗ ತಾನು ಸಂಪಾದಿಸಿದ ಗಂಟಿನೊಂದಿಗೆ ಬಂದು ಬೀಗುತ್ತಾಳೆ. ಹಳ್ಳಿಯಲ್ಲಿನ ಕುಟುಂಬದ ಸ್ಥಿತಿಯನ್ನು ಬದಲಾಯಿಸುತ್ತಾಳೆ. ಇವಳು ಆ ಹಳ್ಳಿಗೇ ಮಾದರಿಯಾಗುತ್ತಾಳೆ. ಈ ಮಾದರಿಯ ಹೆಣ್ಣು ತನ್ನ ಪ್ರಭಾವದಿಂದ ಉರುಸ್‌ನಿಂದ ಹಿಂತಿರುಗುವಾಗ ಒಂದಷ್ಟು ಮುತ್ತು ಕಟ್ಟಿಸಿಕೊಂಡ ದೇವರ ಮಕ್ಕಳನ್ನು! ಕರೆದೊಯ್ಯುತ್ತಾಳೆ.

ಇದು ಪುನರಾವರ್ತನೆಯಾಗುತ್ತಲೇ ಇರುತ್ತದೆ. ಇಲ್ಲಿಯೂ 'ಹಣ' ತನ್ನದೇ ತನದೊಂದಿಗೆ, ತನ್ನದೇ ಸಮರ್ಥನೆಯೊಂದಿಗೆ ಹರಿಯುತ್ತಲೇ ಇರುತ್ತದೆ. ಈ ಸರಬರಾಜೂ ಕೂಡ ಒಂದು ದೊಡ್ಡ ಜಾಲವೇ ಆಗಿದೆ.


ಅವರೊಂದಗೆ ಚರ್ಚಿಸುವಾಗ, ಇನ್ನೊಂದು ಅಂಶ ಗಮನಕ್ಕೆ ಬಂತು. ಇದೂ ಕೂಡ 'ಆರ್ಥಿಕ ಸಂಬಂಧ'ದೊಂದಿಗೆ ತಾಳೆ ಯಾಗುವುದರಿಂದ ಇಲ್ಲಿಯೇ ಈ ವಿಚಾರವನ್ನು ತರುತ್ತಿದ್ದೇನೆ.

ನಿಷೇಧ ಹೇರಿದ ಸರ್ಕಾರ 'ದೇವದಾಸಿ' ಮಹಿಳೆಯರ ಪುನರ್‌ವಸತಿ ಬಗ್ಗೆಯೂ ತನ್ನ ಸೇವೆ ಸಲ್ಲಿಸುತ್ತಿದೆ!

ಪ್ರತಿ ವರ್ಷ ಒಬ್ಬ ದೇವದಾಸಿ ಎಂದು ಹೇಳುವ ಮಹಿಳೆಗೆ ಒಂದು ಎಮ್ಮೆ ಕೊಡಿಸುತ್ತಾರಂತೆ, ಆ ಎಮ್ಮೆಗೆ ಸುಮಾರು ೫-೬ ಸಾವಿರ ಮಂಜೂರು ಈ ಹೆಮ್ಮೆ ಪಡೆಯಲು ಸಂಬಂಧಪಟ್ಟ ಅಧಿಕಾರಿಗೆ ೨೦೦೦ ಕೊಡಬೇಕು. ನಂತರದ ಎಲ್ಲಾ ಮುಗಿಯುವ ಹೊತ್ತಿಗೆ, ಅವಳು ಕೊಂಡೊಯ್ಯುವುದು ಒಂದೆರಡು ಸಾವಿರ. ಎಮ್ಮೆಯೂ ಇಲ್ಲ. ಹೊಸಬದುಕಿನ ಎಮ್ಮೆಯ ಸಂಗಾತಿಯೂ ಇಲ್ಲ, ಇದು ನಿರಂತರವಾಗಿ ನಡೆಯುತ್ತಲೇ ಇದೆ.

ವೇಶ್ಯಾವಾಟಿಕೆ ಮತ್ತು ಆರ್ಥಿಕ ಸಂಬಂಧಗಳು ಈ ಸಮಾಜದ ಅಗಲದಷ್ಟೂ ಹರಡಿಕೊಂಡಿದೆ. ಬಹು ಸಹ
ಜವೆಂಬಂತೆ, ಇದನ್ನೆಲ್ಲ ಪಡೆದೂ ಕೂಡ ತಮ್ಮನ್ನು ಕೀಳಾಗಿ/ ಅನಿಷ್ಟವಾಗಿ ಕಾಣುತ್ತಿರುವ ಈ ಜಾಣ ಕುರುಡುತ
ನದ ಸಮಾಜಕ್ಕೆ ಸವಾಲೆಸೆಯುವ, ಧಿಕ್ಕರಿಸಿ ನಿಲ್ಲುವ ಶಕ್ತಿಯನ್ನು ಈ ಸಮುದಾಯ ರೂಪಿಸಿಕೊಳ್ಳಬೇಕಿದೆ.


ಬಿ.ಎನ್.ಪ್ರದೀಪ್






ಅಧ್ಯಾಯ : ೯

ವೇಶ್ಯಾವಾಟಿಕೆ ಮತ್ತು ಕಾನೂನು

ಪ್ರೋತ್ಸಾಹ ಮತ್ತು ನಿಯಂತ್ರಣ ಚಟುವಟಿಕೆಗಳು



ಸುಮಾರು ೨೦ ಅಡಿ ೨೦ ಅಡಿಯಷ್ಟು ಉದ್ದಗಲದ ಒಂದು ಒಳಾಂಗಣ. ಒಂದು ದೊಡ್ಡ ಕುರ್ಚಿ. ಕುರ್ಚಿಗೆ ತಾಗಿ ದೊಡ್ಡದಾದ ಒಂದು ಅಥವಾ ಅಂಟಿಕೊಂಡಂತೆ ೨ ಟೇಬಲ್ಲು. ಟೇಬಲ್ಲಿನ ತುದಿಯಲ್ಲಿ ಭರತಮಾತೆಯ ನ್ಯಾಯದೇವತೆ ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು, ಕೈಯ್ಯಲ್ಲೊಂದು ತಕ್ಕಡಿ ಹಿಡಿದು ನಿಂತಿರುವ ಒಂದು ಶಿಲ್ಪ. ಅದಕ್ಕಿಂತ ಕೆಳಗೆ ಅಂದರೆ ದೊಡ್ಡ ಟೇಬಲ್ಲಿಗೆ ತಾಗಿ ಸಣ್ಣ ಟೇಬಲ್ಲು. ೨ ಕುರ್ಚಿಗಳು. ಆ ತುದಿಗೊಂದು ಈ ತುದಿಗೊಂದು, ಅದರ ಮುಂದಕ್ಕೆ ಒಂದು ಸಣ್ಣ ಒಳಾಂಗಣ. ಅದರಾಚೆ ಅಕ್ಕಪಕ್ಕದಲ್ಲಿ ಕಟಕಟೆಗಳು...

ಆ ದೊಡ್ಡ ಏಕೈಕ ಕುರ್ಚಿಯಲ್ಲಿ ನ್ಯಾಯದೇವತೆಯ ಪ್ರತಿರೂಪದ ಪ್ರತಿನಿಧಿ ನ್ಯಾಯಾಧೀಶರು ಕುಳಿತಿರುತ್ತಾರೆ. ತಾವೂ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು, ಕೈಯಲ್ಲಿ ತಕ್ಕಡಿಯಿಲ್ಲ, ಪೆನ್ನಿರುತ್ತದೆ. ನಿರ್ಲಿಪ್ತ ಮನಸ್ಸಿರುತ್ತದೆ. ಅದೆಂಥದೋ ನಿರ್ಲಿಪ್ತತೆ ಮುಖದಲ್ಲಿ ರಾಚುತ್ತಿರುತ್ತದೆ.

ಮಧ್ಯಾಹ್ನದ ಸಮಯ, ಊಟಕ್ಕೆ ಮುಂಚೆ, ಕೆಲವೊಮ್ಮೆ ಇನ್ನೇನು ಕೋರ್ಟು ಬಾಗಿಲು ಮುಚ್ಚುವ ಸಮಯ. ಅದಕ್ಕಿಂತ ಒಂದೈದು ನಿಮಿಷಗಳ ಮೊದಲು ಹೊರಗಿನ ಮೆಟ್ಟಿಲಲ್ಲಿ ಅಥವಾ ಮೂಲೆಯಲ್ಲಿ ೮-೯ ಹುಡುಗಿಯರುನಿಂತಿರುತ್ತಾರೆ. ಅಲ್ಲಿಯೇ ಬಂಧಿಸಿದ ವ್ಯಾಪ್ತಿಯ ಪೋಲೀಸ್‌ಠಾಣೆಯ ಕೋರ್ಟ್‌ಪಿ.ಸಿ. ಅಡ್ಡಾಡುತ್ತಿರುತ್ತಾರೆ. ಹಿಂದಿನ ದಿನವೇ ಬಂಧಿಸಿ ಸ್ಟೇಟ್ ಹೋಂನಲ್ಲಿಟ್ಟಿದ್ದು ಅಲ್ಲಿಂದ ಕೋರ್ಟಿಗೆ ಹಾಜರುಪಡಿಸಿರುತ್ತಾರೆ. ಕೋರ್ಟ್ ಆವರಣದಲ್ಲಿಯೇ ಬಂಧಿಸಲ್ಪಟ್ಟ ಮಹಿಳೆಯರ ವಾರಸುದಾರರು, ಅಥವಾ ಪಿಂಪ್‌ಗಳು, ಸ್ನೇಹಿತೆಯರು, ಅಥವಾ ಗಿರವಿ ಅಂಗಡಿಯವರು, ಬ್ರೋಕರ್‌ಗಳು, ಘರ್‌ವಾಲಿಗಳು... ಕಾಯುತ್ತಿರುತ್ತಾರೆ. ಸರಿ ಮುಂದೆ ಕೊಡಲೇಬೇಕಾದ ದಂಡದ ವ್ಯವಸ್ಥೆಗೆ ತವಕಿಸುತ್ತಾಳೆ. ಏನಿಲ್ಲದಿದ್ದರೂ ತನ್ನನ್ನೇ ಅಡವಿಟ್ಟು ಬಡ್ಡಿ ಹಣ ಪಡೆದು ಎದೆಯೊಳಗೆ ತುರುಕಿ ಕಾಯುತ್ತಾ ನಿಲ್ಲುತ್ತಾಳೆ. ಕೆಲವೊಮ್ಮೆ ಯಾರೂ ಬರದೆ ದಂಡ ಕಟ್ಟಲು ದಾರಿ ಕಾಣದಾದಾಗ ಜೊತೆಯಲ್ಲಿ ಬಂಧಿಸಲ್ಪಟ್ಟವಳು ಸಾಧ್ಯವಾದಷ್ಟು ಅವಳಿಗೂ ವ್ಯವಸ್ಥೆ ಮಾಡುತ್ತಾಳೆ. ಆಚೆಗೆ ಹೋದ ಕೂಡಲೇ ವಾಪಸ್ಸು ಕೊಡಬೇಕೆಂಬ ಷರತ್ತಿನೊಂದಿಗೆ.

ಇದು ಲೈಂಗಿಕ ವೃತ್ತಿ ಮಹಿಳೆಯೊಬ್ಬಳು ನ್ಯಾಯಾಲಯದ ಒಳ ಪ್ರವೇಶಿಸಿದಾಗಿನ ದೃಶ್ಯ. ಉಸಿರು ಕಟ್ಟಿಸುವ ವಾತಾವರಣ. ಎಂಥದೋ ಭಯ, ಆತಂಕ, ಆತುರ. ಆ ದೊಡ್ಡ ಕುರ್ಚಿಯೆಂದೂ ಸ್ಪಷ್ಟವಾಗಿ ಇವಳಿಗೆ ಕಂಡೇ ಇಲ್ಲ.

ಕೆಳಗಡೆ ಕುರ್ಚಿಯಲ್ಲಿ ಕೂರಲೂ ಆಗದೆ ನಿಲ್ಲಲೂ ಆಗದೆ ಹಾರಾಡುವವ ಅದೇನನ್ನೋ ನ್ಯಾಯದೇವತೆಗೆ ಉಸುರುತ್ತಾನೆ, ನ್ಯಾಯದೇವತೆ 'ಇನ್ನು ಮುಂದೆ ಹಾಗೆ ಮಾಡಬೇಡ ೨೦೦ ದಂಡಶುಲ್ಕ ಕಟ್ಟು' ಹಾಗೆಂದು ಹೇಳಿದ್ದು ಸ್ಪಷ್ಟವಾಗುವುದೇ ಆ ಕೆಳಗಿನ ವ್ಯಕ್ತಿ ಪುನರುಚ್ಚರಿಸಿದಾಗ.

"ಹೇ ಬರ್ರೀ ಸಾಲಾಗಿ ನಿಂತ್ಕೊಳ್ಳಿ. ಟೈಮಾಗ್ತಾ ಇದೆ. ಸಾಹೇಬ್ರು ಹೊರಟ್ಬಿಟ್ರೆ ಇವತ್ತೂ ನೀವು ಸ್ಟೇಟ್ ಹೋಂನಲ್ಲಿ ಕೊಳೀಬೇಕಾಗುತ್ತೆ. ನಿಮ್ಮ ಹೆಸರು ಕೂಗ್ದಾಗ ಒಬ್ಬೊಬ್ರೇ ಹೋಗ್ರೀ, ಚಪ್ಪಲಿ ಆಚೇಲೇ ಬಿಡ್ರಿ. ಏಯ್ ಬಟ್ಟೆ ಸರಿಮಾಡ್ಕಳ್ರೀ, ಗಲಾಟೆ ಮಾಡ್ಬೇಡ್ರಿ... ಮಾನಸಿಕವಾಗಿ ಅವರನ್ನು ಈ ಪೇದೆಗಳು ಸಿದ್ಧ ಮಾಡೋ ಪರಿ ಇದು. ಅವರು ದಂಡಿಸಿದ್ದು ೨೦೦ ರೂಗಳಾದರೆ (ಇದು ಉದಾಹರಣೆಯಷ್ಟೇ. ಕೆಲವೊಮ್ಮೆ ಇದು ವ್ಯತ್ಯಾಸವಾಗುತ್ತದೆ.) ಗುಮಾಸ್ತನಿಗೆ, ಪೇದೆಗೆ ಎಲ್ಲ ಸೇರಿ ಪೇದೆ ಕೇಳಿದಷ್ಟು (ಸಾಮಾನ್ಯವಾಗಿ ರೂ.500) ಕೊಟ್ಟು ಬರಬೇಕು. ಅಲ್ಲಿಗೆ ಆ ದಿನದ ಬಂಧನ ಮುಕ್ತಳಾಗುತ್ತಾಳೆ!

ನ್ಯಾಯಾಧೀಶರೇಕೆ ಒಮ್ಮೆಯಾದರೂ ಕತ್ತೆತ್ತಿ ನಮ್ಮನ್ನು ದಿಟ್ಟಿಸಿ ಪ್ರಶ್ನಿಸುವುದಿಲ್ಲ ಅಥವಾ ದಂಡ ವಿಧಿಸುವುದಿಲ್ಲವೆಂದು ಆ ಮಹಿಳೆಯರೂ ಎಂದೂ ಪ್ರಶ್ನಿಸಲಾರರು?

ಯಾರಾದರೂ ಒಬ್ಬ ನ್ಯಾಯಾಧೀಶರಾದರೂ ಉತ್ತರಿಸಲಿ, ಈ ರೀತಿ ದಂಡ ವಿಧಿಸಿ ವಿಧಿಸಿ ಅವರು ಸಾಧಿಸಿದ್ದಾದರೂ ಏನೆಂದು? ಯಾಕೆ ಈ ಕಾನೂನುಗಳಿಗೆ ಇಷ್ಟೊಂದು ನಿರ್ಲಿಪ್ತತೆ?

ಕೆಲವೊಮ್ಮೆ ಕೋರ್ಟಿನಿಂದ ಆಗ ತಾನೇ ಬಂದಿರುತ್ತಾಳೆ. ಮತ್ತೆ ಅದೇ ದಿನ ಬಂಧಿತಳಾಗುತ್ತಾಳೆ! ಮತ್ತದೇ ಸುಳಿ. ಹೀಗೆ ಬಂಧಿತಳಾದಾಗಲೆಲ್ಲ ಯಾವತ್ತೂ ಪೂರ್ವಸಿದ್ಧತೆಯೇನೂ ಮಾಡಿರುವುದಿಲ್ಲ. ಮಕ್ಕಳನ್ನು ಎಲ್ಲಿಯೋ ಬಿಟ್ಟು ಬಂದಿರುತ್ತಾಳೆ. ಕೆಲವೊಮ್ಮೆ ಅವಳು ವೃತ್ತಿ ಮಾಡುವಲ್ಲಿಯೇ ಮಕ್ಕಳಿರುತ್ತವೆ. ಇವಳು ಈ ಎಲ್ಲಾ ಪ್ರೊಸೀಜರ್ ಮುಗಿಸಿ ಹೋಗುವವರೆವಿಗೂ ಆ ಮಕ್ಕಳ ಪಾಡೇನು?

ಇನ್ನು ಕೆಲವೊಮ್ಮೆ ಮಕ್ಕಳಿಗೆ ತುಂಬಾ ಅನಾರೋಗ್ಯವಿರುತ್ತದೆ. ಅಥವಾ ಅವಲಂಬಿತರ್‍ಯಾರಿಗೋ ಇನ್ನೇನೋ ತುರ್ತು ಅಗತ್ಯಗಳಿರುತ್ತವೆ. ಏನೇ ಇರಲಿ. ಏಕಾಏಕಿಯಾಗಿ ಬಂಧಿತಳಾಗಿ ಬಿಡುತ್ತಾಳೆ. ಆ ತುಡಿತಗಳೊಂದಿಗೇ ಸ್ಟೇಟ್ ಹೋಂನಲ್ಲಿ ಮೈ-ಮನಗಳನ್ನು ಚೆಲ್ಲಲೇ ಬೇಕಾದ ಅನಿವಾರ್ಯವಾಗುತ್ತದೆ.

ಒಮ್ಮೆ ಮಂಜುಳಾ (ಹೆಸರು ಬದಲಿಸಲಾಗಿದೆ) ಎಷ್ಟು ಅಂಗಲಾಚಿದರೂ ಕೇಳದೆ ಮಾಮೂಲಿಯ ಪೇದೆಯೇ ಬಂಧಿಸಿ ಬಿಟ್ಟರು. ಸ್ಟೇಷನ್‌ಗೂ ಕರೆದೊಯ್ಯಲಾಯಿತು. ಅಲ್ಲಿಂದ ರಾತ್ರಿ ಸ್ಟೇಟ್ ಹೋಂಗೆ ಪೋಲೀಸ್ ಠಾಣೆಯಿಂದ ಹೊರಗೆ ಕರೆ ತಂದರು. ಇನ್ನೇನು ತಪ್ಪಿಸಿ ಕೊಳ್ಳಬೇಕೆಂದು ಮಂಜುಳಾ ಪ್ರಯತ್ನಿಸುತ್ತಿದ್ದಳು. ಇದರ ಸುಳಿವು ಸಿಕ್ಕಿದ ಪೇದೆ ಅವಳ ಸೀರೆ ಹಿಡಿದು ಕೊಂಡ. ಆ ಸೀರೆಯನ್ನೇ ಬಿಚ್ಚಿ ಪೇದೆಯ ಮುಖದ ಮೇಲೆ ಎಸೆದು ಬರೀ ಒಳಲಂಗ, ಬ್ಲೌಸ್‌ನಲ್ಲಿಯೇ ಓಡಿದಳು, ಓಡಿದಳು. ಒಂದಷ್ಟು ದೂರ ಓಡಿ ಅಲ್ಲಲ್ಲೋ ಮರೆಯಲ್ಲಿ ಅವಿತಿದ್ದು ಕತ್ತಲು ದಟ್ಟವಾದ ಮೇಲೆ ಹೇಗೋ ಮನೆ ತಲುಪಿದಳು. ಆ ಸ್ಥಿತಿಯಲ್ಲಾದರೂ ಆಗ ಅವಳು ಮನೆ ತಲುಪಲೇ ಬೇಕಿತ್ತು, ಯಾಕೆಂದ್ರೆ, ಆ ದಿನ ಅವಳ ಮಗಳ ಮದುವೆಯ ನಿಶ್ಚಿತಾರ್ಥವಿತ್ತು

ಹೇಗೋ ಹೊಂದಿಸಿ ಮಗಳಿಗೆ ಸೀರೆ, ಹೂವು ಕೊಂಡೊಯ್ಯಲು ಮಂಜುಳಾ ಮೆಜೆಸ್ಟಿಕ್‌ಗೆ ಬಂದಿದ್ದಳು.

ಮಾರನೇ ದಿನ ಮಂಜುಳಾ ವೃತ್ತಿಯ ಸ್ಥಳಕ್ಕೆ ಬಂದಳು. ಹಿಂದಿನ ದಿನದ ಘಟನೆಯಿಂದ ಬುಸುಗುಡುತ್ತಿದ್ದ ಪೇದೆ ಬಿಡಲೇ ಇಲ್ಲ. ಅವಳೊಂದಿಗೆ ಒಟ್ಟು ೯ ಮಹಿಳೆಯರನ್ನು ಆ ದಿನ ಬಂಧಿಸಿದರು. ನಡುಬೀದಿಯಲ್ಲಿ ಪೋಲೀಸ್ ಇಲಾಖೆಗೇ ಸವಾಲ್ಹಾಕಿ ಸೀರೆ ಬಿಚ್ಚಿ ಓಡಿದ್ದ ತಪ್ಪಿಗೆ ಅಮಾನವೀಯ ಶಿಕ್ಷೆಯಾಯ್ತು. ಪೋಲೀಸ್ ಠಾಣೆಯಲ್ಲಿಯೇ ಅವಳನ್ನು ಚೆನ್ನಾಗಿ ಥಳಿಸಿ, ಬೂಟುಕಾಲಲ್ಲಿ ತುಳಿದು ಅವಳ ಗುಪ್ತಾಂಗಗಳಿಗೆ ಮತ್ತು ಕಣ್ಣುಗಳಿಗೆ ಖಾರದ ಪುಡಿತುಂಬಿಸಿದರು. ನೀರಿಗಾಗಿ ಅವಳ ಆಕ್ರಂದನ ಇಡೀ ಮೆಜೆಸ್ಟಿಕ್ ಆಲಿಸುವಂತಿತ್ತು. ಅವಳೊಂದಿಗೆ ಬಂಧಿತರಾದವರೂ ಅವಳ ಸಹಾಯಕ್ಕೆ ಹೋಗದಂತೆ ಕಟ್ಟೆಚ್ಚರವಾಗಿತ್ತು. ಹಾಗೂ ಮೀರಿ ಅವಳ ಸಹಾಯಕ್ಕೆ ಹೋದರೂಪಾಳಿಗೂ ಚೆನ್ನಾಗಿ ಥಳಿಸಲಾಯ್ತು.

ಇದು ತಿಳಿದ ಕೂಡಲೇ ಪೋಲೀಸ್ ಠಾಣೆಗೆ ಧಾವಿಸಿದೆವು. ಸ್ವಯಂ ಜಾಮೀನು ಕೊಟ್ಟು ಅವರನ್ನು ಹೊರ ತಂದು ಮಂಜುಳಾ ಮತ್ತು ರೂಪಾಳಿಗೆ ಚಿಕಿತ್ಸೆ ಕೊಡಿಸಿ ಮೆಡಿಕಲ್ ಸರ್ಟಿಫಿಕೇಟ್ ಮಾಡಿಸಿದೆವು.

ಒಪ್ಪಂದದಂತೆ ಮಾರನೇ ದಿನ ಎಲ್ಲರನ್ನು ಕೋರ್ಟಿಗೆ ಹಾಜರುಪಡಿಸಿದೆವು. ರೂಪ ಮತ್ತು ಮಂಜುಳಾ ಇಬ್ಬರು ತಾವು ಕೇಸ್ ನಡೆಸುವುದಾಗಿ ಕತ್ತು ಬಗ್ಗಿಸಿಯೇ ಇದ್ದ ನ್ಯಾಯಾಧೀಶರಿಗೆ ಮನವಿ ಮಾಡಿದರು. ಪ್ರಪ್ರಥಮ ಬಾರಿಗೆ (ನನ್ನ ಅನುಭವದಲ್ಲಿ) ನ್ಯಾಯಾಧೀಶರು ತಲೆ ಎತ್ತಿದರು! ''ಯಾರು ನಿಮ್ಮ ಲಾಯರು? ಎಂದರು.

ಪ್ರಪ್ರಥಮ ಬಾರಿಗೆ ಕೇಸ್ Contest ಮಾಡಿದ ಸುದ್ದಿ ವೃತ್ತಿ ಪ್ರದೇಶ ಅದಕ್ಕಿಂತಲೂ ಸಂಬಂಧಿಸಿದ ಪೋಲೀಸ್ ಠಾಣೆಗೆ ತಲುಪಿತ್ತು. ಅವರಿಗೂ ಇದು ಅಚಾನಾಕ್ಕಾಗಿತ್ತು.

ಈ ಘಟನೆಯನ್ನು ಖಂಡಿಸಿ ಪೋಲೀಸ್ ದೌರ್ಜನ್ಯದ ವಿರುದ್ಧ ಮಾಧ್ಯಮಗಳಿಗೂ ವಿವರಿಸಿದೆವು. ಅದೇ ಆಧಾರದಲ್ಲಿ ವಿಧಾನಪರಿಷತ್ತಿನಲ್ಲಿ ಚರ್ಚೆಯಾಯ್ತು. ಸಂಬಂಧಿಸಿದ ಅಧಿಕಾರಿಗಳನ್ನು ವರ್ಗಾಯಿಸಿದರು. ಇತ್ತೀಚೆಗೆ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಲೈಂಗಿಕವೃತ್ತಿ ಮಹಿಳೆಯರ ಸಂಘಟನೆಗಳು ಕೇಸುಗಳನ್ನು ದಾಖಲಿಸುವುದು ರೂಢಿಯಾಗುತ್ತಿದೆ. ಆದರೂ ಪರಿಸ್ಥಿತಿಯೇನೂ ಸುಧಾರಿಸಿಲ್ಲ.

ಪೇದೆಗಳು ಲೈಂಗಿಕ ವೃತ್ತಿ ಮಹಿಳೆಯರನ್ನು ನಿಂತಲ್ಲೇ, ಕುಂತಲ್ಲೇ, ನಡೆಯುವಲ್ಲೇ, (ನಮ್ಮೊಂದಿಗೆ ಮಾತಾಡುವಾಗಲೂ ಎಷ್ಟೋ ಬಾರಿ) ಬಂಧಿಸುವ ಮುಂದಾಗುತ್ತಾರೆ.

ಮಾಮೂಲಿ ಕೊಟ್ಟರೂ ಬಂಧಿಸುತ್ತಾರೆ! ಬಂಧಿಸಿದ ನಂತರ ಪೋಲೀಸ್ ಠಾಣೆಗೆ ಕರೆದೊಯ್ಯುತ್ತಾರೆ. ಠಾಣೆಯೊಳಗೆ ಮನಸೋ ಇಚ್ಛೆ ಶಿಕ್ಷಿಸುತ್ತಾರೆ. ಚಿತ್ರ ಹಿಂಸೆ ಕೊಡುತ್ತಾರೆ. ಲೈಂಗಿಕವೃತ್ತಿ ಮಹಿಳೆಯರೇ ಹೇಳುವಂತೆ ಅದಕ್ಕೊಂದು ಇತಿಹಾಸವೇ ಇರುತ್ತದೆ. ೧೦-೧೫ ವರ್ಷಗಳಿಂದಲೂ ಯಾವ್ಯಾವ ಇನ್‌ಸ್ಪೆಕ್ಟರುಗಳು ಆ ಠಾಣೆಗೆ ಬಂದು ಹೋದರೂ, ಅವರು ಶಿಕ್ಷಿಸುತ್ತಿದ್ದ ಐಹಾಣದ ಮೇಲೆ ಅವರ ಪರಾಕ್ರಮ

ವೆಷ್ಟು ಎಂಬುದನ್ನು ಪಟಪಟನೆ ಹೇಳಿಬಿಡುತ್ತಾರೆ. ಅಷ್ಟೊಂದು ಮಾಮೂಲು ಈ ದೌರ್ಜನ್ಯ. ಅವುಗಳಲ್ಲಿ ಕೆಲವನ್ನು ನಾನಿಲ್ಲಿ ಹೇಳುತ್ತಿದ್ದೇನೆ.

ಕಂಬಕ್ಕೆ ಮಹಿಳೆಯನ್ನು ತಬ್ಬಿಕೊಳ್ಳುವಂತೆ ಹೇಳಿ ದೇಹದ ಹಿಂಭಾಗಕ್ಕೆ ದೊಣ್ಣೆಯಿಂದ ಹೊಡೆಯುವುದು, ಕುಳ್ಳಿರಿಸಿ ಕಾಲುಗಳನ್ನು ಚಾಚಿಸಿ ಮಂಡಿಚಿಪ್ಪಿನ ಮೇಲೆ ಬೂಟು ಕಾಲುಗಳ ಭಾರ ಬಿಟ್ಟು ನಿಲ್ಲುವುದು. ಜುಟ್ಟುಗಳನ್ನು ಹಿಡಿದು ಮೇಲೆತ್ತಿ ಕೆಳಕ್ಕೆ ಎಸೆಯುವುದು, ಮೊಳಕಾಲುಗಳ ಹಿಂಭಾಗಕ್ಕೆ ರಾಡುಗಳನ್ನು ಇಟ್ಟು ಮೇಲೆ ನಿಂತು ತುಳಿಯುವುದು, ಕಣ್ಣಿಗೆ/ಗುಪ್ತಾಂಗಕ್ಕೆ ಖಾರದ ಪುಡಿ ಹಾಕುವುದು, (ಉಚಿತ) ಲೈಂಗಿಕ ಕ್ರಿಯೆ, ಮುಖಕ್ಕೆ ಉಗುಳುವುದು, ಬಟ್ಟೆ ಕಳಚುವುದು, ಮೈ ಮೂಳೆಗಳು ಸಿಕ್ಕಿದಲ್ಲೆಲ್ಲಾ ಹೊಡೆಯುವುದು, ಜುಟ್ಟನ್ನು ಎತ್ತಿ ಕೊಕ್ಕೆಗಳಿಗೆ ಕಟ್ಟುವುದು, ಉಗುರು ಎತ್ತುವುದು...

ಇವುಗಳು ತೀರಾ ಸಾಮಾನ್ಯವಾದ ಶಿಕ್ಷೆಗಳ ಸ್ಯಾಂಪಲ್‌ಗಳು (ಪ್ರಶ್ನಾವಳಿ ಮೂಲಕ ೧೦೦ ಲೈಂಗಿಕ ವೃತ್ತಿ ಮಹಿಳೆಯರನ್ನು ಸಂದರ್ಶಿಸಿ ಪಡೆದ ವಿವರ) . ಕೆಲವೊಮ್ಮೆ ಕೇಸ್ ದಾಖಲಿಸಿಯೇ ಬಿಡುತ್ತಾರೆ. ಅವರ ಬ್ಲೌಸ್‌ಗಳೊಳಗೆ ಗಾಂಜಾ ಪ್ಯಾಕೆಟ್‌ಗಳನ್ನು ಪೋಲೀಸರೇ ತೂರಿಸಿ ಇವಳು ಗಾಂಜಾ ಮಾರುತ್ತಿದ್ದಳು ಎಂದು ಹೇಳುವುದು. ಕೆಲವೊಮ್ಮೆ ಲಾಡ್ಜ್‌ಗಳ ರೂಂಬಾಯ್‌ಗಳನ್ನೇ ಒಪ್ಪಿಸಿ ಗಿರಾಕಿಯೆಂತಲೂ ಹಾಜರು ಪಡಿಸುತ್ತಾರೆ. ತಿಂಗಳ ಖೋಟಾ ಭರ್ತಿ ಮಾಡಲೋಸ್ಕರವೇ ವೇಶ್ಯಾಗೃಹಗಳಿಂದ ಇತರೆ ಲೈಂಗಿಕವೃತ್ತಿ ಮಹಿಳೆಯರನ್ನು ತಂದು ಅವರನ್ನು ದಾಖಲಿಸುತ್ತಾರೆ.

ಪೋಲೀಸರನ್ನೇ ಕೇಳಿದಾಗ ಅವರ ಮೇಲಿರುವ ಹತ್ತು ಹಲವು ಒತ್ತಡಗಳನ್ನು ಹೇಳಿಕೊಳ್ಳುತ್ತಾರೆ. (ಈ ವಿವರಣೆಯನ್ನು ವೇಶ್ಯಾವಾಟಿಕೆ ಮತ್ತು ಆರ್ಥಿಕ ಸಂಬಂಧಗಳು ಅಧ್ಯಾಯದಲ್ಲಿ ವಿವರಿಸಿರುವೆನು)

ತಿಂಗಳಲ್ಲಿ ಇಷ್ಟು ಕೇಸು ದಾಖಲಾಗಲೇ ಬೇಕು ಎನ್ನುವ ಒತ್ತಡ ಮೇಲಾಧಿಕಾರಿಗಳಿಂದ ಇರುತ್ತದೆ. ಮಾಮೂಲಿಯ ಬಗ್ಗೆ ಕೇಳಿದರೆ ಅಂತಹ ಸ್ಥಳಗಳಿಗೆ ವರ್ಗಾವಣೆಯಾಗಿ ಬರಲು ಲಕ್ಷಾಂತರ ರೂಪಾಯಿ ಸಾಲ ಮಾಡಿ ಲಂಚ ಕೊಟ್ಟು ಬಂದಿರುವ ಬಗ್ಗೆ ತೋಡಿಕೊಳ್ಳುತ್ತಾರೆ. ಪಡೆದ ಮಾಮೂಲಿಯೆಲ್ಲವೂ ತನಗೇ ಸೇರುವುದಿಲ್ಲವೆಂದೂ ಹಲವಾರು ಹಂತಗಳವರೆವಿಗೂ ಅದು ಹಂಚಿಕೆಯಾಗುತ್ತದೆಯೆಂದು ಕೆಲವು ಕಟು ವಾಸ್ತವಗಳನ್ನು ಹೇಳಿಕೊಳ್ಳುತ್ತಾರೆ.

ಇವೆಲ್ಲವೂ ಅದೆಷ್ಟು ಅವೈಜ್ಞಾನಿಕವಾದವುಗಳಾಗಿವೆ. ಮಾರಮ್ಮನ ಜಾತ್ರೆಯಲ್ಲಿ ಕುರಿ/ಕೋಳಿ ಬಲಿಕೊಡುವಷ್ಟೇ ಮೂಢನಂಬಿಕೆಯೆಂಬಂತೆ ಇಂದಿನ ಕೋರ್ಟು, ಪೋಲೀಸು, ಸರ್ಕಾರಗಳು ನಡೆದುಕೊಳ್ಳುತ್ತಿವೆಯಲ್ಲಾ? ಈ ವೃತ್ತಿಗೆ ಸಂಬಂಧಿಸಿ ಬಹುತೇಕ ಇದೇ ಪರಿಸ್ಥಿತಿ ಭಾರತಾದ್ಯಂತ ಅದೆಷ್ಟೋ ವರ್ಷಗಳಿಂದಲೇ ಇದ್ದರೂ ಹವ್ಯಾಹತವಾಗಿ ಇವೆಲ್ಲವೂ ನಡೆದೇ ಹೋಗುತ್ತಿವೆಯಾದರೂ ಹೇಗೆ?

ಕಣ್ಣು ಮುಚ್ಚಿಕೊಂಡೇ ನಡೆದುಕೊಳ್ಳುವ ನ್ಯಾಯಾಲಯವನ್ನು ಪ್ರಶ್ನಿಸಿದರೆ ನ್ಯಾಯನಿಂದನೆಯಾಗುವುದಾದರೂ ಹೇಗೆ?ಸೀಟಾ-ಪೀಟಾ ಆಗಿ ಪೀಟಾ-ಈಟಾ ಆದರೂ ಮೇಲಿನ ಯಾವೂ ಯಾರ ನಿಯಂತ್ರಣ

ಕ್ಕೂ ಬಾರದಿರುವ ಪರಿಸ್ಥಿತಿಯಾದರೂ ಏನು? ಇದೆಲ್ಲಕ್ಕೂ ಷೆಡ್ಡು ಹೊಡೆದು ಇದೊಂದು ‘ಸೇವೆ’ ಯಾಗಿ ಈ ಸಮಾಜದ ತುಂಬೆಲ್ಲಾ ವಿವಿಧ ಪದರುಗಳೊಂದಿಗೆ ವ್ಯಾಪಿಸಿಕೊಂಡು ಹೋಗುತ್ತಲೇ ಜಾಗತೀಕರಣವನ್ನು ತಬ್ಬಿಕೊಂಡುಬಿಟ್ಟಿದೆಯಲ್ಲಾ?

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯ ವೇಶ್ಯಾವಾಟಿಕೆಗೆ ಸಂಬಂಧಿಸಿದ ನಿಯಮ ನಿಬಂಧನೆಗಳನ್ನು ಅವಲೋಕಿಸಿದಾಗ ಕ್ರಿ.ಪೂ. ೩೦೦ ರಲ್ಲಿಯ ಪ್ರಾಚೀನ ಭಾರತದಲ್ಲಿಯ ವೇಶ್ಯಾವಾಟಿಕೆಯ ಚಿತ್ರಣ ಸಿಗುತ್ತದೆ. ರಾಜನ ಆಡಳಿತ ಕೆಲವು ಕಾನೂನುಗಳನ್ನು ಮಾಡಿ ವೇಶ್ಯಾವಾಟಿಕೆಯನ್ನು ನಿಯಂತ್ರಿಸುವುದರೊಂದಿಗೆ ಅವರ ಯೋಗಕ್ಷೇಮವನ್ನು ಅದರೊಂದಿಗೇ ನೋಡಿಕೊಳ್ಳುತ್ತಿತ್ತು ಎಂಬುದು ಇಲ್ಲಿ ಗಮನಾರ್ಹ.

ಗಣಿಕೆ ಮೇಲೆ ಇತರರು ಮಾಡುತ್ತಿದ್ದ ಅಪರಾಧಗಳಿಗೆ ಶಿಕ್ಷೆಗಳು

ಅಪರಾಧಗಳು:	ಶಿಕ್ಷೆಗಳು:
೧. ಗಣಿಕೆಯನ್ನು ಮನೆಯಲ್ಲಿ ಬಂಧಿಸಿಟ್ಟುಕೊಂಡವರಿಗೆ, ಅವಳ ದಾಸ್ಯ ಹೋಗಲಾಡಿಸಲೂ ಯತ್ನಿಸುವವರಿಗೆ, ಬಲಾತ್ಕಾರದಿಂದ ಅವಳನ್ನು ಗಾಯಗೊಳಿಸಿದವರಿಗೆ (ಗಾಯದ ಪ್ರಮಾಣದ ಮೇಲೆಯೂ ದಂಡದ ಪ್ರಮಾಣ ಹೆಚ್ಚುಕಡಿಮೆ ಮಾಡಲಾಗುತ್ತಿತ್ತು. ಆದರೆ ಈ ದಂಡದ ಪ್ರಮಾಣ ಇಪ್ಪತ್ನಾಲ್ಕು ಸಾವಿರ ಪಣದಿಂದ ನಲವತ್ತೆಂಟು ಸಾವಿರ ಪಣ ಮೀರಬಾರದು)	೧. ಸಾವಿರ ಪಣ ದಂಡ ವಿಧಿಸಲಾಗುತ್ತಿತ್ತು.
೨. ಗಣಿಕೆಯ ಆಭರಣ, ದ್ರವ್ಯ, ಪಣ್ಯ ಅಪಹರಿಸಿದವರಿಗೆ	೨. ಮೊತ್ತದ ಎಂಟು ಪಾಲು ದಂಡ ವಿಧಿಸಲಾಗುತ್ತಿತ್ತು.
೩. ಗಣಿಕೆಯನ್ನು ಅಥವಾ ಗಣಿಕೆಯ ಮಗಳನ್ನು ಕೊಂದರೆ-	೩. ರಾಜನು ವಿಧಿಸಿದ ಶಿಕ್ಷೆಯನ್ನು ಅಪರಾಧಿಯು ಅನುಭವಿಸಬೇಕಾಗಿತ್ತು.
೪. ತಾಯಿಯ ಗಮನಕ್ಕೆ ಬಾರದೆ ಗಣಿಕೆಯ ಮಗಳನ್ನು ಕನ್ಯತ್ವವನ್ನು ಹಾಳು ಮಾಡಿದರೆ.	೪. ೫೪ ಪಣಗಳನ್ನು ವಿಧಿಸಲಾಗುತ್ತಿತ್ತು. (ಈ ದಂಡ ೧೬ ಬಾರಿ ಗಣಿಕೆಯ ಮನೆಗೆ ಬಂದಾಗಿನ ‘ಪಣ್ಯ’ ದಷ್ಟಿರುತ್ತಿತ್ತು.)

ಗಣಿಕೆ ಮಾಡುತ್ತಿದ್ದ ತಪ್ಪುಗಳಿಗೆ ಶಿಕ್ಷೆಗಳು

ಅಪರಾಧಗಳು:	ಶಿಕ್ಷೆಗಳು:
ಬೇರೆಯವರಿಗೆ ಕೊಟ್ಟರೆ	ನಾಲ್ಕು ಕಾಲು ಪಣ,
ಅಡವಿಟ್ಟರೆ, ಮಾರಿದರೆ	ಐವತ್ತೂ ಕಾಲು ಪಣ ದಂಡ ವಿಧಿಲಾಗುತ್ತಿತ್ತು.
ಗಣಿಕೆ ರಾಜನ ದಾಸ್ಯದಿಂದ ಬಿಡುಗಡೆಯಾಗ ಬೇಕೆಂದರೆ.	ಇಪ್ಪತ್ನಾಲ್ಕು ಸಾವಿರ ಪಣ ದಂಡ ಕೊಡಬೇಕಾಗಿತ್ತು.
ತನ್ನ ಮಗಳನ್ನು ಬಿಡಿಸಬೇಕೆಂದರೆ	ಹನ್ನೆರಡು ಸಾವಿರ ಪಣ ದಂಡ ಇಲ್ಲದಿದ್ದರೆ 8 ವರ್ಷ ಪ್ರಾಯದ ಮೇಲ್ಪಟ್ಟ ಮಗನನ್ನು ರಾಜನಲ್ಲಿ ಚಾರಣಕ್ಕೆ ಬಿಡಬೇಕಿತ್ತು.
ಗಣಿಕೆ ಮಾತಿನಿಂದ ಬೇರೆಯವರನ್ನು ನಿಂದಿಸಿದರೆ	ಇಪ್ಪತ್ನಾಲ್ಕು ಪಣ ದಂಡ.
ಕೈಕಾಲು ದೊಣ್ಣೆಯಿಂದ ಹೊಡೆದರೆ	ನಲವತ್ತೆಂಟು ಪಣ.
ಕಿವಿ ಕತ್ತರಿಸಿದರೆ	ಐವತ್ತೂ ಕಾಲು ಪಣ ದಂಡ.

ಗಣಿಕೆಯು ತನ್ನ ಆದಾಯ ಮತ್ತು ತನ್ನಲ್ಲಿಗೆ ಬರುವ ವಿವರ ವಿವರವನ್ನು ಗಣಿಕಾಧ್ಯಕ್ಷನಿಗೆ ಕೊಡಬೇಕಿತ್ತು.
ತನ್ನ ಆದಾಯ-ಖರ್ಚು-ಉಳಿದ ಲೆಕ್ಕ ಕೊಡಬೇಕಿತ್ತು.
ಆಸ್ತಿಯ ಹಕ್ಕು ಇವರಿಗಿರಲಿಲ್ಲ.

ಇಲ್ಲಿ ಕೆಲವನ್ನಾದರೂ ಅವಲೋಕಿಸಬೇಕಾಗುತ್ತದೆ

ಕಾಮಾಸಕ್ತಿ ತೋರದ ಗಣಿಕೆಯನ್ನು ಬಂಧಿಸಿಟ್ಟರೆ, ಬಲಾತ್ಕಾರದಿಂದ ಆವಳನ್ನು ಗಾಯಗೊಳಿಸಿದರೆ ಸಾವಿರ ಪಣ ದಂಡ ವಿಧಿಸಲಾಗುತ್ತಿತ್ತು. ಗಾಯದ ಪ್ರಮಾಣ ನೋಡಿ ದಂಡವನ್ನು ಹೆಚ್ಚು ಕಡಿಮೆ ಮಾಡಬಹುದಾಗಿತ್ತು.

ತಾಯಿಯ ಗಮನಕ್ಕೆ ಬಾರದೆ ಹಾಗೂ ಅವಳ ಮಗಳ ಕನ್ಯತ್ವ ಹಾಳುಮಾಡಿದರೆ 54 ಪಣಗಳನ್ನು ವಿಧಿಸಲಾಗುತ್ತಿತ್ತು.[1]

ಈ ಮೇಲಿನ ಕಾನೂನನ್ನು ಅವಲೋಕಿಸಿದರೆ ಇಂದಿನ ಪರಿಸ್ಥಿತಿ ಅದೆಷ್ಟು ಬಿಗಡಾಯಿಸಿದೆ. ಇಂದು ಪೋಲೀಸರೇ ಗುಪ್ತಾಂಗಳಿಗೆ ಖಾರದ ಪುಡಿ ತುಂಬುವಷ್ಟು ಅಮಾನವೀಯವಾಗಿ ನಡ್ಕೊಳ್ತಾರೆ, ಅವಳ ಮೈ-ಮನಸ್ಸುಗಳನ್ನು ಚಿಂದಿಚಿಂದಿಯಾಗುವಷ್ಟು ಘಾಸಿಗೊಳಿಸುತ್ತಾರೆ. ಸಾಮಾಜಿಕ ನಿಂದನೆ, ಬಂಧನಗಳಂತೂ ಅವಳ ವೃತ್ತಿ ಬದುಕಿನ ಉಸಿರಾಟದ ಒಂದು ಹಾದಿಯಷ್ಟೇ ಆಗಿ ಬಿಟ್ಟಿದೆ.

ಇನ್ನು ಅತ್ಯಾಚಾರಗಳಂತೂ ಪೋಲೀಸ್‌ಠಾಣೆಗಳಲ್ಲೇ ಅದೆಷ್ಟು ನಡೆದಿವೆಯೋ. ವೇಶ್ಯಾಗೃಹಗಳಲ್ಲಂತೂ ಬಲವಂತದಿಂದ, ಮೋಸದಿಂದ ಮಾರಾಟವಾದ ಹೆಣ್ಣುಗಳ ಮೇಲೆ ನಿರಂತರ ಅತ್ಯಾಚಾರಗಳು ನಡೆಯುತ್ತಲೇ ಇರುತ್ತವೆ. ವೇಶ್ಯಾಗೃಹಗಳಿಗೆ ಬರುವ ಮುದಿ ವಿಟರಿಗೆಲ್ಲಾ ಚಿಕ್ಕ ಪ್ರಾಯದ (ಮೊಮ್ಮಕ್ಕಳಂತಿರುವ) ಹೆಣ್ಣುಗಳೇ ಬೇಕು. ಅವರಿಗೆ ದರವೂ ಹೆಚ್ಚು. ವೇಶ್ಯಾಗೃಹ ಮಾಲೀಕಳಿಗಂತೂ ಈ ಮಾಲುಗಳಿದ್ದಷ್ಟೂ ಲಾಭವೇ. ಆ ಹಸು ಕಂದಮ್ಮಗಳ ದೇಹದ ಮೇಲೆ ಈ ಜೀವನದ ಹಾದಿ ಸವೆಸಿರುವ ಕಾಮುಕರ ಆಕ್ರಮಣ ಅತ್ಯಾಚಾರವಲ್ಲದೇ ಇನ್ನೇನಾಗುತ್ತದೆ.

ಇತ್ತೀಚೆಗೆ ಇನ್ನೊಂದು trend ಶುರುವಾಗಿದೆ. ಕನ್ಯತ್ವ ಹಾಳಾಗದಿರುವ ಚಿಕ್ಕ ಪ್ರಾಯದ ಹೆಣ್ಣು ಮಕ್ಕಳನ್ನು ಸಂಭೋಗಿಸಿದರೆ 'ಏಡ್ಸ್' ಗುಣಮುಖವಾಗುತ್ತದೆ ಮತ್ತು ಬರುವುದಿಲ್ಲ ಎಂಬ ಮೂಢ ನಂಬಿಕೆ ಕೂಡ ಇಂದು ಪುಟ್ಟ ಮಕ್ಕಳ ಮೇಲೆ ಅತ್ಯಾಚಾರ ನಡೆಯಲೂ ಕಾರಣವಾಗಿದೆ. (ಈ ಬಗ್ಗೆ ವಿವರವಾಗಿ ಹೆಚ್.ಐ.ವಿ/ಏಡ್ಸ್ ಅಧ್ಯಾಯದಲ್ಲಿ ಚರ್ಚಿಸಿರುವೆನು)

ಗಣಿಕೆಯನ್ನು ಗಾಯಗೊಳಿಸಿದರೆ ಸಾವಿರ ಪಣ ದಂಡ ವಿಧಿಸಲಾಗುತ್ತಿತ್ತು. ಇಂದಿನ ಲೈಂಗಿಕವೃತ್ತಿ ಮಹಿಳೆಯರಿಗಂತೂ ರೌಡಿಗಳು, ಪರ್ಕಿಗಳದ್ದೇ ಕಾಟ. ಬ್ಲೇಡನ್ನು ಬೆರಳುಗಳ ಸಂದಿಯಲ್ಲಿ ಇಟ್ಟುಕೊಂಡೇ ಗಸ್ತು ತಿರುಗುತ್ತಿರುತ್ತಾರೆ. ಅವರು ಕರೆದಲ್ಲಿಗೆ, ಕರೆದಾಗ ಬರಬೇಕು ಅಥವಾ ಅವರು ಕೇಳಿದಾಗ ಹಣ ಕೊಟ್ಟು ಬಿಡಬೇಕು. ಇಲ್ಲದಿದ್ದಲ್ಲಿ ಬ್ಲೇಡಲ್ಲಿ ಕುಯ್ಯುವುದು, ಮುಖಕ್ಕೆ ಆ್ಯಸಿಡ್ ಎರಚುವುದು ಸರ್ವೇ ಸಾಮಾನ್ಯ. ನನ್ನ ಅನುಭವದಲ್ಲಿ ಸುಮಾರು ೭೫% ಈ ಮಹಿಳೆಯರಲ್ಲಿ ಕುಯ್ದ ಗುರುತುಗಳಿರುತ್ತವೆ. ಕೆಲವೊಮ್ಮೆ ಮಹಿಳೆಯರೇ ಪ್ರತಿಸ್ಪರ್ಧಿಯಾಗಿ ಯಾರಾದರೂ ಬಂದರೆ, ಹೆಚ್ಚು ಗಿರಾಕಿಗಳನ್ನು ಅವಳು ಸೆಳೆಯುತ್ತಿದ್ದರೆ, ಅಥವಾ ತನ್ನ ಪ್ರಿಯತಮನ ಜೊತೆಯಲ್ಲಿ ಏನಾದರೂ ತಿರುಗುತ್ತಿದ್ದರೆ... ತಾವೇ ರೌಡಿಗಳಿಗೆ ಹಣ ಕೊಟ್ಟು ಅವಳ ಅಂದ ಕೆಡಿಸಲು, ಹೆದರಿಸಲು ಪ್ರಯತ್ನಿಸುತ್ತಾರೆ. ವೇಶ್ಯಾಗೃಹಗಳ ಘರ್‌ವಾಲಿಗಳು ತಮ್ಮ ವಶಕ್ಕೆ ಬರಲು ಒಪ್ಪದ ಹುಡುಗಿಯರನ್ನು ಹೆದರಿಸಲೂ ಈ ತಂತ್ರ ಬಳಸುತ್ತಾರೆ.

ಬೀದಿ ಬದಿಯ ಲೈಂಗಿಕವೃತ್ತಿ ಮಹಿಳೆಯರಂತೂ ತಮ್ಮಲ್ಲೇ ಪರಸ್ಪರ ಹೊಡೆದಾಡಿಕೊಂಡು ರಕ್ತಪಾತ ಮಾಡಿಕೊಳ್ಳುತ್ತಾರೆ. ಕುಡಿದು ಅಮಲೇರಿದರೆ ಸಾಕು. ಕಾರಣ ಯಾವುದಾದರೂ ಸರಿಯೇ ಅಥವಾ ಆಗಲೇ ಕಾರಣ ಸೃಷ್ಟಿಸಿಯಾದರೂ ಸರಿ ಹೊಡೆದಾಡಿಕೊಳ್ಳವುದು, ಪರಸ್ಪರ ನಿಂದಿಸುವುದು, ಸರ್ವೇ ಸಾಮಾನ್ಯ. ಎಷ್ಟೋ ಬಾರಿ ರಕ್ತ ಪಾತವಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲೇ ಈ ಹೊಡೆದಾಟಗಳು ನಡೆವಾಗಲಂತೂ ಸಾರ್ವಜನಿಕರು, ಹತ್ತಿರದ ಅಂಗಡಿ ಮುಂಗಟ್ಟುಗಳವರು, ಹತ್ತಿರದ ಮನೆಗಳವರು ಪೋಲೀಸರಿಗೆ ದೂರನ್ನು ಕೊಡುತ್ತಾರೆ. ಇಂತಹ ಸಂದರ್ಭದಲ್ಲಿಯೂ ಅನೇಕ ಮಹಿಳೆಯರು ಬಂಧಿಸಲ್ಪಡುತ್ತಾರೆ.

ಪುರುಷರು ವೇಶ್ಯಾವಾಟಿಕೆಯನ್ನು ನಡೆಸಬಾರದೆಂದು ನಿಷೇದ ಹೇರುವ ಸುಧಾರಣಾ ಕಾಯಿದೆಯೊಂದು ಮೊಟ್ಟಮೊದಲ ಬಾರಿಗೆ ಬಂತು. ೧೯೨೩ ರಲ್ಲಿ ವೇಶ್ಯೆಯರ ಮೇಲೆ ನೇರ ಪರಿಣಾಮ ಬೀರಿದ ಕಾಯಿದೆ.

ನೈತಿಕತೆ ಹಾಗೂ ದೇಶವಿದೇಶಗಳಿಗೆ ಹೆಣ್ಣುಗಳ ಸಾಗಿಸುವ ದಂಧೆಗೆ ತಡೆಯೊಡ್ಡುವ ಉದ್ದೇಶದಿಂದ ಇದೇ ಕಾಯಿದೆಯಲ್ಲಿ ೧೯೩೬-೩೭ರಲ್ಲಿ ತಿದ್ದುಪಡಿ ತರಲಾಯಿತು.

ವಿಜಿಲೆನ್ಸ್ ಅಸೋಸಿಯೇಷನ್ ಎಲ್ಲ ವೇಶ್ಯಾ ಗೃಹಗಳನ್ನು ಮುಚ್ಚುವ ಪ್ರಯತ್ನ ಮಾಡಿತು. ಆಗ ಎಲ್ಲ ವೇಶ್ಯೆಯರು ದಂಧೆ ನಡೆಸಲು ಬೀದಿಗಳಿಗೇ ಬಂದುಬಿಟ್ಟರು.

ಮಹಿಳಾ ಸಂಸ್ಥೆಗಳು ಈ ಮಹಿಳೆಯರಿಗೆ ಪುನರ್ವಸತಿ ರೂಪಿಸಿ ಅಲ್ಲಿ ಅವರಿಗೆ ಜೀವನಾಧಾರದ ಯಾವುದಾದರೂ ವೃತ್ತಿಗಳಲ್ಲಿ ತರಬೇತಿ ಕೊಡುವ ಬಗ್ಗೆ ಚಿಂತಿಸಿದವು.

'ವೇಶ್ಯಾವಾಟಿಕೆಗಳನ್ನು ಮುಚ್ಚಿಬಿಟ್ಟರೆ ಅಲ್ಲಿನ ವೇಶ್ಯೆಯರನ್ನು ಏನು ಮಾಡುವುದು?' ಎಂಬ ಸಮಸ್ಯೆ ಅಲ್ಲಿನ ಸರ್ಕಾರಿ ಅಧಿಕಾರಿಗಳಿಗೆ, ಪೋಲೀಸರಿಗೆ ತಲೆ ನೋವಾಯಿತು.

ಹೇಗೂ ಈ ವೇಶ್ಯಾವೃತ್ತಿಯನ್ನು ಕಾನೂನು ನಿಷೇಧದಿಂದ ಕೊನೆಗೊಳಿಸಲಾಗದು. ಹಾಗೊಂದು ವೇಳೆ ನಿಷೇಧಿಸಿದರೂ ಆ ಎಲ್ಲ ವೇಶ್ಯೆಯರಿಗೂ ಪುನರ್ವಸತಿಯಂತೂ ಸಾಧ್ಯವೇ ಇಲ್ಲ. ಎಂಬ ವಾದವನ್ನು ಮುಂದಿಟ್ಟರು.

ಕೊನೆಗೆ ಈ ಸಮಸ್ಯೆಗೆ ಏನಾದರೂ ಪರ್ಯಾಯ ವ್ಯವಸ್ಥೆಯೊಂದನ್ನು ಮಾಡಬೇಕೆಂದು ಒಂದು ಅಭಿಪ್ರಾಯಕ್ಕೆ ಬಂದರು. ಈ ವೇಶ್ಯಾವಾಟಿಕೆಗಳು ನಿರ್ಬಂಧಿತ ಕೆಲವೇ ಪ್ರದೇಶಗಳಲ್ಲಿರುವಂತೆ, ನಿಯಮ ಮಾಡಬೇಕು, ಹಾಗೆ ಮಾಡಿದಲ್ಲಿ ಆಡಳಿತ ಉಸ್ತುವಾರಿ ಸುಲಭವಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದರು.

ಅಂತೂ ೧೯೪೭ ರಲ್ಲಿ ದೇವಾಲಯ ಸೇವೆಗೆ ಹುಡುಗಿಯರನ್ನು ಮೀಸಲು ಬಿಡುವುದನ್ನು ನಿಷೇದಿಸುವ 'ದೇವದಾಸಿ ಸಂಹಿತೆ' ಬಂದಿತು.

ಲೆನಿನ್‌ರವರು ಅಂದಿನ ಸ್ಥಿತಿಗತಿಯ ಅನೇಕ ಪರಿಮಿತಿಗಳನ್ನು ಮುಕ್ತವಾಗಿ ಚರ್ಚಿಸಿದ್ದಾರೆ. ಶಾಸನಗಳನ್ನು ಮಾಡಿದರೂ ಕೂಡ ಆ ವ್ಯವಸ್ಥೆಯ ಬುನಾದಿಯಲ್ಲಿರುವ, ಪಳೆಯುಳಿಕೆಗಳ ಪೂರ್ವಾಗ್ರಹಗಳ ವಿರುದ್ಧ ಹೋರಾಡುವುದು 'ಹಳೆಯ ಶಾಸನಗಳ ವಿರುದ್ಧ ಹೋರಾಡುವುದಕ್ಕಿಂತ ಹೆಚ್ಚು ಕಷ್ಟವಾದುದು' ಎನ್ನುತ್ತಾರೆ.

ಇಲ್ಲಿ ಬಹಳ ಸ್ಪಷ್ಟವಾದುದು ಶಾಸನಗಳನ್ನು ಮಾಡುವುದು ಒಂದು ವ್ಯವಸ್ಥೆಗೆ ಅತ್ಯಗತ್ಯ. ಆದರೆ ಆ ಶಾಸನಗಳನ್ನು ಜಾರಿಮಾಡುವಂತಹ ಪ್ರಾಮಾಣಿಕತೆ, ಬದ್ಧತೆ, ಶಿಸ್ತು ಸಂಬಂಧ ಪಟ್ಟವರಿಗೆ ಇರಬೇಕು. ಅವುಗಳನ್ನು ಸ್ವೀಕರಿಸಿ ಸಮಾಜದ ಸ್ವಾಸ್ಥ್ಯ ಕಾಪಾಡುವ ಹೊಣೆ ಸಮಾಜಕ್ಕಿರಬೇಕು. ಆದಕ್ಕಿಂತಲೂ ಮುಖ್ಯವಾಗಿ ಆ ಶಾಸನ ಜಾರಿಯಾಗಬೇಕಾದರೆ ಅದನ್ನು ಸಂಬಂಧಪಟ್ಟವರು ಪ್ರಶ್ನಿಸಿ, ಹಕ್ಕುಗಳಿಗಾಗಿ ಸೆಟೆದು ನಿಲ್ಲಬಹುದಾದ ಕೆಚ್ಚು ಮತ್ತು ಸಂಘಟಿತ ಶಕ್ತಿ ಇರಬೇಕು. ಈ ಮೂರು ವಿಚಾರಗಳೂ ಒಂದಕ್ಕೊಂದು ಪೂರಕವಾಗಿದ್ದಾಗ ಮಾತ್ರ ಶಾಸನಗಳಿಂದ ಒಮದು ವ್ಯವಸ್ಥಿತ ಬದುಕು ರೂಪಿಸಲು ಸಾಧ್ಯ.

ರಾಜಿಗೆ (ಹೆಸರು ಬದಲಿಸಿದೆ) ನಾಲ್ಕು ಮಕ್ಕಳು, ನಾಲ್ಕು ಮಕ್ಕಳೂ ಕೂಡ ನಾಲ್ಕು ಜನ ಬಾಡಿಗೆ ಗಂಡಂದಿರು ತನ್ನ ಜೊತೆಯಲ್ಲಿದ್ದಾಗ ಆಯಾ ವ್ಯಕ್ತಿಗಳೊಂದಿಗೆ ಗುರುತಿಸಿಕೊಂಡಿದ್ದಾಗ ಹುಟ್ಟಿದವರು.

ಈಗಲೂ ಅವಳ ಪಾಳಯದಲ್ಲಿ ಮೊದಲ ಮಗನ ಅಪ್ಪ-ಗೋವಿಂದ, ಮಗಳ ಅಪ್ಪ-ಶಿವಣ್ಣ, ಮೂರನೇ ಮಗನ ಅಪ್ಪ-ಜೋಗಿ, ನಾಲ್ಕನೆಯವನ ಅಪ್ಪ-ಗುಂಡ... ಹೀಗೇ ಸ್ಪಷ್ಟವಾಗಿ ಮಾತಾಡ್ಕೊಳ್ತಾರೆ. ಅವರ ಪಾಳಯದ ಎಲ್ಲ ಲೈಂಗಿಕ ವೃತ್ತಿ ಮಹಿಳೆಯರ ಎಲ್ಲ ಮಕ್ಕಳ ಅಪ್ಪಂದಿರೂ ಅವರಿಗೆ ಸಾಮಾನ್ಯವಾಗಿ ಪರಿಚಯ. ಆದರೆ ಹುಟ್ಟಿಸಿದ ಅಥವಾ ನನಗೊಂದು ಮಗು ಬೇಕು ಎಂದು 'ಗಂಡನ' ಪ್ರತಿಮೆಯನ್ನು ಸ್ಥಾಪಿಸಲು ಹಣಗಾಡಿ ಹುಟ್ಟಿಸಿದ ಅವರಾದರೂ ಕೂಡ ಯಾವುದೇ ಜವಾಬ್ದಾರಿ ತೊಗೊಳ್ಳೋಲ್ಲ.

ಒಮ್ಮೆ ರಾಜಿ ಆ ಮಕ್ಕಳ ಹೊಣೆ ಅತಿಭಾರವಾಗಿ ಆಯಾ ಮಗು ಕರೆದುಕೊಂಡು ಹೋಗಿ ಅವರ ಮನೆಯ ಮುಂದೆ ನಿಂತು ಮಗುವನ್ನು ಸ್ವೀಕರಿಸಲು ಕೇಳಿದಾಗ 'ಹೆಂಡತಿ ಮಕ್ಕಳೊಂದಿಗೆ' ಮರ್ಯಾಧಾರಾಮನಾಗಿ ಬದುಕುತ್ತಿದ್ದ ಅವರಿಗೆ ಅತ್ಯಂತ ಅವಮಾನವಾಯ್ತು. ತನ್ನ ಮಾರ್ಯಾದೆಯನ್ನು ಹೀಗೆ ಬೀದಿ ಪಾಲು ಮಾಡುತ್ತಿದ್ದಾಳೆಂದೂ, ತನ್ನ ಬಿಗಿಯಾದ ಕೌಟುಂಬಿಕ ಚೌಕಟ್ಟನ್ನು ಮುರಿಯುತ್ತಿದ್ದಾಳೆಂಬ ಗಾಬರಿಯಲ್ಲಿ

ಅವಳನ್ನು ಹೀನಾಯಮಾನವಾಗಿ ಹೀಯಾಳಿಸಿ, ಅವಳಿಗೆ 'ಸೂಳೆ' ಪಟ್ಟ ಕಟ್ಟಿ, ಥಳಿಸಿ ಓಡಿಸಿದರು. ಏಕೆ ಈ ಸಂದರ್ಭ ಪ್ರಸ್ತಾಪಿಸುತ್ತಿದ್ದೇನೆಂದರೆ- ಮೊದಲನೆಯದಾಗಿ ವಿವಾಹಬಾಹಿರವಾಗಿ ಹುಟ್ಟಿದ ಮಕ್ಕಳ ರಕ್ಷಣೆ, ಅವರನ್ನು ಮನುಷ್ಯರನ್ನಾಗಿ ರೂಪಿಸುವ ಹೊಣೆ ಯಾರು ಹೊರಬೇಕು? ಅವಳಷ್ಟೇ ಹೊಣೆಗಾರನಾದ 'ಅವನೂ' ಈ ವಿಚಾರದಲ್ಲಿ ನುಣಚಿಕೊಳ್ಳುವುದರೊಂದಿಗೆ ತಾನು ಮಾತ್ರ ಮರ್ಯಾದಾರಾಮನಾಗಿ, ಅವಳನ್ನು ಅನೈತಿಕಗೊಳಿಸುವಂತಹ ವ್ಯವಸ್ಥೆಯಲ್ಲಿ ಅವಳಿಗೆ ಪರಿಹಾರವೇನು? ವಿವಾಹ ವಿಚ್ಛೇದನಗಳಂತಹ ಸಂದರ್ಭದಲ್ಲಿಯೂ ಕಾನೂನು ಅದೆಂಥಾ ವಿಪರ್ಯಾಸಕ್ಕೆ ಒಳಗಾಗುತ್ತದೆಯೆಂದರೆ, ಅವಳ ಬದುಕಿಗೆ ಪರಿಹಾರ ಕೇಳುವ ನಿಟ್ಟಿನಲ್ಲಿ ವಿಚ್ಛೇದಿತ ಗಂಡ ಅವಳನ್ನು ವ್ಯಭಿಚಾರಿಣಿ ಎಂದು (ಪರಿಗಣಿಸಿದರೂ ಸಾಕು) ಸಮರ್ಥಿಸಿದರೆ ಅವಳಿಗೆ ಪರಿಹಾರವಿಲ್ಲ ಎನ್ನುವಂತಹ ಅಮಾನವೀಯವಾದ, ಮಹಿಳೆಯನ್ನು ದೂಡಿರುವ ದಾಸ್ಯದ ಪ್ರತಿನಿಧಿಯಂತೆ ಕಾನೂನು ವರ್ತಿಸುವುದನ್ನು ಕಾಣಬಹುದಾಗಿದೆ.

ಒಂದು ಜಾರಿಗೊಂಡ ಶಾಸನವು ಅದೆಷ್ಟು ವಿಪರ್ಯಾಸಗಳನ್ನು ಉಂಟು ಮಾಡಬಲ್ಲದು ಎಂಬುದಕ್ಕೆ ಭಾರತದಂತಹ ವ್ಯವಸ್ಥೆಯಲ್ಲಿ ಒಂದು ಉದಾಹರಣೆಯ ಮೂಲಕ ತೆರೆದಿಡಬಹುದಾಗಿದೆ. ವೇಶ್ಯಾವಾಟಿಕೆಗೆ ಸಂಬಂಧಿಸಿ ಭಾರತದಲ್ಲಿರುವ ಒಂದು ಸಂಹಿತೆ - (Prevention of Immoral Traffic Act - PITA) ಇದರ ಒಟ್ಟು ಸಾರಾಂಶ-ಒಂದು ಹೆಣ್ಣು ತನ್ನ ಹೊಟ್ಟೆ ಪಾಡಿಗಾಗಿ ತನ್ನ ದೇಹವನ್ನು ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಳ್ಳಬಹುದು. ಆದರೆ ಆ ಸಂಪರ್ಕಕ್ಕೆ ಬೇಕಾದ ನಡವಳಿಕೆಗಳು ಅಪರಾಧ ಎನ್ನುತ್ತದೆ ಈ ಸಂಹಿತೆ, ಎಂತಹ ದ್ವಿಮುಖಗಳಿವೆ ಇಲ್ಲಿ. ಸಾರಾಸಗಟಾಗಿ ಈ ಸಂಹಿತೆಯನ್ನೇ ಉಲ್ಟಾ ಮಾಡಿ ಲೈಂಗಿಕವೃತ್ತಿಯಲ್ಲಿ ತೊಡಗಿರುವ ಮಹಿಳೆಯನ್ನು ಬಂಧಿಸುತ್ತದೆ ಈ ಆರಕ್ಷಕ ಇಲಾಖೆ, ಅಷ್ಟೇ ನಿರ್ಲಿಪ್ತವಾಗಿ, ಕುರುಡಾಗಿ ಪ್ರತಿಷ್ಠಾಪಿಸಲ್ಪಟ್ಟ ನ್ಯಾಯದೇವತೆ ಅವಳಿಗೆ ಒಂದಷ್ಟು ದಂಡ ವಿಧಿಸಿ ಬಿಡುತ್ತದೆ. ಇದು ದಿನನಿತ್ಯ ನೀರು ಕುಡಿದಷ್ಟು, ಉಸಿರಾಡಿದಷ್ಟು ಸಲೀಸಾಗಿ ಇಡೀ ಭಾರತದಾದ್ಯಂತ ನಡೆದೇ ಬರುತ್ತಿದೆ ಯಾಂತ್ರಿಕವಾಗಿ.

ಇಲ್ಲಿ ಪರಂಪರಾನುಗತವಾಗಿ ಈ ಸಮಾಜದೊಂದಿಗೆ ಬಂದಿರುವ ಯಾವುದೋ ಮೂಢನಂಬಿಕೆಯನ್ನೋ

ಅಥವಾ ಸಂಪ್ರದಾಯವನ್ನೂ ಪೀಳಿಗೆಯಿಂದ ಪೀಳಿಗೆಗೆ ಬರುವಂತೆಯೇ ಇದೂ ಬಂದಿದೆಯೇನೋ ಎನ್ನುವಷ್ಟರ ಮಟ್ಟಿಗೆ ಆಗಿದೆ.

ಇಲ್ಲಿ ಬಹಳ ಮುಖ್ಯವಾಗಿ ಪರಿಗಣಿಸಬೇಕಾಗಿರುವುದೆಂದರೆ ಕಾನೂನುಗಳು ಇದ್ದರೂ ಅವುಗಳನ್ನು ಜಾರಿಗೊಳಿಸುವಂತಹ ಬೌದ್ಧಿಕಶಕ್ತಿ, ಪ್ರಯತ್ನ, ಮಾನವೀಯತೆ ಇವೆಲ್ಲವುಗಳನ್ನು ಅದನ್ನು ನಿರ್ಧರಿಸುವವರು ರೂಢಿಸಿಕೊಳ್ಳಬೇಕಾಗಿದೆ. ಅವರ ಬೇಜವಾಬ್ದಾರಿಗಳಿಂದಾಗಿಯೇ ಇಂದು ಲಕ್ಷಾಂತರ ಹೆಣ್ಣುಗಳ ಮೇಲಿನ ದೌರ್ಜನ್ಯ ಮಾನವ ಹಕ್ಕುಗಳ ಮೇಲಾಗುವ ದೌರ್ಜನ್ಯಗಳಾಗಿವೆ.

ಹಾಗೆಯೇ ಒಂದು ಸಂಹಿತೆಗೆ ಸಂಬಂಧಿಸಿದ ಸಮುದಾಯಕ್ಕೂ ಕೂಡ ಆ ಸಂಹಿತೆಯ ಬಗ್ಗೆ ತಿಳುವಳಿಕೆ, ಸ್ಪಷ್ಟತೆ ಬೇಕಾಗುತ್ತದೆ. ಅದನ್ನು ಉಲ್ಲಂಘಿಸಿ ಮಾಡದಂತೆ ಪ್ರಶ್ನಿಸುವ ಮನೋಸ್ಥೈರ್ಯವನ್ನು ರೂಢಿಸಿಕೊಳ್ಳಬೇಕಾಗಿದೆ. ಅಂತಹ ಪ್ರಬಲವಾದ ಸಂಘಟನಾಶಕ್ತಿ ರೂಪಿತವಾಗಬೇಕು.

ಹಾಗೂ ಸಂಹಿತೆ ಮತ್ತು ಜಾರಿಗೊಳಿಸುವಿಕೆಯ ಪ್ರಕ್ರಿಯೆಗಳಲ್ಲಿ ಈ ಸಮಾಜ ಜೀವಂತಿಕೆಯನ್ನು ಮೆರೆಯಬೇಕಾಗುತ್ತದೆ. ಅಂತಹ ಒಂದು ಮಾನಸಿಕ ಸಿದ್ಧತೆಯನ್ನು ಹೊಂದಿರಬೇಕಾಗಿರುತ್ತದೆ.

ಇಲ್ಲದಿದ್ದಲ್ಲಿ ಎಂತಹುದೇ ಶಾಸನಗಳು ಈ ಕೊಳಕು ಮನಸ್ಸುಗಳ, ಸಂಪ್ರದಾಯ, ಮೂಲಭೂತವಾದಿಗಳ ಆಳವಾದ ಬೇರುಗಳು, ಬಿಳಲುಗಳು ಇನ್ನು ಆಳಕ್ಕೆ ಹೋಗುತ್ತಲೇ ಇರುತ್ತವೆ ಹೊರತು ಸಮಾಜದ ಸ್ವಾಸ್ಥ್ಯಕ್ಕಾಗಿ ಆ ಮನಸ್ಸುಗಳು, ನಡವಳಿಕೆಗಳೆಂದೂ ಪ್ರಾಮಾಣಿಕವಾಗಿರುವುದೇ ಇಲ್ಲ.

ಈ ವೈರುಧ್ಯತೆಗಳಿರುವುದರಿಂದಲೇ ಭಾರತದಂತಹ ವ್ಯವಸ್ಥೆಯಲ್ಲಿಯೇ ಅದೆಷ್ಟೋ ಶಾಸನಗಳು ತುಕ್ಕು ಹಿಡಿಯುತ್ತಿರುವುದು ಅಥವಾ ನಿಷ್ಕ್ರಿಯವಾಗಿರುವುದು.

ಆದ್ದರಿಂದಲೇ ಇಂತಹುದರ ವಿರುದ್ಧ ''ಪ್ರಚಾರ ಮತ್ತು ಶಿಕ್ಷಣ'' ಸಾಧನಗಳನ್ನು ಬಳಸಬೇಕೆಂದು ಅಂದು ಲೆನಿನ್ ಮನಗಂಡಿದ್ದರು. ಹಾಗೆಯೇ ಇಂತಹ ಹೋರಾಟದ ಅಲುಗಳನ್ನು 'ಅತಿಹರಿತ'ಗೊಳಿಸುವುದರಿಂದ ಪ್ರತಿರೋಧವೇ ಹೆಚ್ಚಬಹುದೆಂದೂ ಲೆನಿನ್ ಎಚ್ಚರಿಸಿದ್ದರು.

ಇಲ್ಲಿ 'ಪ್ರಚಾರ ಮತ್ತು ಶಿಕ್ಷಣ' ಇಡೀ ಸಮಾಜಕ್ಕೆ ಆಗಬೇಕಾಗುತ್ತದೆ. ಸಮಾಜದ ವಿವಿಧ ಸ್ತರಗಳಲ್ಲಿ ವಿವಿಧ ಮಜಲುಗಳೊಂದಿಗೆ ಆಗಬೇಕಾಗುತ್ತದೆ ಎನ್ನುವುದು ಸರ್ವಕಾಲಿಕ ಸತ್ಯವಾಗಿದೆ.

ವಿಶ್ವದಾದ್ಯಂತ ಬಹುಪಾಲು ದೇಶಗಳು ಸಮಾಜಗಳಲ್ಲಿ ವೇಶ್ಯಾವಾಟಿಕೆಯ ಸಮಸ್ಯೆಯನ್ನು ಮುಖಾಮುಖಿಯಾಗಿ ಎದುರಿಸುವಲ್ಲಿ ಹಿಂಜರಿಕೆ ಇರುವುದು ಕಂಡುಬಂದಿದೆ. ವೇಶ್ಯಾವೃತ್ತಿಯ ಬಗ್ಗೆ ಅತಾರ್ಕಿಕವಾದ, ವೈರುಧ್ಯ ಹಾಗೂ ಗೊಂದಲಗಳುಳ್ಳ ಶಾಸನಗಳನ್ನು ರೂಪಿಸಿರುವುದೇ ಅವು ಈ ವಿಷಯದ ಬಗ್ಗೆ ಹೊಂದಿರುವ ಅಸ್ಪಷ್ಟತೆಯನ್ನು ಸೂಚಿಸುತ್ತವೆ. ಈ ವಿಶ್ವವ್ಯಾಪಿ ಪ್ರಾಚೀನ ವೃತ್ತಿಗಳಲ್ಲೊಂದಾದ ಈ ವೃತ್ತಿಯನ್ನು ಸಮಾಜ ದಿಟ್ಟತನದಿಂದ ಒಪ್ಪಿಕೊಳ್ಳುವ ಸೌಜನ್ಯವನ್ನಾಗಲೀ ಅಥವಾ ಅದನ್ನು ಸಾರಾಸಗಟಾಗಿ

ನಿರಾಕರಿಸುವ ಧೈರ್ಯವನ್ನಾಗಲೀ ತೋರದೆ ಈ ಸಮಸ್ಯೆಯನ್ನು ತೀವ್ರವಾಗಿ ಪರಿಗಣಿಸದಿರುವುದು ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತದೆ. ಎಲ್ಲಾ ಕಡೆಗಳಲ್ಲೂ ಬಾಲ್ಯ ವೇಶ್ಯಾವಾಟಿಕೆ ನಿಷೇಧಿಸಲ್ಪಟ್ಟಿದೆ ಆದರೆ ಈ ಕಾನೂನು ಜಾರಿಯಲ್ಲಿ ಮಾತ್ರ ಬಹುಪಾಲು ಸರ್ಕಾರಗಳು ವಿಫಲವಾಗಿವೆ. ಇನ್ನು ವಯಸ್ಕ ವೇಶ್ಯಾವಾಟಿಕೆಯ ಬಗ್ಗೆ ವಿವಿಧ ದೇಶಗಳ ಕಾನೂನುಗಳು ನಿಷೇಧ ಮತ್ತು ನೊಂದಾವಣೆಗಳ ನಡುವೆ ಗಿರಕಿ ಹೊಡೆಯುವುದನ್ನು ಕಾಣುತ್ತೇವೆ. ನಿಷೇಧ ಲೈಂಗಿಕ ವ್ಯಾಪಾರ ವೃತ್ತಿಯನ್ನು ಸ್ಥಳಾಂತರಗೊಳಿಸುವಲ್ಲಿ ಮಾತ್ರ ಪರಿಣಾಮಕಾರಿಯಾದರೆ ನೊಂದಣಿ ಅಪೇಕ್ಷಿತ ನಿಯಂತ್ರಣವನ್ನು ತರಲೂ ಸಂಪೂರ್ಣವಾಗಿ ವಿಫಲವಾಗಿದೆ. ಆದರೆ ವಿಶ್ವವ್ಯಾಪಿ ವೃತ್ತಿಯ ದೀರ್ಘ ಇತಿಹಾಸದಲ್ಲಿ ಈ ಮಹಿಳೆಯರ ಪುನರ್ವಸತಿಯು ಪರಿಪೂರ್ಣವಾಗಿ ಎಲ್ಲಿಯೂ ಆಗಿಲ್ಲದಿರುವುದು ಅತ್ಯಂತ ಸುಸ್ಪಷ್ಟ. ಈ ಎಲ್ಲಾ ಗೊಂದಲಗಳಿಂದ ಲೈಂಗಿಕ ವೃತ್ತಿ ಮಹಿಳೆಯರೂ ಪೀಡಿಸಲ್ಪಡುತ್ತಿದ್ದಾರೆ.

ವಿದೇಶಗಳಲ್ಲಿ ಲೈಂಗಿಕ ವೃತ್ತಿ ಮತ್ತು ಕಾನೂನು:

ಲೈಂಗಿಕ ವೃತ್ತಿಯ ಬಗ್ಗೆ ಕೆಲವು ದೇಶಗಳ ಶಾಸನ, ಅವುಗಳ ಜಾರಿ ಮತ್ತು ಅವರು ಈ ವೃತ್ತಿಯನ್ನು ನೋಡುವ ರೀತಿಗಳನ್ನು ಅತ್ಯಂತ ಸಂಕ್ಷೇಪಿಸಿ ಹೀಗೆ ಹೇಳಬಹುದಾಗಿದೆ.

ಅರ್ಜೆಂಟೈನಾ ದೇಶದಲ್ಲಿ ಲೈಂಗಿಕ ವೃತ್ತಿ ಅಪರಾಧವಲ್ಲ. ಆದರೆ ವೇಶ್ಯೆಯರಿಗೆ ಒತ್ತಾಸೆ ನೀಡುವುದು, ಗಿರಾಕಿಗಳನ್ನು ಸೆಳೆದುಕೊಳ್ಳುವುದು, ಅವರ ದುಡಿಮೆಯಲ್ಲಿ ಬದುಕುವುದು ಅಥವಾ ವೇಶ್ಯಾಗೃಹ ನಡೆಸುವುದು ಕಾನೂನು ಬಾಹಿರ ಆಚರಣೆಯಲ್ಲಿ ಈ ವೃತ್ತಿ ನಿರತ ಮಹಿಳೆಯರನ್ನು ಬಂಧಿಸಿ, ಸೆರೆಗೆ ತಳ್ಳಲಾಗುತ್ತದೆ. ಅವರಿಗೆ ಯಾವುದೇ ಸರ್ಕಾರಿ ರಕ್ಷಣೆ ಇಲ್ಲ.

ಈಜಿಪ್ಟ್ ದೇಶದಲ್ಲಿ ಲೈಂಗಿಕ ವೃತ್ತಿ ಶಾಸನಬಾಹಿರ ವೃತ್ತಿ. ವಿಟರನ್ನು ಬಂಧಿಸದೇ ವೇಶ್ಯೆಯರನ್ನು ಶಿಕ್ಷಿಸಲು ಅವರನ್ನೇ ಸಾಕ್ಷಿಗಳನ್ನಾಗಿ ಬಳಸಲಾಗುತ್ತದೆ. ಆಚರಣೆಯಲ್ಲಿ ಸಾಮಾಜಿಕವಾಗಿ ಈ ಮಹಿಳೆಯರು ಬಹಿಷ್ಕೃತರು.

ಜರ್ಮನಿಯಲ್ಲಿ ಈ ವೃತ್ತಿ ಶಾಸನಾತ್ಮಕವಾಗಿ ನ್ಯಾಯಯುತ ವೇಶ್ಯೆಯರು ಆರೋಗ್ಯ ತಪಾಸಣೆಗೊಳಗಾಗುವುದು ಅತ್ಯಗತ್ಯ ಆದರೆ ಅವರು ಆರೋಗ್ಯ ವಿಮೆಯನ್ನು ಹೊಂದುವಂತಿಲ್ಲ. ವೇಶ್ಯಾಗೃಹಗಳನ್ನು ನಿಗಧಿಗೊಳಿಸಿ ಅವು ನಿರ್ದಿಷ್ಟ ಗಂಟೆಗಳಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲಾಗಿದೆ. ವೇಶ್ಯಾಗೃಹದ ಮಾಲೀಕ ಅಲ್ಲಿಯ ಕಾರ್ಯ ನಿರ್ವಹಣಾ ಸ್ಥಿತಿಯನ್ನು ಉತ್ತಮಪಡಿಸಿದರೆ ಅದನ್ನು ವೇಶ್ಯಾವೃತ್ತಿ ಪ್ರಚೋದಕವೆಂದು ಪರಿಭಾವಿಸಿ ಅವರನ್ನು ವಿಚಾರಣೆಗೆ ಗುರಿಪಡಿಸಬಹುದು. ಬರ್ಲಿನ್‌ನಲ್ಲಿ ಅತ್ಯಮತ ಸಕ್ರೀಯವಾದ ವೇಶ್ಯಾ ಹಕ್ಕು ಚಳುವಳಿ ಬಲಿಷ್ಠವಾಗಿ ರೂಪುಗೊಂಡಿದೆ.

ಇರಾನ್‌ನಲ್ಲಿ ೧೯೭೫ ರ ಪೀನಲ್ ಕೋಡ್ ಪ್ರಕಾರ ವೇಶ್ಯಾವಾಟಿಕೆ ಒಂದು ಅಪರಾಧವಲ್ಲ. ಆದರೆ ಅದನ್ನು ಪ್ರತಿಪಾದಿಸುವುದು, ನೆರವು ನೀಡುವುದು, ಪ್ರಚೋದಿಸುವುದು ಅಥವಾ ವೇಶ್ಯಾಗೃಹ ನಡೆಸುವುದು ಒಂದು ಅಪರಾಧ. ಇದಕ್ಕೆ ಇರಾನ್‌ನ ಈಗಿನ ಆಡಳಿತ ಗುಂಡು ಹಾರಿಸಿ ಕೊಲ್ಲುವುದು ಅಥವಾ ಕಲ್ಲೆಸೆದು ಶಿಕ್ಷಿಸುವುದು ಸೂಕ್ತ ದಂಡನೆಯೆಂದು ಭಾವಿಸುತ್ತದೆ. ಆಚರಣೆಯಲ್ಲಿ ನೇಣುಹಾಕುವುದು ಸಾಮಾನ್ಯ. ಇಲ್ಲಿ

''ಮುಟ್ ಆ '' ಎಂಬ ಅತ್ಯಲ್ಪ ಕಾಲದ ತಾತ್ಕಾಲಿಕ ಮದುವೆಯನ್ನು (ಅರ್ಧಗಂಟೆಯಷ್ಟು ಕನಿಷ್ಠ) ಮಹಿಳಾವಾದಿಗಳು ಮಾನ್ಯಮಾಡಿ ಆ ಅವಧಿಯಲ್ಲಿ ಅವರಿಗೆ ಕೆಲವೊಂದು ಹಕ್ಕುಗಳನ್ನು ನೀಡಿ ಈ ವೃತ್ತಿಗೆ ಪರೋಕ್ಷ ರಕ್ಷಣೆ ಒದಗಿಸಲಾಗಿದೆ.

ಕೀನ್ಯಾದ ಪೀನಲ್ ಕೋಡ್‌ನಲ್ಲಿ ವೇಶ್ಯಾವಾಟಿಕೆಯ ಶಾಸನಾತ್ಮಕ ನಿರೂಪಣೆ ಇಲ್ಲ. ಆದರೆ ವೇಶ್ಯೆಯ ದುಡಿಮೆಯ ಮೇಲೆ ಬದುಕುವುದು ಕಾನೂನುಬಾಹಿರ. ಆಚರಣೆಯಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರು ಉದ್ಯೋಗಾಕಾಂಕ್ಷಿಗಳಾಗಿ ನಗರಕ್ಕೆ ಬರುತ್ತಾರೆ. ಪೊಲೀಸರು ವೇಶ್ಯೆಯರನ್ನು ನಿಯತವಾಗಿ ಹಿಂಸಿಸುತ್ತಾರೆ. ಒಂಟಿ ಇರುವ ಇಲ್ಲವೇ ಅನೇಕ ಲೈಂಗಿಕ ಸಂಗಾತಿಗಳನ್ನು ಹೊಂದಿರುವ ಮಹಿಳೆಯರನ್ನು ವೇಶ್ಯೆಯರೆಂದು ಪರಿಗಣಿಸಲಾಗುತ್ತದೆ ಎಂದು ಏಡ್ಸ್ ಮತ್ತು ವೇಶ್ಯಾವೃತ್ತಿ ಸಂಶೋದಕರು ಅಭಿಪ್ರಾಯ ಪಡುತ್ತಾರೆ. ಅವರ ನಡುವೆ ಹಣದ ವಿನಿಮಯವಾಗದಿದ್ದರೂ ವೇಶ್ಯಾವಾಟಿಕೆಯೆಂದೇ ಪರಿಭಾವಿಸಲ್ಪಡುತ್ತದೆ.

ಥಾಯ್ಲೆಂಡ್‌ನಲ್ಲಿ ವೇಶ್ಯೆಯಾಗಿ ಕೆಲಸಮಾಡುವುದು ಅಥವಾ ಆಕೆಯ ದುಡಿಮೆಯಿಂದ ಜೀವನ ಮಾಡುವುದು ಅಪರಾಧ ಸಂಹಿತೆಯ ಪ್ರಕಾರ ಅಪರಾಧ. ಆದರೆ ಆಚರಣೆಯಲ್ಲಿ ವೇಶ್ಯೆಯರು ಖುಷಿಪಡಿಸುವವರ ರೂಪದಲ್ಲಿ ತಮ್ಮ ವೃತ್ತಿಯನ್ನು ಮಾಡಬಹುದು. ಪ್ರವಾಸಿ ಲೈಂಗಿಕತೆ ಹಾಗೂ ಬಾಲ ಲೈಂಗಿಕ ವೃತ್ತಿ ತೀರಾ ಸಾಮಾನ್ಯ.


ಟರ್ಕಿಯಲ್ಲಿ ಕೆಲವು ನಿರ್ದಿಷ್ಠ ಪ್ರದೇಶಗಳಲ್ಲಿ ಸರ್ಕಾರಿ ವೇಶ್ಯಾಗೃಹಗಳು ಪ್ರತಿ ನಗರದಲ್ಲಿವೆ. ವೇಶ್ಯೆಯರು ನೊಂದಾಯಿಸಿಕೊಂಡು ವಿಶೇಷ ಗುರುತಿನ ಚೀಟಿಗಳನ್ನು ಹೊಂದಿರಬೇಕು ಹಾಗೂ ಎರಡು ವಾರಕ್ಕೊಮ್ಮೆ ಆರೋಗ್ಯ ತಪಾಸಣೆಗೆ ಗುರಿಯಾಗಬೇಕು. ಹೀಗಾಗಿ ಟರ್ಕಿಯಲ್ಲಿ ವೇಶ್ಯಾವೃತ್ತಿ ಒಂದು ಲಾಭದಾಯಕ ದಂಧೆ. ಇಸ್ತಾನ್‌ಬುಲ್‌ನ ವೇಶ್ಯಾಗೃಹದ ಮಾಲೀಕ ನಗರದ ಅತ್ಯಂತ ಗರಿಷ್ಠ ತೆರಿಗೆ ಪಾವತಿದಾರನೆಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. ಆದರೆ ಸಾಮಾಜಿಕವಾಗಿ ಅವರು ಬಹಿಷ್ಕೃತರು ಅವರ ಜೀವನ ತೀವ್ರ ನಿಯಂತ್ರಣಕ್ಕೊಳಪಟ್ಟಿದೆ ಹಾಗೂ ಅವರಿಗೆ ಬೇರಾವುದೇ ಉದ್ಯೋಗ ದೊರಕುವುದಿಲ್ಲ.

ಯುನೈಟೆಡ್ ಕಿಂಗ್‌ಡಂನಲ್ಲಿ ವೇಶ್ಯಾವೃತ್ತಿ ಕಾನೂನು ಬಾಹಿರವಲ್ಲ. ಆದರೆ ಗಿರಾಕಿಗಳನ್ನು ಸೆಳೆಯುವುದು, ತಲೆಹಿಡಿಯುವುದು ಕಾನೂನಿಗೆ ವಿರುದ್ಧವಾದದ್ದು. ಗಿರಾಕಿ ಸೆಳೆಯುವ ಅಪರಾಧದ ಮೇಲೆ ಬಹುಪಾಲು ವೇಶ್ಯೆಯರು ಸೆರೆಮನೆವಾಸದಲ್ಲಿ ವಿವಿಧ ಅವಧಿಗಳನ್ನು ಕಳೆದಿರುತ್ತಾರೆ. ದಂಡಿಸಲ್ಪಟ್ಟವರು ನಿರ್ದಿಷ್ಠ ವೃತ್ತಿಗಳಿಗೆ ಬಹಿಷ್ಕೃತರು. ಅವರು ಅಜೀವ ಪರ್ಯಂತ ಕೆಲವು ಪ್ರದೇಶಗಳಿಗೆ ವಿಶೇಷವಾಗಿ ಅಮೇರಿಕಾಗಳಂತಹ ದೇಶಗಳಿಗೆ ಪ್ರಯಾಣ ಮಾಡುವಂತಿಲ್ಲ.

ಅಡಿ ಟಿಪ್ಪಣಿಗಳು:

1. ಆಧಾರ: ಡಿ.ಟಿ. ಬಸವರಾಜ್, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವೇಶ್ಯಾಜೀವನ, ಪುಟ 102, 103

2. ಆಧಾರ: ಉಸೀನಾ , ಸಂ. ಸಿ. ಯತಿರಾಜು, ಪುಟ. 31





ಅಧ್ಯಾಯ ೧೦

ವೇಶ್ಯಾವಾಟಿಕೆ : ಆಧುನಿಕ ಸಂದರ್ಭ ಮತ್ತು ಜಾಗತೀಕರಣ ಪ್ರಭಾವ



ಬ್ರೌಸಿಂಗ್ ಸೆಂಟರ್‌ನಲ್ಲಿ 'ಪುಲ್ ರಷ್!' ಆದರೆ ಎಲ್ಲೆಲ್ಲೂ ನಿಶ್ಯಬ್ಧ. ಒಂದೊಂದು ಕಂಪ್ಯೂಟರ್‌ಗಳಿಗೂ ಪುಟ್ಟಗೂಡು, ಎಲ್ಲವೂ ಪ್ರೈವಸಿ. ಆ ಪುಟ್ಟ ಅರೆ ಗೋಡೆ ಗೂಡೊಳಗೆ ಹದಿ ಹರಿಯದವರು ಮುಳುಗಿ ಹೋಗಿರುತ್ತಾರೆ. ಅವರಲ್ಲಿ ಒಬ್ಬಿಬ್ಬರಾದರೂ ರೋಮಾಂಚನದ ಕಚಗುಳಿಯಲ್ಲಿ ತಮ್ಮನ್ನು ತಾವೇ ಮರೆತಿರುತ್ತಾರೆ. ಇಂಡಿಯಾ ಸೆಕ್ಸ್‌ಗೈಡ್ ನಲ್ಲಿ ಸಿಗುವ ಎಲ್ಲ ರಾಜ್ಯಗಳ 'ಸೆಕ್ಸ್' ಬಗೆಗಿನ ವಿವರಗಳು ತೆರೆದುಕೊಳ್ಳುತ್ತವೆ. ಅದರಲ್ಲಿ ಕರ್ನಾಟಕ ರಾಜ್ಯವೂ ಒಂದು. ಎಲ್ಲಾ ಜಿಲ್ಲೆಗಳ ಲ್ಲಿಯೂ ಸೆಕ್ಸ್‌ಗೆ ಸಂಬಂಧಿಸಿದ, ಎಲ್ಲ ಸಂಪರ್ಕಗಳು, ಹೋಟೆಲ್‌ಗಳ ವಿವರ, ಅಲ್ಲಿಯ ಹೆಣ್ಣುಗಳ ವಿವರ, ಜಾಹೀರಾತುಗಳು ಎಲ್ಲವೂ ಮಾಯಾಲೋಕದ ಪುಟ್ಟ ಪೆಟ್ಟಿಗೆಯೊಳಗಿನ 'ಇಂಟರ್‌ನೆಟ್' ಪ್ರಪಂಚ ಜ್ಞಾನದ ವಾರಸುದಾರ ಎಂಬಂತೆ ಎಲ್ಲವನ್ನು ಬೆತ್ತಲು ಮಾಡುತ್ತದೆ.

ಇದರಲ್ಲಿ ಬೆತ್ತಲೆ ದೇಹಗಳು, ಬೆತ್ತಲೆ ವಿಚಾರಗಳು, ಬೆತ್ತಲಾಗಬಹುದಾದ ದಾರಿಗಳು, ಬೆತ್ತಲಾಗಲು ಆಹ್ವಾನವೀಯುವ ಜಾಹೀರಾತುಗಳು ತೆರೆದು ಕೊಳ್ಳುತ್ತಾ ಹೋಗುತ್ತವೆ. ಯಾವ ಯಾವ ನಗರಗಳಲ್ಲಿ ಎಷ್ಟು ಲಾಡ್ಜ್‌ಗಳಿವೆ,ಎಷ್ಟು ಕ್ಲಬ್‌ಗಳಿವೆ, ಯ್ಹಾವ ರಸ್ತೆಯಲ್ಲಿ ಎಂಥ ಸರಕುಗಳು ಲಭ್ಯ, ಅವುಗಳ ರೂಪುರೇಶೆಗಳು, ರೇಟುಗಳು ವಿವರಗಳು ಅಲ್ಲಿ ದೊರೆಯುತ್ತವೆ. ಈ ವಿಚಾರಗಳು ಒಂದು ರಾಜ್ಯಕ್ಕೆ, ದೇಶಕ್ಕೆ ಸೀಮಿತವಲ್ಲ. ಅಂತರಾಷ್ಟ್ರೀಯವಾಗಿ ಕೂಡ ಈ ಸಂಪರ್ಕಜಾಲ ಪ್ರತಿ ದೇಶಗಳ ಲೈಂಗಿಕ ಲೋಕವನ್ನು ಅನಾವರಣಗೊಳಿಸುತ್ತದೆ.

ಪತಿ-ಪತ್ನಿಯರ ಪರಸ್ಪರ ವಿನಿಮಯ, ದ್ವಿಲಿಂಗಕಾಮ, ಸಲಿಂಗರತಿ, ಗ್ರೂಪ್ ಸೆಕ್ಸ್..... ಹೀಗೆ ತಮ್ಮ ಅಗತ್ಯಗಳನ್ನು ವಿವರಿಸಿ ಜಾಹೀರಾತು ನೀಡಿರುತ್ತಾರೆ.

ಬೆಂಗಳೂರಿಗೆ ಬಂದಾಗ ನಿಮಗೆ ಬಾಡಿಗೆಗೆ ಹೆಣ್ಣು ಸಂಗಾತಿ ಬೇಕೆ? ಅಥವಾ ಗಂಡು ಸಂಗಾತಿ ಬೇಕೆ? ನಮ್ಮ ಹುಡುಗರು ಥ್ರಿಲ್ಲಿಂಗ್! ನಮ್ಮ ಹುಡುಗಿಯರು ''ಡ್ಯಾಮ್ ಸೆಕ್ಸಿ'! 'ಫಿಮೇಲ್ ಎಸ್ಕಾರ್ಟ್ ಸರ್ವೀಸ್' (ಇದೂ ಒಂದು ಸೇವೆಯೇ) ಕೊಡುವ ಜಾಹೀರಾತುಗಳಿವು

ಹೀಗೇ ಇಂಟರ್‌ನೆಟ್ ಮೂಲಕ ತಲೆಹಿಡುಕತನ, ವಿಕೃತ ಕಾಮ ಕೇಳಿಗಳು, ಎಸ್ಕಾರ್ಟ್ ಸರ್ವೀಸ್ ನಂತಹ ಸ್ವರೂಪಗಳು ದಂಧೆ ಆರಂಭಿಸಿವೆ. ವೇಶ್ಯವಾಟಿಕೆ ಕೂಡ ಜಾಗತೀಕರಣವಾಗಿದೆ. 'ಸಿ.ಸಿ.ಜಿಯ. ವುಮೆನ್ ಅಂಡ್ ನಾರ್ಕೋಟಿಕ್ ಸೆಲ್' ತಲೆ ಮೇಲಾದರೂ ಈ ಜಾಡುಗಳನ್ನು ಪತ್ತೆ ಮಾಡಲು ಸಾಧ್ಯವಾಗುತ್ತಿಲ್ಲ.

ಇದುವರೆವಿಗೂ ಹೋಟೆಲ್‌ಗಳು ರೇಡ್ ಆಗುತ್ತಿದ್ದವು. ವೇಶ್ಯ ಗೃಹಗಳು ತಡೆಹಿಡುಕ ಕೇಂದ್ರವಾಗಿದ್ದವು. ಅವರೊಡನೆ ವ್ಯವಹರಿಸುವುದು, ದಾಳಿಯ ನಾಟಕವಾಡುವುದು, ಇವೆಲ್ಲಾ ಈ ಸಮಾಜದಲ್ಲಿ ಅವ್ಯಾಹತವಾಗಿ ನಡೆಯುತ್ತಲೇ ಬಂದಿವೆ.

ಇನ್ನೊಂದು ಅತಿರೇಕದ ಆಧುನಿಕತೆಯ ಕೂಸು ಬೆತ್ತಲೆ ಕ್ಲಬ್‌ಗಳು.

ನಗರಗಳ ಹೊರವಲಯಗಳ ಫಾರ್ಮ್‌ಹೌಸ್‌ಗಳಲ್ಲಿ, ನಿರ್ಬಂಧಿತ ರೆಸಾರ್ಟುಗಳಲ್ಲಿ, ಈ ಕ್ಲಬ್‌ಗಳು ತಮ್ಮ ಬೈಲಾದಲ್ಲಿರುವ ಉದ್ದೇಶಗಳನ್ನು ನಿಯೋಜಿಸುತ್ತವೆ.

ಲೈಂಗಿಕ ಕ್ರೀಡೆಗಳು, ಸೆಕ್ಸ್‌ನೃತ್ಯ, ಅಶ್ಲೀಲ ಮಾತುಗಾರಿಕೆ... ಮುಂತಾದವುಗಳೇ ಈ ನ್ಯೂಡ್ ಪಾರ್ಟಿ (nude party) ಯ ಕಾರ್ಯಕ್ರಮಗಳು. ಇಲ್ಲಿ ಡ್ರಗ್, ಮದ್ಯ ಎಲ್ಲವೂ ಲಭ್ಯ. ಇಂಥದೊಂದು ಪಾರ್ಟಿಯಲ್ಲಿ ಹೆಂಗಸರಷ್ಟೇ ಸಂಖ್ಯೆಯ ಪುರುಷರೂ ಇರುತ್ತಾರೆ. ಸಾಮಾನ್ಯವಾಗಿ ಒಂದೇ ವಯಸ್ಸಿನವರು.

ಈ ಕ್ಲಬ್ಬಿಗೆ ಸದಸ್ಯತ್ವ? ಎಲ್ಲರಿಗೂ ಎಟಕುವಂತದ್ದಲ್ಲ ಇದು. ಸದಸ್ಯತ್ವ ಕೋರಿ ಬಂದ ವಿವರಗಳನ್ನು ಕ್ಲಬ್‌ನ ನಿಗೂಢ ತಂತ್ರಜ್ಞರು ಪತ್ತೇ ಕಾರ್ಯಮಾಡುತ್ತಾರೆ. ಸಾಕಷ್ಟು ಶ್ರೀಮಂತ, ನಂಬಿಕೆಗೆ ಅರ್ಹ, ಮತ್ತು ರಹಸ್ಯ ಕಾಪಾಡಬಲ್ಲವರಿಗೆ ಮಾತ್ರ ಸದಸ್ಯತ್ವ ಲಭ್ಯ. ಅದನ್ನು ಅವರೇ ನಿರ್ಧರಿಸುತ್ತಾರೆ. ವಾರಾಂತ್ಯದ ರಾತ್ರಿಯಿಡೀ ನಡೆಯುವ ಇಂತಹ ಅದೆಷ್ಟೋ ಕ್ಲಬ್‌ಗಳು ಇಂದಿನ ಆಧುನಿಕತೆಯ ಛಾಪನ್ನು ಮೂಡಿಸಿರುವುದು ಹೀಗೆ?! ೧

ಆಧುನಿಕತೆಯೊಂದಿಗೆ ಆರೋಗ್ಯವನ್ನು ಸಮೀಕರಿಸಿ ರೂಪುಗೊಂಡ ಇನ್ನೊಂದು ಆಧುನಿಕ ದಂಧೆ

ಮಸಾಜ್ ಪಾರ್ಲರ್‌ಗಳು:

ಹೋಟೆಲ್‌ನಲ್ಲಿ ದಕ್ಷಿಣ ಭಾರತ, ಉತ್ತರ ಭಾರತ, ಚೈನಾ ಮಾದರಿ ಭಕ್ಷ್ಯಗಳು ಲಭ್ಯವಾಗುವಂತೆಯೇ ಈ ಮಸಾಜ್‌ಗಳಲ್ಲಿ ನೇಪಾಳಿ ಹುಡುಗಿಯರು, ಉತ್ತರ ಭಾರತದ ಲಲನೆಯರು, ರಷ್ಯನ್ ಯುವಕರು... ಹೀಗೆ ಬರುವ ಗ್ರಾಹಕರ ಆಯ್ಕೆ ಮತ್ತು ಆಸಕ್ತಿಗೆ ಪೂರಕವಾಗಿ ಸರಕುಗಳನ್ನು ಒದಗಿಸಿಕೊಡುವ ಮಸಾಜ್ ಪಾರ್ಲರ್ ಗಳು ದಿನದಿಂದ ದಿನಕ್ಕೆ ಬೆಳೆದು ನಿಲ್ಲುತ್ತಿವೆ. ಇವರು ಕೊಡುವ ಜಾಹೀರಾತುಗಳು ನೀವಿಸಿಕೊಳ್ಳುವವರನ್ನಷ್ಟೇ ಅಲ್ಲದೆ ಅಲ್ಲಿ ಸೇವೆಗೈಯ್ಯಲೂ ಕೂಡ ಉದ್ಯೋಗಾಂಕ್ಷಿಗಳು ಕ್ಯೂ ನಿಲ್ಲುತ್ತಿದ್ದಾರೆ.

'ಅತ್ಯಂತ ಪ್ರಾಚೀನ ವೃತ್ತಿ' ಎಂತಲೇ ಮಾನವನ ಬದುಕಿನುದ್ದಕ್ಕೂ ಬದಲಾವಣೆಯ ಹರಿವಿಗೆಲ್ಲಾ ತನ್ನನ್ನು ಹೊಂದಿಸಿಕೊಂಡು ೨೧ ನೇ ಶತಮಾನಕ್ಕೂ ಮನುಕುಲದೊಂದಿಗೇ ಕಾಲಿಟ್ಟಿದೆ.

ಆಧುನಿಕವಾದ ಮಾಹಿತಿ ತಂತ್ರಜ್ಞಾನಗಳು, ಮಾಧ್ಯಮಗಳ ನಂಟು, ಪೀತ ಪತ್ರಿಕೋದ್ಯಮಗಳು 'ತಲೆಹಿಡುಕ' ಕಸುಬನ್ನು ಮಾಡಿಕೊಂಡು ಬರುತ್ತಿವೆ. ಆಧುನಿಕ ಮಾಹಿತಿ ಸಂಪರ್ಕ ಜಾಲದೊಂದಿಗೆ ಕೂಡ ಈ ತಲೆಹಿಡುಕತನ ಇದ್ದೇ ಇದೆ. ಪೇಜರಳು, ಮೊಬೈಲ್‌ಗಳು, ಇ-ಮೇಲ್‌ಗಳು, ಗೌಪ್ಯ ಫೋನ್‌ಗಳು, ಎಸ್.ಎಂ.ಎಸ್ ಸಂದೇಶಗಳು ಇಂದಿನ ಕಾಲ್‌ಗರ್ಲ್‌ಗಳನ್ನು ಸಂಪರ್ಕಿಸಲು, ಆಧುನಿಕ ವೇಶ್ಯಾಗೃಹಗಳ ಸಂಪರ್ಕ ಪಡೆಯಲು,

ಪರಸ್ಪರ ಸಂಪರ್ಕ ಕುದುರಿಸಿಕೊಳ್ಳಲು 'ಕೋಡ್'ಗಳ ಮೂಲಕ ಈ ದಂಧೆ ನಿರಾಯಾಸವಾಗಿ ನಡೆಯುತ್ತಿದೆ.

ನಿನ್ನೆಯ ಜಾಲಗಳು ಮೊನ್ನೆಗೆ ಹಳತು, ನಿನ್ನೆಯವು ಇಂದಿಗೆ ಹಳತು ಎನ್ನುವಷ್ಟರ ಮಟ್ಟಿಗೆ ಅತಿ ವೇಗದಲ್ಲಿ ಹೆಚ್ .ಐ.ವಿ./ಏಡ್ಸ್‌ನೊಂದಿಗೆ ಈ ದಂಧೆ ಸಾಗಿದೆ. ಅದಕ್ಕೆ ಸಾಕ್ಷಿಯೆಂಬಂತೆ ಇಲ್ಲೊಂದು ಅತಿರೇಕದ ಘಟನೆ ನಮ್ಮೊಂದಿಗಿದೆ.

ಹದಿಹರೆಯದ ಜೋಡಿಯೊಂದು 'ಇಂಟರ್‌ನೆಟ್'ನಲ್ಲಿ ತಾವು ನಡೆಸುವ ಸಂಭೋಗ ಕ್ರಿಯೆಯನ್ನು ಲೈವ್ ಆಗಿ ಬಿಂಬಿಸಿದೆ. ಸುಮಾರು ೩೫-೪೦ ನಿಮಿಷಗಳ ಈ ಲೈವ್ ದೃಶ್ಯವನ್ನು ಲಕ್ಷಾಂತರ ಜನ ಸಮುದಾಯ ವೀಕ್ಷಿಸಿದೆ.ಆದರಲ್ಲಿ ಭಾಗವಹಿಸಿದ್ದ ಯುವತಿಯನ್ನು 'ಮಾಡೆಲ್' ಆಗಿ ಬಳಸಲು ಅನೇಕ ಉದ್ಯಮಿಗಳು ಮುಗಿ ಬೀಳುತ್ತಿದ್ದರಂತೆ! ಅವಳ ರೇಟು ಘಳಿಗೆ ಘಳಿಗೆಗೂ ಏರುತ್ತಿದೆಯಂತೆ!

ಜಾಗತೀಕರಣ ಮತ್ತು ವಲಸೆ:

ಜಾಗತೀಕರಣದ ಕಾವು ಕ್ಷಣಕ್ಷಣಕ್ಕೂ ಏರುತ್ತಲೇ ಇದೆ. ಹಾಗೆಯೇ ಜಗತ್ತು ತೆರೆದುಕೊಳ್ಳುತ್ತಿದೆ. ಬಂಡವಾಳ ಮತ್ತು ಉತ್ಪನ್ನಗಳು ಯಾವುದೇ ಜಾಗತಿಕ ಗಡಿಗಳನ್ನು ಮೀರಿ ಹರಿದಾಡಲು ಮುಕ್ತ ಅವಕಾಶಗಳೂ ಕೂಡ ತೆರೆದುಕೊಂಡಿವೆ. ಈ ಮೂಲಕ ರಾಷ್ಟ್ರಗಳು ಮತ್ತು ಜನರ ಅತ್ಯಂತ ನಿಕಟವಾದ ಏಕೀಕರಣ ಸಾಧಿಸುವ ಗುರಿಯೊಂದಿಗೆ ಜಾಗತೀಕರಣ ಮುನ್ನುಗ್ಗುತ್ತಿದೆ.

ಆದರೆ ಇಲ್ಲಿ ವೇಶ್ಯಾವಾಟಿಕೆಗೆ ಜಾಗತೀಕರಣದೊಳಗೇನು ಕೆಲಸ? ಎಂಬ ಪ್ರಶ್ನೆ ಎದ್ದಿದ್ದರೆ ವೇಶ್ಯಾವಾಟಿಕೆಯೂ ಕೂಡ ಆಧುನಿಕಸಂದರ್ಭ ಮತ್ತು ಜಾಗತೀಕರಣದೊಂದಿಗೆ ಹೇಗೆ ತನ್ನನ್ನು ಪರಭಾರೆ ಮಾಡುತ್ತಿದೆ ಎನ್ನುವುದು ಗಮನಾರ್ಹ.

ಬಹಳ ಮುಖ್ಯವಾಗಿ ಗೃಹಕೃತ್ಯದ 'ಸೇವೆ' ಒದಗಿಸಲೆಂದು, ಸೇವಾ ವಲಯದಲ್ಲಿ ದುಡಿಯಲು (care sectors) ಮತ್ತು ಮನರಂಜನೆಗಾಗಿ ಹೆಣ್ಣು ಮಕ್ಕಳು ವಲಸೆ ಹೋಗುತ್ತಾರೆ. ಹೀಗೆ ವಲಸೆ ಹೋಗುವವರಲ್ಲಿ ಭಾರತ ಮತ್ತು ಫಿಲಿಪೈನ್ ದೇಶದವರೇ ಹೆಚ್ಚು.

ಹೀಗೆ ಗುಳೆ ಹೋದವರು ಕಳಿಸಿ ಕೊಡುವ ಹಣದ ವಹಿವಾಟು ಈ ದೇಶವನ್ನು ತಲುಪುವ ನಿಟ್ಟಿನಲ್ಲಿ ಪುರುಷರಿಗಿಂತ ಮಹಿಳೆಯರದ್ದೇ ಹೆಚ್ಚಿದೆ. ಕಳೆದ ಒಂದು ದಶಕ ದಿಂದೀಚೆಗೆ ಗುಳೆ ಹೋದವರಲ್ಲಿ 60% , 80%ರಷ್ಟು ಮಹಿಳೆಯರೇ ಇದ್ದಾರೆ.

ಜಾಗತೀಕರಣದಲ್ಲಿ ಬಂಡವಾಳ ಮತ್ತು ವಸ್ತುಗಳಿಗೆ ಪರವಾನಗಿಯಿದ್ದು ಅವುಗಳು ಸುಲಲಿತವಾಗಿ ಹರಿದಾಡಬಹುದಾಗಿದೆ. ಆದರೆ 'ಸೇವೆ' ಅಂದರೆ ಮನುಷ್ಯರು ವಲಸೆ ಹೋಗಲು ಇನ್ನು ಪರವಾನಗಿ ದೃಢ ಪಟ್ಟಿಲ್ಲ.

ಈ ವಿಚಾರಗಳು ವಲಸೆ ಹೋದ ಹೆಣ್ಣು ಮಕ್ಕಳನ್ನು ಬೇರೆ ದೇಶಗಳಲ್ಲಿ ಅತಂತ್ರರನ್ನಾಗಿಸುತ್ತದೆ. ಅಭದ್ರತೆಯ ಭಯದ ನೆರಳಲ್ಲಿ ಅವರು ಅನೇಕ ಒತ್ತಡಗಳನ್ನು ಅನುಭವಿಸಬೇಕಾಗುತ್ತದೆ.

ಖಾಸಗಿ ಗೃಹಕೃತ್ಯ ಸೇವೆಗೆ, ವೃದ್ದ ಮತ್ತು ಮಕ್ಕಳ ಆರೈಕೆಗೆ, (ಪರಿಚಾರಕಿಯರು) ಎಂದು ಮೊದಲು ಹೇಳುವುದು ನೆಪ ಮಾತ್ರವಾಗಿದ್ದು, ಅಲ್ಲಿಗೆ ಹೋದ ನಂತರ ಅಭದ್ರತೆ ಮತ್ತು ಅತಂತ್ರಗಳನ್ನು ದುರುಪಯೋಗ ಪಡಿಸಿಕೊಳ್ಳುವ ಜಾಲ ಈ ಹೆಣ್ಣು ಮಕ್ಕಳನ್ನು ವೇಶ್ಯಾವಾಟಿಕೆಗೆ ದೂಡುವ ಪರಿಪಾಠ ಹೆಚ್ಚುತ್ತಿದೆ. ಕಾನೂನುಬಾಹಿರವಾಗಿ ಅಲ್ಲಿ ದುಡೀತಾರೆ. ಈ ಒತ್ತಡವೇ ಅವರನ್ನು ಮಾರಾಟಕ್ಕೆ ಇಡುತ್ತದೆ. ಯಾವುದೇ ರಕ್ಷಣೆಯಿಲ್ಲ, ಕಡಿಮೆ ವೇತನ, ಅತಿಯಾದ ಶ್ರಮ ಇವರ ಬದುಕಿನ ಇನ್ನೊಂದು ಮುಖವಾಗಿದೆ. ಅದೆಷ್ಟೋ ಹೆಣ್ಣುಮಕ್ಕಳು ಬಡತನ/ನಿರುದ್ಯೋಗಗಳ ಒತ್ತಡಗಳಿಂದಲೂ ವಲಸೆ ಹೋಗುತ್ತಿದ್ದಾರೆ. ಹೆಚ್ಚಿನ ಸಂಬಳ, ಆಕರ್ಷಕ ಉದ್ಯೋಗ, ಐಶಾರಾಮಿ ಜೀವನ ಮತ್ತು ಹುಸಿ ಮದುವೆಗಳು ಇವುಗಳ ಆಮಿಷಗಳಿಂದ ಬಹುತೇಕ ಹೆಣ್ಣುಗಳು ಸರಬರಾಜಾಗುತ್ತವೆ.

ಅಲ್ಲಿ ಹೋದ ನಂತರ ಈ ದುಸ್ತರದ ಅನುಭವವಾಗುತ್ತದೆ. ಆದರೂ ತನ್ನ ದೇಶದಲ್ಲಿ, ತನ್ನ ಕುಟುಂಬದಲ್ಲಿ ಇದಕ್ಕಿಂತಲೂ ಹೀನಾಯಸ್ಥಿತಿಯಿರುವುದರಿಂದ ಅಲ್ಲಿಗೇ ಹೊಂದಿಕೊಂಡು ಬಿಡುತ್ತಾರೆ.

ಸುರಕ್ಷತೆಯಿಂದ, ಘನತೆಯಿಂದ ಹಿಂತಿರುಗಲು ಅವಕಾಶ ಕಡಿಮೆಯಿರುವುದರಿಂದಲೂ, ಬಂದರೂ ಈ ಸಮಾಜದೊಳಗೆ ಸಮ್ಮಿಳಿತವಾಗಲು ಕಷ್ಟ ಸಾಧ್ಯವಾದುದರಿಂದಲೂ ಅಸಹಾಯಕರಾಗಿ ಅಲ್ಲಿಯೇ ತಮ್ಮ ಬದುಕುಗಳನ್ನು ಒಡ್ಡಿಕೊಂಡು ಬಿಡುತ್ತಾರೆ.

ತನ್ನ ಸ್ಥಳೀಯ ಪ್ರದೇಶಗಳಲ್ಲಿಯೇ ಲೈಂಗಿಕವೃತ್ತಿ ಮಾಡಲು ಸಾಧ್ಯವಿಲ್ಲ. ಒಂದು ವೇಳೆ ಅದೇ ಪ್ರದೇಶದಲ್ಲಿಯೇ ವೃತ್ತಿ ಮಾಡಿದರೆ-ಕೌಟುಂಬಿಕ ಒತ್ತಡವನ್ನು ಅನುಭವಿಸಬೇಕಾಗುತ್ತದೆ.

ಈ ವಲಸೆ ಜಿಲ್ಲೆಯಿಂದ ಜಿಲ್ಲೆಗೆ, ರಾಜ್ಯದಿಂದ ರಾಜ್ಯಕ್ಕೆ, ರಾಷ್ಟ್ರೀಯವಾಗಿ, ಅಂತರರಾಷ್ಟ್ರೀಯವಾಗಿ ನಡೆಯುತ್ತಲೇ ಇವೆ. ಸ್ಥಳೀಯ ಮಹಿಳೆಯರನ್ನು ಬಿಟ್ಟು ಬೇರೆ ದೇಶದ ಮಹಿಳೆಯರು ಲೈಂಗಿಕ ಸೇವೆ ಪಡೆಯುವ ಬಹುದೊಡ್ಡ ಬೇಡಿಕೆಯಿದೆ. ಅದನ್ನು ಸರಬರಾಜು ಮಾಡುವ ಏಜೆನ್ಸಿಗಳೇ ಇವೆ.

ಇಲ್ಲಿ ನಾವು ವಿವೇಚಿಸಬೇಕಾದ್ದು-ಹೀಗೆ ವಲಸೆ ಹೋಗುವವರ ಬದುಕು ಕಾನೂನುಬಾಹಿರವಾಗಿರುವುದೇ ಮತ್ತಷ್ಟು ಅವರ ಬದುಕನ್ನು ಬರ್ಬರ ಮಾಡುವ ಸಾಧ್ಯತೆಗಳಿವೆ.

ವಲಸೆ ಪಾಲಿಸಿಗಳನ್ನು ಮಾಡುವಾಗ ಪುರುಷರನ್ನು ಗಮನದಲ್ಲಿಟ್ಟುಕೊಳ್ಳುವುದರಿಂದ ಮಹಿಳೆ ವಲಸೆ ಹೋದಲ್ಲಿ ಸುರಕ್ಷಿತವಾಗಿ ಉದ್ಯೋಗ ಮಾಡುವ ಅವಕಾಶಗಳೂ ಮುಚ್ಚಿ ಹೋಗುತ್ತವೆ.

ಅವರಿಂದ ಬರುವ ದುಡಿಮೆಯ ಹಣ ಸ್ವೀಕರಿಸುವ ಪ್ರದೇಶಗಳೂ ಕೂಡ ಹಣ ಮಾತ್ರ ಬೇಕು ಎನ್ನುವಂತೆ ಅವರ ತೊಂದರೆಗಳು, ಅಸುರಕ್ಷತೆ ಬಗ್ಗೆ ತಲೆಕೆಡಿಸಿಕೊಂಡೇ ಇಲ್ಲ.

ಒಮ್ಮೆ ಹೋಗಿ ಅಲ್ಲಿ ಬದುಕು ತೆರೆದ ಕೂಡಲೇ ಪರಿಸ್ಥಿತಿ ಸಂಕೀರ್ಣವಾಗುತ್ತದೆ. ಒಂದು-ಅಲ್ಲಿ ಸಿಕ್ಕಿರುವ ಅವಕಾಶ ಇನ್ನೊಂದು ಇಲ್ಲಿಯ ವಾಸ್ತವ ಸ್ಥಿತಿಗಳ ವಿಮೋಚನೆಯ ಆಶಯ ಹೊಸ ಮತ್ತು ಅಪರಿಚಿತ ಪ್ರದೇಶಗಳೊಳಗೆ ಕಷ್ಟ, ಅಪಾಯ, ಶೋಷಣೆಗೆ ಒಳಪಡಿಸುವ ಪರಿಸ್ಥಿತಿ ಎದುರಿಸಬೇಕಾಗುತ್ತದೆ.


ಈ ನಿಟ್ಟಿನಲ್ಲಿ ದೇಶಾಂತರ ನೀತಿ ವಲಸೆ ಪಾಲಿಸಿಯನ್ನು ಸರಳೀಕರಣಗೊಳಿಸಿದರೆ ಸಾಗಾಟ ಸರಾಗವಾಗುತ್ತದೆ. ಅಥವಾ ಕಟ್ಟುನಿಟ್ಟಾಗಿಸಿದರೆ ಮತ್ತೆ ಮತ್ತೆ ಮಹಿಳೆ ಮತ್ತು ಮಕ್ಕಳ ಪರಿಸ್ಥಿತಿ ಬರ್ಭರವಾಗುತ್ತದೆ.

ಈ ಮಧ್ಯೆ 'Asia-Pacific Network of sexworkers' (APSNET) ವಿದೇಶೀ ಮಹಿಳೆಗೂ ಕೂಡ ರಾಷ್ಟ್ರೀಯ ಪ್ರಜೆಗಳ ಹಕ್ಕುಗಳನ್ನು ಕೊಡಬೇಕು, ಎನ್ನುವ ಒತ್ತಾಯವನ್ನು ಹೇರುತ್ತಿದೆ.

ಅಡಿ ಟಿಪ್ಪಣಿ:

೧ (ಆಧಾರ: ಲಂಕೇಶ್ ಪತ್ರಿಕೆ: ಜೂನ್ ೪ ೨೦೦೩)


ಎಂ.ಜಿ. ದೀಪಿಕಾ



ಅಧ್ಯಾಯ ೧೧

ವೇಶ್ಯಾವಾಟಿಕೆ ಮತ್ತು ಹೆಚ್.ಐ.ವಿ./ ಏಡ್ಸ್ :

ಒಂದು ಅಧ್ಯಯನ



"೨೦೦೨ ಹೊತ್ತಿಗೆ ೩.8 ಮಿಲಿಯನ್ ಮಕ್ಕಳು, 4.6 ಮಿಲಿಯನ್ ಯುವಕರು ಭಾರತದಲ್ಲಿ ಹೆಚ್.ಐ.ವಿ. ಮತ್ತು ಏಡ್ಸ್‌ಗೆ ಬಲಿಯಾಗಿದ್ದಾರೆ.'೧

"ನ್ಯಾಷನಲ್ ಏಡ್ಸ್ ಕಂಟ್ರೋಲ್ ಆರ್ಗನೈಸೈಷನ್" **[NACO]** ಅಂದಾಜಿನ ಪ್ರಕಾರ, ೨೦೦೨ರಲ್ಲಿ ೬,೧೦,೦೦೦ ಜನರು ಹೊಸದಾಗಿ ಸೋಂಕಿಗೆ ತುತ್ತಾಗಿದ್ದಾರೆ. ಹಾಗೂ ೨೦೦೨ರ ಹೊತ್ತಿಗೆ ೩.೮ ಮತ್ತು ೪.೫ ಮಿಲಿಯನ್ ಭಾರತೀಯರು ಹೆಚ್.ಐ.ವಿ/ಏಡ್ಸ್‌ಗೆ ಸೋಂಕಿಗೆ ತುತ್ತಾಗಿದ್ದರು. ಅದರಲ್ಲಿ ಶೇಕಡ ೩.೮.೫ ಮಹಿಳೆಯರು.

- ೨೦೦೩, ಸೆಪ್ಟಂಬರ್‌ನಲ್ಲಿ ೩೦-೪೪ ವಯೋ ಗುಂಪಿನ ೫೫.೭೬೪ ಭಾರತೀಯರಲ್ಲಿ ಏಡ್ಸ್ ಇರುವುದು ಬೆಳಕಿಗೆ ಬಂದಿದೆ. ಅದರಲ್ಲಿ ೧೪.೪೮೬ ಮಹಿಳೆಯರಿದ್ದಾರೆ.
- ೨೦೧೯ರ ಹೊತ್ತಿಗೆ ಭಾರತದ ಯುವಜನರಲ್ಲಿ ಏಡ್ಸ್ ಸೋಂಕು ಶಿಖರಕ್ಕೇರಿರುತ್ತದೆ.

೧೯೮೦ರಿಂದ ೨೦೦೦ದ ಕಾಲಘಟ್ಟದಲ್ಲಿ ೨೭ ಲಕ್ಷ ಸಾವುಗಳು ಭಾರತದಲ್ಲಿ ಏಡ್ಸ್‌ನಿಂದಾಗಿ ಆಗಿವೆ ಎಂದೂ ಯು.ಎನ್. ಅಂದಾಜು ಮಾಡುತ್ತದೆ. ಹಾಗೆಯೇ ೨೦೧೫ರ ಹೊತ್ತಿಗೆ ೧೨.೩ ಮಿಲಿಯನ್ ಜನರ ಸಾವುಗಳು ಮತ್ತು ೪೯.೫ ಮಿಲಿಯನ್ ಸಾವುಗಳು ೨೦೧೫ರಿಂದ ೨೦೫೦ರ ಕಾಲಘಟ್ಟದಲ್ಲಿ ಘಟಿಸುತ್ತವೆ ಎಂದು ಯು.ಎನ್. ಸಮೀಕ್ಷೆ ತಿಳಿಸುತ್ತದೆ.೨

- ನ್ಯಾಷನಲ್ ಇಂಟಲ್‌ಜೆನ್ಸ್ ಕೌನ್ಸಿಲ್ ವರದಿಯ ಪ್ರಕಾರ "೨೦೧೦ನೇ ಇಸವಿಯ ಹೊತ್ತಿಗೆ ಭಾರತದಲ್ಲಿ ೨೦ ರಿಂದ ೨೫ ಮಿಲಿಯನ್ ಜನರು ಏಡ್ಸ್‌ಗೆ ತುತ್ತಾಗಲಿದ್ದಾರೆ. "ಭಾರತ ಈ ನಿಟ್ಟಿನಲ್ಲಿ ಪ್ರಪಂಚದ ಎಲ್ಲ ರಾಷ್ಟ್ರಗಳಿಗಿಂತಲೂ ಮುಂದಿರುತ್ತದೆ" ಎನ್ನುತ್ತದೆ ವರದಿ.

ಕರ್ನಾಟಕದಲ್ಲಿ ೨೦೦೧ರ ಹೊತ್ತಿಗೆ ೧.೧೩ ಶೇಕಡ ಇದ್ದು ಅದು ೨೦೦೨ರ ಹೊತ್ತಿಗೆ ಶೇಕಡಾ ೧.೭೫ ಆಗಿತ್ತು ಎನ್ನುತ್ತದೆ ವರದಿ. ಹೀಗೇ ಅಂಕಿ ಅಂಶಗಳು ಸಾಗುತ್ತವೆ. ಜಾಗತಿಕವಾಗಿ ಅವಲೋಕಿಸಿದರೆ ದಕ್ಷಿಣ ಆಫ್ರಿಕಾ ಬಿಟ್ಟರೆ ನಂತರದ ಸ್ಥಾನವನ್ನು ಭಾರತ ಹೊಂದಲಿದೆ.

ಭಾರತ "ಪುಣ್ಯಭೂಮಿ," ನೈತಿಕವಾಗಿ, ಸಾಂಸ್ಕೃತಿಕವಾಗಿ ಉನ್ನತ ಸಂಸ್ಕಾರ ಉಳ್ಳದ್ದು ಎಂದೇ ಪ್ರತಿಪಾದಿಸುತ್ತಾ ಏಡ್ಸ್ ವಿಚಾರದಲ್ಲಿ ಕಣ್ಣು ಮುಚ್ಚಿಯಿತ್ತು. ಜಾಗತಿಕವಾಗಿ ಏಡ್ಸ್ ಬಗ್ಗೆ ಗಂಭೀರವಾಗಿ ಚರ್ಚೆ ಆರಂಭವಾಗುತ್ತಿದ್ದಾಗಲೂ ಭಾರತ ಅದು ತನ್ನ ದೇಶದ ಸಮಸ್ಯೆಯಲ್ಲ ಅನ್ನೋ ಭ್ರಮೆಯಲ್ಲಿಯೇ ಇತ್ತು.

ಇದೇ ಮನೋಭಾವದಲ್ಲಿಯೇ ಭಾರತದ ಜನ ಕೂಡ ಇದ್ದರು. 'ಏಡ್ಸ್ ವಿಚಾರ ಏನಿದ್ದರೂ' 'ಅನೈತಿಕ' ಬದುಕಿನ ಅಪಾಯಕಾರಿ ಗುಂಪುಗಳಿಗೆ ಮಾತ್ರ ಎನ್ನುವ ಮನೋಭಾವದಲ್ಲಿದ್ದರು. ಆದರೆ, ಈಗಿನ ವರದಿಯೊಂದರ ಪ್ರಕಾರ ಭಾರತದಲ್ಲಿ,

ವರ್ಷವೊಂದಕ್ಕೆ ೯೨.೦೦೦ ಹೆಚ್.ಐ.ವಿ ಪಾಸಿಟೀವ್ ಮಹಿಳೆಯರು ಮಕ್ಕಳಿಗೆ ಜನ್ಮಕೊಡುತ್ತಿದ್ದಾರೆ. ಎಲ್ಲ ಮಕ್ಕಳೂ ಪಾಸಿಟೀವ್ ಆಗಿ ಹುಟ್ಟದಿದ್ದರೂ ಪುಟ್ಟ ಕಂದಮ್ಮಗಳು ಅಪಾಯಕಾರಿ ಗುಂಪಿಗೆ ಸೇರುತ್ತಿವೆ. ಹೀಗೆ ಹೆಚ್ಐವಿ/ಏಡ್ಸ್ ವಿಚಾರವು ಸಾಮಾನ್ಯ ಜನಸಂಖ್ಯೆಗೆ ಬಹಳ ವೇಗವಾಗಿ ವರ್ಗಾವಣೆಯಾಗುತ್ತಿದೆ. ಇಂತಹ ವರದಿಗಳು ಎಲ್ಲರ ನಿದ್ದೆಗೆಡಿಸುತ್ತಿವೆ.

ಏಡ್ಸ್ ಮತ್ತು ಬಾಲವೇಶ್ಯಾವಾಟಿಕೆ:

''ಅತ್ಯಾಚಾರ ನಮ್ಮ ಸಮಾಜಕ್ಕೊಂದು ಅಭಿಶಾಪ. ಮೇಲಾಗಿ ಇದು ಅಜ್ಞಾನದ ಅಂಧಕಾರವೂ ಹೌದು. ಅತ್ಯಾಚಾರಕ್ಕೊಳಗಾದ ಬಾಲಕಿ ಶೀಲಗೆಟ್ಟವಳೆಂದು ಅವಳನ್ನು ಸಮಾಜ ತಿರಸ್ಕರಿಸುತ್ತದೆ. ಈ ತೆರನಾಗಿ ತಿರಸ್ಕೃತರಾಗಿ ಬಾಲವೇಶ್ಯೆಯರಾಗಿ ವೇಶ್ಯಾಗೃಹ ಸೇರಿದ ಬಾಲಕಿಯರ ಸಂಖ್ಯೆ ಶೇಕಡಾ ೮೦ ಕ್ಕೂ ಹೆಚ್ಚು. ಅಲ್ಲದೇ ಅಪಹರಣಕ್ಕೀಡಾದ ಶೇಕಡಾ ೯೦ ರಷ್ಟು ಬಾಲಕಿಯರಿಗೆ ವೇಶ್ಯಾಗೃಹಗಳೇ ಗತಿಯಾಗುತ್ತಿವೆ.'' (೧)

ಇತ್ತೀಚೆಗೆ ಈ ಅತ್ಯಾಚಾರಗಳಿಗೂ ಏಡ್ಸ್ ನಿವಾರಣೆಗೂ ಒಂದು ಮೌಢ್ಯ ತಳಕು ಹಾಕಿಕೊಂಡಿದೆ. ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಕನ್ಯೆಯರನ್ನು ಸಂಭೋಗಿಸುವುದರಿಂದ ಏಡ್ಸ್ ನಿವಾರಣೆಯಾಗುತ್ತದೆ ಎಂಬ ಮೂಢನಂಬಿಕೆಯಿಂದ ಲಕ್ಷಾಂತರ ಹೆಣ್ಣುಮಕ್ಕಳು ಅತ್ಯಾಚಾರಕ್ಕೊಳಗಾಗುತ್ತಿದ್ದಾರೆ. ಯಾವುದೇ ವೇಶ್ಯಾಗೃಹಗಳಿಗೆ ಹೋದರೂ ಅಲ್ಲಿ ಕಡಿಮೆ ಪ್ರಾಯದ ಕಂದಮ್ಮಗಳಿಗೆ ಬೇಡಿಕೆ ಹೆಚ್ಚು. ಬೆಲೆಯೂ ಹೆಚ್ಚು. ಗಿರಾಕಿಗಳ ಈ ಮನೋಭಾವವನ್ನು ಲಾಭಕ್ಕಾಗಿ ಬಳಸಿಕೊಂಡ ಸೆಕ್ಸ್ ಉದ್ಯಮ ಕಿರಿವಯಸ್ಸಿನ ಮಕ್ಕಳಿಗೆ ತೋಚಿಸಿದ್ದು ಬೆಲೆಯಿಡುತ್ತಾರೆ. ಹಾಗೆಯೇ ಕಿತ್ತುತಿನ್ನುವ ಬಡತನ, ಅನಕ್ಷರತೆ, ಮೌಢ್ಯತೆ, ಧಾರ್ಮಿಕ ನಂಬಿಕೆಗಳ ಆಧಾರದಲ್ಲಿ ಹೆಣ್ಣು ಮಕ್ಕಳನ್ನು ಕೊಮಡ ತರುವುದು, ಅಪಹರಿಸುವುದೂ ಕೂಡ ಸೆಕ್ಸ್ ಉದ್ಯಮದ ತಲೆಹಿಡುಕರಿಗೆ ಪ್ರಾಧಾನ್ಯತೆಯಾಗಿದೆ.

ಇತ್ತೀಚೆಗಂತೂ ಅಪ್ರಾಪ್ತ ಬಾಲಕಿಯರೊಂದಿಗೆ ಸಂಭೋಗ ಮಾಡಿದರೆ ಲೈಂಗಿಕ ರೋಗಗಳು ಗುಣವಾಗುತ್ತವೆ ಹಾಗೂ ಏಡ್ಸ್ ರೋಗ ಮಾಯವಾಗುತ್ತದೆ ಎನ್ನುವ ವಿಕೃತ ನಂಬಿಕೆಯಿಂದ ಕಾಮಾಂಧರು ಅತಿ ಚಿಕ್ಕ ಪ್ರಾಯದ ಅಂದರೆ 5 ವರ್ಷದಿಂದ 15 ವರ್ಷದೊಳಗಿನ ಮಕ್ಕಳೊಂದಿಗೆ ಅತ್ಯಾಚಾರ ಎಸಗುವ ಕ್ರೌರ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಗ್ರಾಮಾಂತರ ಪ್ರದೇಶ ಮತ್ತು ಸಾಮಾನ್ಯ ಜನರಿಗೆ ಏಡ್ಸ್ ಸೋಂಕು ತೀವ್ರ ಗತಿಯಲ್ಲಿ ಹರಡುತ್ತಿರುವುದರ ಬಗ್ಗೆ **NACO** ಕೂಡ ಗಂಭೀರವಾಗಿ ಚಿಂತಿಸುತ್ತಿದೆ.

ನಾನಿಲ್ಲಿ ಏಡ್ಸ್ ಬಗ್ಗೆ ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, ೧೯೮೬ರಲ್ಲಿ ತಮಿಳುನಾಡಿನ ಲೈಂಗಿಕ ವೃತ್ತಿ ಮಹಿಳೆಯೊಬ್ಬಳಲ್ಲಿ ಹೆಚ್‌ಐವಿ ಕಂಡು ಬಂತು. ಅದು ಭಾರತದ ಮೊದಲ 'ಹೆಚ್.ಐ.ವಿ ಕೇಸ್.'

ಲೈಂಗಿಕ ವೃತ್ತಿ ಮತ್ತು ಏಡ್ಸ್‌ಗೆ ಅನ್ಯೋನ್ಯತೆ ಕಲ್ಪಿಸುವ ಪರಿಪಾಠ ಅಲ್ಲಿಂದ ಆರಂಭವಾಯಿತು.

೧೯೯೮ರ ಒಂದು ಘಟನೆಯನ್ನು ಇಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

ಹಾಸನದ ಜಿಲ್ಲಾ ಆಸ್ಪತ್ರೆ ಆವರಣ. ಸುಮಾರು ೧೯-೨೦ ವರ್ಷದ ಯುವತಿಯೊಬ್ಬಳ ಹೆಣ ಆ ಆವರಣದಲ್ಲಿಯೇ ಬಿದ್ದಿತ್ತು. ಯಾರೂ ತಾಗಿಸಿಕೊಳ್ಳಲಿಲ್ಲ. ಬೀದಿ ನಾಯಿಗಳು ಆ ಹೆಣವನ್ನು ಎಳೆದಾಡಿದವು. ಪತ್ರಿಕೆಗಳಲ್ಲಿ ವರದಿಯಾಯ್ತು. ಆಗ ಆಸ್ಪತ್ರೆ ಸಿಬ್ಬಂದಿ ಕಾರ್ಯೋನ್ಮುಖರಾದರು. ಈ ಘಟನೆಗೆ ಕಾರಣವಿಷ್ಟೆ. ಆ ಹೆಣ ಒಬ್ಬ ಲೈಂಗಿಕವೃತ್ತಿ ಮಹಿಳೆಯದ್ದು. ಆ ಸಾವಿಗೆ ಕಾರಣ 'ಏಡ್ಸ್' ಎಂಬುದು.

ಸರಿ ಸುಮಾರು ಅದೇ ಸಂದರ್ಭ. ಶಿವಮೊಗ್ಗದ ಜಿಲ್ಲಾ ಆಸ್ಪತ್ರೆಯಲ್ಲಿ ಹೆಚ್‌ಐವಿ ಪಾಸಿಟೀವ್ ರೋಗಿಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆಯಾಗಿತ್ತು. ಅವರುಗಳ ಚಿಕಿತ್ಸೆ, ಆಹಾರ ಕೊಡುತ್ತಿದ್ದ ರೀತಿ, ನರ್ಸ್‌ಗಳ, ವೈದ್ಯರ ಭಯ ಭೀತ ನಡವಳಿಕೆಗಳು ಬಹಳ ಅಮಾನವೀಯವಾಗಿದ್ದವು.

ಇಂತಹ ನಡವಳಿಕೆಗಳು ಇಂದಿಗೂ ಹಾಗೆಯೇ ಜೀವಂತವಾಗಿವೆ ಹಾಗೆಯೇ ಬಹುತೇಕ ಜಿಲ್ಲಾ ಆಸ್ಪತ್ರೆಗಳು ಇದರಿಂದ ಹೊರತಾಗಿಲ್ಲ.

- ಲೈಂಗಿಕ ವೃತ್ತಿ ಮಹಿಳೆಯರನ್ನು ಹೆಚ್‌ಐವಿ/ಏಡ್ಸ್ ಹರಡುವ ಭಂಡಾರಗಳು ಎಂದು ಭಾವಿಸುತ್ತಾರೆ.

- ಸಾಂಕ್ರಾಮಿಕ ರೋಗಗಳ ಉತ್ಪಾತ ಕೇಂದ್ರಗಳು. ಸಾರ್ವಜನಿಕ ಆರೋಗ್ಯದ ಅಪಾಯಕಾರಿ ಬಿರುಗಾಳಿ ಅಂತ ಪರಿಗಣಿಸುತ್ತಾರೆ.

ಇಲ್ಲಿ ವಿಶ್ಲೇಷಿಸಬೇಕಾದ ಅಂಶಗಳೆಂದರೆ, ಹೆಚ್‌ಐವಿ/ಏಡ್ಸ್ ಸೋಂಕು ಹರಡುವ ಪ್ರಕ್ರಿಯೆಯಿಂದಾಗಿ ೭೧% ಸೋಂಕು ಲೈಂಗಿಕ ಸಂಪರ್ಕದಿಂದಾಗಿ ಎನ್ನುವ ಕಟುಸತ್ಯ ಜನರಿಗೆ ತಿಳಿದ ಕೂಡಲೇ 'ಅನೈತಿಕ' ಎಂದೇ ಹಣೆಪಟ್ಟಿ ಹಾಕಿರುವ ಲೈಂಗಿಕ ವೃತ್ತಿ ಮಹಿಳೆಯರು ಈ ಸೋಂಕಿನ ವಾಹಕರು ಎಂದು ಪರಿಭಾವಿಸುತ್ತಿದ್ದಾರೆ.

ಅಂದರೆ ಭಾರತದಂತಹ ಪುರುಷ ಪ್ರಾಧಾನ್ಯತೆಯ ವ್ಯವಸ್ಥೆಯಲ್ಲಿ ಈ ಹೆಣ್ಣುಗಳ ಮೇಲೆ 'ಗೂಬೆ' ಕೂರಿಸುವುದು, ಅಪರಾಧಿಗಳನ್ನಾಗಿಸುವುದು ಅತ್ಯಂತ ಸುಲಭ ಸಾಧ್ಯವಾದುದು.

ಈ ಕಾರಣದಿಂದಾಗಿಯೇ ದೇಶದಲ್ಲಿ ಅನೇಕ ಕಡೆ ಬಲವಂತದ ಚಿಕಿತ್ಸೆಗೆ ಒಳಪಡಿಸಲಾಯ್ತು. ಉತ್ತರ ಕರ್ನಾಟಕದ ದೇವದಾಸಿ ಮಹಿಳೆಯರಿಗೆ ಅಭಿವೃದ್ಧಿ ಕಾರ್ಯಯೋಜನೆಗಳ ಆಮಿಷ ತೋರಿಸಿ ಪರೀಕ್ಷೆಗಾಗಿ ರಕ್ತ ಪಡೆಯಲಾಯಿತು. ಕೊನೆಗೊಂದು ಊಟ ಕೊಟ್ಟು ಅವರನ್ನು ಕಳುಹಿಸಿಕೊಡಲಾಯ್ತು.

೧೯೯೪ರಲ್ಲಿ ಆರೋಗ್ಯ ಮಂತ್ರಿ ಯೊಬ್ಬರು "ಎಲ್ಲಾ ವೇಶ್ಯೆಯರನ್ನು ಎಳೆದು ತಂದು ಹೆಚ್ಐವಿ ಪರೀಕ್ಷೆ ಮಾಡಿ" ಎಂದು ವೈದ್ಯರಿಗೂ ಪೋಲೀಸರಿಗೂ ಏಕ್‌ಧಂ ಕರೆ ಕೊಟ್ಟದ್ದನ್ನು ಇಲ್ಲಿ ನೆನಪಿಸಬಹುದಾಗಿದೆ.

ಬಲವಂತದ ಪರೀಕ್ಷೆ ಪ್ರತಿಕೂಲ ಪರಿಣಾಮಗಳನ್ನೇ ಹೆಚ್ಚು ಮಾಡುವ ಸಾಧ್ಯತೆಗಳು ಹೆಚ್ಚಿರುತ್ತದೆ, ನಿಯಂತ್ರಣ ಕಾರ್ಯಕ್ರಮದಲ್ಲಿ ತೊಡಕುಗಳುಂಟಾಗುತ್ತವೆ

ಲೈಂಗಿಕ ವೃತ್ತಿ ಮಹಿಳೆ ಮತ್ತು ಆರೋಗ್ಯದ ಸವಾಲುಗಳು:

ಗುಪ್ತ ರೋಗಗಳನ್ನು, ಹೆಚ್ಐವಿ ಸೋಂಕನ್ನು ಹರಡುವ ವಾಹಕರು ಈ ಲೈಂಗಿಕ ವೃತ್ತಿ ಮಹಿಳೆಯರು ಎನ್ನುವ ಈ ಸಮಾಜದ ಮನೋಭಾವದೊಂದಿಗೆ ಲೈಂಗಿಕವೃತ್ತಿ ಮಹಿಳೆಯರ ಇಡೀ ಬದುಕಿನ ವಿವಿಧ ಮುಖಗಳನ್ನು ವಿಶ್ಲೇಷಿಸಬಹುದಾಗಿದೆ.

ಮೊದಲನೆಯದಾಗಿ ಸಂತಾನಭಿವೃದ್ಧಿ ಅಪಾಯಗಳು:

- ಸುರಕ್ಷತಾ ಕ್ರಮಗಳಿರುವುದಿಲ್ಲ
- ಸೂಕ್ತ ಚಿಕಿತ್ಸೆ ನೀಡುವ ಸೌಕರ್ಯಗಳಿಲ್ಲ
- ಚಿಕಿತ್ಸೆ ನೀಡುವವರೂ ಕೂಡ ಪೂರ್ವಾಗ್ರಹರಾಗಿ ಬಿಡುವುದು
- ಲೈಂಗಿಕ ವೃತ್ತಿ ಮಹಿಳೆಯರು ಎಂದ ಕೂಡಲೇ ಹಣ ವಸೂಲಿ ಪ್ರವೃತ್ತಿ. ಇದು ಸರ್ಕಾರಿ ವೈದ್ಯರಿರಬಹುದು/ಖಾಸಗಿ ವೈದ್ಯರಿರಬಹುದು. ಸಮೀಕ್ಷೆಯೊಂದರ ಪ್ರಕಾರ ಪ್ರತಿ ಮಹಿಳೆ ಲೈಂಗಿಕ ವೃತ್ತಿ ವಾರ್ಷಿಕವಾಗಿ ೩೦೦೦ ದಿಂದ ೫೦೦೦ ದವರೆಗೂ ವೈದ್ಯರಿಗೆ ನೀಡುತ್ತಾಳೆ.
- ಸುರಕ್ಷಿತ ಗರ್ಭಪಾತಗಳ ಸೌಲಭ್ಯಗಳಿಲ್ಲ
- ಸಂತಾನ ನಿಯಂತ್ರಣ-ಪರಿಣಾಮಕಾರಿಯಾಗಿ ಜಾರಿಗೊಳ್ಳದಿರುವುದು
- ಅನಕ್ಷರತೆ/ಅಜ್ಞಾನಗಳಿಂದಾಗಿ ಅರಿವಿನ ಕೊರತೆ
- ಸದಾ ತೂಗು ಕತ್ತಿಯ ಮೇಲೆ ನಡೆಸುವ ಇವರ ಬದುಕುಗಳಿಗೆ ಇರುವ ಪರಿಮಿತಿಗಳು/ಅತಂತ್ರಗಳು

ಹೆಚ್ಐವಿ/ಏಡ್ಸ್‌ನೊಂದಿಗಿನ ಸವಾಲುಗಳು:

ಅತ್ಯಂತ ಅಪಾಯಕಾರಿ ಸೋಂಕಾಗಿರುವ ಏಡ್ಸ್ ಈ ಜಗತ್ತಿಗೆ ಒಂದು ಸವಾಲಾಗಿ ಪರಿಣಮಿಸಿದೆ. ಅತ್ಯಂತ ವೇಗದಲ್ಲಿ ಆಧುನಿಕತೆಯತ್ತ ಜಗತ್ತು ಮುನ್ನಡೆಯುತ್ತಿರುವಾಗಲೇ ಅದಕ್ಕೊಂದು ಬ್ರೇಕ್ ಹಾಕುತ್ತಿರುವುದು ಈ ಏಡ್ಸ್ ಮದ್ದಿಲ್ಲದ ಈ ಸೋಂಕು ಹಲವು ಹಂತಗಳಲ್ಲಿ ಬೆಳೆದು ಕೊನೆಗೆ ಸಾವಿನೊಂದಿಗೆ ಇತಿಶ್ರೀ ಹಾಕುತ್ತಿದೆ.

ಹಾಗೆಯೇ ಏಡ್ಸ್ ಜಗತ್ತಿನಾದ್ಯಂತ ಇರುವ ಲೈಂಗಿಕವೃತ್ತಿಯವರನ್ನು ತನ್ನೊಂದಿಗೇ ಬೆಳಕಿಗೆ ತಂದಿತ್ತು. ಏಡ್ಸ್ ನಿಯಂತ್ರಣ ಕಾರ್ಯಯೋಜನೆಗಳು ತ್ವರಿತವಾದವು. ಈ ನಿಯಂತ್ರಣ ಕಾರ್ಯಕ್ರಮವು ಮೊದಲು ಗುರಿಯಾಗಿಸಿಕೊಂಡಿದ್ದು ಅಪಾಯಕಾರಿ ಗುಂಪುಗಳೊಂದಿಗೆ. ಇಂತಹ ಅಪಾಯಕಾರಿ ಗುಂಪುಗಳನ್ನು ಗುರುತಿಸುವಾಗ ಮೊದಲ ಸಾಲಿನಲ್ಲಿ ನಿಂತವರೇ ಲೈಂಗಿಕ ವೃತ್ತಿ ನಿರತರು.

ವಿಶ್ವ ಆರೋಗ್ಯ ಸಂಸ್ಥೆ. ಹೆಚ್ಐವಿ ನಿಯಂತ್ರಣಕ್ಕೆ ಮುಂದೆ ಬಂತು. ೧೯೯೬ರ ಹೊತ್ತಿಗೆ ೮೪ ಮಿಲಿಯನ್ ಡಾಲರ್ ಹಣವನ್ನು ಸಾಲವಾಗಿ ಮಂಜೂರು ಮಾಡಿತು.

ಹೆಚ್ಐವಿ/ಏಡ್ಸ್ ನಿಯಂತ್ರಣ ಕಾರ್ಯಯೋಜನೆ ಅತ್ಯಂತ ಬಿರುಸಿನಿಂದ ಆರಂಭವಾಯಿತು. ದೇಶದಾದ್ಯಂತ ನೂರಾರು ಸ್ವಯಂ ಸೇವಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾದರು.

ಈ ಸಂದರ್ಭದಲ್ಲಿಯೇ ನಾನೂ ಕೂಡ ಸ್ವಯಂ ಸೇವಾ ಸಂಸ್ಥೆಯೊಂದರಲ್ಲಿ ಕಾರ್ಯಯೋಜನೆಯ ಸಂಯೋಜಕಳಾಗಿ ಸೇರಿಕೊಂಡೆ ಆಯ್ಕೆ ಮಾಡಿದ ಗುರಿಗುಂಪು ಲೈಂಗಿಕ ವೃತ್ತಿ ಮಹಿಳೆಯರ ಮಧ್ಯೆ ಹೆಚ್ಐವಿ/ಏಡ್ಸ್ ನಿಯಂತ್ರಣದ ಜವಾಬ್ದಾರಿ ಆದಾಗಿತ್ತು. ಈ ನಿಟ್ಟಿನಲ್ಲಿ ರಾಜ್ಯದ/ಅಂತರರಾಜ್ಯಗಳ ಕ್ಷೇತ್ರ ಸಂದರ್ಶನಗಳು, ಅಂತರಾಷ್ಟ್ರೀಯ ಮಟ್ಟದ ಗೋಷ್ಠಿಗಳು, ಸಂವಾದಗಳು, ತರಬೇತಿಗಳಲ್ಲಿ ಭಾಗವಹಿಸಿದ್ದ ದಟ್ಟವಾದ ಅನುಭವಗಳ ಆಧಾರದಲ್ಲಿ ನಾನು ಕಂಡ ಅಂಶಗಳನ್ನು ಇಲ್ಲಿ ವಿಶ್ಲೇಷಿಸಲು ಇಚ್ಛಿಸುತ್ತೇನೆ.

ಹೆಚ್ಐವಿ/ಏಡ್ಸ್ ಮೊಟ್ಟ ಮೊದಲನೆಯದಾಗಿ ಅನೇಕ ವಿಚಾರಗಳಲ್ಲಿ ನಮ್ಮ ದೇಶದ ಸಾಂಸ್ಕೃತಿಕ, ಬದುಕಿಗೆ ಹೊಂದಿಕೊಳ್ಳಲಾರದಾಗಿದ್ದದೇ ನಿಯಂತ್ರಣ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಬಂದ ಮೊದಲ ಸವಾಲು ಆದಾಗಿತ್ತು.

ಲೈಂಗಿಕ ವೃತ್ತಿ ಮಹಿಳೆಯರೊಂದಿಗೆ ತೊಡಗಿಸಿ ಕೊಳ್ಳುವ ಕಾರ್ಯಕರ್ತರಿಗೆ ಧುತ್ತೆಂದು ಎದುರಾದ ತೊಡಕುಗಳು:

ಯಾವತ್ತೂ ಭಾರತದ ಶಿಕ್ಷಣ ಸ್ಪರ್ಶವನ್ನೇ ಮಾಡದ ಲೈಂಗಿಕ ಶಿಕ್ಷಣದ ಬಗ್ಗೆ ಇಲ್ಲಿ ಅರಿವು ಮೂಡಿಸಬೇಕಾಗಿತ್ತು. ಅದಕ್ಕಿಂತಲೂ ಮುಖ್ಯವಾಗಿ ಯಾವ ಜೀವಿಗೂ ಇಷ್ಟವಾಗದ ಸಾವು ಮತ್ತು ಸಾವಿನ ಸಮೀಪದ (ಡೆತ್ ಅಂಡ್ ಡೈಯಿಂಗ್) ವಿಚಾರದ ಬಗ್ಗೆ ಮಂಥಿಸಬೇಕಾಗಿತ್ತು. ಯಾವುದನ್ನು ಅತೀ ವೈಯುಕ್ತಿಕ ವಿಚಾರ, ಗೌಪ್ಯತೆ, ಮೈಲಿಗೆ ಎಂದು ಭಾವಿಸಲ್ಪಟ್ಟು, ಆ ಮೌಲ್ಡ್ ಒಳಗೆ ಬೆಳೆದ ಮನಸ್ಸುಗಳು ಇನ್ನೊಬ್ಬರ ಲೈಂಗಿಕತೆ ಬಗ್ಗೆ ಮಾತಾಡಬೇಕಿತ್ತು. ಅದಕ್ಕೆ ಪೂರಕವಾಗಿ ಲೈಂಗಿಕ ವೃತ್ತಿ ಮಹಿಳೆಯನ್ನು ಗುರುತಿಸುವುದು, ಅವರೊಂದಿಗಿನ ಒಡನಾಟ, ಅವರ ಸುತ್ತಲಿನ ಜಾಲದ ಪರಿಚಯ ಇವೆಲ್ಲವೂ ಕಾರ್ಯಕರ್ತರಿಗೆ ಒಂದು ದೊಡ್ಡ ಸವಾಲೇ ಆಗಿದ್ದವು.

ಇದೆಲ್ಲಕ್ಕಿಂತಲೂ ಈ ಯೋಜನೆಗಳಲ್ಲಿ ತೊಡಗಿಸಿಕೊಂಡವರನ್ನು ಈ ಸಮಾಜ, ನೆರೆಹೊರೆ, ಸ್ನೇಹಿತರು, ಬಂಧುಗಳು ನೋಡುತ್ತಿದ್ದ ರೀತಿ ಮಾನಸಿಕವಾಗಿ ತುಳಿಯುತ್ತಿದ್ದವು.

ಹೆಚ್‌ಐವಿ/ಏಡ್ಸ್ ಬಗ್ಗೆಯೂ ಕಲಿಕೆಯ ದಿನಗಳಾದ್ದರಿಂದ, ಬದುಕಿಗೇ ಹೊಸ ವಿಚಾರಗಳಾದ್ದರಿಂದ ಆ ದ್ವಂದ್ವಗಳು, ಮಾನಸಿಕ ತುಮುಲಗಳು, ಅಪಾಯದ ಭೀತಿಗಳು, ಅಧೀರರನ್ನಾಗಿಸುತ್ತಿದ್ದವು. ಸದಾ ಅಂಥದೊಂದು ಭಾವ ಹರಿಯುತ್ತಲೇ ಇರುತ್ತಿತ್ತು.

ಲೈಂಗಿಕ ವೃತ್ತಿ ಮಹಿಳೆಯರಿಗೆ ಎದುರಾದ ಸವಾಲುಗಳು:

- ಹೆಚ್‌ಐವಿ/ಏಡ್ಸ್ ಮೊದ ಮೊದಲು ಅವರನ್ನು ಕಾಡಲೇ ಇಲ್ಲ. ನಂತರ ಮೆಲ್ಲಗೆ ಆರಂಭವಾದ ಸಾವುಗಳು ಅವರನ್ನು ಸ್ವಲ್ಪ ಕದಡಿತ್ತು. ಅವರುಗಳಲ್ಲಿಯೂ ಆರಂಭವಾದ ಲೈಂಗಿಕ ರೋಗಗಳು ಉಲ್ಬಣವಾದಾಗ, ನಿಶ್ಯಕ್ತಿ ಕಾಡಿದಾಗ, ಮಾನಸಿಕವಾಗಿ ಸ್ವಲ್ಪವೇ ಮಂದಿ ಆಸಕ್ತರಾದರು. ಇದೂ ಒಮ್ಮೆಲೇ ಬಂದದ್ದಲ್ಲ, ಈ ಹಂತ ತಲುಪಲು ವರ್ಷಗಳೇ ಬೇಕಾಯಿತು.

- ಹೆಚ್‌ಐವಿ/ಏಡ್ಸ್ ಅರಿವು ಮೂಡಿಸಲು ಹೊರಟ ಕಾರ್ಯಕರ್ತರ ಪಡೆಗೆ ಮೊದಲು ಎದುರಾದದ್ದು-ಲೈಂಗಿಕ ವೃತ್ತಿ ಮಹಿಳೆಯರ ವಿಶ್ವಾಸಗಳಿಸುವ ಸವಾಲು. ಅದಕ್ಕಿಂತಲೂ ಅವರನ್ನು ಗುರುತಿಸಿ ಖಾತ್ರಿ ಮಾಡಿಕೊಳ್ಳುವುದು ದೊಡ್ಡ ಸವಾಲಾಗಿತ್ತು. ಜೀವಮಾನವಿಡೀ ಯಾರಿಂದಲೋ ವಂಚಿತರಾಗಿ-ವಂಚಿಸಿಯೇ, ಅನುಮಾನ-ಅವಿಶ್ವಾಸಗಳೇ ಬದುಕಾಗಿದ್ದ ಅವರ ವಿಶ್ವಾಸಗಳಿಸುವುದು ಅಷ್ಟು ಸುಲಭ/ಸರಳವಾಗಿರಲೇ ಇಲ್ಲ. ಅವರಿಗೂ ಈ ಕೆಳಕಂಡ ಗುಮಾನಿಗಳು ಕಾಡಿದ್ದವು.

- ಪೊಲೀಸರ ಕಡೆಯವರಿರಬಹುದು
- ಬೇಕಾದಷ್ಟು ಹಣವನ್ನು ಪಡೆದು ಬಂದಿರಬಹುದು
- ನಮ್ಮ ಬಗ್ಗೆ ಪತ್ರಿಕೆ/ಮಾಧ್ಯಮಗಳಿಗೆ ಬಹಿರಂಗ ಪಡಿಸಲು ಬಂದಿರಬಹುದು
- ನಮ್ಮನ್ನು ಒಲಿಸಿ ಎಲ್ಲಿಗಾದರೂ ಮಾರಾಟ ಮಾಡಲು/ ಕೊಂಡೊಯ್ಯಲು ಬಂದಿರಬಹುದು
- ನಮ್ಮನ್ನು ಪರೀಕ್ಷಿಸಿ'ಏಡ್ಸ್' ಇದೆಯೆಂದು ಖಾತ್ರಿ ಪಡಿಸಿಕೊಳ್ಳಲು ಬಂದಿರಬಹುದು...

ಹೀಗೆ ಅವರುಗಳ ಅನುಮಾನಗಳು ಸಹಜವಾಗಿಯೇ ಬೆಳೆಯುತ್ತಿದ್ದವು.

'ಏಡ್ಸ್' ಅನ್ನೋ ಶಬ್ದಾನೇ ನಡುಕ ಹುಟ್ಟಿಸಿದ್ದು ಮೊಟ್ಟ ಮೊದಲಿಗೆ ಈ ಮಹಿಳೆಯರಿಗೆ. ಅದೇ ವಿಟರುಗಳು ನಿರ್ಭೀತಿಯಿಂದಲೇ ಇದ್ದರು. ಸಾವುಗಳು ಅವರುಗಳನ್ನು ಬಾಚಿಬಾಚಿಕೊಳ್ಳುವವರೆಗೂ ಅವರುಗಳು ಹಾಗೆಯೇ ಇದ್ದರು.

ಅಷ್ಟೊತ್ತಿಗಾಗಲೇ ಈ ಮಹಿಳೆಯರ ಮೇಲೆ 'ಏಡ್ಸ್' ಗೂಬೆ ಕೂರಿಸಿಯಾಗಿ ಬಿಟ್ಟಿತ್ತು. ಮೊದಲೇ ಸಾಮಾಜಿಕ ಸ್ಥಾನ ಮಾನಗಳಿಲ್ಲದೇ, ಕನಿಷ್ಠವಾಗಿ ವಕ್ರ ದೃಷ್ಟಿ ಬೀರಿದ ಸಮಾಜದೊಂದಿಗೆ ಇದ್ದೂ ಇಲ್ಲದವಳಾಗಿ ಬದುಕುತ್ತಿದ್ದ ಲೈಂಗಿಕ ವೃತ್ತಿ ಮಹಿಳೆಯ ಮನಸ್ಸಿನ ಮೇಲೆ ಚೇತರಿಸಿಕೊಳ್ಳಲಾರದ ಬರೆ ಎಳೆದಂತಾಯ್ತು. ಮಾನಸಿಕವಾಗಿ ಕುಸಿದು ಹೋದಳು. ಇಂತಹ ಸಂದರ್ಭದಲ್ಲಿ ಅವರ ಬಯಕೆಗಳನ್ನು ಉಳಿಸುವ ಅವರ ಬದುಕುಗಳಿಗೆ ಒಂದು ವಿಶ್ವಾಸ ತುಂಬುವಂತಹ ದೊಡ್ಡ ಜವಾಬ್ದಾರಿ ಕಾರ್ಯಕರ್ತರ ಮೇಲೆ ಬಿತ್ತು.

ಏಡ್ಸ್ ನಿಯಂತ್ರಣ ಮತ್ತು ಕಾಂಡೂಮ್ :

ಏಡ್ಸ್ ನಿಯಂತ್ರಣದ ಕುರಿತು ಜಾಗತಿಕವಾಗಿ ಸಾಕಷ್ಟು ಸಂಶೋಧನೆ/ ಅಧ್ಯಯನ ಚರ್ಚೆ, ಸಂವಾದಗಳು ನಡೆದವು. ಹೆಚ್‌ಐವಿ ದೇಹ ಹೊಕ್ಕ ನಂತರ ಅದನ್ನು ನಿರ್ನಾಮ ಮಾಡುವ ಚಿಕಿತ್ಸೆ-ಔಷಧಿ ಇರಲೇ ಇಲ್ಲ. ಹಾಗೆಂದಾಗ ನಿಯಂತ್ರಣವೊಂದೇ ಪರಿಹಾರವಾಗಿ ಉಳಿಯಿತು. ನಿಯಂತ್ರಣ ಎನ್ನುವಾಗಲೂ 'ಬಹು ಜನರೊಂದಿಗೆ ಲೈಂಗಿಕ ಸಂಪರ್ಕ' ನಿಯಂತ್ರಿಸುವ ಚರ್ಚೆ ಬಂದರೂ ಸಹ ಚಾರಿತ್ರಿಕವಾದ, ಸಾಂಸ್ಕೃತಿಕವಾದ ಹಿನ್ನಲೆಗಳಲ್ಲಿ 'ಸೇಫ್ ಸೆಕ್ಸ್' ಸುರಕ್ಷಿತ ಲೈಂಗಿಕ ಕ್ರಿಯೆಯ ಬಗ್ಗೆಯೇ ಸನ್ನದ್ಧರಾಗುವುದು ಸೂಕ್ತ ಎಂಬ ತೀರ್ಮಾನಕ್ಕೆ ಬರಬೇಕಾಯಿತು. 'ಸುರಕ್ಷಿತ ಲೈಂಗಿಕ ಕ್ರಿಯೆ'ಗೂ ಪರಿಹಾರವೊಂದೇ ಉಳಿದಿದ್ದು ಅದೇ, 'ಕಾಂಡೂಮ್'. ಕಾಂಡೂಮ್‌ನಿಂದ ಶೇಕಡಾ ೧೦೦ ರಷ್ಟು ಖಾತ್ರಿ ಕೊಡಲು ಸಾಧ್ಯವಿಲ್ಲದಿದ್ದರೂ ಉಳಿದ ದಾರಿ ಅದೊಂದೇ ಆಗಿತ್ತು.

ಸರಿ, ಕಾಂಡೂಮ್ ಪ್ರೋಮೊಷನ್, ಪ್ರಚಾರ ಆರಂಭವಾಯಿತು ಮಾಡಬೇಕಾದ ಹೊಣೆ ಹೊರುವವರು ಯಾರು? ಈ ಪ್ರಶ್ನೆ ಕಾಡುವಾಗಲೇ ಮೂರನೇ ವ್ಯಕ್ತಿಗಳಾಗಿ ಅದನ್ನು ಲೈಂಗಿಕ ಕ್ರಿಯೆಯಲ್ಲಿ ತೊಡಗುವವರಿಗೆ ಕಾಂಡೂಮ್ ಪ್ರೊಮೋಟ್ ಮಾಡುವುದು ಕಷ್ಟಸಾಧ್ಯವೇ ಸರಿ. ಕಾರ್ಯಕರ್ತರುಗಳು ಅರಿವು ಮೂಡಿಸಬಹುದು ಅಷ್ಟೆ. ಲೈಂಗಿಕ ವೃತ್ತಿ ಮಹಿಳೆಯರಿಗೇ ಆ ಹೊಣೆ ಹೊರಿಸುವ ಆಲೋಚನೆ ಬಂದಾಗ ಈ ಪ್ರಶ್ನೆಗಳಿಗೆ ಉತ್ತರ ಸಿಕ್ಕಿತ್ತು.

ಲೈಂಗಿಕ ವೃತ್ತಿ ಮಹಿಳೆಯಲ್ಲಿ ಈ ವಿಚಾರವನ್ನು ಮುಂದಿಟ್ಟಾಗ ದೂರ ಸರಿದವರೇ ಹೆಚ್ಚು. ಒಪ್ಪಿದ ಕೆಲವೇ ಮಂದಿಯಿಂದ ಆರಂಭಿಸಿ ಈ ದಿನ ರಾಜ್ಯಾದಾದ್ಯಂತ ನೂರಾರು ಲೈಂಗಿಕ ವೃತ್ತಿ ಮಹಿಳೆಯರು ಹೆಚ್‌ಐವಿ/ಏಡ್ಸ್ ನಿಯಂತ್ರಣದ ಕಾರ್ಯಕರ್ತೆಯರಾಗಿದ್ದಾರೆ. ಹಾಗೆಯೇ ದೇಶದಾದ್ಯಂತ ಕೂಡ.

ಆಯ್ಕೆ ಮತ್ತು ತರಬೇತಿ ಪ್ರಕ್ರಿಯೆಗಳು ಆರಂಭವಾದವು. ಮಾನಸಿಕವಾಗಿ ಆ ಮಹಿಳೆಯರನ್ನು ಸಿದ್ಧಗೊಳಿಸುವುದು ಕೂಡ ಒಂದು ಸವಾಲಾಗಿತ್ತು.

ಇಲ್ಲಿ ನಾನು ಪ್ರಸ್ತಾಪಿಸಬೇಕಿರುವ ಮುಖ್ಯವಾದ ವಿಚಾರವೆಂದರೆ 'ಕಾಂಡೂಮ್' ಜಗತ್ತಿನಾದ್ಯಂತ ಶರವೇಗದಲ್ಲಿ ಹರಡುತ್ತಿರುವ ಇಡೀ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಬೆದರಿಕೆಯೊಡ್ಡಿರುವ. ಇಂದಿಗೂ

ಮಾನವ ಕುಲಕ್ಕೇ ಆಪತ್ತು ತಂದಿರುವ ಹೆಚ್ಐವಿ/ಏಡ್ಸ್ ನಂತಹ ಪಿಡುಗಿನ ನಿಯಂತ್ರಣದ ಅಸ್ತ್ರ ಈ 'ಕಾಂಡೂಮ್.'

ಇಲ್ಲಿ ಪ್ರಶ್ನೆಯಿರುವದು ಲೈಂಗಿಕ ವೃತ್ತಿ ಮಹಿಳೆಯರಿಗೆ ಈ ಹೊಣೆ ಹೊರಿಸುವುದು ಎಂದಾಗ ಅವರ ಆರೋಗ್ಯ ರಕ್ಷಣೆಯ ಹೊಣೆಗಿಂತಲೂ ಮುಖ್ಯವಾಗಿ ಅವರ ಬಳಿ ಬರುವ ಪುರುಷರ ರಕ್ಷಣೆಯೇ ಮುಖ್ಯವಾದಂತಿತ್ತು.

ಅಂದರೆ ಕಾಂಡೂಮ್ ಬಳಕೆಯನ್ನು ಪುರುಷ ಮಾಡಬೇಕಾಗಿರುವುದು.

ಈ ಅಂಶ ಲೈಂಗಿಕ ವೃತ್ತಿ ಮಹಿಳೆಯರಿಗೆ ಅದೆಷ್ಟು ದೊಡ್ಡ ಸವಾಲನ್ನು ತಂದೊಡ್ಡಿತೆಂದರೆ ಆರಂಭದಲ್ಲಿ ಮಾಡಿದ ಆ ಪ್ರಯತ್ನಗಳು, ಆ ಸೋಲುಗಳು, ಆ ತುಡಿತಗಳು ಇಂದಿಗೂ ದಾಖಲಾಗಿಯೇ ಉಳಿದಿವೆ.

- ಮಹಿಳೆ ತಾನು ಕಾಂಡೂಮ್ ಧರಿಸುವುದಲ್ಲ.
- ತನ್ನಲ್ಲಿಗೆ ಬರುವ ಪುರುಷನ ಮನ ಒಲಿಸಿ ಕಾಂಡೂಮ್ ಹಾಕಬೇಕು.
- ಕಾಂಡೂಮ್ ಲಭ್ಯತೆಯ ಹೊಣೆಕೂಡ ಅವಳದ್ದೇ.
- ತಮ್ಮಿಬ್ಬರ ಆರೋಗ್ಯದ ಹೊಣೆಯ ಬದ್ಧತೆ, ಜವಾಬ್ದಾರಿ ಇವಳಿಗಿರಬೇಕು.

ಈ ಸ್ಥಿತಿಯಲ್ಲಿ ಅವಳ ಮೇಲೆ ಹೊರಿಸಿದ ಹೊರೆ ಅದೆಂಥದ್ದು ಎನ್ನುವುದು ಉಲ್ಲೇಖಾರ್ಹವಾದುದು:

- ಹೊಸ ವಿಚಾರಗಳು, ಅಸ್ಪಷ್ಟ, ಅರ್ಥ ಮಾಡಿಕೊಳ್ಳಲು ಬಹಳ ಕಠಿಣವಾದದ್ದು.
- ತಾನೊಬ್ಬ ಲೈಂಗಿಕ ವೃತ್ತಿ ಮಹಿಳೆಯೇ ಆಗಿದ್ದರೂ 'ಕಾಂಡೂಮ್' ಬಗ್ಗೆ, ಲೈಂಗಿಕ ಕ್ರಿಯೆಗಳ ಬಗ್ಗೆ ಮಾತನಾಡಲಾರದ ಮುಜುಗರ, ನಾಚಿಕೆ.
- 'ಕಾಂಡೂಮ್' ತೊಡಿಸುವುದನ್ನು ಒಂದು ಕೌಶಲ್ಯವಾಗಿ ಕಲಿಸುತ್ತಿದ್ದುದನ್ನು ತಾನು ಅರಗಿಸಿಕೊಳ್ಳಬೇಕಾದ ಸಂಧಿಗ್ದತೆ.
- ತೀರಾಗೌಪ್ಯವಾದ, ವೈಯಕ್ತಿಕವಾದ ವಿಚಾರಗಳನ್ನು ಹಂಚಿಕೊಳ್ಳಲು ತನ್ನನ್ನು ತೆರೆದುಕೊಳ್ಳಬೇಕಾದಾಗ.
- 'ಶಿಶ್ನ'ದ ಮಾದರಿಯ ಮಾಡಲ್‌ಗಳನ್ನು ಬಳಸಿ 'ಕಾಂಡೂಮ್' ಬಳಕೆಯ ವೈಜ್ಞಾನಿಕ ರೀತಿಗಳನ್ನು ತನ್ನೊಂದಿಗೆ ಇತರೆ ಮಹಿಳೆಯರಿಗೆ ಕಲಿಸಿ ಕೊಡಬೇಕಾದ ಸಂದರ್ಭ ಬಂದಾಗ,
- 'ಫ್ಲಿಪ್ ಚಾರ್ಟ್' ಉಪಯೋಗಿಸಿ ಹೆಣ್ಣಿನ/ಪುರುಷನ ಜನನಾಂಗಗಳಿಗೆ ಬರುವ ರೋಗಗಳು, ರೋಗಲಕ್ಷಣಗಳು, ಅವುಗಳ ಉಲ್ಬಣಸ್ಥಿತಿಗಳು ಮುಂತಾದವುಗಳನ್ನು ಮಾದರಿಗಳೊಂದಿಗೆ ವಿವರಿಸುವಾಗ (demonstration)

■ ತನ್ನೊಂದಿಗೆ ಬಂದ ಪುರುಷನಿಗೆ ಅರಿವುಮೂಡಿಸಿ, ಮನ ಒಲಿಸಲು ಬೇಕಾದ ಸಂಯಮ, ಸಮಯದ ಕೊರತೆಯ ಒತ್ತಡ ಹೆಚ್ಚಾದಾಗ

■ ಸಾಮಾನ್ಯವಾಗಿ ಪಾನಮತ್ತರಾಗಿ ಬರುವ ವಿಟರೊಂದಿಗಿನ ನಡವಳಿಕೆಗಳು, ಅವುಗಳನ್ನು ಬದಲಾವಣೆ ಮಾಡುವ ಜವಾಬ್ದಾರಿಗಳು ಅಸಾಧ್ಯವಾದಾಗ (behaviour change)

ಇಂತಹ ಸಂದರ್ಭಗಳನ್ನು ಎದುರಿಸುವ ಶಕ್ತಿ, ಸಾಮರ್ಥ್ಯಗಳನ್ನು ಗಟ್ಟಿಗೊಳಿಸಿ ಕೊಳ್ಳಲು ಅವಳು ಇಂದಿಗೂ ಹೆಣಗಾಡುತ್ತಲೇ ಇದ್ದಾಳೆ.

ಇಲ್ಲಿ ನಾನು ವಿಶ್ಲೇಷಿಸಬಯಸುವುದೇನೆಂದರೆ ಬಹುತೇಕ ರಾಷ್ಟ್ರಗಳಲ್ಲಿ ಪುರುಷ ಕಾಂಡೂಮನ್ನೇ ಇಂದಿಗೂ 'ಏಡ್ಸ್' ನಿಯಂತ್ರಣ ಯೋಜನೆಗಳಲ್ಲಿ ಅನಿವಾರ್ಯವಾಗಿಸಿರುವುದಾದರೂ ಏಕೆ?

ಅವರ ಸಮರ್ಥನೆಗಳು ಏನೇ ಇರಬಹುದು, 'ಮಹಿಳಾ ಕಾಂಡೂಮ್' ಬೆಲೆ ಹೆಚ್ಚು ಎನ್ನುವ ಒಂದೇ ಕಾರಣವನ್ನು ಈ ವ್ಯವಸ್ಥೆ ಮುಂದಿಡುತ್ತಾ ಬಂದಿರುವುದು ನಿಜವಾಗಿಯೂ ಸಮರ್ಥನೀಯವೇ?

ಅರ್ಧದಷ್ಟು ಮಹಿಳೆಯರಿರುವ ಈ ವ್ಯವಸ್ಥೆ ಅವಳನ್ನು ಎರಡನೇ ದರ್ಜೆ ಪ್ರಜೆಯಾಗಿಸಿ ತನ್ನ ಪ್ರಾಧಾನ್ಯತೆ ಮೆರೆಯುತ್ತಿರುವ ಪುರುಷರ ಮನಸ್ಸುಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ ಎಂಬುದು ಇಲ್ಲಿ ಸ್ಪಷ್ಟ.

ಒಬ್ಬ ಮಹಿಳೆ ಅದರಲ್ಲೂ ಲೈಂಗಿಕ ವೃತ್ತಿ ಮಹಿಳೆಯನ್ನೇ ಪರಿಗಣಿಸಿ ಮುಂದುವರಿಸುತ್ತೇನೆ.

ಒಬ್ಬ ಪುರುಷನಿಗೆ ಅದರಲ್ಲೂ ಹಣ ಕೊಟ್ಟು ಬಂದವನಿಗೆ (ಹಣದ ವಾರಸುದಾರ) ಒಬ್ಬ ಮಹಿಳೆ 'ಕಾಂಡೂಮ್' ಹಾಕಲು ಪ್ರೇರೇಪಿಸುವ ಪ್ರಕ್ರಿಯೆ ಅದೆಷ್ಟು ಅಸಹಜವಾದದ್ದು.

ಕುಡಿದು ಅಥವಾ ಕಾಮೋದ್ರೇಕನಾಗಿ ಬಂದವನಿಗೆ ಆರೋಗ್ಯಬೋಧೆ ಮಾಡುವ ಸಮಯ, ಸಹಕಾರವಾದರೂ ಎಷ್ಟು ಕಠಿಣವಾದದ್ದು. ಕಾಂಡೂಮ್ ಹಾಕಿದರೆ ಸ್ಪರ್ಶ ಸುಖವಿರುವುದಿಲ್ಲ ಎನ್ನುವ ಲಾಲಸೆಯಿಂದ ಅವನನ್ನು ಹೊರ ತರುವ ಕೌಶಲ್ಯಗಳನ್ನು ಕಲಿಯಬೇಕಾದ ಇವಳ ಹೊಣೆ ಅದೆಂಥದ್ದು.

'ಕಾಂಡೂಮ್' ಹಾಕಲು ಒತ್ತಾಯಿಸದಿದ್ದಲ್ಲಿ ಇನ್ನಷ್ಟು ಹೆಚ್ಚು ಹಣ ಕೊಡುವ ಆಮಿಷಗಳನ್ನು ಇವಳು ಹತ್ತಿಕ್ಕುವುದಾದರೂ ಹೇಗೆ? ಆ ಮಹಿಳೆಯೂ ಪಾನಮತ್ತಳಾಗಿ ತನ್ನ ಸಂಯಮ ಕಳೆದುಕೊಂಡಿದ್ದರೆ ಅವನಿಗೆ ಅರಿವು ಮೂಡಿಸುವ ಪ್ರಶ್ನೆಯಾದರೂ ಹೇಗೆ ಬರಲು ಸಾಧ್ಯ?

-ವೃತ್ತಿ ಪೈಪೋಟಿಯಿಂದಾಗಿ ಕಾಂಡೂಮ್ ಒತ್ತಾಯಿಸುವವಳನ್ನು ತಿರಸ್ಕರಿಸಿ ಇನ್ನೊಬ್ಬಳ ಬಳಿ ಹೋಗುವ ಗಿರಾಕಿಗಳಿಂದ ಇವಳ ಹೊಟ್ಟೆ ಪಾಡಿನ ಮೇಲಾಗುವ ಪರಿಣಾಮ

-'ಕಾಂಡೂಮ್' ತನ್ನೊಂದಿಗೆ ಒಯ್ಯುವುದು, ಅಥವಾ ಅವುಗಳ ಲಭ್ಯತೆಯಿಂದಾಗಿಯೇ ಪೊಲೀಸರ, ರೌಡಿಗಳ, ಬಾಡಿಗೆ ಗಂಡಂದಿರ ವಕ್ರ ದೃಷ್ಟಿಗೆ ಬಹುಬೇಗ ಸಿಕ್ಕಿಹಾಕಿಕೊಳ್ಳಬಹುದಾದ ಸಂದರ್ಭಗಳು.

-ಕಾಮೋತ್ತೇಜಕರಾದ ಅಥವಾ ಸ್ಪರ್ಶ ಲಾಲಸೆಯ ಪುರುಷರುಗಳು ಮೊದಲು ಕಾಂಡೂಮ್ ಧರಿಸಿ ನಂತರದ ಲೈಂಗಿಕ ಕ್ರಿಯೆಯ ಸಂದರ್ಭಗಳಲ್ಲಿ ಅದನ್ನು ಹರಿದು ಹಾಕಿ ಯಾಮಾರಿಸುವ ಹಾಗೂ ಅದರೊಂದಿಗೆ ಅಪಾಯವನ್ನು ತಂದೊಡ್ಡುವವರನ್ನು ಎಚ್ಚರಿಕೆಯಿಂದ ಕಾಯ್ದುಕೊಳ್ಳಬೇಕಾದಾಗ ಅಥವಾ ಅದಕ್ಕೆ ಬಲಿ ಪಶುವಾಗಬೇಕಾದಾಗ...

ಹೀಗೆ ಮೇಲಿನ ಅದೆಷ್ಟು ಸಂದರ್ಭಗಳು ಪುರುಷ ಪ್ರಾಧಾನ್ಯತೆಯ ಮನಸುಗಳಿಗೆ ವಿರುದ್ಧವಾದ ನಡವಳಿಕೆಗಳನ್ನು ರೂಪಿಸಿಕೊಳ್ಳಬೇಕಾದ ಬಹುದೊಡ್ಡ ಜವಾಬ್ದಾರಿಯನ್ನು ಕಾಂಡೂಮ್ ಈ ಮಹಿಳೆಯರಲ್ಲಿ ತಂದೊಡ್ಡಿತು. ಈ ಸಂದರ್ಭಗಳಲ್ಲೂ ಅದೆಷ್ಟು ಚರ್ಚೆಗಳು ನಡೆದರೂ ಪುರುಷ ಕಾಂಡೂಮ್ ಬದಲಾಗಲೇ ಇಲ್ಲ. ಮಹಿಳಾ ಕಾಂಡೂಮ್‌ಗಳ ಸ್ಪಷ್ಟ ಕಲ್ಪನೆಯೂ ಕೂಡ ಈ ವ್ಯವಸ್ಥೆಯ ಮಂದೆ ಬರಲೇ ಇಲ್ಲ. ಆ ಬಗ್ಗೆ ಇಂದಿಗೂ ಚಕಾರವಿಲ್ಲ.

ಇಲ್ಲಿಯೂ ಪುರುಷನ ಆರೋಗ್ಯ ರಕ್ಷಣೆಯ ಜವಾಬ್ದಾರಿ ಮಹಿಳೆಯ ಮೇಲೆ ಹಾಕಿ ಹೆಚ್‌ಐವಿ/ಏಡ್ಸ್ ನಂತಹ ನಿಯಂತ್ರಣವನ್ನು ಸಾಧಿಸಲು ಹೊರಟಿರುವ ಈ ವ್ಯವಸ್ಥೆ ಈ ವಿಚಾರಗಳನ್ನೆಂದೂ ಅರ್ಥೈಸಿಕೊಳ್ಳದಿದ್ದಲ್ಲಿ ಅಪಾಯ ಇನ್ನೂ ತಪ್ಪಿದಲ್ಲ.

- ಮಹಿಳೆ ತನ್ನ ರಕ್ಷಣೆಯಂದಿಗೆ ತನ್ನ ಲೈಂಗಿಕ ಸಂಗಾತಿಯ ರಕ್ಷಣೆಯನ್ನು ತಾನು ಮಹಿಳಾ ಕಾಂಡೂಮ್ ಬಳಸಿ ಮಾಡುವಂತಾದರೆ,

- ಈ ಹಿಂದೆ ಪ್ರಸ್ತಾಪಿಸಿದ ಯಾವ ಅಡೆತಡೆಗಳೂ ಇಲ್ಲದೆ ಸ್ವಾವಲಂಬಿಯಾಗಿ ಜವಾಬ್ದಾರಿ ಹೊರಬಹುದಾಗಿದೆ ಎಂಬ ವಿಚಾರ ಎಲ್ಲ ಸಮರ್ಥನೆಗಳನ್ನು ಮೀರಿ ಅರ್ಥವಾಗಬೇಕಿದೆ.

ಇಷ್ಟೆಲ್ಲ ಪರಿಮಿತಿಗಳು, ಸವಾಲುಗಳ ಮಧ್ಯೆಯೂ ದೇಶಾದ್ಯಂತ ಸಾವಿರಾರು ಲೈಂಗಿಕ ವೃತ್ತಿ ಮಹಿಳೆಯರು ಹೆಚ್‌ಐವಿ/ಏಡ್ಸ್ ನಿಯಂತ್ರಣದ ಹೊಣೆ ಹೊತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ಅವರ ಜವಾಬ್ದಾರಿಯಿಂದ ಆದರ ಬೇರೆ ಬೇರೆ ಪರಿಣಾಮಗಳು ಕಾಂಡೂಮ್‌ಗಷ್ಟೇ ಸೀಮಿತವಾಗಿರದೆ ಅನೇಕ ಮಜಲುಗಳನ್ನು ತೆರೆದುಕೊಂಡವು.

ಇನ್ನೊಂದು ಮುಖ್ಯ ವಿಚಾರವನ್ನು ನಾನಿಲ್ಲಿ ವಿಷದ ಪಡಿಸಲು ಇಚ್ಛಿಸುತ್ತೇನೆ. 'ಕಾಂಡೂಮ್' ವೈಯುಕ್ತಿಕ, ಗೌಪ್ಯತೆಯ, ಖಾಸಗಿ ವಿಚಾರಗಳಿಗೆ ಕೈ ಹಾಕುವ, ಸಾಹಸಗಳಷ್ಟೇ ಅಲ್ಲದೆ ಇನ್ನೂ ಬೇರೆ ಬೇರೆ ಮಜಲುಗಳಲ್ಲಿ ಈ ಮಹಿಳೆಯರ ಪರಿಸ್ಥಿತಿಗಳನ್ನು ಎದುರಿಸಿದ್ದೂ ಕೂಡ ಅಷ್ಟೇ ಮುಖ್ಯವಾದುದು ಎಂದು ನನ್ನ ಭಾವನೆ.

ಲೈಂಗಿಕ ವೃತ್ತಿಯೊಂದಿಗೆ ತನ್ನ ಸುತ್ತಮುತ್ತಲಿನ ಲೈಂಗಿಕ ವೃತ್ತಿ ಮಹಿಳೆಯರಿಗೆ ಹೆಚ್.ಐ.ವಿ/ಏಡ್ಸ್ ನಿಯಂತ್ರಣದ ಅರಿವು ಮೂಡಿಸುವ, ಕಾಂಡೂಮ್ ವಿತರಿಸುವ ಜವಾಬ್ದಾರಿ ಹೊತ್ತವರನ್ನು 'ಸಮಾನಸ್ಕಂದರು' [peers] ಎಂದು ಹೆಸರಿಸಲಾಯಿತು.

ಮೊಟ್ಟ ಮೊದಲಿಗೆ ತನಗೆ ಅಪರಿಚಿತವಾದ ಸಂಸ್ಥೆಗಳು, ಕಾರ್ಯಕರ್ತರು, ಸಂಯೋಜಕರುಗಳೊಂದಿಗೆ ಹೊಂದಿಕೊಳ್ಳಬೇಕಾದ ಸಂದರ್ಭಗಳು.

ಅದರ ಬೆನ್ನಲ್ಲೇ ಹೊಸ ಹೊಸ ವಿಚಾರಗಳನ್ನು ಅರ್ಥೈಸಿಕೊಂಡು ಅದಕ್ಕೆ ಬದ್ಧತೆಯನ್ನು ರೂಪಿಸಿಕೊಳ್ಳಬೇಕಾದ್ದು, ತರಬೇತಿಗಳಂತಹ ಸಂದರ್ಭಗಳಲ್ಲಿ ಸಮಚಿತ್ತ ಕಾಯ್ದುಕೊಳ್ಳವುದು ಬಹಳ ದುಸ್ತರವಾದ ವಿಚಾರವಾಗಿತ್ತು. ಅಂತಹ ಸಂದರ್ಭದಲ್ಲಿ ತನ್ನ ಚಟಗಳಿಗೆ ಆದಷ್ಟೂ ಕಡಿವಾಣ ಹಾಕಬೇಕಾದಾಗ ಬಂದ ಒತ್ತಡಗಳು ಕೆಲವೊಮ್ಮೆ ತಮ್ಮ ಬದುಕುಗಳ ಭೂತಗಳನ್ನು ಕೆದಕಿ ಹೊರ ತೆಗೆದಾಗ ಭಾರವಾಗುತ್ತಿದ್ದ ಮನಸ್ಸುಗಳು.

''ಓ, ಇವಳೊಬ್ಬ ಆಫೀಸರ್ ಆಗಿಬಿಟ್ಟು ದೊರೆಸಾನಿ ತರಹ ಧಿಮಾಕು ಬಂದು ಬಿಡ್ತು. ಸಂಬಳ ತೊಗೋಳೋಳು ನೀನಲ್ವ, ನೀನೇ ಹಾಕ್ಕೋ ಕಾಂಡೂಮ್ಸ್ ನಾವ್ಯಾಕೆ ಅದನ್ನೆಲ್ಲಾ ತಿಳ್ಕೋಬೇಕು, ನೀನೇ ಯಾಕೆ ಆ ಕೆಲಸ ಮಾಡ್ಬೇಕು, ನೀನು ಬಿಟ್ಬಿಡು, ನಾವು ಮಾಡ್ತೇವೆ, ನಿನ್ನ ಸಂಬಳದಲ್ಲಿ ನಮಗೂ ಹಂಚಿ ಬಿಡು...'' ಹೀಗೆಲ್ಲ ತನ್ನ ಗೆಳತಿಯರೇ ತನ್ನನ್ನು ಹೀಯಾಳಿಸಿ ನೋಡಿದಾಗ, ಅಸೂಯೆಯಿಂದ ತಿವಿದಾಗಲೆಲ್ಲಾ ಧೈರ್ಯ ಮಾಡಿ ಹೊಣೆ ಹೊತ್ತ ಅವಳು ಕುಸಿದು ಹೋಗ್ತಿದ್ದಳು. ಅವರ ಅಸಹಕಾರ ಅವಳನ್ನು ಧೈರ್ಯಗುಂದುವಂತೆ ಮಾಡುತ್ತಿತ್ತು. ಅಂತಹ ಸಂದರ್ಭಗಳನ್ನು ಜಯಿಸಿ ನಿಯಂತ್ರಣ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡ ನೂರಾರು ಮಹಿಳೆಯರು ಇಂದು ನಮ್ಮೊಂದಿಗಿದ್ದಾರೆ.

ಇನ್ನು ಪೊಲೀಸರಂತೂ ಲೇವಡಿ ಮಾಡಿದ್ದು ಅಷ್ಟಿಷ್ಟಲ್ಲ. ಹೊಸ ವೇಷ ಹಾಕ್ಕೊಂಡು ಬಂದ್ರೇನ್ರೇ, ಈ ವೇಷ ಹಾಕ್ಕೊಂಡ್ರೆ ಬಿಟ್ಬು ಬಿಡ್ತೀವಿ ಅಂತ ತಿಳ್ಕೊಂಡ್ಬಿಟ್ರಾ? ಅಂತೆಲ್ಲಾ ಎಳೆದಾಡಿ ಅವರ ಬಳಿಯಲ್ಲಿದ್ದ ಕಾಂಡೂಮ್ಸ್ ಗುರುತಿನ ಚೀಟಿ, ಇತರೆ ಪರಿಕರಗಳನ್ನೆಲ್ಲಾ ಬಿಸಾಡಿದ್ದು, ಸುಟ್ಟು ಹಾಕಿದ ಘಟನಗೆಳೂ ನಮ್ಮೊಂದಿಗಿವೆ, ಮೊದಲು ಪ್ರತಿರೋಧ ಹುಟ್ಟಿದ್ದೇ ಅಲ್ಲಿಂದ, ಕನಿಷ್ಟ ಪರಿಜ್ಞಾನವೂ ಇರದ ಅನೇಕ ಕಾನ್‌ಸ್ಟೇಬಲ್‌ಗಳು ಉರಿದು ಬೀಳುತ್ತಿದ್ದರು. ಇವರ ಪ್ರತಿರೋಧ ಎದುರಿಸಲು ಸಜ್ಜಾಗಬೇಕಾದ ಪರಿಸ್ಥಿತಿಗಳು ಹೆಚ್‌ಐವಿ/ಏಡ್ಸ್ ನಿಯಂತ್ರಣದಂತಹ ಜವಾಬ್ದಾರಿಯಲ್ಲಿ ಅದೆಷ್ಟು ಮುಖ್ಯ ಎಂಬುದು ಗಮನಾರ್ಹ. ಹಾಗೆಂದ ಮಾತ್ರಕ್ಕೆ ಸಹಕರಿಸಿದ ಉದಾರಹರಣೆಗಳೇ ಇಲ್ಲವೆಂದಲ್ಲ. ನಿಧಾನವಾಗಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ಅಧಿಕಾರಿಗಳು, ಸೂಪರಿಟೆಂಡೆಂಟ್‌ಗಳು, ಉನ್ನತ ಪೊಲೀಸ್ ಅಧಿಕಾರಿಗಳೊಂದಿಗೆ ನಿರಂತರವಾಗಿ ನಡೆಸಿದ ಸಂವಾದ, ಚರ್ಚೆಗಳು ಅವರುಗಳು ಜವಾಬ್ದಾರಿಗಳನ್ನು ಅರ್ಥೈಸಿಕೊಡುವಲ್ಲಿ ಯಶಸ್ವಿಯಾದದ್ದೂ ಇದೆ. ಸಂಪೂರ್ಣ ಬೆಂಬಲ ನೀಡಿ ಇದರಲ್ಲಿ ತೊಡಗಿಸಿಕೊಂಡ ಕಾರ್ಯಕರ್ತರಿಗೆ,

ಲೈಂಗಿಕ ವೃತ್ತಿ ಮಹಿಳೆಯರಿಗೆ ರಕ್ಷಣೆಕೊಟ್ಟ ಉದಾಹರಣೆಗಳೂ ಇವೆ. ಹಾಗೆಯೇ ಗುರುತಿನ ಚೀಟಿಗಳಿಗೆ ತಮ್ಮ ಸಹಿ ಮಾಡಿ ಸಹಕರಿಸಿದ ಅಧಿಕಾರಿಗಳೂ ಇದ್ದಾರೆ. ಆದರೆ ಇಂದಿಗೂ ಬಹುತೇಕವಾಗಿ ಸಹಕಾರ ಪಡೆಯಲು ಸಾಧ್ಯವಾಗದಿರುವುದು ಕಾನ್‌ಸ್ಟೇಬಲ್‌ಗಳು ಮತ್ತು ಕೆಳಸ್ತರದ ಸಿಬ್ಬಂದಿಯಿಂದ. ಆದರೆ ಒಂದು ಮುಖ್ಯವಾದ ಬದಲಾವಣೆಯಾಗಿರುವುದೆಂದರೆ ಹೆಚ್ಚಿನ ಪೊಲೀಸ್ ಸಿಬ್ಬಂದಿ ಈ ಮಹಿಳೆಯಿಂದ ಕಾಂಡೂಮ್ ಪಡೆಯುತ್ತಿರುವುದು.

ಸಮಾನ ಸ್ಕಂದಳು ಮತ್ತು ಗೌರವಧನ:

ಸದಾ 'ಸೂಳೆ', 'ವೇಶ್ಯೆ', 'ಕುಲಟೆ' ಅಂತಾನೇ ಹೀಯಾಳಿಕೆಗಳಿಗೆ ಒಳಗಾಗುತ್ತಿದ್ದ ಲೈಂಗಿಕ ವೃತ್ತಿ ಮಹಿಳೆ ಹೆಚ್‌ಐವಿ/ಏಡ್ಸ್ ನಿಯಂತ್ರಣದ ಕಾರ್ಯಕರ್ತಳಾಗಿ 'ಸಮಾನಸ್ಕಂದ'ಳಾದಳು ಇದೂ ಕೂಡ ಅವಳ ವ್ಯಕ್ತಿತ್ವದ ಅವಲೋಕನಕ್ಕೆ ಒಂದು ಹೊಸ ಬದಲಾವಣೆಯ ಅಲೆಯನ್ನು ತಂದೊಡ್ಡಿತು. ತನಗೊಂದು ಗುರುತಿನ ಚೀಟಿ, ತಾನೊಬ್ಬ ಕಾರ್ಯಕರ್ತೆ ಎನ್ನುವ ಭಾವನೆ, ತನಗೊಂದು ಜವಾಬ್ದಾರಿಯಿದೆ ಎಂದು ಭಾವಿಸುವುದೇ ಅವಳ ಬದುಕಿಗೊಂದು 'ಚೇಂಜ್' ತಂದುಕೊಟ್ಟಿತ್ತು. ಹಾಗೆಂದ ಮಾತ್ರಕ್ಕೆ ಸಮಾನಸ್ಕಾಂದರೆಲ್ಲರೂ ಅತೀ ಪ್ರಾಮಾಣಿಕವಾಗಿ, ಬದ್ಧತೆಯಿಂದ ತೊಡಗಿಸಿಕೊಂಡರು ಅಂತ ಅರ್ಥವಲ್ಲ. ಅದರಲ್ಲಿಯೂ ಅನೇಕ ಕೊರತೆಗಳಿದ್ದವು. ಆದರೆ ತಮ್ಮ ಬದುಕಿಗೊಂದು ಇಂತಹ ಅವಕಾಶ ಸಿಕ್ಕಿತಲ್ಲಾ ಎಂಬ ಧನ್ಯತಾ ಭಾವವೊಂದು ಅವರಲ್ಲಿ ಬಂದಿದ್ದು ಮಾತ್ರ ಸತ್ಯ.

ಅದರೊಂದಿಗೆ ಬಂದ 'ಗೌರವಧನವಂತೂ' ಅವಳ ಬದುಕಿಗೊಂದು ತಿರುವನ್ನೇ ಕೊಟ್ಟಿತು. ಅದೇನು ಅಂತಹ ದೊಡ್ಡ ಮೊತ್ತವಲ್ಲದಿದ್ದರೂ ಅವಳು ಅದನ್ನು ಆದರಿಸುತ್ತಿದ್ದ ಪರಿ ಮಾತ್ರ ದೊಡ್ಡದು.' ನನಗೆ ನೆನಪಿರುವಂತೆ ಕರ್ನಾಟಕ ರಾಜ್ಯದಲ್ಲಿ ಮೊಟ್ಟ ಮೊದಲ ಕಾರ್ಯಕ್ರಮ. ಆರಂಭವಾದ ಹಂತದಲ್ಲಿ ಪ್ರತಿ ಸಮಾನಸ್ಕಂದಳಿಗೆ ೨೫೦-೩೦೦ ರೂ. ಕೊಡುತ್ತಿದ್ದುದು. ನಿರಂತರವಾಗಿ ಹತ್ತಾರು ವರ್ಷಗಳಿಂದ ಕಾರ್ಯಕರ್ತರಾಗಿ ದುಡಿಯುತ್ತಿರುವ ಸಮಾನಸ್ಕಂದರು ಈಗ ಸುಮಾರು ೨೦೦೦ ದಿಂದ ೪೦೦೦ ದವರೆಗೂ ಗೌರವಧನ ಪಡೆಯುತ್ತಿದ್ದಾರೆ.

ನನಗೆ ಈಗಲೂ ನೆನಪಿದೆ, ಪಡೆಯುತ್ತಿದ್ದುದು ಎಷ್ಟೇ ಕಡಿಮೆ ಮೊತ್ತವಾದರೂ ಅದನ್ನು ಅವಳು ಗೌರವಿಸುತ್ತಿದ್ದಳು. ಹೋಟೆಲಿಗೆ ಹೋದರೆ ೨೦೦-೩೦೦ ರೂ.ಗಳನ್ನು ಯಾವುದೇ ತಕರಾರಿಲ್ಲದೆ ಖರ್ಚು ಮಾಡುತ್ತಿದ್ದ ಅವರು ಗೌರವಧನದಲ್ಲಿ ೫-೧೦ ರೂ.ಗಳಿಗೂ ಜಗಳವಾಡ್ತಾ ಇದ್ರು.

ಗೌರವಧನ ಅವರ ಬದುಕಿನಲ್ಲಿ ಮಾಸಿಕವಾದ ಒಂದು ನಿಗದಿತ ಆದಾಯವಾಗಿಯೂ ಪರಿಗಣಿಸಲ್ಪಡಲು ಆರಂಭವಾಯ್ತು. ದೇಹ ಸ್ಪರ್ಶವಿಲ್ಲದೆಯೇ ಸ್ಪರ್ಶಿಸಲು ಸಾಧ್ಯವಾದ ಆ ಹಣ ಅವರ ಥೈಲೀ ಚೀಲದಲ್ಲಿ ಪ್ರತ್ಯೇಕ ಸ್ಥಾನ ಪಡೆಯಿತು.

ಅವಳನ್ನು ಪೂರ್ಣಾವಧಿ ಕಾರ್ಯಕರ್ತಳಾಗಿ ಕೆಲಸ ವೃತ್ತಿ ಬಿಡಬೇಕೆಂಬ ನಿಬಂಧನೆ. ಗೌರವಧನ ಮತ್ತು ವೃತ್ತಿಯಹಣ ನಿಷ್ಠಾವಂತರಾಗಿ ಸಮಾನಸ್ಕಂದಳಾಗಿ ಹೊತ್ತ ಹೊಣೆಯೊಂದಿಗೆ ಒಂದು ಮಹತ್ತರವಾದ ಬದಲಾವಣೆಯೂ ಅವಳ ದಿನಚರಿಯಲ್ಲಿ ಕಂಡು ಬಂತು. ಹೆಚ್ ಐವಿ/ಏಡ್ಸ್ ನಿಯಂತ್ರಣದೊಂದಿಗೆ ಅವಳು ದಿನದ ಕೆಲವಾರು ಗಂಟೆಗಳನ್ನು ತೊಡಗಿಸಿಕೊಳ್ಳಬೇಕಾಗಿಬಂತು. ಹೀಗೆ ಅವಳ 'ಲೈಂಗಿವೃತ್ತಿ' ವ್ಯಯಿಸುತ್ತಿದ್ದ ಸಮಯದಲ್ಲಿ ಕಡಿತವಾಯಿತು. ಇದೂ ಕೂಡ ಅವಳ ಆರ್ಥಿಕ ಪರಿಸ್ಥಿತಿಯಲ್ಲಿ ಸ್ವಲ್ಪ ಏರುಪೇರಾದರೂ ಯಾಂತ್ರಿಕವಾಗಿ ನಿರಂತರವಾಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ಸಾಧ್ಯತೆಯೇ ಕಡಿಮೆಯಾದವು.

ಸೋಂಕು ಮತ್ತು ಪ್ರಸರಣ:

೧೯೮೬ ರಲ್ಲಿ ಹೆಚ್ಐವಿ ಭಾರತದಲ್ಲಿ ಮೊಟ್ಟ ಮೊದಲು ಪತ್ತೆಯಾದದ್ದು ತಮಿಳುನಾಡಿನ ಒಬ್ಬ ಲೈಂಗಿಕ ವೃತ್ತಿ ಮಹಿಳೆಯಲ್ಲಿ. ಆರ್ಜಿತವಾದ ಈ ಸೋಂಕು ಅವಳಿಗೆ ಬಂದಿದ್ದಾದರೂ ಎಲ್ಲಿಂದ? ಮೊದಲೇ ಅಪಮಾನಕ್ಕೆ, ಅಪಖ್ಯಾತಿಗೆ ಒಳಗಾಗಿದ್ದ ಲೈಂಗಿಕವೃತ್ತಿ ಮಹಿಳೆಯರಿಗೆ 'ಏಡ್ಸ್' ಮಾರಕವೇ ಆಗಿದೆ. ಅವಳು ಬದುಕುಳಿಯುವ ಪ್ರಶ್ನೆಯೂ ಸವಾಲಾಯ್ತು. ಇದುವರೆವಿಗೂ ನಡೆದ ಸಂವಾದಗಳು, ಚರ್ಚೆಗಳು ಎಲ್ಲವುಗಳ ಆಧಾರದಲ್ಲಿ ಒಂದು ಅಂಶ ಸ್ಪಷ್ಟವಾಗಿದೆ. ಅದೇಂದರೆ ಹೆಚ್ಐವಿ ಸೋಂಕನ್ನು ಮಹಿಳೆಯರಿಗಿಂತಲೂ ಪುರುಷರೇ ಹರಡುವ ಸಾಧ್ಯತೆಯಿರುವುದು ಹೆಚ್ಚಾಗಿರುವುದು. ಇದಕ್ಕೆ ಕೆಲವು ಅಂಕಿ ಅಂಶಳೂ ಕೂಡ ಪುಷ್ಟಿ ನೀಡುತ್ತವೆ.

೧೯೯೨ರ ಅವಧಿಯಲ್ಲಿ ಭಾರತದಲ್ಲಿ ಪತ್ತೆಯಾಗಿದ್ದ ಏಡ್ಸ್‌ರೋಗಿಗಳು

ಪುರುಷರು	-	ಮಹಿಳೆಯರು	ಒಟ್ಟು
೭೫	-	೨೮	(೧೦೩)

ಹಾಗೆಯೇ ಒಬ್ಬ ಪುರುಷ ತನಗಿರುವ ಹೆಚ್ಐವಿ ಸೋಂಕನ್ನು ಹರಡಬಹುದಾದ ಸಾಧ್ಯತೆಗಳನ್ನು ಹೀಗೆ ಚಿತ್ರಸಲಾಗಿದೆ. **ಪುರುಷರು, ಇತರೆ ಸಂಗಾತಿಗಳು, ಲೈಂಗಿಕ ವೃತ್ತಿ ಮಹಿಳೆಯರು, ಮಡದಿಯರು, ಮಕ್ಕಳು**

ಇಲ್ಲಿ ಯಾವುದೇ ಪರ ಅಥವಾ ವಿರೋಧದ ಸಮರ್ಥನೆಯಲ್ಲ. ಆದರೆ ವಾಸ್ತವವಾಗಿ ಈ ವ್ಯವಸ್ಥೆ ತನ್ನ ಮಡಿವಂತಿಕೆಯನ್ನು, ಪ್ರಾಧಾನ್ಯತೆಯನ್ನು ಮೀರಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಹೀಗಾಗಿಯೇ ಸಾಮಾನ್ಯ ಜನಸಂಖ್ಯೆಯಲ್ಲೂ ಸೋಂಕು ಪೀಡಿತರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಲೇ ಇದೆ.

ಹಾಗೆಂದು ಲೈಂಗಿಕ ವೃತ್ತಿ ಮಹಿಳೆಯರು ಸೋಂಕು ಪೀಡಿತರಾಗುವ ಅಪಾಯಕಾರಿ ಗುರಿ ಗುಂಪಿಗೆ ಸೇರುವುದಿಲ್ಲವೇ ಎಂದು ಪ್ರಶ್ನಿಸಿದರೆ ಖಂಡಿತಾ ಅವರೂ ಆ ಗುಂಪಿನೊಳಗೆ ಬರುತ್ತಾರೆ. ಆದರೆ ಸತತವಾದ ಪ್ರಯತ್ನಗಳು, ಅವರ ವೃತ್ತಿ ಬದುಕಿಗೇ ಬಂದ ಆಘಾತಗಳು, ಆ ಸಮುದಾಯದಲ್ಲಿಯೇ ನಿಯಂತ್ರಣದ ನಾಯಕತ್ವ ರೂಪಿಸುವ ಪ್ರಯತ್ನಗಳು ಲೈಂಗಿಕ ವೃತ್ತಿ ಮಹಿಳೆರಿಗಿರುವ ಅಪಾಯವನ್ನು ಸ್ವಲ್ಪ ಮಟ್ಟಿಗೆ ಕಡಿಮೆ

ಮಾಡಿರಬಹುದು. ಹಾಗೆಂದು ಅವರ ತಲೆಯ ಮೇಲೆ ಆ ಗೂಬೆ ಕೂರಿಸಿ ಮಡಿವಂತಿಕೆಯಿಂದ ಈ ಸಮಾಜ ವರ್ತಿಸಿದ್ದರ ಪರಿಣಾಮವೇ ಇಂದು ಜಗತ್ತಿನಲ್ಲಿಯೇ ಭಾರತ ಸೋಂಕು ಪೀಡಿತರ ರಾಷ್ಟ್ರಗಳ ಪಟ್ಟಿಯಲ್ಲಿ ಪ್ರಮುಖ ಸ್ಥಾನ ಹೊಂದುವಂತಾಗಿದ್ದು ಎನ್ನುವ ಕಟುಸತ್ಯವನ್ನು ನಾವು ತಿಳಿದು ಕೊಳ್ಳಬೇಕಾಗಿದೆ.

ಹಾಗೆಂದು ನಾನು ಈ ಹತ್ತುವರ್ಷಗಳಲ್ಲಿ ಹೆಚ್‌ಐವಿ/ಏಡ್ಸ್ ನಿಯಂತ್ರಣದ ಕಾರ್ಯಕ್ಷೇತ್ರದಲ್ಲಿ ತೊಡಗಿಸಿಕೊಂಡಾಗ ನೂರಾರು ಲೈಂಗಿಕವೃತ್ತಿ ಮಹಿಳೆಯರ ಸಾವುಗಳನ್ನು ಕಂಡಿದ್ದೇನೆ. ಅವರ ಸಾವಿನಿಂದಾಗಿ ಅವರ ಅವಲಂಬಿತರು ಬೀದಿ ಪಾಲಾಗಿದ್ದು, ಮಕ್ಕಳು ಅನಾಥರಾಗಿದ್ದು ಹಾಗೂ ಆ ಜಾಲದ ಹಂದರದಲ್ಲಿ ದುರುಪಯೋಗವಾಗಿದ್ದು, ಆಧಾರ ಸ್ತಂಭವನ್ನೇ ಕಳೆದುಕೊಂಡ ಅದೆಷ್ಟು ಜನ ನಿರಾಶ್ರಿತರಾದುದನ್ನು ಕಂಡಿರುತ್ತೇನೆ.

ಅದರೊಂದಿಗೆ ಈ ಮಹಿಳೆಯರು ಒಂದಿಷ್ಟಾದರೂ ಪ್ರಾಮಾಣಿಕವಾಗಿ ನಿರ್ವಹಿಸಿದ ಜವಾಬ್ದಾರಿಯಿಂದಲೇ ದೇಶಾದ್ಯಂತ ಇಂದಿಗೂ ಕೋಟ್ಯಾಂತರ ಕಾಂಡೂಮ್ಸ್ ಬಳಕೆಯಾಗುತ್ತಿರುವುದು.

ಸೋಂಕು ಪ್ರವೇಶಿಸದಂತೆ ಹಾಗೆಯೇ ಸೋಂಕಿರುವವರಿಂದ ಇತರರಿಗೆ ಹರಡದಂತೆ ಅರಿವು ಮೂಡಿಸುವಲ್ಲಿಯೂ ಇವರ ಪಾತ್ರ ಗಣನೀಯವಾಗಿದೆ.

ಲೈಂಗಿಕ ವೃತ್ತಿ ಪ್ರದೇಶಗಳಲ್ಲಿ ಎಲ್ಲ ಸವಾಲುಗಳು, ಪರಿಮಿತಿಗಳನ್ನು ಮೀರಿ ಹೆಚ್‌ಐವಿ/ಏಡ್ಸ್ ನಿಯಂತ್ರಣದಲ್ಲಿ ತೊಡಗಿಸಿಕೊಂಡ ಸಾವಿರಾರು ಲೈಂಗಿಕ ವೃತ್ತಿ ಮಹಿಳೆಯರು ಇದನ್ನು ತಡೆಗಟ್ಟುವಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸಿದ್ದಾರೆ ಎನ್ನುವುದಂತೂ ವಾಸ್ತವ ಮತ್ತು ಕಟುಸತ್ಯವಾಗಿದೆ.

ಹೆಚ್‌ಐವಿ/ಏಡ್ಸ್ ನಿಯಂತ್ರಣ ಯೋಜನೆಗಳನ್ನು ಕೈಗೆತ್ತಿಕೊಂಡ ಭಾರತದ ಅನೇಕ ಸ್ವಯಂ ಸೇವಾಸಂಸ್ಥೆಗಳು ಅನೇಕ ಸವಾಲುಗಳೊಂದಿಗೆ ಮುನ್ನುಗ್ಗಿದವು. ಗುರಿಯಾಗಿಸಿಕೊಂಡ ಅಪಾಯಕಾರಿ ಗುಂಪುಗಳನ್ನು ವಿಂಗಡಿಸಿ ಅವುಗಳ ಮಧ್ಯೆ ತೊಡಗಿಸಿಕೊಳ್ಳಲು ಆರಂಭಿಸಿದವು. ನಂತರದಲ್ಲಿ ಆ ಸಮುದಾಯಗಳಲ್ಲಿಯೇ ಈ ಜವಾಬ್ದಾರಿ ರೂಪಿಸಲು ಪ್ರಯತ್ನಿಸಿದವು. ಮೊದಮೊದಲು ವಿದೇಶೀ ಫಂಡಿಂಗ್ ಸಂಸ್ಥೆಗಳೆ ಹೆಚ್ಚಾಗಿ ಈ ಯೋಜನೆಗಳಿಗೆ ಧನಸಹಾಯ ನೀಡಿದವು.

ನಂತರ **NACO**ಅಡಿಯಲ್ಲಿ ಪ್ರತಿರಾಜ್ಯಗಳಲ್ಲೂ ಆರೋಗ್ಯ ಇಲಾಖೆಯ ಸಂಯೋಜನೆ ಮತ್ತು ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ 'ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ'ಗಳು ನೋಂದಾಯಿಸಲ್ಪಟ್ಟವು. ಈಗಲೂ ರಾಜ್ಯಗಳಲ್ಲಿ ಈ ಸಂಸ್ಥೆಗಳು ಕಾರ್ಯವೆಸಗುತ್ತಿವೆ.

ವಿಶ್ವಬ್ಯಾಂಕ್ ನೀಡುತ್ತಿರುವ ಸಾಲದ ಹಣಕ್ಕೆ ಲೆಕ್ಕ ಭರ್ತಿ ಮಾಡುವುದಕ್ಕೇ ಹೆಚ್ಚು ಪ್ರಾಧಾನ್ಯತೆ ಕೊಡುವ ಇಂತಹ ಸರ್ಕಾರಿ ಸಂಸ್ಥೆಗಳು ನಿಜವಾದ ಬದ್ಧತೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ನೂರಾರು ಪರಿಮಿತಿಗಳು ಅಡ್ಡಿಯಾಗುತ್ತವೆ. ಈ ಸಂಸ್ಥೆಯೂ ಅದರಿಂದಾಗಿಯೇನೂ ಭಿನ್ನವಾಗಿಲ್ಲ. ಆದರೆ ಎಲ್ಲ ಸಂಸ್ಥೆಗಳಂತೆಯೇ ಯಾಂತ್ರಿಕವಾದ ಒಂದು ಅಂಕಿ ಅಂಶವನ್ನು ಮುಂದಿಡಬಹುದು ಹಾಗೂ ಇದಕ್ಕಾಗಿ ನಿರ್ಮಿತವಾಗಿರುವ

ಆಡಳಿತಾತ್ಮಕ ಖರ್ಚು ವೆಚ್ಚಗಳನ್ನು ಕೋಟಿಗಳು ಭರ್ತಿಮಾಡಬಹುದು.

ಇದನ್ನು ಮೀರಿ ಒಂದು ಆಂದೋಲನದ ಸ್ವರೂಪ ನೀಡಿ ಇಡೀ ಸಮಾಜದ ವಿವಿಧ ಸ್ತರಗಳನ್ನು ತೊಡಗಿಸಿಕೊಳ್ಳಲು ಪ್ರೇರೇಪಿಸುವ, ಅವರ ಬದ್ಧತೆಗಳ ಅನಿವಾರ್ಯತೆಯನ್ನು ಒತ್ತಾಯಿಸುವ ತಾಕತ್ತನ್ನು ನಿರೀಕ್ಷಿಸಲು ಸಾಧ್ಯವೇ ಇಲ್ಲ. ಹಾಗೂ ಕಾರ್ಯಯೋಜನೆಗಳ ಮೌಲ್ಯಮಾಪನ ಮಾಡುವನು ಪ್ರಾಮಾಣಿಕವಾಗಿ ಅಥವಾ ವೈಜ್ಞಾನಿಕವಾಗಿ ಮೌಲ್ಯಮಾಪನ ಮಾಡುವ ಇರಾದೆಯೆ ಕೊರತೆಯೂ ಕೂಡ ಈ ಸಂಸ್ಥೆಗಳ ಬಹುದೊಡ್ಡ ಕೊರತೆಯಾಗಿ ಬಿಡುತ್ತವೆ.

ಅಂತಹ ಪರಿಮಿತಿಗಳೊಂದಿಗೆ ಪ್ರತಿಷ್ಠೆಯೊಂದಿಗೆ ಈ ಸಂಸ್ಥೆಗಳು ಉಸಿರಾಡುತ್ತಲೇ ಇರುತ್ತವೆ ವಿಶ್ವಬ್ಯಾಂಕ್ ಸಾಲ ಮುಗಿಯುವವರೆವಿಗೂ,ಎಲ್ಲೋ ಅಲ್ಲಲ್ಲೇ ಒಂದಿಷ್ಟು ಪ್ರಯತ್ನಗಳಾಗುತ್ತಿರುವುದೇ ಸಮಾಧಾನದ ವಿಚಾರವಷ್ಟೆ.

ಏಡ್ಸ್ ನಿಯಂತ್ರಣ ಮತ್ತು ಒಗ್ಗೂಡಿಸುವಿಕೆ:

ಏಡ್ಸ್ ನಿಯಂತ್ರಣದ ಜವಾಬ್ದಾರಿ ಹೊತ್ತ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಲೈಂಗಿಕ ವೃತ್ತಿ ಮಹಳೆಯರನ್ನು ಸಂಘಟಿಸಿ ಅವರ ಸಮುದಾಯದ ರಕ್ಷಣೆಯ ಜವಾಬ್ದಾರಿಯನ್ನು ರೂಪಿಸುವ ಪ್ರಯತ್ನಗಳನ್ನು ನಡೆಸಿದವು. ಕರ್ನಾಟಕದಲ್ಲಿ ನಡೆದ ಪ್ರಯತ್ನದ ಒಂದು ಉದಾಹರಣೆಯನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ ಅಷ್ಟೆ.

ಅದರಲ್ಲಿ ಕರ್ನಾಟಕದಲ್ಲಿ ಡಾ॥ ವಿಜಯಠಾಕೂರರ ನೇತೃತ್ವದಲ್ಲಿ, ಬರ್ಡ್ಸ್ ಸಂಸ್ಥೆಯ ಸಂಯೋಜನೆಯೊಂದಿಗೆ ನಡೆಸಿದ ಪ್ರಯತ್ನ ಗಮನಾರ್ಹವಾದುದು. ನಂತರ ಲೈಂಗಿಕ ವೃತ್ತಿ ನಿರತರ ಸಮುದಾಯಗಳ ಸಂಘಟನೆ ಅನೇಕ ಪ್ರಯತ್ನಗಳು ನಡೆದಿವೆಯಾದರೂ ಲೈಂಗಿಕ ವೃತ್ತಿ ಮಹಿಳೆಯರನ್ನು ಸಂಘಟಿಸಿದ ಪರಿ, ಆ ಹಾದಿಯಲ್ಲಿ ಕಂಡುಕೊಂಡ ಅನುಭವಗಳು, ಸವಾಲುಗಳು, ತೊಡಕುಗಳು, ವಾಸ್ತವಗಳು, ಪರಿಮಿತಿಗಳು ಆ ಯೋಜನೆಯ ಒಂದು ದೊಡ್ಡ ಕಲಿಕೆಯಾಯಿತು.

ಆ ಸಂಘಟನೆ ಮತ್ತು ಪ್ರಯತ್ನಗಳ ಸಕಾರಾತ್ಮಕ ಮತ್ತು ನಕಾರಾತ್ಮಕ ವಿಚಾರಗಳು ಧುತ್ತೆಂದು ಎದುರಾದರೂ ಅಂತಹ ಒಂದು ಸಮುದಾಯವನ್ನು ಸಂಘಟಿಸುವ ಪ್ರಯತ್ನದ ಮೊದಲ ಹೆಜ್ಜೆಯೇ ದಿಟ್ಟತನದ್ದಾಗಿತ್ತು. ಆದರೆ ಇದು ಪರಿಪೂರ್ಣತೆ ಪಡೆದುಕೊಳ್ಳುವ, ಗುರಿ ಸಾಧಿಸುವ ಸಂಘಟನೆಯಾಗಲು ದಶಕಗಳೇ ಬೇಕಾಗಬಹುದು. ಇಲ್ಲಿ ಮೊದಲನೆಯದಾಗಿ ಯಾವುದೇ ಸಮುದಾಯವನ್ನು ಸಂಘಟಿಸಲು ಇದ್ದ ಸವಾಲುಗಳಿಗಿಂತಲೂ ಹೆಚ್ಚಿನ ಸವಾಲುಗಳು ಮತ್ತು ಹೊಣೆ ಇವರನ್ನು ಸಂಘಟಿಸುವುದರಲ್ಲಿದೆ.

ಅತಂತ್ರ ಬದುಕಿನ, ಸಾಮಾಜಿಕ ನಿಂದನೆಗೆ ಸದಾ ಒಡ್ಡಿಕೊಳ್ಳುವ ಅನಿವಾರ್ಯತೆಯಿರುವ, ಇವರ ಬದುಕಿಗೆ, ವ್ಯಕ್ತಿತ್ವಕ್ಕೆ ಸ್ಥೈರ್ಯ, ಬದ್ಧತೆಗಳನ್ನು ತುಂಬುವುದು ಅತ್ಯಂತ ಜವಾಬ್ದಾರಿಯುತವಾದ ಮತ್ತು ಕಷ್ಟಕರವಾದ ಸವಾಲಿನ ಕೆಲಸವಾಗಿರುತ್ತದೆ.

ಕೂಲಿ ಕ್ರಾಂತಿ: ಗೌರವಧನದ ನೆರಳಲ್ಲಿ ಸಮಾನಸ್ಕಂದರಾಗಿ ಅವರ ಸಮುದಾಯದಲ್ಲಿಯೇ ಸ್ವಲ್ಪ ಪ್ರತ್ಯೇಕವಾಗಿ ನಾಯಕತ್ವ ವಹಿಸುತ್ತಿದ್ದ ಈ ಮಹಿಳೆಯರು ಸದಾ ತನ್ನ ಸಮುದಾಯದ ಗುಮಾನಿಯ ದೃಷ್ಟಿಯನ್ನು ಎದುರಿಸುತ್ತಲೇ ಇರಬೇಕಾಗಿರುವುದು. ಹಣವಿಲ್ಲದೆಯೂ ಆ ಸಂಘಟನೆ ತನ್ನ ಉದ್ದೇಶ, ಗುರಿಗಳೊಂದಿಗೆ ಉಳಿಯುತ್ತದೆಯೋ ಎಂಬ ಪ್ರಶ್ನೆ ನನ್ನನ್ನು ಸದಾ ಕಾಡುತ್ತಲೇ ಇದೆ.

ಇನ್ನೊಂದು ಅಪಾಯದ ಸೂಚನೆ ಕಂಡಿದ್ದೆಂದರೆ ಆ ಸಮುದಾಯದಿಂದಲೇ ಬಂದವರಾದರೂ ನಾಯಕತ್ವ ವಹಿಸಲು ಮುಂದಾದ ಮತ್ತು ಸಮಾನಸ್ಕಂದರಾಗಿ ಹೊಣೆ ಹೊತ್ತ ಮಹಿಳೆಯರು ಸ್ವ-ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುತ್ತಿರುವುದು ಮತ್ತು ಸಮುದಾಯವನ್ನು ಕೆಳಸ್ತರದಲ್ಲಿ ನೋಡುತ್ತಿರುವುದೂ ಕೂಡ ಅಲ್ಲಲ್ಲಿ ಗೋಚರಿಸಿದ್ದು.

ಆದರೆ ಬಹಳ ಸಕಾರಾತ್ಮಕವಾದ ಅಂಶಗಳೆಂದರೆ ತರಬೇತಿಗಳ/ ಸಭೆಗಳ/ಸಮಾವೇಶಗಳ ಸಂದರ್ಭದಲ್ಲಿ ಸಮಾವೇಶಗೊಳ್ಳುತ್ತಿದ್ದ ನೂರಾರು ಮಹಿಳೆಯರು ಪರಸ್ಪರ ಬದುಕುಗಳ ಹಂಚಿಕೆಗೆ, ಸಮಸ್ಯೆಗಳ ಮಂಥನ ಮಾಡಲು ಉತ್ತೇಜಿತರಾದರು.

ತಮ್ಮ ವೃತ್ತಿ ಸಮಸ್ಯೆಗಳೇ ಅಲ್ಲದೆ ತಮ್ಮ ಹಕ್ಕುಗಳ ಬಗ್ಗೆ ಚರ್ಚಿಸಲು ಮುಂದಾದರು.

ಹೆಚ್.ಐ.ವಿ/ಏಡ್ಸ್ ಮೀರಿದ ಅನೇಕ ವಿಚಾರಗಳು ಚರ್ಚೆಗೆ ಗ್ರಾಸವಾಗುತ್ತಿದ್ದವು.

ನಾಯಕತ್ವ ರೂಪಿಸುವ ನಿಟ್ಟಿನಲ್ಲಿ ಹಾಕಿದ್ದ ಪರಿಶ್ರಮಕ್ಕೆ ನಿಧಾನವಾಗಿ ಪ್ರತಿಫಲ ದೊರೆಯತೊಡಗಿತು.

ರಾಷ್ಟ್ರ, ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಸಮಾವೇಶಗಳಲ್ಲಿ ಭಾಗವಹಿಸಿ ಚರ್ಚಿಸಿದರು.

ಅನೇಕ ಅನುಭವಗಳೊಂದಿಗೆ, ಸಂಪನ್ಮೂಲಗಳೊಂದಿಗೆ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ವಿಚಾರಗಳ್ನು ಕೂಡ ತಟ್ಟ ನಿಧಾನಗತಿಯಲ್ಲಿ ಗಟ್ಟಿಗೊಳ್ಳತೊಡಗಿದ್ದಾರೆ. ಆದರೆ ಇಲ್ಲಿ ನಾನು ನನ್ನ ಅಧ್ಯಯನದ ಅನುಭವದಲ್ಲಿ ಕಂಡುಕೊಂಡ ವಾಸ್ತವತೆ ಬಹಳ ಕಠೋರವಾದದ್ದು ಮತ್ತು (One way) ಒಮ್ಮುಖವಾದದ್ದು.

ಅವರನ್ನು ನಾಯಕರೆಂದು ಬಿಂಬಿಸಿ ಅವರಿಗೆ ಅಧ್ಯಕ್ಷೆ, ಕಾರ್ಯದರ್ಶಿ... ಮುಂತಾದ ಸ್ಥಾನಗಳನ್ನು ತುಂಬಿ ನೀವಿನ್ನು ನಾಯಕರು ಎಂದು ಘೋಷಿಸಲು ಸಾಧ್ಯವಾಯ್ತು. ಆದರೆ ಸಮಾಜ ಮಾತ್ರ ಅವರನ್ನು ವೇಶ್ಯೆಯರನ್ನಾಗಿಯೇ ನೋಡುತ್ತಿರುವುದರ ಅರಿವಾದದ್ದೇ ವಾಸ್ತವವಾಗಿ ಕಾರ್ಯೋನ್ಮುಖರಾದಾಗ. ಆದಕ್ಕೆ ಒಂದು ಉದಾಹರಣೆಯಾಗಿ ಒಂದು ಘಟನೆಯನ್ನು ಇಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಮಂಡ್ಯದಲ್ಲಿ ರಚಿತವಾದ ಸಂಘಟನೆಯ ಅಧ್ಯಕ್ಷೆ ಸಮಸ್ಯೆಯೊಂದನ್ನು ಚರ್ಚಿಸಲು ಪೊಲೀಸ್ ಠಾಣೆಗೆ ಹೋದಾಗ ಠಾಣೆಯಲ್ಲಿ ಅವರು ಮೊದಲು ಗುರುತಿಸಿದ್ದು, ನಡೆಸಿಕೊಂಡು ಪರಿ ಒಬ್ಬ ಬೀದಿ ಸೂಳೆಯಾಗಿಯೇ. ಅವಳು ಎಷ್ಟು ಅರ್ಥೈಸಲು ಹೋದರೂ ಸಾಧ್ಯವಾಗಲೇ ಇಲ್ಲ. ಇಂತಹ ಘಟನೆಗಳು ರಾಜ್ಯದ್ಯಂತ ಅನೇಕ ಕಡೆ ನಡೆದವು. ಇದರಿಂದ ಅವಳ ಸಮುದಾಯ ಅವಳ ಬಗೆಗಿನ ವಿಶ್ವಾಸ

ಹೆಚ್ಐವಿ/ಏಡ್ಸ್ ಅಲ್ಲದೆಯೂ ಇತರೆ ಆರೋಗ್ಯ ರಕ್ಷಣೆಯ ಹೊಣೆ, ಲೈಂಗಿಕ ರೋಗಗಳ ಪರೀಕ್ಷೆ ಚಿಕಿತ್ಸೆ ಹೆಚ್ಐವಿ/ಏಡ್ಸ್ ನಿಯಂತ್ರಣಕ್ಕೆ ಪೂರಕವಾದ ಎಲ್ಲ ಕ್ರಮಗಳು, ಅಪ್ರಾಪ್ತ ಮಕ್ಕಳು ಈ ವೃತ್ತಿಗೆ ಬರದಂತೆ ತಡೆಯುವ, ಮಕ್ಕಳ (ಲೈಂ.ವೃ.ಮ.ಯರ ಮಕ್ಕಳ) ವಿದ್ಯಾಭ್ಯಾಸ, ಡಿಎಂಎಸ್‌ಸಿ- ಯಲ್ಲಿನ ನಾಯಕತ್ವ ರೂಪಿಸುವ ನೂರಾರು ಪ್ರಯತ್ನಗಳನ್ನು ಸತತವಾಗಿ ಈ ಸಮುದಾಯ ಮಾಡುತ್ತ ಬಂದಿದೆ.

ಬಹಳ ಮುಖ್ಯವಾಗಿ ಆ ವೃತ್ತಿಯಿಂದ ಸಂಪಾದಿಸಿದ್ದೆಲ್ಲವೂ ಭವಿಷ್ಯದಲ್ಲಿ ಶೂನ್ಯವಾಗುವ ಪರಿಪಾಠವೇ ಇರುವ ಅವರ ಬದುಕಿಗೊಂದು ಆಶಾದೀಪವಾಗಿ ಉಷಾ ಕೋ-ಆಪರೇಟಿವ್ ಸೊಸೈಟಿಯನ್ನು ನೋಂದಾಯಿಸಿ ಕೋಟ್ಯಾಂತರ ರೂ.ಗಳ ವಹಿವಾಟು ನಡೆಸುತ್ತಿದೆ. ಇದಕ್ಕೆ ಪಶ್ಚಿಮಬಂಗಾಳ ಸರ್ಕಾರದ ಮಾನ್ಯತೆ ಮತ್ತು ಸಹಕಾರವೂ ಸಿಕ್ಕಿದೆ.

ಸಾರ್ವಜನಿಕ ಬದುಕಿಗೂ ಸ್ಪಂದಿಸುವ ಡಿಎಂಎಸ್‌ಸಿ ಪ್ರವಾಹಗಳಂತಹತ ಪ್ರಕೃತಿ ವಿಕೋಪಗಳಲ್ಲಿ ಸ್ವಯಂ ಸೇವಾ ಕಾರ್ಯಕರ್ತರಾಗಿ ಮಾನವೀಯತೆ ಮರೆದದ್ದೇ ಅಲ್ಲದೆ ಧನಸಹಾಯ ಕೂಡ ಮಾಡಿದ್ದಾರೆ. ಮೇ ದಿನಾಚಾರಣೆಯಂತಹ 'ಕಾರ್ಮಿಕ' ದಿನಾಚರಣೆಗಳನ್ನು ಸಾವಿರಾರು ಮಹಿಳೆಯರು ಪಾಲ್ಗೊಂಡು ಆಚರಿಸುವುದರೊಂದಿಗೆ ತಾತ್ವಿಕವಾಗಿಯೂ ಪ್ರಬುದ್ಧತೆ ಬೆಳೆಸಿಕೊಂಡಿದ್ದಾರೆ.

ಸುಮಾರು 65,000ಕ್ಕೂ ಹೆಚ್ಚು ಸದಸ್ಯತ್ವ ಹೊಂದಿರುವ ಡಿಎಂಎಸ್‌ಸಿ ಭಾರತದ ಅನೇಕ ರಾಜ್ಯಗಳಲ್ಲಿ ಲೈಂಗಿಕ ವೃತ್ತಿನಿರತರ ಸಂಘಟನೆಗೆ ಕೈ ಜೋಡಿಸುತ್ತಿದೆ.

ರಾಷ್ಟ್ರೀಯ- ಅಂತರಾಷ್ಟ್ರೀಯವಾಗಿ ಸಮಾವೇಶಗಳನ್ನು ಅಣಿ ನೆರೆಸುವುದರೊಂದಿಗೆ ಜಾಗತಿಕವಾಗಿ ಹೆಚ್ಐವಿ/ಏಡ್ಸ್ ನಿಯಂತ್ರಣದ ಹೊಣೆ ಮತ್ತು ಮಾನವ ಹಕ್ಕುಗಳ ರಕ್ಷಣೆಯ ಹೊಣೆಯನ್ನು ಎತ್ತಿ ಹಿಡಿದಿದೆ.

ಹೀಗೆ ಲೈಂಗಿಕ ವೃತ್ತಿ ನಿರತ ಸಮುದಾಯದಿಂದಲೇ ರೂಪಿಸಲ್ಪಟ್ಟ ಡಿಎಂಎಸ್‌ಸಿ ಭಾರತದಂತಹ ವ್ಯವಸ್ಥೆಯಲ್ಲಿ ಒಂದು ಸಕಾರಾತ್ಮಕವಾದ ಉದಾಹರಣೆಯಾಗಿ/ಮಾದರಿಯಾಗಿ ನಿಂತಿದೆ.

ಇದನ್ನು ಅವಲೋಕಿಸಿದಾಗ ಪಶ್ಚಿಮ ಬಂಗಾಳದ ಹೋರಾಟಗಳು, ಸ್ವಾತಂತ್ರ್ಯ ಆಂದೋಲನದಲ್ಲಿ ಪಶ್ಚಿಮಬಂಗಾಳ ತನ್ನನ್ನು ತೊಡಗಿಸಿಕೊಂಡ ರೀತಿ, ರಕ್ತಗತವಾಗಿ ಬಂದಿರುವ ಮನೋಭಾವಗಳು, ಐತಿಹಾಸಿಕವಾಗಿ ನೀಡಿರುವ ಕೊಡುಗೆಗಳು... ಇವೆಲ್ಲವೂ ಡಿಎಂಎಸ್‌ಸಿ ಗೆ ಕಾಣಿಕೆಯಾಗಿಯೇ ಬಂದಿವೆ. ಅಲ್ಲಿಯ ರಾಜಕೀಯ ಪರಿಸ್ಥಿತಿಗಳು, ಎಲ್ಲ ಪರಿಮಿತಿಗಳ ನಡುವೆ ಆಡಳಿತ ನಡೆಸುತ್ತಿರುವ ಸರಕಾರದ ತಾತ್ವಿಕ ಬದ್ಧತೆಗಳು ಕೂಡ ಡಿಎಂಎಸ್‌ಸಿ ಗೆ ಸಹಕರಿಸಿವೆ.

ಇದೇ ಸಂದರ್ಭಗಳನ್ನು ಭಾರತದ ಎಲ್ಲೆಡೆಯೂ ಈ ನಿಟ್ಟಿನಲ್ಲಿ ನಿರೀಕ್ಷಿಸಲು ಸಾಧ್ಯವಾಗದಿದ್ದರೂ ಇಂದಿನ ಕಾಲಘಟ್ಟಕ್ಕೆ ಪ್ರತಿಸ್ಪಂದಿಸಲು ಡಿಎಂಎಸ್‌ಸಿ ಒಂದು ಮಾದರಿಯಾಗಿಯಂತೂ ನಿಂತಿರುವುದು ಸತ್ಯವಾಗಿದೆ.

ಬಹಳ ಸಕಾರಾತ್ಮಕವಾದ ಉದಾಹರಣೆಯಾಗಿ ಪಶ್ಚಿಮ ಬಂಗಾಳದ 'ದರ್ಬಾರ್ ಮಹಿಳಾ ಸಮನ್ವಯ ಸಮಿತಿ' ಸಂಘಟಿತ ಶಕ್ತಿಯಾಗಿ ರೂಪುಗೊಂಡಿರುವುದು ನಮ್ಮೊಂದಿಗಿದೆ.

ಪ್ರಾದೇಶಿಕವಾದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಸಾಧ್ಯವಾದದ್ದು ಭಾರತದ ಎಲ್ಲ ಪ್ರದೇಶಗಳಿಗೂ ಖಂಡಿತಾ ಅನ್ವಯಿಸಲು ಸಾಧ್ಯವಿಲ್ಲ. ಅದರಲ್ಲೂ ಭಾರತದಂತಹ ವಿಶಾಲವಾದ ತಳಹದಿಯಲ್ಲಿ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಇತಿಹಾಸವನ್ನು, ಸಂಸ್ಕೃತಿಯನ್ನು ಹೊಂದಿರುವುದು ಇಲ್ಲಿ ನಾವು ಮನಗಾಣಲೇ ಬೇಕಾಗಿದೆ.

ಈ ನಿಟ್ಟಿನಲ್ಲಿ ಸುಮಾರು/ದಶಕದ ಅಧ್ಯಯನದ ಅನುಭವದ ಆಧಾರದಲ್ಲಿ ಲೈಂಗಿಕ ವೃತ್ತಿ ಮಹಿಳೆಯರನ್ನು ಕರ್ನಾಟಕದಲ್ಲಿ ಅಣಿ ನೆರೆಸಬೇಕಾದ ಸಾಧ್ಯತೆಗಳನ್ನು ನಾನಿಲ್ಲಿ ಗುರುತಿಸಿ ಕೊಳ್ಳಲು ಪ್ರಯತ್ನಿಸುತ್ತಿದ್ದೇನೆ.

ಲೈಂಗಿಕ ವೃತ್ತಿ ಮಹಿಳೆಯರ ಸಮುದಾಯಗಳನ್ನು ಆಧುನಿಕ ಬುಡಕಟ್ಟುಗಳಾಗಿ ಪರಿಗಣಿಸಿದರೆ ಅವರನ್ನು ಸಂಘಟಿಸುವ ಸೂತ್ರ ಅಥವಾ ಒಂದು ಎಳೆ ದಿಕ್ಸೂಚಿಯಾಗಬಹುದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಅನೇಕ ಬುಡಕಟ್ಟುಗಳು ತನ್ನ ನೈಜತೆಯನ್ನು ಕಳೆದುಕೊಂಡು ಹೊರ ಬಂದಿರುವ ಹಿನ್ನಲೆಯಲ್ಲಿಯೇ, ಇಂದಿನ ಆಧುನಿಕತೆ ಸಾಂಸ್ಕೃತಿಕವಾಗಿ ಅವರ ಮೇಲೆ ಎರಗಿರುವ ಬೆನ್ನಲ್ಲೇ ಮೂಲ ಬುಡಕಟ್ಟುಗಳು ತಮ್ಮ ಸ್ವರೂಪಗಳನ್ನು ಕಳೆದುಕೊಂಡು ಅತಂತ್ರ ಬದುಕಿಗೆ ಒಡ್ಡಿ ಕೊಳ್ಳುತ್ತಿರುವುದು ವಾಸ್ತವವಾಗಿದೆ. ಇಂತಹ ಬುಡಕಟ್ಟುಗಳ ಅನೇಕ ಅಂಶಗಳನ್ನು ಹೊಂದಿರುವ ಲೈಂಗಿಕ ವೃತ್ತಿ ಸಮುದಾಯಗಳನ್ನು ಒಗ್ಗೂಡಿಸುವ ಮತ್ತು ಆ ನಿಟ್ಟಿನಲ್ಲಿ ಗುರುತಿಸುವ ಅಗತ್ಯ ಎದ್ದು ಕಾಣುತ್ತಿದೆ.

ಹೆಚ್ಐವಿ/ಏಡ್ಸ್ ನಂತಹ ಸೋಂಕುಗಳ ನಿಯಂತ್ರಣ, ಅಪ್ರಾಪ್ತ ಬಾಲಕಿಯರ ಸಾಗಾಟ ನಿಯಂತ್ರಣ, ಇಂದಿನ ಆಧುನಿಕ ಚೌಕಟ್ಟಿಗೆ ಆತುಕೊಂಡಿರುವ ಆ ಸಮುದಾಯದ ನೂರಾರು ಸಮಸ್ಯೆಗಳ ಅವಲೋಕನ, ಹಾಗೂ ಆ ಸಮುದಾಯದ ಸ್ವಾಸ್ಥ್ಯ ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಅವರ ಸಂಘಟಿತ ಶಕ್ತಿ, ಒಗ್ಗೂಡುವಿಕೆಯ ಅನಿವಾರ್ಯತೆಯಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಒಂದು ವೇಶ್ಯಾಗೃಹ, ಒಂದು ವೇಶ್ಯಾಗೃಹಗಳೇ ಇರುವ ವಠಾರ, ಬೀದಿಗಳು, ಕೆಂಪುದೀಪಗಳ ಪ್ರದೇಶಗಳು, ಲಾಡ್ಜ್‌ಗಳಲ್ಲಿ ವೃತ್ತಿನಿರತ ಮಹಿಳೆಯರ ಗುಂಪುಗಳು, ಡಾಬಾಗಳಲ್ಲಿನ ಮಹಿಳೆಯರು, ದಟ್ಟಾರಣ್ಯಗಳ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಲೈಂಗಿಕ ವೃತ್ತಿ ನಡೆಸುವವರು, ಬೆಟ್ಟ ಗುಡ್ಡಗಳ ತಪ್ಪಲಲ್ಲಿ ವೃತ್ತಿ ನಡೆಸುತ್ತಿರುವವರು, ಸಮುದ್ರ ತೀರ, ನದಿ ದಂಡೆಗಳಲ್ಲಿರುವವರು, ಹೀಗೆ ಆಯಾ ಪ್ರದೇಶದ ಚೌಕಟ್ಟಿನೊಳಗಿನ ಲೈಂಗಿಕ ವೃತ್ತಿ ಸಮುದಾಯವನ್ನು ಒಂದೊಂದು ಆಧುನಿಕ ಬುಡಕಟ್ಟಾಗಿ ನೋಡುವುದರಿಂದ ಹೆಚ್ಚು ಪರಿಣಾಮಕಾರಿಯಾಗಿ ಆ ಸಮುದಾಯವನ್ನು ನೋಡುವ ದೃಷ್ಟಿಕೋನದಿಂದ ಸಮುದಾಯದ ಬದುಕುಗಳನ್ನು ಮಾನವೀಯತೆಯ ನೆಲೆಗಟ್ಟಿನಲ್ಲಿ ಹಾಗೂ ನಾಗರೀಕರಾಗಿ ರೂಪಿಸಲು ಮತ್ತು ಅವರ ಹಕ್ಕು ಮತ್ತು ಬಾಧ್ಯತೆಗಳನ್ನು ಅವರ ಬದುಕಿನೊಂದಿಗೆ ಸ್ಪಂದಿಸುವಂತೆ ಮಾಡಲು ಸಾಧ್ಯ ಎನ್ನುವುದನ್ನು ನನ್ನ ಅಧ್ಯಯನದ ಅನುಭವಗಳಿಂದ ಕಂಡುಕೊಂಡಿರುತ್ತೇನೆ.

ಬಹಳ ಸಕಾರಾತ್ಮಕವಾದ ಉದಾಹರಣೆಯಾಗಿ ಪಶ್ಚಿಮ ಬಂಗಾಳದ 'ದರ್ಬಾರ್' ಮಹಿಳಾ ಸಮನ್ವಯ ಸಮಿತಿ' ಸಂಘಟಿತ ಶಕ್ತಿಯಾಗಿ ರೂಪುಗೊಂಡಿರುವುದು ನಮ್ಮೊಂದಿಗಿದೆ.

ಪ್ರಾದೇಶಿಕವಾದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಸಾಧ್ಯವಾದದ್ದು ಭಾರತದ ಎಲ್ಲ ಪ್ರದೇಶಗಳಿಗೂ ಖಂಡಿತಾ ಅನ್ವಯಿಸಲು ಸಾಧ್ಯವಿಲ್ಲ. ಅದರಲ್ಲೂ ಭಾರತದಂತಹ ವಿಶಾಲವಾದ ತಳಹದಿಯಲ್ಲಿ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಇತಿಹಾಸವನ್ನು, ಸಂಸ್ಕೃತಿಯನ್ನು ಹೊಂದಿರುವುದು ಇಲ್ಲಿ ನಾವು ಮನಗಾಣಲೇ ಬೇಕಾಗಿದೆ.

ಈ ನಿಟ್ಟನಲ್ಲಿ ಸುಮಾರು/ದಶಕದ ಅಧ್ಯಯನದ ಅನುಭವದ ಆಧಾರದಲ್ಲಿ ಲೈಂಗಿಕ ವೃತ್ತಿ ಮಹಿಳೆಯರನ್ನು ಕರ್ನಾಟಕದಲ್ಲಿ ಅಣಿ ನೆರೆಸಬೇಕಾದ ಸಾಧ್ಯತೆಗಳನ್ನು ನಾನಿಲ್ಲಿ ಗುರುತಿಸಿ ಕೊಳ್ಳಲು ಪ್ರಯತ್ನಿಸುತ್ತಿದ್ದೇನೆ.

ಲೈಂಗಿಕ ವೃತ್ತಿ ಮಹಿಳೆಯರ ಸಮುದಾಯಗಳನ್ನು ಆಧುನಿಕ ಬುಡಕಟ್ಟುಗಳಾಗಿ ಪರಿಗಣಿಸಿದರೆ ಅವರನ್ನು ಸಂಘಟಿಸುವ ಸೂತ್ರ ಅಥವಾ ಒಂದು ಎಳೆ ದಿಕ್ಸೂಚಿಯಾಗಬಹುದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಅನೇಕ ಬುಡಕಟ್ಟುಗಳು ತನ್ನ ನೈಜತೆಯನ್ನು ಕಳೆದುಕೊಂಡು ಹೊರ ಬಂದಿರುವ ಹಿನ್ನಲೆಯಲ್ಲಿಯೇ, ಇಂದಿನ ಆಧುನಿಕತೆ ಸಾಂಸ್ಕೃತಿಕವಾಗಿ ಅವರ ಮೇಲೆ ಎರಗಿರುವ ಬೆನ್ನಲ್ಲೇ ಮೂಲ ಬುಡಕಟ್ಟುಗಳು ತಮ್ಮ ಸ್ವರೂಪಗಳನ್ನು ಕಳೆದುಕೊಂಡು ಅತಂತ್ರ ಬದುಕಿಗೆ ಒಡ್ಡಿ ಕೊಳ್ಳುತ್ತಿರುವುದು ವಾಸ್ತವವಾಗಿದೆ. ಇಂತಹ ಬುಡಕಟ್ಟುಗಳ ಅನೇಕ ಅಂಶಗಳನ್ನು ಹೊಂದಿರುವ ಲೈಂಗಿಕ ವೃತ್ತಿ ಸಮುದಾಯಗಳನ್ನು ಒಗ್ಗೂಡಿಸುವ ಮತ್ತು ಆ ನಿಟ್ಟಿನಲ್ಲಿ ಗುರುತಿಸುವ ಅಗತ್ಯ ಎದ್ದು ಕಾಣುತ್ತಿದೆ.

ಹೆಚ್‌ಐವಿ/ಏಡ್ಸ್ ನಂತಹ ಸೋಂಕುಗಳ ನಿಯಂತ್ರಣ, ಅಪ್ರಾಪ್ತ ಬಾಲಕಿಯರ ಸಾಗಾಟ ನಿಯಂತ್ರಣ, ಇಂದಿನ ಆಧುನಿಕ ಚೌಕಟ್ಟಿಗೆ ಆತುಕೊಂಡಿರುವ ಆ ಸಮುದಾಯದ ನೂರಾರು ಸಮಸ್ಯೆಗಳ ಅವಲೋಕನ, ಹಾಗೂ ಆ ಸಮುದಾಯದ ಸ್ವಾಸ್ಥ್ಯ ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಅವರ ಸಂಘಟಿತ ಶಕ್ತಿ, ಒಗ್ಗೂಡುವಿಕೆಯ ಅನಿವಾರ್ಯತೆಯಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಒಂದು ವೇಶ್ಯಾಗೃಹ, ಒಂದು ವೇಶ್ಯಾಗೃಹಗಳೇ ಇರುವ ವಠಾರ, ಬೀದಿಗಳು, ಕೆಂಪುದೀಪಗಳ ಪ್ರದೇಶಗಳು, ಲಾಡ್ಜ್‌ಗಳಲ್ಲಿ ವೃತ್ತಿನಿರತ ಮಹಿಳೆಯರ ಗುಂಪುಗಳು, ಡಾಬಾಗಳಲ್ಲಿನ ಮಹಿಳೆಯರು, ದಟ್ಟಾರಣ್ಯಗಳ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಲೈಂಗಿಕ ವೃತ್ತಿ ನಡೆಸುವವರು, ಬೆಟ್ಟ ಗುಡ್ಡಗಳ ತಪ್ಪಲಲ್ಲಿ ವೃತ್ತಿ ನಡೆಸುತ್ತಿರುವವರು, ಸಮುದ್ರ ತೀರ, ನದಿ ದಂಡೆಗಳಲ್ಲಿರುವವರು, ಹೀಗೆ ಆಯಾ ಪ್ರದೇಶದ ಚೌಕಟ್ಟಿನೊಳಗಿನ ಲೈಂಗಿಕ ವೃತ್ತಿ ಸಮುದಾಯವನ್ನು ಒಂದೊಂದು ಆಧುನಿಕ ಬುಡಕಟ್ಟಾಗಿ ನೋಡುವುದರಿಂದ ಹೆಚ್ಚು ಪರಿಣಾಮಕಾರಿಯಾಗಿ ಆ ಸಮುದಾಯವನ್ನು ನೋಡುವ ದೃಷ್ಟಿಕೋನದಿಂದ ಸಮುದಾಯದ ಬದುಕುಗಳನ್ನು ಮಾನವೀಯತೆಯ ನೆಲೆಗಟ್ಟಿನಲ್ಲಿ ಹಾಗೂ ನಾಗರೀಕರಾಗಿ ರೂಪಿಸಲು ಮತ್ತು ಅವರ ಹಕ್ಕು ಮತ್ತು ಬಾಧ್ಯತೆಗಳನ್ನು ಅವರ ಬದುಕಿನೊಂದಿಗೆ ಸ್ಪಂದಿಸುವಂತೆ ಮಾಡಲು ಸಾಧ್ಯ ಎನ್ನುವುದನ್ನು ನನ್ನ ಅಧ್ಯಯನದ ಅನುಭವಗಳಿಂದ ಕಂಡುಕೊಂಡಿರುತ್ತೇನೆ.

ಲೈಂಗಿಕ ವೃತ್ತಿ ಮಹಿಳಾ ಸಮುದಾಯ ಮತ್ತು ಒಗ್ಗೂಡಿಸುವಿಕೆ

ಈ ಲೈಂಗಿಕ ವೃತ್ತಿ ಅತ್ಯಂತ ಸವಾಲಿನ ಮತ್ತು ಕಠಿಣವಾದ ಒಂದು ವೃತ್ತಿ ವಿಭಿನ್ನ ಮನೋಭಾವದ ಗಿರಾಕಿಗಳಿಗೆ ಪ್ರತಿನಿತ್ಯ ಲೈಂಗಿಕ ಸೇವೆಯನ್ನು ಒದಗಿಸುವುದು ಅಪಾರ ದೈಹಿಕ ಶ್ರಮವನ್ನು ಬೇಡುವ ಒಂದು ವೃತ್ತಿಯಾಗಿದೆ. ಇದು ಕಾರ್ಖಾನೆಯಲ್ಲಿ ದುಡಿಯುವ ಅಥವಾ ಮಳೆ ಬಿಸಿಲಿನಲ್ಲಿ ನೆನೆದು ಹೊಲದಲ್ಲಿ ದುಡಿಯುವ ಮಹಿಳೆಯರ ಶ್ರಮಕ್ಕಿಂತಲೂ ಅತ್ಯಂತ ಶ್ರಮದಾಯಕ ಕೆಲಸ. ಖಚಿತವಾಗಿ ಇದು ಖುಷಿ ಅಥವಾ ತಮಾಷೆಯ ವಿಷಯವಲ್ಲ.

ಈ ವೃತ್ತಿಯಲ್ಲಿ ಮಹಿಳೆಯರು ಔದ್ಯೋಗಿಕ ಅಪಾಯಗಳ ಸರಮಾಲೆಯನ್ನೇ ಎದುರಿಸಬೇಕಾಗುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಅನಗತ್ಯ ಗರ್ಭಧರಿಸುವಿಕೆ, ಯಾತನಾಮಯವಾದ ಗರ್ಭಪಾತ, ಲೈಂಗಿಕ ರೋಗಗಳ ಅಪಾಯ ಪ್ರಧಾನವಾದವುಗಳು, ಅವೈಜ್ಞಾನಿಕವಾದ ಅಥವಾ ಸರಿಯಾದ ಚಿಕಿತ್ಸೆಯಿಲ್ಲದ, ಮುನ್ನೆಚ್ಚರಿಕೆಗಳಿಲ್ಲದ ಗರ್ಭಪಾತಗಳೂ ಕೂಡ ಹೀಯಾಳಿಕೆಯಿಂದಲೋ, ತಾತ್ಸಾರಗಳಿಂದಲೋ, ಅವಹೇಳನಕಾರಿಯಾಗಿಯೋ, ಅಸುರಕ್ಷಿತವಾಗಿಯೋ ನಡೆಯುತ್ತವೆ. ಇಂತಹ ಸಂದರ್ಭಗಳಲ್ಲಿ ಗರ್ಭಕೋಶಕ್ಕಾಗುವ ಹೊಡೆತಗಳು, ಲೈಂಗಿಕ ರೋಗಗಳು ಸೋಂಕಿಗೆ ತುತ್ತಾಗುವ ಅಪಾಯಗಳು, ವಿಪರೀತ ರಕ್ತಸ್ರಾವ ಇವುಗಳು ಸರ್ವೇಸಾಮಾನ್ಯವಾಗಿರುತ್ತವೆ. ಅದಲ್ಲದೆ ಅವರು ಈ ವೃತ್ತಿಯನ್ನು ಅತ್ಯಂತ ಅಪಾಯಕಾರಿ ವಾತಾವರಣದಲ್ಲಿ ಮಾಡಬೇಕಾಗುತ್ತದೆ. ಪೊಲೀಸರ ದೌರ್ಜನ್ಯ, ಗಿರಾಕಿಗಳ ದೌರ್ಜನ್ಯ, ತಲೆಹಿಡುಕರು ಹಾಗೂ ಆಗಾಗ್ಗೆ ವೃತ್ತಿ ನಿರತರೇ ಎಸಗುವ ಕ್ರೌರ್ಯಗಳನ್ನೆಲ್ಲಾ ಎದುರಿಸಿ ಈ ವೃತ್ತಿಯನ್ನು ನಿರ್ವಹಿಸುವುದು ಅತ್ಯಂತ ಒಂದು ಸವಾಲಿನ ವೃತ್ತಿಯನ್ನಾಗಿಸುತ್ತದೆ. ಇದು ಸಾಲದೆಂಬಂತೆ ಅವರನ್ನು ಈ ಸಮಾಜ ಕಳಂಕಿತರನ್ನಾಗಿಸಿ ಅಪರಾಧೀಸ್ಥಾನದಲ್ಲಿ ನಿಲ್ಲಿಸಿ ಸಮಾಜದ ಅಂಚಿಗೆ ದೂಡಿ ತಮ್ಮ ಶ್ರಮದ ಬಹುಪಾಲನ್ನು ಅವರಿಂದ ಕಸಿಯುವ ನೀತಿ ಅತ್ಯಂತ ಯಾತನಾಮಯವೂ ಶೋಷಣಾಭರಿತವೂ ಶಾಪ ಕಳಂಕಿತೆಯರಾಗಿ, ಶಾಸನ ಬಾಹಿರಮಕ್ಕಳ ತಾಯಂದಿರಾಗಿ, ಆ ಮಕ್ಕಳ ಕೋಪ ಮತ್ತು ನಿರಾಸೆಗಳ ಗುರಿಗಳಾಗಿ ಮಾನಸಿಕ ಯಾತನೆಯನ್ನು ಅಪಾರ ಪ್ರಮಾಣದಲ್ಲಿ ಇವರು ಅನುಭವಿಸಬೇಕಾಗುತ್ತದೆ. ಆದರೆ ಅಪೇಕ್ಷಣೀಯವಾದದ್ದೆಂದರೆ ಸ್ವತಂತ್ರವಾದ, ಪ್ರಜಾಸತ್ತಾತ್ಮಕವಾದ, ಭೀತಿ ರಹಿತವಾದ, ಪರಸ್ಪರ ಸಂತೋಷ ದಾಯಕವಾದ, ಹಾಗೂ ಸುರಕ್ಷಿತವಾದ, ಲೈಂಗಿಕ ಅವಕಾಶಗಳು ಪುರುಷ ಮತ್ತು ಸ್ತ್ರೀಗೆ ಸಮಾನವಾಗಿ ಲಭ್ಯವಾಗಬೇಕಿದೆ. ಲೈಂಗಿಕತೆ ಎಂದರೆ ಬೇಜವಾಬ್ದಾರಿ ಮತ್ತು ಇತರರ ಒಳಿತನ್ನು ಕಡೆಗಣಿಸುವುದೆಂಬ ಮನೋಭಾವ ಬದಲಾಗಬೇಕು.

ಎರಡನೆಯದಾಗಿ ಪ್ರತಿ ನಿತ್ಯ ಈ ಮಹಿಳೆಯರ ಮೇಲೆ ಎಸಗಲಾಗುತ್ತಿರುವ ದೈನಂದಿನ ದೌರ್ಜನ್ಯಗಳನ್ನು ತುರ್ತಾಗಿ ಮತ್ತು ನಿರಂತರವಾಗಿ ಎದುರಿಸಬೇಕು ಮತ್ತು ಪ್ರತಿರೋಧಿಸಬೇಕು. ಇದನ್ನು ಮಾಡಲು ವೈಯುಕ್ತಿಕ ನೆಲೆಯಲ್ಲಿ ಸಾಧ್ಯವೇ ಇಲ್ಲ. ಇದನ್ನು ಸಮುದಾಯ ಕೈಗೆತ್ತಿಕೊಂಡಾಗ ಸಾಧ್ಯವಾಗುತ್ತದೆ. ಇಲ್ಲಿಯವರೆಗಿನ

ಚರಿತ್ರೆಯನ್ನು ಅವಲೋಕಿಸಿದರೆ ಅಂತಹ ಪ್ರಯತ್ನಗಳು ವ್ಯಾಪಕವಾಗಿ ನಡೆದ ಉದಾಹರಣೆಗಳು ಎಲ್ಲೂ ಕಂಡುಬರುವುದಿಲ್ಲ. ಕೆಲವು ಸ್ವಯಂ ಸೇವಾ ಸಂಘಟನೆಗಳ ಕೂಲಿಯ ಕ್ರಾಂತಿ ಸ್ವರೂಪದ ಕಾರ್ಯಕ್ರಮಗಳು ಈ ಪ್ರಶ್ನೆಯನ್ನು ಅತ್ಯಂತ ಕ್ಷೀಣವಾಗಿ ಎತ್ತುವ ಪ್ರಯತ್ನಗಳನ್ನು ಮಾಡಿದ್ದರೂ ಅವುಗಳು ಈ ವಿಷಯದ ಗಹನತೆಯನ್ನಾಗಲೀ, ಗಂಭೀರತೆಯನ್ನಾಗಲೀ ಸಂಕೀರ್ಣತೆಯನ್ನಾಗಲಿ ಅರಿಯುವ ಅರ್ಥಪೂರ್ಣ ಪ್ರಯತ್ನಗಳ ಬಳಿ ಸುಳಿಯಲೂ ಕೂಡ ಸಾಧ್ಯವಾಗಿಲ್ಲ. ಇಂತಹ ಅವಲೋಕನವನ್ನು ಸಮಾಜ ಸಹಜವಾಗಿ ತನ್ನಷ್ಟಕ್ಕೆ ತಾನು ಮಾಡಿಕೊಳ್ಳದೆ ಇರುವುದರಿಂದ ಲೈಂಗಿಕ ವೃತ್ತಿ ಮಾಡುವ ಮಹಿಳಾ ಸಮುದಾಯ ಈ ಸಮಾಜದೊಂದಿಗೆ ಇಂತಹ ಪ್ರಕ್ರಿಯೆಯೊಂದನ್ನು ಆರಂಭಿಸುವ ಚಳುವಳಿಗೆ ಬೀಜಾಂಕುರ ಮಾಡಬೇಕಾಗಿದೆ. ಈ ಬಗೆಗೆ ಅತ್ಯಂತ ನಿರಾಶಾದಾಯಕವಾದ ಪರಿಸ್ಥಿತಿಯಲ್ಲಿ ಇಂತಹ ಪ್ರಯತ್ನಗಳು ಚದುರಿದಂತೆ ಅಲಲ್ಲಿ ಹುಟ್ಟುವ ಲಕ್ಷಣಗಳು ಕಾಣಿಸುತ್ತಿವೆ. ಅಂತಹ ಪ್ರಯತ್ನಗಳಲ್ಲಿ ಪ್ರಧಾನವಾಗಿ ಪಶ್ಚಿಮ ಬಂಗಾಳದ ಅತ್ಯಂತ ಪುರಾತನವಾದ ಮತ್ತು ವಿಶಾಲವಾದ ಕೆಂಪುದೀಪ ಪ್ರದೇಶವಾದ ಕಲ್ಕತ್ತಾದ ಸೋನಾಗಾಚಿಯಲ್ಲಿ ದರ್ಬಾರ್ ಮಹಿಳಾ ಸಮನ್ವಯ ಸಮಿತಿಯ ಪ್ರಯತ್ನಗಳನ್ನು ಉಲ್ಲೇಖಿಸ ಬಹುದಾಗಿದೆ. ಇದಲ್ಲದೆ ಕೇರಳವಾದ ಲೈಂಗಿಕ ವೃತ್ತಿ ಮಹಿಳೆಯರ ವೇದಿಕೆ, ಕರ್ನಾಟಕದ, ತಮಿಳುನಾಡು, ಆಂಧ್ರಪ್ರದೇಶ, ಪೂನಾ, ದೇಶದ ಇತರೆ ಅನೇಕ ರಾಜ್ಯಗಳಲ್ಲಿ ಇಂತಹ ಪ್ರಯತ್ನಗಳು ನಡೆಯುತ್ತಿವೆ.

ಈ ಪ್ರಯತ್ನಗಳು ಈ ಮೇಲಿನ ಎಲ್ಲ ಪ್ರಶ್ನೆಗಳನ್ನು ಎತ್ತುವುದರಲ್ಲಿ ಯಶಸ್ವಿಯಾದರೂ ಕೂಡ ಅವರಿಗೆ ಪರಿಹಾರ ರೂಪಿಸಲು ಕಾರ್ಯಕ್ರಮದ ಆಧಾರದಲ್ಲಿ ಚರ್ಚೆಯ ಕೇಂದ್ರಕ್ಕೆ ಬಂದ ಪ್ರಶ್ನೆಗಳು ಮತ್ತು ಇವುಗಳಿಗೆ ಒಂದು ಚಳುವಳಿಯ ಸ್ವರೂಪ ಕೊಡುವುದಕ್ಕೆ ಲೈಂಗಿಕ ಸಮುದಾಯವನ್ನು ಒಗ್ಗೂಡಿಸುವುದು ಬಹಳ ಮುಖ್ಯವಾಗುತ್ತದೆ. ಈ ಒಗ್ಗೂಡಿಸುವ ಪ್ರಕ್ರಿಯೆ ಬೇರಾವುದೇ ಜನಸಮುದಾಯವನ್ನು ಒಗ್ಗೂಡಿಸುವುದಕ್ಕಿಂತಲೂ ವಿಶಿಷ್ಟವಾದ ಪ್ರಯತ್ನದ ಮಾದರಿಗಳನ್ನು ಮತ್ತು ಮನೋಭಾವವನ್ನು ಬೇಡುತ್ತದೆ. ಇದು ಯಾವುದೋ ಒಂದು ವೃತ್ತಿ ನಿರತ ಜನ ಸಮುದಾಯದ ಒಗ್ಗೂಡಿಸುವಿಕೆಯ ಸ್ವರೂಪದಲ್ಲಿರಲು ಸಾಧ್ಯವಿಲ್ಲ.

ಇದಕ್ಕೊಂದು ಉದಾಹರಣೆಯಾಗಿಷ್ಟೇ ಬೆಂಗಳೂರು ನಗರದ ಬೀದಿ ಬದಿಯ ಮತ್ತು ವೇಶ್ಯಾ ಗೃಹಗಳ ಲೈಂಗಿಕ ವೃತ್ತಿ ಮಹಿಳೆಯರ ಒಗ್ಗೂಡಿಸುವಿಕೆಯ ನಿಟ್ಟಿನಲ್ಲಿ ಮಾಡಿದ ಒಂದು ಪ್ರಯತ್ನವನ್ನು ನಾನಿಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಇದರಿಂದಾಗಿ ಆ ಲೈಂಗಿಕ ವೃತ್ತಿ ಸಮುದಾಯದ ಒಗ್ಗೂಡಿಸುವಿಕೆಯ ಸವಾಲುಗಳು, ಸಂಕೀರ್ಣತೆಗಳು ಮನದಟ್ಟಾಗ ಬಹುದು. ಬೆಂಗಳೂರಿನ ಬೀದಿ ಬದಿಯ ಲೈಂಗಿಕ ವೃತ್ತಿ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯದ ವಿರುದ್ಧ ಮಾನವ ಹಕ್ಕುಗಳ ರಕ್ಷಣೆಯ ನೆಲೆಯಲ್ಲಿ ಲೈಂಗಿಕ ವೃತ್ತಿ ಮಹಿಳಾ ಸಮುದಾಯವನ್ನು ಒಂದೂಗೂಡಿಸುವಿಕೆಯ **(Collectivisation)** ಪ್ರಯತ್ನ ಆರಂಭವಾಯಿತು.

ಒಗ್ಗೂಡಿಸುವಿಕೆಯ ಪ್ರಯತ್ನ ಮಾಡಲು ಹೊರಟ ಸಂಯೋಜಕರುಗಳು, ಕಾರ್ಯಕರ್ತರುಗಳಿಗೆ ಆ ಸಮುದಾಯದ ಬಗ್ಗೆ ಇದ್ದ ಪೂರ್ವಾಗ್ರಹಗಳು ಮುಖಾಮುಖಿಯಾಗ ತೊಡಗಿದ್ದವು. ಪರಸ್ಪರ ಆತಂಕ, ಅಪನಂಬಿಕೆಗಳು ಅಪರಿಚಿತ ಸಂಬಂಧಗಳು, ದುಗುಡಗಳು, ಭಯ ಭೀತಿಗಳು ಆ ರೀತಿಯ ಪ್ರಯತ್ನಕ್ಕೆ ತಣ್ಣೀರೆರೆಚುತ್ತಲೇ ಬರುತ್ತಿದ್ದವು.

ಮೊದಲನೆಯದಾಗಿ ಲೈಂಗಿಕ ವೃತ್ತಿ ಮಹಿಳಾ ಸಮುದಾಯವನ್ನು ಒಳ ಹೊಕ್ಕುವ ಮೊದಲು ಹಾಗೂ ನಿರಂತರವಾಗಿ, ಆ ನಿಟ್ಟಿನಲ್ಲಿ ತೊಡಗಿಸಿಕೊಂಡ ಕಾರ್ಯಕರ್ತರುಗಳನ್ನು ಮಾನಸಿಕವಾಗಿ ಸಿದ್ಧಗೊಳಿಸಬೇಕಾಗುತ್ತದೆ. ಆ ಬದ್ಧತೆಯನ್ನು , ಗಂಭೀರತೆಯನ್ನು ಗಟ್ಟಿಗೊಳಿಸುತ್ತಲೇ ಇರಬೇಕಾಗುತ್ತದೆ. ಇಲ್ಲದಿದ್ದಲ್ಲಿ ಸಾಮಾಜಿಕವಾಗಿ ಬಹಿಷ್ಕೃತರೇನೋ, ಕಳಂಕಿತರೇನೋ ಎಂಬಂತೆ ಪರಿಗಣಿಸಲ್ಪಟ್ಟಿರುವ ಲೈಂಗಿಕ ವೃತ್ತಿ ಮಹಿಳಾ ಸಮುದಾಯದೊಂದಿಗೆ ಸಂವಹನ ನಡೆಸುವುದೇ ಒಂದು ಸವಾಲಾಗಿ ಬಿಡುತ್ತದೆ. ಮೊದಲು ತಾವು ಜವಾಬ್ದಾರಿ ಹೊರುತ್ತೇವೆ ಎಂದು ಬಂದ, ಅದೆಷ್ಟೋ ಕಾರ್ಯಕರ್ತರುಗಳು ಮಾನಸಿಕವಾಗಿ ಜರ್ಝರಿತರಾಗಿ ಜವಾಬ್ದಾರಿಯಿಂದ ಹೊರಬಂದಿದ್ದಾರೆ.

ಒಂದೆಡೆ ಸಾಮಾಜಿಕ ಅನಿಷ್ಠ, ಮಾನ್ಯತೆ ಗೌರವಗಳಿಲ್ಲದ ವೃತ್ತಿ, ಕೀಳುಮಟ್ಟದ್ದು, ಕಳಂಕಿತವಾದದ್ದು... ಹೀಗೆ ಇಂತಹುದೇ ಹಣೆಪಟ್ಟಿಗಳನ್ನು ಕಟ್ಟಿಕೊಂಡಿರುವ ಲೈಂಗಿಕ ವೃತ್ತಿ ಮಹಿಳಾ ಸಮುದಾಯ, ಇನ್ನೊಂದೆಡೆ ಈ ಹೀಯಾಳಿಕೆಗಳಿಂದಲೇ ಮಾನಸಿಕವಾಗಿ ಅಂತರಾಳದಲ್ಲಿ ಕುಸಿದು ಹೋಗಿ ಪಾಪಪ್ರಜ್ಞೆಯಿಂದ ನರಳುತ್ತಿರುವ ಒಬ್ಬೊಬ್ಬ ಲೈಂಗಿಕ ವೃತ್ತಿ ಮಹಿಳೆ. ಈ ಮಹಿಳೆಯರನ್ನು ಮಾನಸಿಕವಾಗಿ ಮೇಲೆತ್ತುವ ಹಾಗೂ ಅವರಲ್ಲಿ ಆತ್ಮ ವಿಶ್ವಾಸವನ್ನು ತುಂಬುವ ಕೆಲಸ ಮಾಡಬೇಕಾಗುತ್ತದೆ. ಅವಳಿಗೆ ಅವಳು ಪ್ರಮುಖ ಎನ್ನುವ ವಿಚಾರವನ್ನು ಅವಳೆಂದೂ ಯೋಚಿಸಿರುವುದೇ ಇಲ್ಲ. ಇಂತಹ ಸ್ಥಿತಿಯಿಂದ ಸ್ವಾಭಿಮಾನವನ್ನು, ಸ್ವಯಂಗೌರವವನ್ನು ಪಡೆಯುವಂತಹ ಪ್ರಕ್ರಿಯೆಗಳಿಗೆ ಅವಳನ್ನು ಒಳಪಡಿಸಬೇಕಾಗುತ್ತದೆ. ಇದಕ್ಕೆ ಬೇಕಾಗುವಷ್ಟು ಸಮಯ, ಶಾಂತಿ, ನೆಮ್ಮದಿ, ಆಸಕ್ತಿ, ಜವಾಬ್ದಾರಿ, ಬದ್ಧತೆಗಳೆಲ್ಲವನ್ನು ಈ ಪ್ರಕ್ರಿಯೆ ಒತ್ತಾಯಿಸುತ್ತದೆ. ಇಂತಹ ಮನಸ್ಥಿತಿಗೆ ಅವಳನ್ನು ತಲುಪಿಸುವುದು ಅತ್ಯಂತ ಸವಾಲಿನ ಹಾಗೂ ತಾಳ್ಮೆಯ ಜವಾಬ್ದಾರಿ ಒಗ್ಗೂಡಿಸುವಿಕೆಯ ಪ್ರಯತ್ನದ ಹರಿಕಾರರಿಗೆ ಇರಲೇ ಬೇಕಾಗುತ್ತದೆ. ಈ ಮನಸ್ಥಿತಿ ತಲುಪಲು ಸಾಕಷ್ಟು ದೀರ್ಘ ಸಮಯವನ್ನೇ ಹಿಡಿಯುತ್ತದೆ.

ಸದಾ ಕುಡಿತ, ಮದ್ಯವ್ಯಸನಗಳು, ಅಮಲಿನ ಸ್ಥಿತಿಯಲ್ಲಿರುವ ದೇಹ, ಮನಸ್ಸುಗಳು ಲೈಂಗಿಕವೃತ್ತಿ ಮಹಿಳೆಯರ ದಿನಚರಿಯ ಶೇಕಡಾ ೭೫ ರಿಂದ ೮೦ ರಷ್ಟನ್ನು ಆವರಿಸಿ ಬಿಟ್ಟಿರುತ್ತವೆ. ಜೀವನದುದ್ದಕ್ಕೂ ಅನ್ಯಾಯ, ವಂಚನೆ ದೌರ್ಜನ್ಯ, ಅಶಾಂತಿಗಳ ಮಡುವಿನಲ್ಲಿಯೇ ಒದ್ದಾಡುತ್ತಿರುವ ಅವಳ ಮನಸ್ಥಿತಿ ಸದಾ ಆ ನಿಟ್ಟಿನಲ್ಲಿಯೇ ಯೋಚಿಸುತ್ತಿರುತ್ತದೆ. ಆತಂಕಗಳು, ಭೀತಿಗಳು ಅವಳ ಸೆರಗಿಗೆ ಗಂಟು ಹಾಕಿಕೊಂಡೆ ಇರುತ್ತವೆ. ರೌಡಿಗಳು, ಪಿಂಪ್‌ಗಳು, ಬಾಡಿಗೆ ಗಂಡಂದಿರುಗಳು, ಪರ್ಕಗಳು ಇವಳನ್ನು ಯಾವಾಗಲೂ

ಒಂಟಿಯಾಗಲು ಬಿಡುವುದೇ ಇಲ್ಲ. ಪೊಲೀಸರ ಕಸರತ್ತುಗಳು ಮಾಮೂಲಿ ಭೇಟಿಗಳಂತೂ ಇವಳ ಭಾಗವಾಗಿರುತ್ತವೆ. ಇವೆಲ್ಲದರಷ್ಟೇ ಮುಖ್ಯವಾಗಿ ಲೈಂಗಿಕ ವೃತ್ತಿ ಮಹಿಳೆಯರೊಳಗೇ ಇರುವ ಪರಸ್ಪರ ಪೈಪೋಟಿ, ಅಸೂಯೆ, ದ್ವೇಷ, ಸಿಟ್ಟು ಸೆಡವುಗಳು ಅಮಲಿನ, ದೇಹ, ಮನಸ್ಸುಗಳನ್ನು ಸೆಣಸಾಟಕ್ಕೆ ಪ್ರಚೋದಿಸುತ್ತಲೇ ಇರುತ್ತವೆ. ಇನ್ನು ಅವಳ ಅನಾರೋಗ್ಯ, ದೈಹಿಕ ನೋವುಗಳು ಸೆಳೆತಗಲು, ಗರ್ಭಪಾತಗಳು, ರಕ್ತಸ್ರಾವಗಳು, ಲೈಂಗಿಕ ರೋಗಗಳು, ಮಾನಸಿಕ ವೇದನೆಗಳು ಇವಳ ಲೈಂಗಿಕ ವೃತ್ತಿ ಬದುಕಿನ ಪಾಲುದಾರರಾಗಿರುತ್ತವೆ. ಅವಳ ದಿನನಿತ್ಯದ ದುಡಿಮೆಯಲ್ಲಿ ಬಕಪಕ್ಷಿಗಳಂತೆ ಪಾಲುದಾರಿಕೆಗೆ ಕಾದು ಕುಳಿತಿರುವ ಅವಳ ಸುತ್ತಲಿನ ಮಾಮೂಲಿ ವಸೂಲಿಯವರು, ಅವಲಂಬಿತರು, ಮಕ್ಕಳು, ಅವಳ ಚಟಗಳು, ಅವಳ ಅನಾರೋಗ್ಯಗಳು, ಅವಳ ಬಿಡುಗಡೆಗಳು ಮೀಟರ್ ಬಡ್ಡಿಯ ವಸೂಲಿದಾರರುಗಳು ಅವಳನ್ನು ಸದಾ ಕಟಕಿಯಾಡುತ್ತಲೇ ಇರುತ್ತವೆ. ಇಂತಹ ಸ್ಥಿತಿಯಲ್ಲಿರುವ ಅವಳನ್ನು, ಅವಳ ದುಡಿಮೆಯನ್ನು ಅವಳ ಬದುಕಿನ ದಾರಿಗಳನ್ನೂ ಸರಾಸರಿಯಾಗಿ ಬ್ರಾಂಡ್ ಮಾಡುವ ಈ ಸಮಾಜದ ಲೈಂಗಿಕ ವೃತ್ತಿ ಬಹಳ ಆರಾಮವಾದ ವೃತ್ತಿಯೆಂದೂ, ಬೇರೆಲ್ಲೂ ದುಡಿದು ತಿನ್ನಲಾಗದೆ ನಿರಾಯಸವಾಗಿ ದುಡಿದು ತಿನ್ನಲು ಈ ವೃತ್ತಿ ಮಾಡುತ್ತಾರೆಂದೂ ಅವಳೆಡೆಗೆ ಬೊಟ್ಟು ಮಾಡುತ್ತಲೇ ಮೂಗುಮುರಿಯುವ ಈ ಸಮಾಜಕ್ಕೆ ಅವಳ ಈ ವೃತ್ತಿಯ ಬೆನ್ನಿಗೇ ಇರುವ ತುಮೂಲಗಳು ಅರ್ಥವಾಗಬೇಕಿದೆ.

ಹಾಗೆಯೇ ಸೇವಾ ಪರಂಪರೆಯ ಘನತೆ ಮತ್ತು ಎಚ್.ಐ.ವಿ/ಏಡ್ಸ್ ಆಪಾದನೆಯನ್ನು ಮುಖಾಮುಖಿಯಾಗಿಸಿಕೊಳ್ಳುವ ಮತ್ತು ವರ್ತಮಾನದ ಪತನದ ನೆಲೆಯಲ್ಲಿ ಜಾಗೃತಿಯುಂಟು ಮಾಡಿಕೊಳ್ಳಲು ಸಾಧ್ಯವಾಗಬಹುದು.

ಲೈಂಗಿಕ ವೃತ್ತಿ ಮಹಿಳಾ ಸಮುದಾಯದ ಒಗ್ಗೂಡಿಸುವ ಸೂತ್ರಗಳು ಮತ್ತು ಆ ಪ್ರಕ್ರಿಯೆಯ ತಾತ್ವಿಕ ನೆಲೆಗಳು ಯಾವುವು ಆಗ ಬಹುದೆಂಬುದನ್ನು ಬುಡಕಟ್ಟು ಜನಪದ ಸಮುದಾಯಗಳ ಅಭಿವೃದ್ಧಿ, ಅವರ ಕಲೆ, ಸಂಸ್ಕೃತಿ ಮುಂತಾದವುಗಳ ಚರ್ಚೆಯ ಸಂದರ್ಭದಲ್ಲಿ ಸಮಾಜ ವಿಜ್ಞಾನಿಗಳು, ಮಾನವಶಾಸ್ತ್ರಜ್ಞರು, ಬುಡಕಟ್ಟು ಅಧ್ಯಯನ ತಜ್ಞರು, ಸಂಶೋಧಕರು, ಹಾಗೂ ರಾಜಕಾರಣಿಗಳ ಆಶಯಗಳೊಂದಿಗೆ ಈ ಕೆಳಗಿನಂತೆ ಚರ್ಚಿಸಬಹುದು. ಲೈಂಗಿಕ ವೃತ್ತಿ ಮಹಿಳಾ ಸಮುದಾಯವನ್ನು ಒಂದು ಆಧುನಿಕ ಬುಡಕಟ್ಟಾಗಿ ಪರಿಕಲ್ಪಿಸಿ ಆ ಸೂತ್ರಗಳ ಒಳಸುಳಿಗಳ ವಿಶ್ಲೇಷಿಸುವ ಪ್ರಯತ್ನ ಇದಾಗಿದೆ.

ಈ ನಿಟ್ಟಿನಲ್ಲಿ 'ರಹಮತ್ ತರೀಕೆರೆ'ಯವರು ಸಮುದಾಯ ಅಧ್ಯಯನಗಳು ಹೇಗೆ ನಡೆಯುತ್ತಿವೆ ಎಂಬ ವಿಚಾರವಾಗಿ ವಿಶ್ಲೇಷಿಸುತ್ತಾ ಈ ಕೆಳಗಿನಂತೆ ಅಭಿಪ್ರಾಯಪಡುತ್ತಾರೆ.

''ಸಾಮಾಜಿಕವಾಗಿ ಹಿಂದುಳಿದ ಜಾತಿಗಳಿಗೆ ವಿದ್ಯಾಭ್ಯಾಸ ಹಾಗೂ ನೌಕರಿಯಲ್ಲಿ ಜಾತಿ ಆಧಾರಿತ ಮೀಸಲಾತಿಯನ್ನು ಸರ್ಕಾರವು ನೀಡತೊಡಗಿದ ಮೇಲೆ ಜಾತಿ ಸಮುದಾಯದ ಅಧ್ಯಯನಗಳು ಹೆಚ್ಚಾದವು. ಇದರಿಂದ ಕೆಳಜಾತಿಗಳು ಸಾಮಾಜಿಕವಾಗಿ ಸಂಘಟಿತವಾಗಿ ತಂತಮ್ಮ ಜಾತಿಗಳ ಗತವೈಭವದ ಚರಿತ್ರೆ

ಕಟ್ಟಿಕೊಳ್ಳವುದಕ್ಕೆ ಅಥವಾ ತಮ್ಮ ಹೀನಸ್ಥಿತಿ ಬಿಂಬಿಸಿ ಸರ್ಕಾರದ ಮೇಲೆ ಪ್ರಭಾವ ಬೀರುವುದಕ್ಕೂ ಶುರುಮಾಡಿದವು. ಇದು ವಿರುದ್ಧ ಮುಖಗಳನ್ನು ಏಕಕಾಲಕ್ಕೆ ಹೊಂದಿತ್ತು. ಅದೆಂದರೆ ಗತಚರಿತ್ರೆಯನ್ನು ವೈಭವದ ನೆಲೆಯಲ್ಲಿ ಕಟ್ಟಿಕೊಳ್ಳುವುದು ವರ್ತಮಾನವನ್ನು ಪತನದ ನೆಲೆಯಲ್ಲಿ ಕಟ್ಟಿಕೊಂಡು ಜಾಗೃತಿಯನ್ನು ಉಂಟುಮಾಡಿಕೊಳ್ಳುವುದು.''[೬]

ಇಲ್ಲಿ ಲೈಂಗಿಕ ವೃತ್ತಿ ಸಮುದಾಯವನ್ನು ಕೂಡ ಒಂದು ಆಧುನಿಕ ಬುಡಕಟ್ಟಾಗಿ ಪರಿಗಣಿಸಲು ಸಾಧ್ಯವಾದರೆ ಅಥವಾ ಆ ಸೌಲಭ್ಯಗಳನ್ನು ಕೊಟ್ಟಾಗ ಅವುಗಳ ಪ್ರಲೋಭನೆಯಿಂದಾದರೂ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಒಗ್ಗೂಡುತ್ತಾರೆ.

ಈ ಮೇಲೆ ವಿವರಿಸಿರುವಂತೆ ಲೈಂಗಿಕ ವೃತ್ತಿ ಮಹಿಳಾ ಸಮುದಾಯದ ಪರಿಸ್ಥಿತಿಯಲ್ಲಿ ಅವರನ್ನು ಅಣಿ ನೆರೆಸುವ ಯಾವ ಹೊಣೆಯನ್ನು ಪರಿಭಾವಿಸಿದ ಅಪಕ್ವವಾದ ಇಂತಹ ಮನಸ್ಸುಗಳು ಆಲೋಚನೆಗಳು, ಬೌದ್ಧಿಕ ಚರ್ಚೆಗಳು ಕೇವಲ ತರ್ಕಗಳಾಗ ಬಹುದೇ ವಿನಃ ಆ ಸಮುದಾಯವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಯಾವುದೇ ಕಾಣಿಕೆ ನೀಡಲಾರವು ಎಂಬುದು ನನ್ನ ಅಭಿಪ್ರಾಯವಾಗಿದೆ.

ಈ ಸಂದರ್ಭದಲ್ಲಿ ಮಾನವಶಾಸ್ತ್ರಜ್ಞನಾದ 'ವೆರಿಯರ್ ಎಲ್ವಿನ್' ಒಂದು ಬುಡಕಟ್ಟು ಸಮುದಾಯವನ್ನು ಒಗ್ಗೂಡಿಸುವ ಮತ್ತು ಸಬಲೀಕರಣಗೊಳಿಸುವ ಬಗ್ಗೆ ಹೊಂದಿದ್ದ ಪರಿಕಲ್ಪನೆಯ ಪ್ರಸ್ತಾಪ ಬಹಳ ಸೂಕ್ತವೆನಿಸುತ್ತದೆ. ''ಆದಿವಾಸಿ ಬುಡಕಟ್ಟುಗಳು ಈಗ ಅಲ್ಪ ಸಂಖ್ಯಾತರು, ಅವರನ್ನು ಸಮರ್ಥಿಸಿಕೊಳ್ಳುವ ರಾಜಕರಾಣಿಗಳಾಗಲೀ ಅಥವಾ ಲೇಖಕರಾಗಲೀ ಆ ಸಮುದಾಯಗಳಲ್ಲಿ ಇಲ್ಲ. ಆದ್ದರಿಂದ ನಾನೇ ಅವರ ವಕ್ತಾರನಾಗಲು ಮತ್ತು ಅವರ ಹಿತಾಸಕ್ತಿಗಳನ್ನು ಕಾಪಾಡಲು ಪ್ರಯತ್ನ ನಡೆಸಿದ್ದೇನೆ. ಇಲ್ಲದೆ ಹೋದರೆ ಭ್ರಷ್ಟಗೊಂಡ ನಾಗರೀಕತೆಯ ಪ್ರವಾಹದಲ್ಲಿ ಅವರೂ ಮುಳುಗಿ ಹೋಗುತ್ತಾರೆ. ಅವರ ಹಳೆಯ ಬದುಕಿನ ಆಧಾರದಲ್ಲಿಯೇ ನಿಲ್ಲುವ ಹೊಸ ಬಾಳನ್ನು ಕಟ್ಟಲು ಮುಂದಾಗಿದ್ದೇನೆ. ಆದರೆ ಅದು ಅಜ್ಞಾನ ಮತ್ತು ಮೂಢ ನಂಬಿಕೆಗಳ ಹೊರತಾಗಿ ಬದುಕಾಗಿದ್ದು ಪುನರುಜ್ಜೀವನ ಸ್ವರೂಪದಲ್ಲಿರುತ್ತದೆ.''[೭]

ಹೀಗೆ ಆ ಪ್ರಕ್ರಿಯೆಯನ್ನು ಸಮರ್ಥಿಸಿಕೊಂಡ ಎಲ್ವಿನ್ ಬುಡಕಟ್ಟುಗಳ ಸಂಬಲೀಕರಣದ ಪ್ರಯತ್ನದಲ್ಲಿ ತನ್ನನ್ನು ಅರ್ಪಿಸಿಕೊಂಡದ್ದು ಆತನ ಪ್ರಾಮಾಣಿಕ ಬದ್ಧತೆಯನ್ನು ಮನನ ಮಾಡಿಕೊಡುತ್ತದೆ.

ಈ ನಿಟ್ಟಿನಲ್ಲಿ ಈ ಸಮಾಜದ ಯಾವುದೇ ಚಳವಳಿಗಳು, ಆಂದೋಲನಗಳು, ಸಮಾಜ ಮುಖಿಯಾಗಿರುವ ಪ್ರಗತಿ ಪರ ಸಂಘಟನೆಗಳೂ ಈ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸದಿರುವುದೂ ಕೂಡ ಒಂದು ನ್ಯೂನತೆಯಾಗಿರುವುದು ಸ್ಪಷ್ಟವಾಗಿದೆ.

ಇದು ಅರ್ಥವಾಗದ ಹೊರತು ಲೈಂಗಿಕ ವೃತ್ತಿ ಮಹಿಳೆಯ ಬದುಕಿನ ಹೊಣೆಯನ್ನು ಈ ಸಮಾಜ ಯೋಚಿಸಲೂ ಕೂಡ ಸಾಧ್ಯವಾಗದು. ಇಂತಹ ಸವಾಲುಗಳನ್ನು ಒಗ್ಗೂಡಿಸುವಿಕೆಯ ಪ್ರಯತ್ನದ ಕಾರ್ಯಕರ್ತರುಗಳು ಸ್ವೀಕರಿಸಬೇಕಾದ ಅನಿವಾರ್ಯತೆಯಿದೆ.

ಇದು ಬೀದಿ ಬದಿಯ ಲೈಂಗಿಕ ವೃತ್ತಿ ಬದುಕುಗಳನ್ನು ಒಗ್ಗೂಡಿಸುವ ಸವಾಲಾದರೆ, ಇನ್ನೊಂದೆಡೆ ವೇಶ್ಯಾಗೃಹಗಳಲ್ಲಿರುವ ಲೈಂಗಿಕ ವೃತ್ತಿ ಮಹಿಳೆಯರ ಒಗ್ಗೂಡಿಸುವಿಕೆ ಇನ್ನೂ ಜಟಿಲವಾದುದಾಗಿದೆ. ಆರಂಭದಲ್ಲಿಯೇ ಎದುರಾಗುವ ದೊಡ್ಡ ಸಮಸ್ಯೆ ವೇಶ್ಯಾಗೃಹಗಳನ್ನು ನಿರ್ವಹಿಸುವ ಘರ್‌ವಾಲಿಗಳು, ಹಾಗೂ ಆ ವೇಶ್ಯಾಗೃಹದ ಸುಸೂತ್ರ ಉಸ್ತುವಾರಿಕೆಗಾಗಿಯೇ ಇರುವ ಒಂದು ದೊಡ್ಡ ಜಾಲ. ಲೈಂಗಿಕ ವೃತ್ತಿ ಮಹಿಳೆಯರನ್ನೆ ಸರಕಾಗಿಸಿಕೊಂಡು ದಂಧೆ ನಡೆಸುವ ಬಂಡವಾಳಗಾರರು ಆ ಹೆಣ್ಣುಮಕ್ಕಳನ್ನು ತಲುಪಲು ಕೂಡ ಸಾಧ್ಯವಾಗದಂತಹ ಪರಿಸ್ಥಿತಿಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ವೇಶ್ಯಾಗೃಹಗಳ ಮಾಲೀಕರುಗಳು ಲಾಭವನ್ನೇ ಮುಖ್ಯ ಗುರಿಯಾಗಿಸಿಕೊಂಡು ನಡೆಸುತ್ತಿರುವ ವ್ಯಾಪಾರದಲ್ಲಿ 'ಒಗ್ಗೂಡಿಸುವಿಕೆ' ಪ್ರಶ್ನೆಯೇ ಅವರ ತಳಪಾಯವನ್ನು ಅಲುಗಾಡಿಸಿಬಿಡಬಹುದಾದ ಆತಂಕ ಇದ್ದೇ ಇರುತ್ತದೆ. ವೇಶ್ಯಾ ಗೃಹದ ಲೈಂಗಿಕ ವೃತ್ತಿ ಮಹಿಳೆಯರ ಪರಿಸ್ಥಿತಿಗಳು ಮಹಿಳೆಯರಿಗಿಂತ ಬಹಳ ಭಿನ್ನವಾಗಿವಾಗಿಯೇನೂ ಇರುವುದಿಲ್ಲವಾದರೂ ಮಾಲೀಕರ ಹಿಡಿತ, ಅವಳು ಅಲ್ಲಿರುವವರೆವಿಗೂ ಇದ್ದೇ ಇರುತ್ತದೆ. ಕೆಲವೊಮ್ಮೆ ಬೀದಿ ಬದಿಯವರಿಗಿಂತಲೂ ಹೆಚ್ಚು ಅಪಪಾದ ಸ್ಥಿತಿಯಲ್ಲಿರುತ್ತಾರೆ. ದುಡಿದ ದುಡಿಮೆಯ ಅರ್ಧ ಭಾಗವನ್ನು ಮಾಲೀಕರು ಪಡೆದು ಉಳಿದರ್ಧ ಭಾಗವನ್ನು ಲೈಂಗಿಕ ವೃತ್ತಿ ಮಹಿಳೆಯರಿಗೆ ಕೊಡುವುದೂ ಕೂಡ ದುಸ್ತರವೇ ಭಾರತದ ಮೊದಲ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂರವರು ಆದಿವಾಸಿಗಳ ಅಭಿವೃದ್ಧಿಯ ಕುರಿತು ವೈಜ್ಞಾನಿಕವಾದ ಹಾಗೂ ವಾಸ್ತವವಾದ ಅಭಿಪ್ರಾಯಗಳನ್ನು ಮೂಡಿಸಿರುತ್ತಾರೆ. ಅತ್ಯಂತ ನೇರ ಮತ್ತು ಸುಸ್ಪಷ್ಟವಾಗಿರುವ ಈ ಅಭಿವ್ಯಕ್ತಿಗಳಿಂದ ನೆಹರೂರವರು ಒಬ್ಬ ಮಾನವಶಾಸ್ತ್ರಜ್ಞನಂತೆ ತೋರುತ್ತಾರೆ. ಈ ಕೆಳಗಿನ ಅವರ ಅಭಿಪ್ರಾಯಗಳಿಂದ ಹಕ್ಕಿ ತೆಗೆದ ಒಳ ಸುಳಿಗೆಯ ಲೈಂಗಿಕ ವೃತ್ತಿ ಮಹಿಳಾ ಸಮುದಾಯದಂತಹ ಒಂದು ಸಂಕೀರ್ಣವಾದ, ಜಟಿಲವಾದ ಸಮುದಾಯದ ಅಭಿವೃದ್ಧಿ ಮತ್ತು ಅವರ ಬದುಕಿಗೊಂದು ಬೆಳಕು ಚೆಲ್ಲಬಹುದಾದಂತಹ ಪ್ರಯತ್ನ ಮಾಡಬಹುದಾಗಿದೆ. ಹಾಗೆಂದೇ ಈ ಸಮುದಾಯದ ಅಭಿವೃದ್ಧಿಯ ಸಂದರ್ಭದಲ್ಲಿಯೂ ನೆಹರುರವರು ಬುಡಕಟ್ಟುಗಳ ಬಗ್ಗೆ ಹೊಂದಿದ್ದ ಸ್ಪಷ್ಟ ನಿಲುವುಗಳು ಖಂಡಿತ ಸಹಕಾರಿಯಾಗಬಲ್ಲವು ಎಂದೇ ನಾನಿಲ್ಲಿ ನೆಹರುರವರ ಬುಡಕಟ್ಟುಗಳ ಬಗೆಗಿನ ವಿಶ್ಲೇಷಣೆಯನ್ನು ಪ್ರಸ್ತಾಪಿಸಲು ಬಯಸುತ್ತೇನೆ.

''ಆದಿವಾಸಿಗಳನ್ನು ಅಭಿವೃದ್ಧಿ ಪಡಿಸಲೆಂದೇ ನಾವು ಒತ್ತಾಯದಿಂದ ಅವರ ಮೇಲೆ ಏನನ್ನು ಹೇರಕೂಡದು. ಮತ್ತು ವಸ್ತು ಸಂಗ್ರಹಾಲಯದ ಸ್ಪೆಸಿಮನ್‌ಗಳ ತರಹ ಅವರನ್ನು ಅವರಷ್ಟಕ್ಕೆ ಬಿಟ್ಟು ಬಿಡಬಾರದು. ಅವರ ಅಭಿವೃದ್ಧಿಗೆ ಒಂದು 'ಸುವರ್ಣ ಮಾಧ್ಯಮ ಸೂತ್ರ' ವನ್ನು ಕಂಡುಕೊಳ್ಳಬೇಕಿದೆ.''[5]

ಈ 'ಸುವರ್ಣ ಮಾಧ್ಯಮ ಸೂತ್ರ' ಲೈಂಗಿಕ ವೃತ್ತಿ ಮಹಿಳಾ ಸಮುದಾಯದ ಬದುಕಿನ ಜಟಿಲತೆಗಳನ್ನು, ಗೊಂದಲಗಳನ್ನು ಪರಿಹರಿಸಲು ಬಹಳ ಸೂಕ್ತವಾಗಿದೆ ಎಂದು ನನ್ನ ಅಭಿಪ್ರಾಯವಾಗಿದೆ.

''ಆದಿವಾಸಿಗಳಲ್ಲಿ ತಾವು ಹೊರಗಿವರು ಮತ್ತು ಅನಾಗರೀಕರು ಎಂಬ ಕೀಳರಿಮೆ ಬಲವಾಗಿ ಬೇರೂರಿರುವುದು, ಅವರಲ್ಲಿ ನಾವು ಆತ್ಮ ವಿಶ್ವಾಸ ತುಂಬಿ, ಭಾರತವೆಂಬ ದೊಡ್ಡ ದೇಶದ ಭಾಗವಾಗಿ ನೀವಿದ್ದೀರಿ ಎಂದು ಅವರನ್ನು ಹುರಿದುಂಬಿಸಬೇಕಿದೆ ಮತ್ತು ಅವರನ್ನು ಗೌರವಿಸುತ್ತಲೇ ಈ ವೈವಿಧ್ಯಮಯ ದೇಶದ ಭಾಗವಾಗಿ ಅವರು ಬದುಕುವಂತೆ ಪ್ರೇರೇಪಿಸಬೇಕಿದೆ. ತಮ್ಮಷ್ಟಕ್ಕೆ ತಾವು ಬದುಕಲು ಮತ್ತು ತಮ್ಮ ಇಚ್ಛೆಗೆ ಮತ್ತು ಅನನ್ಯತೆಗೆ ತಕ್ಕಂತೆ ಅಭಿವೃದ್ಧಿ ಸಾಧಿಸಿಕೊಳ್ಳಲು ಇಲ್ಲಿ ತಮಗೆ ಪರಿಪೂರ್ಣ ಸ್ವಾತಂತ್ರವಿದೆ ಎಂಬ ಭಾವನೆ ಬಲಗೊಳ್ಳಬೇಕು. ಭಾರತ ನಮ್ಮನ್ನು ಕಾಯುವ, ರಕ್ಷಿಸುವ ದೇಶ ಮಾತ್ರವಲ್ಲ, ನಮ್ಮನ್ನು ಮುಕ್ತವಾಗಿ, ಸ್ವಾತಂತ್ರದಿಂದ ಬದುಕುವಂತೆ ಪ್ರೇರೇಪಿಸುವ ದೇಶವೆಂದು ಅವರು ಮನಗಾಣುವಂತೆ ನಾವು ವರ್ತಿಸಬೇಕಿದೆ.''[೯]

ನೆಹರೂರವರ ಈ ಮೇಲಿನ ಅಭಿಪ್ರಾಯ ಲೈಂಗಿಕ ವೃತ್ತಿ ಮಹಿಳಾ ಸಮುದಾಯಕ್ಕೂ ಅನ್ವಯಿಸುವಂತಾಗ ಬೇಕಿದೆ. ನಮ್ಮ ದೇಶದಲ್ಲಿ ಈ ಸಮುದಾಯವನ್ನು ಕನಿಷ್ಟ ಮನುಷ್ಯರನ್ನಾಗಿ, ಈ ದೇಶದ ನಾಗರೀಕರನ್ನಾಗಿ ನೋಡುವ ಅಗತ್ಯ ತುಂಬಾ ಇದೆ. ಅದಿರಂದಲೂ ವಂಚಿತರಾಗಿರುವ ಈ ಸಮುದಾಯದ ಬಹುತೇಕ ಮಹಿಳೆಯರು ತಾವು 'ಕಳಂಕಿತರು' ಎಂಬ ಪಾಪ ಪ್ರಜ್ಞೆ ಮತ್ತು ಕೀಳರಿಮೆಯಿಂದ ತೊಳಲಾಡುತ್ತಿದ್ದಾರೆ.

ಆ ಭಾವನೆಯಿಂದ ಹೊರಬರಲು, ಆತ್ಮ ವಿಶ್ವಾಸವನ್ನು ತುಂಬಿಸುವ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಈ ಸಮಾಜದ ಮುಖ್ಯ ವಾಹಿನಿಯ ಭಾಗವಾಗಿ ಪರಿಗಣಿಸುವುದರ ಮೂಲಕ ಮೊಟ್ಟ ಮೊದಲು ಲೈಂಗಿಕ ವೃತ್ತಿ ಸಮುದಾಯವನ್ನು ಮನುಷ್ಯರನ್ನಾಗಿ ನೋಡುವ ಅಗತ್ಯವಿದೆ.

ನೆಹರೂರವರು ಆದಿವಾಸಿಗಳನ್ನು ತಲುಪುವ ಒಂದು 'ಸುವರ್ಣ ಮಾಧ್ಯಮ ಸೂತ್ರ'ವನ್ನು ಪ್ರತಿಪಾದಿಸಿದ್ದಾರೆ. ''ಸುವರ್ಣ ಮಾಧ್ಯಮ ಸೂತ್ರದಲ್ಲಿ ಹೇರಿಕೆಯ ನೀತಿಯನ್ನು ಅವರ ಜನರ ಮೂಲಕವೇ ಅನುಷ್ಠಾನ ಗೊಳ್ಳುವಂತೆ ನೋಡಿಕೊಳ್ಳಬೇಕಿದೆ. ಇದು ಮೊದಲ ಹಂತ. ಅಂದರೆ ಅವರ ಜನರನ್ನೇ ಯೋಜನೆಗಳನ್ನು ಅನುಷ್ಠಾನಗೊಳಿಸಲು ತರಬೇತಿ ಗೊಳಿಸುವುದು. ತರಬೇತಿಗೊಂಡ ಆದಿವಾಸಿ ಜನರು ತಮ್ಮವರನ್ನು ಪರಿಣಾಮಕಾರಿಯಾಗಿ ತಲುಪಬಲ್ಲರು. ಹೊರಗಿನಿಂದ ಬಂದವರು ಆದಿವಾಸಿಗಳಾಗಿ ಕೆಲಸ ಮಾಡುವುದಕ್ಕಿಂತ ಅವರ ಜನರೇ ಅವರ ಅಭಿವೃದ್ಧಿಗೆ ತೊಡಗಿಸಿಕೊಳ್ಳುವಂತಾಗುವುದು ಹೆಚ್ಚು ಪರಿಣಾಮಕಾರಿ ಎಂದು ನನ್ನಗನ್ನಿಸುತ್ತಿದೆ. ಈ ಆದಿವಾಸಿ ಜನ ನಿಜಕ್ಕೂ ಉನ್ನತ ಹಂತಕ್ಕೆ ಬರಬೇಕಿದೆ, ಆದರೆ ಯಾವ ಅಭಿವೃದ್ಧಿಯ ಮಾನದಂಡಗಳಿಂದ ಭಾರತದ ಉಳಿದ ಜನಾಂಗಗಳನ್ನು ಮೇಲೆತ್ತಲು ಬಯಸುತ್ತೇವೋ ಅವೇ ಮಾನದಂಡಗಳು ಆದಿವಾಸಿಗಳಿಗೂ ಅನ್ವಯವಾಗಕೂಡದು. ಅವೇ ಇಲ್ಲಿ ಪುನರಾವರ್ತನೆಯಾಗಬಾರದು. ದೇಶಕ್ಕೂ ಸಹ ಈ ಬಗೆಯ ಕ್ರಮ ಒಳಿತೆಂದು ಕಾಣುತ್ತದೆ.

ಅಭಿವೃದ್ಧಿ ಹಂತಹಂತವಾಗಿ ಆಗಬೇಕು. ಒತ್ತಾಯದ ಹೇರಿಕೆಗಳು ಗೈರುಹಾಜರಾಗಿ, ಜನ ತರಬೇತಿಗೊಳ್ಳುತ್ತ ಇತರರನ್ನು ಅಭಿವೃದ್ಧಿಗೆ ತರಬೇತಿಗೊಳಿಸುವಂತಾಗಬೇಕು. ಇದರಿಂದಾಗಿ

ಅಭಿವೃದ್ಧಿಯೋಜನೆಗಳು ತೀವ್ರವಾಗಿ ಅನುಷ್ಠಾನಗೊಳ್ಳುವುದಿಲ್ಲ ನಿಜ. ಆದರೆ ಅವರದೇ ವ್ಯಕ್ತಿಯನ್ನು ತರಬೇತಿಗೊಳಿಸುವುದರ ಮೂಲಕ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಬಹುದು. ಇವರನ್ನು ರೂಪಿಸಲು ತರಬೇತಿ ಅತ್ಯಗತ್ಯ ತರಬೇತಿ ದೀರ್ಘಕಾಲ ಹಿಡಿಯುತ್ತದೆ. ಈ ರೀತಿ ಶಿಸ್ತುಬದ್ಧ ನೆಲೆಯಿಂದ ಹೊರಡುವುದೇ ಒಳ್ಳೆಯದು.''[10]

ನೆಹರೂರವರ ಈ ಸೂತ್ರದ ಮುಖ್ಯವಾದ ಅಂಶಗಳು ಲೈಂಗಿಕವೃತ್ತಿ ಮಹಿಳಾ ಸಮುದಾಯಕ್ಕೂ ಕೂಡ ಅನ್ವಯಿಸಬಹುದಾದಂತಹ ಬೆಳಕಿನ ಎಳೆಗಳು ಸುಸ್ಪಷ್ಟವಾಗಿವೆ.

ಆದರೆ ನಮ್ಮ ಸಮಾಜದ ಹಾಗೂ ನಮ್ಮ ವ್ಯವಸ್ಥೆಯಲ್ಲಿ ಇಂತಹ ಪ್ರಯತ್ನಗಳನ್ನು 'ಲೈಂಗಿಕ ವೃತ್ತಿ' ಸಮುದಾಯದಂತಹ ಸಮುದಾಯದೊಂದಿಗೆ ಬೆಸೆಯಲು ಬೇಕಾದ ಪ್ರಾಮಾಣಿಕತೆ, ಬದ್ಧತೆ ಹಾಗೂ ಜವಾಬ್ದಾರಿಗಳ ಗಟ್ಟಿತನ ಬೇಕಾಗುತ್ತದೆ. ಈ ಮೇಲಿನ ಆಲೋಚನೆಗಳಿಗೆ ಸಮೀಪವಾದ ಆಲೋಚನೆಗಳೊಂದಿಗೆ ಅಲ್ಲಲ್ಲಿ ಅಂತಹ ಪ್ರಯತ್ನಗಳು ನಡೆಯುತ್ತಿವೆಯಾದರೂ ಅವುಗಳಿಗಿರುವ ಪರಿಮಿತಿಗಳು ಎಲ್ಲ ಪ್ರಯತ್ನಗಳನ್ನು ನಾಜೂಕಾಗಿ ಬುಡಮೇಲು ಮಾಡಿಬಿಡುತ್ತವೆ.

ಈ ದೇಶದಲ್ಲಿರುವ ವಿದೇಶಿ ಹಣದ ಏಜೆನ್ಸಿಗಳು ವಿದೇಶದಿಂದ ಧನಸಹಾಯ ಪಡೆದು ಅವುಗಳನ್ನು ಈ ದೇಶದ ಸ್ವಯಂ ಸೇವಾಸಂಸ್ಥೆಗಳಿಗೆ ನೀಡಿ ಈ ದೇಶದ ಬಹುತೇಕ ಸಂಕಷ್ಟದ ಸಮುದಾಯಗಳೊಂದಿಗೆ ಅವರ ಸರ್ವಾಂಗೀಣ ಅಭಿವೃದ್ಧಿಯ ನೆಪದಲ್ಲಿ ಕಾರ್ಯರಂಭ ಮಾಡುತ್ತವೆಯಾದರೂ ಪರಿಣಾಮಕಾರಿಯಾಗಿ ಮತ್ತು ಗುರಿತಲುಪಿಸುವ, ಈ ವ್ಯವಸ್ಥೆಯ ವಿರುದ್ಧ ಧನಿಯೆತ್ತುವ ತಾಕತ್ತನ್ನು ಅವುಗಳೆಂದಿಗೂ ಕೊಡುವುದೇ ಇಲ್ಲ. ''ಮೇಲ್ನೋಟಕ್ಕೆ ಸಬಲೀಕರಣದ ಕ್ರಾಂತಿಯನ್ನೇ ಮಾಡುತ್ತಿರುವಂತೆ ತೋರಿದರೂ ಆಳದಲ್ಲಿ ತೃತೀಯಜಗತ್ತಿನ ಜನಶಕ್ತಿಯನ್ನು ಹತ್ತಿಕ್ಕುವ ಸಾಮ್ರಾಜ್ಯಶಾಹಿಗಳ ಹುನ್ನಾರವಿರುತ್ತದೆ'' ಎಂಬ ಬುದ್ಧಿ ಜೀವಿ ಪ್ರಕಾಶ್‌ಕಾರಟ್‌ರವರ ಅಭಿಪ್ರಾಯ ಸಮಂಜಸವೆನ್ನಿಸುತ್ತದೆ. 'ಕೂಲಿಯ ಕ್ರಾಂತಿ'ಯ ಪರಂಪರೆಯನ್ನು ಈ ವಿದೇಶಿ ಹಣಕಾಸು ಸಂಸ್ಥೆಗಳು ಬೆಳೆಸುವುದರ ಮೂಲಕ ಶೋಷಿತ ಜನ ಸಮುದಾಯವನ್ನು ತ್ರಿಶಂಕು ಸ್ಥಿತಿಯಲ್ಲಿಡುತ್ತವೆಯಷ್ಟೇ ಹೊರತು ಅವುಗಳಿಂದ ಹೆಚ್ಚಿನದನ್ನೇನೂ ನಿರೀಕ್ಷಿಸಲು ಸಾಧ್ಯವಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ.

ಇನ್ನು ಸರ್ಕಾರ ಮತ್ತು ಈ ವ್ಯವಸ್ಥೆಗಳು ಇಂತಹ ಸಬಲೀಕರಣದ ಅಥವಾ ಒಗ್ಗೂಡಿಸುವಿಕೆಯ ಅಭಿವೃದ್ಧಿಯ ಬಹುತೇಕ ಯೋಜನೆಗಳು ಕಮಿಷನ್ ಆಧಾರಗಳಲ್ಲಿ ತಾವು ತಲುಪಬೇಕಾದ ದಾರಿಯಲ್ಲಿಯೇ ಸಂದಿಹೋಗುತ್ತವೆ. ಅದರಲ್ಲೂ ಲೈಂಗಿಕವೃತ್ತಿ ಸಮುದಾಯದಂತಹ ಸವಾಲುಗಳಿಗೆ ಯೋಜನೆಗಳನ್ನು ಪ್ರಾಮಾಣಿಕವಾಗಿ ರೂಪಿಸುವ ಆರೋಗ್ಯವಂತ ಮನಸ್ಸುಗಳ ಕೊರತೆ ಕೂಡ ಈ ಸಮುದಾಯದ ಬದುಕಿಗೆ ಇನ್ನೂ ಕೂಡ ಸಮಸ್ಯೆಯಾಗಿದೆ. ಇಂತಹ ವಾಸ್ತವದಲ್ಲಿ ನೆಹರೂರವರ ಆಶಯಗಳನ್ನು ರೂಪಿಸುವ ಜಾರಿಗೊಳಿಸುವ ತಾಳ್ಮೆ, ಪ್ರಾಮಾಣಿಕತೆಯನ್ನು ಆಶಿಸಬೇಕಾಗಿದೆ.

ಲೈಂಗಿಕ ವೃತ್ತಿ ಮಹಿಳೆಯರ ಸಮುದಾಯದ ಮೂಲಭೂತ ಪ್ರಶ್ನೆಗಳು, ಅವರ ಬದುಕಿನ ಬೇರೆ ಬೇರೆ ಮಜಲುಗಳ   ಬದುಕಿನ ಒಗ್ಗೂಡಿಸುವಿಕೆಯ ಪ್ರಯತ್ನಗಳು ಎಲ್ಲ ಗಟ್ಟಿತನಗಳೊಂದಿಗೆ ನಡೆಯಬೇಕಿದೆ. ಈ ನಿಟ್ಟಿನಲ್ಲಿ ಅಂತಿಮವಾಗಿ ನಾನು ಬುದ್ಧ ಮತ್ತು ಕೌಟಿಲ್ಯನ ಕೆಲವು ತಾತ್ವಿಕವಾದ ಮತ್ತು ಪ್ರಾಯೋಗಿಕವಾದ ಸೂತ್ರಗಳನ್ನು ವಿಶ್ಲೇಷಿಸಲು ಬಯಸುತ್ತೇನೆ. ಇದರಿಂದಾಗಿ ಲೈಂಗಿಕ ವೃತ್ತಿ ಸಮುದಾಯದ ಬದುಕುಗಳನ್ನು ತೆರೆದುಕೊಳ್ಳಲು ಸರ್ಕಾರಕ್ಕೆ, ಹಣಕಾಸು ಸಹಾಯ ಸಂಸ್ಥೆಗಳಿಗೆ, ಸ್ವಯಂ ಸೇವಾ ಸಂಸ್ಥೆಗಳಿಗೆ, ಮತ್ತು ಆ ನಿಟ್ಟಿನಲ್ಲಿ ಕಾಳಜಿ,ಬದ್ಧತೆಯಿರುವವರಿಗೆ ಆಲೋಚಿಸಲು ಸಹಕಾರಿಯಾದೀತು.

ಕ್ರಿ.ಪೂ. ೩೦೦ ರಿಂದ ಕ್ರಿ.ಶ ೧೫೦ರ ಕಾಲಘಟ್ಟದಲ್ಲಿ ರಾಜರ ಆಳ್ವಿಕೆಯಲ್ಲಿ ವೇಶ್ಯಾವಾಟಿಕೆಯನ್ನು ಪರಿಗಣಿಸಿದ್ದ ರೀತಿ ಹಾಗೂ ವೇಶ್ಯಾವಾಟಿಕೆಯನ್ನು ಅರ್ಥ ವ್ಯವಸ್ಥೆಯ ಒಂದು ಭಾಗವಾಗಿ, ಆದಾಯದ ಮೂಲವಾಗಿ, ಆರ್ಥಿಕ ಚಟುವಟಿಕೆಯಾಗಿ, ನೋಡುತ್ತಿದ್ದುದು ಕಂಡು ಬರುತ್ತದೆ. ಈ ಮೂಲಕ ಸರ್ಕಾರದ ಒಂದಷ್ಟು ಆಯಾಮಗಳನ್ನು ಅರ್ಥ ಮಾಡಿಕೊಳ್ಳಲು ಸಹಕಾರಿಯಾಗುತ್ತವೆ.

ಯಾವತ್ತಿಗೂ ಜೀವಂತಿಕೆಯಿಂದ ಇದ್ದರೂ ಈ ವೃತ್ತಿಗೆ ಅಂಟಿದಕಳಂಕ ಯಾವತ್ತೂ ತಪ್ಪಿಲ್ಲ. ಅಂತಹ ಅನಿವಾರ್ಯದ ಅನಿಷ್ಟ ಎಂದು ಪರಿಗಣಿಸಿದ್ದ ಈ ವಿಚಾರವನ್ನು ಕೌಟಿಲ್ಯ ಮಾನ್ಯ ಮಾಡಿ ಅದಕ್ಕೊಂದು ಚೌಕಟ್ಟನ್ನು ಕಟ್ಟಿಕೊಟ್ಟನು. ಅದನ್ನು ಅಂದಿನ ರಾಜಾಡಳಿತಗಳು ಸಮರ್ಥವಾಗಿ ಜಾರಿಗೊಳಿಸಿಯೂ ಇದ್ದವು. ಕೌಟಿಲ್ಯನ ಆ ಸೂತ್ರಗಳು ಸಾರ್ವತ್ರಿಕವಾದವು, ಸಾರ್ವಕಾಲಿಕವಾಗ ಬಹುದಾದ ಶಕ್ತಿಯನ್ನು; ಹೊಣೆಯನ್ನು ಹೊಂದಿರುವಂತಹವು.

ಕಣ್ಣು ಮುಚ್ಚಿ ಜಾಣಕುರುಡುತನ ತೋರುತ್ತಲೇ ವಾರ್ಷಿಕವಾಗಿ ಕೋಟ್ಯಾಂತರ ರೂಗಳ ಕಮಾಯಿ ಪಡೆಯುವ ಇಂದಿನ ವ್ಯವಸ್ಥೆಗಳೂ ಕೂಡ ಅವರ ಆ ಸಮುದಾಯದ ಕನಿಷ್ಠ ಮಾನವ ಹಕ್ಕುಗಳ ನೆಲೆಯಲ್ಲಿ ಅವರನ್ನು ಮನುಷ್ಯರನ್ನಾಗಿ ಪರಿಗಣಿಸುವ ಅಗತ್ಯವಿದೆ. ಅದಕ್ಕಾಗಿ ಅಂಧರಾಗಬೇಕಿಲ್ಲ. ಸಾವಿರಾರು ವರ್ಷಗಳ ಹಿಂದೆಯೇ 'ಕೌಟಿಲ್ಯ'ನು ಹಾಕಿಕೊಟ್ಟಿರುವ ಸೂತ್ರಗಳು ಲೈಂಗಿಕ ವೃತ್ತಿ ಮಹಿಳೆಯರ ಬದುಕಿಗೊಂದು ಬೆಳಕು ಚೆಲ್ಲಲು ಮತ್ತು ಹಕ್ಕು ಬಾಧ್ಯತೆಗಳ ನೆಲೆಗಟ್ಟಿನಲ್ಲಿ ಆ ಸಮುದಾಯವನ್ನು ನೋಡಲು ಸಾಧ್ಯವಾಗಬಹುದು.

ಆ ಸಮುದಾಯಕ್ಕೆ ಮೇಲ್ವಿಚಾರಕರಿದ್ದರು, ಅವರೇ ಗಣಿಕಾಧ್ಯಕ್ಷರು. ಪ್ರತಿ ಲೈಂಗಿಕ ವೃತ್ತಿ ಮಹಿಳೆಗೆ ಬರುವ ವಿಟರ ಸಂಖ್ಯೆ. ಅವಳ ಪ್ರಭಾವ, ಅವಳ ಒಟ್ಟು ಆದಾಯ ಮತ್ತು ಖರ್ಚು, ಉಳಿತಾಯದ ಮೊತ್ತ ಹೀಗೆ ಪ್ರತ್ಯೇಕವಾಗಿ ದಾಖಲಿಸಬೇಕಿತ್ತು. ಅವಳು ತನ್ನ ಎರಡು ದಿನದ ಸಂಪಾದನೆಯನ್ನು ತಿಂಗಳಿನ ತೆರಿಗೆಯಾಗಿ ಕೊಡಬೇಕಾಗಿತ್ತು.

ಅಂದಿನ ವೇಶ್ಯೆಗೆ ಬೇಕಾದ ಎಲ್ಲ ಕೌಶಲ್ಯಗಳನ್ನು ಸಂಗೀತ, ಲಲಿತ ಕಲೆ, ಇತರೆ ಕಲಾ ಕೌಶಲ್ಯಗಳನ್ನು ರಾಜನ ಬೊಕ್ಕಸದಿಂದಲೇ ವ್ಯಯಿಸಿ ಕಲಿಸುತ್ತಿದ್ದರು.

ತಮ್ಮ ಆದಾಯದ ಲೆಕ್ಕವನ್ನು ಗಣಿಕಾಧ್ಯಕ್ಷನಿಗೆ ಕೊಡುತ್ತಿದ್ದರು. ರಾಜ್ಯದ ಆಡಳಿತ ವತಿಯಿಂದಲೇ ವಾಸಗೃಹಗಳು, ಉದ್ಯಾನವನಗಳು ವ್ಯವಸ್ಥೆಯಾಗುತ್ತಿದ್ದವು. ಗಣಿಕೆಯರ ಆದಾಯದ ಅರ್ಧದಷ್ಟನ್ನು ವೇತನವಾಗಿ ಪಡೆಯುತ್ತಿದ್ದರು. ಗಣಿಕೆಯರಿಗೆ ಸ್ವಂತ ಆಸ್ತಿ ಸಂಪಾದನೆಯ ಹಕ್ಕಿರಲಿಲ್ಲ.

ವೇಶ್ಯಾವಾಟಿಕೆಗಳ ತೆರಿಗೆಯಿಂದ ಬಂದ ಹಣವನ್ನು ಪಹರೆಯವರಿಗೆ ಸಂಬಳವಾಗಿ ಕೊಡುತ್ತಿದ್ದರು. ೧೨ನೇ ಶತಮಾನದ ಕೃತಿಯೊಂದರಲ್ಲಿ ಉಲ್ಲೇಖವಿರುವಂತೆ ಶೇ. ೨೫ ರಿಂದ ೩೦ ರಷ್ಟು ವೇಶ್ಯೆಯರ ಆದಾಯವನ್ನು ತೆರಿಗೆಯಾಗಿ ಪಡೆಯುತ್ತಿದುದ್ದರ ಉಲ್ಲೇಖವಿದೆ.

ವಾಸ್ತವತೆಯ ಕಟುಸತ್ಯ ಒಪ್ಪಿಕೊಂಡ ಅಂದಿನ ಸಮಾಜ ವೇಶ್ಯೆಯರನ್ನು ತಮ್ಮ ಪ್ರಜೆಗಳನ್ನಾಗಿ ಪರಿಗಣಿಸಿ ಅವರ ಹಕ್ಕು ಬಾಧ್ಯತೆಗಳೊಂದಿಗೆ ಅವರ ಬದುಕಗಳನ್ನು ಸಮತೋಲನದಲ್ಲಿಟ್ಟುಕೊಳ್ಳುವುದರೊಂದಿಗೆ ಅವರ ಬದುಕಿನ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬರುತ್ತಿದ್ದ ಒಂದು ವ್ಯವಸ್ಥೆ, ಒಂದು ಸಮತೋಲನ ಸೂತ್ರ, ಒಂದು ಬದ್ಧತೆ ಮತ್ತು ಜವಾಬ್ದಾರಿ ಇರುತ್ತಿತ್ತು. ಆ ಎಲ್ಲ ಅನುಭವಗಳು ನಮ್ಮೊಂದಿಗಿವೆ. ಇಂದಿನ ವ್ಯವಸ್ಥೆಯಲ್ಲಿಯೂ ಆ ಎಲ್ಲಾ ಆಯಾಮಗಳನ್ನು ಅಧ್ಯಯನ ಮಾಡಿ ತಾನೂ ರೂಪಿಸಿಕೊಳ್ಳಲು ಸಾಧ್ಯವಾದರೆ ಲೈಂಗಿಕ ವೃತ್ತಿ ಸಮೂಹದಿಂದ ಎಲ್ಲ ಆಯಾಮಗಳ ಸ್ವಾಸ್ಥ ಕಾಪಾಡಲು ಸಾಧ್ಯವಾಗಬಹುದು.

ಇನ್ನೊಂದು ಬಹು ಮುಖ್ಯವಾದ ಅಂಶವೆಂದರೆ ಈ ಲೈಂಗಿಕ ವೃತ್ತಿ ಈ ಸಮಾಜಕ್ಕೆ ಎಷ್ಟೇ ಕನಿಷ್ಟವಾದರೂ, ಅನಿಷ್ಟವೆಂದೆನಿಸಿದರೂ, ಪಿಡುಗು ಎನಿಸಿದರೂ ಸಾವಿರಾರು ವರ್ಷಗಳಿಂದ ನಿರಂತರವಾಗಿ ಈ ಸಮಾಜದೊಂದಿಗೆ ಸಾಗುತ್ತಲೇ ಇದೆ. ಈ ಕಟುಸತ್ಯದೊಂದಿಗೆ ಆ ಸಮುದಾಯದ ಸ್ವಾಸ್ಥ್ಯ ಕಾಪಾಡುವುದರೊಂದಿಗೆ ಈ ಸಮಾಜದ ಸ್ವಾಸ್ಥ್ಯ ಕೂಡ ತಳಕು ಹಾಕಿಕೊಂಡಿದೆ ಎನ್ನುವುದಂತೂ ಸತ್ಯ ಮತ್ತು ವಾಸ್ತವ. ಇಂತಹ ಒಂದು ಸಮುದಾಯ ತನ್ನ ನಾಯಕತ್ವವನ್ನು ತಾನೇ ವಹಿಸಿಕೊಳ್ಳಬೇಕಾದ ಅನಿವಾರ್ಯತೆಯೂ ಇದೆ. ಇಂತಹ ನಾಯಕತ್ವ ರೂಪಿಸುವ ಅತಿ ದೊಡ್ಡ ಹೊಣೆ ಈ ಸಮಾಜಕ್ಕೆ, ಈ ವ್ಯವಸ್ಥೆಗೆ ಇದೆ. ಅಂತಹ ಒಂದು ಒಗ್ಗೂಡಿಸುವಿಕೆಯ ಒಳ ಸುಳಿಗಳ ಸೂತ್ರಗಳೂ ಕೂಡ ಅತ್ಯಗತ್ಯವಾಗಿದೆ. ಅಂತಹ ಕೆಲವು ಸೂತ್ರಗಳನ್ನು ಮಾನವೀಯತೆಯನ್ನು ಮೆರೆಯುವ ಬುದ್ಧನ ಅಭಿವ್ಯಕ್ತಿಗಳಿಂದ ಆಯ್ಕೆಮಾಡಿಕೊಳ್ಳಲು ಇಚ್ಛಿಸುತ್ತೇನೆ.

ಬುದ್ಧ ಮಹಿಳೆಯ ಸಬಲೀಕರಣದ ಬಗ್ಗೆಯೇ ಬಹಳ ಆರೋಗ್ಯಕರವಾದ ಬದ್ಧತೆಯ ಅಭಿಪ್ರಾಯಗಳನ್ನು ಹೊಂದಿದ್ದರು. ಮಹಿಳೆಯ. ಸಬಲೀಕರಣ ಎಂದರೆ ಮಹಿಳೆ ಸ್ವ-ತಿಳುವಳಿಕೆ ಮೂಡಿಸಿಕೊಳ್ಳುವುದು, ಸಾಮಾಜಿಕ, ವೈಯುಕ್ತಿಕ ಜೀವನದೊಳಗೆ ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವಾಗ ಸಕ್ರಿಯ ಪಾತ್ರ ವಹಿಸುವ ಬಗ್ಗೆ ತಿಳುವಳಿಕೆ ಪಡೆದುಕೊಳ್ಳುವುದು ಸಬಲೀಕರಣ.

ಮಹಿಳೆಯ ಸಬಲೀಕರಣದ ಬಗ್ಗೆ ನಾವು ಮಾತಾಡುವುದಕ್ಕೂ ಮತ್ತು ವಾಸ್ತವ ಸಬಲೀಕರಣದ ನಡುವೆ ಒಂದು ದೊಡ್ಡ ಕಂದಕವಿದೆ. ಈ ಕಂದಕವನ್ನು ಬುದ್ಧನು ಎರಡು ವರ್ಣಗಳ ಮೂಲಕ ವಿಶ್ಲೇಷಿಸುತ್ತಾನೆ.

1 ಕ್ಲೇಶಾವರ್ಣ

2 ಗ್ನೇಯಾವರ್ಣ.

ಕ್ಲೇಶಾವರ್ಣ: ಮಹಿಳೆ ತನ್ನ ಬಗ್ಗೆ ತಾನು ತಿಳಿದಿರುವ ತಪ್ಪು ಗ್ರಹಿಕೆಯನ್ನು ವಿವರಿಸುತ್ತದೆ. ಕ್ಲೇಶಾವರ್ಣ ಎನ್ನುವುದು ಆತ್ಮ ದೃಷ್ಟಿ ಅಥವಾ ಆತ್ಮೀಯದೃಷ್ಟಿ, ತನ್ನ ಬಗ್ಗೆಯೇ ತನ್ನದೇ ದೃಷ್ಟಿಕೋನ ಹೊಂದಿರುವುದು. ಇದನ್ನೇ ಆತ್ಮೀಯ ದೃಷ್ಟಿ ಎನ್ನುವುದು.

ಮಹಿಳೆಗೂ ಒಳ್ಳೆಯ- ಕೆಟ್ಟ ಗುಣಗಳಿವೆ. ಅದನ್ನು ಬಿಟ್ಟರೆ ತಾಯಿ, ಸಹೋದರಿ, ಪತ್ನಿ ಮುಂತಾದ ಗುಣಗಳೆಲ್ಲ ಸಮಾಜ ಆರೋಪಿಸಿರುವಂಥವು, ಮಾನವ ಸಮಾಜ ರೂಪಿತವಾದವುಗಳು.

ಯಾವ ಮಹಿಳೆ ಆದರ್ಶಗಳಿಗೆ ಅರ್ಪಿಸಿಕೊಂಡಿರುತ್ತಾಳೆ ಅವಳನ್ನು ಈ ಸಮಾಜ ವಿಜೃಂಭಿಸುತ್ತದೆ. ಉದಾಹರಣೆಗೆ 'ಸತಿ' ಈ ಸಾಮಾಜಿಕ ಕಟ್ಟಳೆಗಳು, ಮೌಲ್ಯಗಳು ಅಪೇಕ್ಷಿಸುವುದನ್ನು ಸಾಕಾರಗೊಳಿಸುವುದೇ ಗುರಿ ಹಾಗೂ ಜನ್ಮದಿಂದಲೇ ಬಂದಂತಹವು ಎಂದು ನಂಬಿ ಬಿಟ್ಟಿದ್ದಾಳೆ. ಈ ಅಪ್ರಜ್ಞಾವಂತಿಕೆಯನ್ನೆ 'ಕ್ಲೇಶಾವರ್ಣ' ಎನ್ನುವುದು, ಈ ಅಪ್ರಜ್ಞಾವಂತಿಕೆಯೇ ಪೂರೈಸಲಾರದ, ನಿಯಂತ್ರಿಸಲಾರದ ಆಕಾಂಕ್ಷೆಯನ್ನು ಉತ್ತೇಜಿಸುತ್ತದೆ. ಒಳ್ಳೆಯ ಮಗಳು, ಒಳ್ಳೆಯ ತಾಯಿ, ಒಳ್ಳೆಯ ಪತ್ನಿ ಹೀಗೆ ಈ ತಪ್ಪು ಗ್ರಹಿಕೆಯೇ ತೃಷ್ಣವನ್ನು ಹೆಚ್ಚಿಸುತ್ತದೆ. ಅದಕ್ಕೋಸ್ಕರವೇ ಈ ಪಾತ್ರಗಳನ್ನು ನಿರ್ವಹಿಸಲು ಹೆಣಗಾಡುತ್ತಾಳೆ. ಏಕೆಂದರೆ ಈ ವ್ಯವಸ್ಥೆ ಮಹಿಳೆಯನ್ನು ಹಾಗೆಂದು ನಂಬಿಸಿಬಿಟ್ಟಿದೆ. ಈ ಮೇಲೆ ಹೇಳಿದ ಪಾತ್ರಗಳನ್ನು ಮಹಿಳೆ ನಿರ್ವಹಿಸಲು ಜೀವನವನ್ನು ಸವೆಸುವುದೇ ಎಲ್ಲ ನೋವಿಗೆ ಕಾರಣ. ಹಾಗೆಂದ ಮಾತ್ರಕ್ಕೆ ಮಹಿಳೆ ಎಲ್ಲವನ್ನು ಕೊಡವಿಕೊಳ್ಳಬೇಕೆಂದು ಅರ್ಥವಲ್ಲ. ಆದರೆ ಅದರ ಟೊಳ್ಳುತನವನ್ನು ಅರ್ಥಮಾಡಿಕೊಳ್ಳವುದು ಎಂದರ್ಥ. ಇದರಿಂದಲೇ ಮಹಿಳೆಯ ನಡೆವಳಿಕೆಗಳು ನಿರ್ಧಾರವಾಗುತ್ತವೆ. ಮಾನಸಿಕವಾಗಿ ಮಹಿಳೆಯನ್ನು ರೂಪಿಸುವಲ್ಲಿ 'ಕ್ಲೇಶಾವರ್ಣ' ಅತ್ಯಂತ ಮುಖ್ಯ ಪಾತ್ರ ವಹಿಸುತ್ತದೆ. ಇದನ್ನು ಅರ್ಥಮಾಡಿಕೊಳ್ಳದೆ ಮಹಿಳೆಯ ಸಬಲೀಕರಣ ಸಾಧ್ಯವಿಲ್ಲ.

ಗ್ನೇಯಾವರ್ಣ: ಬಾಹ್ಯ ಜಗತ್ತಿನಲ್ಲಿ ಕೆಲವು ಗುಣಗಳನ್ನು ನಂಬಿರುತ್ತೇವೆ ಆದರೆ ಅವು ಸ್ವಭಾವತಃ ಗುಣಗಳಲ್ಲ. ಅವು ಬಾಹ್ಯ ಜಗತ್ತಿನಲ್ಲಿ ಇರೋಲ್ಲ. ಕಾಲ್ಪನಿಕ ಪರಿಕಲ್ಪನೆಗಳು, ನಿರ್ಮಾಣಗೊಂಡ ಕಲ್ಪನೆಗಳು. ನಾವು ಅವುಗಳನ್ನೇ ನಿಜ ಎಂದು ನಂಬಿರುತ್ತೇವೆ. ಈ ನಿಟ್ಟಿನಲ್ಲಿ ಮಹಿಳೆ ಸಮಾಜ ಪರಸ್ಪರ ಅರ್ಥೈಸುವಿಕೆಯ ಪರಿಧಿಯಲ್ಲಿರುವಂತಹುದ್ದು.

೧. ಮಹಿಳೆ ತನ್ನನ್ನು ತಾನು ಅರ್ಥಮಾಡಿಕೊಂಡಿದ್ದಾಳೆ. ಚೈತನ್ಯ ತುಂಬಿಕೊಂಡಿದೆ. ಆದರೆ ಸಮಾಜ ಅದನ್ನು ಸ್ವೀಕರಿಸಲು ತಯಾರಿಲ್ಲ.

೨. ಸಮಾಜ ಮಹಿಳಾ ಸಬಲೀಕರಣಕ್ಕೆ ಅವಕಾಶಗಳನ್ನು ಕಲ್ಪಿಸಲು ಸಿದ್ಧವಾಗಿರುತ್ತದೆ. ಆದರೆ ಮಹಿಳೆ ಪೂರಕವಾಗಿ ಸಿದ್ಧಳಾಗಿರುವುದಿಲ್ಲ.

ಈ ಮೇಲಿನ ಎರಡೂ ಸಂದರ್ಭಗಳಲ್ಲಿಯೂ ಮಹಿಳೆಯ ಸಬಲೀಕರಣ ಸಾಧ್ಯವಿಲ್ಲ. ಬುದ್ಧನ ನಿಲುವುಗಳು ಮಹಿಳಾ ಸಬಲೀಕರಣದ ಅಭಿವ್ಯಕ್ತಗಳು ಬಹಳ ಪ್ರಬುದ್ಧವಾದವುಗಳು. ಅದರಲ್ಲೂ ವಿಶೇಷವಾಗಿ ಲೈಂಗಿಕ ವೃತ್ತಿ ಮಹಿಳಾ ಸಮುದಾಯದ ಸಬಲೀಕರಣದ ನಿಟ್ಟಿನಲ್ಲಿ ಬುದ್ಧನ ಆಶಯಗಳು, ತಾತ್ವಿಕ ನಿಲುವುಗಳು ಮಾನವೀಯತೆಯ ನೆಲೆಯಲ್ಲಿದ್ದು ಅತ್ಯಂತ ಸೂಕ್ತವಾಗಿವೆ ಎಂಬುದು ನನ್ನ ಅಭಿಪ್ರಾಯವಾಗಿದೆ.

- ಮಹಿಳೆ ತನ್ನನ್ನು ತಾನು ಹೇಗೆ ಪರಿಗಣಿಸುತ್ತಾಳೆ (ಅವಳ ಬಗ್ಗೆಯೇ ಅವಳಿಗೆ ಇರುವ ಮನೋಭಾವ)
- ಸಮಾಜದ ಬಗ್ಗೆ ಮಹಿಳೆಯ ಮನೋಭಾವ
- ಮಹಿಳೆಯ ಬಗ್ಗೆ ಸಮಾಜದ ದೃಷ್ಟಿಕೋನ

ಈ ಮೇಲಿನ ಮೂರು ವಿಚಾರಗಳು ಮಹಿಳೆಯ ಸಬಲೀಕರಣದ ಆಧಾರ ಸ್ಥಂಭಗಳು. ಆದರೆ ವಾಸ್ತವಾಗಿ ಲೈಂಗಿಕ ವೃತ್ತಿ ಮಹಿಳೆಯ ಸಬಲೀಕರಣಕ್ಕೆ ದೊಡ್ಡ ಅಡಚಣೆಗಳೆಂದರೆ,

- ಲೈಂಗಿಕ ವೃತ್ತಿ ಮಹಿಳೆಗೆ ತನ್ನ ಬಗ್ಗೆಯೇ ಬಹಳ ತಪ್ಪು ಗ್ರಹಿಕೆಗಳಿವೆ ಮತ್ತು ಪೂರ್ವಾಗ್ರಹಗಳಿವೆ.
- ಹಾಗೆಯೇ ಈ ಸಮಾಜದ ಬಗ್ಗೆಯೇ ಅವಳಿಗೆ ತಪ್ಪು ಗ್ರಹಿಕೆಗಳಿವೆ
- ಈ ಸಮಾಜಕ್ಕೆ ಲೈಂಗಿಕ ವೃತ್ತಿ ಮಹಿಳಾ ಸಮುದಾಯದ ಬಗ್ಗೆಯೇ ತಪ್ಪು ಗ್ರಹಿಕೆ ಮತ್ತು ಪೂರ್ವಾಗ್ರಹಗಳಿವೆ.

ಬಹಳ ಸವಿಸ್ತಾರವಾಗಿ, ಕಾಳಜಿ ಮತ್ತು ಬದ್ಧತೆಯಿಂದ ಇವುಗಳು ಸರಿಹೋಗಬೇಕಾಗುತ್ತದೆ. ಆ ನಿಟ್ಟಿನಲ್ಲಿ ಈ ಸಮಾಜ ಹಾಗೂ ವ್ಯವಸ್ಥೆ ಯೋಚಿಸಿ, ಯೋಜಿಸಬೇಕಾಗಿದೆ.


ಆಧಾರಗಳು:

1. ಮೂಲ: ಪಂಡಿತ್ ಜವಹರಲಾಲ್ ನೆಹರು, ಅನು: ಎ.ಎಸ್. ಪ್ರಭಾಕರ್,ನೆಹರು ಚಿಂತನೆಗಳು (ಲೇಖನದಿಂದ) ಪುಟ 168, 171

2. ರಹಮತ್ ತರೀಕೆರೆ- ಸಮುದಾಯ ಅಧ್ಯಯನಗಳು ಹೇಗೆ ನಡೆಯುತ್ತಿವೆ? (ಲೇಖನದಿಂದ) .ಪುಟ.44, 45

3. HIV/AIDS cases rising sharply in India" - Kumar.s. Page 62,

4. Population division of the Department of Economic and Social Affairs of the United Nations Secretariat (2003) World. Population prospects the 2002 Revision; Highlights, New yark Feb: 78-90



ಅಧ್ಯಾಯ-೧೨

ಸಮಾರೋಪ

ಫಲಿತಗಳು



❖ ವೇಶ್ಯಾವೃತ್ತಿ ಜಗತ್ತಿನ ಅತ್ಯಂತ ಪ್ರಾಚೀನ ವೃತ್ತಿ ಎನ್ನುವಾಗಲೇ ಇಂದಿನ ಆಧುನಿಕ ಯುಗದಲ್ಲೂ ವ್ಯಾಪಕವಾಗಿ ಅಸ್ತಿತ್ವದಲ್ಲಿದೆ. ಎಂದರೆ ಪುರುಷ ಪ್ರಾಧಾನ್ಯತೆಯ ಈ ವ್ಯವಸ್ಥೆಯಲ್ಲಿ ಒಂದು ಸಾಮಾಜಿಕ ಬೇಡಿಕೆಯನ್ನು ಅದು ನಿರಂತರವಾಗಿ ತಪ್ಪದೆ ಪೂರೈಸುತ್ತಿರುವುದೇ ಅದರ ಮುಂದುವರಿಕೆಗೆ ಒಂದು ಪ್ರಬಲ ಕಾರಣ.

❖ ಆಧುನಿಕ ಯುಗದ ಬೀಜ ಮಂತ್ರಗಳಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳು ವಿಶಾಲ ಜನಸಮೂಹಗಳ ಬದುಕನ್ನು ಅಸ್ಥಿರಗೊಳಿಸುತ್ತಿವೆ. ಈ ಪ್ರಕ್ರಿಯೆ ವೇಶ್ಯಾವೃತ್ತಿಗಿಳಿಯುವ ಮಹಿಳೆಯರ ಸಂಖ್ಯೆಯನ್ನು ಅಗಾಧವಾಗಿ ಹೆಚ್ಚಿಸುತ್ತಿದೆ.

❖ ಮಾನವನ ಇತರೆ ಆಕಾಂಕ್ಷೆ ಮತ್ತು ಬಯಕೆಗಳಂತೆ ಲೈಂಗಿಕ ಅಗತ್ಯಗಳು ಮೂಲಭೂತವಾದ ಮತ್ತು ಅತ್ಯಗತ್ಯವಾದ ಮಾನವೀಯ ಸ್ಥಿತಿಗಳು. ಈ ಲೈಂಗಿಕ ವೃತ್ತಿ ಬಗೆಗಿನ ನೈತಿಕ ಮತ್ತು ರಾಜಕೀಯ ಆಲೋಚನೆಗಳು ನಿರ್ದಿಷ್ಟ ಐತಿಹಾಸಿಕ ಸಂದರ್ಭದಲ್ಲಿ ನಿರ್ಮಾಣಗೊಳ್ಳುವ ಸಾಮಾಜಿಕ ಸಂರಚನೆಗಳು. ಲೈಂಗಿಕತೆಯ ತತ್ವಗಳು ಪಿತೃಪ್ರಾಧಾನ್ಯತೆಯ ಸಾಮಾಜಿಕ ಸಂರಚನೆಯಲ್ಲಿ ಬೇರುಬಿಟ್ಟವೆ. ಇಲ್ಲಿ ಬರುವ ಖುಷಿ, ಸಂತೋಷ, ಸೌಲಭ್ಯ, ಆತ್ಮೀಯತೆ ಎಲ್ಲವೂ ವಿಶೇಷ ಅಧಿಕಾರವುಳ್ಳ ಪುರುಷರ ಮರ್ಜಿಯಲ್ಲಿವೆ.

❖ ವೇಶ್ಯಾ ವೃತ್ತಿಯಲ್ಲಿ ನ ಮಹಿಳೆಯರನ್ನು ಸಾಮಾಜಿಕ ಆರೋಗ್ಯಕ್ಕೆ, ಲೈಂಗಿಕ ನೈತಿಕತೆಗೆ, ಸಾಮಾಜಿಕ ಸ್ಥಿರತೆಗೆ ಮತ್ತು ನಾಗರೀಕ ವ್ಯವಸ್ಥೆಗೆ, ಕೌಟುಂಬಿಕ ಚೌಕಟ್ಟಿಗೆ ಅಪಾಯವನ್ನೊಡ್ಡುವ ಮಹಿಳಾ ಗುಂಪೆಂದು ಈ ಸಮಾಜ ಪರಿಭಾವಿಸುತ್ತದೆ.

❖ ಖಾಸಗಿ ಆಸ್ತಿ ಒಡೆತನ ಮತ್ತು ಪಿತೃತ್ವದ ಸಂರಕ್ಷಣೆ ಮಹಿಳೆಯ ಸಂತಾನೋತ್ಪತ್ತಿ ಮತ್ತು ಲೈಂಗಿಕ ಸೇವೆಯ ನಿಯಂತ್ರಣದಲ್ಲಡಕವಾಗಿವೆ. ಮೂಲಭೂತವಾಗಿ ಲೈಂಗಿಕತೆಯನ್ನು ಸಂತಾನಾಭಿವೃದ್ಧಿಯ ಸಾಧನವಾಗಿ ಮಾತ್ರ ನಮ್ಮ ಸಮಾಜ ಪರಿಗಣಿಸುತ್ತದೆ. ಅದರೊಂದಿಗೆ ತಳಕು ಹಾಕಿಕೊಂಡಿರುವ ಆನಂದ, ಅಪೇಕ್ಷೆಗಳನ್ನು ನಿರಾಕರಿಸುತ್ತದೆ. ಸಂತಾನಾಭಿವೃದ್ಧಿಯನ್ನು ಮೀರಿದ ಯಾವುದೇ ''ಸಾಮಾಜಿಕ ಮಾನ್ಯತೆಯನ್ನು'' ಲೈಂಗಿಕ ಕ್ರಿಯೆಗೆ ನೀಡುವುದಿಲ್ಲ.

❖ ಪ್ರಾಚೀನ ಬುಡಕಟ್ಟು ಸಮಾಜಗಳಲ್ಲಿ ಲೈಂಗಿಕ ಸ್ವಾತಂತ್ರ್ಯವಿರುತ್ತಿತ್ತೇ ವಿನಃ ವೇಶ್ಯಾವೃತ್ತಿ ಇರಲಿಲ್ಲ ಎಂದು ವೆಸ್ಟರ್ ಮಾರ್ಕ್ ಪ್ರತಿಪಾದಿಸಿದ್ದಾರೆ.

❖ ಪುರಾತನ ಬುಡಕಟ್ಟು ಸಮಾಜಗಳಿಗಿಂತಲೂ ಪುರಾತನ ನಾಗರೀಕ ಸಮಾಜಗಳಲ್ಲಿ ವೇಶ್ಯಾವೃತ್ತಿಯ ಅಸ್ತಿತ್ವವನ್ನು ವಿದ್ವಾಂಸರುಗಳು ಗುರುತಿಸಿದ್ದಾರೆ.

❖ ವಿವಾಹ ಪದ್ಧತಿ ರೂಢಿಗೆ ಬಂದದ್ದು, ವಿವಾಹ ಪೂರ್ವ ಮತ್ತು ವಿವಾಹಾನಂತರದ ಲೈಂಗಿಕ ಸ್ವಾತಂತ್ರ್ಯಕ್ಕೆ ಒಡ್ಡಿದ ನಿಷೇಧ, ವಿವಾಹ ಸಂಬಂಧದಲ್ಲಿ ಮೂಡಿದ ಪಾತಿವ್ರತ್ಯದ ಕಲ್ಪನೆ ವೇಶ್ಯಾವೃತ್ತಿಯ ಉಗಮಕ್ಕೆ ಕಾರಣ ಎಂದು ವಿದ್ವಾಂಸರುಗಳು ತರ್ಕಿಸಿದ್ದಾರೆ.

❖ ಸ್ತ್ರೀಯನ್ನು ತನ್ನ ಸ್ವತ್ತೆಂದು ಭಾವಿಸುವ ಮನೋಧರ್ಮ, ಸಂತಾನಾಭಿಲಾಷೆ, ಮದುವೆ ಮತ್ತು ಕುಟುಂಬದಂತಹ ಜೀವನಕ್ರಮಗಳ ರೂಪ ನಿರ್ಮಾಣಕ್ಕೆ ಕಾರಣವಾಗಿದೆ.

❖ ಅತ್ಯಂತ ಕರುಣೆಯಿಂದ, ಅಸಹಾಯಕತೆಯ, ಸಂಪನ್ಮೂಲಗಳೇ ಇಲ್ಲದ ದೌರ್ಜನ್ಯಕ್ಕೆ ಗುರಿಯಾದ, ಸಾಮಾಜಿಕವಾಗಿ ಪ್ರತ್ಯೇಕವಾದ ಮಹಿಳೆಯರ ಗುಂಪೆಂದು ನಮ್ಮ ಜನಪ್ರಿಯ ಸಾಹಿತ್ಯ, ಮಾಧ್ಯಮಗಳು, ಸಿನೇಮಾಗಳು ನಿರಂತರವಾಗಿ ಬಿಂಬಿಸಲು ಪ್ರಯತ್ನಿಸುತ್ತಿವೆ. ಈ ಮನೋಭಾವ ಆ ಸಮುದಾಯವನ್ನು ಮನುಷ್ಯರನ್ನಾಗಿ ಬದುಕುವ ನಿಟ್ಟಿನಲ್ಲಿ ಯಾವ ರೀತಿಯಲ್ಲೂ ಸಹಕಾರವಾಗುವುದಿಲ್ಲ.

❖ ಲೈಂಗಿಕ ಉದ್ದಿಮೆಯ ಇಡೀ ಸಂರಚನೆ ಮತ್ತು ನಿರ್ವಹಣೆಯನ್ನು ಸಾಮಾಜಿಕ ವ್ಯವಸ್ಥೆ ಮತ್ತು ಲೈಂಗಿಕ ನೀತಿಗಳ ಮುಖವಾಡದಡಿಯಲ್ಲಿ ಅಡಗಿಸಿಡಲಾಗುತ್ತದೆ. ಈ ವೃತ್ತಿಗೆ ಪಾರದರ್ಶಕತೆ/ಅಧಿಕೃತತೆ ಇಲ್ಲ. ಈ ಲೈಂಗಿಕ ಉದ್ದಿಮೆಯ ಬೇಡಿಕೆಗಳ ಬಗ್ಗೆ ಅಥವಾ ಅಗತ್ಯಗಳ ಬಗ್ಗೆ ಯಾವುದೇ ಚರ್ಚೆಗೆ ಈ ಸಮಾಜ ಕುರುಡಾಗಿದೆ.

❖ ಈ ಸಮಾಜದಿಂದ ಲೈಂಗಿಕ ವೃತ್ತಿ ಮಹಿಳಾ ಸಮುದಾಯವನ್ನು ತೊಡೆದುಹಾಕಿ, ಸಮಾಜವನ್ನು ಶುದ್ಧಗೊಳಿಸಿ ಅದನ್ನು ಪವಿತ್ರಗೊಳಿಸುವ ಪರಿಕಲ್ಪನೆಯನ್ನು ಪ್ರಚಲಿತವಾಗಿಟ್ಟಿವೆ. ಈ ಮಹಿಳೆಯರ ಪುನರ್ವಸತಿ ಬಗ್ಗೆ, ಅವರ ಜೀವನವನ್ನು ಸುಧಾರಿಸುವ ಬಗ್ಗೆ, ಅವರ ಮೇಲೆ ಶಿಸ್ತನ್ನು ಹೇರುವ ಮತ್ತು ನಿಯಂತ್ರಿಸುವ ಬಗ್ಗೆ ಈ ಸಮಾಜ ಮಾತನಾಡುತ್ತಿದೆ. ಕೆಲವು ಸಂಸ್ಥೆಗಳು ಲೈಂಗಿಕವೃತ್ತಿ ಮಹಿಳೆಯರನ್ನು ಸ್ವಲ್ಪ ಆದಾಯ ಉತ್ಪಾದಿಸುವ ಚಟುವಟಿಕೆಗಳ ಮೂಲಕ ಪುನರ್ವಸತಿ ಕಲ್ಪಿಸುವ ಪ್ರಯತ್ನಗಳಲ್ಲಿ ತೊಡಗಿವೆ. ಆದರೆ ಇದುವರೆವಿಗೂ ಇಂತಹ ಯಾವುದೇ ಪ್ರಯತ್ನಗಳು ಸಹ ಅವರು 'ಮಾಜಿ ವೇಶ್ಯೆಯರು' ಎಂಬ ಕಳಂಕವನ್ನು ಅಳಿಸುವ ಪ್ರಯತ್ನಗಳಲ್ಲಿ ಯಶಸ್ಸನ್ನು ಕಂಡಿಲ್ಲ.

❖ ಲೈಂಗಿಕ ವೃತ್ತಿ ಮಹಿಳೆಯರನ್ನು ಪರಿಪೂರ್ಣವಾಗಿ ನೋಡಬೇಕು. ಲೈಂಗಿಕ ವೃತ್ತಿ ಮಹಿಳೆಯರು ಪರಿಪೂರ್ಣ ವ್ಯಕ್ತಿತ್ವವುಳ್ಳವರು. ಅವರದ್ದೇ ಆದ ಭಾವನಾತ್ಮಕ, ಭೌತಿಕ ಅಗತ್ಯಗಳಿವೆ. ಅವರು ಒಂದು ನಿರ್ದಿಷ್ಟವಾದ ಸಾಮಾಜಿಕ, ರಾಜಕೀಯ ಮತ್ತು ತಾತ್ವಿಕ ಸಂದರ್ಭಗಳಲ್ಲಿ ವಾಸಮಾಡುತ್ತಿರುತ್ತಾರೆ. ಇವುಗಳೇ ಅವರ ಜೀವನವನ್ನು, ಅವರ ಆರೋಗ್ಯವನ್ನು ನಿರ್ಧಾರ ಮಾಡುತ್ತಿರುತ್ತವೆ.

❖ ಅಪೇಕ್ಷಣೀಯವಾದದ್ದೆಂದರೆ ಸ್ವತಂತ್ರವಾದ, ಪ್ರಜಾಸತ್ತಾತ್ಮಕವಾದ, ಭೀತಿರಹಿತವಾದ, ಪರಸ್ಪರ ಸಂತೋಷದಾಯಕವಾದ, ಹಾಗೂ ಸುರಕ್ಷಿತವಾದ ಲೈಂಗಿಕ ಅವಕಾಶಗಳು ಸ್ತ್ರೀ ಮತ್ತು ಪುರುಷರಿಗೆ ಸಮಾನವಾಗಿ ಲಭ್ಯವಾಗಬೇಕಿದೆ. ಲೈಂಗಿಕತೆ ಎಂದರೆ ಬೇಜವಾಬ್ದಾರಿ ಮತ್ತು ಇತರರ ಒಳಿತನ್ನ ಕಡೆಗಣಿಸುವುದೆಂಬ ಮನೋಭಾವ ಬದಲಾಗಬೇಕು.

❖ ಈ ಮಹಿಳೆಯರ ಮೇಲೆ ಎಸಗಲಾಗುತ್ತಿರುವ ದೈನಂದಿನ ದೌರ್ಜನ್ಯಗಳನ್ನು ತುರ್ತಾಗಿ ಮತ್ತು ನಿರಂತರವಾಗಿ ಎದುರಿಸಬೇಕು ಮತ್ತು ಪ್ರತಿರೋಧಿಸಬೇಕು. ಇದನ್ನು ವೈಯಕ್ತಿಕ ನೆಲೆಯಲ್ಲಿ ಸಾಧಿಸಲು ಸಾಧ್ಯವಿಲ್ಲ. ಸಾಮುದಾಯಿಕ ನೆಲೆಯಲ್ಲಿ ಇಡೀ ಸಮಾಜ ಮತ್ತು ಮಹಿಳಾ ಸಮುದಾಯ ಕೈಗೆತ್ತಿಕೊಂಡಾಗ ಸಾಧ್ಯವಾಗುತ್ತದೆ.

❖ ಹೆಚ್.ಐ.ವಿ/ಏಡ್ಸ್‌ನ ಪರಿಣಾಮಗಳನ್ನು, ಅಪಾಯಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಈ ಸೋಂಕಿಗೆ ಭಾರತದಂತಹ ತೃತೀಯ ದೇಶಗಳು ಶರವೇಗದಲ್ಲಿ ಬಲಿಯಾಗುತ್ತಿರುವುದು ವಾಸ್ತವವಾಗಿದೆ. ಸೋಂಕಿನ ಪ್ರಸರಣದ ವಾಹಕಳೆಂದು ಲೈಂಗಿಕವೃತ್ತಿ ಮಹಿಳೆಯ ಮೇಲೆ ಆಪಾದನೆಯನ್ನು ಮೀರಿದ ಜವಾಬ್ದಾರಿಗಳು, ಕಾಳಜಿಗಳು ಇಂದಿನ ಸಮಾಜಕ್ಕೆ ಅನಿವಾರ್ಯವಾಗಿವೆ.

❖ ಈ ಸಮಸ್ಯೆಯ ಪರಿಹಾರಕ್ಕೆ ಲೈಂಗಿಕವೃತ್ತಿ ಮಹಿಳೆಯರಲ್ಲಿ ಸುರಕ್ಷಿತ ಲೈಂಗಿಕಕ್ರಿಯೆ ಬಗ್ಗೆ ಜಾಗೃತಿ ಮೂಡಿಸಿ ಈ ನಿಟ್ಟಿನಲ್ಲಿ ಅವರ ಸಂವಹನ ಮತ್ತು ವ್ಯವಹಾರ ಕುದುರಿಸುವ ಕೌಶಲ್ಯಗಳನ್ನು ಉತ್ತಮ ಪಡಿಸುವ ಪ್ರಯತ್ನ ಆಗಬೇಕಿದೆ. ಅದಕ್ಕಿಂತ ಮುಖ್ಯವಾಗಿ ಅವಳು 'ಸ್ವತಃ ತನ್ನನ್ನೇ ಬಹಳ ಪ್ರಮುಖಳು' ಎಂದು ಪರಿಗಣಿಸುವಂತಹ ಅರಿವು ಮೂಡಿಸಬೇಕಿದೆ.

❖ ಸ್ವಯಂ ಸೇವಾ ಸಂಸ್ಥೆಗಳ ಅಥವಾ ವಿದೇಶೀ ಹಣದ ಏಜೆನ್ಸಿಗಳ ಕೂಲಿಯ ಕ್ರಾಂತಿ ಸ್ವರೂಪದ ಕಾರ್ಯಕ್ರಮಗಳು ಈ ಯಾವುದೇ ಪ್ರಶ್ನೆಗಳನ್ನು ಅತ್ಯಂತ ಕ್ಷೀಣವಾಗಿ ಎತ್ತುವ ಪ್ರಯತ್ನಗಳನ್ನು ಮಾಡಿದ್ದರೂ ಅವುಗಳು ಈ ವಿಷಯದ ಗಹನತೆಯನ್ನಾಗಲೀ, ಗಂಭೀರತೆಯನ್ನಾಗಲೀ ಮತ್ತು ಸಂಕೀರ್ಣತೆಯನ್ನಾಗಲೀ ಅರಿಯುವ ಅರ್ಥಪೂರ್ಣ ಪ್ರಯತ್ನಗಳನ್ನು ಮಾಡಲು ಸಾಧ್ಯವಾಗಿಲ್ಲ.

❖ ಈ ವಿಚಾರದ ಒಂದು ಅವಲೋಕನವನ್ನು ಸಮಾಜ ತನ್ನಷ್ಟಕ್ಕೆ ತಾನು ಮಾಡಿಕೊಳ್ಳದೇ ಇರುವುದರಿಂದ ಲೈಂಗಿಕವೃತ್ತಿ ಮಹಿಳಾ ಸಮುದಾಯ ಈ ಸಮಾಜದೊಂದಿಗೆ ಇಂತಹ ಪ್ರಕ್ರಿಯೆಯೊಂದನ್ನು ಆರಂಭಿಸುವ ಚಳುವಳಿಗೆ ಬೀಜಾಂಕುರ ಮಾಡಬೇಕಾಗಿದೆ.

❖ ಈ ಸಮುದಾಯಕ್ಕೆ ಒಂದು ಚಳುವಳಿಯ ಸ್ವರೂಪ ಕೊಡುವುದಕ್ಕೆ ಆ ಸಮುದಾಯವನ್ನು ಒಗ್ಗೂಡಿಸುವುದು ಬಹಳ ಮುಖ್ಯವಾಗುತ್ತದೆ. ಈ ಒಗ್ಗೂಡಿಸುವ ಪ್ರಕ್ರಿಯೆ ಬೇರಾವುದೇ ಜನಸಮುದಾಯವನ್ನು ಒಗ್ಗೂಡಿಸುವುದಕ್ಕಿಂತಲೂ ವಿಶಿಷ್ಟವಾದ ಪ್ರಯತ್ನದ ಮಾದರಿಗಳನ್ನು ಮತ್ತು ಮನೋಭಾವವನ್ನು ಬೇಡುತ್ತದೆ. ಇದು ಯಾವುದೋ ಇತರೆ ಒಂದು ವೃತ್ತಿನಿರತ ಜನ ಸಮುದಾಯದ ಒಗ್ಗೂಡಿಸುವಿಕೆಯ ಸ್ವರೂಪದಲ್ಲಿರಲು ಸಾಧ್ಯವಿಲ್ಲ.

❖ ಲೈಂಗಿಕ ವೃತ್ತಿ ಮಹಿಳೆಯರ ಸಮುದಾಯಗಳನ್ನು ಆಧುನಿಕ ಬುಡಕಟ್ಟುಗಳಾಗಿ ಪರಿಗಣಿಸಿದರೆ ಅವರನ್ನು ಸಂಘಟಿಸುವ ಸೂತ್ರ ಅಥವಾ ಒಂದು ಎಳೆ ದಿಕ್ಸೂಚಿಯಾಗಬಹುದು. ಇಂದಿನ ಆಧುನಿಕತೆ ಬುಡಕಟ್ಟುಗಳ ಮೇಲೆ ವಿಕಾರ ಸ್ವರೂಪದಲ್ಲಿ ಎರಗಿರುವ ಬೆನ್ನಲ್ಲೇ ಮೂಲ ಬುಡಕಟ್ಟುಗಳು ತಮ್ಮ ಸ್ವರೂಪಗಳನ್ನು ಕಳೆದುಕೊಂಡು ಅತಂತ್ರ ಬದುಕಿಗೆ ಒಡ್ಡಿಕೊಳ್ಳುತ್ತಿರುವುದು ವಾಸ್ತವವಾಗಿದೆ. ಇಂತಹ ಬುಡಕಟ್ಟುಗಳ ಅನೇಕ ಅಂಶಗಳನ್ನು ಹೊಂದಿರುವ ಲೈಂಗಿಕವೃತ್ತಿ ಸಮುದಾಯಗಳನ್ನು ಒಗ್ಗೂಡಿಸುವ ಮತ್ತು ಆ ನಿಟ್ಟಿನಲ್ಲಿ ಗುರುತಿಸುವ ಅಗತ್ಯ ಎದ್ದು ಕಾಣುತ್ತಿದೆ.

❖ ಆಯಾ ಪ್ರದೇಶದ ಚೌಕಟ್ಟಿನೊಳಗಿನ ಲೈಂಗಿಕವೃತ್ತಿ ಸಮುದಾಯವನ್ನು ಒಂದೊಂದು ಆಧುನಿಕ ಬುಡಕಟ್ಟುಗಳಾಗಿ ನೋಡುವುದರಿಂದ ಹೆಚ್ಚು ಪರಿಣಾಮಕಾರಿಯಾಗಿ ಆ ಸಮುದಾಯವನ್ನು ಮಾನವೀಯತೆಯ ನೆಲೆಗಟ್ಟಿನಲ್ಲಿ ರೂಪಿಸಲು ಮತ್ತು ಅವರ ಹಕ್ಕುಬಾಧ್ಯತೆಗಳನ್ನು ಅವರ ಬದುಕಿನೊಂದಿಗೆ ಸ್ಪಂದಿಸುವಂತೆ ಮಾಡಲು ಸಾಧ್ಯವಾಗುತ್ತದೆ.

❖ ಈ ಸಂದರ್ಭದಲ್ಲಿ ಮಾನವಶಾಸ್ತ್ರಜ್ಞರಾದ 'ವೆರಿಯರ್ ಎಲ್ವಿನ್' ಮತ್ತು 'ಡೆಸ್ಮಂಡ್‌ಮಾರಿಸ್' ಬುಡಕಟ್ಟುಗಳನ್ನು ಒಗ್ಗೂಡಿಸುವ ಮತ್ತು ಸಬಲೀಕರಣಗೊಳಿಸುವ ಬಗ್ಗೆ ಹೊಂದಿದ್ದ ಪರಿಕಲ್ಪನೆಯು ಲೈಂಗಿಕ ವೃತ್ತಿ ಮಹಿಳಾ ಸಮುದಾಯದ ಒಗ್ಗೂಡಿಸುವಿಕೆಗೆ ಸೂಕ್ತವೆನಿಸುತ್ತದೆ.

❖ ಭಾರತದ ಮೊದಲ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂರವರು ಆದಿವಾಸಿಗಳ ಅಭಿವೃದ್ಧಿಯ ಬಗ್ಗೆ ಹೊಂದಿದ್ದ ಸ್ಪಷ್ಟ ನಿಲುವುಗಳು ಲೈಂಗಿಕವೃತ್ತಿ ಮಹಿಳಾ ಸಮುದಾಯಕ್ಕೂ ಖಂಡಿತಾ ಸಹಕಾರಿಯಾಗಬಲ್ಲುವು. ಹಾಗೂ ಅವರ 'ಸುವರ್ಣ ಮಾಧ್ಯಮ ಸೂತ್ರ' ಲೈಂಗಿಕ ವೃತ್ತಿ ಸಮುದಾಯದ ಬದುಕಿನ ಜಟಿಲತೆಗಳನ್ನು, ಗೊಂದಲಗಳನ್ನು ಪರಿಹರಿಸಲು ಬಹಳ ಸೂಕ್ತವಾಗಿದೆ.


❖ ಲೈಂಗಿಕ ವೃತ್ತಿ ಸಮುದಾಯದ ಬದುಕುಗಳನ್ನು ತೆರೆದುಕೊಳ್ಳಲು ಸರ್ಕಾರಕ್ಕೆ, ಹಣಕಾಸು ಸಹಾಯ ಸಂಸ್ಥೆಗಳಿಗೆ, ಆ ಸಮುದಾಯದ ಬದುಕು, ಸಬಲೀಕರಣದ ನಿಟ್ಟಿನಲ್ಲಿ ಕಾಳಜಿ, ಬದ್ಧತೆಯಿರುವವರಿಗೆ ಆಲೋಚಿಸಲು ಬುದ್ಧ ಮತ್ತು ಕೌಟಿಲ್ಯನ ಕೆಲವು ತಾತ್ವಿಕವಾದ ಸೂತ್ರಗಳು ಇಂದಿನ ವ್ಯವಸ್ಥೆಗೆ ಸಹಕಾರಿಯಾಗುತ್ತವೆ.

❖ಕ್ರಿ.ಪೂ. ೩೦೦ ರಿಂದ ಕ್ರಿ.ಶ. ೧೫೨೦ರ ಕಾಲಘಟ್ಟದಲ್ಲಿ ರಾಜರ ಆಳ್ವಿಕೆಯಲ್ಲಿ ವೇಶ್ಯಾವಾಟಿಕೆಯನ್ನು ಪರಿಗಣಿಸಿದ್ದ ರೀತಿ ಹಾಗೂ ವೇಶ್ಯಾವಾಟಿಕೆಯನ್ನು ಅರ್ಥವ್ಯವಸ್ಥೆಯ ಒಂದು ಭಾಗವಾಗಿ, ಆದಾಯದ ಮೂಲವಾಗಿ, ಆರ್ಥಿಕ ಚಟುವಟಿಕೆಯಾಗಿ ನೋಡುತ್ತಿದ್ದುದು ಕಂಡು ಬರುತ್ತದೆ. ಈ ಮೂಲಕ ಇಂದಿನ ಸರ್ಕಾರ ಈ ನಿಟ್ಟಿನಲ್ಲಿ ಒಂದಷ್ಟು ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

❖ ಎಷ್ಟೇ ಜೀವಂತಿಕೆಯಿಂದ ಇದ್ದರೂ ಈ ವೃತ್ತಿಗೆ ಕಳಂಕ ತಪ್ಪಿಲ್ಲ. ಅಂತಹ ಅನಿವಾರ್ಯತೆಯನ್ನು ಕೌಟಿಲ್ಯ ಮಾನ್ಯ ಮಾಡಿ ಅದಕ್ಕೊಂದು ಚೌಕಟ್ಟನ್ನು ಕಟ್ಟಿಕೊಟ್ಟನು. ಅದನ್ನು ಅಂದಿನ ರಾಜಾಡಳಿತಗಳು ಸಮರ್ಥವಾಗಿ ಜಾರಿಗೊಳಿಸಿಯೂ ಇದ್ದವು. ಕೌಟಿಲ್ಯನ ಆ ಸೂತ್ರಗಳು ಸಾರ್ವತ್ರಿಕವಾದವು. ಅವು ಸರ್ವಕಾಲಿಕವಾಗ ಬಹುದಾದ ಶಕ್ತಿಯನ್ನು, ಹೊಣೆಯನ್ನು ಹೊಂದಿವೆ. ಈ ಮೂಲಕ ಲೈಂಗಿಕ ವೃತ್ತಿ ಸಮುದಾಯವನ್ನು ಹಕ್ಕುಬಾಧ್ಯತೆಗಳ ನೆಲೆಗಟ್ಟಿನಲ್ಲಿ ನೋಡಲು ಸಾಧ್ಯವಾಗಬಹುದು.

❖ ಲೈಂಗಿಕ ವೃತ್ತಿ ಮಹಿಳಾ ಸಮುದಾಯವನ್ನು ಒಗ್ಗೂಡಿಸುವ ಮತ್ತು ನಾಯಕತ್ವ ರೂಪಿಸುವ ಒಳಸುಳಿಗಳ ಸೂತ್ರಗಳನ್ನು ಕಂಡುಕೊಳ್ಳುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಬಹಳ ವೈಜ್ಞಾನಿಕವಾದ, ಮಾನವೀಯ ನೆಲೆಗಟ್ಟಿನಲ್ಲಿ, ಸಮಾನತಾ ದೃಷ್ಟಿಯಿಂದ ಮಹಿಳೆಯ ಬಗ್ಗೆ ಹಿಂದೆಯೇ ರೂಪಿಸಿರುವ ಬುದ್ಧನ ಸಬಲೀಕರಣದ ಸೂತ್ರಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

❖ಮಹಿಳೆಯ ಸಬಲೀಕರಣ ಎಂದರೆ ಮಹಿಳೆ ಸ್ವ-ತಿಳುವಳಿಕೆ ಮೂಡಿಸಿಕೊಳ್ಳುವುದು. ಸಾಮಾಜಿಕ, ವೈಯಕ್ತಿಕ ಜೀವನದೊಳಗಡೆ ಸ್ವತಂತ್ರ್ಯ ತೀರ್ಮಾನ ತೆಗೆದುಕೊಳ್ಳುವಾಗ ಸಕ್ರಿಯ ಪಾತ್ರ ವಹಿಸುವ ಬಗ್ಗೆ ತಿಳುವಳಿಕೆ ಪಡೆದುಕೊಳ್ಳುವುದೇ ಸಬಲೀಕರಣ. ಮಹಿಳೆಯ ಸಬಲೀಕರಣದ ಬಗ್ಗೆ ನಾವು ಮಾತನಾಡುವುದಕ್ಕೂ ಮತ್ತು ವಾಸ್ತವಕ್ಕೂ ಸಬಲೀಕರಣದ ನಡುವೆ ಒಂದು ದೊಡ್ಡ ಕಂದರವಿದೆ. ಈ ಕಂದರವನ್ನು ಕೌಟಿಲ್ಯ, ಬುದ್ಧ, ವೆರಿಯರ್ ಎಲ್ವಿನ್, ನೆಹರೂ ಹಾಗೂ ಡೆಸ್ಮಂಡ್ ಮಾರಿಸ್‌ರಂಥ ಚಿಂತಕರ ಚಿಂತನೆಗಳಿಂದ ತುಂಬಲು ಸಾಧ್ಯವಿದೆ. ಅಂಥ ಒಂದು ಆರೋಗ್ಯಪೂರ್ಣ ಚರ್ಚೆಯೇ ಈ ಪ್ರಬಂಧ. ಈ ಪ್ರಬಂಧದ ವಿಶ್ಲೇಷಣೆಗಳು ಅಭಿಪ್ರಾಯಗಳೇ ಹೊರತು ತೀರ್ಮಾನಗಳಲ್ಲ.



ಅಧ್ಯಾಯ-೧೩

ಅನುಬಂಧಗಳು

13.1 : ವೇಶ್ಯಾವಾಟಿಕೆ ಬಗ್ಗೆನ ಅಭಿಪ್ರಾಯ ಭೇದಗಳು

13.2 : ವೇಶ್ಯಾವಾಟಿಕೆ ಸಮುದಾಯದ ಬದುಕಿನ ಚಿತ್ರಗಳು

13.3 : ಸಮೀಕ್ಷಾ ವರದಿ

13.4 : ಛಾಯಾಚಿತ್ರಗಳು

13.5 : ಪತ್ರಿಕಾ ವರದಿಗಳು

13.6 : ಪರಾಮರ್ಷಿತ ಗ್ರಂಥಗಳು



ವೇಶ್ಯಾವಾಟಿಕೆ ಬಗೆಗಿನ ಅಭಿಪ್ರಾಯ ಭೇದಗಳು

ವೇಶ್ಯಾವೃತ್ತಿ ಕುರಿತು ಸಮಾಜ, ವ್ಯಕ್ತಿಗಳು ವಿಭಿನ್ನ ನಿಲುವು ಹೊಂದಿದ್ದಾರೆ. ಈ ವಿಚಾರದ ಕುರಿತು ಮಾತನಾಡಲು ಅಂಜುತ್ತಿದ್ದ ಸಮಾಜ ಈಗ ಸ್ವಲ್ಪ ಬದಲಾಗಿದೆ. ತನ್ನ ಕಠಿಣ ನಿಲುವು ಸಡಿಲುಗೊಳಿಸಿದಂತಿದೆ. ಏಡ್ಸ್‌ನಂತಹ ಮಾರಕ ರೋಗದ ಹಿನ್ನೆಲೆಯಲ್ಲಿ ಲೈಂಗಿಕತೆ, ಲೈಂಗಿಕ ರೋಗ, ಅದರ ತಡೆ ಕುರಿತು ಅನಿವಾರ್ಯವಾದ ಚರ್ಚೆಗಳು ಜನರಲ್ಲಿ, ಮಾಧ್ಯಮಗಳಲ್ಲಿ ನಡೆದಿದೆ. ಈ ನಿಟ್ಟಿನಲ್ಲಿ ಸಮಾಜದ ನಾನಾ ಸ್ತರದ ಗಣ್ಯರೊಂದಿಗೆ ಚರ್ಚೆ ಮಾಡಿದಾಗ ಅಭಿಪ್ರಾಯ ಭೇದಗಳು ಬೆಳಕಿಗೆ ಬಂದವು. ಅವರುಗಳೊಂದಿಗೆ ನಡೆಸಿದ ಸಂವಾದವನ್ನು ನೇರವಾಗಿ ಅವರದೇ ಮಾತಿನ ರೂಪದಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.

ಡಾ. ಸಿದ್ದಲಿಂಗಯ್ಯ

(ಮುಖ್ಯಸ್ಥರು, ಕನ್ನಡ ವಿಭಾಗ, ಬೆಂಗಳೂರು ವಿ.ವಿ.)

ಧರ್ಮಯುದ್ಧದ ಕಾಲದಲ್ಲಿ ಪುರುಷರು ಮಡಿದಾಗ ಅವರ ಮಡದಿಯರಿಗೆ ಆಶ್ರಯ ನೀಡುವುದರ ಭಾಗವಾಗಿ ಮುಸ್ಲಿಂ ಧರ್ಮದಲ್ಲಿ ಬಹುಪತ್ನಿತ್ವ ಜಾರಿಗೆ ಬಂದಿತ್ತು. ಆಗಿನ ಕಾಲಕ್ಕೆ ಅದು ಅನಿವಾರ್ಯವಾಗಿದ್ದಿರಬಹುದು. ಈಗಿನ ಕಾಲಕ್ಕೆ ಬಹುಪತ್ನಿತ್ವ ಒಪ್ಪಲು ಸಾಧ್ಯವಿಲ್ಲ. ಗಂಡ ಇಲ್ಲದಿದ್ದರೂ ಮಹಿಳೆ ಬದುಕಿತೋರಿಸಬಲ್ಲಳು. ಆಗಿನ ಅನಿವಾರ್ಯತೆಯಾಗಿದ್ದ ಪದ್ಧತಿಯನ್ನು ಈಗ ನಾವು ಅನುಸರಿಸಲು ಸಾಧ್ಯವಿಲ್ಲ. ಸ್ತ್ರೀ ಸ್ವತಂತ್ರಳು ಮತ್ತು ಆಕೆಗೆ ಅವಳದ್ದೇ ಆದ ವ್ಯಕ್ತಿತ್ವ ಇದೆ.

ಗಂಡ ಸತ್ತೊಡನೆ ಬುಡಕಟ್ಟುಗಳಲ್ಲಿ ವೇಶ್ಯಾವಾಟಿಕೆಗೆ ಅವಕಾಶವಿರಲಿಲ್ಲ. ಅಲ್ಲಿ ಸಂಪ್ರದಾಯವನ್ನೇ ಮಾಡಿದ್ದರು. ಗಂಡ ಸತ್ತೊಡನೆ ಆಕೆಯ ಮೈದ ಆಕೆಯನ್ನು ಮದುವೆಯಾಗಬೇಕು. ಇದು ಅನೇಕ ಬಡುಕಟ್ಟುಗಳಲ್ಲಿದೆ. ಅಣ್ಣ ಸತ್ತು ಹೋದರೆ ಆತನ ಹೆಂಡತಿಯನ್ನು ತಮ್ಮ ಮದುವೆಯಾಗುತ್ತಾನೆ. ತಮ್ಮ ಸತ್ತರೆ ಅಣ್ಣ ಆತನ ಹೆಂಡತಿಯನ್ನು ಮದುವೆಯಾಗುತ್ತಾನೆ. ಬುಡುಕಟ್ಟುಗಳಲ್ಲಿ ವೇಶ್ಯಾವಾಟಿಕೆ ಬೆಳೆಯದಿರಲು ಇದೂ ಒಂದು ಕಾರಣ.

ಸ್ತ್ರೀಯರಿಗೆ ಸ್ವಾತಂತ್ರ್ಯ ಇತ್ತು. ಮುಂಡಾ ಬುಡಕಟ್ಟುಗಳಲ್ಲಿ ಮದುವೆಗೆ ಮೊದಲೇ ಗಂಡು ಹೆಣ್ಣು ಜತೆಯಲ್ಲಿ ಇರುತ್ತಾರೆ. ಯುವಕ-ಯುವತಿಯರು ಒಟ್ಟಾಗಿಯೇ ಇದು ಅವರ ಜತೆಗಾರರನ್ನು ಆಯ್ಕೆ ಮಾಡುತ್ತಾರೆ. ಈ ತರದ ಸಂಪ್ರದಾಯಗಳಿದ್ದಾಗ ವೇಶ್ಯಾವಾಟಿಕೆಗೆ ಅವಕಾಶವಿರಲಿಲ್ಲ.

ಪ್ರಾಚೀನ ಕಾಲದಲ್ಲಿ ವೇಶ್ಯಾವೃತ್ತಿಗೆ ಗೌರವವಿತ್ತು. ವೇಶ್ಯೆಯರು ತುಂಬಾ ಶ್ರೀಮಂತರಾಗಿದ್ದರು. ವೇಶ್ಯೆ ಪ್ರಭಾವ ಶಾಲಿಯಾಗಿದ್ದಳು. ರಾಜರಿಂದ ಮೊದಲ್ಗೊಂಡು ಎಲ್ಲರೂ ಆಕೆಗೆ ಗೌರವ ಕೊಡುತ್ತಿದ್ದರು. ಆಕೆಯ ಸಂಪರ್ಕದಲ್ಲಿ ಗಣ್ಯರು ಇರುತ್ತಿದ್ದರು. ಆದ್ದರಿಂದ ಆಕೆ ಶ್ರೀಮಂತಳು, ಪ್ರಭಾವಿಯೂ ಆಗಿದ್ದಳು. ವೇಶ್ಯೆಯರು ಮಾಡಿದ ಸಮಾಜಸೇವೆ ಯಾರೂ ಮಾಡಿಲ್ಲ. ಪ್ರಾಚೀನ ಕಾಲದಲ್ಲಿ ಇವರು ಸಾವಿರಾರು ಕೆರೆಗಳು, ಛತ್ರಗಳನ್ನು ಕಟ್ಟಿಸಿದ್ದಾರೆ. ಬ್ರಾಹ್ಮಣರಿಗೆ ಅಗ್ರಹಾರ, ಊಟ, ವಸತಿ ವ್ಯವಸ್ಥೆ ಮಾಡುತ್ತಿದ್ದವರು ವೇಶ್ಯೆಯರು. ಇವರು ಧಾರ್ಮಿಕ ಕಾರ್ಯಗಳಿಗೆ ನೆರವಾಗುತ್ತಿದ್ದರು. ದಾನ ಮಾಡುತ್ತಿದ್ದರು.

ಬುದ್ಧನನ್ನೇ ತೆಗೆದುಕೊಳ್ಳಿ. ಆತ ವೇಶ್ಯೆ ನೀಡಿದ ಆತಿಥ್ಯ ಸ್ವೀಕರಿಸಿದ್ದಾನೆ. ಕರ್ನಾಟಕದ ಸುಮಾರು 10 ಸಾವಿರ ಕೆರೆಗಳನ್ನು ಕಟ್ಟಿಸಿದವರು ವೇಶ್ಯೆಯರು. ಅವುಗಳನ್ನು ಈಗಲೂ 'ಸೂಳೆಕೆರೆ' ಎಂದೇ ಕರೆಯುತ್ತಾರೆ. ಈಗ ಆ ಕೆರೆಗಳ ಹೆಸರನ್ನು ಬಹಳಷ್ಟು ಕಡೆ ಬದಲಿಸಿದ್ದಾರೆ. ಇದನ್ನೆಲ್ಲಾ ಗಮನಿಸಿದರೆ ವೇಶ್ಯೆ ಸಮಾಜದಲ್ಲಿ ಪ್ರಭಾವಿ, ಗೌರವಯುತ ಸ್ಥಾನ ಹೊಂದಿದ್ದಳೆನ್ನುವುದು ಸ್ಪಷ್ಟ.

ಇಷ್ಟೆಲ್ಲಾ ಇದ್ದರೂ ಕೂಡ ಸಮಾಜ ವೇಶ್ಯಾವಾಟಿಕೆ ವ್ಯವಸ್ಥೆಯನ್ನು ತನ್ನ ಸ್ವಾರ್ಥಕ್ಕಾಗಿ ಮಾಡಿತೆಂದೇ ಹೇಳಬಹುದು. ಊಳಿಗಮಾನ್ಯ ವ್ಯವಸ್ಥೆ ತನ್ನ ಸ್ವಾರ್ಥ ಮತ್ತು ಲೋಲುಪತೆಗಾಗಿ ಇದನ್ನು ಸೃಷ್ಟಿಸಿದೆ. ಈ ವೇಶ್ಯೆ ಎಂಬ ಇನ್‌ಸ್ಟಿಟ್ಯೂಟ್ ಅನಿವಾರ್ಯವಾಗಿರಲಿಲ್ಲ.

ವೇಶ್ಯಾವಾಟಿಕೆ ಮತ್ತು ಕಲೆಗೆ ಸಂಬಂಧ ಏರ್ಪಟ್ಟು ದೇವದಾಸಿ ಪದ್ಧತಿ ಬೆಳೆಯಿತು. ಆ ಮೂಲಕ ವೇಶ್ಯಾವಾಟಿಕೆಗೆ ಸಾಂಸ್ಥಿಕ ರೂಪ ದೊರೆಯಿತು. ಸಮಾಜದ ಸ್ವಾರ್ಥ ಮತ್ತು ಧರ್ಮದ ಅಂಗೀಕಾರ ಎರಡೂ ಪೂರಕವಾಯಿತು. ಈ ಮೂಲಕ ವೇಶ್ಯಾವಾಟಿಕೆ ನಡೆಯಲು ಪರವಾನಿಗೆ ದೊರೆಯಿತು. ಇದರಿಂದ ವೇಶ್ಯಾವಾಟಿಕೆಗೆ ಸಹಕಾರ, ಲೈಸನ್ಸ್ ಕೊಡುವುದಕ್ಕಿಂತ ಧರ್ಮವೇ ಅನುಮೋದನೆ ಕೊಟ್ಟಂತಾಯಿತು. ದೇವದಾಸಿಯರು ನೃತ್ಯ-ಕಲೆಯಲ್ಲಿ ಪರಿಣಿತರಾದರು.

ಕಾಲಾಂತರದಲ್ಲಿ ದೇವದಾಸಿ ಪದ ಅರ್ಥಕಳೆದುಕೊಂಡು ವೇಶ್ಯೆಯಾಗಿ ಈಗ ಈ ಸ್ಥಿತಿಗೆ ತಲುಪಿದೆ. ಪ್ರಾರಂಭದಲ್ಲಿ ಈ ವೃತ್ತಿಗೆ ವಿಚಿತ್ರವಾದ ಸ್ಥಾನಮಾನ ಇತ್ತು. ಈಗಿನಂತೆ ಕೀಳಾದ ಮನೋಭಾವ ಇರಲಿಲ್ಲ. ಬಹುಶಃ ಊಳಿಗಮಾನ್ಯ ವ್ಯವಸ್ಥೆಯ ಅವಸಾನದೊಂದಿಗೆ ವೇಶ್ಯಾವೃತ್ತಿ ತನ್ನ ಸ್ಥಾನಮಾನವನ್ನು ಕಳೆದುಕೊಂಡಿತು.

ವೇಶ್ಯಾವಾಟಿಕೆಗೆ ಒಂದು ಸಾಮಾಜಿಕ ಪ್ರಭಾವ, ಧಾರ್ಮಿಕವಾದ ಅಂಗೀಕಾರ ಹಾಗು ಕಲಾತ್ಮಕತೆಯ ಗಂಟು ಇತ್ತು. ಅವರು ಡ್ಯಾನ್ಸರ್, ಸಿಂಗರ್ಸ್ ಆಗಿದ್ದರು. ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಸಂಗೀತಗಾರರು ವೇಶ್ಯೆಯರೇ ಆಗಿದ್ದರು. ಆಗ ಬೇರೆಯವರು ಸಂಗೀತ ಕಲಿಯುತ್ತಿರಲಿಲ್ಲ. ಈಗ ಎಲ್ಲರೂ ಕಲಿತಿದ್ದಾರಷ್ಟೆ. ಇದರಿಂದ ಲಾಭ ಇದೆ ಎಂದು ಗೊತ್ತಾದ ಬಳಿಕ ಎಲ್ಲರೂ ಕಲಿತರು. ಲಾಭದಾಯಕವಲ್ಲದೇ ಇದ್ದಾಗ ಸಂಗೀತ, ನೃತ್ಯ ಒಂದು ಅಸ್ಪೃಶ್ಯರ ಕಲೆಯಾಗಿತ್ತು. ಇದು ಮೂಲತಃ ಗಂಧರ್ವರ ಕಲೆ, ಕಿನ್ನರರು, ಇದರಲ್ಲಿ ತೊಡಗಿಸಿಕೊಂಡಿದ್ದರು. ಗಂಧರ್ವರು ಪೌರಾಣಿಕ ಕಾಲದ ಅಸ್ಪೃಶ್ಯರು. ಇವರು ಇಂದ್ರನ ಆಸ್ಥಾನದಲ್ಲಿ ಸ್ಥಾನಕ್ಕಾಗಿ

ಹೋರಾಟ ಮಾಡಿದ್ದರು. ಪೌರಾಣಿಕ ಕಥೆಗಳಲ್ಲಿ ನೋಡಿ. ಅಶ್ವಿನಿ ದೇವತೆಗಳ ಉಲ್ಲೇಖವಿದೆ. ಡಾಕ್ಟರ್ ಹಿಂದೆ Un-Touchable ಆಗಿದ್ದರು. ಈಗ ನಾವು ವೈದ್ಯರು ಎಂದು ಅವರನ್ನು ಕರಿತೀವಿ, ಅವರಿಗೆ ಪುರಾಣದಲ್ಲಿ ಕೀಳಾದ ಸ್ಥಾನಮಾನ ಇತ್ತು. ಅಮೃತಸೋಮೇಶ್ವರರು ಯಕ್ಷಗಾನದಲ್ಲಿ ಇದನ್ನು ಚೆನ್ನಾಗಿ ವಿವರಿಸಿದ್ದಾರೆ. ಮನು ಧರ್ಮಶಾಸ್ತ್ರದಲ್ಲಿ ಮನು, ನೀಚ ವೃತ್ತಿಗಳಲ್ಲಿ ವೈದ್ಯನನ್ನೂ ಸೇರಿಸಿದ್ದಾನೆ. ಆತನ ಪ್ರಕಾರ ವೈದ್ಯ, ಕಲೆ, ನೃತ್ಯ ನೀಚವೃತ್ತಿಗಳು. ಆದ್ದರಿಂದ ಈ ವೃತ್ತಿಗೆ ಹಿಂದೆ ಅಸ್ಪೃಶ್ಯತೆಯ ಕಳಂಕ ಇತ್ತು.

ಪುರೋಹಿತರು ಮತ್ತು ಭೂಮಾಲೀಕರ ಉಪಭೋಗಕ್ಕೂ ಕೂಡ ವೇಶ್ಯೆಯರು ಬಲಿಯಾಗಿದ್ದರು. ಊಳಿಗಮಾನ್ಯ ವ್ಯವಸ್ಥೆಯ ಲಾಲಸೆಯ ಪ್ರತಿರೂಪದಂತೆ ದೇವದಾಸಿ ಪದ್ಧತಿ ಬೆಳೆಯಿತು. ಆ ವ್ಯವಸ್ಥೆ ದುರ್ಬಲವಾದಂತೆ ಇದೂ ದುರ್ಬಲವಾಯಿತು, ಹಾಗೂ ಕೀಳಾದ ಅರ್ಥ ಬಂತು. ವೇಶ್ಯೆಯರಿಗೆ ಎಷ್ಟೊಂದು ಸ್ಥಾನಮಾನ ಇತ್ತೆಂದು ಡಿ.ವಿ.ಜಿ ಬರೆದಿದ್ದಾರೆ. ಗಾಯಕಸಾನಿಯರು, ದೊರೆಸಾನಿಯರು ಎಂದೆಲ್ಲ ಕರೆಯುತ್ತಿದ್ದ ಎಲ್ಲರೂ ವೇಶ್ಯೆಯರು. ಅವರ ಪುಸ್ತಕದಲ್ಲಿ ಉಲ್ಲೇಖವಿದೆ. ಜಡ್ಜಿ ನರಹರಿರಾಯರು ಸಾರೋಟಿನಲ್ಲಿ ಹೋಗುವಾಗ ಸೀದಾ ವೇಶ್ಯೆ ಮನೆಗೆ ಹೋಗುತ್ತಿದ್ದರಂತೆ. ವೇಶ್ಯೆ ಮನೆ ಮುಂದೆಯೇ ಸಾರೋಟು ನಿಂತಿರೋದು. ಮಧ್ಯರಾತ್ರಿಯವರೆಗೂ ಅಲ್ಲೇ ಜನರಿಗೆಲ್ಲ ಅದೇ ಮಾತು ಸುದ್ದಿ. ಕೊನೆಗೆ ಇದು ಮಿರ್ಜಾ ಇಸ್ಮಾಯಿಲ್‌ರಿಗೆ ಗೊತ್ತಾಯಿತು. ಅವರು ನರಹರಿರಾಯರಿಗೆ ವಾರ್ನ್ ಮಾಡಿದರೆಂದು ಡಿ.ವಿ.ಜಿ. ಬರೆದಿದ್ದಾರೆ.

ಇನ್ನು ವೇಶ್ಯಾವಾಟಿಕೆ ನಿವಾರಣೆ ಹೇಗೆ? ಇದನ್ನು ಯೋಚನೆ ಮಾಡಬೇಕು. ಒಂದು ಸಾಂಪ್ರದಾಯಿಕವಾದ ಸುಧಾರಣಾವಾದ ಅದರ ಪ್ರಕಾರ ಅವರಿಗೆ ಬೇರೆ ಉದ್ಯೋಗ ಕಲ್ಪಿಸಬೇಕು. ಟೈಲರಿಂಗ್, ಹಸುಕಟ್ಟುವುದು ಇತ್ಯಾದಿ, ಇತ್ಯಾದಿ.

ಇನ್ನೊಂದುವಾದ: ಈ ವೃತ್ತಿಗೆ ಪರವಾನಿಗೆ ಕೊಡಬೇಕೆನ್ನುವುದು, ಇದನ್ನು ಮಹಿಳಾ ಸಂಘಟನೆಗಳೇ ಒತ್ತಾಯಿಸುತ್ತಿದೆ. ಮುಂಬೈ, ಕಲ್ಕತ್ತಾದಲ್ಲಿ ಇದು ಜಾಸ್ತಿ.

ಈ ಎರಡರಲ್ಲಿ ಯಾವ ವಾದ ಸರಿ ಎನ್ನುವುದು ಕಷ್ಟ. ವೇಶ್ಯಾವೃತ್ತಿಯಲ್ಲಿರುವವರೇ, ಸರಕಾರದೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕು. ಪರಿಹಾರವನ್ನು ಮೇಲಿನಿಂದ ಹೇರುವ ಬದಲು ಯಾರು ಈ ವೃತ್ತಿಯಿಂದ ನೊಂದಿದ್ದಾರೊ, ಬಲಿಯಾಗಿದ್ದಾರೋ ಅವರ ಜೀವನ ಅನುಭವದ ಆಧಾರದಲ್ಲಿ ಪರಿಹಾರ ಕಂಡುಕೊಳ್ಳುವುದು ಸೂಕ್ತ. ಎಲ್ಲರನ್ನು ಟೈಲರ್ ಮಾಡಲು ಸಾಧ್ಯವಿಲ್ಲ. ಆದಷ್ಟು ಸ್ಥಳೀಯರು ಮಾರುಕಟ್ಟೆ, ಉದ್ಯೋಗಾವಕಾಶವನ್ನು ಗಮನದಲ್ಲಿಡಬೇಕು.

ಇನ್ನು ವೇಶ್ಯೆಯರಿಗೆ ವಿವಾಹ ಮಾಡುವುದೇ ದೊಡ್ಡ ಪರಿಹಾರವಲ್ಲ. ದೇವದಾಸಿಯರಿಗೆ ವಿವಾಹ ಮಾಡಲು ಹೋಗಿ ಮತ್ತೆ ಅವರೆಲ್ಲ ಬೇರೆ ಬೇರೆಯಾಗಿದ್ದಾರೆ. ವ್ಯಕ್ತಿ ಮೀರಿ ಸಾಂಸ್ಕೃತಿಕ ಪುನರ್ವಸತಿಯಾಗಬೇಕು. ಅದು ಅಷ್ಟು ಸುಲಭವಲ್ಲ. ಪುನರ್ವಸತಿ ಆಗತ್ತೆ. ಏಕೆಂದರೆ ವಯಸ್ಸಾದ ಮೇಲೆ ವೇಶ್ಯೆಯರನ್ನು ಕೇಳುವವರೇ ಇರುವುದಿಲ್ಲ.

ವೇಶ್ಯಾವಾಟಿಕೆ ವೃತ್ತಿ ಶಾಶ್ವತ ಜೀವನೋಪಾಯವಾಗಲು ಸಾಧ್ಯವಿಲ್ಲ. ಆದ್ದರಿಂದ ಈ ವೃತ್ತಿಯಿಂದ ಬಿಡಿಸಿ ನಾಗರಿಕ ಸಮಾಜ ವ್ಯವಸ್ಥೆಗೆ ಅವರನ್ನು ತರುವುದು ಅನಿವಾರ್ಯ. ಇದಕ್ಕೆ ಮನೋಪರಿವರ್ತನೆ, ಕೌನ್ಸಿಲಿಂಗ್ ಆಗಬೇಕು. ಆರೋಗ್ಯ ತಪಾಸಣೆಯಾಗಬೇಕು. ಅವರ ಮನ ಬದಲಾವಣೆ ಧಾರ್ಮಿಕವಾಗಿಯಾದರೂ ಚಿಂತೆ ಇಲ್ಲ. ಭಜನೆ. ಪ್ರವಚನಗಳಿಗೆ ಕಳುಹಿಸಿದರೂ ಚಿಂತೆ ಇಲ್ಲ. ಅಥವಾ ಸಂಘಟಿತರಾಗಿ ಹೋರಾಟದ ಮಾರ್ಗಕ್ಕೆ ಬಂದರೂ ಉತ್ತಮ. ಆದ್ದರಿಂದ ಅವರನ್ನು ವೇಶ್ಯಾವೃತ್ತಿಯಿಂದ ಬಿಡಿಸುವುದೇ ಸೂಕ್ತವೆಂದು ನನ್ನ ಅನಿಸಿಕೆ.

ವೇಶ್ಯಾವಾಟಿಕೆ ನಿವಾರಣೆ ಬಗ್ಗೆ ದಲಿತ ಅಥವಾ ಎಡ ಪಂಥೀಯ ಚಿಂತಕರು, ಸಂಘಟನೆಗಳು ಮಾತನಾಡುತ್ತಿಲ್ಲ. ಇದಕ್ಕೆ ಕಾರಣ ಅದರಲ್ಲಿ ಈ ವಿಚಾರದ ಕುರಿತು ಇರುವ ಮಡಿವಂತಿಕೆ ವಿಷಯದ ಆಯ್ಕೆಯಲ್ಲೇ ಈ ಚಳುವಳಿಗಾರರಿಗೆ ಮಡಿವಂತಿಕೆ ಇದೆ. ಹೋರಾಟದ ವಿಷಯದ ಆಯ್ಕೆಯಲ್ಲೇ ಮಡಿವಂತಿಕೆ ಇರುವುದನ್ನು ಗಮನಿಸಬಹುದು. ಮುಕ್ತವಾದ, ನಿರ್ಭಿಡೆಯ ಚಿಂತನಾ ಮಾರ್ಗ ನಮ್ಮ ಹೋರಾಟಗಾರರಲ್ಲಿ ಇಲ್ಲ.

ಜಾತಿ, ಸಾಂಪ್ರದಾಯದ ವಿಷಯದಲ್ಲೇ ಬಿಡುಗಡೆಯಾಗದ ಭಾರತೀಯ ಜಾತ್ಯತೀತರು ಜಾತ್ಯಾತಿಕಾರಿಗಳು ವೇಶ್ಯೆಯರ ವಿಚಾರದಲ್ಲಿ ಯೋಚಿಸುವುದು ಕಷ್ಟ. ನೋಡಿ, ಮದುವೆ ವಿಷಯ ಬಂದಾಗ ಆತ ಎಂತಹ ಕ್ರಾಂತಿಕಾರಿಯಾದರೂ ತಂದೆ ತಾಯಿ ನೋಡಿದ ಹುಡುಗಿಯನ್ನೇ ಮದುವೆಯಾಗುತ್ತಾರೆ. ಅಂತಹ ಒಂದು ಪರಿಸ್ಥಿತಿ ಇದೆ. ಯುವಕರು ಚಿಂತನೆ ಹಂತದಲ್ಲಿ ಬಿಡುಗಡೆಯಾಗಿದ್ದಾರೆ. ಆದರೆ ಅನುಷ್ಠಾನದ ಮಟ್ಟದಲ್ಲಿ ಇನ್ನೂ ಬಂದಿಲ್ಲ. ಆದರಿಂದ ಅವರು ವೇಶ್ಯೆಯರ ಬಗ್ಗೆ, ಇನ್ನೂ ಮುಂದುವರಿದು ಕೋಜಗಳ ಬಗ್ಗೆ, ಸಲಿಂಗಕಾಮಿಗಳ ಬಗ್ಗೆ ಯೋಚಿಸುತ್ತಾರೆಂದು ಕಲ್ಪಿಸುವುದೂ ಕೂಡ ಕಷ್ಟವಿದೆ. ಕೋಜಗಳು, ಹಾಗು ಈ ಮಾದರಿಯ ವಿಚಿತ್ರ ವರ್ಗಗಳ ಬಗ್ಗೆ ಎಡ ಪಕ್ಷಗಳು ಯೋಚಿಸಬೇಕು. ಇವರು ಸಮಾಜದಲ್ಲಿ ನಾನಾ ಕಾರಣಕ್ಕೆ ತುಳಿತಕ್ಕೆ ಒಳಪಟ್ಟಿದ್ದಾರೆ. ಇವರ ವಿಷಯವನ್ನು ಮಾತನಾಡಲೂ ಹಿಂಜರಿಯುವ ಸಮಾಜ, ವ್ಯಕ್ತಿ ಹೋರಾಟ ಮಾಡಲು ಹೇಗೆ ಸಾಧ್ಯ? 50 ವರ್ಷಗಳ ಹಿಂದೆ ಹೊಲೆಯ ಮಾದಿಗರ ಸ್ಥಿತಿ ಕೂಡ ಇದೇ ಇತ್ತು.

ಹಾಗೆ ನೋಡಿದರೆ, ಬುದ್ಧ, ಬಸವಣ್ಣರವರುಗಳು ದೊಡ್ಡ ಕ್ರಾಂತಿಕಾರಿಗಳು. ಆಮ್ರಪಾಲಿಗೆ ದೀಕ್ಷೆ ನೀಡಿ ಧರ್ಮಕ್ಕೆ ತೋರಿಸಿಕೊಂಡ ಕ್ರಮ ದೊಡ್ಡ ಹೆಜ್ಜೆ. ಏಸುಕ್ರಿಸ್ತನ ಜೀವನ ಚರಿತ್ರೆಯಲ್ಲೂ ಇದು ಬರುತ್ತದೆ. ವೇಶ್ಯೆ ಮೆಕ್ಡೋನಳ ಆತಿಥ್ಯ ಸ್ವೀಕರಿಸಿ ಶಿಷ್ಯೆಯಾಗಿಸಿಕೊಂಡ ಏಸು ನಿಜಕ್ಕೂ ಧೈರ್ಯಶಾಲಿ. ಬಸವಣ್ಣನವರಿಂದಾಗಿ ಸೂಳೆ ಸಂಕವ್ವ ದೊಡ್ಡ ವಚನಗಾರ್ತಿಯಾದಳು.

ಗಾಂಧಿಗೆ ಈ ಬಗ್ಗೆ ಮಡಿವಂತಿಕೆ ಇತ್ತು. ಇದರ ಬಗ್ಗೆ ಮಾತನಾಡಲೂ ಅವರು ಹೆದರುತ್ತಿದ್ದರು. ಅಂಬೇಡ್ಕರ್ ಈ ಮಿತಿಯನ್ನು ಮೀರಿದ್ದರು. ಅವರು ವೇಶ್ಯೆಯರನ್ನು ಸಂಘಟಿಸಿ ಸಮ್ಮೇಳನವನ್ನೇ ನಡೆಸಿದ್ದರು.

೧೯೨೪-೨೬ ರಲ್ಲಿ ದೇವದಾಸಿಯರ ಮಕ್ಕಳು ಚಳವಳಿ ಮಾಡಿದ ದಾಖಲೆ ಇದೆ. ಈ ಮಕ್ಕಳು ದೇವದಾಸಿ ಪದ್ಧತಿ ವಿರೋಧಿಸಿ ಬೀದಿಗಿಳಿದಿದ್ದರು. ಇದು ತಾಯಂದಿರ ವಿರುದ್ಧದ ಹೋರಾಟ. ಈ ಬಗ್ಗೆ ಆಸಕ್ತಿ ಬಂದು ನಾನು ಅಲ್ಲಿಗೆ ೧೯೯೮ರಲ್ಲಿ ಭೇಟಿ ನೀಡಿ (ಬೆಳಗಾವಿ ಸುತ್ತ) ಅಧ್ಯಯನ ನಡೆಸಿದ್ದೆ.

ವೇಶ್ಯೆಯರನ್ನು ಅವರ ಸಮಸ್ಯೆ ಆಧಾರದಲ್ಲಿ ಒಂದುಗೂಡಿಸಬೇಕೆ ವಿನಾಃ ಅವರನ್ನೇ ಒಂದು ಬುಡಕಟ್ಟು, ನಿರ್ದಿಷ್ಟ ಗುಂಪು ಎಂದು ಹೇಳಲು ಬರುವುದಿಲ್ಲ. ಬುಡಕಟ್ಟಿಗೆ ಇರುವ ಗುಣಲಕ್ಷಣ ಇವರಲ್ಲಿ ಇಲ್ಲ. ವೇಶ್ಯೆಯರಿಗೆ Human Life, Human Dignity ಬೇಕು. ಅದನ್ನು ಆಧರಿಸಿ ಅವರನ್ನು ಸಂಘಟಿಸುವುದು ಒಳಿತು.

ವೇಶ್ಯಾವಾಟಿಕೆ ನಿವಾರಣೆ ಸಾಧ್ಯವಾಗಬೇಕು. ಉದಾಹರಣೆಗೆ ಕೆಲವು ಸಮಾಜವಾದಿ ರಾಷ್ಟ್ರಗಳಲ್ಲಿ ವೇಶ್ಯಾವಾಟಿಕೆ ಇಲ್ಲ. ವೇಶ್ಯಾವಾಟಿಕೆ ಬಂಡವಾಳಶಾಹಿ ದೇಶಗಳ ಸಮಸ್ಯೆ ಶೋಷಣೆಗೆ ಅವಕಾಶ ಇರುವ ಕಡೆ ದೈಹಿಕ ಶೋಷಣೆಗೂ ಅವಕಾಶ ಇರುತ್ತದೆ. ವೇಶ್ಯಾವಾಟಿಕೆ ವ್ಯವಸ್ಥೆಯ ದುಷ್ಪರಿಣಾಮವೇ ಹೊರತು ಸಹಜವಾದುದ್ದಲ್ಲ.

ಮತ್ತೊಂದು ವಿಚಾರ ವೇಶ್ಯೆಯರ ಹಕ್ಕು ರಕ್ಷಣೆಗೆ ಕೇವಲ ಶಾಸನ ಒಂದೇ ಸಾಕಾಗುವುದಿಲ್ಲ. ಶಾಸನ ಜಾರಿಗೊಳಿಸುವಂತೆ ಒತ್ತಾಯ ಮಾಡುವ ಸಂಘ-ಸಂಸ್ಥೆಗಳೂ ಬೇಕು.

ವೇಶ್ಯಾವೃತ್ತಿ ಕಾನೂನುಬದ್ಧಗೊಳಿಸುವ ಮೊದಲು-ಅದರ ಸಾಧಕ ಬಾಧಕದ ಚರ್ಚೆ, ಅಧ್ಯಯನ ಅಗತ್ಯ. ಈ ವೃತ್ತಿಯನ್ನು ಕಾನೂನುಬದ್ಧಗೊಳಿಸಿದ ದೇಶಗಳಲ್ಲಿ ಕಾನೂನು ಮಾಡುವ ಮೊದಲು ಹಾಗು ಬಳಿಕ ಆದ ಬದಲಾವಣೆಗಳ ಅಧ್ಯಯನ ಮಾಡಬೇಕು. ಅವು ಅನುಕೂಲಕರವೆನಿಸಿದರೆ ಭಾರತದಲ್ಲೂ ಆ ಬಗ್ಗೆ ಯೋಚಿಸಬಹುದು. ಕೆಲವು ದೇಶಗಳಲ್ಲಿ ವೇಶ್ಯಾವಾಟಿಕೆನೇ ಇಲ್ಲ. ಹಾಗಿದ್ದರೆ ಅದಕ್ಕೆ ಕಾರಣವೇನೆಂದೂ ಅಧ್ಯಯನ ಮಾಡಬೇಕು. ಇರಾಕಿನಲ್ಲಿ ವೇಶ್ಯಾವಾಟಿಕೆ ಇರಲಿಲ್ಲ. ಅಮೆರಿಕದ ಪ್ರವೇಶದ ನಂತರ ಅಲ್ಲಿ ಇದು ದೊಡ್ಡ ರೀತಿ ಆರಂಭವಾಗಿದೆ. ಜನ ವೇಶ್ಯಾವಾಟಿಕೆಯಲ್ಲಿ ತೇಲಾಡಿ ಪ್ರತಿಭಟನೆ ಮರೆಯಲಿ ಎನ್ನುವುದೇ ಅಮೆರಿಕದ ತಂತ್ರ. ಇದರ ಅಧ್ಯಯನ ಅಗತ್ಯ.

ಒಟ್ಟಾರೆ; ವೇಶ್ಯೆಯರ ಬದುಕು, ಸಮಸ್ಯೆ ಅಧ್ಯಯನ, ಇದುವರೆಗೆ ಆದ ಅಧ್ಯಯನದ ಫಲ ತಿಳಿದುಕೊಳ್ಳಲು ಸಾಧ್ಯವಾಗಬೇಕು. ಇದರ ನಾಡಿ ಮಿಡಿತ ಅರಿಯಲು ಸಾಧ್ಯವಾಗಬೇಕು.

ಡಾ|| ಎ.ಎಸ್. ಮಳಿಮಠ

(ಕರ್ನಾಟಕ, ಕೇರಳ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಮೂರ್ತಿ)

ವೇಶ್ಯಾವೃತ್ತಿಯಲ್ಲಿ ಅತ್ಯಂತ ಶೋಷಣೆಗೆ ಒಳಗಾಗುತ್ತಿರುವವರು ಬಾಲ ವೇಶ್ಯೆಯರು. ಲೈಂಗಿಕ ಶೋಷಣೆ ಇನ್ನಷ್ಟು ವಿಸ್ತೃತವಾದದ್ದು. ಮಕ್ಕಳ ಲೈಂಗಿಕ ದುರ್ಬಳಕೆ, ಅತ್ಯಂತ ಖೇದದ ವಿಚಾರ. ಮಕ್ಕಳ ಲೈಂಗಿಕ ದುರುಪಯೋಗ ಕುರಿತು ಸ್ಟಾಕ್‌ಹೋಂನಲ್ಲಿ ನಡೆದ ಅಂತರಾಷ್ಟ್ರೀಯ ಸಮಾವೇಶದಲ್ಲಿ ನಾನು ಪಾಲ್ಗೊಂಡಿದ್ದೆ. ಜಸ್ಟಿಸ್ ಫಾತಿಮಾಬೀಬಿ ಕೂಡ ಭಾರತವನ್ನು ಪ್ರತಿನಿಧಿಸಿದ್ದರು. ಅಲ್ಲಿ ಗಂಭೀರ ಚರ್ಚೆ ನಡೆಯಿತು. ಗೋವಾ ಅಥವಾ ಬಾಂಬೆಯ ವೇಶ್ಯಾಗೃಹಗಳ ಬಗ್ಗೆ ಅಧ್ಯಯನ ಮಾಡಿದರೆ ಅಲ್ಲಿ ಕರ್ನಾಟಕದ ಹೆಣ್ಣು ಮಕ್ಕಳು ದೊಡ್ಡ ಸಂಖ್ಯೆಯಲ್ಲಿರುವುದು ತಿಳಿಯುತ್ತದೆ.

ಕಾನೂನು ವ್ಯವಸ್ಥೆ ಏಕೆ ವೇಶ್ಯೆಯರ ಬಗ್ಗೆ ಅಪಥ್ಯ ತಾಳಿದೆ ಎಂಬ ಪ್ರಶ್ನೆ ಬಂದಾಗ ತಿಳಿಯುವ ವಿಚಾರವೆಂದರೆ, ವೇಶ್ಯೆಯರ ಬಗ್ಗೆ ಸಮಾಜ ಕೀಳಾಗಿ ಕಾಣುತ್ತದೆ. ಇದೇ ಮನೋಭಾವ ಕಾನೂನು ಪರಿಪಾಲಕರಿಗೂ ವರ್ಗಾಯಿಸಲ್ಪಟ್ಟಿದೆ. ನನಗೂ ಅದೇ ಮನೋಭಾವ ಇತ್ತು ವೇಶ್ಯೆಯ ಬಗ್ಗೆ ಕರುಣೆಗಿಂತ ತಿರಸ್ಕಾರವೇ ಮೊದಲಿಗಿತ್ತು. ಕಾನೂನು ಪ್ರಕಾರ ವೇಶ್ಯಾವಾಟಿಕೆ ಒಂದು ಅಪರಾಧವಲ್ಲ. ಇದರ ಅಡಿಯಲ್ಲಿ ಕ್ರಮ ಜರುಗಿಸಲು ಸಾಧ್ಯವಿಲ್ಲ. ಗಿರಾಕಿಗಳನ್ನು ಸೆಳೆಯುವುದು, ಪುಸಲಾಯಿಸುವುದು ಕಾನೂನು ಪ್ರಕಾರ ಅಪರಾಧ. ಪೊಲೀಸರು ಇದನ್ನೇ ಬಳಸಿ ವೇಶ್ಯೆಯರನ್ನು ಬಂಧಿಸುತ್ತಾರೆ.

ವೇಶ್ಯೆಯರ ವಿಚಾರ ಬಂದಾಗ ನನಗೆ ಆತಂಕವಾಗುವ ವಿಚಾರವೆಂದರೆ ಆಕೆಯ ಮಕ್ಕಳ ವಿಚಾರ. ಮಗುವಿಗೆ ತಂದೆ ಯಾರೆಂದು ಗೊತ್ತಿರುವುದಿಲ್ಲ. ಕೇಳಿದರೂ ಹೇಳಲು ಸಾಧ್ಯವಿಲ್ಲ. ಈ ವಿಚಾರ ಮಗುವಿನ ಜೀವನ ಪೂರ್ತಿ ಕಾಡಲಿದೆ. ಸಾಮಾನ್ಯವಾಗಿ ಭಾರತೀಯ ಸಂಪ್ರದಾಯದಲ್ಲಿ ವಿವಾಹಿತ ಸ್ತ್ರೀ ಗರ್ಭವತಿಯಾಗುವುದೆಂದರೆ ಅದು ಸಂಭ್ರಮದ ಸಂದರ್ಭ. ಕುಟುಂಬ ಸಮಾಜ ಅದನ್ನು ಆಚರಿಸುತ್ತದೆ. ಆಕೆಗೆ ವಿಶೇಷ ಗೌರವ ಕೊಡುತ್ತದೆ. ಆದರೆ ಇದೇ ವಿಚಾರ ವೇಶ್ಯೆಯ ಪ್ರಶ್ನೆ ಬಂದಾಗ ಭಿನ್ನವಾಗಿರುತ್ತದೆ. ಆಕೆಯನ್ನು ನಿಕೃಷ್ಟವಾಗಿ ಕಾಣಲಾಗುತ್ತದೆ. ಆಕೆಗೆ ಬೇಡಿಕೆ ಇರುವುದಿಲ್ಲ. ಆಕೆಯ ನೋವನ್ನು ಆಕೆಯೇ ಅನುಭವಿಸಬೇಕಾಗುತ್ತದೆ. ಏಕೆ ಹೀಗೆ?

ಮೊದಲನೆಯದಾಗಿ ಮಹಿಳೆ ವೇಶ್ಯೆಯಾಗುವುದನ್ನು ತಡೆಯಬೇಕು. ಇದರ ಹೊರತಾಗಿಯೂ ಈ ಜಾಲಕ್ಕೆ ಒಳಪಡುವ ಮಹಿಳೆಯ ಸಮಸ್ಯೆಗಳ ನಿವಾರಣೆ ಹೇಗೆಂದು ಚರ್ಚಿಸಬೇಕು. ವೇಶ್ಯೆ ಆಗಿರುವ ಆಕೆಯ ಕಷ್ಟ-ಸುಖಗಳ ಬಗ್ಗೆ ಸರಕಾರ, ಸಂಘಸಂಸ್ಥೆ ಅರಿಸಿ ಕಾರ್ಯವೆಸಗಬೇಕು. ವೇಶ್ಯೆಯರು ಶೋಷಣೆ ಮುಕ್ತವಾದ ವಾತಾವರಣದಲ್ಲಿ ತಮ್ಮ ವೃತ್ತಿ ಮುಂದುವರಿಸಲೂ ಕೂಡ ಅವಕಾಶ ಇರಬೇಕು. ಆಕೆಗೆ ದೈಹಿಕ, ಮಾನಸಿಕ ರಕ್ಷಣೆ ನೀಡಬೇಕು.

ವೇಶ್ಯಾವಾಟಿಕೆಯನ್ನು ಜಗತ್ತಿನಲ್ಲಿ ಇದುವರೆಗೆ ನಿಯಂತ್ರಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಇದನ್ನು ವಾಸ್ತವ ಎಂದು ಒಪ್ಪಿಕೊಳ್ಳಬೇಕು. ವಿವಾಹೇತರ ಲೈಂಗಿಕ ಚಟುವಟಿಕೆ ಸಮಾಜದಲ್ಲಿ ಇದೆ ಎನ್ನುವುದು ವಾಸ್ತವ. ವಿವಾಹಿತ ಅಥವಾ ವಿವಾಹೇತರ ಲೈಂಗಿಕ ಕ್ರಿಯೆಯಲ್ಲಿ ಏನು ವ್ಯತ್ಯಾಸ? ಎರಡೂ ಕಡೆ ಪರಸ್ಪರ ಒಪ್ಪಿಗೆಯಿಂದ ಕ್ರಿಯೆ ನಡೆಯುತ್ತದೆ. ಒಪ್ಪಿಗೆ ಇಲ್ಲದೆ ಬಲವಂತದಿಂದ ಕ್ರಿಯೆ ನಡೆದರೆ ಎರಡೂ ಸಂದರ್ಭದಲ್ಲೂ ಅದು ಅಪರಾಧ. ಪ್ರತಿಫಲ ನಿರೀಕ್ಷೆಯಿಂದ ನಡೆಯುವ ವೇಶ್ಯಾವಾಟಿಕೆಗೆ ಮಾನ್ಯತೆ ನೀಡಿದರೆ ತಪ್ಪಿಲ್ಲವೆಂದು ನನ್ನ ಭಾವನೆ. ನೀವು ಬಯಸಿ ಅಥವಾ ಬಯಸದಿರಿ ವೇಶ್ಯಾವಾಟಿಕೆ ಜಗತ್ತಿನಲ್ಲಿ ನಡೆದೆ ಇದೆ. ಲೈಂಗಿಕಕ್ರಿಯೆ ಈಗ ಹಿಂದೆಂದಿಗಿಂತಲೂ ಸುರಕ್ಷಿತವಾಗಿರುವುದರಿಂದ ವಿವಾಹೇತರ ಲೈಂಗಿಕಕ್ರಿಯೆ ಈಗ ಸಾಮಾನ್ಯವಾಗಿದೆ. ಚೆನ್ನೈಯಲ್ಲಿ ನಡೆದ ಸಮೀಕ್ಷೆಯೊಂದರ ಪ್ರಕಾರ ಬಹುಪಾಲು ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರು ವಿವಾಹ ಪೂರ್ವ ಲೈಂಗಿಕ ಕ್ರಿಯೆ ಅನುಭವ ಹೊಂದಿದ್ದಾರೆ. ಹೀಗಿರುವಾಗ ವೇಶ್ಯೆಯನ್ನು ಮಾತ್ರ ತುಚ್ಛವಾಗಿ ಕಾಣುವ ಅಗತ್ಯವಾದರೂ ಏನು?

ವೇಶ್ಯಾವಾಟಿಕೆ ಒಂದು ಒಪ್ಪಿತವಾದ ವಿಚಾರವಾಗಿರುವಾಗ ಇದರ ಸುವ್ಯವಸ್ಥೆ, ಸುಧಾರಣೆ ಬಗ್ಗೆ ಯೋಚಿಸುವುದು ಸೂಕ್ತ. ಕಾನೂನುಬದ್ಧಗೊಳಿಸಿದಾಗ ಮಾತ್ರ ವೇಶ್ಯೆಗೆ ರಕ್ಷಣೆ ಕೊಡಲು ಸಾಧ್ಯ, ಆಕೆಯ ಹಾಗೂ ಆಕೆಯ ಬಳಿ ಬರುವವರ ಆರೋಗ್ಯ ರಕ್ಷಣೆ ಸಾಧ್ಯ. ಆಕೆಗೆ ಸರಕಾರಿ ಸೌಲಭ್ಯ ಕಲ್ಪಿಸಲು ಸಾಧ್ಯ. ಏಡ್ಸ್‌ನಂತಹ ಭೀಕರ ರೋಗ ಜಗತ್ತನ್ನು ಕಾಡುವಾಗ ಲೈಂಗಿಕ ವೃತ್ತಿ ಮಹಿಳೆಯರಿಗೆ ಕಡ್ಡಾಯ ಅನುಮತಿ, ನಿಗದಿತ ಚೆಕ್‌ಅಪ್ ಅಗತ್ಯ.

ಸಮಾಜ ಕಣ್ಣು ಮುಚ್ಚಿ ಹಾಲು ಕುಡಿಯಲು ಸಾಧ್ಯವಿಲ್ಲ. ವೇಶ್ಯಾವಾಟಿಕೆಯನ್ನು ಒಂದು ವೃತ್ತಿ ಎಂದು ಪರಿಗಣಿಸಿ ಅದರ ಒಳಿತು ಕೆಡುಕುಗಳ ನಿವಾರಣೆಗೆ ಮುಂದಾಗಬೇಕು. ವೇಶ್ಯಾವಾಟಿಕೆ ಬೇಕು, ಆದರೆ ಅದನ್ನು ಒಪ್ಪಲು ಸಾಧ್ಯವಿಲ್ಲವೆನ್ನುವುದು ಮೂರ್ಖತನ.

ಈ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಶೋಷಿತಳು. ಅವಳಿಗೆ ಎಲ್ಲಾ ರೀತಿಯ ರಕ್ಷಣೆ ಒದಗಿಸಬೇಕು. ವೇಶ್ಯಾವಾಟಿಕೆಯಲ್ಲೂ ಮಹಿಳೆಯೇ ದುರ್ಬಲ ಸಂಗಾತಿ. ಅವಳಿಗೂ ರಕ್ಷಣೆ ಅಗತ್ಯ. ಆದ್ದರಿಂದ ವೇಶ್ಯಾವಾಟಿಕೆಯನ್ನು ಒಂದು ವೃತ್ತಿ ಎಂದು ಪರಿಗಣಿಸಿದರೆ ಮಾತ್ರ ಅದರಲ್ಲಿ ತೊಡಗಿರುವ ಮಹಿಳೆಗೆ ರಕ್ಷಣೆ ಕೊಡಲು ಸಾಧ್ಯ. ವೇಶ್ಯಾವಾಟಿಕೆ ಮಾಡಬಹುದು. ಆದರೆ ಅದಕ್ಕಾಗಿ ಯಾರನ್ನೂ ಆಹ್ವಾನಿಸಬಾರದು ಎಂಬ ಕಾನೂನು ಅಪಹಾಸ್ಯದ್ದು. ಇದು ಬದಲಾಗಬೇಕು. ವೇಶ್ಯಾವಾಟಿಕೆ ಪ್ರತಿಬಂಧ ಸಾಧ್ಯವೇ ಇಲ್ಲ. ಇದು 'ನೀನು ನೀರು ಕುಡೀಬೇಕು ಎಂದಷ್ಟೇ' ಮೂರ್ಖತನದ್ದು.

ಯುದ್ಧ ಸಮಯದಲ್ಲಿ ಅಮೆರಿಕದ ಸೇನೆಯ ಪುರುಷರ ಕಾಮದಾಹ ಇಂಗಿಸಲು ಮಹಿಳೆಯರನ್ನು ವಿಮಾನದಲ್ಲಿ ಕರೆದೊಯ್ಯಲಾಗುತ್ತಿತ್ತು. ಎಷ್ಟೋ ಹುಡುಗಿಯರು ದೇಶಪ್ರೇಮದ ಭಾಗವಾಗಿ ಪುರುಷ ಸೈನಿಕರನ್ನು ತೃಪ್ತಿ ಪಡಿಸಲು ಸ್ವಂತ ಪ್ರೇರಣೆಯಿಂದ ತೆರಳುತ್ತಿದ್ದರು. ಇವರನ್ನು 'Comfort Girls' ಎಂದು

ಕರೆಯಲಾಗುತ್ತಿತ್ತು. ಪುರುಷ ವಿವಾಹೇತರ ಸಂಬಂಧ ಹೊಂದಬಾರದೆಂದು ಪರಿಭಾಷಿಸುವುದು ಸೂಕ್ತವಲ್ಲ. ಸಮಾಜ ತನ್ನದೇ ನಿಬಂಧನೆ ಇತಿಮಿತಿ ಹಾಕಿಕೊಂಡಿದೆ. ಅದು ಉತ್ತಮ ನಿಬಂಧನೆಗಳೇ. ಆದರೂ ಅದನ್ನು ಮೀರುವುದು ಕೂಡ ಅಷ್ಟೇ ಸುಲಭ. ಆದ್ದರಿಂದ ನನ್ನ ಪ್ರಕಾರ ವೇಶ್ಯಾವಾಟಿಕೆಗೆ ಮಾನ್ಯತೆ ನೀಡಿ ಅದನ್ನು ವೃತ್ತಿ ಎಂದು ಘೋಷಿಸುವುದು ಸೂಕ್ತ. ವೇಶ್ಯಾವೃತ್ತಿಯಲ್ಲಿರುವ ಮಹಿಳೆಯ ಹಿತಕ್ಕಾಗಿಯೇ ಇದನ್ನು ಕಾನೂನು ಬದ್ಧಗೊಳಿಸಿ ಅವಳಿಗೆ ಎಲ್ಲಾ ಸೌಲಭ್ಯ ಕೊಡಬೇಕು.

ಆಕೆಯನ್ನು ದೈಹಿಕವಾಗಿ ನಿರಂತರವಾಗಿ ಶೋಷಿಸುವ ಅವಕಾಶ ಇರಬಾರದು. ಸಮಯ, ವಿಶ್ರಾಂತಿ, ಆರೋಗ್ಯ ತಪಾಸಣೆ, ಗಿರಾಕಿಗಳ ಆರೋಗ್ಯ ತಪಾಸಣೆ, ವಿಕೃತ ಕಾಮಿಯಿಂದ ರಕ್ಷಣೆ ಎಲ್ಲವೂ ಮಹಿಳೆಗೆ ಒದಗಿಸಬೇಕು. ಕಾರ್ಮಿಕ ಕಾನೂನುಗಳಿಲ್ಲವೇ? ಅದೇರೀತಿ ಎಲ್ಲಾ ಸೌಲಭ್ಯ ಕೊಡಬೇಕು. ನಿವೃತ್ತಿ ನಂತರ ನಿವೃತ್ತಿ ವೇತನವನ್ನೂ ಒದಗಿಸಬೇಕು.

ವೇಶ್ಯಾವಾಟಿಕೆ ವೃತ್ತಿಯಾಗಿರಲಿ, ಹವ್ಯಾಸವಾಗಿರಲಿ. ಮಹಿಳೆಗೆ ಇದಕ್ಕಾಗಿ ಶಿಕ್ಷೆ ನೀಡುವುದು ಸಲ್ಲ. ದಂಡ ಹಾಕುವ ಕ್ರಮವೂ ಸೂಕ್ತವಾದುದಲ್ಲ. ಇನ್ನು ಈ ಮಹಿಳೆಯರ ಪುನರ್ವಸತಿ ಪ್ರಶ್ನೆ, ಇದು ತುಂಬಾ ಕಷ್ಟದ ಕೆಲಸ. ಸುಲಭದಲ್ಲ. ಆಕೆಗೆ ಯಾವ ರೀತಿಯ ಪರ್ಯಾಯ ಬದುಕು ಕೊಡುತ್ತೀರಿ? ಸಮಾಜದಲ್ಲಿ ಅವಳು ವಿವಾಹವಾಗಿ ಜೀವನ ಸಾಗಿಸಬೇಕು. ಅದು ಸಾಧ್ಯವೆ? ಎಷ್ಟು ಜನಕ್ಕೆ ಮದುವೆ ಮಾಡುತ್ತೀರಿ? ಮದುವೆ ಬಳಿಕವೂ ಆಕೆಗೆ ಬದುಕಿನ ಖಾತರಿ ಏನು? ಈ ಹಂತದಲ್ಲಿ ವೃತ್ತಿ ಬಿಡಿಸಿ ಪುನರ್ವಸತಿ ಮಾಡುವುದು ಕಷ್ಟವೆಂದೇ ಕಾಣುತ್ತಿದೆ.

ಈ ಎಲ್ಲಾ ವಿಚಾರಗಳ ನಡುವೆಯೂ ನಾನು ಹೇಳುವುದೆಂದರೆ, ವೃತ್ತಿಯಲ್ಲಿ ಈಗಾಗಲೇ ಇರುವವರ ಹಕ್ಕು ರಕ್ಷಣೆ ಮಾಡಿ. ಆದರೆ ಇದೇ ಸಂದರ್ಭದಲ್ಲಿ ಹೊಸದಾಗಿ ವೇಶ್ಯಾವೃತ್ತಿಗೆ ಸೇರುವುದನ್ನು ತಡೆಯಬೇಕೆನ್ನುವುದೇ ನನ್ನ ನಿಲುವು. ವೇಶ್ಯಾವಾಟಿಕೆ ಬೆಳೆಯಲು ಪ್ರೋತ್ಸಾಹ ಸಲ್ಲ. ಈ ಬಗ್ಗೆ ಜಾಗೃತಿ ಮೂಡಿಸಬೇಕು. ಒಮ್ಮೆ ಈ ವೃತ್ತಿಗಿಳಿದರೆ ಮತ್ತೆ ಸಾಮಾನ್ಯ ಜೀವನಕ್ಕೆ ಬರಲು ಸಾಧ್ಯವಿಲ್ಲವೆಂದು ತಿಳಿ ಹೇಳಬೇಕು. ಭಾರತದ ಸಂದರ್ಭದಲ್ಲಿ ಒಮ್ಮೆ ಆಕೆ ವೇಶ್ಯೆಯಾದರೆ ಮತ್ತೆ ಹಿಂದಿನ ಜೀವನಕ್ಕೆ ಮರಳುವುದು ಕಷ್ಟ. ಆದ್ದರಿಂದ ನನ್ನ ದೃಢವಾದ ನಿಲುವೆಂದರೆ, ಮಹಿಳೆಗೆ ವೇಶ್ಯೆಯ ಬದುಕು ಸಹನೀಯವಲ್ಲ, ಕೆಟ್ಟದ್ದು. ಆದ್ದರಿಂದ ಆಕೆ ಈ ಕ್ಷೇತ್ರಕ್ಕೆ ಪ್ರವೇಶಿಸದಂತೆ ತಡೆಯಬೇಕು.

ವೇಶ್ಯಾವೃತ್ತಿಯಲ್ಲಿ ಮಹಿಳೆಯನ್ನು ಮಾತ್ರ ತುಚ್ಛವಾಗಿ ಏಕೆ ಕಾಣುತ್ತೀರಿ? ಇದರಲ್ಲಿ ಪಾಲ್ಗೊಳ್ಳುವ ಪುರುಷನ ಬಗ್ಗೆ ಸಮಾಜ ಏಕೆ ಏನು ಮಾತನಾಡುವುದಿಲ್ಲ? ಪುರುಷ ವೇಶ್ಯೆಯ ಬಳಿ ಹೋಗಬಹುದು. ಮಹಿಳೆ ಮಾತ್ರ 'ಪತಿವ್ರತೆ' ಎಂಬ ವಾದದಲ್ಲಿ ಅರ್ಥವೇನಿದೆ?

ಒಟ್ಟಾರೆ ನಾನು ಹೇಳುವುದೇನೆಂದರೆ ವೇಶ್ಯಾವೃತ್ತಿಗೆ ಇಳಿದ ನತದೃಷ್ಟ ಮಹಿಳೆಗೆ ಪೂರ್ಣ ಹಕ್ಕು, ರಕ್ಷಣೆ ನೀಡಿ. ಆದರೆ ಇದೇ ಸಂದರ್ಭದಲ್ಲಿ ವೇಶ್ಯಾವಾಟಿಕೆಗೆ ಮತ್ತಷ್ಟು ಮಹಿಳೆ ಬಲಿಯಾಗುವುದನ್ನು ತಪ್ಪಿಸಿ.

ಕೆ.ವಿ.ಆರ್. ಟಾಗೂರ್

(ಐ.ಜಿ.ಪಿ. ಕೇಂದ್ರ ವಲಯ, ಬೆಂಗಳೂರು)

ವೇಶ್ಯೆಯರ ಮೇಲೆ ಎಲ್ಲರಿಗಿಂತ ಹೆಚ್ಚು ಕ್ರೌರ್ಯ ನಡೆಯುವುದು ಪೊಲೀಸರಿಂದ ಎಂದು ಆರೋಪವಿದೆ. ಇದನ್ನು ಅನುಮೋದಿಸುತ್ತಲೇ ನನ್ನ ಅಭಿಪ್ರಾಯವನ್ನು ಮಂಡಿಸುತ್ತೇನೆ. ವೇಶ್ಯೆಯರ ಮೇಲೆ ಪೊಲೀಸರ ದೌರ್ಜನ್ಯ ಕರ್ನಾಟಕದಲ್ಲಿ ಮಾತ್ರವಲ್ಲ ದೇಶದಲ್ಲಿ, ಜಗತ್ತಿನಲ್ಲಿ ಅತಿಯಾಗಿ ಆಗುತ್ತಿದೆ. ಸಮವಸ್ತ್ರ ಧರಿಸಿದ ಪೊಲೀಸ್ ಸಮಾಜದಲ್ಲಿ, ತನ್ನ ಕುಟುಂಬದಲ್ಲಿ, ನೆರೆಕೆರೆಯಲ್ಲಿ, ತನ್ನ ಮನೆಕೆಲಸದ ಆಳಿನ ಸುತ್ತ ನಡೆಯುವ ಕ್ರೌರ್ಯವನ್ನು ಗಮನಿಸದವನಾಗುತ್ತಾನೆ. ಸಮವಸ್ತ್ರ ಅಧಿಕಾರ ಇವರಿಗೆ ದರ್ಪವನ್ನು ಕೊಟ್ಟಿದೆ. ಸರಕಾರ ಕಾನೂನನ್ನು ಇವರ ಕೈಗೆ ಕೊಟ್ಟು ಏನಾದರೂ ಮಾಡು ಎಂದಿದೆ. ಆದರೆ ಎಷ್ಟೋ ಬಾರಿ ಈ ಕಾನೂನನ್ನು ಮೀರಿ ಪೊಲೀಸ್ ಹೊರಗೆ ಕೈ ಹಾಕುತ್ತಾನೆ. ಲಾಠಿ, ಬಂದೂಕನ್ನು ಹೊರಗೆ ಹಾಕುತ್ತೇವೆ. ನಮ್ಮ ಮನಸ್ಸನ್ನು ಕಿತ್ತು ಹೊರಗಿಟ್ಟು ಸ್ಪಂಧಿಸುತ್ತೀವಿ. ಅದು ಆಗಬಾರದು.

ಪೊಲೀಸರು ಮಾನವೀಯತೆಯನ್ನು ಮರೆಯಬಾರದೆನ್ನುವುದೇ ನನ್ನ ಮಾತಿನ ಆಶಯ. ಪೊಲೀಸರು ಈಗಿರುವ ಕಾನೂನನ್ನು ದುರುಪಯೋಗ ಪಡಿಸಿಕೊಳ್ಳದಂತೆ ಮಾಡಲು ಅದರ ಅರಿವನ್ನು ಅವರಿಗೆ ಕೊಡಬೇಕು. 'ಪೀಟಾ ಮತ್ತು ಸೀಟಾ' (Privention of Immoral Traffic Act and Supression of Immoral Traffic Act) ಇದನ್ನು ಅಕ್ಷರ, ಅಕ್ಷರ ಕೂಡ ಅರ್ಥ ಮಾಡಿಕೊಳ್ಳುವ ತರಬೇತಿಯನ್ನು ನಮ್ಮ ಪೊಲೀಸರಿಗೆ, ಉನ್ನತ ಅಧಿಕಾರಿಗಳಿಗೆ ನೀಡಿದರೆ ಬಹುಶಃ ವೇಶ್ಯೆಯರ ಮೇಲೆ ಪೊಲೀಸರಿಂದ ನಡೆಯುವ ಕ್ರೌರ್ಯ ಸ್ವಲ್ಪ ಕಡಿಮೆಯಾಗಬಹುದು. ಪೊಲೀಸರು ಮಾನವೀಯತೆಯನ್ನು ಬೆಳೆಸಿಕೊಳ್ಳಬೇಕಾಗಿದೆ. ಪೊಲೀಸರು ಸ್ವಲ್ಪ ಕಿವುಡು. ಅವರು ಜಾಗೃತರಾಗಬೇಕಾದರೆ ಸಂಘಸಂಸ್ಥೆಗಳು ಗಟ್ಟಿ ಧ್ವನಿಯಿಂದ ಮಾತನಾಡಬೇಕು. ಅಳುವ ಧ್ವನಿ ನಮಗೆ ಕೇಳುವುದೇ ಇಲ್ಲ, ಹೊಡಿತೀವಿ, ಬಡಿತೀವಿ, ಆದರೆ ಕೂಗಬೇಡ ಎನ್ನುತ್ತೀವಿ. ಇದು ಅಭ್ಯಾಸ, ಅಳುವವರನ್ನು ಸಂತೈಸುವ ಶಕ್ತಿಯನ್ನು ಕಾನೂನು ನಮಗೆ ನೀಡಿದೆ ವಿನಾಃ ಅಳುವಂತೆ ಮಾಡಲು ಅಲ್ಲ ಈ ದೌರ್ಜನ್ಯ ನಡೆಸಲು ಪೊಲೀಸರಿಗೆ ಅಧಿಕಾರ ಇಲ್ಲ.

ಇನ್ನು ವೇಶ್ಯಾವೃತ್ತಿ ಬಗ್ಗೆ ಚಿಂತನೆ ಮಾಡಿದರೆ, ನಮಗೆ ನಾಲ್ಕೈದು ಕಾರಣಗಳು ಕಂಡುಬರುತ್ತವೆ. ನಾನು ಎಷ್ಟೋ ಬಾರಿ ವೇಶ್ಯೆಯರನ್ನು ವಿಚಾರಿಸಿದ್ದೇನೆ. ಎಚ್ಚರಿಕೆ ಕೊಟ್ಟು ಕಳುಹಿಸಿದ್ದೇನೆ. ಹಲವೆಡೆ ಕೆಲಸಕ್ಕೆ ಸೇರಿಸಿದ್ದು ಅಲ್ಲಿಂದ ಅವರ ಕೆಲಸದ ಬಗ್ಗೆ ಉತ್ತಮ ವರದಿ ಕೂಡ ಬಂದಿದೆ. ಆದರೆ ಇಲ್ಲಿ ಇರುವ ದೊಡ್ಡ ಸಮಸ್ಯೆ ಎಂದರೆ- ಆಕೆ ಎಲ್ಲೇ ಕೆಲಸಕ್ಕೆ ಹೋಗಲಿ, ಸೇರಲಿ ಅವಳನ್ನು 'ವೇಶ್ಯೆ' ಎಂದು ಬೊಟ್ಟು ಮಾಡಿ ತೋರುತ್ತಾರೆ. ನಮ್ಮನ್ನೇ ವಿಚಾರಿಸಿಕೊಳ್ಳೋಣ ಈ ಗಣ್ಯ ಸಮಾಜದ ಸಭ್ಯರೆನಿಸಿಕೊಂಡವರೇ ವೇಶ್ಯೆಯರಾಗಿಲ್ಲವೇ?

ಕಾನೂನು ಪ್ರಕಾರವೇ ವೇಶ್ಯಾವೃತ್ತಿ ಅಪರಾಧವಲ್ಲ. ದುಡ್ಡು ಮಾಡಲು ವೇಶ್ಯೆಯರ ದಂಧೆ ನಡೆಸಿದರೆ, ಬಲವಂತವಾಗಿ ವೇಶ್ಯಾವಾಟಿಕೆ ನಡೆಸಿದರೆ, ಅದನ್ನೇ ದಂಧೆ ಮಾಡಿಕೊಂಡರೆ ಅದು ಅಪರಾಧ. ವೇಶ್ಯಾವಾಟಿಕೆಗೆ ಪ್ರೋತ್ಸಾಹಿಸುವುದು, ಸ್ಥಳ ಒದಗಿಸುವುದು ಅಪರಾಧ. ಸಾರ್ವಜನಿಕ ಸ್ಥಳದಲ್ಲಿ ನಿಂತು ಇದಕ್ಕೆ ಒತ್ತಾಯಿಸುವುದು ಅಪರಾಧ. ಆದರೆ ಸ್ವಂತ ಆಸಕ್ತಿಯಿಂದ ತೃಷೆಗಾಗಿ ತೆರಳಿದರೆ ಅದು ಅಪರಾಧವಲ್ಲ.

ನಾನು ಜರ್ಮನಿಗೆ ಹೋಗಿದ್ದಾಗ ವೇಶ್ಯಾಗೃಹಗಳಿಗೆ ಭೇಟಿ ನೀಡಿದ್ದೆ. ಅಲ್ಲಿ ಇದಕ್ಕೆ ಕಾನೂನಿನ ಮಾನ್ಯತೆ ನೀಡಲಾಗಿದೆ. ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ವಿಮೆ, ಉಳಿಯಲು ಸ್ಥಳ, ಆರೋಗ್ಯ ತಪಾಸಣೆ ವ್ಯವಸ್ಥೆ ಕಲ್ಪಿಸಲಾಗಿದೆ. ಇದೇ ರೀತಿ ಅನೇಕ ದೇಶಗಳಲ್ಲಿ ವೇಶ್ಯಾವೃತ್ತಿಯನ್ನು ಅಪರಾಧವೆಂದು ಪರಿಗಣಿಸಿಲ್ಲ. ಅವರಿಗೆ ವಸತಿ, ಆಹಾರ, ಆರೋಗ್ಯ ಖಾತರಿ ಒದಗಿಸಲಾಗಿದೆ. ಅವರ ಮಕ್ಕಳಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗಿದೆ.

ಲೈಂಗಿಕ ಕ್ರಿಯೆ ಪ್ರಕೃತಿದತ್ತವಾಗಿ ಪ್ರತಿಯೊಂದು ಪ್ರಾಣಿ, ಮನುಷ್ಯನಿಗೆ ಬೇಕಾಗಿರುವ ಅಗತ್ಯತೆ. ಮದುವೆಯಾಗಿ ಇದನ್ನು ಪಡೆ ಎನ್ನುವ ಭಾರತೀಯ ಸಂಸ್ಕೃತಿ ಅದು ಸಾಧ್ಯವಾಗದಿದ್ದಲ್ಲಿ ವೇಶ್ಯಾಗೃಹಕ್ಕೆ ತೆರಳಲೂ ಹೇಳುತ್ತದೆ.ಕರ್ನಾಟಕ, ಭಾರತ, ಪ್ರಪಂಚ ಬಿಡಿ, ಸ್ವರ್ಗದಲ್ಲಿ ವೇಶ್ಯಾವೃತ್ತಿ ಇದೆಯಲ್ಲ, ಅಪ್ಸರೆ, ಮೇನಕೆಯರೆಲ್ಲ ಯಾರು? ಸ್ವರ್ಗದಲ್ಲಿರುವ ಇಂದ್ರನೂ ವೇಶ್ಯಾವೃತ್ತಿ ಅಪರಾಧವೆಂದಿಲ್ಲ. ರಾಜಮಹಾರಾಜರೂ ತಮಗೆ ಬೇಕಾದಷ್ಟು ಉಪಪತ್ನಿಯರನ್ನು ಇರಿಸಿಕೊಂಡಿದ್ದರು. ನನ್ನ ಅನುಭವದಲ್ಲೆ ನೋಡಿದಂತೆ ಒಬ್ಬ ಪ್ರಭಾವಿ ಸ್ವಾಮೀಜಿ ವೇಶ್ಯಾದಂಧೆ ನಡೆಸುತ್ತಿರುವುದನ್ನು ಪೊಲೀಸ್ ಅಧಿಕಾರಿಯಾಗಿ ನಾನು ಎದುರುಗೊಂಡಿದ್ದೇನೆ.

ವೇಶ್ಯೆಯಾಗಲು ಯಾವ ಹೆಣ್ಣು ಮಗುವೂ ಬಯಸುವುದಿಲ್ಲ. ಸರಿ ನ್ಯಾಯದಿಂದ ಬದುಕಲು ಎಷ್ಟು ಜನ ಹೆಣ್ಣು ಮಕ್ಕಳಿಗೆ ಉದ್ಯೋಗ ದೊರೆಯುತ್ತದೆ? ವೇಶ್ಯಾವಾಟಿಕೆಯಲ್ಲಿರುವ ಹೆಣ್ಣು ಮಕ್ಕಳನ್ನು ಹೊರಗೆ ಕರೆತಂದು ಸರಕಾರ, ಸಮಾಜ ಏನು ಮಾಡಬಹುದು? ಎಷ್ಟು ಜನಕ್ಕೆ ಉದ್ಯೋಗ ಕೊಡುತ್ತೀರಿ, ಗಂಭೀರವಾಗಿ ಯೋಚನೆ ಮಾಡಬೇಕು. ಬಹುರಾಷ್ಟ್ರೀಯ ಸಂಸ್ಥೆಗಳು, ಎನ್.ಜಿ.ಒ.ಗಳು - ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಕೂತು ಚರ್ಚೆ ಮಾಡಿ ವೇಶ್ಯಾವೃತ್ತಿಯ ಮಹಿಳೆಯರಿಗೆ ಪರ್ಯಾಯ ಬದುಕು ಕಲ್ಪಿಸುವ ಬಗ್ಗೆ ಯೋಚಿಸಬಹುದು.

ಭಾರತದಲ್ಲೂ ಕೂಡ ವೇಶ್ಯಾವೃತ್ತಿಯನ್ನು ಕಾನೂನು ವ್ಯಾಪ್ತಿಗೆ ಒಳಪಡಿಸಿ ಅದಕ್ಕೆ ಒಂದಷ್ಟು ಜವಾಬ್ದಾರಿ, ಗೌರವ ಬರುವ ಹಾಗೆ ಮಾಡಬೇಕು. ಗಂಡು ಪೋಲೀಸರು ವೇಶ್ಯೆಯರನ್ನು ಅವಮರ್ಯಾದೆಯಿಂದ ಕಾಣುತ್ತಾರೆಂದು ಹೆಣ್ಣು ಕಾನ್‌ಸ್ಟೇಬಲ್‌ಗಳನ್ನು ಬಿಟ್ಟರೆ ಅವರು ಇನ್ನೂ ಕೆಟ್ಟದಾಗಿ ಈ ವೇಶ್ಯೆಯರನ್ನು ನೋಡಿಕೊಳ್ಳುತ್ತಿರುವುದು ವಿಪರ್ಯಾಸ. ವೇಶ್ಯೆಯರನ್ನು ಪ್ರಾಣಿಗಳಿಗಿಂತ ಕಡೆಯಾಗಿ ನೋಡುತ್ತಿರುವುದು ಯಾಕೆಂದು ನನಗೆ ಅರ್ಥವಾಗುತ್ತಿಲ್ಲ. ಆಕೆ ವೇಶ್ಯೆಯಾಗಿರಬಹುದು. ಆದರೆ ಆಕೆಯನ್ನು ವಂಚಿಸುವ, ಶೋಷಿಸುವ ಅಧಿಕಾರ ಇಲ್ಲ.

ನನ್ನ ಪ್ರಕಾರ ಭಾರತದಲ್ಲಿ ಕೂಡ ವೇಶ್ಯಾವಾಟಿಕೆಗೆ ಕಾನೂನು ಬದ್ಧ ಸ್ಥಳಗಳನ್ನು ಗುರುತಿಸುವ ಅಗತ್ಯವಿದೆ. ವೇಶ್ಯಾವೃತ್ತಿಯನ್ನು ಕಾನೂನುಬದ್ಧಗೊಳಿಸುವುದೇ ಸೂಕ್ತ. ವೇಶ್ಯಾದಂಧೆಗೆ ಮಹಿಳೆಯರನ್ನು ದೂಡಿ ಜೀವನ ಮಾಡುವವರಿಗೆ ಉಗ್ರ ಶಿಕ್ಷೆ ನೀಡುವ ಅಗತ್ಯವಿದೆ. ವೇಶ್ಯಾವಾಟಿಕೆ ಬಗ್ಗೆ ಕಾನೂನು ಏನು ಹೇಳುತ್ತದೆ ಎಂದು ನಮ್ಮ ಪೊಲೀಸರಿಗೆ ತಿಳಿ ಹೇಳಬೇಕಾಗಿದೆ.

ಶಿಕ್ಷೆಯಲ್ಲಿ ವೇಶ್ಯೆಗೆ ಅನ್ಯಾಯವಾಗುತ್ತದೆ. ಆಕೆ ಜತೆ ಬಂಧಿಸುವ ವ್ಯಕ್ತಿಗೆ ಕಾನೂನು ಸುಲಭ ಮಾರ್ಗ ತೋರುತ್ತದೆ. ಗಿರಾಕಿಗೂ ಶಿಕ್ಷೆ ಕೊಡಲು ಸಾಧ್ಯವಾಗಬೇಕು. ವೇಶ್ಯಾಗೃಹಗಳಿಂದ ಬಂಧಿಸಿ ತಂದಾಗಲೂ ನಾವು ಪೊಲೀಸರು ನಮ್ಮ ಅನುಕೂಲಕ್ಕಾಗಿ ಎಲ್ಲೋ ಬೀದಿ ಬದಿಯಲ್ಲಿ ಬಂಧಿಸಿದ ಹಾಗೆ ದಾಖಲೆ ಮಾಡುತ್ತೇವೆ. 'ಆಕೆ ಬೀದಿಯಲ್ಲಿ ಪ್ರಚೋದಿಸುತ್ತಿದ್ದಳು' ಎಂದು ದಾಖಲೆ ಸೃಷ್ಟಿಸುತ್ತೀವಿ. ಇದು ಕೂಡದು. ಇದು ಅಕ್ರಮ. ನಾವು ಕಾನೂನು ಪ್ರಕಾರವೇ ಎಲ್ಲವನ್ನೂ ಮಾಡಿದರೆ ವೇಶ್ಯೆಗೆ ಅಗತ್ಯ ಗೌರವ, ರಕ್ಷಣೆ ಕಾನೂನಿನಲ್ಲಿ ಇದೆ.

ನನ್ನ ಪ್ರಕಾರ ಸಮಾಜದಿಂದ ವೇಶ್ಯಾವಾಟಿಕೆಯನ್ನು ನಿವಾರಿಸಲು ಅಥವಾ ಪೂರ್ಣವಾಗಿ ತೆಗೆದು ಹಾಕಲು ಸಾಧ್ಯವೇ ಇಲ್ಲ. ರಾಮಾಯಣ-ಮಹಾಭಾರತ ಕಾಲದಲ್ಲಿ ಇದು ಇತ್ತು. ಆವಾಗಲೂ ಅದನ್ನು ತೆಗೆಯಲು ಸಾಧ್ಯವಾಗಲಿಲ್ಲ. ವೇಶ್ಯಾವಾಟಿಕೆಯೇ ಸಮಾಜದಲ್ಲಿ ಇರಬಾರದು ಎಮದು ಯೋಚಿಸುವುದು, ಅದಕ್ಕಾಗಿ ಪ್ರಯತ್ನಿಸುವುದು ವ್ಯರ್ಥ ಹಾಗೂ ಅನಾವಶ್ಯಕ.

(ಲೈಂಗಿಕ ವೃತ್ತಿ ಮತ್ತು ಮಾನವ ಹಕ್ಕುಗಳ ಕುರಿತು 'ನೆಲೆ' ಬೆಂಗಳೂರಿನಲ್ಲಿ ೭.೧೧.೨೦೦೨ ರಲ್ಲಿ ಸಂಘಟಿಸಿದ ಸಮಾವೇಶದಲ್ಲಿ ಮಾಡಿದ ಭಾಷಣದ ಆಯ್ದ ಭಾಗ)

ಜಯಂತಿ:

(ಖ್ಯಾತ ಚಿತ್ರನಟ)

ಆಗಿನ ಕಾಲದಿಂದಲೂ ವೇಶ್ಯಾವೃತ್ತಿಯ ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲ. ಅವರು ಶೋಷಣೆಗೆ ಒಳಗಾಗುತ್ತಲೇ ಇದ್ದಾರೆ. ಅದನ್ನು ತಡೆಯುವವರೂ ಕಾಣುತ್ತಿಲ್ಲ. ಭಾಷಣ ಮಾಡುವಾಗ ಮಾತ್ರ ಹೆಣ್ಣು ತಾಯಿಗೆ ಸಮಾನ, ತಂಗಿಗೆ ಸಮಾನ ಎನ್ನುತ್ತಾರೆ. ಇದನ್ನು ಕೇಳಿ ಕೇಳಿ ಸಾಕಾಗಿದೆ. ಆದರೆ ಹೃದಯದಿಂದ ಆ ಮಾತುಗಳು ಬಂದಿಲ್ಲ. ಹೆಣ್ಣು ಮಕ್ಕಳನ್ನು ತಾಯಿಗೆ ಸಮಾನ ಎನ್ನುವವರು ಯಾಕೆ ಈ ರೀತಿಯ ಶೋಷಣೆ ಮಾಡುತ್ತಾರೆ?

ಎಷ್ಟೋ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಇಷ್ಟವಿಲ್ಲದಿದ್ದರೂ ಕೆಲವೊಮ್ಮೆ ಯಾರದೋ ಬಲವಂತಕ್ಕೆ, ಮೋಸಕ್ಕೆ ಒಳಗಾಗಿ ಈ ವೃತ್ತಿಗೆ ಬರುತ್ತಾರೆ. ಮಸಣದ ಹೂ, ಶ್ರೀದೇವಿ ಮೊದಲಾದ ಚಿತ್ರಗಳಲ್ಲಿ ನಾನು ಇದೇ ಪಾತ್ರ ಮಾಡಿದ್ದೇನೆ. ಸಮಾಜದಲ್ಲಿ ಕೇಳಿದ, ನೋಡಿದ ಅನುಭವವನ್ನು ನಾನು ಆ ಪಾತ್ರಗಳಿಗೆ ತುಂಬಿದ್ದೆ.

ವೇಶ್ಯೆಯರನ್ನು ಆಕೆ ಗಟ್ಟಿಮುಟ್ಟಾಗಿ ಇರುವವರೆಗೂ ಬಳಸುತ್ತಾರೆ. ಬಳಿಕ ಅವಳನ್ನು ಕಸದಂತೆ ಕಾಣುತ್ತಾರೆ. ತುತ್ತು ಅನ್ನಕ್ಕೂ ಅವಳು ಪರದಾಡಬೇಕಾಗುತ್ತದೆ.

ಮಹಿಳೆ ಅಬಲೆ ಅಲ್ಲ. ಆದರೆ ಅವಳನ್ನು ನಿರ್ದಯ ಬದುಕಿಗೆ ತಳ್ಳಿ ಅವಳಿಗೆ 'ಸೂಳೆ' ಪಟ್ಟ ಕಟ್ಟುತ್ತಾರೆ. ಸಮಾಜ ಈ ಬಗ್ಗೆ ಗಂಭೀರ ಚಿಂತನೆ ನಡೆಸಬೇಕು. ನೊಂದ ಈ ಮಹಿಳೆಗೆ ಗೌರವ, ಬದುಕು ಕೊಡಲು ಸಾಧ್ಯವಾಗಬೇಕು.

ಇನ್ನು ಮಕ್ಕಳ ಇವರ ಸ್ಥಿತಿ ಇನ್ನೂ ಶೋಚನೀಯ. ಇವರನ್ನು ಅತ್ಯಾಚಾರಕ್ಕೆ ಒಳಪಡಿಸಿ, ವಂಚಿಸಿ ಅಥವಾ ಅವರ ಅಸಹಾಯಕತೆ ದುರುಪಯೋಗ ಮಾಡಿ ವೇಶ್ಯಾವಾಟಿಕೆಗೆ ತಳ್ಳುತ್ತಾರೆ.

ಶೋಷಣೆಗೆ ಒಳಪಡುವ ವೇಶ್ಯಾವೃತ್ತಿಯ ಹೆಣ್ಣು ಮಕ್ಕಳಿಗೆ ಸರಕಾರದಿಂದ ನೆರವು ಸಿಗಬೇಕು. ಪೊಲೀಸರು ರಕ್ಷಣೆ ಕೊಡಬೇಕು. ಬದಲಿ ಕೆಲಸವನ್ನು ಕಲಿಸಿ ಅವರು ಬದುಕುವಂತೆ ಮಾಡಬೇಕು.

(ಲೈಂಗಿಕ ವೃತ್ತಿ ಮತ್ತು ಮಾನವ ಹಕ್ಕುಗಳ ಕುರಿತು 'ನೆಲೆ' ಬೆಂಗಳೂರಿನಲ್ಲಿ ೭.೧೧.೨೦೦೨ ರಲ್ಲಿ ಸಂಘಟಿಸಿದ ಸಮಾವೇಶದಲ್ಲಿ ಮಾಡಿದ ಭಾಷಣದ ಆಯ್ದ ಭಾಗ)

ಪ್ರೊ. ಸಿ.ಜಿ. ಕೃಷ್ಣಸ್ವಾಮಿ

(ನಿರ್ದೇಶಕರು, ಗಾಂಧಿಭವನ, ಬೆಂಗಳೂರು ವಿ.ವಿ.)

ನಾನು ಮೊದಲ ನಾಟಕ ನಿರ್ದೇಶನ ಮಾಡಿದ್ದು 'ಸನ್ನಿವೇಶ' ಎಂದು. ಅದರಲ್ಲಿ ಬೀದಿಯ ಹೆಣ್ಣು ಮಗಳ ಪಾತ್ರವೇ ಪ್ರಮುಖ. ನಾನು ಉತ್ತರ ಕರ್ನಾಟಕದಲ್ಲಿ ನಾಟಕ ನಿರ್ದೇಶನಕ್ಕೆ ಹೋಗಿರುವಾಗ ಕೆಲವು ಕಡೆ ಅಪಹಾಸ್ಯಕ್ಕೆ ಒಳಗಾಗಿದ್ದೆ. ಸೂಳೆಗಾರಿಕೆ ಮಾಡಲು ಹೊಸ ನಾಟಕವನ್ನೇ ಆಡುತ್ತಿದ್ದಾರೆ ಈ ಪ್ರೊಫೆಸರ್ ಎಂದು ಆಡಿಕೊಂಡ ಪ್ರಸಂಗವೂ ನಡೆದಿದೆ. ನಾಟಕಕ್ಕೆ ಜನ ಬರಲಾರರೆಂದು ನಾವು 'ಪ್ರೊಫೆಸರ್, ವಕೀಲರು, ಗಣ್ಯ ಹೆಸರನ್ನು ಹಾಕಿ' ಕರಪತ್ರ ಹಂಚುತ್ತಿದ್ದವು.

ಲೈಂಗಿಕ ವೃತ್ತಿ ಅಥವಾ ಸೆಕ್ಸ್ ವರ್ಕ್ ಎಂಬುದೆಲ್ಲ ಈಗಿನ ಶಬ್ದ. ಅಚ್ಚ ಕನ್ನಡದಲ್ಲಿ 'ಸೂಳೆಗಾರಿಕೆ' ಎನ್ನುತ್ತೇವೆ. ಈ ವಿಚಾರದ ಬಗ್ಗೆ ಮಾತನಾಡುವ ಮಂದಿ ಬೋಧನೆ ಅಥವಾ ಸನ್ಯಾಸಿ ರೀತಿ ಹೇಳುತ್ತಾರೆ. ಅಕ್ಕಮಹಾದೇವಿ, ಬಸವಣ್ಣ ಏನು ಹೇಳಿದರೆಂದು ವಿವರಿಸುತ್ತಾರೆ.

ಇದೂ ಒಂದು ವೃತ್ತಿ. ಅದಕ್ಕೂ ಕಾನೂನು ಸೌಲಭ್ಯ ಒದಗಿಸಬೇಕೆನ್ನುವುದೇ ನನ್ನ ವಾದ. ಪರಿಹಾರ ನೀಡುವ ಬದಲು ಅದನ್ನು ಅವರ ಹಕ್ಕೆಂದು ಪ್ರತಿಪಾದಿಸಲು ಸಾಧ್ಯವಾಗಬೇಕು. ಪ್ರಪಂಚದ ಬಹಳಷ್ಟು ರಾಷ್ಟ್ರಗಳು, ಸನಾತನ ಸಮಾಜ ವ್ಯವಸ್ಥೆಯಲ್ಲೂ ಲೈಂಗಿಕ ವೃತ್ತಿಯ ಹಕ್ಕನ್ನು ಕೊಡಲಾಗಿದೆ. ನಮ್ಮಲ್ಲಿ ಏಕೆ ಈ ಹಕ್ಕು ಕೊಟ್ಟಿಲ್ಲ ಎನ್ನುವುದು ಪ್ರಶ್ನೆ. ಲೈಂಗಿಕ ವೃತ್ತಿ ಮಹಿಳೆಯರಿಗೆ ಹಲವು ಕಡೆಯಿಂದ ಅನ್ಯಾಯ ನಡೆಯುತ್ತಿದೆ. ವೇಶ್ಯೆ ಎಂದರೆ ಹಣದ ಮೂಟೆ ಅಲ್ಲ. ಆಕೆ ಅಲ್ಯೂಮಿನಿಯಂ ಉಂಗುರ ಕೂಡ ಧರಿಸುವ ಸ್ಥಿತಿಯಲ್ಲಿ ಇಲ್ಲ.

ಕಾನೂನು ರೀತಿಯಲ್ಲಿ ಇವರಿಗೆ ಯಾವ ರೀತಿ ನೆರವಾಗಬಹುದೆಂದು ಯೋಚಿಸಬೇಕು. ಮೈಸೂರು, ಬೆಂಗಳೂರುಗಳಲ್ಲಿ ರೆಡ್‌ಲೈಟ್ ಪ್ರದೇಶವನ್ನು ನಿರ್ಮಾಣ ಮಾಡಿ ಅದಕ್ಕೆ ಮಾನ್ಯತೆ ಕೊಡಲು ಸಾಧ್ಯವಾಗಬೇಕು. ಮಾನವ ನಿರ್ಮಿತ ವಿಕೃತಿಗಳನ್ನು ನಿಯಂತ್ರಿಸಲು, ಅದಕ್ಕೊಂದು ಸ್ವರೂಪ ಕೊಡಲು ಸಾಧ್ಯವಾಗಬೇಕು.

ಈ ವೃತ್ತಿಯನ್ನು ಗಂಭೀರವಾಗಿ ನಡೆಸಿಕೊಂಡು ಹೋಗಲು ಅಗತ್ಯವಾದ ಎಲ್ಲಾ ವ್ಯವಸ್ಥೆ ಒದಗಿಸಬೇಕು. ನ್ಯಾಯಯುತ ಚರ್ಚೆ ಆಗಬೇಕು. ಲೈಂಗಿಕ ವೃತ್ತಿಯನ್ನು ವೃತ್ತಿಯಾಗಿ ಘೋಷಿಸಿ, ಕಾನೂನು ರಕ್ಷಣೆ ಕೊಡುವ ಬಗ್ಗೆ ಆ ವೃತ್ತಿಯಲ್ಲಿ ಇರುವವರನ್ನೇ ಬಲಗೊಳಿಸಿ ಸರ್ಕಾರ ಚರ್ಚಿಸಬೇಕು. ಲೈಂಗಿಕ ವೃತ್ತಿ ಸಮುದಾಯಕ್ಕೆ ಹಕ್ಕುಗಳನ್ನು ಕೊಡುವುದರೊಂದಿಗೆ ಅದರ ಬಾಧ್ಯತೆಗಳನ್ನು ಅವರು ಜವಾಬ್ದಾರಿ ಹೊರುವಂತೆ ಮಾಡಬೇಕು. ಹೀಗೆ ಮಾಡಿದಾಗ ಮಾತ್ರ ಅವರ ಆರೋಗ್ಯ, ಅವರ ಹಕ್ಕುಗಳು, ಅವರ ಮಕ್ಕಳ ಬದುಕು ದೊರಕಿಸಿ ಕೊಡುವುದರೊಂದಿಗೇ ಸಮಾಜದ ಆರೋಗ್ಯ ಕಾಪಾಡಲು ಕೂಡ ಸಾಧ್ಯವಾಗುತ್ತದೆ.

(ಲೈಂಗಿಕ ವೃತ್ತಿ ಮತ್ತು ಮಾನವ ಹಕ್ಕುಗಳ ಕುರಿತು 'ನೆಲೆ' ಬೆಂಗಳೂರಿನಲ್ಲಿ ೭.೧೧.೨೦೦೨ ರಲ್ಲಿ ಸಂಘಟಿಸಿದ ಸಮಾವೇಶದಲ್ಲಿ ಮಾಡಿದ ಭಾಷಣದ ಆಯ್ದ ಭಾಗ)

ಫಿಲೋಮಿನಾ ಪೆರೇಸ್

(ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು)

ಏಸುಕ್ರಿಸ್ತರು ತನ್ನ ಪ್ರಚಾರವನ್ನು ಮುಗಿಸಿ ಬರುವಾಗ ಜರುಸಲೇಂನಲ್ಲಿ ಮಾರ್ಗ ಮಧ್ಯದಲ್ಲಿ ಒಂದು ದೃಶ್ಯ ನೋಡಿದರು. ಓರ್ವ ಹೆಣ್ಣುಮಗಳಿಗೆ ಜನ ಗುಂಪು ಸೇರಿ ಕಲ್ಲಿನಿಂದ ಹೊಡೆಯುತ್ತಿದ್ದರು. ಆ ಮಹಿಳೆ ವೇಶ್ಯಾವಾಟಿಕೆ ನಡೆಸಿ ತಪ್ಪೆಸಗಿದ್ದಳು ಎಂದು ಆ ಜನರು ಕೋಪಗೊಂಡು ಕಲ್ಲಿನಿಂದ ಹೊಡೆದು ಸಾಯಿಸಲು ಮುಂದಾಗಿದ್ದರು. ಏಸುವನ್ನು ಕಂಡ ಆ ಮಹಿಳೆ ಕಾಲಿಗೆ ಬಿದ್ದು ತನ್ನನ್ನು ರಕ್ಷಿಸುವಂತೆ ಮೊರೆ ಇಟ್ಟಳು. ಆಗ ಏಸು ಜನಸಮುದಾಯ ಉದ್ದೇಶಿಸಿ ತಮ್ಮಲ್ಲಿ ಯಾರು ಯಾವುದೇ ಪಾಪ ಮಾಡಿಲ್ಲವೆಂದು ಧೈರ್ಯವಿರುವವರು ಮಾತ್ರ ಕಲ್ಲು ಹೊಡೆಯಿರಿ ಎಂದು ಹೇಳಿದಾಗ ಇಡೀ ಗುಂಪು ಕಲ್ಲನ್ನು ಕೆಳಗೆ ಹಾಕಿ ಏಸುವಿನ ಕ್ಷಮೆ ಯಾಚಿಸುತ್ತಾರೆ.

ವೇಶ್ಯಾವಾಟಿಕೆಯಲ್ಲಿ ಬರೀ ಮಹಿಳೆಯದ್ದಷ್ಟೇ ಪಾತ್ರವೇ? ಪುರುಷ ಅಪರಾಧಿ ಅಲ್ಲವೇ? ಇತ್ತೀಚೆಗೆ ನೈಜೀರಿಯಾದಲ್ಲಿ ನಡೆದ ಘಟನೆ ನೆನಪಾಗುತ್ತದೆ. ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಮಹಿಳೆಗೆ ಏಕಪಕ್ಷೀಯವಾಗಿ ಸರಕಾರ ಶಿಕ್ಷೆ ನೀಡಿತ್ತು. ಇದರ ವಿರುದ್ಧ ಮಹಿಳೆಯರು ಉಗ್ರ ಪ್ರತಿಭಟನೆ ನಡೆಸಿದಾಗ ಸರ್ಕಾರ ತಲೆಬಾಗಿ ವೇಶ್ಯಾವಾಟಿಕೆ ಕಾನೂನನ್ನೇ ತಿದ್ದುಪಡಿ ಮಾಡಿತು.

ಹಲವು ದೇಶಗಳಲ್ಲಿ ವೇಶ್ಯಾವೃತ್ತಿಗೆ ಕಾನೂನು ರಚನೆಯಾಗಿದೆ. ಕೌಟಿಲ್ಯನೂ ಕೂಡ ಇದನ್ನು ವೃತ್ತಿ ಎಂದು ಮಾನ್ಯತೆ ಮಾಡಿದ್ದ. ಆದರೆ ಇದಕ್ಕೆಲ್ಲಾ ವಿರುದ್ಧವಾಗಿ ಮನು ಇಡೀ ಶೂದ್ರ ಸಮುದಾಯದ ಮಹಿಳೆಯರನ್ನು ಎಲ್ಲರಿಗೂ ಸೇರಿದ ತೊತ್ತು ಎಂದು ಹೇಳಿ ಅಪಮಾನ ಮಾಡಿ ಶೋಷಣೆಗೆ ಅವಕಾಶ ಮಾಡಿಕೊಟ್ಟ.

ವೇಶ್ಯೆಯರೇನು ದೇಶದ ಪ್ರಜೆಗಳಲ್ಲವೇ? ಅವರಿಗೂ ಮಾನವ ಹಕ್ಕುಗಳಿಲ್ಲವೆ? ಇದನ್ನು ಇಡೀ ದೇಶ ಚಿಂತಿಸಬೇಕು. ವೇಶ್ಯಾವಾಟಿಕೆ ಕುರಿತು ಮೊದಲು 'ಪೀಟಾ' ಕಾನೂನು ಜಾರಿಗೆ ಬಂತು. ಬಳಿಕ ಅದಕ್ಕೆ ೧೯೮೬ರಲ್ಲಿ ಕೆಲವು ತಿದ್ದು ಪಡಿ ತಂದು 'ಸೀಟಾ' ಜಾರಿಗೊಳಿಸಲಾಯಿತು. ಈ ಎರಡೂ ಕಾನೂನುಗಳು ವೇಶ್ಯೆಯರನ್ನೇ ಮತ್ತೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿದೆ. ಇದರ ಬದಲಾವಣೆ ಬಗ್ಗೆ ಯೋಚಿಸಬೇಕು.

ನಮ್ಮ ದೇಶದಲ್ಲಿ ಮಹಿಳೆಯರನ್ನು ಲಕ್ಷ್ಮಿ, ಮಾತೆ, ದೇವಿ ಎಂದೆಲ್ಲ ಗೌರವಿಸುವಾಗಲೇ ಅದೇ ಮಹಿಳೆಯನ್ನು 'ರಂಡೆ' 'ಮುಂಡೆ' ಎಂದು ಜರೆಯುತ್ತೇವೆ. ಮಹಿಳೆಯೇ ಅಪರಾಧಿ ಎಂದು ದೂಷಿಸಲಾಗಿದೆ.

ಒಂದು ಅಂದಾಜಿನ ಪ್ರಕಾರ ಸುಮಾರು ೨೦ ಲಕ್ಷ ಮಹಿಳೆಯರು ವೇಶ್ಯಾವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದರಲ್ಲಿ ದೊಡ್ಡ ಸಂಖ್ಯೆಯಲ್ಲಿ ಬಾಲ ವೇಶ್ಯೆಯರು ಇರುವುದು ಆತಂಕದ ವಿಚಾರ. ಕಾನೂನು ಪ್ರಕಾರ ೧೬ ವರ್ಷದ ಒಳಗಿನ ಬಾಲಕಿ ಮೇಲೆ ಆಕೆಯ ಒಪ್ಪಿಗೆ ಇದ್ದು ಅಥವಾ ಇಲ್ಲದೆ ನಡೆಸುವ

ಲೈಂಗಿಕ ಕ್ರಿಯೆ ಅಪರಾಧ. ಹಾಗಾದರೆ ಬಾಲ ವೇಶ್ಯಾವಾಟಿಕೆಗೆ ದೂಡಿದವರ ವಿರುದ್ಧ ಏಕೆ ಕಾನೂನು ಕ್ರಮವಿಲ್ಲ?

ವೇಶ್ಯಾವಾಟಿಕೆಯನ್ನು ಕಾನೂನುಬದ್ಧ ಗೊಳಿಸಬೇಕು, ಗೊಳಿಸಬಾರದು ಎಂಬ ಚರ್ಚೆ ಪ್ರಪಂಚದಲ್ಲಿ ನಡೆದಿದೆ. ಆಸ್ಟ್ರೇಲಿಯಾ, ಆಸ್ಟ್ರೀಯಾ, ಬೆಲ್ಜಿಯಂ, ಜರ್ಮನಿಗಳಲ್ಲಿ ಇದು ಕಾನೂನುಬದ್ಧವೃತ್ತಿ. ಶಸ್ತ್ರವ್ಯಾಪಾರ, ಮಾದಕವಸ್ತು ವ್ಯಾಪಾರಕ್ಕಿಂತ ಹೆಚ್ಚು ವರಮಾನ ಜಗತ್ತಿನಲ್ಲಿ ವೇಶ್ಯಾವಾಟಿಕೆಯಿಂದ ಬರುತ್ತಿದೆ. ಇದು ಬಿಲಿಯಾಂತರ ರೂಪಾಯಿಯ ವ್ಯಾಪಾರ. ಆದ್ದರಿಂದ ಇದನ್ನು ಪರದೆ ಹಿಂದೆ ಸರಿಸಿ ನೋಡಲು ಸಾಧ್ಯವಿಲ್ಲ. ಸಮಾಜ ಈ ವೃತ್ತಿಯನ್ನು ಒಪ್ಪಿ ಅದರ ಸಾಧಕ-ಬಾಧಕಗಳ ಕುರಿತು ಚರ್ಚಿಸಬೇಕು.

ಈಗ ಈ ವೃತ್ತಿಯೊಂದಿಗೆ ಅಂಟಿರುವ ಮತ್ತೊಂದು ಕಳಂಕವೆಂದರೆ ಏಡ್ಸ್. ವಿಶ್ವಸಂಸ್ಥೆ ಪ್ರಕಾರ ಭಾರತದಲ್ಲಿ ೨.5 ಕೋಟಿ ಜನರಿಗೆ ಏಡ್ಸ್ ರೋಗವಿದೆ. ಈ ಹಿನ್ನೆಲೆಯಲ್ಲಿ ವೇಶ್ಯಾವೃತ್ತಿ ಮಹಿಳೆಗೆ ರಕ್ಷಣೆ ಬೇಕು.

(ಲೈಂಗಿಕ ವೃತ್ತಿ ಮತ್ತು ಮಾನವ ಹಕ್ಕುಗಳ ಕುರಿತು 'ನೆಲೆ' ಬೆಂಗಳೂರಿನಲ್ಲಿ ೭.೧೧.೨೦೦೨ ರಲ್ಲಿ ಸಂಘಟಿಸಿದ ಸಮಾವೇಶದಲ್ಲಿ ಮಾಡಿದ ಭಾಷಣದ ಆಯ್ದ ಭಾಗ)

ಪ್ರಫುಲ್ಲಾ ಮಧುಕರ್

(ಮಾಜಿ ಶಾಸಕರು)

ಲೈಂಗಿಕ ವೃತ್ತಿಯಲ್ಲಿ ಮುಖ್ಯವಾಗಿ ನಾವು ಎರಡು ವಿಧ ಕಾಣುತ್ತೇವೆ. ಮೊದಲನೆಯದು ಬಡತನ, ದಾರಿದ್ರ್ಯ, ಅನಕ್ಷರತೆಯಂಥ ಪಿಡುಗಿನಿಂದಾಗಿ ಕುಡುಕ ಗಂಡ, ಮಕ್ಕಳು, ಮನೆ, ಸಂಸಾರ ನಡೆಸಲೋಸುಗ ಅನಿವಾರ್ಯವಾಗಿ ಈ ದಂಧೆಗೆ ಇಳಿಯುವ ಹೆಂಗೆಳೆಯರು. ಎರಡನೆಯದು ಕೇವಲ ಹಣಗಳಿಕೆಗಾಗಿ, ಸಮಾಜದಲ್ಲಿ ಇತರರಂತೆ ಐಷಾರಾಮಿನ ಜೀವನ ನಡೆಸಲು ಈ ವೃತ್ತಿಯನ್ನು ಆರಿಸಿಕೊಳ್ಳುವ ಮಹಿಳೆಯರ ಗುಂಪು. ಇಂತಹ ಕೃತ್ಯವೆಸಗುವ ಲಾಲಸಿ ಸುಖಭೋಗಿಗಳು ನಿಜವಾಗಿಯೂ ಶಿಕ್ಷಾರ್ಹರು. ಸಮಾಜಕ್ಕೆ ಕಂಟಕಪ್ರಾಯರಾದವರು. ನಿಜಕ್ಕೂ ಶಿಕ್ಷೆ ಅನುಭವಿಸುತ್ತಿರುವವರು ಹೊಟ್ಟೆಪಾಡಿಗೆ, ಬಡತನಕ್ಕೆ ಇದನ್ನು ಅವಲಂಬಿಸಿಕೊಂಡವರು. ಗಂಡನಿಂದ, ಜೀವನದ ಜಂಜಾಟದಿಂದ ಪೋಲೀಸರಿಂದ ರೌಡಿಗಳಿಂದ, ಪಿಂಪ್‌ಗಳಿಂದ ಒಟ್ಟಾರೆ ಇಡೀ ಸಮಾಜದಿಂದ ತೀವ್ರ ಶೋಷಣೆಗೆ ಗುರಿಯಾಗುತ್ತಿರುವವರು ಇವರೇ. ಬಹಳಷ್ಟು ಗಂಡಂದಿರಿಗೆ ಈ ವೃತ್ತಿ ಹಣಗಳಿಸುವ ಸುಲಬದಾರಿಯಾಗಿ ಮಾರ್ಪಡುತ್ತಿದೆ. ಕೇವಲ ಗಂಡಂದಿರೇ ಅಲ್ಲದೆ ಪುರುಷ ಪ್ರಧಾನ ಸಮಾಜವೇ ಇವರನ್ನು ನೇರವಾಗಿ ಶೋಷಿಸುತ್ತಿರುವುದು ಕಂಡರೂ ಕಣ್ಣು ಕಾಣದ ಗಾವಿಲರಂತೆ ವರ್ತಿಸುವುದು ಅಪರಾಧವೆಸಗಿದಂತೆಯೇ ಸರಿ.

ನಾಡಿನ ಎಲ್ಲ ಸಂಘ, ಸಂಸ್ಥೆಗಳು, ಎನ್‌ಜಿಓ ಗಳು, ಸಮಾಜವನ್ನು ಮುನ್ನಡೆಸುವ ವ್ಯಕ್ತಿಗಳು, ತರುಣರು, ಅಧಿಕಾರಿಗಳು ನಿಜವಾದ ಕಾಳಜಿ, ಕಳಕಳಿಯಿಂದ ಒಟ್ಟಾದರೆ ಮಾತ್ರ ಇಂತಹ ಸಾಮಾಜಿಕ ಪಿಡುಗನ್ನು

ನಿವಾರಿಸಬಹುದೇ ವಿನಃ ಬೇರಾವುದೇ ದಾರಿ ಇದ್ದಂತೆ ತೋರುವುದಿಲ್ಲ. ಕಡೆಯ ಪಕ್ಷ ಇಂಥ ವೃತ್ತಿ ನಿರತ ಮಹಿಳೆಯರಿಗೆ ಒಂದು ನೆಲೆ, ಆಶ್ರಯ, ನೆಮ್ಮದಿಯ ಬದುಕಿಗಾಗಿ ಹೊಸ ಕಾನೂನಿನ ರೂಪುರೇಷೆಯಾಗಬೇದಾದ್ದು ಅತ್ಯಗತ್ಯ. ಸಮಾಜದಲ್ಲಿ ಇತರರಂತೆ ಬಾಳಲು ಅವರಿಗೆ ಸರಿಯಾದ ಸ್ಥಾನಮಾನ, ಅನುಕೂಲತೆಗಳು, ವ್ಯವಸ್ಥೆಗಳು ಅತಿ ತುರ್ತಾಗಿ ಆಗಬೇಕಾಗಿದೆ. ಇದರ ಬಗ್ಗೆ ಆಲೋಚಿಸಿ ಕ್ರಮ ಕೈಗೊಳ್ಳುವುದೂ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೂ ಕೂಡ. ಈ ನಿಟ್ಟಿನಲ್ಲಿ ಸರ್ಕಾರ ಶೀಘ್ರವಾಗಿ ಯೋಚಿಸಬೇಕಾಗಿದೆ.

(ಲೈಂಗಿಕ ವೃತ್ತಿ ಮತ್ತು ಮಾನವ ಹಕ್ಕುಗಳ ಕುರಿತು 'ನೆಲೆ' ಬೆಂಗಳೂರಿನಲ್ಲಿ ೭.೧೧.೨೦೦೨ ರಲ್ಲಿ ಸಂಘಟಿಸಿದ ಸಮಾವೇಶದಲ್ಲಿ ಮಾಡಿದ ಭಾಷಣದ ಆಯ್ದ ಭಾಗ)

ಸ್ವಾಮಿ ಶ್ರೀ ಕಂಠಾನಂದಜೀ ಮಹಾರಾಜ್

ರಾಮಕೃಷ್ಣ ಆಶ್ರಮ, ಮಾಲೂರು

ಲಿಂಗವು ಸೃಷ್ಟಿಗೆ ಮೂಲ. ಅದನ್ನು ಶಿವನ ಪ್ರತೀಕ ಮಾಡಿದ ಅಪ್ರತಿಮ ಧೈರ್ಯಶಾಲಿಗಳು ಹಿಂದೂಗಳು. ಲಿಂಗದಿಂದಲೇ ಲೈಂಗಿಕತೆ ಅಥವಾ ಕಾಮ ಬಂದಿದೆ. ಕಾಮವು ಒಂದು ಪುರುಷಾರ್ಥ ಎಂದು ಗೌರವದ ಸ್ಥಾನ ಪಡೆದಿದೆ. ಇದರ ಜೊತೆಗಿನ ಉಳಿದ ಮೂರು-ಧರ್ಮ, ಅರ್ಥ, ಮೋಕ್ಷಗಳು ಆನಂತರ ಕ್ರೈಸ್ತ ಮತ್ತು ಮುಸಲ್ಮಾನ ಸಂಸ್ಕೃತಿಗಳೊಂದಿಗೆ ಮಿಲನವಾಗಿ ಕಾಮಕ್ಕೆ ಪಾಪದ ಹಣೆಪಟ್ಟಿ ಬಂದಿದೆ. ಹಣೆಪಟ್ಟಿ ಬದಲಾದ ಮಾತ್ರಕ್ಕೆ ಅದರ ರುದ್ರ ನರ್ತನವೇನೂ ಕಡಿಮೆಯಾಗಿಲ್ಲ. ಕಾಮವನ್ನು ಧಿಕ್ಕರಿಸಿದ ಒಬ್ಬ ಶಂಕರ, ಒಬ್ಬ ವಿವೇಕಾನಂದರ ವಿಷಯ ಒತ್ತಟ್ಟಿಗಿರಲಿ ಬಾಕಿಯ ಸರ್ವರಿಗೂ ಕಾಮ ಅತ್ಯಂತ ಅವಶ್ಯಕ. ಇದನ್ನು ಒಪ್ಪುವವರು ಧೀರರು, ಒಪ್ಪದವರು ವಂಚಕರು. ಇವರದು ತೆರೆಮರೆಯ ವಿಲಾಸ.

ಕಾಮ ಪೂರೈಕೆಗಾಗಿ ಗೃಹಸ್ಥಾಶ್ರಮವಿದೆ. ಪೂರೈಕೆ ಆಗದಿರುವ ಸಂದರ್ಭಗಳೇ ಹೆಚ್ಚು. ಈ ಕೊರೆತ ನಿವಾರಣೆಗಾಗಿ ವೇಶ್ಯಾಲಯ ಮತ್ತು ವೇಶ್ಯಾವೃತ್ತಿ.

ಖಂಡಿತವಾಗಿಯೂ ವೇಶ್ಯೆಯು ಮಾಡಬಾರದ ಕೆಲಸವನ್ನೇನೂ ಮಾಡುತ್ತಿಲ್ಲ. ಅವಳು ಮನೆಗಳಲ್ಲಿ ಸಿಗದ ಸುಖ, ಸಂತೋಷಗಳನ್ನು ಹಂಚಿಕೊಡುತ್ತಿದ್ದಾಳೆ. ಸರಿಯಾಗಿ ತಿಳಿದುಕೊಂಡರೆ ಸಂತೋಷವೆಂಬುದು ಭಗವತ್ ಪ್ರಸಾದ. ಇಲ್ಲಿಯೂ ಆರೋಗ್ಯದ ಕುರಿತಾದ ಎಚ್ಚರವನ್ನು ಸ್ತ್ರೀ ಪುರುಷರಿಬ್ಬರೂ ವಹಿಸಿಕೊಳ್ಳಬೇಕಷ್ಟೆ. ಪ್ರಸ್ತುತ ವೇಶ್ಯೆಯರ ಸಮಸ್ಯೆ ಬಹು ಭೀಕರವಾಗಿದೆ. ಹಣ್ಣನ್ನು ತಿಂದು ಸಿಪ್ಪೆಯನ್ನು ಬಿಸಾಡುವ ರೀತಿಯಲ್ಲಿ ವೇಶ್ಯೆಯನ್ನು ಬಳಸುತ್ತಿರುವ ಸಂದರ್ಭವಿದೆ. ಇದು ಖಂಡಿತ ಬದಲಾಗಬೇಕು. ವೇಶ್ಯಾವೃತ್ತಿಯ ವೇದಗಳಷ್ಟೇ ಪ್ರಾಚೀನವಾದುದು. ಇದು ಸರಿಯೋ, ತಪ್ಪೋ ಎಂದು ಕೊನೆಯಿಲ್ಲದೆ ಚರ್ಚೆ ಮಾಡುತ್ತಾ ಹೋಗಬಹುದು. ಆದರೆ ಇದು ಅನಿವಾರ್ಯ ಎಂದು ಶಾಸ್ತ್ರ ಪ್ರಮಾಣ ಮಾಡಿ ಹೇಳುತ್ತೇವೆ. ಅದೇ ಕಾರಣಕ್ಕೆ ಈ ವೃತ್ತಿಯಲ್ಲಿ ತೊಡಗಿರುವ ಸ್ತ್ರೀಯರ ಬಾಳು ಗೋಳಾಗಿದೆ. ಇವರು ದಿನ ದಿನವೂ ಕಣ್ಣೀರಲ್ಲಿ ಮುಳುಗೆದ್ದು ತಮ್ಮ ಬಳಿ ಬರುವ

ಗಿರಾಕಿಗಳಿಗೆ ಸುಖವನ್ನು ಉಣಿಸುತ್ತಿದ್ದಾರೆ.

ವೇಶ್ಯೆಯರ ಕುರಿತಾಗಿ ನ್ಯಾಯಾಲಯ, ಸರ್ಕಾರಗಳು ಒಂದು ಸಹಾನುಭೂತಿಯ ದೃಷ್ಟಿ ತಳೆದು, ವೇಶ್ಯಾವೃತ್ತಿಯನ್ನು ಒಂದು ಕಾನೂನುಬದ್ಧ ಉದ್ದಿಮೆಯನ್ನಾಗಿ ಪರಿಗಣಿಸಬೇಕು. ಅಲ್ಲಿಯವರೆಗೆ ಪೋಲೀಸರು ಸಂಯಮದಿಂದ ವರ್ತಿಸಿ ಈ ವೇಶ್ಯಾ ಸೋದರಿಯರ ಬಾಳು ಕೊಂಚವಾದರೂ ಹಸನಾಗಲು ಪ್ರಯತ್ನಿಸಬೇಕು.

—

ರಂಜಾನ್ ದರ್ಗಾ

ಪತ್ರಕರ್ತರು

ವೇಶ್ಯಾವೃತ್ತಿಯು ಪುರುಷ ಪ್ರಧಾನ ಸಮಾಜದ ಸೃಷ್ಟಿಯಾಗಿದೆ. ಹೆಣ್ಣಿನ ಆತ್ಮ ಗೌರವವನ್ನೇ ಮಾರುಕಟ್ಟೆ ಸರಕನ್ನಾಗಿಸುವ ಈ ವೃತ್ತಿಯನ್ನು ಶೋಷಣೆ ರಹಿತ ಸಮಾಜ ನಿರ್ಮಾಣವಾದಾಗಲೇ ಅಂತ್ಯಗೊಳಿಸಲು ಸಾಧ್ಯ. ಅಲ್ಲಿಯವರೆಗೆ ಈ ವೃತ್ತಿಯ ಬಗ್ಗೆ ಯಾವ ನಿಲುವು ತೆಗೆದುಕೊಳ್ಳಬೇಕೆಂಬುದು ನಮ್ಮ ಮುಂದಿರುವ ಯಕ್ಷಪ್ರಶ್ನೆ. ಮಹಾಕಾವ್ಯದ ಅಷ್ಟಾದಶ ವರ್ಣನೆಗಳಲ್ಲಿ ವೇಶ್ಯಾವಾಟಿಕೆಯೂ ಸೇರಿದೆ. ದೇವದಾಸಿ ಪದ್ಧತಿ ಹಿಂದೂ ಸಂಪ್ರದಾಯದ ಭಾಗವಾಗಿತ್ತು. ಸ್ವತಂತ್ರ ಭಾರತದ ಕಾನೂನುಗಳು ಬೆಲೆವೆಣ್ಣುಗಳಿಗೆ ಹೊಸ ಬದುಕು ನೀಡುವ ಸಾಧನಗಳಾಗಿ ಬಳಕೆಯಾಗುತ್ತಿಲ್ಲ.

ಕೋಲ್ಕತ್ತಾ ಮಹಾನಗರದ ಎಂಟು ವೇಶ್ಯಾವಾಟಿಕೆಗಳ ಸುಮಾರು ೩೦ ಸಾವಿರ ವೇಶ್ಯೆಯರು ೧೯೯೬ ರ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳನ್ನು ಬಹಿಷ್ಕರಿಸುವ ಮೂಲಕ ಪ್ರತಿಭಟನೆ ವ್ಯಕ್ತಪಡಿಸಿದರು. ಅನಾಗರಿಕ ಸ್ಥಿತಿಯಲ್ಲಿ ನಮ್ಮ ಸುಲಿಗೆ ನಡೆಯುತ್ತಿದೆ. ನಮ್ಮ ಕಡೆ ಗಮನ ಹರಿಸದ ರಾಜಕಾರಣಿಗಳಿಗೆ ನಾವು ಏಕೆ ಮತ ನೀಡಬೇಕು ಎಂಬುದು ಅವರ ವಾದವಾಗಿತ್ತು. ತಮ್ಮ ಸಮಸ್ಯೆಗಳ ಕುರಿತು ಚರ್ಚಿಸಲು ೧೯೯೬ ರ ಏಪ್ರಿಲ್ ೩೦ ರಂದು ಮೊಟ್ಟ ಮೊದಲ ಬಾರಿಗೆ ರತಿ ಕಾರ್ಮಿಕರ ರಾಷ್ಟ್ರೀಯ ಸಮ್ಮೇಳನವನ್ನು ಅವರು ಏರ್ಪಡಿಸಿದರು. ನೇಪಾಳ, ಬಾಂಗ್ಲಾದೇಶ, ಮುಂಬೈ, ದೆಹಲಿ, ಮದ್ರಾಸ್ ಮತ್ತು ಬೆಂಗಳೂರು ಮುಂತಾದ ಕಡೆಗಳಲ್ಲಿನ ನೂರಾರು ಸ್ವಯಂ ಸೇವಾ ಸಂಸ್ಥೆಗಳು ಈ ಸಮ್ಮೇಳನದಲ್ಲಿ ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದವು. 'ಅನೈತಿಕ ವ್ಯವಹಾರ ತಡೆ ಕಾಯ್ದೆ'ಯನ್ನು ರದ್ದುಗೊಳಿಸಬೇಕೆಂಬುದು ಅದರ ಮುಖ್ಯ ಬೇಡಿಕೆಯಾಗಿತ್ತು. ಈ ಕಾಯ್ದೆ ಸಂದಿಗ್ಧವಾಗಿದೆ. ಅನೇಕ ಲೋಪದೋಷಗಳಿಂದ ಕೂಡಿದ ಈಕಾಯ್ದೆಯಿಂದ ವೇಶ್ಯಾವೃತ್ತಿ ನಿರ್ಮೂಲನವಾಗುವುದಿಲ್ಲ. ಆದರೆ ಪೋಲೀಸರು ವೇಶ್ಯೆರಿಂದ ಹಣ ಕೀಳಲು ಬಳಸುವ ಪ್ರಬಲ ಅಸ್ತ್ರವಾಗಿ ಅಸ್ತಿತ್ವದಲ್ಲಿದೆ ಎಂಬುದೇ ಅವರ ರೋಷಕ್ಕೆ ಕಾರಣ.

ಈ ವೃತ್ತಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಮತ್ತು ಮಾಫಿಯಾ ಚಟುವಟಿಕೆಗಳನ್ನು ತಡೆಯಲು ಶಾಸನ ರಚಿಸಬೇಕೆಂದು ಸಮ್ಮೇಳನದಲ್ಲಿ ಭಾಗವಹಿಸಿದ್ದ ಖ್ಯಾತ ಲೇಖಕಿ ಹಾಗೂ ಸಮಾಜ ಸೇವಕಿ ಮಹಾಶ್ವೇತಾದೇವಿ

ಅವರು ಕರೆ ನೀಡಿದ್ದರು.

ಅನೈತಿಕ ವ್ಯವಹಾರ ತಡೆ ಕಾಯ್ದೆ ಪ್ರಕಾರ ವೇಶ್ಯೆಯರು ಶಿಕ್ಷಾರ್ಹರು. ಆದರೆ ವೇಶ್ಯಾವಾಟಿಕೆಗೆ ಬರುವವರಲ್ಲ! ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ರತಿ ಕಾರ್ಮಿಕರ ಸ್ವಾಯತ್ತ ಮಂಡಳಿ ರಚನೆಯಾಗಬೇಕು ಎಂಬುದು ರತಿ ಕಾರ್ಮಿಕರ ಇನ್ನೊಂದು ಮುಖ್ಯ ಬೇಡಿಕೆಯಾಗಿದೆ. ರತಿ ವ್ಯವಹಾರ ತಡೆ ಕಾಯ್ದೆಯಲ್ಲಿನ ಎರಡು ಮುಖ್ಯ ಕಲಮುಗಳ ಪ್ರಕಾರ ವೇಶ್ಯೆಯರಿಗೆ ಸರ್ಕಾರ ಪುನರ್ವಸತಿ ಕಲ್ಪಿಸಬೇಕು. ವೇಶ್ಯೆಯರನ್ನು ಬಂಧಿಸಿದ ಮೇಲೆ ಪೋಲೀಸ್ ಇಲಾಖೆಯಾಗಲಿ ಅಥವಾ ನ್ಯಾಯಾಲಯಗಳಾಗಲಿ ವೇಶ್ಯೆಯರ ಪುನರ್ವಸತಿ ಬಗ್ಗೆ ಎಂದಾದರೂ ತೀರ್ಮಾನ ಕೈಗೊಂಡ ಉದಾಹರಣೆಗಳಿವೆಯೆ ?

ಈ ಹಿನ್ನೆಲೆಯಲ್ಲಿ ರತಿ ಕಾರ್ಮಿಕರ ಸ್ವಾಯತ್ತ ಮಂಡಳಿಗಳನ್ನು ರಚಿಸುವುದು ಅವಶ್ಯವಾಗಿದೆ. ರತಿ ಕಾರ್ಮಿಕರು ವೃತ್ತಿಗೆ ಬರುವ ಮೊದಲು ಈ ಮಂಡಳಿಯಲ್ಲಿ ಹೆಸರು ನೊಂದಾಯಿಸಿಕೊಳ್ಳುವ ವ್ಯವಸ್ಥೆಯಾಗಬೇಕು ಎಂದು ರತಿ ಕಾರ್ಮಿಕರು ಕಲ್ಕತ್ತಾ ಸಮ್ಮೇಳನದಲ್ಲಿ ನಿರ್ಣಯ ಕೈಗೊಂಡಿದ್ದಾರೆ. ಇಂಥ ಮಂಡಳಿಗಳಿದ್ದರೆ ೧೮ ವರ್ಷಗಳಿಗಿಂತ ಕಡಿಮೆ ವಯಸ್ಸಿನ ಬಾಲಕಿಯರನ್ನು ವೇಶ್ಯಾವೃತ್ತಿಗೆ ಎಳೆಯುವುದನ್ನು ತಪ್ಪಿಸಲು ಮತ್ತು ಹೆಣ್ಣು ಮಕ್ಕಳ ಮಾರಾಟವನ್ನು ತಪ್ಪಿಸಲು ಸಾಧ್ಯ ಎಂಬುದನ್ನು ಸಮ್ಮೇಳನ ಒತ್ತಿ ಹೇಳಿದೆ. ಆದರೆ ಸರ್ಕಾರಗಳು ಈಕಡೆ ಗಮನ ಹರಿಸಿವೆಯೇ?

ಒಬ್ಬ ಮಹಿಳೆಗೆ ಬೇರೆ ಯಾವುದೇ ಉದ್ಯೋಗ ಒದಗಿಸಲು ಸಾಧ್ಯವಿಲ್ಲ ಎಂಬ ಸಂದರ್ಭದಲ್ಲಿ ಮಾತ್ರ ಇಂಥ ಮಂಡಳಿ ವೇಶ್ಯಾವೃತ್ತಿಗೆ ಅನುಮತಿ ನೀಡುವಂಥ ವ್ಯವಸ್ಥೆಯಾಗಬೇಕು. ಸರ್ಕಾರ ಸಗ್ರೀವಾಜ್ಞೆ ಮೂಲಕ ಈ ಮಂಡಳಿಗಳ ರಚನೆಗೆ ಅವಕಾಶ ಕಲ್ಪಿಸಬೇಕು ಎಂದು ಸಮ್ಮೇಳನ ಒತ್ತಾಯಿಸಿದೆ.

ಭಾರತವು ವಿಶ್ವದಲ್ಲೇ ಅತಿಹೆಚ್ಚು ಬಾಲವೇಶ್ಯೆಯರನ್ನು ಹೊಂದಿರುವ ದೇಶವಾಗಿದೆ. ಏಡ್ಸ್ ಭಯದಿಂದಾಗಿ ಬಾಲವೇಶ್ಯೆಯರಿಗೆ ಹೆಚ್ಚಿನ ಬೇಡಿಕೆ ಬಂದಿದೆ. ಭಾರತದಲ್ಲಿ ೧೦ ಲಕ್ಷದಷ್ಟು ಬಾಲ ವೇಶ್ಯೆಯರಿದ್ದಾರೆಂಬುದು ನಾಚಿಕೆಗೇಡಿನ ಸಂಗತಿ.

ವೇಶ್ಯಾವಾಟಿಕೆಗಳನ್ನು ನಡೆಸುವವರು, ತಲೆ ಹಿಡುಕರು ಮತ್ತು ದಲ್ಲಾಳಿಗಳು ಬಂಧನಕ್ಕೊಳಗಾಗುವ ವ್ಯವಸ್ಥೆ ಬಂದು, ಪುನರ್ವಸತಿ ಕಾರ್ಯಕ್ರಮಹಮ್ಮಿಕೊಂಡಾಗ ಮಾತ್ರ ಪೊಲೀಸರು ವೇಶ್ಯಾವಾಟಿಕೆಗಳ ಮೇಲೆ ದಾಳಿ ಮಾಡುವುದು ಅರ್ಥಪೂರ್ಣವಾಗುತ್ತದೆ. ಕಾನೂನು ಬಳಸುವವರು ವೇಶ್ಯೆಯರನ್ನು ಬಲಿಪಶು ಮಾಡುವುದನ್ನು ತಪ್ಪಿಸಿ ಅವರ ಬದುಕನ್ನು ಹಸನುಗೊಳಿಸಲು ಯತ್ನಿಸುವುದು ಇಂದಿನ ಅವಶ್ಯಕತೆಗಳಲ್ಲಿ ಒಂದಾಗಿದೆ.

ವಿ.ಐ.ಲೆನಿನ್

ಎಲ್ಲರಿಗಿಂತ ಹೆಚ್ಚಾಗಿ ಈ ಮಹಿಳೆಯರನ್ನೇ ಬಂಡವಾಳಗಾರರು ತುಂಬ ಸಂತೋಷಪಟ್ಟಂದ ಗೃಹ ಕಾರ್ಮಿಕರನ್ನಾಗಿ ಕೆಲಸಕ್ಕೆ ನೇಮಿಸಿಕೊಳ್ಳುವುದು. ಈ ಮಹಿಳೆಯರು ತಮಗಾಗಿಯೂ ತಮ್ಮ ಕುಟುಂಬಕ್ಕಾಗಿಯೂ ಒಂದಿಷ್ಟು ಹೆಚ್ಚು ಹಣ ಸಂಪದಿಸಲೆಂದು ಒಂದು ಚೂರು ಬ್ರೆಡ್ಡಿನ ಸಲುವಾಗಿ. ಅತ್ಯಲ್ಪ ಕೂಲಿಗಾಗಿ ದುಡಿಯಲೂಸಿದ್ಧರಿರುತ್ತಾರೆ. ಈ ಮಹಿಳೆಯರ ಮಧ್ಯದಿಂದಲೇ ಎಲ್ಲಾ ದೇಶಗಳ ಬಂಡವಾಳಗಾರರೂ ತಮಗಾಗಿ ಪುರಾತನ ಗುಲಾಮರ ಮಾಲೀಕರಂತೆ ಮತ್ತು ಮಧ್ಯಯುಗದ ಸಾಮಂತಶಾಹಿ ಪ್ರಭುಗಳಂತೆ ಎಷ್ಟು ಸಂಖ್ಯೆಯಲ್ಲಿ ಬೇಕಾದರೆ ಅಷ್ಟು ಸಂಖ್ಯೆಯಲ್ಲಿ ಬೆಲೆವೆಣ್ಣುಗಳನ್ನು ಅತ್ಯಂತ ನ್ಯಾಯವಾದ ಬೆಲೆಗಳಿಗೆ ಪಡೆದುಕೊಳ್ಳುವುದು. ವೇಶ್ಯಾವೃತ್ತಿಯ ಬಗೆಗೆ ಎಷ್ಟೇ ಪ್ರಮಾಣದ ಈ ಸ್ತ್ರೀ ದೇಹವಿಕ್ರಯದ ವಿರುದ್ಧ ಏನೂ ಮಾಡಲಾರವು. ಕೂಲಿ ಗುಲಾಮಗಿರಿ ಇರುವವರೆಗೂ ವೇಶ್ಯಾವೃತ್ತಿಯೂ ಅನಿವಾರ್ಯವಾಗಿ ಇರಲಿರುವುದು. ಮಾನವ ಸಮಾಜಗಳ ಇತಿಹಾಸದಾದ್ಯಂತ ಎಲ್ಲ ಮರ್ದಿತ ಹಾಗೂ ಶೋಷಿತ ವರ್ಗಗಳೂ ಯಾವತ್ತೂ ತಮ್ಮ ಪೀಡಕರಿಗೆ ಮೊದಲು ತಮ್ಮ ಕೂಲಿರಹಿತ ಶ್ರಮವನ್ನು, ಎರಡನೆಯದಾಗಿ ತಮ್ಮ ಮಹಿಳೆಯರನ್ನು ಧಣಿಗಳಿಗೆ ಬೆಲೆವೆಣ್ಣುಗಳಾಗಿ, ಬಿಟ್ಟುಕೊಡುವ ಬಲಾತ್ಕಾರಕ್ಕೊಳಗಾಗಿಯೇ ಇದ್ದುಕೊಂಡು ಬಂದಿವೆ ಈ ರೀತಿಯಲ್ಲೇ ಅವರ ಶೋಷಣೆ ಜರುಗುತ್ತಿರುವುದು. ಈ ವಿಷಯಕ್ಕೆ ಸಂಬಂಧಿಸಿ ಗುಲಾಮ ಪದ್ಧತಿಯೂ, ಸಾಮಂತಶಾಹಿ ವ್ಯವಸ್ಥೆಯೂ ಬಂಡವಾಳವಾದವೂ ಒಂದೇ ರೀತಿಯವು. ಬದಲಾಗುವುದು ಶೋಷಣೆಯ ರೂಪವಷ್ಟೆ, ಶೋಷಣೆಯಂತೂ ಉಳಿದೇ ಇರುತ್ತದೆ.(ಮಹಿಳಾ ವಿಮೋಚನೆ ಕುರಿತು ಗ್ರಂಥದಿಂದ)

ಲೈಂಗಿಕ ವೃತ್ತಿಯಲ್ಲಿರುವ ಲೈಂಗಿಕ ಅಲ್ಪ ಸಂಖ್ಯಾತರೊಂದಿಗೆ ಮಾತನಾಡಿದಾಗ:

ಸಂಗಮ ಹಿಜ್ರಾಗಳು ಹಾಗು ಲೈಂಗಿಕ ವೃತ್ತಿ

ಹಿಜ್ರಾಗಳು ಎಂದಾಕ್ಷಣ ಬೇರೆ ಬೇರೆ ರೀತಿಯ ಪ್ರತಿಕ್ರಿಯೆ ಜನರಿಂದ ಬರುವುದನ್ನು ನಾವು ಕಂಡಿದ್ದೇವೆ. ಹಿಜ್ರಾಗಳೆಂದರೆ ಗಂಡಸಾಗಿ ಹುಟ್ಟಿ ಹೆಣ್ಣಿನಂತೆ ಬದುಕ ಬಯಸುವವರು. ಹಾಗು ಲಿಂಗ ಪರಿವರ್ತನೆಗೊಳಗಾದ ಸಮುದಾಯ. ಇನ್ನೂ ಕೆಲವರು ಹುಟ್ಟುವಾಗಲೇ ಗಂಡಿನ ಹಾಗು ಹೆಣ್ಣಿನ ಲೈಂಗಿಕ ಅಂಗ ಹೊಂದಿರುವವರೂ ಕೂಡ ಈ ಗುಂಪಿಗೆ ಸೇರುತ್ತಾರೆ. ಹಿಜ್ರಾಗಳ ಅಸ್ತಿತ್ವದ ಬಗ್ಗೆ ಪುರಾಣಗಳಲ್ಲಿ, ಧಾರ್ಮಿಕ ಗ್ರಂಥಗಳಲ್ಲಿ ಹಾಗು ಇತಿಹಾಸದಲ್ಲಿ ದಾಖಲಾತಿಗಳಿವೆ. ನಾವು ಶತಮಾನಗಳಿಂದ ನಿಮ್ಮೊಂದಿಗೆ ಬದುಕುತ್ತಾ ಬಂದಿದ್ದೇವೆ. ಈಗಲೂ ನಿಮ್ಮೊಂದಿಗಿದ್ದೇವೆ. ಸಾಮಾಜಿಕ ಗೇಲಿ, ಅವಮಾನಗಳಿಂದ ಅಂಚಿಗೆ ತಳ್ಳಲ್ಪಟ್ಟಿದ್ದೇವೆ ಅಷ್ಟೆ.

ಸಮಾಜ, ಕುಟುಂಬ ಕಾನೂನು ಹಾಗು ಇತರೆಡೆ ಯಾವುದೇ ರೀತಿಯ ಒಪ್ಪಿಗೆ ಇಲ್ಲದಿರುವುದು ನಮ್ಮ ಬದುಕನ್ನು ಒಂದುಕೊಂಡಿದೆ. ನಮ್ಮ ರೂಪ ತಪ್ಪು, ನಾವು ಮಾಡುವ ಕೆಲಸ ತಪ್ಪು, ನಮ್ಮ ಆಚಾರ ವಿಚಾರ ತಪ್ಪು, ನಮ್ಮ ನಡೆ, ನುಡಿ ತಪ್ಪು. ಒಟ್ಟಾರೆ ನಾವು ಮನುಷ್ಯರೇ ಅಲ್ಲವೇನೋ ಎನ್ನುವ ಧೋರಣೆ, ನಮಗೆ ಯಾವುದೇ ಹಕ್ಕಿಲ್ಲದಂತೆ ನೋಡಿಕೊಳ್ಳುತ್ತಿದೆ. ನಾವು ಲಿಂಗ ಬದಲಾಯಿಸಿಕೊಳ್ಳುವುದೇ ತಡ ಎಲ್ಲಾ ರೀತಿಯ ಕೆಂಗಣ್ಣಿಗೆ ಗುರಿಯಾಗುತ್ತೇವೆ. ಜನ ಸಾಮಾನ್ಯ ಹಕ್ಕುಗಳಾದ ವಿದ್ಯಾಭ್ಯಾಸ, ಇರಲು ಸೂರು, ಮಾಡಲು ಕೆಲಸ, ಆಸ್ತಿ ಹಕ್ಕು, ಆರೋಗ್ಯ ಸವಲತ್ತು, ಮದುವೆ, ಬ್ಯಾಂಕ್ ಆಕೌಂಟ್ ಇತ್ಯಾದಿಗಳಿಂದ ವಂಚಿತರು ನಾವು. ಆದರೆ ಬದುಕಲೇ ಬೇಕೆಂಬ ಉತ್ಕಟ ಬಯಕೆಯುಳ್ಳವರು. ಎಲ್ಲಾ ರೀತಿಯ ಕಾನೂನಿನ ನಿರಾಕರಣೆಗೆ ಗುರಿಯಾದವರು.

ಬದುಕುವ ಹಂಬಲ ನಮ್ಮನ್ನು ಒಂದೋ ಭಿಕ್ಷೆ ಬೇಡಲು ಅಥವಾ ವ್ಯಭಿಚಾರ ಮಾಡುವ ಆಯ್ಕೆಗೆ ತಂದು ನಿಲ್ಲಿಸುತ್ತದೆ. ವ್ಯಭಿಚಾರ ಕಾನೂನಿನ ದೃಷ್ಟಿಯಲ್ಲಿ ಅಪರಾಧವಿರಬಹುದೇ ವಿನಃ ನಮ್ಮ ಜೀವನದಲ್ಲಿ ಅದು ಅನಿವಾರ್ಯ.

ಹಿಜ್ರಾಗಳಿಗೆ ಲೈಂಗಿಕ ವೃತ್ತಿಯಲ್ಲಿ ಬಹಳಷ್ಟು ತೊಂದರೆಗಳಿವೆ. ಪೋಲೀಸರು ಆರೆಸ್ಟ್ ಮಾಡುವುದಲ್ಲದೆ ಕೆಲವು ಸಾರಿ ನಮ್ಮ ಮೈ ಮೇಲಿನ ಎಲ್ಲಾ ಬಟ್ಟೆ ತೆಗೆದು ನಮಗೆ ಹೆಂಗಸರಂತೆ ಅಂಗಾಂಗವಿದೆಯೆ, ಹಾಗು ನಾವು ಹೇಗೆ ಸೆಕ್ಸ್ ಮಾಡುತ್ತೇವೆ ಎಂದು ಕೇಳಿ ಅಸಭ್ಯವಾಗಿ ವರ್ತಿಸುತ್ತಾರೆ. ಅವಮಾನ ಮಾಡುತ್ತಾರೆ. ಅತ್ಯಾಚಾರ ಮಾಡುವುದಲ್ಲದೆ ಸುಳ್ಳು ಮೊಕದ್ದಮೆಗಳನ್ನು ಕೂಡ ಹಾಕುತ್ತಾರೆ.

ಗೂಂಡಾಗಳೂ ಕೂಡ ನಮ್ಮನ್ನು ರೇಪ್ ಮಾಡಿ ನಮ್ಮಲ್ಲಿರುವ ದುಡ್ಡು ಕಿತ್ತುಕೊಂಡು ಕಳಿಸುತ್ತಾರೆ. ಕೆಲವೊಮ್ಮೆ ಅರಿಯದ ಜಾಗದಲ್ಲಿ ನಮ್ಮನ್ನು ಬಿಟ್ಟು ಹೋಗುತ್ತಾರೆ. ಜನರು ಯಾರೂ ನಮಗೆ ಸಹಾಯ ಮಾಡಲು ಬರುವುದಿಲ್ಲ. ಬಂದರೆ ನಮ್ಮನ್ನು ಲೈಂಗಿಕವಾಗಿ ಬಳಸಿಕೊಳ್ಳಲು ನೋಡುತ್ತಾರೆ. ಹಿಜ್ರಾಗಳಿಗೆ ಗಂಡಂದಿರಾಗಲಿ

ಪರ್ಮನೆಂಟ್ ಪಾರ್ಟ್ನರ್ಸ್ ಆಗಲಿ ಇಲ್ಲಾ. ಇದ್ದರೂ ಅವರ ಹೊಣೆ ನಾವೇ ಹೊರಬೇಕು.

ದಿನ ನಿತ್ಯದ ಬೇಕು ಬೇಡಗಳಿಗೆ ನಾವು ಬಹಳ ಕಷ್ಟ ಪಡಬೇಕಾಗುತ್ತದೆ. ಲೈಂಗಿಕ ಸಂಬಂಧಗಳು ಹಾಗೂ ಇತರೆ ಸಂಬಂಧಗಳೂ ಅಷ್ಟೇನು ಸರಳವಾಗಿಲ್ಲ. ಅಲ್ಲದೆ, ಎಲ್ಲಿಯೂ ಹಿಜ್ರಾಗಳೆಂದು ಹೇಳಿಕೊಳ್ಳುವ ಅವಕಾಶ ಸನ್ನಿವೇಶ ಇಲ್ಲವೇ ಇಲ್ಲ. ನಾವು ವೈಯಕ್ತಿಕ ತೊಳಲಾಟದಲ್ಲೇ ಜೀವನ ನಡೆಸಬೇಕಾಗಿದೆ.

ಉಳಿದವರಂತೆ ಹಿಜ್ರಾಗಳಾದ ನಮಗೆ ಬರುವ ಗಿರಾಕಿಗಳು ಗಂಡಸರೇ. ನಮ್ಮ ಮೈಯನ್ನು ಬಯಸುವ ಇವರು ಮನಸ್ಸನ್ನು ಅರ್ಥಮಾಡಿಕೊಂಡಿಲ್ಲ. ಇದೇ ಜನ ಹೊರಗೆ ಸಿಕ್ಕಾಗ ಗೇಲಿ, ಅವಮಾನ, ಅಪಹಾಸ್ಯ ಮಾಡಲು ಹೇಸುವುದಿಲ್ಲ. ರಾತ್ರಿಗೆ ಬಂದು ಉಸಲಾಯಿಸುವವರೂ ಇದ್ದಾರೆ. ನಾವು ಹಿಜ್ರಾಗಳು ಪ್ರೀತಿಗಾಗಿ ಭದ್ರತೆಗಾಗಿ, ಗಂಡಸರನ್ನೇ ಅವಲಂಬಿಸಿದ್ದೇವೆ. ಬಹಳಷ್ಟು ಸಾರಿ ನಮ್ಮ ಲೈಂಗಿಕ ಪೂರೈಕೆಗೂ ಕೂಡ ಅವರನ್ನೇ ಬಯಸುತ್ತೇವೆ.

ನಾವು ನಮ್ಮನ್ನು ಹೆಂಗಸರೆಂದೇ ಪರಿಗಣಿಸುತ್ತೇವೆ. ನಾವು ಹೆಂಗಸರಿಗಿಂತಾ ಭಿನ್ನವಾಗೇನೂ ಇಲ್ಲಾ. ಹಾಗಾಗಿ ನಮ್ಮನ್ನು ಹೆಂಗಸರೆಂದು ಪರಿಗಣಿಸಿ ಎಂಬ ಕೋರಿಕೆ ಇದ್ದೇ ಇದೆ.

ಹಿಜ್ರಾಗಳ ಬದುಕಿನ ಅವಶ್ಯಕತೆ ಪೂರೆಕೆಗೆ ದಾರಿ ಇರುವುದೇ ಲೈಂಗಿಕ ವೃತ್ತಿಯಲ್ಲಿ. ಇದಕ್ಕೆ ಕಾರಣ ನಮ್ಮಗೆ ಎಲ್ಲೂ ಕೆಲಸವಾಗಲಿ, ಒಪ್ಪಿಗೆಯಾಗಲಿ, ಮನ್ನಣೆಯಾಗಲಿ ಇಲ್ಲದೇ ಇರುವುದು ಇದು ನಮಗೆ ಸಮಾಜ ಕೊಟ್ಟ ಕೊಡುಗೆ. ಹಾಗಾಗಿ ಸಮಾಜ, ಕಾನೂನು ಎಲ್ಲರೂ ಗಂಭೀರವಾಗಿ ಯೋಚಿಸಿ ಲೈಂಗಿಕ ಕೆಲಸವನ್ನು ಒಂದು ವೃತ್ತಿಯಾಗಿ ಗುರುತಿಸುವ ಅವಶ್ಯಕತೆ ಇದೆ. ಏಕೆಂದರೆ ಇದೊಂದೇ ನಮ್ಮ ಬದುಕಿಗಿರುವ ಆಶಾಕಿರಣ.

ಬದುಕನ್ನು ಗೌರವದಿಂದ ಪೂರ್ಣಗೊಳಿಸುವ ಹಕ್ಕು ಎಲ್ಲರಿಗಿರುವಂತೆ ನಮಗೂ ಇದೆ. ಇದು ಮನುಷ್ಯರಾದ ನಮ್ಮ ಮಾನವ ಹಕ್ಕು. ಬದುಕಿನ ಸಮಯದಲ್ಲ ಬೇರೆಯವರಿಗೆ ಅನೇಕ ಆಯ್ಕೆಗಳಿದ್ದರೆ ನಮ್ಮ ಅಲ್ಪ ಆಯ್ಕೆಗಳಲ್ಲಿ ಲೈಂಗಿಕ ವೃತ್ತಿ ಮುಖ್ಯವಾದುದು. ಇದೊಂದು ಕೆಲಸವಷ್ಟೇ ಅಲ್ಲದೆ ನಮ್ಮ ಹಕ್ಕು ಕೂಡ. ಇದೊಂದು ಗೌರವಿಸಬೇಕಾದ, ಪರಿಗಣಿಸಬೇಕಾದ ವೃತ್ತಿ.

ಲೈಂಗಿಕ ವೃತ್ತಿಯಲ್ಲಿರುವ ಕೊಥಿ, ಸಲಿಂಗಕಾಮಿ ದ್ವಿಲಿಂಗಕಾಮಿ ಗಂಡಸರು:

ಚಿಕ್ಕಂದಿನ ನೆನಪುಗಳು... ಇವನು ಹುಡುಗಿಯರಥರ ಆಡುತ್ತಾನೆ, ಹುಡುಗಿಯರಥರ ನಡೆಯುತ್ತಾನೆ, ಹುಡುಗಿಯರಥರ ಅಲಂಕಾರ ಮಾಡಿಕೊಳ್ಳುತ್ತಾನೆ... ಇದನ್ನು ಬರೆಯುತ್ತಾ ನೆನಪಾಗುತ್ತದೆ ಜನ ನಮ್ಮನ್ನು ಎಷ್ಟು ಗೇಲಿ ಮಾಡುತ್ತಿದ್ದರು ಎಂದು. ಸ್ಕೂಲಿನಲ್ಲಿ, ಮನೆಯಲ್ಲಿ, ಸ್ನೇಹಿತರು ಮತ್ತೆಲ್ಲರು ನಮ್ಮನ್ನು ಪರಿಹಾಸ್ಯ ಮಾಡುತ್ತಿದ್ದರು. ಪಾಠ ಹೇಳಿಕೊಡುವ ಮೇಷ್ಟ್ರುಗಳಂತು ನಮ್ಮ ನಡೆನುಡಿಗಳನ್ನು ಹೆಣ್ಣಿನಥರ ಎಂದು ಕಂಡಾಗಲೆಲ್ಲಾ, ಚುಚ್ಚಿ ಹೇಳಿ ಚುಡಾಯಿಸಲು ಮರೆಯುತ್ತಿರಲಿಲ್ಲ. ನಾವು ಹುಡುಗಿಯರಥರ ಅಂತ ಕಂಡೊಡನೆ ಕೆಲವೊಮ್ಮೆ ಅವರು ನಮ್ಮನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಿದ್ದುದೂ ಹೌದು. ಆಗ

ನಾಚಿಕೆಯಾಗುತ್ತಿತ್ತು ನಮಗೆ ನಾವು ಹುಡುಗಿಯರಥರ ಇರುವುದೇ ನಮಗೆ ಆಗುತ್ತಿದ್ದ ಲೈಂಗಿಕ ಕಿರುಕುಳಕ್ಕೆ ಕಾರಣ ಎಂದು ಬಲವಾಗಿ ನಂಬಿ ಮಿಕ್ಕ ಹುಡುಗರಂತಿರಲು ಸತತ ಪ್ರಯತ್ನ ಮಾಡುತ್ತಿದ್ದೆವು. ಆದರೆ ಒಂದು ಹಂತದ ನಂತರ ನಮ್ಮ ಇಚ್ಛೆಗಳನ್ನು, ಆಸೆಗಳನ್ನು, ಗಂಡಸರ ಮೇಲಿನ ನಮ್ಮ ಒಲವನ್ನು, ಲೈಂಗಿಕ ಸೆಳೆತವನ್ನು, ಅಲ್ಲದೆ ನಮ್ಮಲ್ಲಿ ಕೆಲವರು ಹೆಂಗಸರೆಂದೇ ಭಾವಿಸುವುದನ್ನು, ಒಟ್ಟಾರೆ ನಾವು ಹೀಗೆ ಎಂದು ಮುಚ್ಚಿಡಲು ಕಷ್ಟವಾಗುತ್ತಿತ್ತು. ಹೀಗಾಗಿ ಯಾರಿಗಾದರೂ ನಮ್ಮ ಬಗ್ಗೆ ಗೊತ್ತಾಗಿದ್ದಲ್ಲಿ ಅವರು ನಮ್ಮನ್ನು ದುರುಪಯೋಗ ಪಡಿಸಿಕೊಳ್ಳುವುದು ಗ್ಯಾರಂಟೀನೇ ಆಗಿತ್ತು. ಯಾರಿಗೆ ಗೊತ್ತಾಗಿಬಿಡುತ್ತದೋ ಎಂಬ ಭಯದಲ್ಲೇ ನಮ್ಮ ವಿಷಯವನ್ನು ಮುಚ್ಚಿಟ್ಟು, ದುರುಪಯೋಗಕ್ಕೆ ಒಳಗಾಗುತ್ತಿದ್ದುದು ಸಾಮಾನ್ಯ ಸಂಗತಿ.

ಈಗ ಲೈಂಗಿಕ ವೃತ್ತಿಯಲ್ಲಿ ಇದ್ದಾಗಲೂ ಈ ಸುಳಿ ತಪ್ಪಿದ್ದಲ್ಲ. ನಮ್ಮಲ್ಲಿ ಹಲವಾರು ಜನ ಕೆಳ ಮತ್ತು ಮಧ್ಯಮ ವರ್ಗಕ್ಕೆ ಸೇರಿರುತ್ತೇವೆ. ಆದರೆ ಈಗ ನಮ್ಮದೊಂದು ಸುರಕ್ಷ ಜಾಗವನ್ನು ನಿರ್ಮಿಸಿಕೊಂಡಿದ್ದೇವೆ. ಬೆಂಗಳೂರಿನಲ್ಲೇ, ನಮ್ಮಂತಿರುವ ಎಷ್ಟೊಂದು ಮಂದಿ ಕೆಲವು ಸ್ಥಳಗಳಲ್ಲಿ ಸೇರುತ್ತೇವೆ. ಈ ಜಾಗದಲ್ಲಿ ನಮ್ಮನ್ನು ಅಸಹಜ ಎಂದು ಗೇಲಿ ಮಾಡುವವರಿಲ್ಲ, ನಗೆಪಾಟಲಿಗೆ ಈಡಾಗುವ ಭಯವಿಲ್ಲ, ನಮಗೆ ಬೇಕಾದ್ದನ್ನು ಕೇಳುವ, ಬೇಕಾದ ಹಾಗೆ ಸಿಂಗರಿಸಿಕೊಳ್ಳುವ ಆಯ್ಕೆ ಅವಕಾಶಗಳಿವೆ. ಈ ಜಾಗಗಳೆಂದರೆ ಪಾರ್ಕುಗಳು, ಸಾರ್ವಜನಿಕ ಶೌಚಾಲಯಗಳು ಮತ್ತು ಏಕಾಂತ ಸ್ಥಳಗಳು. ಸಮಾಜ ನಮ್ಮನ್ನು ಗುರುತಿಸಲು ಕೊಟ್ಟ ಛಕ್ಕ, ಗಾಂಡುಗಳಂಥ ಕೋಥಿ, ಡಬಲ್ ಡೆಕ್ಕರ್, ಎಂಬ ಪದಗಳನ್ನು ಬಳಸುತ್ತೇವೆ. ಇಂತಹ ಸ್ಥಳಗಳಲ್ಲಿ ನಾವು ನಿರ್ಭಯದಿಂದ ಹೆಂಗಸರ ಉಡುಗೆಯನ್ನು ತೊಡಬಹುದು, ಮೇಕಪ್ ಮಾಡಬಹುದು.

ಹುಟ್ಟಿದ್ದು ಗಂಡಾಗಿ ಮಗ ಎಂದು ಗುರುತಿಸುವುದರಿಂದ, ಸಮಾಜ ಹೇಳಿರುವ ಗಂಡು ಎಂಬ ಪಾತ್ರಕ್ಕೆ ಅಭಿನಯಿಸುವ ಒತ್ತಡಕ್ಕೆ ಸಿಕ್ಕಿಬಿದ್ದಿರುತ್ತೀವಿ. ನಮ್ಮ ಆಸೆ ಆಕಾಂಕ್ಷೆ ಯಾವುದಕ್ಕೂ ಬೆಲೆಯೇ ಇರುವುದಿಲ್ಲ. ಅಲ್ಲದೆ ಮನೆಯಲ್ಲಿ ಕೋಥಿ ಎಂದು ಗೊತ್ತಾದರೆ ಮುಗಿಯಿತು, ನಮಗೆ ಬೇಕಿಲ್ಲದ್ದನ್ನೇ ಮಾಡುವ ದೌರ್ಜನ್ಯಕ್ಕೆ ಒಳಪಡುತ್ತೇವೆ. ಹೊಡೆದು ಬಡಿದು ಮಾತಿನ ಬರ್ಜಿಯಲ್ಲಿ ಚುಚ್ಚಿಸಿಕೊಳ್ಳುವ ಪರಿಸ್ಥಿತಿ. ಈ ಪರಿಸ್ಥಿತಿಯಲ್ಲಿ ಆಚೆಯೂ ಯಾವುದೇ ಬೆಂಬಲವಿಲ್ಲದೆ ಮನೆ ಬಿಟ್ಟು ಬದುಕುವುದು ಅನಿವಾರ್ಯ. ನಮಗೆ ಸಿಗಬೇಕಾದ ಆಸ್ತಿ ಹಕ್ಕುಗಳಿಂದಲೂ ವಂಚಿತರಾಗುತ್ತೇವೆ. ನಮ್ಮ ಥರ ಇರುವವರ ಒಡನಾಟವಿಲ್ಲದಿದ್ದಲ್ಲಿ ನಾವು ಸರಿಹೋಗಬಹುದು ಎಂಬ ಭಾವನೆಯಿಂದ ಕೆಲವೊಮ್ಮೆ ನಮ್ಮನ್ನು ಹೌಸ್ ಅರೆಸ್ಟ್ ಮಾಡುವುದೂ ಉಂಟು.

ಕೆಲಸಕ್ಕೆ ಬೇರೆಕಡೆ ಹೋದರೂ ಗೇಲಿಗೀಡಾಗುವುದಂತೂ ತಪ್ಪಿಲ್ಲ, ಜೊತೆಯಲ್ಲಿ ಕೆಲಸ ಮಾಡುವವರು, ಬಾಸುಗಳು ಕೊಡುವ ಲೈಂಗಿಕ ಕಿರುಕುಳ, ದುರುಪಯೋಗ ತಪ್ಪಿದ್ದಲ್ಲ. ಕೆಲವೊಮ್ಮೆ ನಾವು ಕೋಥಿಗಳೂ ಎಂದು ಗೊತ್ತಾದಾಗ ಕೆಲಸದಿಂದ ತೆಗೆದುಹಾಕುವುದೂ ಉಂಟು. ಇಂತಹ ಪರಿಸ್ಥಿತಿಯಲ್ಲಿ ಲೈಂಗಿಕ ವೃತ್ತಿ ನಮಗೆ ಆಪ್ತ.

ನಮ್ಮ ಗಿರಾಕಿಗಳು ಸಲಿಂಗಕಾಮಿ. ಕೋಥಿ ಅಥವಾ ಡಬಲ್ ಡೆಕ್ಕರ್ ಎಂದು ಗುರುತಿಸಿಕೊಳ್ಳದ ಗಂಡಸರು. ಮದುವೆಯಾದವರೂ ಇರುತ್ತಾರೆ ಮತ್ತು ಬೇರೆ ಬೇರೆ ವರ್ಗಗಳಿಂದ ಬಂದಿರುತ್ತಾರೆ. ನಾವು ಅವರನ್ನು

ಪಂಥಿಗಳೆಂದು ಕರೆಯುತ್ತೇವೆ. ಅವರಿಗೂ ನಮ್ಮ ಪರಿಸ್ಥಿತಿ ಚೆನ್ನಾಗಿ ಗೊತ್ತಿರುವುದರಿಂದ ಅವರು ನಮಗೆ ಯಾವಾಗಲೂ ಕಿರುಕುಳ ಕೊಟ್ಟು, ಹೆದರಿಸಿ, ಪೋಲೀಸರಿಗೆ ಒಡಿದುಕೊಡುವುದಾಗಿಯೂ ಹೇಳಿ ಬಳಸಿಕೊಳ್ಳುವ ಸಂಧರ್ಭಗಳೇ ಹೆಚ್ಚು.

ಪೋಲೀಸರಂತು ಕೇಳಬೇಡಿ. ಅವರಿಗೆ ನಾವು ಮನುಷ್ಯರೇ ಅಲ್ಲ. ಹುಟ್ಟಾ ಅಪರಾಧಿಗಳು. ನಾವು ಮಾಡುವುದೆಲ್ಲಾ ದುಷ್ಕಾರ್ಯಗಳು. ಹಾಗಾಗಿ ನಮಗೆ ಬಾಯಿಮಾತಿನಲ್ಲಿ ಕೆಟ್ಟದಾಗಿ ಅನ್ನುವುದು, ಹೊಡೆಯುವುದು, ರೇಪ್ ಮಾಡುವುದು. ಲೈಂಗಿಕವಾಗಿ ಕಿರುಕುಳ ಕೊಡುವುದು ಸಾಮಾನ್ಯ. ಪೋಲೀಸರು ನಮ್ಮನ್ನು ಹಿಡಿಯುವುದು ಕಳ್ಳತನ, ಸುಲಿಗೆ, ಡ್ರಗ್, ಬ್ಲ್ಯಾಕ್‌ಮೇಲ್ ಸುಳ್ಳು ಕೇಸುಗಳ ಮೇಲಿ ಐಪಿಸಿ ೩.೭೭ರ ಅಡಿಯಲ್ಲಿ ಅಲ್ಲ. ನಮ್ಮನ್ನು ಹಿಡಿಯುವುದಾದ್ರೂ ಏತಕ್ಕೆ? ನಮ್ಮ ವೇಷ, ನಡೆ, ನುಡಿ, ನೋಡಿ ಗಾಂಡು, ಛಕ್ಕಾ ಎಂಬ ಅಸಭ್ಯ ಭಾಷೆಯ ಪ್ರಯೋಗ ಪೋಲೀಸರಿಗೆ ಧಾರಾಳ. ಪೋಲೀಸ್ ಠಾಣೆಯಲ್ಲಿ ಬಟ್ಟೆ ಬಿಚ್ಚಿಹಾಕಿ ರೇಪ್ ಮಾಡಿ ಸಾರ್ವಜನಿಕರ ಮುಂದೆ ಅವಮಾನಿಸುತ್ತಾರೆ ಇದನ್ನು ನೋಡಿ ಗೂಂಡಾಗಳೂ ಪ್ರೇರೇಪಿತರಾಗಿ ತಾವು ದುಡ್ಡು ಕೀಳುವುದಲ್ಲದೆ ಲೈಂಗಿಕ ಆಸೆಗಳನ್ನು ನೀಗಿಸದಿದ್ದಲ್ಲಿ ಓಡಿಸಿಕೊಂಡು ಬಂದು ಹೊಡೆಯುವುದು, ಆಸಿಡ್ ಎರಚುವುದು ಮಾಡುತ್ತಾರೆ. ಕಾನೂನಿನಲ್ಲಿ ಇದಕ್ಕೆ ಶಿಕ್ಷೆಯೇನು ಇಲ್ಲ!

ಲೈಂಗಿಕ ಅಲ್ಪಸಂಖ್ಯಾತರಾಗಿ, ಲೈಂಗಿಕ ವೃತ್ತಿಯಲ್ಲಿರುವುದರಿಂದ ನಾವು ಸಮಾಜದ ಅಂಚಿನಲ್ಲೇ ಬದುಕುತ್ತಾ ಗಿರಾಕಿಗಳಿಂದಲೂ ದೌರ್ಜನ್ಯ ಅನುಭವಿಸಬೇಕು. ಕೆಲವೊಮ್ಮೆ ನಾವು ಕೊಡುವ ಲೈಂಗಿಕ ಸುಖಕ್ಕೆ ಯಾವ ದುಡ್ಡು ಸಿಗದೇ ಇರುವುದು ಸತ್ಯ. ದುಡ್ಡು ಸಿಗದಿದ್ದರೂ ಹೋಗಲಿ ಕಾಂಡೋಂ ಹಾಕಿಕೊಳ್ಳಲೂ ಗಿರಾಕಿಗಳ ಹತ್ತಿರ ಗೋಗರೆಯಬೇಕು. ಲೈಂಗಿಕ ಆರೋಗ್ಯದ ಬಗ್ಗೆ ಪ್ರಚಾರ ಮಾಡುತ್ತಿರುವ ಸಂಸ್ಥೆಗಳ ಸಹಾಯದಿಂದ ನಮ್ಮ ಸಮುದಾಯದಲ್ಲಿ ಎಚ್.ಐ.ವಿ ಏಡ್ಸ್ ಬಗ್ಗೆ ಅರಿವು ಮೂಡಿಸುವ ಕೆಲಸ ಯಾರ ನೆರವೂ ಇಲ್ಲದೆ ಮಾಡುತ್ತಿದ್ದೇವೆ. ಆದರೂ ಎಚ್.ಐ.ವಿ ಏಡ್ಸ್ ನಮ್ಮ ಮೂಲಕ ಹರಡುತ್ತದೆ ಎಂಬ ಅಪಪ್ರಚಾರಕ್ಕೇನೂ ಕಡಿಮೆ ಇಲ್ಲ. ಇದು ಸತ್ಯ. ಬದುಕು ಹೀಗಿದ್ದರೂ, ನಾವು ನಮ್ಮನ್ನು ಅಸಹಜರಲ್ಲ, ಸಾಮಾನ್ಯರೇ ಎಂದು ಬದುಕಿನ ಹೋರಾಟದ ಅನುಭವದಲ್ಲಿ ಕಲಿತುಕೊಂಡಿದ್ದೇವೆ.

ಬದುಕಿನ ಚಿತ್ರಗಳು

ಲೈಂಗಿಕ ವೃತ್ತಿ ಎಂಬ ಪಾಚಿಗಟ್ಟಿದ ಹಾದಿಯಲ್ಲಿನ ಬದುಕುಗಳ ಚಿತ್ರಣ:

ಸುಮಾರು ಹತ್ತು ವರ್ಷಗಳಲ್ಲಿ ಒಡನಾಡಿದ ನನಗೆ ಸಾವಿರಾರು ಲೈಂಗಿಕವೃತ್ತಿ ಮಹಿಳೆಯರ ಬದುಕುಗಳ ವಿವಿಧ ಮಜಲುಗಳನ್ನು ಪರಿಚಯಿಸಿಕೊಳ್ಳಲು ಸಾಧ್ಯವಾಯಿತು. ಆ ಸಂದರ್ಭಗಳಲ್ಲಿ ಅವರಿಂದಲೇ ಅವರ ಬದುಕನ್ನು ದಾಖಲಿಸಿದ ಕೆಲವೇ ಉದಾಹರಣೆಗಳನ್ನು ನಾನಿಲ್ಲಿ ಪ್ರಸ್ತುತ ಪಡಿಸುತ್ತಿದ್ದೇನೆ.

ಇಲ್ಲಿಯ ಎಲ್ಲರ ಹೆಸರುಗಳನ್ನು ಬದಲಿಸಲಾಗಿದೆ. ಹಾಗೂ ಅವರ ಮೂಲ ಸ್ಥಳದ ಬಗ್ಗೆ ಪ್ರಸ್ತಾಪಿಸಿಲ್ಲ.

ಹೆಸರು : ಮಾಲಾ

ವಯಸ್ಸು: ೨೫

ನನ್ನ ತಂದೆ ರಾಜ ತಾಯಿ ಕಮಲ ಎಂಬುವರ ಮಗಳು ನಾನು, ನನಗೆ ಒಬ್ಬನೆ ಅಣ್ಣ ಕುಮಾರ್, ನಾವು ಕೂಲಿಮಾಡಿಕೊಂಡು ಜೀವನ ನಡೆಸುತ್ತಿದ್ದೇವು.

ನನಗೆ ೧೨ನೇ ವಯಸ್ಸಿನಲ್ಲಿ ವಿನಾಯಕ ಎಂಬುವನ ಜೊತೆ ಮದುವೆಯಾಯಿತು. ನಾನು ನನ್ನ ಗಂಡನ ಜೊತೆ ಚೆನ್ನಾಗಿ ಸಂಸಾರ ನಡೆಸುತ್ತಿದ್ದೇವು.

ಹೀಗಿರುವಾಗ ಒಂದು ದಿನ ನನ್ನ ಸ್ನೇಹಿತೆ ನನ್ನನ್ನು ತುಂಬ ಒತ್ತಾಯ ಮಾಡಿ ಮಾರ್ಕೆಟ್‌ಗೆ ಕರೆದುಕೊಂಡು ಹೋದಳು. ಆಗ ನನಗೆ ಸುಮಾರು ೨೦ ವರ್ಷವಯಸ್ಸಿರಬಹುದು. ನನ್ನನ್ನು ಕರೆದುಕೊಂಡು ಹೋದ ಸ್ನೇಹಿತೆ ನನ್ನನ್ನು ಮಾರ್ಕೆಟ್‌ನಲ್ಲಿ ಬಿಟ್ಟು ನಾಪತ್ತೆಯಾದಳು. ಆಗ ನನಗೆ ಏನು ತೋಚದೆ ನಿಂತಿದ್ದೆ. ನನ್ನ ಹಿಂದೆ ಒಬ್ಬ ಬಂದ. ನಾನು ಎಲ್ಲಿ ಹೋದರು ನನ್ನ ಹಿಂದೆಯೇ ಬರುತ್ತಿದ್ದ ಇದನ್ನು ನೋಡಿದ ಪೊಲೀಸರು ನನ್ನನ್ನು ಮತ್ತು ಆತನನ್ನು ಜೊತೆಯಲ್ಲೆ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ನೀನು ಎಸ್.ಎ.ಟಿ. ಎಂದು ಒಪ್ಪಿಕೊ ಅಂತ ಹೊಡೆದು ಕೇಸ್‌ಹಾಕಿಸಿದರು. ಆಗ ನ್ನ ಹತ್ತಿರ ಹಣ ಇರಲಿಲ್ಲ. ಬಹಳ ಹಿಂಸೆಕೊಟ್ಟರು ಆಗ ನಾನೂ ನನ್ನ ಕಾಲಲಿದ್ದ ಕಾಲಿನ ಚೈನನ್ನು ಅಡವಿಟ್ಟು ಹಣ ತಂದು ಕೊಟ್ಟೆ ಆಮೇಲೆ ಮನೆಗೆ ಹೋಗಿ ಯೋಚನೆ ಮಾಡಿದೆ. ನಾನೂ ತಪ್ಪು ಮಾಡಿರಲಿಲ್ಲ. ತಪ್ಪು ಮಾಡದೆ ಇದ್ದರು ತಪ್ಪು ಮಾಡಿದ್ದೀಯಾ ಎಂದು ಪೊಲೀಸರು ಮತು ಪಬ್ಲಿಕ್‌ನವರು ನನ್ನನ್ನು ಬದುಕಲು ಬಿಡಲಿಲ್ಲ. ಇನ್ನು ಸಮಾಜದಲ್ಲಿ ಒಳ್ಳೆಯವಳು ಅನ್ನಿಸಿಕೊಳ್ಳುವುದು ಕಷ್ಟ ಎಂದು ತಿಳಿದು ಇದೇ ವೃತ್ತಿಯನ್ನು ಮಾಡಲಿಕ್ಕೆ ನಿರ್ಧರಿಸಿದೆ. ಇದಕ್ಕೆ ನನ್ನ ಸ್ನೇಹಿತೆಯೇ ಕಾರಣ ನಂತರ ನಾನೂ ವಿನಾಯಕನನ್ನು ಲವ್ ಮಾಡಿ ಮದುವೆ ಮಾಡಿಕೊಂಡೆ. ಮದುವೆಯಾದ ಮೇಲೆ ನಾನೂ ಯಾವ ಕೆಟ್ಟ ಕೆಲಸವನ್ನು ಮಾಡಲಿಲ್ಲ ಆದರೆ ನನ್ನನ್ನು ಎಲ್ಲಾ ಕೆಟ್ಟ ದೃಷ್ಟಿಯಲ್ಲೇ ನೋಡುತ್ತಿದ್ದರು. ಹೆಣ್ಣು ಮಗು ಹುಟ್ಟಿದ ೩ ತಿಂಗಳಿಗೆ ನಾನೂ ಗಾರೆ ಕೆಲಸಕ್ಕೆ ಹೋದೆ. ಅಲ್ಲಿಯೂ ನನ್ನನ್ನು ಸೂಳೆಯೆಂದೆ ಭಾವಿಸಿದರು. ಆಗ ನನಗೆ ತುಂಬಾ ಬೇಜಾರಾಯಿತು. ಆಗ ನಾನೂ ಆ ಕೆಲಸವನ್ನು ಬಿಟ್ಟು ಮನೆ ಕೆಲಸಕ್ಕೆ ಹೋದೆ ಆಗ ಅವರ ಮನೆಯಲ್ಲಿ

ಓನರ್ ನನ್ನನ್ನು ಕರೆದು ನೀನು ನನ್ನ ಪಕ್ಕದಲಲಿ ಮಲಗಿಕೋ ನಿನಗೆ ೧೦೦ರೂ.ಗಳನ್ನು ಕೊಡುತ್ತೇನೆ ಅಂತ ಹೇಳಿ ನನ್ನನ್ನು ಹಿಡಿದು ಎಳೆದ ಆಗ ನಾನೂ ಆ ಕೆಲಸವನ್ನು ಬಿಟ್ಟು ಮನೆಯಲ್ಲಿಯೆ ಇದ್ದೆ ಆ ಮೇಲೆ ತುಂಬಾ ಯೋಚನೆ ಮಾಡಿ ಕೊನೆಗೆ ಒಂದು ತೀರ್ಮಾನಕ್ಕೆ ಬಂದೆ. ನಾನೂ ಏನೇ ಕೆಲಸ ಮಾಡಿದರು ಸೂಳೆ ಅಂತ ಹೇಳುತ್ತಾರೆ. ನಾನೂ ಅದಕ್ಕೆ ಈ ವೃತ್ತಿಗೆ ಇಳಿದೆ. ನಾನೂ ಈ ವೃತ್ತಿ ಮಾಡಲು ಹಿಡಿದು ಸುಮಾರು ೪ ವರ್ಷವಾಯಿತು.

ಈಗ ನಾನೂ ಈ ಕೆಲಸ ಮಾಡುತ್ತಿರುವುದು ನನ್ನ ತವರಿಗೆ ಆಗಲಿ ನನ್ನ ಗಂಡನಿಗಾಗಲಿ ಗೊತ್ತಿಲ್ಲ. ನನ್ನ ಗಂಡನಿಗೆ ಎದೆ ನೋವು. ಅವರಿಗೆ ಗಾರೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನನ್ನ ಗಂಡನಿಗೆ ಮನೆ ಕೆಲಸಕ್ಕೆ ಹೋಗುತ್ತೇನೆ ಅಂತ ಹೇಳಿ ತಿಂಗಳಿಗೆ ೩೦೦೦ ರೂಗಳನ್ನು ಸಂಬಳ ಎಂದು ಕೊಡುತ್ತೇನೆ.

ಹೀಗೆ ಈ ವೃತ್ತಿಯನ್ನು ಮುಂದುವರೆಸಿಕೊಂಡು ಬಂದೆ. ಇದುವರೆಗೂ ನನ್ನ ಮನೆಯವರಿಗೆ ಈ ಕೆಲಸ ಮಾಡುತ್ತಿರುವುದು ಇನ್ನು ಗೊತ್ತಿಲ್ಲ. ಈ ವಿಷಯ ಮನೆಯವರಿಗೆ ತಿಳಿಯುವ. ಮುಂಚೆ ಈ ವೃತ್ತಿ ಬಿಡಲು ನಾನೂ ಸಿದ್ದ. ನನಗೆ ನನ್ನ ಜೀವನಕ್ಕಿಂತ ನನ್ನ ಮಕ್ಕಳ ಭವಿಷ್ಯ ಮುಖ್ಯ. ನನ್ನ ಮಕ್ಕಳು ನನ್ನ ಹಾಗೆ ಆಗಬಾರದು ಅವರು ಸಹ ಎಲ್ಲರಂತೆ ಸಮಾಜದಲ್ಲಿ ಮರ್ಯಾದೆಯಿಂದ ಬದುಕಲು ದಾರಿಯಾಗಬೇಕು. ಎಂದು ತಿಳಿದು ನಾನೂ ಈ ಕೆಲಸ ಬಿಡಲು ಸಿದ್ದಳಿದ್ದೇನೆ. ನನಗೆ ಎಲ್ಲಾದರೂ ಒಂದು ಕೆಲಸ ಯಾವುದೇ ಹಿಂಸೆ ಇಲ್ಲದ ಮರ್ಯಾದೆಯಿಂದ ಮಾಡಿಕೊಂಡು ಹೋಗುವ ಕೆಲಸ ಸಿಕ್ಕಿದರೆ ಈ ವೃತ್ತಿ ಬಿಡಲು ಸಿದ್ದ.

ಹೆಸರು: ಶಾಮಲ

ವಯಸ್ಸು: ೩೨ ವರ್ಷ

ತಾಯಿಯ ಹೆಸರು ಲಕ್ಷ್ಮಮ್ಮ, ತಂದೆಯ ಹೆಸರು ಕೃಷ್ಣ ಮೂರ್ತಿ. ತಮಿಳು ನಾಡಿನಲ್ಲಿ ಜನನ .ಒಬ್ಬ ಅಕ್ಕ, ಒಬ್ಬ ಅಣ್ಣ ನಾನೂ ಕೊನೆಯವಳು. ಕೊನೆಯಮಗಳಾದ್ದರಿಂದ ತುಂಬಾ ಪ್ರೀತಿಯಿಂದ ಬೆಳೆಸಿದರು. ತಂದೆ ಟೈಲರ್ ಆಗಿದ್ದರು. ನನ್ನ ಕುಟುಂಬದಲ್ಲಿ ನನ್ನನ್ನು ಅತಿ ಮುದ್ದಿನಿಂದ ಸಾಕಿದರು. ನನ್ನ ತಾಯಿಗೆ ಟಿ.ಬಿ. ಆಗಿತ್ತು. ನನ್ನ ತಾಯಿಯನ್ನು ಆಸ್ಪತ್ರೆಗೆ ತೋರಿಸಲು ಆಗಾಗ ಬೆಂಗಳೂರಿಗೆ ಬರಬೇಕಿತ್ತು. ಇದರಿಂದ ತುಂಬ ಆ ಹಣ ಖರ್ಚಾಗುತ್ತಿತ್ತು. ಅದಕ್ಕೆ ನಮ್ಮ ತಂದೆ ಮನೆಯನ್ನು ಬೆಂಗಳೂರಿನಲ್ಲೆ ಮಾಡಿದರು. ನನ್ನ ತಂದೆಯು ತಾಯಿಯನ್ನು ನೋಡಿಕೊಂಡು ಆಸ್ಪತ್ರೆಯಲ್ಲಿ ಇರಬೇಕಿತ್ತು. ನಮ್ಮ ಅಜ್ಜಿಯನ್ನು ಕರೆತಂದು ನಮ್ಮನ್ನು ನೋಡಿಕೊಳ್ಳಲು ನಮ್ಮ ಮನೆಯಲ್ಲಿಯೆ ಬಿಟ್ಟರು. ನಮ್ಮ ಅಜ್ಜಿಯೇ ನಮ್ಮ ಯೋಗಕ್ಷೇಮವನ್ನು ನೋಡಿಕೊಂಡು ನಮ್ಮನ್ನು ಸಾಕಿದರು. ನನಗೆ ೫ ವರ್ಷ ಇರುವಾಗ ನನ್ನ ತಾಯಿಗೆ ಕಾಯಿಲೆ ಬಂದದ್ದು. ನನಗೆ ೧೯ ವರ್ಷ ವಯಸ್ಸಿಗೆ ನನ್ನ ತಾಯಿ ನಮ್ಮನ್ನು ತಬ್ಬಲಿ ಮಾಡಿ ಕಣ್ಣುಮುಚ್ಚಿ ವಿದಾಯ ಹೇಳಿದರು. ನಂತರ ನನ್ನ ತಂದೆ ನನ್ನನ್ನು ಕೆಲಸಕ್ಕೆ ಸೇರಿಸಿದರು. ತಾಯಿ ಇಲ್ಲದ ಯೋಚನೆ ಬಿಟ್ಟು ಇನ್ನು ಯಾವುದೇ ರೀತಿಯ ಯೋಚನೆ ನನಗಿರಲಿಲ್ಲ.

ನನ್ನ ಅಜ್ಜಿ ಅಪ್ಪು ಚೆನ್ನಾಗಿ ಸಾಕಿದರು. ನಾನೂ ಮೆಚ್ಯುರ್ಡ್ ಆದಾಗ ನನ್ನ ಅಜ್ಜಿ ಅಪ್ಪು ಸಂಭ್ರಮದಿಂದ ಊರಿನವರನ್ನೆಲ್ಲ ಕರೆದು ಫೋಟೋ ತೆಗೆಸಿ ತುಂಬಾ ವಿಜೃಂಭಣೆಯಿಂದ ಕಾರ್ಯ ನೇರವೇರಿಸಿದರು. ೮ ತಿಂಗಳಿಗೆ ಅಜ್ಜಿ ತೀರಿಹೋದರು. ಈಗ ನಾನೂ ನಿಜವಾದ ತಬ್ಬಲಿಯಾದೆ. ಆಕಾಶವೇ ತಲೆಯ ಮೇಲೆ ಬಿದ್ದಂಗಾಯಿತು. ನಂತರ ಈ ಘಟನೆಯಿಂದ ಚೆತರಿಸಿಕೊಂಡು ಕೆಲಸಕ್ಕೆ ಹೋದೆ. ಇದು ನನ್ನ ದಿನ ನಿತ್ಯದ ಕೆಲಸವಾಗಿತ್ತು. ಒಂದು ರಾತ್ರಿ ನನ್ನ ತಂದೆ ನನ್ನನ್ನೇ ಲೈಂಗಿಕ ಕ್ರಿಯೆಗೆ ಸಹಕರಿಸಲು ಕೇಳಿದರು. ನನ್ನ ತಂದೆಯ ಆ ಮಾತು ಮತ್ತು ವರ್ತನೆಯನ್ನು ನೋಡಿ ಕಂಗಾಲಾಗಿ ರಾತ್ರೊ ರಾತ್ರಿ ಆ ಮನೆಯ ಋಣ ಮುಗಿಯಿತು ಎಂದು ಗೋಳೊ ಎಂದು ಅಳುತ್ತಾ ಮನೆಯನ್ನು ಬಿಟ್ಟು ಬಂದೆ. ಅಕ್ಕ ಪಕ್ಕದವರಿಗೆ ಈ ಮಾತನ್ನು ಹೇಗೆ ಹೇಳಿಕೊಳ್ಳಲಿ ಅದಕ್ಕೆ ಯಾರಿಗೂ ಹೇಳುವುದು ಬೇಡ ಎಂದು ತಿರ್ಮಾನಿಸಿ ಮೆಜಸ್ಟಿಕ್ ಬಸ್ ಸ್ಟಾಪ್‌ನಲ್ಲಿ ಕುಳಿತುಕೊಂಡೆ. ದುಃಖ ಉಮ್ಮಳಿಸಿ ಬರುತ್ತಿತ್ತು ಅಳುತ್ತಾ ಕುಳಿತುಕೊಂಡಿದ್ದೆ. ನನ್ನ ಕೈಯಲ್ಲಿ ಸ್ವಲ್ಪವೂ ಹಣ ಇರಲಿಲ್ಲ. ೩ ದಿನ ಇದೇ ಯೋಚನೆಯಲ್ಲಿ ಅಲ್ಲೆ ಕಾಲ ಕಳೆದೆ. ೩ ದಿನ ತುಂಬಾ ಹಸಿವಾಗುತ್ತಿತ್ತು. ೩ ದಿನದಿಂದ ಊಟವಿಲ್ಲದೆ ತುಂಬಾ ಸುಸ್ತಾಗುತ್ತಿತ್ತು. ಮೇಲೆ ಏಳುವುದಕ್ಕೂ ಆಗದೆ ಅಲ್ಲೆ ಕುಸಿದು ಬಿದ್ದೆ. ಯಾರೊ ಒಬ್ಬರು ನನ್ನನ್ನು ಹೊಟೇಲ್‌ಗೆ ಕರೆದುಕೊಂಡು ಹೋಗಿ ಊಟ ಕೊಡಿಸಿ. ಅಲ್ಲಿ ರೂಂ ತೆಗದುಕೊಂಡು 'ನಿನ್ನ **Story** ಹೇಳುವೆಯಂತೆ' ಎಂದು ಹೇಳಿ ರೂಂಗೆ ಕರೆದುಕೊಂಡುಹೋಗಿ ಅಲ್ಲಿ ನನ್ನ ಬಗ್ಗೆ ಕೇಳುತ್ತಿದ್ದರು. ಅಷ್ಟರಲ್ಲಿ ಪೊಲೀಸರು ಬಂದು ನಮ್ಮಿಬ್ಬರನ್ನು ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ಅಲ್ಲಿಂದ ಕೋರ್ಟಗೆ ಹಾಕಿದರು ನಾವೂ ಯಾವ ತಪ್ಪನ್ನು ಮಾಡಲಿಲ್ಲ. ಅಂತ ಹೇಳಿದರೂ ನನಗೆ ೫೦೦ರೂ ಫೈನ್ ಹಾಕಿದರು. ಅದನ್ನು ನಾನೂ ಎಲ್ಲಿಂದ ತಂದುಕೊಡಲಿ ಆಗ ಒಬ್ಬ ಪಿ.ಸಿ ಬಂದು ನಿನಗೆ ಯಾರೊ ಫೈನ್ ಕೊಡುತ್ತಾರಂತೆ ಅಂತ ಹೇಳಿದರು. ಮತ್ತೆ ಅಲ್ಲಿಂದ ಹೊರ ಬರುತ್ತಿದ್ದಂತೆ ಅವರು ಬಂದು ಒಳ್ಳೆಯ ಮಾತುಗಳನ್ನು ಆಡಿ ದುಡ್ಡು ಕೇಳಿದರು. ನಾನೂ ನನ್ನ ಅಸಹಾಯಕತೆಯನ್ನು ಹೇಳಿದೆ. ಅವರು ನಿನಗೆ ಕೆಲಸಕೊಡಿಸುತ್ತೇನೆ ಎಂದು ಹೇಳಿ ಕರೆದುಕೊಂಡು ಹೋಗಿ ಒಂದು ಗುಡಿಸಲಲ್ಲಿ ಕೂಡಿಹಾಕಿದರು. ಅದರಲ್ಲಿ ನನ್ನಂತೆ ಮೋಸ ಮಾಡಿ ಕರೆದುಕಂಡು ಬಂದ ಹೆಣ್ಣು ಮಕ್ಕಳು ೫ ಜನ ಇದ್ದರು. ನಾವೆಲ್ಲ ಮಾತಾನಾಡುತ್ತಾ ಆ ಗುಡಿಸಲಿಗೆ ಬೆಂಕಿ ಹಚ್ಚಿ ಓಡಿ ಕದ್ದು ಮುಚ್ಚಿ ವೇಲೂರು ಸೇರಿದೆವು. ಎಲ್ಲಿ ಹೋಗಿ ಕೆಲಸ ಕೇಳಿದರೂ ಎಲ್ಲರು ಕೆಟ್ಟದಾಗಿ ಮಾತನಾಡುವವರೆ ಹೋರತು ಕೆಲಸವನ್ನು ಮಾತ್ರ ಯಾರು ಕೊಡುವುದಕ್ಕೆ ಮುಂದೆ ಬರಲಿಲ್ಲ. ನಮ್ಮ 5 ಜನರಲ್ಲಿ ಒಬ್ಬರಲ್ಲೂ ದುಡ್ಡು ಇಲ್ಲ, ಸ್ವಲ್ಪ ಒಡವೆಗಳು ಇತ್ತು. ಅವನ್ನು ಮಾರಿ ಒಂದು ಮನೆಯನ್ನು ಬಾಡಿಗೆಗೆ ಪಡೆದೆವು. ಮತ್ತೆ ಕೆಲಸವನ್ನು ಹುಡುಕಿದೇವು ಗಾರೆ ಕೆಲಸ ಸಿಕ್ಕಿತು. ಆ ಕೆಲಸವನ್ನೇ ಮಾಡಿಕೊಂಡು ೩. ತಿಂಗಳು ಜೀವನ ನಡೆಸಿದೆವು. ಪೋಲಿ ಪುಂಡರು ನಮಗೆ ತುಂಬಾ ತೊಂದರೆ ಮಾಡುತ್ತಿದ್ದರು. ಅದನ್ನು ವಿರೋದಿಸಿದಾಗ ನಮಗೆ ಅವಮಾನ ಆಗುವ ರೀತಿಯಲ್ಲಿ ಮಾತನಾಡಿದರು. ಅದನ್ನು ಸಹಿಸದೆ ಬೆಂಗಳೂರಿಗೆ ಬಂದೆವು. ಬೆಂಗಳೂರಿನಲ್ಲಿ ಅಲ್ಲಿಗಿಂತ ಕೆಟ್ಟವರನ್ನೆ ನೋಡಿದ್ದೇವೆ ಹೊರತು. ಒಳ್ಳೆಯವರನ್ನು ನೋಡಲಿಲ್ಲ. ಇದರಿಂದ ಬೇಸತ್ತು ಹೋಗಿಈ ವೃತ್ತಿಯನ್ನು ನಾನೂ ಜೀವನವನ್ನಾಗಿಸಿಕೊಂಡೆ ಈ ವೃತ್ತಿಯನ್ನು ಮಾಡುತ್ತಿರುವಾಗ ಒಬ್ಬರು

ಪರಿಚಯವಾಗಿ ನನ್ನನ್ನು ಮದುವೆ ಮಾಡಿಕೊಂಡರು. ನಂತರ ಈ ವೃತ್ತಿಯನ್ನು ಬಿಟ್ಟೆ ಆದರೆ ಕೆಲ ತಿಂಗಳುಗಳ ನಂತರ ಮನೆ ಸಂಸಾರ, ಬಾಡಿಗೆ, ನೀರಿಗೆ, ಕರೆಂಟ್‌ಗೆ ಹೀಗೆ ತೊಂದರೆಗಳ ಪಟ್ಟಿ ಹೆಚ್ಚುತ್ತಾ ಹೋಯಿತು. ನನ್ನ ಗಂಡನ ಕಷ್ಟವನ್ನು ನೋಡಲಾರದೆ ನಾನೂ ಮತ್ತೆ ಇದೇ ವೃತ್ತಿಗೆ ಇಳಿದೆ. ಆದರೆ ಪೊಲೀಸರ ಕಾಟ ತುಂಬಾ ಜಾಸ್ತಿ ಆಗಿದೆ ನಮ್ಮನ್ನು ನೆಮ್ಮದಿಯಾಗಿ ಬದುಕಲು ಬಿಡುತ್ತಿಲ್ಲ.

(ಈ ತನ್ನ ಬದುಕನ್ನು ವಿವರಿಸಿದ ಶಾಮಲ ಆ ಬಳಿಕ ಕಣ್ಣಿಗೆ ಬೀಳಲೇ ಇಲ್ಲ)

ಹೆಸರು - ಜಮೀಲ

ವಯಸ್ಸು- ೩೮

ತಾಯಿಯ ಹೆಸರು 'ಅಸೀನಾ' ತಂದೆಯ ಹೆಸರು ಪಾಷ. ಇವರಿಗೆ ನಾನು ಒಬ್ಬಳೇ ಮಗಳು. ಆದರೆ ತಂದೆ ತುಂಬಾ ಕುಡುಕ. ಮನೆಯ ಕಡೆ ಗಮನವೇ ಕೊಡುತ್ತಿರಲಿಲ್ಲ. ಕಷ್ಟ ಸುಖ ನೋಡುತ್ತಿರಲಿಲ್ಲ. ಹೆಣ್ಣು ಮಗು ಆದ್ದರಿಂದ ಅದಕ್ಕೆ ಇವರ ತಾಯಿ ಲೈಂಗಿಕ ವೃತ್ತಿಗೆ ಇಳಿದಳು .ಮಗಳನ್ನು ಚೆನ್ನಾಗಿ ಓದಿಸಬೇಕು ಅಂತ ದಂಧೆ ಷುರು ಮಾಡಿದಳು ನಂತರ ಗಂಡ ತೀರಿಕೊಂಡ. ಒಬ್ಬ ಪೊಲೀಸ್ ಇವಳನ್ನು ಇಟ್ಟುಕೊಂಡು ಸ್ವಲ್ಪದಿನಗಳ ಮಟ್ಟಿಗೆ ಚೆನ್ನಾಗಿ ನೋಡಿಕೊಂಡ. ಅನಂತರ ಮಗಳು ದೊಡ್ಡವಳಾದಳು ಮಗಳನ್ನು ಆ ಪೊಲೀಸ್ ಕೆಟ್ಟ ದೃಷ್ಟಿಯಿಂದ ನೋಡಿದ. ಆಗ ತಾಯಿಯ ನನ್ನನ್ನು ಕೆರದುಕೊಂಡು ರಾತ್ರೋ ರಾತ್ರಿ ಬಾಂಬೆಗೆ ಕರೆದುಕೊಂಡು ಹೋದಳು ಹೊಸ ಊರು ಹೊಸ ಜನ ವಿದ್ಯಾಭ್ಯಾಸ ಬೇರೆ ಇಲ್ಲ ಅಷ್ಟೋತ್ತಿಗೆ ನನಗೆ ಗೊತ್ತಾಗಿತ್ತು ತಾಯಿಯ ವೃತ್ತಿ ಏನೆಂದು ಜೀವನ ತುಂಬಾ ಕಷ್ಟವಾಗಿ ಅಲ್ಲಿಯು ಇದೇ ದಂದೆಯನ್ನು ಮುಂದುವರೆಸಿದಳು ತಾಯಿಗೆ ವಯಸ್ಸಾಗಿದೆ ನಾನು ಆಗತಾನೇ ೧೭ನೇ ವಯಸ್ಸಿವಳಾಗಿದ್ದೇನು ತಾಯಿಯ ಹತ್ತಿರ ಬರುತ್ತಿದ್ದವರೆಲ್ಲಾ ನನ್ನನ್ನು ಕೇಳುತ್ತಿದ್ದರು. ಆಗ ವಿಧಿ ಇಲ್ಲದೆ ಬಡತನದ ಬೇಗೆಯಿಂದ ಇದೇ ಕೆಲಸಕ್ಕೆ ನನ್ನ ತಾಯಿ ಮುಂದುವರೆಸಿದಳು ಆ ದಿನದಿಂದ ಇಲಿಯವರೆಗೂ ಈ ವೃತ್ತಿಯಲ್ಲಿದ್ದೇನೆ ನನಗೆ ಇಷ್ಟವಿಲ್ಲದಿದ್ದರೂ ಅಲ್ಲಿಗೆ ಬರುತ್ತಿದ್ದ ಕುಡುಕರು ಇತ್ಯಾದಿ ಜನರು ನನ್ನನ್ನು ಈ ವೃತ್ತಿಗೆ ಬರುವಂತೆ ಮಾಡಿದರು. ಈಗ ನನಗೆ ತಾಯಿ ಇಲ್ಲ. ಆದರೂ ಜೀವನ ಸಾಗಿಸಲು ಈ ವೃತ್ತಿಯಲ್ಲಿಯೇ ಬಾಂಬೆಯಲ್ಲಿ ೨೨ ವರ್ಷ ಕಳೆದು ನಂತರ ಬೆಂಗಳೂರಿಗೆ ಬಂದು ನನ್ನ ಸ್ನೇಹಿತೆಯರೊಂದಿಗೆ ಈ ದಂಧೆ ನಡೆಸುತ್ತಿದ್ದೇನೆ.

ಹೆಸರು- ಪ್ರೇಮ

ವಯಸ್ಸು -೨೨

ವಿದ್ಯಾಭ್ಯಾಸ- ಪಿ.ಯು.ಸಿ

ನಾನು ಒಂದು ಸಾಮಾನ್ಯ ಕುಟುಂಬದಲ್ಲಿ ಬೆಳೆದ ಹೆಣ್ಣು. ನನ್ನ ತಂದೆ ಒಂದು ಪ್ರೈವೇಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ತಾಯಿ ತುಂಬಾ ಮುಗ್ಧೆ. ನನ್ನ ತಂದೆ ಹೇಗೊ ನನ್ನನ್ನು **II PUC** ಓದಿಸಿದರು. ನಾನು ಕಷ್ಟಪಟ್ಟು ಓದಿದೆ. ನನ್ನ ತಂದೆ ನಾನು **S.S.L.C** ಓದುತ್ತಿದ್ದಾಗ ಬೇರೆ ಮದುವೆಯಾದರು. ನಂತರ ನಮ್ಮ ಕಡೆ ಗಮನವೇ ಕೊಡಲಿಲ್ಲ. ನಮ್ಮನ್ನು ಸಂಪೂರ್ಣವಾಗಿ ಮರೆತು ಹೋದರು. ಊಟಕ್ಕೆ, ಮನೆ ಬಾಡಿಗೆ ಇದಕ್ಕೆಲ್ಲ ತುಂಬ ಕಷ್ಟವಾಯಿತು. ತಂದೆಯನ್ನು ಹೋಗಿ ಕೇಳಿದರೆ. ನೀವು ಇಲ್ಲಿಗೆ ಬಂದು ಇರಿ ಅಂತ ಹೇಳ್ತಾರೆ. ಅಲ್ಲಿಗೆ ಹೋದರೆ ನನ್ನನ್ನು ಮತ್ತು ನನ್ನ ತಾಯಿಯನ್ನು ಕೆಲಸದವರ ಹಾಗೆ ನೋಡುತ್ತಾರೆ. ಅವರು ಹೇಳಿದ ಕೆಲಸಗಳನ್ನು ಮಾಡಬೇಕು. ಎಲ್ಲೂ ಹೋಗುವಂತಿಲ್ಲ. ಯಾರು ಬರುವಂತಿಲ್ಲ, ಈ ರೀತಿ ಮಾನಸಿಕವಾಗಿ ಹಿಂಸಿಸುತ್ತಾರೆ. ಅದಕ್ಕೆ ನಾನೊಂದು ನಿರ್ಧಾರ ಮಾಡಿದೆ. ನನ್ನ ಸ್ನೇಹಿತೆ ಬೆಂಗಳೂರಿನಲ್ಲಿ ಇರುವಳು. ಅವಳಲ್ಲಿಗೆ ಹೋಗಿ ಕೆಲಸವನ್ನು ಹುಡುಕಿಕೊಳ್ಳುತ್ತೇನೆ ಎಂದು ಅಮ್ಮನನ್ನು ಬೆಂಗಳೂರಿಗೆ ಕರೆದುಕೊಂಡು ನನ್ನ ಸ್ನೇಹಿತೆಯ ಮನೆಗೆ ಬಂದೆವು. ಅವಳಿಗೆ ನನ್ನ ಬಗ್ಗೆ ಎಲ್ಲವು ತಿಳಿದಿತ್ತು. ನಾವು ಪ್ರಾಣ ಸ್ನೇಹಿತೆಯರು. ಅವಳು ಹೇಳಿದಳು : ನೀನು ನಮ್ಮ ಮನೆಯಲ್ಲಿಯೇ ೨ ದಿನ ಸುಧಾರಿಸಿಕೋ ಆ ಮೇಲೆ ನಿನಗೆ ಎಲ್ಲಾದರೂ ಬಡ್ಡಿಗೆ ದುಡ್ಡು ಕೊಡಿಸುತ್ತೇನೆ, ನೀನು ಎಲ್ಲಾದರೂ ಕೆಲಸಕ್ಕೆ ಹೋಗಿ ಆ ಹಣವನ್ನು ತೀರಿಸು ಅಂತ ಹೇಳಿದಳು.

ಅದು ನನಗೆ ಪೂರ್ತಿ ಒಪ್ಪಿಗೆಯಾಯಿತು. ನಾನು ತುಂಬ ಕಡೆ ಅಂದರೆ ೧೦-೧೨ ಕಡೆ ಕೆಲಸದ ಬಗ್ಗೆ ವಿಚಾರಿಸಿದೆ. ಆದರೆ ಎಲ್ಲಿ ಹೋದರು. ಅನುಭವ ಕೇಳ್ತಾರೆ. ನಾನು ಇದುವರೆಗೂ ಯಾವ ಕೆಲಸವೂ ಮಾಡಲಿಲ್ಲ. ಹೀಗೆ ೧೫-೨೫ ದಿನ ಕಳೆದು ಹೋಯಿತು. ಸಾಲ ತೆಗೆದುಕೊಳ್ಳುವುದಕ್ಕೂ ಭಯ. ನಂತರ ಒಂದು ದಿನ ಎಲ್ಲಾದರೂ ಕೆಲಸ ಹುಡುಕಲೇ ಬೇಕು ಅಂತ ಹೋದೆ. ಅಲ್ಲಿ ಒಂದು ನ್ಯೂಸ್ ಪೇಪರ್ ತೆಗೆದುಕೊಂಡೆ, ಅದರಲ್ಲಿ ಕೆಲಸ ಖಾಲಿ ಇದೆ, ಅನುಭವ ಬೇಕಾಗಿಲ್ಲ ಅಂತ ಇದ್ದದನ್ನು ಓದಿದೆ.

ಆಗ ಆಕಾಶವೇ ಕೈಗೆ ಸಿಕ್ಕಿ-ಬಿಟ್ಟಿತೇನೋ ಅನ್ನಿಸಿತು. ಆಗ ತಕ್ಷಣ ಆ ಆಡ್ರೆಸ್‌ನ್ನು ಅಲ್ಲಿ-ಇಲ್ಲಿ ವಿಚಾರಿಸಿಕೊಂಡು ಆಫೀಸಿಗೆ ಹೋದೆ. ನಾನು ನೇರವಾಗಿ ಆಫೀಸ್ ಒಳಗೆ ಹೋದೆ. ಅಲ್ಲಿ ಒಬ್ಬಳು ರಿಸಪ್ಷನಿಸ್ಟ್ ಇದ್ದಳು. ಅವಳನ್ನು ಕೇಳಿದೆ, ಅವಳು ಫೋಟೋ ಕೇಳಿದಳು, ಫೋಟೋ ಕೊಟ್ಟೆ. ಒಳಗೆ ಕರೆದುಕೊಂಡು ಹೋಗಿ ನನ್ನನ್ನು ಮೇಲಿಂದ ಕೆಳಗಿನವರೆಗೂ ನೋಡಿ ಸರಿ. ಓಕೆ ನಾಳೆಯಿಂದ ಬನ್ನಿ ಎಂದಳು. ನನಗೆ ಹಾಲು ಕುಡಿದಷ್ಟು ಸಂತೋಷವಾಯಿತು. ಮನೆಗೆ ಬಂದು ಅಮ್ಮನಿಗೆ ಮತ್ತು ನನ್ನ ಸ್ನೇಹಿತೆಗೆ ಎಲ್ಲಾ ಹೇಳಿದೆ ಅವರು ಸಂತೋಷಪಟ್ಟರು.

ಮಾರನೇಯ ದಿನ ಮುಂಜಾನೆ ಎದ್ದು ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗಿ ಬಂದು, ಅಮ್ಮನಿಗೆ ನಮಸ್ಕಾರಮಾಡಿ ಕೆಲಸಕ್ಕೆ ಹೋಗುತ್ತೇನೆ ಎಂದು ಹೇಳಿದೆ ಎಲ್ಲರು ತುಂಬ ಸಂತೋಷದಿಂದ ಕಳಿಸಿದರು.

೨ ದಿನಗಳು ಅದು-ಇದು ಬರೀ ಅಂತ ಹೇಳಿದರು. ಬರೆದ ನಂತರ ಮ್ಯಾನೇಜರ್ ನನ್ನನ್ನು ಮಾತನಾಡಿಸಿ ನನ್ನ ಮನೆಯ ಕಡೆ ವಿಚಾರಿಸಿದರು. ನಾನು ಎಲ್ಲವನ್ನು ಮನಃ ಪೂರ್ತಿಯಾಗಿ ಹೇಳಿದೆ. ಕೆಲಸಕ್ಕೆ ಸೇರಿ ೧೫ ದಿನಗಳಾಯಿತು. ಒಂದು ದಿನ ಮ್ಯಾನೇಜರ್ ನನ್ನನ್ನು ತುಂಬ ಪ್ರೀತಿಯಿಂದ ಮಾತನಾಡಿಸಿ ಒಂದುದಿನ ಬೇಗ ಬಾ ತುಂಬ ಕೆಲಸವಿದೆ ಎಂದು ಹೇಳಿದರು. ಆ ದಿನ ಬೇಗ ಬಂದೆ ನನ್ನನ್ನು ಅವರ ಚೆಂಬರ್‌ನಲ್ಲಿ ಕೂರಿಸಿಕೊಂಡು ನನಗೆ ನಿನ್ನನ್ನು ಕಂಡರೆ ತುಂಬಾ ಇಷ್ಟ, ನನಗೆ ನಿನ್ನಂತ ಬಡವರನ್ನು ಪ್ರೀತಿಸುವ ಆಸೆ ಇದೆ ಮತ್ತೆ ನಿನಗೆ ಒಳ್ಳೆಯ ಜೀವನ ಕೊಡುತ್ತೇನೆ ಎಂದು ಹೇಳಿದ ಆ ಮಾತುಗಳನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಬಡತನದಲ್ಲೆ ಬೆಳೆದ ನಾನು ಅವನಿಗೆ ಒಪ್ಪಿಗೆಯ ಮಾತು ಕೊಟ್ಟೆ. ನಂತರ ಹೊಟೇಲ್, ಪಾರ್ಕ್, ಲಾಡ್ಜ್ ಅಂತ ಹೀಗೆ ಸುತ್ತಿದ್ದೆವು. ನಾನು ನನ್ನ ಸರ್ವಸ್ವವನ್ನು ಅವನಿಗೆ ಅರ್ಪಿಸಿಬಿಟ್ಟೆ. ಹೀಗೆ ಕಾಲಗಳು ಕಳೆದಂತೆ ನಾನು ಗರ್ಭಿಣಿಯಾದೆ. ಆಗ ಅವನಿಗೆ ಹೇಳಿದೆ ಆತ ಅದಕ್ಕೆ ನೋಡು ಪ್ರೇಮ ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ ಮುಂದೆ ಮದುವೆಯೂ ಆಗುತ್ತೇನೆ. ಆದರೆ ಸ್ವಲ್ಪ ದಿನ ತಡೆದುಕೋ ಈಗ ಅದನ್ನು ಅಭಾರ್ಶನ್ ಮಾಡಿಸಿಕೊಂಡು ಬಾ ಅಂತ ಹೇಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಭಾರ್ಶನ್ ಮಾಡಿಸಿ ಬಿಟ್ಟ. ನಂತರ ಫ್ಯಾಮಿಲಿ ಪ್ಲಾನಿಂಗ್ ರೀತಿಯಲ್ಲಿ ಸುಖ ಅನುಭವಿಸುತ್ತಿದ್ದ. ಹೀಗೆ ಕಾಲ ಕಲೆಯುತ್ತಿದ್ದೇವು. ನನಗೆ ೯ ತಿಂಗಳಾಯಿತು. ನಂತರ ನಾನು ಎಂದಿನಂತೆ ಆಫೀಸ್‌ಗೆ ಹೋದೆ ಆಫೀಸ್ ಬಾಗಿಲು-ತೆಗೆದಿಲ್ಲ, ಪಕ್ಕದಲ್ಲಿ ಕೇಳಿದೆ ನಮಗೆ ಗೊತ್ತಿಲ್ಲ ಅಂದರು, ಒಂದುವಾರ ಹೀಗೆ ಅಲೆದೆ ಬಾಗಿಲು ತೆಗೆದಿಲ್ಲ. ನಂತರ ಮೊಬೈಲ್‌ಗೆ ಫೋನ್ ಮಾಡಿದೆ ಅದು ಸಿಗುತ್ತಿಲ್ಲ. ಮನೆಗೆ ಬಂದು ನೆನೆದು-ನೆನೆದು ಅತ್ತೆ ಎಷ್ಟು ಅತ್ತರು ಕಳೆದುಕೊಂಡ ಶೀಲ ಬರುವುದೇ. ಆದೇ ಆಫೀಸ್‌ನಲ್ಲಿ ರಿಸಪ್ಶನಿಸ್ಟ್ ಆಗಿದ್ದವಳ ಹತ್ತಿರ ಹೋಗಿ ಕೇಳಿದೆ. ಅವಳು ನನಗೆ ಸಮಾಧಾನ ಮಾಡಿ ಬುದ್ಧಿ ಹೇಳಿ ಬೇರೆ ಕಡೆ ಕೆಲಸ ಕೊಡಿಸುತ್ತೇನೆ ಎಂದು ಹೇಳಿ ಒಬ್ಬನ ಹತ್ತಿರ ಕರೆದುಕೊಂಡು ಹೋದಳು. ಕೆಲಸ ಗ್ಯಾರಂಟಿ ಎಂದು ಹೇಳಿದಳು. ನಂತರ ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋಗಿ ಹೇಳಿದಳು 'ನೋಡು ಪ್ರೇಮ ನೀನು ಎಲ್ಲಾರಂತೆ ಚೆನ್ನಾಗಿರಬೇಕು ಅನ್ನಿಸುತ್ತದೆ ಅಲ್ಲವೆ ' ಎಂದು ಕೇಳಿದಳು. ಅದಕ್ಕೆ ನಾನು ಸಪ್ಪೆ ಮೋರೆ ಹಾಕಿಕೊಂಡು ಹೇಳಿದೆ ಹೌದು. ಹಾಗಾದರೆ ನೀನು ನಾನು ಹೇಳಿದ ಹಾಗೆ ಕೇಳಬೇಕು ಅಂತ ಹೇಳಿದಳು. ನೀವು ಮೊದಲು ಏನು ಅಂತ ಹೇಳಿ, ನಾನು ಆಮೇಲೆ ಒಪ್ಪಿಕೊಳ್ಳುತ್ತೇನೆ ಎಂದೆ.

ಅದಕ್ಕೆ ಅವಳು ನಾವು ಈಗ ಹೋಗಿದ್ದೇವಲ್ಲ ಅವರು ಈಗ ನಮ್ಮ ಮನೆಗೆ ಬರುತ್ತಾರೆ. ಅವರು ಹೇಳಿದ ಹಾಗೆ ನೀನು ನಡೆದುಕೋ ಎಂದಳು. ಸರಿ ಇನ್ನೇನೂ ಮಾಡುವುದು ಅಂತ ತಿಳಿದು ಒಪ್ಪಿಕೊಂಡೆ ಅವನು ಬಂದ ನಂತರ ಅವಳ ಮನೆಯಲ್ಲೇ ಬೆಡ್‌ರೂಂಗೆ ಬಿಟ್ಟಳು. ಅವನು ನನ್ನದೆಲ್ಲವನ್ನು ದೋಚಿಕೊಂಡ. ಹೀಗೆ ನನ್ನ ಜೀವನ ಇದರಲ್ಲೇ ಮುಳುಗಿ ಹೋಯಿತು. ಈಗ ಇದನ್ನು ವೃತ್ತಿಯಾಗಿ ಮಾಡುತ್ತಿದ್ದೇನೆ. ನನ್ನಲ್ಲಿಗೆ ಪೊಲೀಸ್‌ನವರು, ಕಾನ್‌ಸ್ಟೆಬಲ್‌ಗಳು, ಎಲ್ಲಾ ದೊಡ್ಡ-ದೊಡ್ಡವರೇ ಬರುತ್ತಾರೆ.

ಈ ಸಮಾಜದಲ್ಲಿ ಯಾರಾದರೂ ಬೆಂಬಲ ಇದ್ದರೆ ಒಳ್ಳೆಯ ಭವಿಷ್ಯ ಸಿಗುತ್ತದೆ. ನನ್ನಂತ ದಿಕ್ಕಿಲ್ಲದ ಹೆಣ್ಣು ಮಕ್ಕಳಿಗೆ ಈ ಕೆಲಸ ಬಿಟ್ಟು ಬೇರೆ ಕೆಲಸ ಈ ಸಮಾಜದಲ್ಲಿ ಸಿಗುವುದಿಲ್ಲ ಹೀಗೆ ನಾನು ವೃತ್ತಿಗೆ ಇಳಿಯಬೇಕಾಯಿತು. ಇದು ನನ್ನ ಜೀವನದ ಕಥೆ.

ಹೆಸರು - ರಾಣಿ

ವಯಸ್ಸು- ೨೫

ತಂದೆ ಹೆಸರು ಸಿದ್ಧಲಿಂಗಪ್ಪ. ತಾಯಿ ರುದ್ರಮ್ಮ. ನನಗೆ ೩ ಜನ ಅಣ್ಣಂದಿರು,ಒಬ್ಬ ಅಕ್ಕ. ನಾನು ಐದನೆಯವಳು. ನಮ್ಮ ತಂದೆ ವ್ಯವಸಾಯ ಮಾಡುತ್ತಿದ್ದರು. ಪ್ರೀತಿಯಿಂದ, ಯಾವ ನೋವು ಇಲ್ಲದಂತೆ ಬೆಳೆದೆ.

ಹೀಗಿರುವಾಗ ದೊಡ್ಡ ಅಣ್ಣನಿಗೆ ಮದುವೆಯಾಯಿತು. ಸ್ವಲ್ಪ ದಿನಗಳ ಮಟ್ಟಿಗ ಎಲ್ಲಾರು ಚೆನ್ನಾಗಿದ್ದೆವು. ಮುಂದೆ ಉಂಟಾಯಿತು ಹೆಚ್ಚುಕಡಿಮೆಯ ಮನೋಭಾವ. ಹೀಗೆ ದಿನದಿಂದ ದಿನಕ್ಕೆ ಉರಿಯುತ್ತಿರುವ ಬೆಂಕಿಗೆ ತುಪ್ಪ ಸುರಿದಂತೆ ಮನಸ್ತಾಪಗಳು ಶುರುವಾದವು. ಅತ್ತಿಗೆಯ ಮಾತಿಗೆ ಸಿಟ್ಟಾಗಿ ನಾನು ಬೈಯುತ್ತಿದ್ದ ಬೈದ ಮಾತುಗಳನ್ನು ಅತ್ತಿಗೆ ಅಣ್ಣನಿಗೆ ಹೇಳುವಳೆಂಬ ಭಯದಿಂದ ಮನೆ ಬಿಟ್ಟು ನನ್ನ ಹತ್ತಿರವಿದ್ದ 9 ರೂ.ಗಳಲ್ಲಿ ಬೆಂಗಳೂರು ತಲುಪಿದೆ. ಬೆಂಗಳೂರಿನ ಬಸ್‌ಸ್ಟಾಂಡಿನಲ್ಲಿ ನಿಂತು ದಿಕ್ಕಾಪಾಲಾಗಿ ಅಲ್ಲಿ-ಇಲ್ಲಿ ನೋಡುತ್ತಿರುವಾಗ ಅಣ್ಣಮ್ಮ ಎಂಬುವಳು ನನ್ನ ಬಳಿಗೆ ಬಂದು ಏಕಮ್ಮ ಇಲ್ಲಿ ನಿಂತಿರುವೆ ಎಂದು ಕೇಳಿದಳು. ನಾನು ಇಲ್ಲಿಗೆ ಬಂದ ಕಾರಣವನ್ನು ತಿಳಿಸಿದೆ. ಆಕೆ ಅವಳ ಮನೆಗೆ ಕರೆದುಕೊಂಡು ಹೋಗಿ ನಿನಗೆ ಊಟ-ಬಟ್ಟೆ ಎಲ್ಲಾ ಕೊಡುತ್ತೇನೆ ನನ್ನ ಮಗುವನ್ನು ನೋಡಿಕೊಂಡು, ಮನೆ ಕೆಲಸ ಮಾಡಿಕೊಂಡು ಇರು ಎಂದಳು. ಆಕೆಯ ಆ ಮಾತಿಗೆ ಆಕಾಶವೇ ಕೈಗೆಟಕುವಷ್ಟು ಸಂತೋಷವಾಯಿತು. ೨ ದಿನಗಳ ನಂತರ ನಿನ್ನ ವಯಸೆಷ್ಟು ನೀನು ದೊಡ್ಡವಳಾಗಿದ್ದಿಯಾ ಅಂತ ಎಲ್ಲಾ ಕೇಳಿದಳು. ಆ ಮೇಲೆ ನನಗೆ ಒಳ್ಳೆಯ ಬಟ್ಟೆಗಳನ್ನು ತಂದು ಕೊಟ್ಟಳು. ನನಗೆ ತುಂಬಾ ಸಂತೋಷವಾಯಿತು. ೬ ದಿನಗಳ ನಂತರ ಅವಳು ಯಾರು ಅಂತ ತಿಳಿಯಿತು. ನನಗೆ ಈ ಲೈಂಗಿಕ ವೃತ್ತಿಯ ಬಗ್ಗೆ ಏನು ತಿಳಿದಿರಲಿಲ್ಲ.

ಒಂದು ದಿನ ಒಬ್ಬನನ್ನು ನನ್ನ ಬಳಿಗೆ ಕರೆದುಕೊಂಡು ಬಂದು ನೀನು ಅವನು ಹೇಳಿದ ಹಾಗೆ ಕೇಳಬೇಕು ಎಂದಳು. ಅವಳು ಮನೆಯ ಚಿಲಕ ಹಾಕಿ ಹೊರಗೆ ಕುಳಿತುಕೊಂಡಳು. ಅವನನ್ನು ನಾನ ರೀತಿಯಾಗಿ ಬೇಡಿಕೊಳ್ಳುತ್ತಿದೆ. ಆದರೆ ಅವನು ಕನಿಕರ ತೋರಿಸಲಿಲ್ಲ. ಅವನು ಹೋದ ಮೇಲೆ ನನ್ನ ನೋವನ್ನು ನಾನು ಅವಳಲ್ಲಿ ಹೇಳಿಕೊಂಡೆ ಆದರೆ ಅವಳು ಇದು ನೀನು ಚೆನ್ನಾಗಿ ಬದುಕಲಿಕ್ಕೆ ದಾರಿ, ಹೊಸದರಲ್ಲಿ ಎಲ್ಲವು ಕಷ್ಟ, ಆಮೇಲೆ ಸರಿಹೋಗುತ್ತದೆ ಎಂದು ಹೇಳಿ. ಇನ್ನೊಬ್ಬನನ್ನು ಬಿಟ್ಟು ಹೊರಟು ಹೋದಳು. ನಾನು ಇದನ್ನು ನಿರಾಕರಿಸಿದಾಗ ಬ್ಲೇಡಿನಿಂದ ಕುಯ್ಯುವುದು, ಸಿಗರೇಟಿನಿಂದ ಸುಡುತ್ತಿದ್ದರು. ಹೀಗೆ ನಾನು ತಿಂಗಳ ಕಾಲ ದೈಹಿಕವಾಗಿ ಮಾನಸಿಕ ನೋವನ್ನು ಅನುಭವಿಸಿದೆ ಅಲ್ಲಿ ಇದ್ದ ಅಣ್ಣಮ್ಮನ ಅಕ್ಕ ಸಜಿಯ ಎಂಬುವರು ಪ್ರತಿ ದಿನದ ನನ್ನ ಹಿಂಸೆಯನ್ನು ನೋಡಲಾಗದೆ ನನ್ನನ್ನು ರಾತ್ರೋ-ರಾತ್ರಿ ಆ ಮನೆಯಿಂದ ಹೊರಗೆ ಕಳಿಸಿದರು. ಮತ್ತೆ ಅದೇ ಜಾಗಕ್ಕೆ ಬಂದು ನನ್ನ ಹಿಂದಿನ ಘಟನೆಯನ್ನು ನೆನೆದು ಅಳುತ್ತಿದ್ದೆ. ನಾನು ಬದುಕ ಬಾರದು. ಸಾಯಬೇಕು ಎಂಬ ನಿರ್ಧಾರ ಮಾಡಿ ಬಿಕ್ಕಿ-ಬಿಕ್ಕಿ ಅಳುತ್ತಿದ್ದೆ. ನನ್ನ ಈ ಅಳುವನ್ನು ಕಂಡು ಜಹಿದಾ ಎಂಬ ಹುಡುಗಿಯು

ಪರಿಚಯ ಮಾಡಿಕೊಂಡಳು. ಅವಳು ಇದೆ ವೃತ್ತಿಯನ್ನು ಮಾಡುತ್ತಿದ್ದಳು. ಆದರೆ ಅವಳ ಚರಿತ್ರೆಯನ್ನು ನನಗೆ ಹೇಳಿದಳು. ನಾನು ಇದೆ ವೃತ್ತಿಯಲ್ಲಿ ಮುಂದುವರಿಯೋಣ ನಮಗೆ ಹೇಳುವರು ಕೇಳುವವರು ಯಾರು ಇಲ್ಲ, ಮನೆ ಮಾಡೋಣವೆಂದರೆ ಹಣವಿಲ್ಲ, ಅದಕ್ಕೆ ಇದೆ ವೃತ್ತಿಯನ್ನು ಸ್ವ ಇಚ್ಛೆಯಿಂದ ಮಾಡಿದೆ.

ಹೀಗಿರುವಾಗ ಗಂಗಾಧರನೆಂಬುವನು ಪರಿಚಯವಾದ, ಪರಿಚಯ ಪ್ರೀತಿಯಾಯಿತು. ಪ್ರೀತಿ ಮದುವೆಗೆ ತಿರುಗಿತು. ಮದುವೆಯಾದ ಮೇಲೆ ನಾನು ಈ ವೃತ್ತಿಯನ್ನು ಬಿಟ್ಟೆ. ೩ ಮಕ್ಕಳಾದವು. ಒಂದು ಮಗು ಸತ್ತು ಹೋಯಿತು. ಈಗ ೨ ಮಕ್ಕಳಿವೆ. ಹೆಸರು ದಿವ್ಯಾ ಮತ್ತು ಭವ್ಯ.

ನಂತರ ಅವನು ನನಗೆ ಮನೋ ಹಿಂಸೆ ಮಾಡಲಾರಂಭಿಸಿದ. ನನ್ನನ್ನು ಬಿಟ್ಟು ಊರಿಗೆ ಹೋದ. ಅಲ್ಲಿ ಅವರ ತಂದೆ-ತಾಯಿ ಇನ್ನೊಬ್ಬಳನ್ನು ಅವನಿಗೆ ಕೊಟ್ಟು ಮದುವೆ ಮಾಡಿದರು.ಆ ಮೇಲೆ ನಾನು ಗಂಡನನ್ನು ಹುಡುಕಿಕೊಂಡು ಹೋದೆ. ಅಲ್ಲಿ ಎಲ್ಲರು ಸೇರಿ ಹಿಂಸೆ ಕೊಡಲಿಕ್ಕೆ ಆರಂಭಿಸಿದರು. ಅಲ್ಲಿಂದ ಮತ್ತೆ ಮಕ್ಕಳನ್ನು ಕರೆದುಕೊಂಡು ಬಂದೆ ಮಕ್ಕಳನ್ನು ಸಾಕುವ ಸಲುವಾಗಿ ಈ ವೃತ್ತಿಯನ್ನು ಆರಂಭಿಸಿದೆ.

ಪೊಲೀಸ್‌ನವರು ನಾನು ಈ ವೃತ್ತಿ ಬಿಟ್ಟಾಗಲು ೨-೩ ಬಾರಿ ಎಳೆದುಕೊಂಡು ಹೋಗಿದ್ದರು. ಇದು ನನ್ನ ಗಂಡ ನನ್ನನ್ನು ಬಿಡಲು ಕಾರಣವಾಯಿತು. ಹೀಗೆ ನಮ್ಮಂತಹವರು ಹೀಗೆ ಬದುಕಲೂ ಕೂಡ ಈ ಸಮಾಜ ಬಿಡುವುದಿಲ್ಲ.

ಗಂಡ ಬಿಟ್ಟು ಹೋದ ಮೇಲೆ ನನಗೆ ನನ್ನ ಮಕ್ಕಳಿಗೆ ಊಟ ಬಟ್ಟೆ ಇಲ್ಲ. ಅದಕ್ಕೆ ನಾನು ಮತ್ತೆ ಈ ವೃತ್ತಿಗೆ ಇಳಿದೆ. ಮತ್ತೆ ರವಿ ಎನ್ನುವನು ಮದುವೆಯಾದ ಕೆಲ ಸಮಯ ಸ್ವಯಂ ಸೇವಾ ಸಂಸ್ಥೆಯಲ್ಲಿ ಏಡ್ಸ್ ಲೈಂಗಿಕ ವೃತ್ತಿ ಮಹಿಳೆಯರ ಸಂಘಟನೆಗಾಗಿ ದುಡಿದೆ. ಅದನ್ನೂ ಬಿಟ್ಟೆ. ಈಗ ಮತ್ತೆ ಹಳೇ ವೃತ್ತಿಯಲ್ಲೆ ಇರುವೆ''

ಹೆಸರು - ರೇಷ್ಮ

ವಯಸ್ಸು- ೨೧

ವಿದ್ಯಾಭ್ಯಾಸ - ೭ ನೇ ತರಗತಿ

ತಂದೆ ಭಾಷ, ತಾಯಿ ಉನ್ನಿಸಾ. ನಾವು ೩ ಜನ ಮಕ್ಕಳು ನಾನೇ ಮೊದಲನೆಯವಳು. ನಮ್ಮ ತಂದೆ ಮೂಲತಃ ಲಾರಿ ಡ್ರೈವರ್, ನನ್ನ ತಂದೆಗೆ ಇಬ್ಬರು ಹೆಂಡತಿಯರು. ನನ್ನ ತಂದೆ ತುಂಬ ಕುಡುಕ. ಹೀಗಿರುವಾಗ ನಮ್ಮ ತಂದೆಯಿಂದ ತುಂಬ ನಮಗೆಲ್ಲಾ ಹಿಂಸೆಯಾಗುತ್ತಿತ್ತು. ಸರಿಯಾಗಿ ಊಟ ತಂದು ಹಾಕುತ್ತಿರಲಿಲ್ಲ. ಕುಡಿದು ಬಂದು ನಮ್ಮನ್ನು ನನ್ನ ತಾಯಿಯನ್ನು ತುಂಬ ಹೊಡೆಯುತ್ತಿದ್ದರು. ಈ ಹಿಂಸೆಯನ್ನು ಸಹಿಸದೆ ನಾನು ಯಾರನ್ನಾದರೂ ಮದುವೆಯಾಗಿ ಹೊರಟು ಹೋಗೋಣ ಎಂದು ತೀರ್ಮಾನಿಸಿದೆ. ನಾನು ಒಬ್ಬನನ್ನು

ಪ್ರೀತಿಸಿದೆ. ಈ ವಿಷಯ ತಂದೆಗೆ ತಿಳಿದು ನನ್ನನ್ನು ಹೊಡೆದು ಮನೆಯಿಂದ ಹೊರ ಹಾಕಿದರು. ನಂತರ ನಾನು ಪ್ರೀತಿಸಿದ ಹುಡುಗನ ಮನೆಗೆ ಹೋದೆ. ಅವರು ನನ್ನನ್ನು ಸೇರಿಸಲಿಲ್ಲ. ತಂದೆಯ ಮನೆಯೂ ಇಲ್ಲ, ಈ ಕಡೆ ಗಂಡನ ಮನೆಯೂ ಇಲ್ಲ. ಆಗ ನನ್ನನ್ನು ಯಾರು ಸೇರಿಸಲಿಲ್ಲ. ಆಗ ನಾನು ಶಿವಾಜಿನಗರ ಬಸ್ ಸ್ಟ್ಯಾಂಡಿನಲ್ಲಿ ೬ ತಿಂಗಳ ಕಾಲ ಕಳೆದೆ. ನನ್ನ ಸ್ನೇಹಿತೆಯೊಬ್ಬಳು ನನ್ನನ್ನು ಕೆಲಸಕ್ಕೆ ಸೇರಿಸುತ್ತೇನೆ ಎಂದು ಬಾಂಬೆಗೆ ಮಾರಿ ಬಿಟ್ಟಳು.

ನನಗೆ ದಿಕ್ಕೆ ತೋಚದಂತಾಯಿತು. ಅಲ್ಲಿ ನಾನು ೮-೧೦ ಜನಕ್ಕೆ ಒಂದು ದಿನಕ್ಕೆ ಸುಖ ಕೊಡಬೇಕಿತ್ತು. ಅದನ್ನು ಒಪ್ಪದಿದ್ದರೆ, ನನಗೆ ಕಾಲುಕಟ್ಟಿ ಹೊಡೆಯುತ್ತಿದ್ದರು. ಈ ಹಿಂಸೆಯನ್ನು ಸಹಿಸದೆ ಅಲ್ಲಿಂದ ರಾತ್ರೋ-ರಾತ್ರಿ ತಪ್ಪಿಸಿಕೊಂಡು ಬಂದೆ. ಇಲ್ಲಿಗೆ ಬಂದು ಒಳ್ಳೆಯ ಜೀವನ ಮಾಡೋಣ ಅಂತ ಕೆಲಸಕ್ಕೆ ಹೋದೆ. ಮೊದಲಿಗೆ ಮನೆ ಕೆಲಸಕ್ಕೆ ಹೋದೆ,ಅಲ್ಲಿ ಆ ಮನೆಯ ಮಾಲಿಕ ನನ್ನನ್ನು ಹಿಡಿದುಕೊಳ್ಳಲು ಬಂದ. ಆ ಕೆಲಸ ಬಿಟ್ಟು ಗಾರೆ ಕೆಲಸಕ್ಕೆ ಹೋದೆ, ಅಲ್ಲಿಯೂ ನನ್ನನ್ನು ಇದೆ ದೃಷ್ಟಿಯಿಂದ ನೋಡಿದರು.

ಎಲ್ಲಿಯೂ ನಮಗೆ ಒಳ್ಳೆಯ ಜೀವನ ಮಾಡಲು ಅವಕಾಶ ಕೊಡಲಿಲ್ಲ. ಈ ಸಮಾಜದಲ್ಲಿ ನನ್ನಂತಹ ಬಡ ಹೆಣ್ಣಿಗೆ ಎಲ್ಲಿದೆ ಕಾಲ. ನಾನು ಪ್ರೀತಿಸಿದವನು ನಾನು ಮದುವೆಯಾಗುತ್ತೇನೆ ಎಂದು ಬಂದು ನಂಬಿಸಿ ನನಗೆ ೨ ಮಕ್ಕಳು ಕೊಟ್ಟು ನನ್ನನ್ನು ಅವನೇ ಈ ವೃತ್ತಿಗೆ ಇಳಿಸಿದ. ನಾನು ಈ ವೃತ್ತಿಯಲ್ಲಿ ಸಂಪಾದಿಸಿದ್ದನ್ನೆಲ್ಲ ಅವನಿಗೆ ಕೊಡಬೇಕು.

ನನಗಾಗಿ ನನ್ನ ಮಕ್ಕಳಿಗಾಗಿ ಅವನು ಏನು ಮಾಡಲಿಲ್ಲ. ನನಗೆ ಈ ಜೀವನವೇ ಬೇಡ ಅನ್ನಿಸಿದೆ. ಆದರೆ ನನ್ನ ಮಕ್ಕಳಿಗಾದರೂ ಒಳ್ಳೆಯ ಜೀವನ ಕೊಡಬೇಕು ಎಂಬ ಆಸೆ ತುಂಬ ಇದೆ. ಅದಕ್ಕಾಗಿ ಈಗ ನಾನು ಈ ವೃತ್ತಿ ಮಾಡುತ್ತಿದ್ದೇನೆ.

ಹೆಸರು : ಲಲಿತಾ

ವಯಸ್ಸು: ೨೫

ವಿದ್ಯಾಭ್ಯಾಸ: ಪ್ರಥಮ ಪಿಯುಸಿ

ತಂದೆ ರಾಮಯ್ಯ, ತಾಯಿ ಮುನಿಯಮ್ಮ, ಎಂಬುವರಿಗೆ ನಾನೊಬ್ಬಳೆ ಮಗಳು. ನನ್ನ ತಂದೆ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಮನೆ ಕೆಲಸ ಮಾಡುತ್ತಿದ್ದರು. ನಾವು ತುಂಬ ಬಡವರು. ಆದರೂ ಕೂಲಿ ಮಾಡಿ ನನ್ನನ್ನು ಪ್ರಥಮ ಪಿ.ಯು.ಸಿ ಓದಿಸಿದರು.

ಪಿಯುಸಿ ಆದ ಮೇಲೆ ಮದುವೆ ಮಾಡಲು ಓದು ಬಿಡಿಸಿದರು. ಗಂಡಿನ ಕಡೆಯವರು ೨ ಲಕ್ಷ ಕೇಳಿದರು. ನಮಗೆ ಕೊಡಲಾಗಲಿಲ್ಲ. ಇದರಿಂದ ನಾನು ಹಾಸಿಗೆ ಹಿಡಿದೆ.

ನಂತರ ನನ್ನ ಸ್ನೇಹಿತೆ ಮೇರಿ ಎಂಬುವಳು ನನ್ನನ್ನು ಈ ವೃತ್ತಿಗೆ ಕರೆದುಕೊಂಡು ಬಂದು ೨ ಲಕ್ಷ ದುಡ್ಡು ಆಗುವವರೆಗೆ ಇಟ್ಟಿದ್ದಳು. ೨ ವರ್ಷ ಇದೇ ಕೆಲಸದಲ್ಲಿದ್ದು ನಾನು ೨ ಲಕ್ಷ ಹಣ ದುಡಿದೆ. ಆಗ ಅವಳೆ ಅದೇ ಹುಡುಗನಿಗೆ ೨ ಲಕ್ಷ ರೂ ಕೊಟ್ಟು ಆತನೊಂದಿಗೆ ಮದುವೆ ಮಾಡಿಸಿದಳು.

ಮದುವೆಯಾಗಿ ಒಂದು ತಿಂಗಳು ಚೆನ್ನಾಗಿದ್ದೇವು. ಆ ಮೇಲೆ ನನ್ನ ಗಂಡನೇ ಅವನ ಫ್ರೆಂಡ್ಸ್‌ನ್ನು ಕರೆದುಕೊಂಡು ಬಂದು ಆತನ ಜೊತೆ ಮಲಗಿಕೋ ಎಂದು ದಿನ ಹಿಂಸೆ ಮಾಡುತ್ತಿದ್ದನು.

ಒಂದು ದಿನ ನನ್ನ ಗಂಡ ಇಲ್ಲದಿದ್ದಾಗ ಫ್ರೆಂಡ್ ಬಂದು ನನ್ನನ್ನು ರೇಪ್ ಮಾಡಿದನು.

ನಂತರ ನನ್ನ ಗಂಡ ಬಂದನು. ನಾನು ಅವನಿಗೆ ಈ ರೀತಿಯಾಗಿದ್ದನ್ನು ಹೇಳಿದೆ ಅದಕ್ಕೆ ನನ್ನ ಗಂಡ ಆತನನ್ನು ನಾನೇ ಕಳಿಸಿದೆ ಎಂದರು. ಅದಕ್ಕೆ ಪ್ರತಿ ಉತ್ತರವಾಗಿ ನಾನು ಮೊದಲು ೧೨ ವರ್ಷದಿಂದ ಈ ಕೆಲಸ ಮಾಡಿ ನಿನಗೆ ೨ ಲಕ್ಷ ರೂ ಕಟ್ಟಿ ಮದುವೆಯಾದೆ ಎಂದು ದಬಾಯಿಸಿದೆ. ಅದಕ್ಕೆ ಅವನು ನನ್ನನ್ನು ಬಿಟ್ಟು ಹೋದನು. ಮುಂದೆ ನನಗೆ ದಾರಿಕಾಣದಾಯಿತು. ನಾನು ಮತ್ತೆ ಇದೇ ವೃತ್ತಿಗೆ ಬರಬೇಕಾಯಿತು ನಾನು ಜೀವನ ನಡೆಸಲು ಇದೇ ವೃತ್ತಿಗೆ ಬಂದೆನು.

ಇದೇ ವೃತ್ತಿ ಮಾಡುತ್ತಿದ್ದಾಗ ಒಬ್ಬ ಕಾನ್‌ಸ್ಟೆಬಲ್‌ನ ಪರಿಚಯವಾಯಿತು. ಆತ ನನ್ನನ್ನು ಇಷ್ಟಪಟ್ಟು ಮದುವೆಯಾದನು ಆತನನ್ನು ಮದುವೆಯಾಗಿ ಆತನ ಜೊತೆ ಸಂಸಾರ ಮಾಡಿಕೊಂಡು ಇದ್ದೇನೆ. ಯಾವುದೇ ರೀತಿಯ ಕೊರತೆ ಇಲ್ಲ.

ಹೆಸರು : ನಿರ್ಮಲಾ

ವಯಸ್ಸು: ೨೭

ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ.

ತಂದೆ ರಾಜು, ತಾಯಿ ಪ್ರಮೀಳ, ನನಗೆ ಇಬ್ಬರು ಅಣ್ಣಂದಿರು ಇದ್ದಾರೆ. ನಾನೇ ಕೊನೆಯವಳು ನಾವು ಅಷ್ಟೇನು ಬಡವರಲ್ಲ. ನನ್ನನ್ನು ಎಸ್.ಎಸ್.ಎಲ್.ಸಿ.ಯವರೆಗೆ ಓದಿಸಿ ನನ್ನ ತಾಯಿಯ ತಮ್ಮನಿಗೆ ಕೊಟ್ಟು ಮದುವೆ ಮಾಡಿದರು.

ಮದುವೆಯಾಗಿ ೬-೭ ತಿಂಗಳು ನಾವು ಚೆನ್ನಾಗಿದ್ದೇವು ನನ್ನ ಗಂಡ ಬಿಟ್ಟು ಹೋಗಿ ಬೇರೆಯವಳನ್ನು ಮದುವೆಯಾದ ನಾನು ಒಂದೆರಡು ತಿಂಗಳು ಬಿಟ್ಟು ಹೋಗಿ ಕೇಳಿದೆ. ಅಲ್ಲಿ ಅವರ ಮನೆಯವರಿಗೆಲ್ಲಾ ಇವಳು ಸೂಳೆ, ವೈಶ್ಯಾ ವೃತ್ತಿ ಮಾಡ್ತಾಳೆ ಎಂದು ಎಲ್ಲರಿಗೂ ತಿಳಿಸಿದ. ಆ ಊರಿನವರಿಗೆಲ್ಲಾ ಈ ತರಹ ಹೇಳಿ ಅವರೆಲ್ಲಾ ಕಲ್ಲುಗಳಿಂದ ಹೊಡೆದು. ಬಹಿಷ್ಕಾರ ಹಾಕಿ ಊರಿನಿಂದ ಓಡಿಸಿಬಿಟ್ಟರು. ಆ ಊರನ್ನು ಬಿಟ್ಟು ಬಂದು ನೀಲಸಂದ್ರಕ್ಕೆ ಬಂದು ಇದ್ದೆ. ಇಲ್ಲಿ ನಾನು ಬೇರೆಯವನ ಜೊತೆ ಇದ್ದೆ. ನೀಲಸಂದ್ರದಲ್ಲಿ ನನಗೆ ನಾಗಿ ಮತ್ತು ರಮ್ಯ ಎಂಬುವರು ಪರಿಚಯವಾಗಿ ಫ್ರೆಂಡ್ಸ್ ಆದರು. ನಾನು ಟ್ಯೂಶನ್ ಮಾಡುತ್ತಿದ್ದೆ. ರಮ್ಯಳ ಅಣ್ಣಂದಿರೂ

ದಿನಾಲು ಆಕೆ ನನ್ನ ಮನೆಗೆ ಬರುವುದನ್ನು ನೋಡಿ ಆಕೆಗೆ ಹೊಡೆಯುತ್ತಿದ್ದರು.

ಒಂದು ದಿನ ಆ ನಾಗಿ ಮತ್ತು ರಮ್ಯಳನ್ನು ನಾನು ಮದುವೆಗೆಂದು ಬಾಂಬೆಗೆ ಕರೆದುಕೊಂಡು ಹೋಗಿ 50 ಸಾವಿರಕ್ಕೆ ಮಾರಿ ಬಿಟ್ಟೆನು. ಆ ಹಣ ತೆಗೆದುಕೊಂಡು ಬಂದು ನಾನು ನನ್ನ ಜೊತೆ ಇದ್ದವನಿಗೆ ಹಣ ಕೊಟ್ಟು ಮನೆ ಮಾಡಿಕೊಂಡು ಇದ್ದೆ. ಅಲ್ಲಿಗೆ ಹೋದ ಮೇಲೆ ನನಗೆ ೨ ಮಕ್ಕಳಾದವು. ಅಲ್ಲಿ ಬಾನಸವಾಡಿಯಲ್ಲಿ ರೆಡ್ಡಿ ಮಕ್ಕಳನ್ನು ಮಾರುವಾಗ ಸಿಕ್ಕಿ ಬಿಟ್ಟೆ. ಆಗ ಊರ ಜನರೆಲ್ಲ ನನಗೆ ಹೊಡೆದು ಬಹಿಷ್ಕಾರ ಹಾಕಿ ಬ್ಲೇಡಿನಿಂದ ಮುಖವನ್ನೆಲ್ಲ ಕೊಯ್ದರು. ಗಂಡನ ಊರಿನಿಂದ ಓಡಿಸಿ ಬಿಟ್ಟರು. ನನ್ನ ಮಕ್ಕಳನ್ನು ಯಾರೂ ಹಾಸ್ಟೆಲಿಗೆ ಸೇರಿಸಿದರು. ಈಗ ನಾನು ಅಲ್ಲಿ-ಇಲ್ಲಿ ಫುಟ್‌ಬಾತ್‌ಮೇಲೆ ಭಿಕ್ಷೆ ಬೇಡಿ ಮತ್ತು ಯಾರಾದರೂ ಕರೆದರೆ ಹೋಗಿ ಬರುವ ಹಣದಿಂದ ಜೀವನ ನಡೆಸುತ್ತಿದ್ದೇನೆ.

ಮಾಧವಿ ಜೈಶ್‌ಪಾಲ್

ಮೂರ್‌ಅಮನ್ ಹುಸೇನ್ ನನ್ನ ತಂದೆ. ಫಾತಿಮಾಬೇಗಂ ನನ್ನ ತಾಯಿ ಬಾಂಗ್ಲಾದೇಶದ ಜಿಗಾರ್‌ಗಾಜಾಪುರ್ ಬಜಾರ್‌ನಲ್ಲಿನಾನು ಹುಟ್ಟಿದೆ. ತಂದೆ ತಾಯಂದಿರಿಗೆ ನಾವು ಮೂವರು ಮಕ್ಕಳು ನಮ್ಮದು ತೀರಾ ಬಡ ಕುಟುಂಬ.

ಸೋನಾಗಾಚಿಗೆ ನನ್ನನ್ನು ಮೋಸದಿಂದ ಮಾರಲಾಯಿತು. ನನ್ನನ್ನು ಮಾರಾಟ ಮಾಡಿರುವ ವಿಚಾರವೂ ನನಗೆ ತಿಳಿದಿರಲಿಲ್ಲ. ನೆರೆಕರೆಯವರನ್ನು ವಿಚಾರಿಸಿದಾಗ ಇದು ದರ್ಜಿಗಳ ಪ್ರದೇಶವೆಂದು ಹೇಳಿದರು. ನಾನು ಇಲ್ಲಿ ಟೈಲರ್ ವೃತ್ತಿ ಮಾಡಿ ಜೀವಿಸಬೇಕೆಂದೇ ಹೇಳಲಾಗಿತ್ತು. ಅಲ್ಲಿ ಸುತ್ತ ಮುತ್ತಲ್ಲಿ ವಾಸವಾಗಿದ್ದ ಹುಡುಗಿರನ್ನು ಗಮನಿಸಿದಾಗ ನಾನೂ ಟೈಲರ್ ಆಗಬಹುದೆಂದು ನಂಬಿದೆ.

ನನ್ನನ್ನು ಪ್ರತ್ಯೇಕ ಕೊಠಡಿಯೊಂದರಲ್ಲಿ ಇರಿಸಲಾಗಿತ್ತು. ಕೆಲವು ದಿನ ಹೀಗೆ ಕಳೆಯಿತು. ಒಂದು ದಿನ ಸ್ಥಳೀಯ ಹುಡುಗ- ಡ್ಯಾನ್ಸರ್ ಮುಸೂರಿ ಎಂದೇ ಆತನ ಕರೆಯುತ್ತಿದ್ದರು ಆತನೊಂದಿಗೆ ವ್ಯಕ್ತಿಯೋರ್ವ ನನ್ನ ಕೋಣೆಗೆ ಬಂದ. ದುರ್ಗಾ ಮೇಡಂ ಲೋಟ ಒಂದರಲ್ಲಿ ಮದ್ಯವನ್ನು ನನಗಾಗಿ ತಂದಳು. ಅದನ್ನು ಶರಬತ್ ಎಂದೇ ಆಕೆ ನಂಬಿಸುತ್ತಿದ್ದಳು. ಅದನ್ನು ಕುಡಿದೊಡನೆ ನಾನು ಅರೆಪ್ರಜ್ಞಾವಸ್ಥೆಗೆ ತೆರಳಿದೆ. ಆದರೆ ಪುರುಷ ನೋರ್ವ ನನ್ನ ದೇಹದ ಮೇಲೆ ಉರುಳುತ್ತಿರುವುದು ನನಗೆ ಅರಿವಾಗುತ್ತಿತ್ತು. ತೀವ್ರ ರಕ್ತಸ್ರಾವವಾಗಿ ನಾನು ಗಟ್ಟಿಯಾಗಿ ಕೂಗಾಡಿದೆ. ನನ್ನ ಮೇಲೆ ಬಾಸುಂಡೆಗಳು ಬಿದ್ದವು. ಎರಡನೇ ಬಾರಿಯೂ ಆ ವ್ಯಕ್ತಿ ನನ್ನ ದೇಹದ ಮೇಲೆ ಹರಿದಾಡಿದ್ದೂ ಅರಿವಿಗೆ ಬಂತು ಮೂರನೇ ಬಾರಿಗೆ ನಾನು ಪ್ರಜ್ಞೆಕಳೆದುಕೊಂಡೆ.

ಪ್ರಜ್ಞೆ ಮರಳಿ ಬಂದಾಗ ನಾನು ವೈದ್ಯರ ಕ್ಲಿನಿಕ್‌ನಲ್ಲಿ ಇದ್ದೆ. ದುರ್ಗಾ ಮೇಡಂ ನನ್ನ ಹಾಸಿಗೆ ಸಮೀಪದಲ್ಲೇ ನಿಂತಿದ್ದಳು. ನನ್ನ ಕೈಗಳನ್ನು ಕಟ್ಟಿ ಹಾಕಲಾಗಿತ್ತು. ಬಿಡಿಸಲೆಂದು ಮನವಿ ಮಾಡಿದೆ. ನನಗೆ ಐದು ಹೋಳಿಗೆ

ಹಾಕಲಾಗಿತ್ತು. ಎಂದ ಮೇಡಂ ನನ್ನ ಕೈ ಬಿಡಸಲಿಲ್ಲ. ಹೊಲಿಗೆಗೆ ಕಾರಣ ತಿಳಿಯಬೇಕೆಂದು ಬಯಸಿದ್ದೆ. ಕೇಳಿದೆ ನಿನ್ನನ್ನು ನನಗೆ ಮಾರಿದ್ದಾರೆ. ನಾನು ಖರ್ಚು ಮಾಡಿದ ಹಣ ಬರಬೇಕು ಎಂದು ಮೇಡಂ ಗಟ್ಟಿಯಾಗಿ ಒದರಿದಳು. ಆಗಲೇ ತಿಳಿದದ್ದು ನಾನು ಯಾವ ಜಾಲಕ್ಕೆ ಬಿದ್ದಿರುವೆ ಎಂದು.

ಕ್ಲೀನಿಕ್‌ನಿಂದಾ ವಾಪಾಸ್ಸಾದ ಬಳಿಕ ಮೇಡಂ ನನ್ನ ಹೆಸರು ಕೇಳಿದರು. ನೂರ್ ಜಹಾನ್ ಎಂದೆ ನಾನು. ಆದರೆ ಆಕೆ ಹೇಳಿದಳು ಇಂದಿನಿಂದ ನಿನ್ನ ಹೆಸರು ಮಾಧವಿ. ನನ್ನ ಹೆಸರು ಬದಲಿಸಲು ಸಾಧ್ಯವೇ ಇಲ್ಲವೆಂದು ದೊಡ್ಡ ಜಗಳವನ್ನೇ ಮಾಡಿದೆ. ನೀನಿಗ ವೇಶ್ಯೆ-ನಿನ್ನ ಹಳೆ ಹೆಸರು ಇಲ್ಲಿ ಕೂಡದು ಎಂದು ದುರ್ಗಾ ಆದೇಶವಂತೆ ಹೇಳಿ ವಾದಕ್ಕೆ ತೆರೆ ಎಳೆದಳು. ವೇಶ್ಯೆ ಪದ ಕೇಳಿದವಳೇ ಗಳಗಳನೇ ಅತ್ತೆ. ಏನು ಮಾಡುವುದೆಂದು ತಿಳಿಯಲಿಲ್ಲ. ಬರಿ ಅಳು. ಮೂರು ತಿಂಗಳು ಕಳೆದ ಬಳಿಕ ದುರ್ಗಾ ನನ್ನನ್ನು ಅಶೋಕ್ ಹೊಟೇಲ್‌ನಿಂದ ಹೊರ ಕಳಿಸಲಾರಂಭಿಸಿದಳು. ನಾನು ಗಿರಾಕಿಗಳನ್ನು ಸೆಳೆಯುತಿಲ್ಲ ಎಂದು ಕೋಪದಿಂದ ದುರ್ಗಾಳ ಬಾಬು ನನ್ನನ್ನು ಹೊಡೆಯುತ್ತಿದ್ದ ಆತ ಸದಾ ನನಗೆ ಹೇಳುತ್ತಿದ್ದ "ನಿನ್ನನ್ನು ನಾವು ೭೦೦೦ ರೂಪಾಯಿಗೆ ಖರೀದಿಸಿದ್ದೇವೆ. ಇದನ್ನು ನೀನು ಹೇಗೆ ವಾಪಸು ಕೊಡುತ್ತಿಯಾ? ನಿನ್ನ ದೇಹ ಮಾರುವುದೊಂದೇ ನಿನಗೆ ಇರುವ ದಾರಿ."

ಇದೇ ಜೀವನ ಹಲವು ವರ್ಷ ಸಾಗಿತು. ನನ್ನ ಬದುಕಿನಲ್ಲಿ ಹಲವು ಬಾಬುಗಳು ಬಂದುಹೋದರು. ಎಲ್ಲರೂ ನನ್ನನ್ನು ತಿಂದರು. ನನಗೇನು ಕೊಡಲಿಲ್ಲ. ಇದರ ನಡುವೆ ಅಶೋಕ ನನ್ನ ಬದುಕು ಪ್ರವೇಶಿಸಿದ ಆತನೇ ನನ್ನ ಸರ್ವಸ್ವ. ಆತ ನನಗಾಗಿ ಎಲ್ಲವನ್ನು ನೀಡಿದ.

ಈಗ ನಾನು ಯೋಜನೆಗಾಗಿ ಕೆಲಸ ಮಾಡುತ್ತಿರುವೆ. ಇದರ ಮೂಲಕ ನಾನು ಹಲವು ಒಳ್ಳೆ ಸ್ಥಳಗಳಿಗೆ ತೆರಳಿದೆ. ನಾನಾ ತೆರನಾದ ಜನರೊಂದಿಗೆ ಬೆರೆತೆ ಹಲವು ವಿಚಾರ ತಿಳಿದೆ. ಕರಾಳ ಕತ್ತಲೆಯಿಂದ ಬೆಳಕಿಗೆ ಬರಬಹುದೆಂದು ನಾನು ಕನಸು ಮನಸಿನಲ್ಲೂ ಊಹಿಸಲಿಲ್ಲ. ಇನ್ನಷ್ಟು ಸುಧಾರಿಸಬೇಕೆಂದು ನನ್ನ ಆಸೆ ಸಾಧ್ಯವಾಗುವುದೋ ಗೊತ್ತಿಲ್ಲ.

ಸರಸ್ವತಿ ಸರ್ಕಾರ್

ನಾನು ಸರಸ್ವತಿ ಸರ್ಕಾರ್. ನನಗೆ ಈಗ48 ವರ್ಷ ಆಫ್‌ಗಾನ್‌ನಲ್ಲಿ ನನ್ನ ತಂದೆ ವ್ಯಾಪಾರಿಯಾಗಿದ್ದರು. ನಾನು ಸಣ್ಣದಿರಿರುವಾಗಲೇ ತಂದೆ ನಮ್ಮನ್ನೆಲ್ಲಾ ಕಲ್ಕತ್ತಾಕ್ಕೆ ಕರೆತಂದರು. ಸಿಂದರ ಮನೆಯಲ್ಲಿ ಉಳಿದುಕೊಂಡಿದ್ದೆ. ನಾನು ಅಲ್ಲೆ ಶಾಲೆಗೆ ಸೇರಿದೆ ಇದೇ ಶಾಲೆಯಲ್ಲಿ ಯುವಕನೋರ್ವನೊಂದಿಗೆ ಆತ್ಮೀಯಳಾದೆ. ಸ್ವಲ್ಪ ವರ್ಷದ ಒಲಿದ ಆತನನ್ನೇ ಮದುವೆಯಾದೆ. ಮೊದಲ ಗಂಡನಿಂದ ನನಗೆ ಮೂರು ಮಕ್ಕಳು. ಇದರಲ್ಲಿ ಒಬ್ಬ ಮಗ ಬದುಕಿ ಉಳಿಯಲಿಲ್ಲ. ಮಗನಿಗೆ ಒಂದುವರೆ ವರ್ಷ, ಮಗಳಿಗೆ ೬ ತಿಂಗಳು ಆಗಿದ್ದಾಗ, ನನನ ಗಂಡ ಮನೆಯಿಂದ ಹೊರದಬ್ಬಿದ. ನಾನು ನಿಷ್ಠುರವಾಗಿ ಆತನೊಂದಿಗೆ

ಮಾತನಾಡುತ್ತಿದ್ದುದ್ದೇ ಆತನಿಗೆ ಕೋಪ ನಾನು ಮಾಡಿದ ಪರಿ ಪರಿ ಮನವಿಯನ್ನು ಆತ ಕೇಳಲಿಲ್ಲ. ಕರಾಳ ರಾತ್ರಿಲ್ಲೇ ನೇರವಾಗಿ ಈ ಪ್ರದೇಶಕ್ಕೆ ಬಂದೆ. ತಂದೆ-ತಾಯಿ ಬಳಿ ಹೋಗಲು ಧೈರ್ಯವಾಗಲಿಲ್ಲ. ಶಾಲಾ ದಿನಗಳಲ್ಲಿ ಓಡಾಡುತ್ತಿದ್ದ ಈ ಪ್ರದೇಶ ಪರಿಚಿತವೇ ಆಗಿತ್ತು. ರೂ. ೫೦ ಬಾಡಿಗೆಗೆ ರೂಂವೊದನ್ನು ಪಡೆದೆ.

ಒಂದು ವರ್ಷಗಳು ಲೈಂಗಿಕ ವೃತ್ತಿಬಳಿಕ ತಂದೆ ತಾಯಂದಿರನ್ನು ಕರೆತಂದು ನನ್ನ ಜೊತೆ ಇರಿಸಿಕೊಂಡೆ ಹೀಗೆ ನನ್ನ ಬದುಕಿನ ಹೋರಾಟ ಆರಂಭವಾಯಿತು.

ಮತ್ತೊಂದು ವರ್ಷ ಉರುಳಿತು. ಈ ಅವಧಿಯಲ್ಲಿ ವ್ಯಕ್ತಿಯೋರ್ವ ನನ್ನ ಬದುಕು ಪ್ರವೇಶಿಸಿದ ಬಳಿಕ ನಾನು ಲೈಂಗಿಕ ವೃತ್ತಿಗೆ ವಿದಾಯ ಹೇಳಿ ೧೫ ವರ್ಷಗಳಿಂದ ಆ ವ್ಯಕ್ತಿಯೊಂದಿಗೆ ಬದುಕು ಸಾಗಿಸುತ್ತಿರುವೆ. ಮೊದಲು ಅವರು ಬೀಡಿ ಕಟ್ಟುತ್ತಿದ್ದರು. ಈಗ ಅವರದೇ ಆದ ಬೀಡಿ ಅಂಗಡಿ ಹೊಂದಿದ್ದಾರೆ. ನನ್ನ ಮಕ್ಕಳು ಎಳೆಯವರಿದ್ದಾಗ ನಾನು ತುಂಬಾ ಕಷ್ಟಪಟ್ಟೆ. ಮಾರುಕಟ್ಟೆಯಿಂದ ಹಣ್ಣು ತರಕಾರಿ ತಂದು ಮನೆ ಎದುರು ಇರಿಸಿ ಮಾರುತ್ತಿದ್ದೆ ಮನೆ ಸಮೀಪ ಥಿಯೇಟರ್‌ನಲ್ಲಿ ಹೊಸ ಸಿನಿಮಾ ಬಿಡುಗಡೆಯಾದರೆ ಅದರ ಟಿಕೇಟ್ ಖರೀದಿಸಿ ಹೆಚ್ಚಿನ ದರಕ್ಕೆ ಪ್ರದೇಶದ ಹುಡುಗಿಯರಿಗೆ ಮಾರುತ್ತಿದ್ದೆ. ಹರಿ ಬಾಬುವಿನ ಶೂ ಅಂಗಡಿಯಲ್ಲಿ ಕೆಲಸ ಮಾಡಿದ್ದೆ. ಆರು ತಿಂಗಳು ಬರಂಗಾರ್‌ನ ಕ್ಯಾಲೆಂಡರ್ ಕಂಪೆನಿಯಲ್ಲೂ ಕೆಲಸ ಮಾಡಿದ್ದೆ.

ಆರೋಗ್ಯ ಮತ್ತು ನೈರ್ಮಲ್ಯದ ಅಖಿಲಭಾರತ ಸಂಸ್ಥೆ ಆಶ್ರಯದಲ್ಲಿ ಫ್ರೆಂಡ್ಸ್ ಸಂಸ್ಥೆ ಕ್ಲೀನಿಕ್ ಒಂದನ್ನು ಆರಂಭ ಮಾಡಿತು. ನನ್ನ ಸಾಮರ್ಥ್ಯದ ಬಗ್ಗೆ ಭೀತಿ ಇದ್ದರೂ ನಾನು ಅಲ್ಲಿ ಕೆಲಸಕ್ಕೆ ಸೇರಿದೆ ಈಗ ಅದನ್ನು ಬಿಟ್ಟು ನನ್ನ ಬದುಕು ಕಲ್ಪಿಸಲೂ ಸಾಧ್ಯವಿಲ್ಲ ಎಂಬಂತಾಗಿದೆ. ಮಹಿಳಾ ಸಮನ್ವಯ ಸಮಿತಿ ನನ್ನ ಜೀವನದ ಭಾಗಿಯಾಗಿದೆ. ಎರಡರಲ್ಲೂ ನಾನು ತೊಡಗಿಸಿಕೊಂಡಿರುವೆ. ಇದರ ಮೂಲಕ ನಾನು ಹಲವು ಉತ್ತಮ ಸ್ಥಳಗಳಿಗೆ ಭೇಟಿ ನೀಡಿದೆ. ಖ್ಯಾತನಾಮದ ಹಲವರೊಂದಿಗೆ ಧೈರ್ಯದೊಂದಿಗೆ ಪ್ರಯತ್ನಿಸು ಬೆರೆತೆ, ಮಾತನಾಡಿದೆ ಇವೆಲ್ಲ ಕನನಿಸಿಲ್ಲೂ ನೆನಪಿನಲ್ಲಿ ನನಗೆ ಮೊದಲು ಸಾಧ್ಯವಿರಲಿಲ್ಲ. ಕಾನೂನಿನ ಮಾನ್ಯತೆಗಾಗಿ ಹೋರಾಡುತ್ತಿರುವೆವು. ಅದು ಸಿಗುವ ಭರವಸೆ ಕೂಡ ಇದೆ.

ನನಗೆ ನಾಲ್ಕು. ಮಕ್ಕಳಿವೆ. ಬೇಸರದ ವಿಚಾರವೆಂದರೆ ನಾನು ಸರಿ ಶಿಕ್ಷಿತಳಾದರೂ ಈ ನಾಲ್ಕು ಮಕ್ಕಳಿಗೆ ವಿದ್ಯಾಭ್ಯಾಸ ನೀಡಲು ಸಾಧ್ಯವಾಗಲಿಲ್ಲ. ನಾಲ್ಕು ಜನ ಸಣ್ಣ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು.ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆ ಮಾಡಿರುವೆ ನನ್ನ ದೊಡ್ಡ ಮಗನೂ ಮದುವೆಯಾಗಿದ್ದಾನೆ. ಅವನು ಪ್ರತ್ಯೇಕವಾಗಿ ಮನೆ ಮಾಡಿಕೊಂಡಿದ್ದಾನೆ. ಆಗಾಗೆ ಬಂದು ನನ್ನ ಯೋಗಕ್ಷೇಮ ನೋಡಿಕೊಂಡು ಹೋಗುತ್ತಾನೆ.

ನನ್ನ ಪ್ರದೇಶದಲ್ಲಿ ವಾಸವಾಗಿರುವ ಜೋಷಾ ಎಂಬ ಹೆಸರಿನ ಹುಡುಗಿ ನಮ್ಮ ಕುಟುಂಬಕ್ಕೆ ಪ್ರೀತಿ ಪಾತ್ರಳು. ಆಕೆಗೆ ತಂದೆ ತಾಯಿ ಇದ್ದರೂ ಆ ಬಾಲಕಿ ನಮ್ಮ ಮನೆಯಲ್ಲೇ ಇರುತ್ತಾಳೆ. ಆಕೆಯ ಶಿಕ್ಷಣ, ಬಟ್ಟೆಗೆ ಖರ್ಚನ್ನು

ನಾವೇ ನೋಡಿಕೊಳ್ಳುತ್ತಿದ್ದೇವೆ. ಅಪರೂಪಕ್ಕೆ ಆಕೆ ತನ್ನ ಮನೆಗೆ ಹೋಗುತ್ತಾಳೆ. ನನ್ನ ಮಕ್ಕಳಿಗೆ ಕೊಡಲಾಗದು ವಿದ್ಯಾಭ್ಯಾಸವನ್ನು ಚೂಪಳಿಗೆ ಕೊಡಬೇಕು, ಕೆಂಪುದ್ವೀಪದ ಜನರಿಗೂ ಕನಸುಗಳಿವೆ ಎಂದು ಸಮಾಜಕ್ಕೆ ತಿಳಿಸಬೇಕೆನ್ನುವುದೇ ನನ್ನ ಆಸೆ.

ಗೀತಾ ಡೇ

ನಾನು ಗೀತಾ ಡೇ 24 ಪರಗಣಾ ಜಿಲ್ಲೆ ನನ್ನ ಹುಟ್ಟು ಪ್ರದೇಶ. ೧೨ ವರ್ಷದವಳಿದ್ದಾಗಲೇ ನನ್ನ ಪಾಲಕರು ನನಗೆ ಮದುವೆ ಮಾಡಿಬಿಟ್ಟರು. ಕೂಡಲೇ ಒಬ್ಬ ಮಗಳ ತಾಯಿಯೂ ಆದೆ. ಮಗಳಿಗೆ ೨ ವರ್ಷವಾದಾಗ ನಾನು ಗಂಡನಿಂದ ಪ್ರತ್ಯೇಕಳಾದೆ. ಆ ಬಳಿಕ ನಾನು ನನ್ನ ತಂದೆ ಮನೆಯಲ್ಲಿ ಸಹೋದರ ಮತ್ತು ಮಗಳೊಂದಿಗೆ ವಾಸವಾಗಿದ್ದೆ.

ಒಬ್ಬ ಹುಡುಗಿ ಆಗಾಗ್ಗೆ ನಮ್ಮ ಮನೆಗೆ ಭೇಟಿ ನೀಡುತ್ತಿದ್ದಳು. ಆಕೆಯ ಕೆಲಸವೇನೆಂದು ಗೊತ್ತಿರಲಿಲ್ಲ. ಕೇಳಿದರೆ ನಾನು ನರ್ಸಿಂಗ್ ಹೋಂನಲ್ಲಿ ಕೆಲಸದಲ್ಲಿದ್ದೇನೆ ಎನ್ನುತ್ತಿದ್ದಳು ಆದರೆ ಅವಳು ಇಲ್ಲಿನ ಕೆಂಪುದ್ವೀಪದ ಪ್ರದೇಶದಲ್ಲಿ ವಾಸವಾಗಿದ್ದಳು.

ಮೊದಲಿಗೆ ನನಗೆ ಅದು ಗೊತ್ತಿರಲಿಲ್ಲ. ೧೯೯೨ರ ಜುಲೈ ತಿಂಗಳಲ್ಲಿ ಕೆಲಸಕೊಡಿಸುತ್ತೇನೆಂದು ಆಕೆ ನನ್ನು ಇಲ್ಲಿಗೆ ಕರೆತಂದಳು. ಆಕೆ ನನ್ನನ್ನು ಮೇಡಂ ಒಬ್ಬಳಿಗೆ ರೂ ೮೦೦ಕ್ಕೆ ಮಾರಿಬಿಟ್ಟಳು. ವೇಶ್ಯಾವಾಟಿಕೆ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ನಾನು ಅಳುತ್ತಲೇ ಇರುತ್ತಿದೆ. ಒಂದು ದಿನ ಮೇಡಂ ಕೇಳಿದಳು ೬ ನಿನ್ನ ಹೆಸರೇನು? ಮನೆಲ್ಲಿ ಯಾರಾರಿದ್ದಾರೆ? ನಿನ್ನ ಮನೆ ಎಲ್ಲಿ? ಎಲ್ಲವನ್ನು ಸತ್ಯವಾಗಿ ಆಕೆಗೆ ಹೇಳಿಬಿಟ್ಟೆ ಈಗಾಗಲೇ ನೀನು ಇಲ್ಲಿಗೆ ಬಂದಿರುವೆ. ಜೊತೆಗೆ ಮಗಳನ್ನು ಸಾಕಬೇಕು. ನಿನ್ನನ್ನು ನಾನು ಖರೀದಿಸಿದ್ದೇನೆ ಇಲ್ಲಿಂದ ನೀನು ಎಲ್ಲಿಗೂ ತೆರಳುವಂತಿಲ್ಲ. ಎಂದು ಮೇಡಂ ಆರ್ಡರ್ ಮಾಡಿದರು. ವೇಶ್ಯಾವಾಟಿಕೆ ಹಣ ವ್ಯವಹಾರದ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ಮೇಡಂ ಕೊಡುವುದನಷ್ಟೇ ಪಡೆದುಕೊಳ್ಳುತ್ತಿದೆ. ಪ್ರಶ್ನಿಸಿದರೂ ನಿನಗೆ ಕೊಡಬೇಕಾಗಿರುವುದನ್ನು ಕೊಟ್ಟಿರುವೆ ಎಂದು ಬಾಯಿ ಮುಚ್ಚಿಸುತ್ತಿದ್ದಳು. ಬಿಂದು ಎಂಬ ಹುಡುಗಿ ಹಣದ ವ್ಯವಹಾರದ ಪಾಠ ಕಲಿಸಿಕೊಟ್ಟಳು ಆ ಬಳಿಕ ನನಗೆ ತ್ರಾಸವಾಗಲಿಲ್ಲ.

ವ್ಯಕ್ತಿಯೋರ್ವ ನನ್ನ ಗಿರಾಕಿಯಾಗಿ ಆಗಾಗ್ಗೆ ನನ್ನ ಬಳಿ ಬರುತ್ತಿದ್ದ ನನ್ನನ್ನು ಪ್ರೀತಿಸುತ್ತಿರುವುದಾಗಿಯೂ ಮದುವೆಯಾಗುವುದಾಗಿಯೂ ಒಮ್ಮೆ ಆತ ಹೇಳಿದ. ನನ್ನ ಮಗಳದೂ ಸೇರಿದಂತೆ ನನ್ನ ಎಲ್ಲಾ ಖರ್ಚುಗಳಿಗೂ ಹಣ ಕೊಡುವುದಾಗಿ ಆತ ಭರವಸೆ ನೀಡಿದ. ಸಣ್ಣ ಸಾಮಾಜಿಕ ಜೀವನ ಹಾಗೂ ಗೌರವದ ಜೀವನ ಆಸೆಯಿಂದ ಆತನ ಬೇಡಿಕೆಗೆ ಒಪ್ಪಿದೆ. ಬಳಿಕ ನಮ್ಮಿಬ್ಬರ ಮದುವೆಯಾಯಿತು. ಕೆಲವು ತಿಂಗಳ ಬಳಿಕ ಆತನ ತಾಯಿ ಮತ್ತು ಸೋದರಬಂಧು ನಮ್ಮ ಬಳಿ ಇದ್ದ ವಸ್ತುಗಳನ್ನೆಲ್ಲಾ ಕೊಂಡೊಯ್ದರು. ಮತ್ತೆ ನಾನು ಜೀವಿಗೆ

ಬಿದ್ದೆ. ಹಳೇ ವೃತ್ತಿಗೆ ಇಳಿದೆ. ಕೆಲವರು ಇರುತ್ತಾರೆ. ಅವರಿಗೆ ಇತರರು ಚೆನ್ನಾಗಿ ಬದಕುವುದು ಬೇಕಾಗುವುದಿಲ್ಲ. ಉತ್ತಮರಂತೆ ನಾಟಕವಾಡಿ ಹುಡುಗಿಯರಿಗೆ ಮೋಸ ಮಾಡುತ್ತಾರೆ.

ಈ ಪ್ರದೇಶಕ್ಕೆ ಬಂದಾಗನಿಂದಲೂ ದೀದಿ ಕಾರ್ಯಕ್ರಮ ನಡೆಯುತ್ತಿರುವುದನ್ನು ಗಮನಿಸಿದ್ದೆ ಆದರೆ ಆ ಕಾರ್ಯಕರ್ತರೊಂದಿಗೆ ಮಾತನಾಡಲು ಅವಕಾಶ ದೊರೆತಿರಲಿಲ್ಲ. ಒಮ್ಮೆ, ಕಾರ್ಯಕರ್ತರೊಬ್ಬರು ಕಾರ್ಯಕ್ರಮದ ಬಗ್ಗೆ ವಿವರಿಸಿದರು. ನಿಮಗೆ ಕಾರ್ಯ ಕ್ಷೇತ್ರಕ್ಕೆ ಜನ ಬೇಕಾಗಿದ್ದರೆ ತಿಳಿಸಿ. ನಾನು ಸ್ವಲ್ಪ ವಿದ್ಯಾಭ್ಯಾಸವನ್ನು ಮಾಡಿರುವ ಎಂದು ನನ್ನ ಆಸೆಯನ್ನು ಹೊರಗೆಡವಿದೆ. ಕಾರ್ಯಕ್ರಮದ ಬಗ್ಗೆ ಆಸಕ್ತಿ ಬೆಳೆಸುತ್ತಾ ಸಾಗಿದೆ. ಕೆಲವು ತಿಂಗಳ ಬಳಿಕ ಇನ್ನಷ್ಟು ದೀದಿ ಮಂದಿರು ಬಂದು ನನ್ನನ್ನು ಭೇಟಿಯಾದರು. ಅವರು ನನ್ನನ್ನು ಕ್ಲೀನಿಕ್‌ಗೆ ಕರೆದೊಯ್ದರು ಭಾಸ್ಕರ್‌ರವರನ್ನು ಪರಿಚಯಿಸಿದರು. ಅವರು ಕೇಳಿದರು. ನಮ್ಮಲ್ಲಿ ಸಂಬಳ ಕಡಿಮೆ. ಕೆಲಸ ಮಾಡಲು ಸಾಧ್ಯವೇ? ನನಗೆ ಹೆಚ್ಚು ಹಣದ ಅಗತ್ಯವಿಲ್ಲ. ಒಳ್ಳೆ ಕೆಲಸ ಮಾಡಬೇಕೆನ್ನುವುದೇ ನನ್ನ ಆಸೆ ಎಂದು ನಾನು ಉತ್ತರಿಸಿದೆ. ಅಲ್ಲಿ ಜಾನ್ ಕೂಡ ಇದೇ ಪ್ರಶ್ನೆ ಕೇಳಿದರು. ಅವರಿಗೂ ನನ್ನದು ಅದೇ ಯೋಜನೆ ಕೆಲಸಕ್ಕೆ ಸೇರಿದೆ.

ಕೆಲಸಕ್ಕೆ ಸೇರಿದ ಬಳಿಕ ನನ್ನ ಈ ಮೊದಲಿನ ಬದುಕಿನ ಕತ್ತಲಿನ ಬಗ್ಗೆ ಅರಿವಾಯಿತು. ಯೋಜನೆ ನನಗೆ ಹೊಸ ಬದುಕು ನೀಡಿತು. ಕತ್ತಲಕೋಣೆಯಿಂದ ಬೆಳಕಿನ ಜಗತತಿಗೆ ಬಂದೆ. ಈ ಮಾದರಿ ಹೊಸ ಬದುಕು ಸಾಗಿಸ ಬಹುದು ಹೊರ ಜಗತ್ತಿನ ಜನರೊಂದಿಗೆ ಬೆರೆಯ ಬಹುದೆಂದು ಕನಸಲ್ಲೂ ಊಹಿರಿರಲಿಲ್ಲ. ಎಲ್ಲವೂ ಈ ಜಾನ್‌ರವರಿಂದ ಸಾಧ್ಯವಾಯಿತು. ಅವರು ನಮಗೆ ದೇವರು ಇದ್ದಂತೆ ನನ್ನ ತಂದೆ ತಾಯಿಯವರ ಸಮಾನ ಸ್ಥಾನ ಅವರಿಗೆ ನಾನು ಕೊಟ್ಟಿರುವೆ ತಂದೆ ತಾಯಿ ಹುಟ್ಟಿಸಿದ್ದರೆ. ಡಾ. ಜಾನ್ ನನ್ನ ನೋಂದ ಬದುಕಿನಲ್ಲಿ ಹೊಸ ಬೆಳಕು ತಂದರು. ನಾನೀಗ ಒಳ್ಳೆ ಜಾಗದಲ್ಲಿ ತಂದೆ-ತಾಯಿಯರೊಂದಿಗೆ ಇದ್ದು ಮಗಳಿಗೆ ಒಳ್ಳೆ ಬದುಕು ಕೊಡಲು ಸಾಧ್ಯವಾಗಿದೆ. ಒಳ್ಳೆ ಶಾಲೆಯಲ್ಲಿ ಮಗಳು ಓದುತ್ತಿದ್ದಾಳೆ.

ನಾನು ಕಾರ್ಯವೆಸಗುತ್ತಿರುವ ಯೋಜನೆ ಬಗ್ಗೆ ಹಲವು ಕನಸು ನನಗಿದೆ. ಆರಂಭದಲ್ಲಿ ಸಣ್ಣ ರೀತಿ ಇದ್ದೆ ಯೋಜನೆ ಈಗಬೆಳೆಯುತ್ತಿದೆ. ಇನ್ನಷ್ಟು ವಿಶಾಲವಾಗಬಹುದೆಂದು ಭರವಸೆ ಇದೆ. ಈಗ 65 ಯುವತಿಯರು ಯೋಜನೆಗೆ ಕೆಲಸ ಮಾಡುತ್ತಿದ್ದು ಇನ್ನಷ್ಟು ಜನ ಸೇರುವುದು ನಮ್ಮ ಕಛೇರಿ ದೊಡ್ಡ ಸ್ಥಳ ಬೇಕಾಗಿದೆ. ಈಗ ಇರುವ ಕ್ಲೀನಿಕ್‌ನಲ್ಲಿ ಗಾಯಗೊಂಡವರನ್ನು ನೋಡಿಕೊಳ್ಳಲು ಜಾಗದ ಕೊರತೆ ಇದೆ. ಯೋಜನೆ ವಿಸ್ತಾರಗೊಳ್ಳುವ ಭರವಸೆ ಇದೆ.

ಸಮೀಕ್ಷೆ ವರದಿ

(ಪೋಲೀಸ್ ದೌರ್ಜನ್ಯದ ನಾನಾ ರೂಪ)

ಬೆಂಗಳೂರು ನಗರದಲ್ಲಿ ಲೈಂಗಿಕವೃತ್ತಿ ಮಹಿಳೆಯರ ಮೇಲೆ ದೌರ್ಜನ್ಯ ನಿರಂತರ. ಅದರಲ್ಲೂ ಪೋಲೀಸರಿಂದ ನಿತ್ಯವೂ ನಾನಾ ಸ್ವರೂಪದ ಶೋಷಣೆ ನಡೆದೇ ಇದೆ. ಈ ಕುರಿತು ಬೆಂಗಳೂರಿನ ನೂರು ಲೈಂಗಿಕ ವೃತ್ತಿ ಮಹಿಳೆಯರನ್ನು **'ನೆಲೆ'** ಸ್ವಯಂ ಸೇವಾ ಸಂಸ್ಥೆ ಸಂದರ್ಶಿಸಿದಾಗ ಸ್ಫೋಟಗೊಂಡ ಅನಿಸಿಕೆ ಮನ ಮಿಡಿಯುವಂತದ್ದು. ಅವುಗಳ ಸಂಕ್ಷಿಪ್ತ ಸಂಗ್ರಹರೂಪ ಈ ಕೆಳಗಿನಂತಿದೆ.

೧. ಒಟ್ಟು ಸಂದರ್ಶಿಸಿದ ಮಹಿಳೆಯರು	೧೦೦
೨. ಆಯ್ದ ಮಹಿಳೆಯರ ವಯೋಮಾನ	
ಅ. ೧೮ ರಿಂದ ೨೦	೦೪
ಆ. ೨೦ ರಿಂದ ೨೫	೩೧
ಇ. ೨೫ ರಿಂದ ೩೦	೩೦
ಈ. ೩೫ ರಿಂದ ೪೦	೨೬
೩. ಪೋಲಿಸ್ ದೌರ್ಜನ್ಯಕ್ಕೆ ಒಳಪಟ್ಟ ಮಹಿಳೆಯರು	೧೦೦
೪. ದೌರ್ಜನ್ಯದ ಮಾದರಿ	
ಅ. ಪೋಲೀಸರಿಂದ ಹೊಡೆತ ತಿಂದವರು	೧೦೦
ಆ. ಗುಪ್ತಾಂಗಕ್ಕೆ, ಕಣ್ಣಿಗೆ ಮೆಣಸಿನ ಪುಡಿ ಹಾಕಲ್ಪಟ್ಟವರು	೧೪
ಇ. ಬೂಟಿನ ಏಟು ತಿಂದವರು	೬೪
ಈ. ಲಾಠಿ ಏಟು ತಿಂದವರು	೭೦
ಉ. ಲಾಳಕಟ್ಟಲ್ಪಟ್ಟವರು	೬೭
ಊ. ಕಂಬಕ್ಕೆ ಕಟ್ಟಿ ಹೊಡೆತ ತಿಂದವರು	೭೫
ಎ. ಕೂದಲು ಎಳೆಸಿಕೊಂಡವರು	೮೯
ಎ. ತಲೆ ಬೋಳಿಸಿಕೊಂಡ ಮಹಿಳೆಯರು	೦೪
ಐ. ಬಟ್ಟೆ ಕಳಚಿ ಹಿಂಸಿಸಲ್ಪಟ್ಟವರು	೪೪
ಒ. ಸಾರ್ವಜನಿಕವಾಗಿ ಹೊಡೆತ ತಿಂದವರು	೮೭
ಒ. ಸೂಳೆ ಎಂದು ಕರೆಸಿಕೊಂಡು ಪೋಲಿಸರಿಂದ ಫೋಟೋ ತೆಗೆಸಿಕೊಂಡವರು	೩.೫

೫. ಪೋಲಿಸರಿಗೆ ಮಾಮೂಲಿ ನೀಡುವವರು

ದಿನಕ್ಕೆ ೧೦೦ ರಿಂದ ೨೦೦ ರೂ. ಪಾವತಿಸುವವರು	**೧೦೦**
೬. ಮಾಮೂಲಿ ವಸೂಲಿಗೆ ದಿನಂಪ್ರತಿ ಬರುವ ಕಾನ್‌ಸ್ಟೇಬಲ್‌ಗಳು.	**02**
ವಸೂಲಿಯೊಂದಿಗೆ ಪಾನ್‌ಪರಾಗ್, ಗುಟ್ಕಾ ಪಡೆಯುವ ಕಾನ್‌ಸ್ಟೇಬಲ್‌ಗಳು	೫೬
ವಸೂಲಿಯೊಂದಿಗೆ ಕಾಂಡೋಮ್ ಪಡೆಯುವವರು	೨೬
ಪುರುಷ ವೇದೆಯಿಂದ ಕಿರುಕುಳ ಅನುಭವಿಸಿದವರು	೧೦೦
ಮಹಿಳಾ ಪೇದೆಯಿಂದ ಕಿರುಕುಳ ಅನುಭವಿಸಿದವರು	೧೦೦
ಉಚಿತ ಲೈಂಗಿಕ ತೃಪ್ತಿ ಪಡೆವ ಕಾನ್‌ಸ್ಟೇಬಲ್‌ಗಳು	೫೪
ಮಹಿಳಾ ಕಾನ್‌ಸ್ಟೇಬಲ್‌ಗಳಿಗೆ ಮಾಮೂಲಿ ಕೊಡುವವರು	೧೦೦
೭. ಎರಡನೇ ಗಂಡನನ್ನು ಹೊಂದಿರುವವರು	**೮೫**
೮. ಮನೆ ಬಾಡಿಗೆ ಪಡೆಯಲು ಹಾಗು ಸಾಮಾಜಿಕ	
ಗೌರವಕ್ಕಾಗಿ ಎರಡನೇ ಗಂಡನನ್ನು ಹೊಂದಿದವರು	**೮೫**
೯. ಕೇಸುಗಳನ್ನು ಹಾಕಿಸಿಕೊಂಡವರು	
ಅ. ಗಾಂಜ ಕೇಸ್	೧೧
ಆ. ಪಿಟಿ ಕೇಸ್	೨೮
ಇ. ಲಾಡ್ಜ್ ಕೇಸ್	೨೮
ಈ. ಎಸ್.ಐ.ಟಿ.ಕೇಸ್	೩೩
೧೦. ತಿಂಗಳಲ್ಲಿ ಬಂಧನಕ್ಕೆ ಒಳಪಟ್ಟವರು	
ಅ. ೧ ರಿಂದ ೨ ಬಾರಿ	೨೦
ಆ. ೨ ರಿಂದ ೩ ಬಾರಿ	೩೩
ಇ. ೩ ರಿಂದ ೪ ಬಾರಿ	೨೮
ಈ. ೪ ಕ್ಕಿಂತ ಹೆಚ್ಚು ಬಾರಿ	೧೯
೧೧. ಎಲ್ಲೆಲ್ಲಿ ಎಷ್ಟು ಮಹಿಳೆಯರು ದೌರ್ಜನ್ಯ ಒಳಗಾಗುತ್ತಾರೆ.	
ಅ. ಬಸ್ ನಿಲ್ದಾಣ	೩೦
ಆ. ಸಾರ್ವಜನಿಕ ಸ್ಥಳ	೯೮
ಇ. ಲಾಡ್ಜ್‌ಗಳಲ್ಲಿ	೮೯
ಈ. ಎಸ್.ಐ.ಟಿ.ಕೇಸ್	೩೩

೧೨. ರೌಡಿಗಳಿಗೆ ಮಾಮೂಲಿ ಕೊಡುವವರು ೮೪

ಬ್ರೋಕರ್‌ಗಳಿಗೆ ಮಾಮೂಲಿ ಕೊಡುವವರು ೧೬

೧೩. ದೈಹಿಕ ಅನಾರೋಗ್ಯ ತೊಂದರೆಗಳು:

ಅ. ತಲೆನೋವು

ಆ. ಬಿಳಿ ಸೆರಗು

ಇ. ಹೊಟ್ಟೆನೋವು

ಈ. ಅತಿ ರಕ್ತಸ್ರಾವ

ಉ. ಕ್ರಮಬದಲಾದ ರುತು

ಊ. ಮೈಕೈ ನೋವು

ಎ. ಇತರೆ.

ಪೊಲೀಸ್ ದೌರ್ಜನ್ಯದ ಕೆಲವು ಮಾದರಿಗಳು



ಪೊಲೀಸ್ ಹೊಡೆತದಿಂದ ವಿಕಾರಗೊಂಡ ಕೈ

ಪೊಲೀಸ್ ದೌರ್ಜನ್ಯಕ್ಕೆ ಸಾಕ್ಷಿ





ದೌರ್ಜನ್ಯದ ಹಲವು ಮುಖಗಳು







ಮಾನವಹಕ್ಕುಗಳಿಗಾಗಿ ಗಣ್ಯರ ಬೆಂಬಲ, ಪ್ರೋತ್ಸಾಹ

ಸಮಾವೇಶದಲ್ಲಿ ಪಾಲ್ಗೊಂಡ ಸಚಿವೆ ಶ್ರೀಮತಿ ರಾಣಿ ಸತೀಶ, ಪೊಲೀಸ್ ಅಧಿಕಾರಿ ಕೆ.ವಿ.ಆರ್.ಟಾಗೂರ್, ಮಹಿಳಾ ಆಯೋಗದ ಅಧ್ಯಕ್ಷೆ ಫಿಲೋಮಿನಾ ಪೆರಿಸ್, ಪ್ರೊ. ಸಿ.ಜಿ.ಕೆ.,



ಸಮಾವೇಶಕ್ಕೆ ಆಗಮಿಸಿದ ಖ್ಯಾತ ನಟಿ ಜಯಂತಿ




ಸಮಾವೇಶದಲ್ಲಿ ವಿಷಯ ಮಂಡಿಸಿದ ಪ್ರಬಂಧಗಾರ್ತಿ ಲೀಲಾ ಸಂಪಿಗೆ



ಮಹಿಳಾ ನಿಗಮದ ಅಧ್ಯಕ್ಷೆ ಶ್ರೀ ಮತಿ ಕಮಲಮ್ಮ

ಲೈಂಗಿಕ ವೃತ್ತಿ ಮಹಿಳೆಯರ ಮಾನವಹಕ್ಕಿನ ಪ್ರತಿಪಾದನೆ



ನಿವೃತ್ತ ನ್ಯಾಯಮೂರ್ತಿ ಡಾ. ವಿ.ಎಸ್.ಮಳೀಮಠ ಸಮಾವೇಶದಲ್ಲಿ ಮಾತನಾಡಿದಾಗ...




ಸಾಹಿತಿ ಸಾ.ಶಿ.ಮರುಳಯ್ಯ ಬೆಂಬಲ



ಮಾಲೂರು ಶ್ರೀ ರಾಮಕೃಷ್ಣ ಆಶ್ರಮದ ಶ್ರೀಕಂಠಾನಂದ ಸ್ವಾಮೀಜಿ



ಖ್ಯಾತ ವೈದ್ಯ ಡಾ. ಕೆ.ಸತೀಶ್



ಲೈಂಗಿಕ ವೃತ್ತಿ ಮಹಿಳೆಯರ ಸಮಸ್ಯೆ ಕುರಿತು ಮಾಧ್ಯಮಗಳೊಂದಿಗೆ — ನಡೆದ ಸಂವಾದ ಸಂದರ್ಭ

ಬೆಂಗಳೂರು ಪತ್ರಕರ್ತರು ಸಂವಾದದಲ್ಲಿ



ಪೊಲೀಸ್ ದೌರ್ಜನ್ಯ ಕುರಿತು
ಸ್ಟಾರ್ ಟೀವಿ ಸಂದರ್ಶನ



ಪೊಲೀಸ್ ದೌರ್ಜನ್ಯ
ಖಂಡಿಸಿ ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ
ಪತ್ರಿಕಾಗೋಷ್ಠಿ



ಅನುಪಮ ಪತ್ರಿಕೆಯ ಸಂಪಾದಕ
ಮಂಡಳಿಯೊಂದಿಗೆ ಸಂಶೋಧಕಿ ಲೀಲಾ
ಸಂಪಿಗೆ



ಸಂಘಟಿತರಾದವರ


ಚರ್ಚೆ,

ವಿಮರ್ಶೆ









ಪೊಲೀಸರೊಂದಿಗೆ
ಸಂವಾದ



ಬದುಕಿನ
ಸಂಕೀರ್ಣತೆಯ
ಬಂಧಿಯಾಗಿ



ಸಂಘದ ಬಲ
ತಂದ
ಧೈರ್ಯ



ಪ್ರವಾಸದ

ಹರ್ಷದ

ಸಂದರ್ಭ





ವಿಮರ್ಶೆಯ

ನಡುವೆ ನೃತ್ಯ,

ಉಲ್ಲಾಸ





ಪುನರ್ವಸತಿಗೊಂಡ ಚಿಣ್ಣರು ನಕ್ಕು ನಲಿದಾಗ







ಉದಯವಾಣಿ
ಶುಕ್ರವಾರ 8 ನವೆಂಬರ್ 2002 5

ವೇಶ್ಯಾವಾಟಿಕೆಗೆ ಸರ್ಕಾರದ ಪ್ರೋತ್ಸಾಹ ಇಲ್ಲ: ರಾಣಿ ಸತೀಶ್

ಬೆಂಗಳೂರು, ನ. 7 [illegible] ... ಹೇಳಿದ್ದಾರೆ.

ನಗರದ ... 'ಲೈಂಗಿಕ ವೃತ್ತಿ ಮತ್ತು ಮಾನವ ಹಕ್ಕುಗಳು' ... [illegible]

ವೇಶ್ಯಾವಾಟಿಕೆ ... [illegible] ... 'ವೇಶ್ಯೆ' ಎಂದು ... [illegible]

ವೇಶ್ಯಾವಾಟಿಕೆ ... [illegible] ... ಅಭಿಪ್ರಾಯ ... [illegible]



ನಿನ್ನೆ ನಗರದ ಬೆಂಗಳೂರಿನಲ್ಲಿ ಗುರುವಾರ ಆಯೋಜಿಸಿದ್ದ 'ಲೈಂಗಿಕ ವೃತ್ತಿ ಮತ್ತು ಮಾನವ ಹಕ್ಕುಗಳು' ಕುರಿತ ಸಮಾವೇಶವನ್ನು ... ಉದ್ಘಾಟಿಸಿದರು. ಚಿತ್ರನಟಿ ಜಯಂತಿ, ಮಹಿಳಾ ಆಯೋಗದ ಅಧ್ಯಕ್ಷೆ ಫಿಲೋಮಿನ ಪೆರಿಸ್, ... ಕೆ.ವಿ.ಆರ್.ಠ್ಯಾಗೋರ್, ನೀಲಾ ಸಂಸ್ಥೆಯ ... ಉಪಸ್ಥಿತರಿದ್ದರು.

... ಆದರೆ ಇಂತಹ ಕಾರಣ ... ಪ್ರೋತ್ಸಾಹ ... ವೃತ್ತಿ ಇದಲ್ಲ. ... ಬದುಕಿನಿಂದ ಮಾತ್ರವೇ ಭಾರತೀಯ ಸಮಾಜದಲ್ಲಿ ಮಹಿಳೆ ಗೌರವದಿಂದ ಬಾಳಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ವೇಶ್ಯಾವೃತ್ತಿಯಲ್ಲಿ ತೊಡಗಿರುವ ಮಹಿಳೆಯರಿಗೆ ಉತ್ತೇಜನ ನೀಡುವುದು ಸಾಧ್ಯವಿಲ್ಲವಾದರೂ, ಅವರ ಬದುಕಿಗೆ ... ಸರ್ಕಾರದ ... ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರೊಂದಿಗೆ ಮಾತನಾಡಿ, ... ಯೋಜನೆಗಳ ಮೂಲಕ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಮಹಿಳೆಯರ ಬದುಕಿಗೆ ವ್ಯವಸ್ಥೆ ಕಲ್ಪಿಸಲು ಪ್ರಯತ್ನಿಸುವುದಾಗಿ ಅವರು ಈ ಸಂದರ್ಭದಲ್ಲಿ ಭರವಸೆ ನೀಡಿದರು.

ವೈಯಕ್ತಿಕ ... ಮಕ್ಕಳನ್ನು ದಾರಿ ತಪ್ಪಿಸುವ ಮತ್ತು ಮಹಿಳೆಯರನ್ನು ಬಲವಂತವಾಗಿ ವೇಶ್ಯಾವಾಟಿಕೆಗೆ ಪ್ರಚೋದಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಚಿತ್ರನಟಿ ಜಯಂತಿ ಮಾತನಾಡಿ, ಮಹಿಳೆಗೆ ರಕ್ಷಣೆ ಅಗತ್ಯ. ರಕ್ಷಣೆಯಿಲ್ಲದ ಮಹಿಳೆ ಅನಿವಾರ್ಯವಾಗಿ ದಾರಿ ತಪ್ಪಿ ವೇಶ್ಯಾವೃತ್ತಿಗೆ ತಳ್ಳಲ್ಪಡುತ್ತಾಳೆ. ... ರಕ್ಷಣೆಗಾಗಿ ಕಾನೂನು ವ್ಯವಸ್ಥೆ ಆಗಬೇಕು. ಜೊತೆಗೆ ವೇಶ್ಯೆಯರ ಮಕ್ಕಳ ಭವಿಷ್ಯ ರೂಪಿಸುವ ಹೊಣೆಯನ್ನು ಸರ್ಕಾರ ವಹಿಸಿಕೊಳ್ಳಬೇಕು ಎಂದರು.

ಒತ್ತಾಯ: ವೇಶ್ಯಾವೃತ್ತಿಯನ್ನು ಕಾನೂನುಬದ್ಧಗೊಳಿಸಿ, ವೇಶ್ಯೆಯರಿಗೆ ಸೂಕ್ತ ಕಾನೂನಿನ ರಕ್ಷಣೆ ಒದಗಿಸುವಂತೆ ರಂಗ ನಿರ್ದೇಶಕ ಸಿ.ಜಿ.ಕೃಷ್ಣಸ್ವಾಮಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಫಿಲೋಮಿನ ಪೆರಿಸ್, ... ಒತ್ತಾಯಿಸಿದರು.

ದೇಶದಲ್ಲಿ 10 ಲಕ್ಷಕ್ಕೂ ಹೆಚ್ಚು ಮಹಿಳೆಯರು ವೇಶ್ಯಾ ವೃತ್ತಿಯಲ್ಲಿ ತೊಡಗಿದ್ದು, ಈ ವೃತ್ತಿ ಅವ್ಯಾಹತ ... ಸಂಗತಿ ಎಂದು ಫಿಲೋಮಿನ ಪೆರಿಸ್ ... ಈ ವೃತ್ತಿಯನ್ನು ... ಕಾನೂನು ಬದ್ಧಗೊಳಿಸುವುದರಿಂದ ವೇಶ್ಯೆಯರ ಆರೋಗ್ಯ ಮತ್ತು ಆರ್ಥಿಕ ಸುಧಾರಣೆ ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಲೈಂಗಿಕ ವೃತ್ತಿಯನ್ನು ಕಾನೂನು ಬದ್ಧಗೊಳಿಸಿ, ಈ ವೃತ್ತಿಯನ್ನು ಮುಂದುವರಿಸಲು ವೇಶ್ಯೆಯರಿಗೆ ಸೂಕ್ತ ರಕ್ಷಣೆ ಒದಗಿಸುವ ಕುರಿತು ಚಿಂತಿಸುವ ಅಗತ್ಯವಿದೆ ಎಂದು ಖ್ಯಾತ ರಂಗನಿರ್ದೇಶಕ ಸಿ.ಜಿ. ಕೃಷ್ಣಸ್ವಾಮಿ ಹೇಳಿದರು. ಕೇಂದ್ರ ... ಕೆ.ವಿ.ಆರ್.ಠ್ಯಾಗೋರ್, ವಿಧಾನ ಪರಿಷತ್ ಸದಸ್ಯ ಪ್ರಫುಲ್ಲ ಮಧುಕರ್, ನೆಲೆ ಸಂಸ್ಥೆಯ ನೀಲಾ ... ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

Sex work and Human rights
State level Convention
7-11-2002. Bangalore

ವಿಜಯ ಕರ್ನಾಟಕ ಬುಧವಾರ 3 ಏಪ್ರಿಲ್ 2002

ಕಿರುಕುಳ: ಪೊಲೀಸರ ವಿರುದ್ಧ ಕ್ರಮ

ಬೆಂಗಳೂರು, ಏ.2- ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ವೇಶ್ಯೆಯರಿಗೆ ನೀಡುತ್ತಿರುವ ಕಿರುಕುಳ ತಡೆಗಟ್ಟಿ, ಸಂಬಂಧಿಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದಾಗಿ ಸರಕಾರ ವಿಧಾನಪರಿಷತ್ತಿನಲ್ಲಿ ಮಂಗಳವಾರ ಭರವಸೆ ನೀಡಿದೆ.

ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೌರ್ಜನ್ಯಕ್ಕೊಳಗಾಗಿರುವ ಒಂಬತ್ತು ಮಹಿಳೆಯರಿಗೆ ಸೂಕ್ತ ರಕ್ಷಣೆ ನೀಡಲಾಗುತ್ತದೆ ಎಂದು ಗೃಹ ಸಚಿವರ ಪರವಾಗಿ ಜಲಸಂಪನ್ಮೂಲ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಪೊಲೀಸರು ನಡೆಸಿರುವ ದೌರ್ಜನ್ಯದ ಬಗ್ಗೆ ಮಹಿಳಾ ಸದಸ್ಯರು ಸರಕಾರವನ್ನು ತರಾಟೆಗೆ ತೆಗೆದುಕೊಂಡು ತಕ್ಷಣವೇ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತಿನಲ್ಲಿಟ್ಟು ತನಿಖೆ ನಡೆಸುವಂತೆ ಒತ್ತಾಯಿಸಿದರು.

ಪ್ರಫುಲ್ಲಾ ಮಧುಕರ್ ವಿಷಯ ಪ್ರಸ್ತಾಪಿಸಿ 'ನೆಲೆ' ಸಂಘಟನೆಯ ಲೀಲಾಸಂಪಿಗೆ, ದೌರ್ಜನ್ಯಕ್ಕೊಳಗಾದ ಮಹಿಳೆಯರ ಪರವಾಗಿ ಧ್ವನಿಯೆತ್ತಿ ಹೋರಾಡುತ್ತಿದ್ದಾರೆ. ಠಾಣೆಯ ಘಟನೆಯನ್ನು ಪೊಲೀಸ್ ಕಮಿಷನರ್ ಸಾಂಗ್ಲಿಯಾನ ಗಮನಕ್ಕೆ ತಂದಿದ್ದಾರೆ. ಪೊಲೀಸರ ಕ್ರಮವನ್ನು ಸಮರ್ಥಿಸಿ ಕೊಂಡಿರುವ ಕಮಿಷನರ್ ಯಾವುದೇ ಕ್ರಮ ತೆಗೆದುಕೊಳ್ಳದಿರುವುದು ದುರದೃಷ್ಟಕರ ಎಂದರು.

ಅನಿವಾರ್ಯವಾಗಿ ವೇಶ್ಯೆಯರಾಗಿರುವ ಈ ಮಹಿಳೆಯರ ಪಟ್ಟಿ ತಯಾರಿಸಿರುವ ಪೊಲೀಸರು ಅವರ ದುಡಿಮೆಯ ಹಣವನ್ನು ಕಿತ್ತುಕೊಳ್ಳುತ್ತಿದ್ದಾರೆ. ಇಷ್ಟಕ್ಕೆ ಸುಮ್ಮನಾಗದೆ ಆಗಾಗ್ಗೆ ಠಾಣೆಗೆ ಕರೆದೊಯ್ದು ಮಾನಸಿಕವಾಗಿ ಮತ್ತು ದೈಹಿಕವಾಗಿ ಚಿತ್ರ ಹಿಂಸೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಒತ್ತಾಯ: ಪಿಎಸ್ಐ ನಂಜುಂಡೇಗೌಡ ಇತ್ತೀಚೆಗೆ ಕೆಲ ಮಹಿಳೆಯರನ್ನು ಠಾಣೆಗೆ ಕರೆದೊಯ್ದು ದೈಹಿಕವಾಗಿ ನೀಡಿರುವ ಚಿತ್ರಹಿಂಸೆಯಿಂದ ಅವರು ಸಾಕಷ್ಟು ನೊಂದಿದ್ದಾರೆ. ತಕ್ಷಣ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ತನಿಖೆ ನಡೆಸಿ ಎಂದು ಪ್ರಫುಲ್ಲಾ ಮಧುಕರ್ ಒತ್ತಾಯಿಸಿದರು.

ವಿಮಲಾಗೌಡ ಮತ್ತು ಜಲಜಾನಾಯಕ್ ಮಾತನಾಡಿ ಈ ಮಹಿಳೆಯರಿಗೆ ಸರಕಾರ ಸೂಕ್ತ ಉದ್ಯೋಗ ದೊರಕಿಸಿಕೊಡಬೇಕು. ಇಲ್ಲವೇ ಮಹಾರಾಷ್ಟ್ರದಲ್ಲಿಯಂತೆ ರಾಜ್ಯದಲ್ಲೂ ವೇಶ್ಯಾವೃತ್ತಿಗೆ ಅನುಮತಿಯನ್ನಾದರೂ ನೀಡಬೇಕು. ಅದನ್ನು ಬಿಟ್ಟು ಅಮಾಯಕ ಮಹಿಳೆಯರ ಮೇಲೆ ಈ ರೀತಿಯ ದೌರ್ಜನ್ಯ ನಡೆಸುತ್ತಿರುವುದು ಯಾವ ನ್ಯಾಯ? ಎಂದು ಪ್ರಶ್ನಿಸಿದರು.

ಗೃಹಸಚಿವರ ಗೈರು ಹಾಜರಿಯಲ್ಲಿ ಸಭಾನಾಯಕ ಎಚ್.ಕೆ. ಪಾಟೀಲ್ ಉತ್ತರಿಸಿ ಠಾಣೆಯಲ್ಲಿ ನಡೆಯುವ ದೌರ್ಜನ್ಯಕ್ಕೆ ಕಡಿವಾಣ ಹಾಕಲಾಗುವುದು. ದೌರ್ಜನ್ಯ ನಡೆಸಿದ್ದಾರೆಂದು ಹೇಳಲಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಭರವಸೆ ನೀಡಿದರು.

ಸಂಯುಕ್ತ ಕರ್ನಾಟಕ 3-4-2002

ವೇಶ್ಯೆಯರಿಗೆ ಪೊಲೀಸರ ಕಿರುಕುಳ ವಿಧಾನಪರಿಷತ್ತಿನಲ್ಲಿ ಪ್ರತಿಧ್ವನಿ

ಬೆಂಗಳೂರು, ಏ. 2-ವೇಶ್ಯಾವಾಟಿಕೆಯಲ್ಲಿ ತೊಡಗಿರುವ ಮಹಿಳೆಯರಿಗೆ ಬೆಂಗಳೂರಿನ ಉಪ್ಪಾರಪೇಟೆ ಪೊಲೀಸ್ ಠಾಣೆಯ ಪೊಲೀಸರು ನೀಡುತ್ತಿರುವ ಅಮಾನುಷ ಕಿರುಕುಳದ ಬಗ್ಗೆ ವಿಧಾನಪರಿಷತ್ತಿನಲ್ಲಿಂದು ಮಹಿಳಾ ಸದಸ್ಯರು ಪಕ್ಷಭೇದ ಮರೆತು ತೀವ್ರ ಆತಂಕ ವ್ಯಕ್ತಪಡಿಸಿದಲ್ಲದೆ, ಅಂತಹ ಪೊಲೀಸ್ ಸಿಬ್ಬಂದಿಯನ್ನು ಅಮಾನತುಪಡಿಸಬೇಕು ಎಂದು ಆಗ್ರಹಿಸಿದರು.

ಶೂನ್ಯ ವೇಳೆಯಲ್ಲಿ ಈ ಬಗ್ಗೆ ವಿಷಯ ಪ್ರಸ್ತಾಪಿಸಿದ ... ಪ್ರಫುಲ್ಲ ಮಧುಕರ್, ... ವಿಮಲಾಗೌಡ, ... ಜಲಜಾನಾಯಕ್ ... [illegible]

... [illegible] ... ಯಾರು? ಕೂಲಿ, ನಾಲಿ ಮಾಡಿಕೊಂಡು ಬದುಕುತ್ತೇವೆ ಎಂದರೂ ಬಿಡದಿದ್ದರೆ ಹೇಗೆ? ಮಹಾರಾಷ್ಟ್ರ ಮಾದರಿ ವೇಶ್ಯಾವಾಟಿಕೆಯನ್ನು ನಮ್ಮ ರಾಜ್ಯದಲ್ಲಿ ಸಕ್ರಮಗೊಳಿಸಿ ಎಂದು ಆಗ್ರಹಿಸಿದರು.

ಉಪ್ಪಾರಪೇಟೆ ಸಬ್‌ಇನ್ಸ್‌ಪೆಕ್ಟರ್ ನಂಜುಂಡೇಗೌಡ ಅವರು, 9 ಜನ ಹೆಣ್ಣು ಮಕ್ಕಳಿಗೆ ಈ ರೀತಿ ಅಮಾನುಷ ಹಿಂಸೆ ನೀಡುತ್ತಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ವಿಮಲಾಗೌಡ ಆಗ್ರಹಿಸಿದರು.

ಸಭಾ ನಾಯಕರೂ ಆದ ... ಸಚಿವ ಎಚ್.ಕೆ. ಪಾಟೀಲ್ ... [illegible]

... [illegible]

ಪುಟ 4 ಪ್ರಜಾವಾಣಿ, ಶುಕ್ರವಾರ 17ನೇ ಅಕ್ಟೋಬರ್ 2003

ನಿವೃತ್ತ ವೇಶ್ಯೆಯರಿಗೆ ಪಿಂಚಣಿ: ನ್ಯಾ.ಮೂ.ಮಳಿಮಠ್ ಆಗ್ರಹ

ಬೆಂಗಳೂರು, ಅ.16– ಲೈಂಗಿಕ ವೃತ್ತಿಯಲ್ಲಿರುವವರ ಹಿತರಕ್ಷಣೆಗೆ ಸರ್ಕಾರವು ವಿಶೇಷ ಅಧಿಕಾರಿಯೊಬ್ಬರನ್ನು ನೇಮಿಸಬೇಕು ಮತ್ತು ನಿವೃತ್ತ ವೇಶ್ಯೆಯರಿಗೆ ಪಿಂಚಣಿ ನೀಡುವ ವ್ಯವಸ್ಥೆ ಶೀಘ್ರ ಆರಂಭವಾಗಬೇಕು ಎಂದು ನಿವೃತ್ತ ನ್ಯಾಯಮೂರ್ತಿ ವಿ.ಎಸ್.ಮಳಿಮಠ್ ಇಂದು ಇಲ್ಲಿ ಆಗ್ರಹಿಸಿದರು.

'ನೆಲೆ' ಸಂಸ್ಥೆ ಏರ್ಪಡಿಸಿದ್ದ 'ಲೈಂಗಿಕ ವೃತ್ತಿ ಮತ್ತು ಮೂಲಭೂತ ಸಮಸ್ಯೆಗಳು' ಸಂವಾದವನ್ನು ಉದ್ಘಾಟಿಸಿ ಮಾತನಾಡಿದ ಅವರು, ಲೈಂಗಿಕ ವೃತ್ತಿಯಲ್ಲಿರುವವರು ಯಾವುದೇ ಇಲಾಖೆಗಳ ಮೊರೆ ಹೋಗಲು ಕಷ್ಟವಾದ್ದರಿಂದ ಅವರಿಗೆ ಪ್ರತ್ಯೇಕ ಅಧಿಕಾರಿಯನ್ನು ನೇಮಿಸುವುದು ಅವಶ್ಯ ಎಂದು ಸಲಹೆ ನೀಡಿದರು.

'ಸಮಾಜದ ಸ್ವಾಸ್ಥ್ಯ ಕಾಪಾಡುವ ವೇಶ್ಯೆಯರ ಬಗ್ಗೆ ಅದೇ ಸಮಾಜ ಹೇಸಿಗೆಯ ಭಾವನೆ ಬೆಳೆಸಿಕೊಂಡಿದೆ. ಅವರು ಸಮಾಜದ ರಕ್ಷಣಾಗೋಡೆಗಳಿದ್ದಂತೆ. ಅವರಿಲ್ಲದಿದ್ದಲ್ಲಿ ಸಮಾಜದಲ್ಲಿ ಅತ್ಯಾಚಾರ ಅನಾಚಾರ, ಭಯೋತ್ಪಾದಕರ ಪಾತ್ರವೇ ಮೆರೆದಿರುತ್ತಿತ್ತು. ಪುರುಷರ ತೃಷೆಗೆ ಬಲಿಯಾಗುವ ಈ ಮಹಿಳೆಯರ ಬಗ್ಗೆ ಜನರ ಅನಾದರ, ಅಗೌರವದ ಮನೋಭಾವ ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಅವರ ಶೋಷಣೆ ತಪ್ಪಿಸಲು ಸಾಧ್ಯವಿಲ್ಲ' ಎಂದರು.



ಬೆಂಗಳೂರಿನಲ್ಲಿ ಗುರುವಾರ ಏರ್ಪಡಿಸಿದ್ದ 'ಲೈಂಗಿಕ ವೃತ್ತಿ ಮತ್ತು ಮೂಲಭೂತ ಸಮಸ್ಯೆಗಳು' ಸಂವಾದದಲ್ಲಿ ಭಾಗವಹಿಸಲು ಆಗಮಿಸಿದ ಮಹಿಳೆಯರಿಗೆ ಆತ್ಮೀಯ ಸ್ವಾಗತ ನೀಡಲಾಯಿತು. ಸಂವಾದದಲ್ಲಿ ನಿವೃತ್ತ ನ್ಯಾಯಮೂರ್ತಿ ವಿ.ಎಸ್.ಮಳಿಮಠ್, 'ಐಕ್ಯೋ' ಸಂಘಟನೆಯ ಡಾ.ನಾಗೇಂದ್ರ ಪ್ರಸಾದ್ ಮುಂತಾದವರು ಭಾಗವಹಿಸಿದ್ದರು.

ಈ ಮಹಿಳೆಯರ ಶೋಷಣೆ ವಿರುದ್ಧ ಸಮಾಜ, ಸರ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದ ಅವರು, ಅವರನ್ನು ಗೌರವದಿಂದ ನಡೆಸಿಕೊಂಡು ಮೂಲಭೂತ ಸೌಕರ್ಯ, ನಿವೃತ್ತಿ ನಂತರ ಜೀವನ ನಿರ್ವಹಣೆಗೆ ಪಿಂಚಣಿ, ವಸತಿ, ಪಡಿತರ ಚೀಟಿ, ಮತದಾನದ ಹಕ್ಕು, ಉಚಿತ ಚಿಕಿತ್ಸೆ ಮತ್ತು ಮುಖ್ಯವಾಗಿ ಆರೋಗ್ಯದ ಕುರಿತು ವಿಶೇಷ ಅರಿವು ಮೂಡಿಸಬೇಕು ಎಂದು ಆಗ್ರಹಿಸಿದರು.

ಈ ವೃತ್ತಿಯಲ್ಲಿರುವವರ ಬಗ್ಗೆ ಸಮಾಜ ಸಹಾನುಭೂತಿ ಹೊಂದುವುದು ಅವಶ್ಯ. ಅವರ ಸ್ಥಿತಿ-ಗತಿಗಳ ಬಗ್ಗೆ ಜನಸಾಮಾನ್ಯರಲ್ಲಿ ಮತ್ತು ಪೊಲೀಸರಲ್ಲಿ ಅರಿವು ಮೂಡಿಸುವ ಕಾರ್ಯ ನಡೆಯಬೇಕು. ಪೊಲೀಸರು ಅವರೊಂದಿಗೆ ಸಂವೇದನಾಶೀಲರಾಗಿ ವರ್ತಿಸಬೇಕು ಎಂದು ತಿಳಿಸಿದರು.

ಸಾಹಿತಿ ಡಾ.ಸಿ.ಮರುಳಯ್ಯ ಅವರು ಮಾತನಾಡಿ, ಶತಮಾನಗಳ ಹಿಂದೆ ನಮ್ಮ ಸಮಾಜದಲ್ಲಿ 'ದೇವದಾಸಿ'ಯರಿಗೆ ಉತ್ತಮ ಗೌರವವಿತ್ತು. ಇಂದು ವೇಶ್ಯೆಯರ ಮಕ್ಕಳು ಬೀದಿ ಪಾಲಾಗದಂತೆ ಸರ್ಕಾರ ನೋಡಿಕೊಳ್ಳಬೇಕು ಎಂದು ಕರೆ ನೀಡಿದರು.

'ನೆಲೆ' ಸ್ವಯಂ ಸೇವಾ ಸಂಘಟನೆಯ ಕಾರ್ಯದರ್ಶಿ ಲೀಲಾ ಸಂಪಿಗೆ ಮಾತನಾಡಿ, ಲೈಂಗಿಕ ವೃತ್ತಿಯಲ್ಲಿರುವವರಿಗೆ ಪಡಿತರ ಚೀಟಿ, ಮತದಾನದ ಹಕ್ಕು ನೀಡಬೇಕು ಎಂದು ಆಗ್ರಹಿಸಿದರು. ಈ ಬೇಡಿಕೆಗಳನ್ನು ಶೀಘ್ರ ಈಡೇರಿಸಲು ಮನವಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಪ್ರಫುಲ್ಲ ಮಧುಕರ್, ಐಕ್ಯೋ ಸ್ವಯಂ ಸೇವಾ ಸಂಘಟನೆಯ ಡಾ.ನಾಗೇಂದ್ರ ಪ್ರಸಾದ್, 'ಗೆಳತಿ' ಸಂಘಟನೆಯ ಕಾರ್ಯದರ್ಶಿ ಉಮಾ ಮುಂತಾದವರು ಉಪಸ್ಥಿತರಿದ್ದರು.

ವೇಶ್ಯೆಯರಿಗೆ ಪೊಲೀಸ್ ಕಿರುಕುಳ : 'ನೆಲೆ' ಆರೋಪ

ಕನ್ನಡಪ್ರಭ ವಾರ್ತೆ, ಬೆಂಗಳೂರು, ಮಾ. 29

ನಗರದ ಉಪ್ಪಾರಪೇಟೆ ಪೊಲೀಸರು, ಲೈಂಗಿಕ ಕಾರ್ಯಕರ್ತೆಯರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು 'ನೆಲೆ' ಸ್ವಯಂ ಸೇವಾ ಸಂಸ್ಥೆಯ ಕಾರ್ಯದರ್ಶಿ ಲೀಲಾ ಸಂಪಿಗೆ ಅವರು ಆರೋಪಿಸಿದ್ದಾರೆ.

ಉಪ್ಪಾರಪೇಟೆ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ನಂಜುಂಡೇಗೌಡ ಅವರು ಬಂಧಿತ ಲೈಂಗಿಕ ವೃತ್ತಿ ಮಹಿಳೆಯ ಮೇಲೆ ಮೂರನೇ ದರ್ಜೆ ಕಿರುಕುಳ ನೀಡಿದ್ದಾರೆ. ಇದರಿಂದಾಗಿ ಲೈಂಗಿಕ ಕಾರ್ಯಕರ್ತೆಯರ ಬದುಕು ಅಸಹನೀಯವಾಗಿದೆ ಎಂದು ಅವರು ಹೇಳಿದರು.

ಉಪ್ಪಾರ ಪೇಟೆ ಪೊಲೀಸ್ ಠಾಣೆಯ ಮಹಿಳಾ ಪೇದೆಗಳು ಸಹ ಲೈಂಗಿಕ ಕಾರ್ಯಕರ್ತೆಯರಿಗೆ ಚಿತ್ರಹಿಂಸೆ ನೀಡಿದ್ದಾರೆ. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದಿಲ್ಲ. ಕೆಲವು ಗಂಟೆ ಚಿತ್ರಹಿಂಸೆ ನೀಡಿ ಬಿಡುಗಡೆ ಮಾಡಲಾಗುತ್ತದೆ. ಒಂದೆರಡು ದಿನಗಳ ನಂತರ ಮತ್ತೆ ಬಂಧಿಸಿ ಪುನಃ ಚಿತ್ರಹಿಂಸೆ ನೀಡಲಾಗುತ್ತಿದೆ ಎಂದು ಅವರು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ಲೈಂಗಿಕ ಕಾರ್ಯಕರ್ತೆಯರು ಪೊಲೀಸರು ತಮ್ಮ ವಿರುದ್ಧ ನಡೆಸಿದ ದೌರ್ಜನ್ಯದ ಅನುಭವನಗಳನ್ನು ಹೇಳಿಕೊಂಡರು.

ತಂದೆ–ತಾಯಿ ಹಾಗೂ ಗಂಡ ತೊರೆದಿದ್ದರಿಂದ ಮಕ್ಕಳನ್ನು ಸಲಹಲು ಈ ವೃತ್ತಿ ಅನುಸರಿಸುವುದು ಅನಿವಾರ್ಯವಾಗಿದೆ. ಆದರೆ, ಪೊಲೀಸರು ನೀಡುತ್ತಿರುವ ಚಿತ್ರಹಿಂಸೆಯಿಂದ ಬದುಕೇ ಅಸಹನೀಯವಾಗುತ್ತಿದೆ ಎಂದು ಲೈಂಗಿಕ ಕಾರ್ಯಕರ್ತೆಯೊಬ್ಬರು ಹೇಳಿದರು.

ಮತ್ತೊಬ್ಬ ಲೈಂಗಿಕ ಕಾರ್ಯಕರ್ತೆ ಹೇಳಿದ್ದು– 'ಬದುಕಿಗೆ ಬೇರೆ ಪರ್ಯಾಯವಿಲ್ಲದ್ದರಿಂದ ಈ ವೃತ್ತಿಯನ್ನು ಅನುಸರಿಸುತ್ತಿದ್ದೇವೆ. ಒಂದು ವೇಳೆ ಸರ್ಕಾರ ಬೇರೆ ನೌಕರಿ ನೀಡುವ ಮನಸ್ಸು ಮಾಡಿದರೆ, ಈ ವೃತ್ತಿಯನ್ನು ಬಿಡಲು ಸಿದ್ಧ.

ಅಮಾಯಕ ಮಹಿಳೆಯರಿಗೆ ರಕ್ಷಣೆ ಅಗತ್ಯ

ಬೆಂಗಳೂರು, ಅ. 16– ಪ್ರಬುದ್ಧರಾಗಿ ಹೆಣ್ಣು ಮಕ್ಕಳನ್ನು ಗೇಲಿ ಮಾಡಿ ಇದಕ್ಕೆ ಕಾರಣವಾದ ಪುರುಷನ ಬಗ್ಗೆ ಮೌನತಾಳುವ ಸಮಾಜದ ಪ್ರವೃತ್ತಿಯನ್ನು ನಿವೃತ್ತ ನ್ಯಾಯಮೂರ್ತಿ ವಿ.ಎಸ್. ಮಳಿಮಠ ಅವರು ಟೀಕಿಸಿದ್ದಾರೆ.

ನೆಲೆ ಮತ್ತು ಐಕ್ಯೋ ಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಲೈಂಗಿಕ ವೃತ್ತಿ ಮತ್ತು ಮೂಲಭೂತ ಸಮಸ್ಯೆಗಳು ಕುರಿತ [illegible]

ಈ [illegible]


[illegible]

ಒಬ್ಬಂಟಿ ಪುರುಷನ ಕುರಿತು ಹಲವಾರು ವ್ಯಕ್ತಪಡಿಸುವ ಸಮಾಜದಲ್ಲಿ ಎಷ್ಟು ದುಸ್ಥಿತಿ ಇದೆ. ಇದರ ಬಗ್ಗೆ ಸಮಾಜ ಮತ್ತು ಸರ್ಕಾರ ಅನಾದರ ಮತ್ತು ಅಗೌರವ ತೋರಿಸುತ್ತಿದೆ ಎಂದು ವಿಷಾದಿಸಿದರು.

ಈ ಮನೋಭಾವವನ್ನು ಜನಸಾಮಾನ್ಯರ ಶೋಷಣೆ ತಪ್ಪಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು. ಈ ಮಹಿಳೆಯನ್ನು ಗೌರವದಿಂದ ನಡೆಸಿಕೊಂಡು ಮೂಲಭೂತ ಸೌಲಭ್ಯ ಒದಗಿಸಿಕೊಡಬೇಕು ಎಂದು ಆಗ್ರಹಿಸಿದರು.

ದಿಕ್ಕು ಕಾಣದಂತಿರುವ ಇಂತಹ ಹೆಣ್ಣು ಮಕ್ಕಳು ಯಾರನ್ನು ಸಂಪರ್ಕಿಸಬೇಕು ಎನ್ನುವುದು ದೊಡ್ಡ ಪ್ರಶ್ನೆ. ಅದಕ್ಕೆ ಸರ್ಕಾರದ ವತಿಯಿಂದ ವಿಶೇಷ ಅಧಿಕಾರಿಯನ್ನು ನೇಮಿಸುವಂತೆ ಅವರು ಒತ್ತಾಯಿಸಿದರು.

[illegible]



[illegible caption]

ಸಂಯುಕ್ತ ಕರ್ನಾಟಕ, ಬೆಂಗಳೂರು 17-10-2003

DECCAN HERALD, FRIDAY, OCTOBER 17, 2003

Demand for separate dept for commercial sex workers

DH News Service

BANGALORE, Oct 16

In a move to press for the rights of commercial sex workers, city's voluntary organisations will present a memorandum to Chief Minister S M Krishna tomorrow.

"We have requested the Chief Minister to create a separate department for commercial sex workers that will sensitise society, especially the authorities in dealing with them, besides addressing their issues," said Ms Neela Sampige, Director, Nele, during the first anniversary celebration of Gelati here today. Nele and Gelati are voluntary organisations that work for the upliftment of commercial sex workers in the city.

Some of the other issues in the memorandum include holding de-addiction camps, issuance of ration cards and providing facilities in government hospitals for them, she informed.

Addressing the gathering former Chief Justice of Karnataka V S Malimath said society needed to change its attitude towards the sex workers. He added that these women lived on the fringes of society and risked their lives with professional and health hazards. "They need to be looked after," he added.



Former Chief Justice of Karnataka V S Malimath (left) seen at the first anniversary celebrations of *Gelati* held at Kannada Bhavan in Bangalore on Thursday.

The New Indian Express
BANGALORE • FRIDAY • NOVEMBER 8, 2002 28 PAGES • F

8.11.2002.

CityExpress
Bangalore, Friday, November 8, 2002

EVENTS

Sex workers in State demand dignity

Express News Service


Bangalore, Nov 7

THE only shred of attention sex workers get is when a sleazy flesh trade racket involving big-wigs is unearthed. After the hue and cry dies down, they are consigned to dark alleys of society again.

But this time, as news pours in of judges involved in such rackets, over 50 sex workers from different parts of Karnataka have gathered to demand that they be treated with dignity as it's only too clear that they are "victims of a cruel order".

"If the men who use us get away scot-free, why are we abused by the police, doctors and everybody else we meet," asked Uma, a former sex worker at the State-level convention on 'Sex Work and Human rights' organised by Nele, an NGO, at Kannada Bhavan.

In Karnataka, most women involved in sex work are street-based. They are driven to it by poverty or trapped into it by men and their escape is virtually sealed due to the social stigma.



(from left) Actress Jayanti, Kannada and Culture Minister Rani Satish, State Women's Commission president Philomena Peris and Inspector General of Police K V R Tagore at 'Nele,' the State-level convention on sex workers and human rights in Bangalore on Thursday — Express photo

"On one hand, these sex workers are harassed by the police, courts and the system and on the other they are victimised by social attitudes. So, these women belong to the most marginalised section," said Christy Abraham, regional manager of Action Aid.

"Prostitution per se is not a crime according to the Indian constitution. It is only its institutionalisation that is penalised," said Geeta Devi, an advocate who works for these women.

That makes it illegal to run brothels and for third parties to take earnings from these women. All activities carried out for prostitution, including soliciting in public places, are also against the law.

The Prevention of Immoral Trafficking in Women Act actually works against the women booked under it, feel legal experts. This is because the customers who are equally guilty, if not more, are not booked.

"Why are the women punished when men have created this system," asked Philomena Peris, president of State Women Commission.

With the scourge of HIV/AIDS spreading to more than 4 million people in the country, the disease poses a deadly risk to sex workers.

They have the Right to Information regarding precautionary measures and should be treated with sensitivity, it was felt. "Medical complications are the least of their problems when compared with the social stigmas they face," said K Satish, HIV specialist.

"It is their right to get access to education and health," added Hasan Mansoor, President of the State Public Union for Civil liberties. The sex workers were brought together to help them organise and defend their rights. The 40 odd sex workers who had travelled from Hassan, Belgaum, Mysore, Raichur and Gulbarga were given a lesson in law.

'Stop harassing sex workers, all they need is some dignity'

BY OUR CORRESPONDENT

Bangalore, Oct. 26: "All that the sex workers need is dignity. There is a lot of discrimination against them as they are looked down upon by the society," Leela Sampige, secretary of Nele, a city-based non governmental organisation working for the betterment of sex workers, said on Saturday.

Ms Sampige was talking to reporters about Collectivisation for realising human rights of sex workers in Bangalore. Few sex workers had recently alleged harassment by the policemen in Upparpet police station. "People should come forward to help sex workers tackle the issue of harassment. We want to create a force in the process of getting a solution to the problem of discrimination," she said.

Pleading with the police and the people to stop harassment against them, a sex worker, who was present on the occasion, said, "Poverty and illiteracy are forcing us into the trade. We also have to survive and take care of our children. Please stop harassing us."

However she added that she was willing to quit the flesh trade if she was offered a better job. "Even if we quit our profession, we are recognised by the tag of a sex worker. We have to go through a lot of harassment from our employers even in our new jobs," she lamented.

DECCAN HERALD 8-11-2002

Bill on violence against women in offing

DH News Service

BANGALORE, Nov 7

A comprehensive bill on all kinds of violence against women is on the anvil, according to Karnataka State Commission for Women Chairperson Philomina Peris.

Speaking at a convention on "Sex work and human rights" jointly organised by NELE and ActionAid India in the City this morning, Ms Peris said the bill will not only cover domestic violence but also include rape, child prostitution, harassment at workplace and acid attack on women.

On the object behind the move, Ms Peris said, "right now the State has no effective law to deal with violence against women.

In fact, the Centre has proposed the Domestic Violence Against Women Bill, but there are several anamolies in it. Hence, we propose to bring out a comprehensive legislation in this regard in the State." The bill is is in the draft stage and it will take shape after consultations are over, she added.

The Bill will also address the issue of attacks on prostitutes and street children, she said and explained, "sex workers are the most marginalised women in the society as they are street-based. They continue to be ill treated and exploited as there is no stringent punishment for the perpetrators of crime."Apart from checking violence against women, efforts should be made to prevent girls from entering the flesh trade by addressing their social and economic problems, she said.



DH photo

Minister of State for Kannada and Culture Rani Satish sharing a light moment with actress Jayanthi at the convention on "Sex work and human rights" held in Bangalore on Thursday.

Pointing to how poor girls from Thirthahalli in Shimoga district are being lured by Mumbai brothels, Ms Peris said, "the Commission recently learnt that girls from Thirthahalli, on attaining 17 years of age, were moving to Mumbai in search of lucrative jobs, only to end up in brothels. When we enquired with a few girls, we found out that they hitherto worked in houses belonging to rich people and had seen the materialistic world.

However, when they attained 17 years, the employers asked them not to come to work. And these girls, who found it difficult to get back to their homes, travelled to Mumbai."

The problem appears strange, but it has to be addressed immediately, Ms Peris added. She also urged the police personnel to restrain from using force while dealing with prostitutes.

Speaking on the occasion, Inspector General of Police (Central Range) K V R Tagore suggested basic training to policemen on the provisions of the Prevention of Immoral Trafficking Act (PITA) if police highhandedness on prostitutes has to be reduced. This apart, there is a need for legalising places of prostitution, he added.

ಜನವಾಹಿನಿ



sexwork and Human rights," state Level convention 7-11-02. - Bangalore



ಲೈಂಗಿಕ ವೃತ್ತಿಯಲ್ಲಿರುವವರಿಗೆ ಮೀಸಲಾತಿ ನೀಡಲು ಆಗ್ರಹ

ಪರಾಮರ್ಷಿತ ಗ್ರಂಥಗಳು:

ದೇವದಾಸಿ ಸಂಪ್ರದಾಯ : ಡಾ.ಜೋಗನ್ ಶಂಕರ್ ಪ್ರ: ವಿಮೋಚನಾ ಪ್ರಕಾಶನ ವಿಮೋಚನಾ ದೇವದಾಸಿ ಪುನರ್ವಸತಿ ಸಂಘ ಅಥಣಿ: 1993.

ದೇವರ ದಾಸಿಮಯ್ಯನ ವಚನಗಳು (ದಾಸಿಮಯ್ಯ) : ಬಸವರಾಜು ಎಲ್. ಗೀತಾ ಬುಕ್ ಹೌಸ್, ಮೈಸೂರು 1972.

ತೊರವೆ ರಾಮಾಯಣ : ಕೃಷ್ಣಮೂರ್ತಿ ಕೆ.ಎಸ್. ಪ್ರ: ಕನ್ನಡ ಸಾಹಿತ್ಯ — ಪರಿಷತ್ತು, ಬೆಂಗಳೂರು 1977

ಕರ್ನಾಟ ಭಾರತ ಕಥಾಮಂಜರಿ (ಕುಮಾರ ವ್ಯಾಸ) : ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಸಂ) ಪ್ರ: ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು.1974

ಬಸವಣ್ಣನವರ ವಚನಗಳು : ಹಳಕಟ್ಟಿ ಫ.ಗು. ಪ್ರ: ಶಿವಾನುಭವ ಗ್ರಂಥಮಾಲೆ, ಬಿಜಾಪುರ, 1962.

ಆದಿಪುರಾಣ ದೀಪಿಕೆ : (ಪಂಪ) ಶಾಮರಾಯ. ತ.ಸು. ಮತ್ತು ನಾಗರಾಜಯ್ಯ. ಪ. ಪ್ರ. ಚಂದ್ರಗುಪ್ತ ಗ್ರಂಥಮಾಲೆ, ಶ್ರವಣಬೆಳಗೊಳ, 1991.

ಮನ್ಮಥ ವಿಜಯಂ : (ಕವಿಮಲ್ಲ) ಶೇಷ ಅಯ್ಯಂಗಾರ್.ಎಚ್. (ಸಂ) ಓರಿಯಂಟಲ್ ರಿಸರ್ಚ್ ಲೈಬ್ರಿ, ಮದರಾಸು, 1954.

ಮೋಹನ ತರಂಗಿಣಿ : (ಕನಕದಾಸ) ಹಿರೇಮಠ, ಆರ್.ಸಿ., (ಸಂ) ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1973.

ಸಾಹಿತ್ಯ ಮತ್ತು ಕಾಮ ಪ್ರಚೋದನೆ : ಅ.ನ.ಕೃ. ಸುದರ್ಶನ, ತಿಪಟೂರು, 1960.

ಕಾಮಸೂತ್ರ : ವೆಂಕಟ. ಜಿ. ಭಸ್ಮೆ ಸಮಾಜ ಪುಸ್ತಕಾಲಯ, ಧಾರವಾಡ, 1986.

ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ : ತಾಪಿ ಧರ್ಮರಾವ್ (ಮೂಲ), ಶಾಸ್ತ್ರೀ, ಎಸ್.ಆರ್. ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, 1989.

ಮನುಸ್ಮೃತಿ : ಚಕ್ರಕೋಡಿ ಈಶ್ವರ ಶಾಸ್ತ್ರೀ, ಸಮಾಜ ಪುಸ್ತಕಾಲಯ, ಧಾರವಾಡ 1987.

ವಿವಾಹ : ಹುಟ್ಟು ಮತ್ತು ಪೂರ್ವೋತ್ತರ : ತಾಪಿ ಧರ್ಮರಾವ್ (ಮೂಲ), ರವಿ ಬೆಳಗೆರೆ, ನವ ಕರ್ನಾಟಕ ಪಬ್ಲಿಕೇಶನ್ಸ್, ಪ್ರೈವೇಟ್ ಲಿಮಿಟೆಡ್, ಬೆಂಗಳೂರು, 1989.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು	: ವೆಂಕಟ ಸುಬ್ಬಯ್ಯ.ಜಿ. (ಪ್ರ.ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಸಂಪುಟ ೧-೮. 1970-1995.
ಕಿಟ್ಟೆಲ್‌ರ ಕನ್ನಡ-ಇಂಗ್ಲೀಷ್ ನಿಘಂಟು	: ಮರಿಯಪ್ಪ ಭಟ್ಟ, ಎಂ. ಮದರಾಸು ವಿಶ್ವವಿದ್ಯಾನಿಲಯ, ಮದರಾಸು, 1977.
ಶಬ್ದ ಕಲ್ಪದ್ರುಮ	: ಮೋತಿಲಾಲ್ ಬನಾರಸಿದಾಸ್, ಪಾಟ್ನಾ 1962.
ಶಬ್ದಾರ್ಥ ಕೌಸ್ತುಭ	: ವೆಂಕಟಾಚಲಾ
ಸಂಸ್ಕೃತ ಕನ್ನಡ ಶಬ್ದಕೋಶ	: ಚಕ್ರವರ್ತಿ ಶ್ರೀನಿವಾಸ ಗೋಪಾಳಾಚಾರ್ಯ, ಬೆಂಗಳೂರು 1984.
ಹಳಗನ್ನಡ ನಿಘಂಟುಗಳು	: ಬಸವಾರಾಧ್ಯ. ಎನ್., (ಸಂ), ಡಿ.ವಿ.ಕೆ. ಮೂರ್ತಿ, ಮೈಸೂರು, 1976.
ಅನಂತರಂಗಾಚಾರ್ ಎಸ್ (ಸಂಪಾ)ಪಂಪಭಾರತಂ	: ಕ.ಸಾ.ಪ. ಬೆಂಗಳೂರು ಶಿವಮೂರ್ತಿಶಾಸ್ತ್ರಿ ಬಿ. (ಸಂ) ಲಕ್ಷ್ಮೀಶ ಕವಿಯ ಕನ್ನಡ ಜೈಮಿನಿ ಭಾರತ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ-ಬೆಂ.
ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವೇಶ್ಯಾಜೀವನ	: ಡಿ.ಟಿ.ಬಸವರಾಜ್, (ಅಪ್ರಕಟಿತ) ಮೈಸೂರು ವಿ.ವಿ.
ಸ್ತ್ರೀ ಮತ್ತು ರಾಜಕಾರಣ	: ಕೇಶವಶರ್ಮ-ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ(2000)
ಉಸಿನಾ	: ಸಂಪಾದಕರು. ಸಿ.ಯತಿರಾಜು ನೆಲೆ ಪ್ರಕಾಶನ-2002 ಬೆಂಗಳೂರು.
ಮಹಿಳೆಯರ ವಿಮೋಚನೆಯ ಕುರಿತು	: ವಿ.ಐ.ಲೆನಿನ್-(ಜುಲೈ,13,1913) ಪ್ರಗತಿ ಪ್ರಕಾಶನ-ಮಾಸ್ಕೊ-1980.
ಅರ್ಥಶಾಸ್ತ್ರ	: ಸಿದ್ಧಪ್ಪಾರಾಧ್ಯ ಟಿ.ಜ. ಮೈಸೂರು ವಿ.ವಿ.
ಕೌಟಲೀಯ ಅರ್ಥಶಾಸ್ತ್ರದ ಕನ್ನಡಾನುವಾದ	: ಅನುವಾದಕರು: ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳು. ಮೈಸೂರು ರಾಜ್ಯ ಸಾಹಿತ್ಯ ಸಾಂಸ್ಕೃತಿ ಅಭಿವೃದ್ಧಿ ಇಲಾಖೆ. 1963
ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನಚಿತ್ರ, ಸಾಮಾಜಿಕ-ಆರ್ಥಿಕ-ರಾಜಕೀಯ	: ಶ್ರೀಕಂಠಯ್ಯ ಕೆ.
ಏಡ್ಸ್ ಕುರಿತ ಮಾತುಕತೆ ಸಂ.	: ಕೆ.ಪಿ. ಪ್ರಭುಪ್ರಸಾದ್, ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಮುಂಬೈ. ಪರವಾಗಿ ಎಫ್.ಪಿ.ಎ.ಐ ಮೈಸೂರು ಶಾಖೆ
ಮಹಿಳೆ ಮತ್ತು ಎಚ್.ಐ.ವಿ. ಏಡ್ಸ್	: ಡಾ. ವಿಜಯ ಠಾಕೂರ್ ಇಂಟರ್ ಏಯ್ಡ್- ಮೈಸೂರು.
ಏಡ್ಸ್ ಕಾಯಿಲೆಯ ಸವಾಲು	: ಅನು: ಮೊಷೇದ್ ಎಂ. ಪಾಪ್ರಿ

		ಡಾ.ಓಂ.ಪ್ರಕಾಶ್‌ನ್ಯಾಷನಲ್ ಬುಕ್‌ಟ್ರಸ್ಟ್- ಇಂಡಿಯಾ
ಅರ್ಥಶಾಸ್ತ್ರ ಮೈಸೂರು ವಿ.ವಿ.ಕೌಟಲೀಯ ಅರ್ಥಶಾಸ್ತ್ರದ ಕನ್ನಡಾನುವಾದ	:	ಸಿದ್ಧಪ್ಪಾರಾಧ್ಯ ಟಿ.ಜ. ಅನುವಾದಕರು: ಶ್ರೀ ಸಚ್ಚಿದಾನಂದ- ಶಂಕರ ಭಾರತೀ ಸ್ವಾಮಿಗಳು. ಮೈಸೂರು ರಾಜ್ಯ ಸಾಹಿತ್ಯ ಸಾಂಸ್ಕೃತಿ ಅಭಿವೃದ್ಧಿ ಇಲಾಖೆ. 1963
ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ ಸಾಮಾಜಿಕ-ಆರ್ಥಿಕ-ರಾಜಕೀಯ.	:	ಶ್ರೀಕಂಠಯ್ಯ ಕೆ
ಭಾರತ ಸಂಘಜೀವನದಿಂದ ಗುಲಾಮಗಿರಿಗೆ	:	ಶ್ರೀಪಾದ ಅಮೃತ : ಅನುವಾದ: ಎಂ.ಅನಂತಕೃಷ್ಣಹೆಬ್ಬಾರ್, ಎನ್.ರಾಮಚಂದ್ರ ಉಡುಪ ಪ್ರಕಾಶಕರು: ಅಭಿವ್ಯಕ್ತ ಪ್ರಕಾಶನ, ಫಾತಿಮಾ ಗಾರ್ಡನ್ಸ್, ವೆಲೆನ್ಸಿಯಾ, ಮಂಗಳೂರು-575002.
ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ	:	ಅನು: ವೈದೇಹಿ. (ಕಮಲಾದೇವಿ ಚಟ್ಟೋಪಾಧ್ಯಾಯ ಅಕ್ಷರ ಪ್ರಕಾಶನ. ಸಾಗರ.
ಆಧುನಿಕ ಭಾರತದಲ್ಲಿ ಮಹಿಳೆ	:	ಜೆರಾಲ್ಡಿನ್ ಫೋರ್ಬ್ಸ್, ಅನು: ಎಚ್.ಎಸ್.ಶ್ರೀಮತಿಪ್ರಸಾರಾಂಗ- ಕನ್ನಡ ವಿ.ವಿ. ಹಂಪಿ.
ಬಿಡುಗಡೆಯ ಹಾದಿಯಲ್ಲಿ	:	ಎನ್.ಗಾಯಿತ್ರಿ, ನವಕರ್ನಾಟಕ ಪ್ರಕಾಶನ.
ಜಗತ್‌ಪ್ರಸಿದ್ಧ ಮಹಿಳೆಯರು	:	ಪಾರು ಪ್ರಕಾಶನ-ಗದಗ.
ಗಿರಿಜನ ಸಂಸ್ಕೃತಿ,	:	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-2000
ಜನಪದ ಸಮಾಜ ಮತ್ತು ಸಂಸ್ಕೃತಿ ಕನ್ನಡ ಅಧ್ಯಯನ ಪೀಠ	:	ಡಾ.ಕೆ.ಜಿ. ಗುರುಮೂರ್ತಿ, ಕರ್ನಾಟಕ ವಿ.ವಿ. ಧಾರವಾಡ.1979.
ಸಂಸ್ಕೃತಿ ವಿಕಾಸ	:	ಡಾ.ನಂ.ತಪಸ್ವೀಕುಮಾರ್ ಚೇತನ್ ಬುಕ್ ಹೌಸ್, ಮೈಸೂರು-2000
ಪಿಯುಸಿ ಎಲ್	:	ಪ್ರಾಸಂಗಿಕ ಅಧ್ಯಯನ -ಭಾರತದ ಲೈಂಗಿಕತೆಯ ಶೋಷಿತರ ವಿರುದ್ಧ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆ-ಬೆಂಗಳೂರು.
ಪ್ರಧಾನ್ ಗುರುದತ್ತ	:	ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ. ನವಕರ್ನಾಟಕ ಪ್ರಕಾಶನ. ಬೆಂಗಳೂರು.
ಮಹಿಳೆಯರ ಬಗ್ಗೆ ಪೆರಿಯಾರ್ ಚಿಂತಕರ ಚಾವಡಿ	:	ವೇಮಣ್ಣ-(ಅನು)- ಬೆಂಗಳೂರು-1978
ಮಹಿಳಾ ಅಧ್ಯಯನ	:	ಡಾ|| ಎಚ್.ಎಸ್.ಶ್ರೀಮತಿ (ಸಂಪಾದಕರು)

ದಕ್ಷಿಣಾಯನ ಸಂಚಿಕೆ, ಪ್ರಸಾರಾಂಗ, ಕನ್ನಡ ವಿ.ವಿ., 2001

ವಿಸ್ಮೃತಿ ಮತ್ತು ಸಂಸ್ಕೃತಿ : ಡಾ|| ಹಿ.ಚಿ. ಬೋರಲಿಂಗಯ್ಯ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು-2001

ವೆರಿಯರ್ ಎಲ್ವಿನರ್ ಹಿರಿಜನ ಪ್ರಪಂಚ : ನಾಗೇಗೌಡ ಎಚ್.ಎಲ್. (ಅನು) ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು 1967.

ಕರ್ನಾಟಕ ಬುಡಕಟ್ಟುಗಳು : ಲಕ್ಕಪ್ಪಗೌಡ ಎಚ್.ಜಿ. (ಪ್ರ.ಸಂ). ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು 1998.

ವಿಮೋಚನೆಯೆಡೆಗೆ : ಮೈಥಿಲಿ ಶಿವರಾಮನ್, ಸಾಮ್ಯ ಪ್ರಕಾಶನ-ರಾಯಚೂರು.

ಎಲ್ಲಮ್ಮ ಒಂದು ಜಾನಪದೀಯ ಅಧ್ಯಯನ : ಪ್ರೊ.ಎಸ್. ಚಂದ್ರಪ್ಪ: ಮುಂಡ ಪ್ರಕಾಶನ: ನಂ. 113, ಇಮ್ಮಡಿ ಹಳ್ಳಿ ಅಂಚೆ, ಬೆಂಗಳೂರು. 2003.

ಗ್ರಾಮದೇವತೆಗಳು : ಡಾ. ಸಿದ್ಧಲಿಂಗಯ್ಯ ಮೂಲಭಾರತಿ ಪ್ರಕಾಶನ, ಬೆಂಗಳೂರು.1997,

ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ : ತಾಪಿ ಧರ್ಮರಾವ್: ಅನು: ಎಸ್.ಆರ್. ಶಾಸ್ತ್ರಿ ನವಕರ್ನಾಟಕ ಪಬ್ಲಿಕೇಷನ್ (ಪ್ರೈ) ಲಿ. ಬೆಂಗಳೂರು.1980.

ಬುಡಕಟ್ಟು ನ್ಯಾಯ : ಅಕ್ಕಮಹಾದೇವಿ (ಅನು) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 1984

ಕಾಡಿನ ಹಾಡುಗಳು : ಕೃಷ್ಣಕುಮಾರ್ ಸಿ.ಪಿ. (ಅನು)

ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ : ನಾಗೇಗೌಡ ಎಚ್.ಎಲ್. (ಅನು) ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, 1967

ಸಿರಿ ಪಾಡ್ದನ : ನಾವಡ. ಎ.ವಿ. (ಸಂ) ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ, 1999

ಗಿರಿಜನ ನಾಡಿಗೆ ಪಯಣ : ಬೋರಲಿಂಗಯ್ಯ ಹಿ.ಚಿ. ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು, 1991

ಕಾಡು ಕಾಂಕ್ರೀಟ್ ಮತ್ತು ಜಾನಪದ : ಬೋರಲಿಂಗಯ್ಯ ಹಿ.ಚಿ. ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 1995

ಗೊಂಡರ ರಾಮಾಯಣ : ಬೋರಲಿಂಗಯ್ಯ ಹಿ.ಚಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999

ಕರ್ನಾಟಕ ಜನಪದ ಕಲೆಗಳ ಕೋಶ : ಬೋರಲಿಂಗಯ್ಯ ಹಿ.ಚಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996

ಸಿದ್ದಿಯರ ಸಂಸ್ಕೃತಿ	: ಬೋರಲಿಂಗಯ್ಯ ಹಿ.ಚಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.
ದರ್ಶನ	: ರಾಮಕೃಷ್ಣ.ಜ (ಅನು) (ದೇವಿ ಪ್ರಸಾದ್ ಚಟ್ಟೋಪಾಧ್ಯಾಯ), ನವಕರ್ನಾಟಕ ಪ್ರಕಾಶನ, ಬೆಂಗಳೂರು 1995
ಕರ್ನಾಟಕ ಬುಡಕಟ್ಟುಗಳು	: ಲಕ್ಕಪ್ಪಗೌಡ ಎಚ್.ಜೆ. (ಪ್ರ.ಸಂ) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1998
ಮಹಿಳಾ ಅಧ್ಯಯನ	: ಶ್ರೀಮತಿ ಎಚ್. ಎಸ್.(ಸಂ) ದಕ್ಷಿಣಾಯನ ಸಂಚಿಕೆ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999
ವಿವಾಹ ಬಾಹಿರ ಸಂಬಂಧಗಳಲ್ಲಿ ಲಿಂಗಸಮಾನತೆಯ ಪ್ರಶ್ನೆ	: ಪಾತರದವರನ್ನು ಜೋಗತಿಯರನ್ನು ಅನುಲಕ್ಷಿಸಿ: ಬುಡಕಟ್ಟು ಅಧ್ಯಯನ, 2003, ಸಂ.1, ಸಂಚಿಕೆ.1
ಬುಡಕಟ್ಟು ಕುಲಕಸುಬುಗಳು	: ಮೈತ್ರಿ, ಕೆ. ಎಂ. (ಪ್ರಸಾರಾಂಗ, ಕನ್ನಡ ವಿ.ವಿ. 2002.
ಶಾಸನಗಳಲ್ಲಿ ಸ್ತ್ರೀ ಸಮಾಜ	: ಚೆನ್ನಕ್ಕ ಎಲಿಗಾರ, ಪ್ರಸಾರಾಂಗ, ಕರ್ನಾಟಕ ವಿ.ವಿ. ಧಾರಾವಾಡ, 1990
ದೇವದಾಸಿ	: ಬೆಳಗಲಿ ದು. ನಿಂ., ವಿಮೋಚನಾ ಪ್ರಕಾಶನ, ಅಥಣಿ, 1991
ದೇಗುಲಗಳ ದಾರಿಯಲ್ಲಿ	: ಪ್ರಭುಪ್ರಸಾದ ಕೆ. ಬಿ. ಮೈಸೂರು, 1961
ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು	: ಶಂಕರನಾರಾಯಣ ತೀ.ನಂ. ಮೈಸೂರು, 1982.

History of Prostitution in India : Sinha. S.N. and Basu. N.K., Cosmo Publications, New Delhi, 1994.

Pscyhology of Sex : Havelock Ellis, 1935,

Sexual Life in Ancient India : (A study in the comparätivehistory of Indian culture) Johan Jkob Meyer, George Routledge & Sons Ltd., Brodway House, Carter Lane, London, 1930).

The History of Prostitution Its extent, causes and effects throughout the world : William W. Sanger, Inter-India Publications, New Delhi, 1986.

The Position of Women in Hindu Civilization : Altekar, A.S., Motilal Banarasidas, Delhi, 1978.

Women Under Primitive Buddhism : Horner, I.B., Motilal Banarasidas, Delhi, 1975.

Encyclopaedia Britanica : William Benton (Et al.,) Vol. 14 and 18. Helen Heiningway Benton, Chicago, 1974.

The Encyclopaedia Americana Vol.22. : American Corporation, New York, 1962.

Kosambi D.D. : The culture and civilisation of ancient India in Historical out line; vikas publishing-Delhi.

APSNET : Bulletin of the Asia-Pacific network of Sex workers Aug. 1999- Public-Sadhana mukeri DMSE. Calcutta, India

The World of courtesans vika : motichandra-publishing house private ltd. Delhi-1973.

Kautilya. The Arthasastra 1992 : Ed.. Rearranged. T. R.. and Intoo By L.N. Rang Rajan. NEW DELHi; Penguin Books Ph: 351-354.

Front line : publishers of the Hindu< Volume 18> No.19

Societal Viclence on Women and Children in prostitution : New-1995-96-Govt of India.

A Family guide HIV and AIDS in India : Clive wing- S. Harakar Chowdary popular prakashan-bombay

Aids and law : P.D. Mathew India Social Institute-New Delhi

The "FALLEN" Learn to Raise : DMSC. Calcutta-73, 8/2 Bahabari Dutta lane.

APSNET : Bulletin of The Asia-Paeific Net work of Sexworkers.

Kautilya : The Arthasastra 1992, Ed., Rearranged, T. R., and Intoo By L.N. Rang Rajan. NEW DELHi; Penguin Books Ph: 351-354.

APSNET : Bulletin of the Asia-Pacific net work of Sex workers Aug. 1999-Public-Sadhana mukeri DMSE. Calcutta, India

Kosambi D.D : The Culture and civilisation of ancient India in Historical outline: vikas publishing - Delhi.

Feminism in search of an Identity (The Indian contest) : Edited by Meena Kelkar, Deepti Gangavane,RAWAT Publications, New Delhi.

Meena kelkar Deepti Gangavane. Editors : Feminism in search of an Identity, Rawat publications-NewDelhi, 2003

Kanak Mukherjee : National book centre New Delhi- 1989.

Societal violence on women and children in prostitution : New-1995-96-Government of

India. No.4< Deen Doyal upadhyanamarg, NewDelhi.

A Family guide to HIV and AIDS in India : Clive wing-Shankar Chowdhary. popular Prakashan-Bombay.

Aids and Law-P.D.Mathew : Indian Social Institute-New Delhi.

The Tribal world of Verrier Elwin : Verrier Elwin Oxford University press, Delhi, 1988.

ನೂತನ : Anand Printers and Publishers, ಸಂಪುಟ:2 ಸಂಚಿಕೆ:10

ಲಂಕೇಶ್ ಪತ್ರಿಕೆ : ಸಂಚಿಕೆ-51, ಸಂಪುಟ-23-25 ಜೂನ್ 2003.

ವಿಜಯ ಕರ್ನಾಟಕ : ದಿನಾಂಕ 30. ನವೆಂಬರ್ 2003.